Antonio Gramsci & Paul-Michel Foucault

Cultural Politics and Economics Power structure

ಅಂಟೋನಿಯಾ ಗ್ರಾಂಶಿ

ಮತ್ತು

ಪಾಲ್ ಮಿಶೆಲ್ ಫುಕೋ

ಸಾಂಸ್ಕೃತಿಕ ರಾಜಕೀಯ ಅರ್ಥಶಾಸ್ತ್ರ ಮತ್ತು ಪ್ರಭುತ್ವ



ಕನ್ನಡಕ್ಕೆ : ಕೇಶವಶರ್ಮ. ಕೆ

Antonio Gramsci & Paul-Michel Foucault

Antonio Gramsci & Paul-Michel Foucault

ಅಂಟೋನಿಯಾ ಗ್ರಾಂಶಿ ಮತ್ತು ಪಾಲ್ ಮಿಶೆಲ್ ಫುಕೋ

ಸಾಂಸ್ಕೃತಿಕ ರಾಜಕೀಯ ಅರ್ಥಶಾಸ್ತ್ರ ಮತ್ತು ಪ್ರಭುತ್ವ

ಕನ್ನಡಕ್ಕೆ : ಕೇಶವ ಶರ್ಮ. ಕೆ

ಪಬ್ಲಿಕೇಷನ್ಸ್

ವಿಜಯನಗರ, ಬೆಂಗಳೂರು 560 040

ಅಂಟೋನಿಯಾ ಗ್ರಾಂಶಿ ಮತ್ತು ಪಾಲ್ ಮಿಶೆಲ್ ಫುಕೋ
Antonio Gramsci & Paul-Michel Foucault
Cultural Politics and Economics Power structure
A criticism By : **Keshava Sharma K.**
1 Cross, ShanthiNagara
Near Chowdamma Temple, B R Projct,
Badarvathi Taluk, Shivamoga - 574115
Mob : 9448730611
E-mail: dr.keshavasharma.k@gmail.com

Pulished by
srushti Nagesh
SRUSHTI PUBLICATIONS
#121,13th Main Road, M.C. Layout
Vijayanagara,Bengaluru - 560 040.
Ph : 080 - 23153558, Mob: 9845096668
E-mail: srushtinagesh2005@gmail.com

First Impression: 2025
Page : xvi+4+ 232 =252
Book Size : 1/4 Crown (23x15.5)
(International Standard Book Size)
₹ : 300 /-
Paper used: 70 Gsm Jk Book Print

DTP : Arpuda Merry
Cover Page : **Srushti Sathvik**

Printed at :
POORNIMA PRINTERS
Vijayanagara, Bengaluru-560 040
Ph: 080-23351210



ಅರ್ಪಣೆ

ಗ್ರಾಂಶಿಗೆ ಮತ್ತು ಘುಕೋರಿಗೆ

ಲೇಖಕರ ಮಾತುಗಳು

ಗ್ರಾಂಶಿಯು ಅತ್ಯಂತ ಮಹತ್ವದ ಚಿಂತಕರಲ್ಲಿ ಒಬ್ಬ ಅವನ ಬರಹಗಳು ನಮ್ಮ ಮೇಲೆ ವಿವಿಧ ರೀತಿಯಲ್ಲಿ ಪ್ರಭಾವ ಬೀರಿದೆ. ಸ್ವತಃ ಹೋರಾಟಗಾರನಾಗಿದ್ದ ಗ್ರಾಂಶಿಯು ಅನೇಕ ರೀತಿಯ ಟಿಪ್ಪಣಿಗಳನ್ನು ತನ್ನ ನೋಟ್ ಬುಕ್‌ನಲ್ಲಿ ಹೇಳಿದ್ದಾನೆ. ಅವನು ಅತ್ಯಂತ ಮುಖ್ಯವಾಗಿ ತಾತ್ವಿಕತೆಯನ್ನು ತನ್ನ ಎಲ್ಲಾ ಬರಹಗಳಲ್ಲಿ ಮತ್ತೆ ಮತ್ತೆ ಹೇಳಿದ್ದಾನೆ. ಸಮಾಜ ಮತ್ತು ಅದರ ಅಧ್ಯಯನಕ್ಕೆ ನಮಗೆ ಅವನ ನಿಲುವುಗಳು ಉಪಯುಕ್ತವಾಗುತ್ತದೆ. ಸಮಾಜ ಮತ್ತು ಅದರ ಕುರಿತಾದ ಚಿಂತನೆಗೆ ನಮಗೆ ಹೆಚ್ಚು ಅನುಕೂಲವನ್ನು ಒದಗಿಸುವುದು ತಾತ್ವಿಕತೆಯೇ. ಯಾವುದು ನಮ್ಮ ಸಾಮಾಜಿಕ ಜ್ಞಾನವು ಆಗಿದೆಯೋ ಅದರ ಮೂಲವು ಇರುವುದು ತಾತ್ವಿಕ ಗ್ರಹಿಕೆಯಲ್ಲಿ ಎನ್ನುವುದು ಸ್ಪಷ್ಟ. ತತ್ವಜ್ಞಾನದಲ್ಲಿಯೂ ಅತ್ಯಂತ ಮುಖ್ಯವಾಗಿರುವುದು ತಾತ್ವಿಕತೆ. ತಾತ್ವಿಕತೆಯೆನ್ನುವುದು ನಮಗೆ ಸಮಾಜದ ಜೊತೆಗೆ ಸಂಬಂಧವನ್ನು ಬೆಳೆಸಲು ಅವಕಾಶವನ್ನು ಮಾಡಿಕೊಡುತ್ತವೆ. ಅದನ್ನು ನಾವು ವಸ್ತುನಿಷ್ಟವಾಗಿಯೂ ನೋಡಬೇಕಾಗುತ್ತದೆ. ತಾತ್ವಿಕತೆ ಎನ್ನುವುದು ನಮಗೆ ಅತ್ಯಂತ ಮಹತ್ವದ್ದು. ಅದನ್ನು ಒಂದು ಪರಿಕರವಾಗಿಯೂ ಬಳಸಬೇಕಾಗುತ್ತದೆ. ತಾತ್ವಿಕತೆಯ ರೂಪಗಳು ಮತ್ತು ಸಾಮಾಜಿಕ ರಚನೆಗಳು ಹಾಗೂ ಆರ್ಥಿಕತೆಗಳ ನಡುವೆ ಸಂಬಂಧವನ್ನು ಬೆಸೆಯುವುದು ತಾತ್ವಿಕತೆ. ಆದ್ದರಿಂದ ತಾತ್ವಿಕತೆ ಎನ್ನುವುದು ನಮಗೆ ಒಂದು ಅರ್ಥದಲ್ಲಿ ಒಂದು ಸೇತುವೆಯಂತೆ ಕೆಲಸವನ್ನು ಮಾಡುತ್ತದೆ. ಆದರಲ್ಲಿಯೂ ನಮಗೆ ಮಾರ್ಕ್ಸವಾದಿ ಅಧ್ಯಯನ ಕ್ರಮವು ನಮಗೆ ತಾತ್ವಿಕತೆಯು ಕುರಿತು ಮುಖ್ಯವಾದ ನಿಲುವನ್ನು ವ್ಯಕ್ತ ಮಾಡಿದೆ. ಅಲ್ತೂಸರ್ ತಾತ್ವಿಕತೆಯನ್ನು ಸಮಾಜ ಮತ್ತು ಅದರ ಸಮಗ್ರತೆಯ ಭಾಗವಾಗಿ ಇರುತ್ತದೆ. ಅದು ವಿಷಯ ನಿಷ್ಟವಲ್ಲ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ವಿವರಿಸುವಾಗ ಅದನ್ನು ಸಮಾಜದ ಭಾಗವಾಗಿಯೂ ನೋಡುತ್ತಾನೆ. ಸಮಾಜ ಮತ್ತು ಅದರ ಸಮಗ್ರತೆಯು ಹೇಗೆ ಒಂದು ತಾತ್ವಿಕತೆಯನ್ನು ರೂಪಿಸುತ್ತದೆ ಎನ್ನುವುದು ಅವನ ಚರ್ಚೆಯ ಕೇಂದ್ರವೂ ಆಗಿದೆ. ಗ್ರಾಂಶಿಯು ಚರಿತ್ರೆ ಮತ್ತು ಅದರ ಬ್ಲಾಕ್ ಹೇಗೆ ತಾತ್ವಿಕತೆಯನ್ನು ನಿರ್ವಹಿಸುತ್ತದೆ ಎಂದೂ ವಿವರಿಸುತ್ತಾನೆ. ಚರಿತ್ರೆಯು ಅನೇಕವನ್ನು ರೂಪಿಸುತ್ತದೆ. ಚರಿತ್ರೆಯು ರೂಪವಾಗುತ್ತದೆ. ಆದರೆ

ಅದರ ಸ್ವರೂಪವು ಆಗಾಗ ತನ್ನ ಚಹರೆಯನ್ನು ಬದಲಿಸುತ್ತದೆ. ಆದರೆ ತಾತ್ವಿಕತೆಯನ್ನು ಕುರಿತು ವಿವರಿಸುವಾಗ ಸಾಮಾನ್ಯ ಜ್ಞಾನ ಮತ್ತು ಅದರ ಸ್ವರೂಪವನ್ನು ಒಂದು ಹರಡಿಕೊಂಡ ಕ್ರಮವಾಗಿ ನೋಡುತ್ತಾನೆ. ಚರಿತ್ರೆಯು ಯಾವುದನ್ನು ರೂಪಿಸುತ್ತದೆ ಅದನ್ನು ಗ್ರಾಂಶಿಯು ಅತ್ಯಂತ ಮುಖ್ಯವಾದ್ದು ಎಂದು ಭಾವಿಸುತ್ತಾನೆ. ನಮಗೆ ಇರುವ ಜ್ಞಾನ ಮತ್ತು ಅದರ ರೂಪಗಳು ಹೇಗೆ ನಮಗೆ ಸಮಾಜವನ್ನು ನೋಡಲು ಸಹಾಯವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಒಂದು ಸಮಾಜ ಮತ್ತು ಅದರ ರಚನೆಗಳು ಯಾವ ರೀತಿಯಲ್ಲಿ ಇರುತ್ತದೆಯೋ ಅದರ ಸ್ವರೂಪಕ್ಕೆ ಅನುಸಾರವಾಗಿ ಭಿನ್ನವಾದ ಜ್ಞಾನಗಳು ರೂಪಿಸಲ್ಪಡುತ್ತವೆ. ಜ್ಞಾನ ಎನ್ನವುದು ಈ ಅರ್ಥದಲ್ಲಿ ನಮಗೆ ಒಂದು ನಿರ್ದಿಷ್ಟವಾದ ಚೌಕಟ್ಟು ಕೂಡಾ ಆಗಿದೆ. 1930ರಲ್ಲಿ ಗ್ರಾಂಶಿಯು ಬರೆದುದು ಅನಂತರ ಬೇರೆ ಬೇರೆ ತಾತ್ವಿಕ ನೆಲೆಯನ್ನು ಪಡೆದುಕೊಂಡಿರುವುದು ನಿಜ.

ಗ್ರಾಂಶಿಯು ತಾತ್ವಿಕತೆಯನ್ನು ಅತ್ಯಂತ ವಿಶಿಷ್ಟವಾಗಿ ಹೇಳಿದ್ದಾನೆ. ಸಂವೇದನೆ ಮತ್ತು ತಾತ್ವಿಕತೆಗೆ ಸಂಬಂಧವು ಇದೆ ಎನ್ನುವುದು ಅವನ ಮೊದಲ ವಾದ. ಹಾಗೆ ನೋಡಿದರೆ ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಾದ ಲೇಖಕರಲ್ಲಿ ಗ್ರಾಂಶಿಯು ಒಬ್ಬ. ಅವನು ತನ್ನ ನೋಟ್ ಬುಕ್‌ನಲ್ಲಿ ತಾನು ಹೇಗೆ ಫ್ರೆಂಚ್‌ನ ಹದನೆಂಟನೆಯ ಶತಮಾನದ ಭೌತಿಕವಾದದ ಪ್ರಭಾವವನ್ನು ಅವನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದ್ದಾನೆ. ಪ್ರೆಂಚ್ ಭೌತಿಕವಾದಿ ನಿಲುವು ಬರೀ ಭೌತಿಕವಾದಿ ನಿಲುವು ಮಾತ್ರವೇ ಅಲ್ಲ. ಅದರಲ್ಲಿ ಮುಖ್ಯವಾಗಿ ವಿಜ್ಞಾನದ ಪ್ರಭಾವವನ್ನು ನಾವು ಕಾಣುತ್ತೇವೆ. ಅದರ ವಿಶ್ಲೇಷಣೆಯ ಕ್ರಮವು ಆನ್ವಯಿಕ ವಿಜ್ಞಾನವೂ ಆಗಿದೆ. ಅಂದರೆ ಅದು ಆಲೋಚನೆ ಮತ್ತು ಅದರ ಹಿಂದೆ ಇರುವ ತರ್ಕವನ್ನು ಯೋಚಿಸಿಕೊಳ್ಳುತ್ತದೆ. ಗ್ರಾಂಶಿಯು ನಮಗೆ ಆಲೋಚನೆಯ ವಿಶ್ಲೇಷಣೆ ಎಂದು ತಿಳಿಸುತ್ತಾನೆ. ಮೂಲ ಆಲೋಚನೆ ಮತ್ತು ಅದರ ಹುಡುಕಾಟವನ್ನು ಅವನು ಮುಖ್ಯವೆಂದು ಪರಿಗಣಿಸುತ್ತಾನೆ. ಆಲೋಚನೆ ಮತ್ತು ಅದರ ಅಂಶಗಳು ನಮ್ಮ ಸಂವೇದನೆಯನ್ನು ಬಿಟ್ಟು ಇರುವುದೂ ಇಲ್ಲ. ಅಂದರೆ ಅವನು ಹೇಳುವುದು ಸಂವೇದನೆಗೂ ಆಲೋಚನೆಗೂ ತಾತ್ವಿಕತೆಗೂ ಒಂದು ಸಂಬಂಧವು ಇದೆ. ವಾಸ್ತವವಾಗಿ ಟ್ರೆಸಿಯು ಹೇಳುವ ಮಾತನ್ನು ಇಲ್ಲಿ ಉಲ್ಲೇಖಿಸಬೇಕು: ರಾಜಕೀಯವಾಗಿ ನಮಗೆ ತಾತ್ವಿಕತೆ ಎನ್ನುವುದು ಅತ್ಯಂತ ಮುಖ್ಯವಾಗಿದೆ. ರಾಜಕೀಯ ಮತ್ತು ಸಾಮಾಜಿಕವಾದ ಕಾರಣದಿಂದ ತಾತ್ವಿಕ ದೃಷ್ಟಿಯನ್ನು ಹೊಂದುತ್ತೇವೆ. ಅದರ ಹೊರತು ನಾವು ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆಯನ್ನು ಮಾಡಲಾರೆವು. ವಿಜ್ಞಾನವು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಪಲ್ಲಟಕ್ಕೆ ಕಾರಣವೂ ಆಯಿತು. ವಿಜ್ಞಾನವು ನಮಗೆ ಹೊಸದಾದ ಅವಕಾಶವನ್ನು ಕಲ್ಪಿಸಿತು. ಅದರಿಂದ ನಾವು ಹೊಸದಾದ ಪ್ರಶ್ನೆಗಳನ್ನು ಕೇಳಿದೆವು. ಮನುಷ್ಯನು ಸ್ವತಂತ್ರನೇ?ಹೌದು ಎಂದಾದರೆ ಎಷ್ಟರಮಟ್ಟಿಗೆ ಅವನು

ಸ್ವತಂತ್ರನಾಗಿದ್ದಾನೆ? ಮನುಷ್ಯನು ಹೇಗೆ ಆಲೋಚನೆಯನ್ನು ಮಾಡುತ್ತಾನೆ ಮತ್ತು ಅದರ ಕಾರಣವು ಏನು ಎನ್ನುವುದನ್ನು ವಿಜ್ಞಾನವು ನಮಗೆ ತಿಳಿಸಿಕೊಟ್ಟಿತು. ಸಮಾಜ ಮತ್ತು ಅದರ ಅತ್ಯಂತ ಸಂಕೀರ್ಣವಾದ ರೂಪವು ತಾತ್ವಿಕತೆಯು ಆಗುತ್ತದೆ ಎಂದು ಅವನು ಹೇಳುತ್ತಾನೆ. ಹಾಗೆಂದು ತಾತ್ವಿಕತೆಯು ಯಾವತ್ತೂ ಕ್ರಿಯಾರಹಿತವಾಗಿರುವುದೂ ಇಲ್ಲ. ಅದು ನಮ್ಮ ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯು ತಾನು ಯಾವುದನ್ನು ಮಾಡುತ್ತಿದ್ದೇನೆ ಎಂದು ತಿಳಿದಿರುತ್ತಾನೆ. ಆದರೆ ಅವನಿಗೆ ಸೈದ್ಧಾಂತಿಕವಾದ ಅರಿವಿರಬೇಕು ಎಂದೇನೂ ಇಲ್ಲ. ಅವನು ಕೆಲಸವನ್ನು ಮಾಡುತ್ತಾನೆ. ಅವನು ತನ್ನ ಕೆಲಸವನ್ನು ಮಾಡುವ ಅರಿವನ್ನು ಹೊಂದುತ್ತಾನೆ ಎನ್ನುವುದು ಒಂದು ಅಂಶವಾದರೆ ಮತ್ತೊಂದು ಕಡೆಯಿಂದ ಅವನು ತಾನು ಮಾಡುವ ಕೆಲಸ ಮತ್ತು ಅದರ ಮೂಲಕ ಪರಿವರ್ತನೆ ಮಾಡುವದನ್ನು ಅರ್ಥಮಾಡಿಕೊಳ್ಳುತ್ತಾನೆ. ಗ್ರಾಂಶಿಯು ಒಂದು ಕಡೆಗೆ ತತ್ವಜ್ಞಾನದ ಜಾನಪದ ಎಂದು ಹೇಳುತ್ತಾನೆ. ಅದು ಸಾಮಾಜಿಕವಾಗಿ ಅತ್ಯಂತ ಮಹತ್ವದ್ದೂ ಆಗಿದೆ. ನೈತಿಕತೆ, ಧರ್ಮ, ಆಧ್ಯಾತ್ಮ ಎಲ್ಲವೂ ನಮ್ಮ ಪ್ರಜ್ಞೆಯನ್ನು ರೂಪಿಸುತ್ತವೆ ಎಂದು ಮಾರ್ಕ್ಸ ಹೇಳುತ್ತಾನೆ. ಇದನ್ನು ಇಲ್ಲಿ ಯಾಕೆ ಹೇಳಲಾಯಿತು ಎಂದರೆ ನಮ್ಮ ಆಧುನಿಕತೆಯ ಪರಿಸ್ಥಿತಿಯನ್ನು ನಾವು ನಮ್ಮದೇ ತಾತ್ವಿಕತೆ ಮೂಲಕವೇ ಅರ್ಥಮಾಡಿಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಗ್ರಾಂಶಿಯಲ್ಲಿ ಯಜಮಾನಿಕೆ ಮತ್ತು ತಾತ್ವಿಕತೆಗೆ ಒಂದು ಸಂಬಂಧವು ಇದೆ

ನಮಗೆ ಹದಿನೆಂಟನೆಯ ಶತಮಾನವು ಅತ್ಯಂತ ಸಾಮಾನ್ಯವಾದ ಒಂದು ಸಂಗತಿಯಾಗಿರಲಿಲ್ಲ. ಅದು ಅನೇಕ ಬದಲಾವಣೆಯನ್ನು ತಂದಿತ್ತು. ಅಧಿಕಾರವು ಈ ಕಾಲದಲ್ಲಿ ಕೆಲವು ತಂತ್ರಗಳನ್ನು ಬಳಸಿಕೊಂಡದ್ದು ಸತ್ಯವೂ ಹೌದು. ದೇಹ ಮತ್ತು ಅದರ ಸ್ವಯಂಸಂಪೂರ್ಣತೆಯನ್ನು ಎಷ್ಟು ಬಳಸಬೇಕು ಎನ್ನುವುದೂ ಒಂದು ಸಮಸ್ಯೆಯಾಗಿತ್ತು. ಆದ್ದರಿಂದ ಆಗ ದೇಹದ ಕೆಲವು ಭಾಗಗಳ ಉಪಯೋಗ ಎನ್ನುವುದಕ್ಕೆ ಒಂದು ಮಹತ್ವವು ಬಂದಿತು. ಬೇರೆ ಬೇರೆ ಕೆಲಸಗಳಿಂದ ದೇಹ ಮತ್ತು ಅದರ ಸ್ವರೂಪವನ್ನು ಬಳಸುವ ಕ್ರಮವು ಬೇರೆಯಾಯಿತು. ಇದನ್ನು ಕಾಲ ಮತ್ತು ದೇಶ ಹಾಗೂ ಅವಕಾಶಗಳ ಮಧ್ಯೆ ಇರುವ ದೇಹದ ಕಾರ್ಯಗಳು ಎಂದೂ ಹೇಳಬಹುದು. ದೇಹ ಮತ್ತು ಅದರ ಉಪಯೋಗ ಎನ್ನುವುದಕ್ಕೆ ಭಿನ್ನವಾದ ಅರ್ಥವನ್ನು ಈ ಕಾಲದಲ್ಲಿ ನಾವು ಕಾಣುತ್ತೇವೆ. ಯಾವುದನ್ನು ನಾವು ಋಣ ಎಂದು ಹೇಳುತ್ತೇವೆಯೋ ಅದನ್ನು ಕೂಡಾ ಶಿಸ್ತಗೆ ಬಳಸಿದ್ದರಿಂದ ಒಂದು ಬದಲಾವಣೆಯು ಕಾಣಿಸಿಕೊಂಡಿತು. ಋಣ ಮತ್ತು ವಿನಯ ಎನ್ನುವುದು ಹೇಗೆ ಒಂದು ನಿಯಂತ್ರಣದ ಭಾಷೆಯಾಯಿತು ಎಂದು ಫುಕೋ ವಿವರಿಸುತ್ತಾನೆ.ಮೊದಲು ಜನರಿಗೆ ವಿನಯವು ಉಂಟಾಗಬೇಕು. ಅದರ ಅನಂತರ ಅವರು ಹೇಗೆ ಬೇಕೋ ಹಾಗೆ ಬಾಗುತ್ತಾರೆ ಎನ್ನುವುದು ಒಂದು ಅತ್ಯಂತ ಮುಖ್ಯವಾದ ಪರಿಕಲ್ಪನೆಯೂ ಹೌದು.ಶಿಸ್ತು ಎನ್ನುವುದನ್ನು ಜಾರಿಗೆ ತರುವಾಗ

ಅನುಸರಿಸುವ ಅತ್ಯಂತ ಮುಖ್ಯವಾದ ಒಂದು ತಂತ್ರವೆಂದರೆ ಅದಕ್ಕಾಗಿ ಕಮ್ಮಟಗಳನ್ನು ಮತ್ತು ಸೈನ್ಯದ ಶಕ್ತಿಯನ್ನು, ಪೋಲಿಸ್ ವ್ಯವಸ್ಥೆಯನ್ನು ಬಳಸುವುದು. ಇದೆ ಜೊತೆಗೆ ಅನೇಕ ಕಾನೂನುಗಳು ಬರುತ್ತವೆ. ಹಾಗೆಂದು ಯಾರು ಈ ವಿನಯವನ್ನು ಹೊಂದಿರುತ್ತಾರೆಯೋ ಅವರು ಜೀತದವರು ಎಂದು ಭಾವಿಸಬೇಕಾದ ಅಗತ್ಯವಿಲ್ಲ. ವಿನಯ ಮತ್ತು ಋಣ ಎನ್ನುವುದಕ್ಕೆ ದೇಹವು ಒಂದು ಮಾನದಂಡವಲ್ಲ. ಆದರೆ ಯಾರು ಗುಲಾಮರು ಇರುತ್ತಾರೆಯೋ ಅವರ ದೇಹವು ದುಡಿಮೆಯನ್ನು ಅವಲಂಬಿಸುತ್ತದೆ. ಅತ್ಯಂತ ದೊಡ್ಡ ಜಾತಿ, ಜನಾಂಗ, ದೊಡ್ಡದಾದ ದೇಶದ ಪ್ರಜೆಗಳು ಕೂಡಾ ಪ್ರಭುತ್ವಕ್ಕೆ ಕೆಲವು ಋಣಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಅವರು ಋಣವನ್ನು ಮತ್ತು ವಿನಯವನ್ನು ಹೊಂದಿರಲೇ ಬೇಕಾಗುತ್ತದೆ. ಯಜಮಾನ್ಯದ ಸೇವೆಯು ಅತ್ಯಂತ ಅಗತ್ಯ. ಯಜಮಾನಿಕೆಯು ಹೇಗೆ ಇರುತ್ತದೆ ಎಣದರೆ ಅದು ವಿನಯವನ್ನು ನಿರೀಕ್ಷೆ ಮಾಡುತ್ತದೆ. ಸಾಮಾನ್ಯರು ಇದನ್ನು ವಿಮರ್ಶೆ ಮಾಡಲು ಹೋಗುವುದೂ ಇಲ್ಲ. ಹಾಗೆ ನೋಡಿದರೆ ರಾಜಕಾರಣದ ಅತ್ಯಂತ ಪ್ರಮುಖವಾದ ಅಂಗವೆಮದರೆ ಅದು ಅಧಿಕಾರವನ್ನು ಹೆಚ್ಚು ಚಾಲ್ತಿಗೆ ತರುವುದು. ಅದು ಅಧಿಕಾರವನ್ನು ಮಾನ್ಯ ಮಾಡುತ್ತದೆ. ಮನುಷ್ಯ ಮತ್ತು ಅವನ ದೇಹವನ್ನು ಹೇಗೆ ತನ್ನ ಶಕ್ತಿಗೆ ಬಳಸಬಹುದು ಎಂದು ಮಾತ್ರವೇ ಪ್ರಭುತ್ವವು ಯೋಚನೆ ಮಾಡುತ್ತದೆ. ಮನುಷ್ಯನ ದೇಹದಿಂದ ಉತ್ಪಾದನೆಯಾಗುವ ವಸ್ತುವನ್ನು ಕೂಡಾ ಒಂದು ಪ್ರಭುತ್ವವು ತನ್ನ ಇಚ್ಚೆಗೆ ಅನುಸಾರವಾಗಿ ಬಳಸುತ್ತದೆ. ಯಾವುದೇ ಸಂಶೋಧನೆಗಳು ಇದ್ದಕ್ಕಿಂದಂತೆ ಹುಟ್ಟ;ಲ್ಲ. ಅವುಗಳು ಬೇರೆ ಬೇರೆ ಮೂಲದಿಂದ ಹುಟ್ಟರುತ್ತವೆ. ಅದರ ಜೊತೆಗೆ ಅವುಗಳು ವಿವಿಧ ಸ್ಥಳ ಮತ್ತು ಕಾಲದಿಂದ ಬಂದಿರುತ್ತವೆ. ಒದು ಸಂಶೋಧನೆಯುನ್ನು ಮತ್ತೊಂದು ಸಂಶೋಧನೆಯು ಬೆಳೆಸುತ್ತದೆ. ಕವಿರಾಜಮಾರ್ಗವನ್ನು ತಿಮ್ಮಪ್ಪಯ್ಯ ಬರೆದ ಮೇಲೆ ಕಲಬುರ್ಗಿಯವರು ಬರೆದರು. ಅದರ ಅನಂತರ ಶೆಲ್ಡನ್ ಪೊಲಾಕ್ ಬರೆದರು. ಅದರ ಅನಂತರ ಕೆ.ವಿ.ಸುಬ್ಬಣ್ಣ ಮತ್ತೆ ಕವಿರಾಜ ಮಾರ್ಗದ ಚರ್ಚೆಯನ್ನು ಎತ್ತಿಕೊಂಡರು. ಹೀಗೆ ಬೇರೆ ಬೇರೆ ಆಯಾಮಗಳು ನಮಗೆ ದೊರೆತವು. ಹೀಗಾಗಿ ಈವತ್ತು ನಾವು ಕವಿರಾಜಮಾರ್ಗದ ಬಗ್ಗೆ ಹೆಚ್ಚು ಮಾತಾಡಲು ನಮಗೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಅನೇಕ ವಿಚಾರಗಳು ಮತ್ತೆ ಮತ್ತೆ ಬಂದಿವೆ. ಕವಿರಾಜಮಾರ್ಗವನ್ನು ಬರೆದವರು ಯಾರು ಎನ್ನುವುದೂ ಇದರಲ್ಲಿ ಒಂದು ವಿಚಾರವಾಗಿದೆ. ಒಂದು ಸಂಶೋಧನೆಯನ್ನು ಮತ್ತೊಂದು ಸಂಶೋಧನೆಯು ಮುಂದುವರಿಸಿರುವುದೂ ಅಷ್ಟೇ ಸತ್ಯ. ಆದ್ದರಿಂದಲೇ ಒಂದು ಸಂಶೋಧನೆಯು ಇನ್ನೊಂದು ಮಾದರಿಯನ್ನು ಅನುಸರಿಸುವಾದ ಅದರಲ್ಲಿ ಒಂದು ನೀಲ ನಕ್ಷೆಯು ಇರುವುದು ಸತ್ಯ. ಮೊದಮೊದಲು ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕುರಿತು ಹೇಳುವಾಗ ಅದನ್ನು ಒಂದು ನೈತಿಕವಾದ ಮೌಲ್ಯವಾಗಿಯೂ ವಿವರಿಸುತ್ತಿದ್ದರು. ಅಷ್ಟೇ ಅಲ್ಲ ಅನೇಕ ಸಂಗತಿಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಒಂದು ವಿದ್ಯೆಯಾಗಿಯೂ ಕಲಿಸುತ್ತಿದ್ದರು. ವಾಸ್ತವವಾಗಿ ನಮಗೆ ವಿದ್ಯೆ ಎನ್ನುವುದು ಅತ್ಯಂತ ಬೇರೆಯಾದ ಒಂದು ಸಂಗತಿ ಎಂದು ಅನಿಸಿದ್ದು

ಬ್ರಿಟೀಶರು ಬಂದ ಮೇಲೆ. ಅವರು ಆಧುನಿಕ ವಿದ್ಯೆಯನ್ನು ತಮ್ಮ ಅಗತ್ಯಕ್ಕೆ ಮಾತ್ರವೇ ಬಳಸಿದರು. ಅದರಲ್ಲಿ ಒಂದು ರಾಜಕೀಯವಾದ ಉದ್ದೇಶವೂ ಇತ್ತು. ಅದನ್ನು ನಾವು ಮರೆಯಬಾರದು. ಅವರು ಅವರ ತತ್ವಜ್ಞಾನವನ್ನು ಕೂಡಾ ಹೇಳಿದರು. ಅದರ ಜೊತೆಗೆ ಅವರು ನಮಗೆ ನೀತಿ ಮತ್ತು ನಾಗರಿಕತೆ ಎಂದರೆ ಏನು ಎಂದು ವಿವರಿಸಿದರು. ಹಾಗೆ ನೊಡಿದರೆ ಶಿಸ್ತು ಮತ್ತು ಅದರ ಪರಿಕರಗಳು ವಿವಿಧ ತಂತ್ರಗಳನ್ನು ಹೊಂದಿರುತ್ತವೆ. ಅವುಗಳಿಗೂ ಕೆಲವು ನಿಯಮಗಳು ಇರುತ್ತವೆ. ಅಧಿಕಾರವೂ ಕೆಲವು ರೀತಿಯ ಶಿಸ್ತು ಮತ್ತು ಅದರ ಅನ್ವಯಗಳನ್ನು ಮಾಡುತ್ತವೆ.

ಫುಕೋ ಮತ್ತು ಗ್ರಾಂಶಿಯರ ತೌಲನಿಕ ಅಧ್ಯಯನದ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ., ಇದು ನೇರವಾದ ಅನುವಾದವಲ್ಲ. ಕೆಲವು ವಿಚಾರಗಳನ್ನು ಮಾತ್ರವೇ ಕನ್ನಡದ ರೀತಿಗೆ ಒಗ್ಗುವಂತೆ ಅನುವಾದ ಮಾಡಿದ್ದೇನೆ. ಗ್ರಾಂಶಿ ಮತ್ತು ಫುಕೋರ ಬರಹಗಳ ಕುರಿತು ರೀ ಎಸೆಸ್‌ಮೆಂಟ್ ಕೃತಿಯನ್ನು ಹೆಚ್ಚು ಆಧರಿಸಿಕೊಂಡಿದ್ದೇನೆ. ಅದರ ಎಲ್ಲಾ ಲೇಖನಗಳನ್ನು ಇಲ್ಲಿ ಅನುವಾದವನ್ನು ಮಾಡಿಲ್ಲ ಎನ್ನುವುದನ್ನು ಓದುಗರು ಗಮನಿಸಬೇಕಾಗಿ ವಿನಂತಿ ಮಾಡುತ್ತೇನೆ

ಕೆ. ವಿ. ಎನ್, ಡಾ. ಭಂಡಾರಿ, ಆರ್.ಜಿ. ಹಳ್ಳಿ ನಾಗರಾಜ್, ಎಚ್. ಎಲ್. ಪುಷ್ಪಾ, ಅರವಿಂದ ಮಾಲಗತ್ತಿ, ಧರಣಿ ದೇವಿ , ಕಲ್ಗುಡಿ, ಮಲ್ಲೇಪುರಂ, ಡಾ.ಮೇಟಿ, ಡಾ.ಅವಿನಾಶ್, ಬೆರಳಚ್ಚು ಮಾಡಿಕೊಟ್ಟ ಸಂಪತ್, ಮೇರಿ, ಕರಡು ತಿದ್ದಿದ ಕುಸುಮಾ, ಪಾಂಡುರಂಗ, ಸಂದೀಪ, ಸಬಿತಾ, ನಹುಷ, ನಿಯತಿ, ಪ್ರಕಟ ಮಾಡುತ್ತಿರುವ ನಾಗೇಶ್, ಆಶಾ, ಮುಖಪುಟವನ್ನು ರಚಿಸಿಕೊಟ್ಟ ಕಿರಣ್, ಅಂದವಾಗಿ ಮುದ್ರಿಸಿದ ಅಂದವಾಗಿ ಮುದ್ರಿಸಿದ ಪೂರ್ಣಿಮದ ಸಮಸ್ಥರಿಗೆ ಕೃತಜ್ಞತೆಗಳು.

ಕೇಶವ ಶರ್ಮ. ಕೆ.

ಪರಿವಿಡಿ

Antonio Gramsci & Paul-Michel Foucault

ಅಂಟೋನಿಯಾ ಗ್ರಾಂಶಿ
ಮತ್ತು
ಪಾಲ್ ಮಿಶೆಲ್ ಫುಕೋ

ಸಾಂಸ್ಕೃತಿಕ ರಾಜಕೀಯ ಅರ್ಥಶಾಸ್ತ್ರ ಮತ್ತು ಪ್ರಭುತ್ವ

೧

ಸಂಸ್ಕೃತಿ ಮತ್ತು ಆರ್ಥಿಕತೆ

ಒಂದು ಅರ್ಥದಲ್ಲಿ ಗ್ರಾಂಶಿ ಮತ್ತು ಫುಕೋ ಇಬ್ಬರೂ ಬೇರೆ ಬೇರೆ ದಾರಿಯಲ್ಲಿ ನಡೆದುಕೊಂಡು ಬಂದವರು. ಆದರೆ ಕೆಲವು ಚಿಂತನೆಗಳಲ್ಲಿ ನಾವು ಸಾಮಾಜಿಕ ಅಂಶಗಳನ್ನು ಕಾಣುತ್ತೇವೆ. ಅವರು ಇಬ್ಬರೂ ಕೆಲವು ವಿಚಾರಗಳಲ್ಲಿ ಸಾಮ್ಯತೆಯನ್ನು ಹೊಂದಿದ್ದಾರೆ. ಇಬ್ಬರೂ ಬೇರೆ ದಾರಿಯಲ್ಲಿ ಸಾಗುತ್ತಾರೆ ಎನ್ನುವುಇದು ನಿಜ. ಆದರೂ ಅಧಿಕಾರ ಮತ್ತು ಯಜಮಾನಿಕೆ ಎನ್ನುವುದನ್ನು ಅವರು ಹೇಳುವಾಗ ನಮಗೆ ಸಾಮ್ಯತೆಯು ಕಂಡು ಬರುತ್ತದೆ. ಆಳುವವರು ಮತ್ತು ಆಳಿಸಿಕೊಳ್ಳುವವರು ಎನ್ನುವುದು ಅವರಿಗೆ ಹೆಚ್ಚು ಮುಖ್ಯವಾಗುತ್ತದೆ. ಗ್ರಾಂಶಿಯು ಇದನ್ನು ಹೆಜೆಮನಿ ಎಂದು ಕರೆದರೆ ಫುಕೋ ಇದನ್ನು ಪವರ್ ಎಂದು ಕರೆಯುತ್ತಾನೆ, ಫುಕೋನ ಪ್ರಕಾರ ಅಧಿಕಾರ ಎನ್ನುವುದು ಎಲ್ಲಾ ಕಡೆಗೂ ಇರುತ್ತದೆ. ಗ್ರಾಂಶಿಯ ಪ್ರಕಾರ ಹೆಜೆಮನಿಯು ಇರುತ್ತದೆ. ಆದರೆ ಗ್ರಾಂಶಿಯು ಆಳುವವರು ಮತ್ತು ಆಳಿಸಿಕೊಳ್ಳುವವರ ಮಧ್ಯೆ ಇರುವ ಸಂವಾದವನ್ನು ಎತ್ತಿ ಹಿಡಿಯುತ್ತಾನೆ. ಆಳುವವರು ಮತ್ತು ಆಳಿಕೊಳ್ಳುವವರ ಮಧ್ಯೆ ಕೆಲವು ರೀತಿಯ ಸಂವಾದ ಇರುತ್ತದೆ ಎನ್ನುವುದು ಅವನ ವಾದ. ಫುಕೋ ಅಧಿಕಾರವು ಕೆಲವು ಅವಲಂಬಿತರನ್ನು ಸೃಷ್ಟಿ ಮಾಡುತ್ತದೆ. ಆದ್ದರಿಂದ ಇಲ್ಲಿ ಒಂದು ಮಾತುಕತೆಯೂ ಇರುತ್ತದೆ. ಫುಕೋ ಅವಲಂಭಿತರ ಮನೋಸ್ಥಿತಿಯನ್ನು ಕುರಿತು ಹೇಳುತ್ತಾನೆ. ಅವರು ದುರ್ಬಲರು ಎಂದು ಯಾರೂ ಹೇಳಬಹುದು. ಪಶ್ಚಿಮದ ಬಂಡವಾಳವಾದವನ್ನು ನೋಡುವಾಗ ಇಬ್ಬರೂ ಬೇರೆ ಥರದಲ್ಲಿ ನಿರೂಪಣೆಯನ್ನು ಮಾಡುತ್ತಾರೆ. ಅವರ ಸನ್ನಿವೇಶಗಳೂ ಇದಕ್ಕೆ ಕಾರಣವಾಗಿರಬಹುದು. ಇಬ್ಬರೂ ಈ ವಿಚಾರದಲ್ಲಿ ಬೇರೆ ಬೇರೆ ಪ್ರಶ್ನೆಗಳನ್ನು ಎತ್ತುತ್ತಾರೆ. ಸರಕಾರಗಳನ್ನು ಕುರಿತು ಹೇಳುವಾಗಲೂ ಬೇರೆ ದಾರಿಯನ್ನು ಹೇಳುತ್ತಾರೆ. ಆದ್ದರಿಂದ ಇಲ್ಲಿ ಇಲ್ಲಿ ಕೆಲವು ಸೂಕ್ಷ್ಮತೆಗಳು ಇವೆ ಎಂದು ಅನಿಸುತ್ತದೆ. ಗ್ರಾಂಶಿಯು ಮಾರುಕಟ್ಟೆ ಮತ್ತು ಪ್ರಭುತ್ವದ ನಡುವೆ ಇರುವ ಸಂಬಂಧಗಳನ್ನು ಕುರಿತು ಹೇಳುತ್ತಾನೆ. ಪ್ರವೇಶದ ದಾರಿಗಳು ಈ

ದೃಷ್ಟಿಯಿಂದ ಬೇರೆಯಾಗುತ್ತದೆ. ರಾಜಕೀಯ ಅರ್ಥಶಾಸ್ತ್ರವನ್ನು ಕುರಿತು ಇಬ್ಬರೂ ಮಾತಾಡುತ್ತಾರೆ. ಆದರೆ ಫುಕೋ ಉದಾರವಾದಿ ಆರ್ಥಿಕತೆಯು ಪಶ್ಚಿಮದಲ್ಲಿ ಹೇಗೆ ಕೆಲಸವನ್ನು ಮಾಡುತ್ತದೆ ಎಂದು ವಿವರಿಸುತ್ತಾನೆ. ಗ್ರಾಂಶಿಯು ನಿರ್ದಿಷ್ಟವಾಗಿ ಫೋರ್ಡಿಸಂ ಮತ್ತು ಅಮೇರಿಕೀಕರಣದ ಸ್ವರೂಪವನ್ನು ಕುರಿತು ಹೆಚ್ಚು ಮಾತಾಡುತ್ತಾನೆ. ಫುಕೋ ಈಗಾಗಲೆ ಹೇಳಿದಂತೆ ಉದಾರವಾದಿ ಆರ್ಥಿಕ ನೀತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಈ ದೃಷ್ಟಿಯಲ್ಲಿ ಇಬ್ಬರ ಸಂಕಥನಗಳು ಅತ್ಯಂತ ಕುತೂಹಲಕಾರಿಯಾಗಿದೆ ಎನ್ನುವುದು ನಿಜ. ಇಬ್ಬರ ಮಾತುಗಳು ಮತ್ತೆ ಮತ್ತೆ ನಮ್ಮನ್ನು ಯೋಚನೆ ಮಾಡುವಂತೆ ಮಾಡುತ್ತದೆ ಎನ್ನುವುದು ಸತ್ಯ.

ಇಬ್ಬರೂ ಅನೇಕ ವಿಚಾರಗಳಲ್ಲಿ ಅತ್ಯಂತ ಆಳವಾಗಿ ಅಧ್ಯಯನ ಮಾಡಿದ್ದಾರೆ. ಇಬ್ಬರಲ್ಲಿಯೂ ಅಪಾರವಾದ ಒಳನೋಟಗಳು ಇವೆ ಎನ್ನುವುದು ನಿಜ. ನಾವು ನಮಗೆ ತಿಳಿದ್ದದ್ದು ಏನಿದೆಯೋ ಅದನ್ನು ಹೇಳುತ್ತೇವೆ. ಎಷ್ಟೋ ಸರ್ತಿ ಕಂಡದ್ದು ಮತ್ತೆ ಕೆಲವು ನಾವು ನಿಜವಾಗಿಯು ಅರ್ಥ ಮಾಡಿಕೊಳ್ಳದೆ ಹೋದ್ದು ಕೂಡಾ ಹೇಳಬೇಕಾಗಿ ಬರುತ್ತದೆ ಎನ್ನುವ ಅರ್ಥದಲ್ಲಿ ಫುಕೋ ಹೇಳುತ್ತಾನೆ. ಫುಕೋ ತಾನು ಯಾವ ಬಗೆಯ ಸಿದ್ಧಾಂತವನ್ನು ಅಂಗೀಕರಿಸುವುದಿಲ್ಲ. ಸಿದ್ಧಾಂತಿಯು ತಾನಲ್ಲ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ಬದ್ಧತೆಯುಳ್ಳ ಲೇಖಕ ಎಂದು ಗೊತ್ತಾಗುತ್ತದೆ. ಅವನು ತನ್ನ ಬದ್ಧತೆಯ ಹಾದಿಯನ್ನು ಬಿಟ್ಟು ಬೇರೆ ಕಡೆಗೆ ಗಮನವನ್ನು ನೀಡುವುದಿಲ್ಲ. ತಾತ್ವಿಕವಾಗಿ ಹೇಳುವುದಿದ್ದರೆ ಇಬ್ಬರ ತಾತ್ವಿಕತೆಯು ಬೇರೆಯಾಗಿದೆ. ಫುಕೋನ ವಾದವನ್ನು ಅತ್ಯಂತ ಹೆಚ್ಚು ಬಳಸಿಕೊಂಡವರು ಆಧುನಿಕೋತ್ತರವಾದಿಗಳು. ಎನ್ನುವುದು ಗಮನಾರ್ಹ.

ಗ್ರಾಂಶಿಯು ನಮಗೆ ಒಂದು ಸಂಸ್ಕೃತಿಯ ಮೇಲೆ ಯಾವುದು ಹೆಚ್ಚು ಪ್ರಭಾವವನ್ನು ಬೀರುತ್ತದೆ ಎಂದು ಹೇಳುವಾಗ ಗ್ರಾಂಶಿಯು ಆರ್ಥಿಕ ಸಂಗತಿಗಳನ್ನು ಮರೆಯಬಾರದು ಎಂದು ಭಾವಿಸುತ್ತಾನೆ. ಅದನ್ನು ಬಿಡಬಾರದು ಎನ್ನುವುದು ಅವನ ವಾದವಾಗಿದೆ. ಮೇಲು ನೋಟಕ್ಕೆ ಗ್ರಾಂಶಿಯು ಆರ್ಥಿಕತೆ ಮತ್ತು ಅದರ ಪರಿಣಾಮಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಾನೆ ಎಂದು ಅನಿಸುತ್ತದೆ ಎನ್ನುವುದು ಸತ್ಯ. ಆರ್ಥಿಕತೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ ಇದು ಮೂಲವಾಗಿದೆ. ಅದನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಇಲ್ಲಿ ಅವನ ಅಭಿಪ್ರಾಯವು ಲಿಂಗ ಪ್ರಭೇದವನ್ನು ಸೂತ್ರದಲ್ಲಿ ಹೇಳುತ್ತದೆ.ಧರ್ಮ ಮತ್ತು ಅದರ ರೂಪಿಸುವ ಸಂಬಂಧಗಳನ್ನು ನಿರ್ವಚನ ಮಾಡುತ್ತದೆ. ಆರ್ಥಿಕತೆ ಎನ್ನುವುದು ಹೇಗೆ ರಾಜಕಾರಣ, ಸಂಸ್ಕೃತಿ, ಒಂದು ಸಾವಯವ ಸಂಬಂಧವನ್ನು ಇಟ್ಟುಕೊಂಡಿರುತ್ತದೆ ಎನ್ನುವುದು ಗ್ರಾಂಶಿಯ ವಾದವಾಗಿದೆ. ಇದನ್ನು ಅವನು ಹೆಜಮನಿ ಎಂದು ಹೇಳುತ್ತಾನೆ. ಇದು ಒಂದು ಸೂತ್ರವಾಗಿದೆ ಎಂದು ಅನಿಸುತ್ತದೆ. ಅದು ಯಜಮಾನಿಕೆಯನ್ನು ಹೇಳುತ್ತದೆ. ಗ್ರಾಂಶಿಯಲ್ಲಿ ಇದು ಕೂಡಾ ಚಲನಶೀಲವಾದ್ದು ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಾಂಸ್ಕೃತಿಕ ಉತ್ಪಾದನೆಯಲ್ಲಿಯೂ ಇದು ಕೆಲಸವನ್ನು ಮಾಡುತ್ತದೆ. ಸಾಂಸ್ಕೃತಿಕವಾದ ಉತ್ಪಾದನೆಯಲ್ಲಿ ಕೆಲವು ಮಾನ್ಯವಾಗುತ್ತವೆ. ಕೆಲವು ಅಮಾನ್ಯವಾಗುತ್ತವೆ. ಇದು ಸಾಂಸ್ಕೃತಿಕ ರಾಜಕಾರಣದಿಂದ ಆಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ನಮ್ಮ ಸಮಾಜದ ಅನೇಕ ಸಂಬಂಧಗಳು ಇದನ್ನು ಆಧರಿಸಿಕೊಂಡು ಇರುತ್ತದೆ.

ಇದರ ನಡುವೆ ಆಧುನಿಕ ಜಗತ್ತು ಸ್ಪರ್ಧೆಯನ್ನು ಅವಲಂಬಿಸಿದೆ ಎನ್ನುವುದು ಗ್ರಾಂಶಿಗೆ ಗೊತ್ತಿದೆ. ಅದಕ್ಕೆ ಅವನು ಚರಿತ್ರೆ ಮತ್ತು ಸಂಸ್ಕೃತಿಗಳ ಸಂಬಂಧವನ್ನು ಹೇಳುತ್ತಾನೆ. ಒಂದು ಉದಾಹರಣೆಯನ್ನು ಕೊಡಬಹುದು: ಸಿನಿಮಾಗಳನ್ನು ಸೆನ್ಸಾರ್ ಮಾಡಲಾಗುತ್ತದೆ. ಸಿನಿಮಾಕ್ಕೆ ವಿಮರ್ಶೆಯು ಇರುತ್ತದೆ. ಅದೇ ರೀತಿಯಲ್ಲಿ ಪತ್ರಿಕೆಯಲ್ಲಿ ಬರುವ ಸುದ್ಧಿಗಳಿಗೆ ಕೂಡಾ ಸೋಸಿದ ಪಠ್ಯಗಳನ್ನು ಮಾತ್ರವೇ ಓದುಗರಿಗೆ ಕೊಡುತ್ತದೆ. ಸರಕಾರವು ಕೆಲವನ್ನು ಮಾನ್ಯ ಮಾಡುವುದರಿಂದ ಹೀಗಾಗುತ್ತದೆ ಎನ್ನುವುದನ್ನು ನಮ್ಮ ಅರಿವಿನಲ್ಲಿ ಇಟ್ಟುಕೊಳ್ಳುವುದು ಸೂಕ್ತ. ಪತ್ರಿಕೆಯಲ್ಲಿ ಬರುವ ಎಲ್ಲಾ ಸುದ್ಧಿಗಳು ನಂಬಲೇ ಬೇಕಾದ ಅಗತ್ಯವಿಲ್ಲ. ಅವನು ಜ್ಞಾನ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುವಾಗ ಅತ್ಯಂತ ಸರಳವಾದ ಒಂದು ನಿಲುವಿಗೆ ಬರುವುದಿಲ್ಲ. ಆಳ್ವಿಕೆ ಮತ್ತು ಆಳ್ವಿಸಿಕೊಳ್ವಿಕೆ ಎನ್ನುವುದು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಆಳುವುದು ಮತ್ತು ಆಳಿಸಿಕೊಳ್ಳುವುದು ಎಂದರೆ ಅದರಲ್ಲಿ ಪರಿವರ್ತನೆಯು ಇರುತ್ತದೆ. ಹಾಗೆಯೇ ಅದರಲ್ಲಿ ನಿರಾಕರಣೆಯು ಇರುತ್ತದೆ, ಅದರಲ್ಲಿ ಒಂದು ಬಗೆಯ ಒಪ್ಪಂದವೂ ಇರುತ್ತದೆ. ಯಜಮಾನಿಕೆ ಎನ್ನುವುದು ಸಂಸ್ಕೃತಿಯಲ್ಲಿ ಇರುತ್ತದೆ. ಸಂವೇದನೆಯಲ್ಲಿ ಇದರ ಪ್ರಭಾವವು ಇರುತ್ತದೆ. ಅದರಲ್ಲಿ ಸಂಘರ್ಷಗಳು ಇರುತ್ತವೆ. ಗ್ರಾಂಶಿಯಲ್ಲಿ ಯಜಮಾನಿಕೆ ಮತ್ತು ಅದರ ಪ್ರಶ್ನೆಗಳು ತುಂಬಾ ಭಿನ್ನವಾದ್ದು. ಅವನು ಅದನ್ನು ಹೇಳುವಾಗ ಬುಡ ರಚನೆ ಮತ್ತು ಮೇಲ್ ರಚನೆಯನ್ನು ಗಮನದಲ್ಲಿ ಇರಿಸಿಕೊಳ್ಳುತ್ತಾನೆ. ಹೆಜೆಮಿನಿಯ ಸ್ವರೂಪವನ್ನು ನಾವು ಹೀಗೆ ಹೇಳಬಹುದು:

ಯಜಮಾನಿಕೆ (ಹೆಜೆಮನಿ) ತನಗೆ ಬೇಕಾದ ಬುದ್ಧಿಜೀವಿಗಳನ್ನು ಉತ್ಪಾದಿಸುತ್ತದೆ.ಇದರಲ್ಲಿ ಸೌಂದರ್ಯಶಾಸ್ತ್ರವೂ ಭಿನ್ನವಾದ್ದು ಅಲ್ಲ. ಗ್ರಾಂಶಿಯು ಒಂದು ವಿವರವನ್ನು ನಮ್ಮ ಮುಂದೆ ಇಡುತ್ತಾನೆ–ಆಧುನಿಕ ಶಾಲೆಗಳು, ಚರ್ಚುಗಳು, ಸಮೂಹ ಮಾಧ್ಯಮಗಳು, ಸಿನಿಮಾಗಳು ನಮ್ಮ ಮುಂದೆ ಇಡುವುದು ಸಂಸ್ಕೃತಿಯ ವಿಭಿನ್ನ ಸಂಗತಿಗಳನ್ನು. ಸಿವಿಲ್ ಸೊಸೈಟಿಯು ಸಂಸ್ಕೃತಿಯನ್ನೂ ತನಗೆ ಬೇಕಾದಂತೆ ವ್ಯಾಖ್ಯಾನಿಸುತ್ತದೆ. ಹಾಗೂ ಸಿವಿಲ್ ಸೊಸೈಟಿಯು ಅನೇಕ ಸಂಸ್ಥೆಗಳನ್ನು ನಿರ್ದಿಷ್ಟವಾಗಿ ಒಂದು ಕೇಂದ್ರದಲ್ಲಿ ತಂದು ನಿಲ್ಲಿಸಿ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನೂ ಮಾಡುತ್ತದೆ. ಈ ಕಾರಣದಿಂದ ಆಧುನಿಕ ಪ್ರಭುತ್ವವು ಸಂಸ್ಥೆಗಳನ್ನು ಸಮಾಜದ ಕೇಂದ್ರದಲ್ಲಿ ತಂದು ನಿಲ್ಲಿಸುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗವು ತನಗೆ ಬೇಕಾದಂತೆ ಕೆಲವು ವ್ಯಾಖ್ಯಾನಗಳನ್ನು ಮಾಡುತ್ತದೆ. ಸಮಾಜದ ಸರಿ ಮತ್ತು ತಪ್ಪು ಎಂದು ಕೆಲವನ್ನು ನಿಶ್ಚಯಿಸುವುದೂ ಇದೇ. ಕೇಂದ್ರ ಮತ್ತು ಪರಿಧಿಯ ಕಲ್ಪನೆಯೂ ಇದರದೇ. ಸಂಸ್ಕೃತಿಯ ಅಧ್ಯಯನದಲ್ಲಿ ಗ್ರಾಂಶಿಯು ಬಳಸಿದ ಪರಿಭಾಷೆಯೆಂದರೆ ಹೆಜೆಮನಿ. ಯಜಮಾನಿಕೆಯು ನಮ್ಮನ್ನು ಆಳಲು ಕೆಲವು ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ. ಅದರಲ್ಲಿ ಪೋಲಿಸ್ ವ್ಯವಸ್ಥೆ, ಕೋರ್ಟ್, ಮಿಲಿಟರಿ ಮುಂತಾದವುಗಳು ಇರುತ್ತವೆ. ಮತ್ತು ಪರೋಕ್ಷವಾಗಿ ಕೆಲವನ್ನು ಅದು ಶ್ರೇಷ್ಠವೆಂದು ಹೇಳುತ್ತದೆ. ಹಾಗೂ ಯಜಮಾನಿಕೆಯು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಯತ್ನಿಸುತ್ತದೆ. ಕೆಲವು ಬೌಂಡರಿಗಳನ್ನು ಕೂಡಾ ಅದು ರೂಪಿಸುತ್ತದೆ. ಅಧಿಕಾರ ರಚನೆಗೆ ಯಾವುದು ಶ್ರೇಷ್ಠ, ಯಾವುದು ಕನಿಷ್ಠವೆಂಬ ವರ್ಗೀಕರಣಗಳು ತುಂಬಾ ಅಗತ್ಯವಿರುತ್ತದೆ. ಯಾವುದು ಯಜಮಾನಿಕೆಯ ಪ್ರಾತಿನಿಧಿಕ ರೂಪವಾಗಿದೆಯೋ ಅದು ಸಾಂಸ್ಕೃತಿಕ ರೂಪಗಳ

ಮೌಲ್ಯವನ್ನು ಪ್ರತಿನಿಧಿಸುತ್ತದೆ. ಯಾವುದು ಸಾಮಾಜಿಕ ರಚನೆಯ ಭಾಗವಾಗಿದೆಯೋ ಅದನ್ನು ನಿರೂಪಿಸುವ ಸಂಸ್ಥೆಗಳನ್ನು ಸಾಮಾಜಿಕ ಸಿಮೆಂಟ್ ಎಂದು ಗ್ರಾಂಶಿಯು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ವರ್ಗಗಳು ರೂಪಿಸುವ ನೀತಿ ಸಂಹಿತೆಗಳು ನಮ್ಮ ಸಂಸ್ಕೃತಿಯ ಭಾಗಗಳು ಎಂದೇ ನಾವು ಭಾವಿಸುತ್ತೇವೆ. ಅನೇಕ ಸಂದರ್ಭಗಳಲ್ಲಿ ಬುದ್ಧಿಜೀವಿಗಳು ಸಾಂಸ್ಥಿಕವಾದ ಮೌಲ್ಯಗಳನ್ನು ಪ್ರಚುರ ಪಡಿಸುವಂತೆಯೇ ಮಾತಾಡುತ್ತಾರೆ. ಹಾಗೆ ನೋಡುವುದಿದ್ದರೆ ಆಧುನಿಕ ಯುಗದಲ್ಲಿ ಬಂದಿರುವ ಆಡಳಿತ್ಮಾಕ ವ್ಯವಸ್ಥೆಯು ಅದರದೇ ಆದ ರಚನೆಯನ್ನು ಒಳಗೊಂಡಿದೆ. ಸಂಸ್ಕೃತಿಯ ಚರ್ಚೆಯಲ್ಲಿ ಈ ಆಡಳಿತ್ಮಾಕ ವ್ಯವಸ್ಥೆಯು ಬಹು ದೊಡ್ಡ ಸಂಶೋಧನೆಯ ಅವಕಾಶವನ್ನೂ ಕಲ್ಪಿಸಿದೆ. ಗ್ರಾಂಶಿಯು ತನ್ನ ವಾದವನ್ನು ಮಂಡಿಸುವ ಮೊದಲು ಮಾರ್ಕ್ಸವಾದವು ಸಂಸ್ಕೃತಿಯನ್ನು ಹೇಗೆ ನೋಡಿದೆ ಎಂದು ಗಮನಿಸುತ್ತಾನೆ. ಮಾರ್ಕ್ಸವಾದದಲ್ಲಿ ಆರ್ಥಿಕ ಚಟುವಟಿಕೆ ಎನ್ನುವುದು ತಳ ರಚನೆಯನ್ನು ಹೇಳುತ್ತದೆ. ಸಂಸ್ಕೃತಿಯು ಅದರಲ್ಲಿ ಮೇಲು ರಚನೆಯು ಆಗುತ್ತದೆ. ಇದನ್ನು ಅತ್ಯಂತ ಗಂಭೀರವಾಗಿ ಗ್ರಾಂಶಿಯು ಪರಿಗಣಿಸುತ್ತಾನೆ. ಮಾರ್ಕ್ಸವಾದದ ಸಂಬಂಧವು ಸಂಸ್ಕೃತಿಯ ಚರ್ಚೆಯಲ್ಲಿ ಅತ್ಯಂತ ಮಹತ್ವದ್ದು ಎಂದು ಗ್ರಾಂಶಿಯು ಭಾವಿಸುತ್ತಾನೆ. ತಾತ್ವಿಕತೆಗೆ ಮತ್ತು ಸಂಸ್ಕೃತಿಗೆ ಒಂದು ನಿಕಟವಾದ ಸಂಬಂಧವು ಇದೆ ಎಂದು ಅವನು ತಿಳಿಯುತ್ತಾನೆ. ನಮ್ಮ ಸಂವೇದನೆ ಮತ್ತು ಅದರ ಆಯಾಮಗಳು ಹೇಗೆ ಇರುತ್ತವೆ ಎನ್ನುವುದನ್ನು ವಿವರಿಸುವಾಗ. ವಾಸ್ತವವಾಗಿ 'ಯಾಜಮಾನ್ಯ' ಅಥವಾ 'ಹೆಜೆಮನಿ' ಎಂಬ ಮಹತ್ವಪೂರ್ಣ ಪರಿಕಲ್ಪನೆ ಕೊಟ್ಟವನು ಗ್ರಾಮ್ಷಿ'. ಇಟಾಲಿಯನ್ ಭಾಷೆಯಲ್ಲಿ ಜೆಜೆಮೊನಿಯ (Gegemonia) ಎಂಬುದು ಇಂಗ್ಲಿಷ್‌ನಲ್ಲಿ 'ಹೆಜೆಮನಿ' (Hegemony) ಎಂದಾಗಿದೆ. ಗ್ರಾಂಶಿಯನ್ನು ಓದಿದವರು ಫುಕೋನನ್ನು ಗ್ರಹಿಸುವಾಗ ಆಂಗ್ಲೋ ಇಂಗ್ಲೀಷಿನ ಚರ್ಚೆಯನ್ನು ಕೂಡಾ ಮಾಡಿದ್ದಾರೆ. ಇದರಲ್ಲಿ ಅವರು ಗ್ರಾಂಶಿಯ ವಾದವನ್ನು ಫುಕೋನ ಮೂಲಕ ಗ್ರಹಿಸಲು ಯತ್ನವನ್ನು ಮಾಡಿದ್ದಾರೆ. ಹೀಗೆ ಮಾಡುವಾಗ ಅವರು ಮಾಡಿದ ತಪ್ಪು ಒಂದಿದೆ. ಅವರು ಮಾರ್ಕ್ಸವಾದವನ್ನು ತಿರಸ್ಕರಿಸ ಹೊರಟರು. ಅದರಿಂದ ಗ್ರಾಂಶಿಯನ್ನು ಅವರು ತಪ್ಪಾಗಿ ಅರ್ಥ ಮಾಡಿಕೊಂಡಂತೆ ಆಯಿತು. ಗ್ರಾಂಶಿಯನ್ನು ಪುಕೋ ಮಾಡಲು ಹೊರಟರು ಎನ್ನುವ ವಾದವೂ ಇದೆ. ವಾಸ್ತವವಾಗಿ ಗ್ರಾಂಶಿಯು ಭೌತಿಕ ಅಗತ್ಯಗಳು ಮತ್ತು ಭೌತವಾದಿ ವಿವರಣೆಯನ್ನು ನೀಡಿದ್ದಾನೆ. ಆದರೆ ಫುಕೋ ಅದನ್ನು ಮಾಡಲು ಹೋಗಲಿಲ್ಲ. ಮಾರ್ಕ್ಸವಾದಕ್ಕೆ ಮತ್ತು ನವ ಮಾರ್ಕ್ಸವಾದಕ್ಕೆ ಒಂದು ಪರಂಪರೆಯು ಇದೆ. ಅದನ್ನು ಅನೇಕರು ಗಮನಿಸಲು ಹೋಗಲಿಲ್ಲ. ಅದು ತಪ್ಪಾಯಿತು. ಆದರೆ ಫುಕೋನನ್ನು ಅವಲಂಬಿಸಿದವರು ಹೇಳಿದ್ದು ಬೇರೆ. ಅದನ್ನು ಇಲ್ಲಿ ದಾಖಲಿಸಬೇಕು. ಅವನು ತಾನು ಯಾವುದೇ ತತ್ವಕ್ಕೆ ಗಂಟು ಬಿದ್ದಿಲ್ಲ ಎಂದು ಹೇಳುವಾಗ ಅವನ ಉದ್ದೇಶವು ಬೇರೆ ಇದೆ ಎನ್ನುವುದು ಸ್ಪಷ್ಟ. ಆದ್ದರಿಂದಲೇ ಆದುನಿಕೋತ್ತರವಾದಿಗಳು ಅವನನ್ನು ಅತ್ಯಂತ ಸುಲಭವಾಗಿ ಬಳಸಿಕೊಂಡರು ಎಂದು ಅನಿಸುತ್ತದೆ. ಪ್ರಭುತ್ವ ಮತ್ತು ಅದರ ರಚನೆಯನ್ನು ಹೇಳುವಾಗಲೂ ಅವನು ಇದನ್ನು ಹೇಳುತ್ತಾನೆ. ಕೆಲವು ಸನ್ನಿವೇಶದಲ್ಲಿ ಅವನು ನವ ಉದಾರವಾದಿಯಂತೆ ಮಾತಾಡುತ್ತಾನೆ. ವಾಸ್ತವ ಎನ್ನುವುದು ಅವನಲ್ಲಿ ಒಂದು ಸಂವಾದಿಯಾದ ಸತ್ಯವಾಗುತ್ತದೆ.

ಸಂಸ್ಕೃತಿಯ ಅಧ್ಯಯನವು ಒಂದು ಗುಂಪಿನ ಪ್ರಾತಿನಿಧಿಕ ಮಾದರಿಯೆನ್ನುವಂತೆ ನಡೆದ ಅಧ್ಯಯನಗಳಿಗೆ ಸೀಮಿತವಾದ ಗಡಿರೇಖೆಗಳಿವೆ. ಯಾವಾಗ ಪೋಸ್ಟ್ ಫೋರ್ಡಿಸಂ ಮತ್ತು ಪೋಸ್ಟ್ ಮೊರ್ಡನಿಸಂ ಬಂತೋ ಆಗ ಅದರ ಚರ್ಚೆಗಳ ಸ್ವರೂಪವೂ ಬದಲಾಯಿತು. ಉದಾಹರಣೆಗೆ ನಾವು ಬಳಸುವ ಆಧುನಿಕೋತ್ತರವೆಂದು ಯಾವುದನ್ನು ಹೇಳುತ್ತಿದ್ದೇವೆಯೋ ಅದು ಯಾರಿಗೆ ಮತ್ತು ಹೇಗೆ ಅನ್ವಯವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಫ್ರೆಡ್ರಿಕ್ ಜೇಮ್ಸನ್ ಹೇಳುವುದು ಏನೆಂದರೆ ಆಧುನಿಕ ಜಾಗತಿಕ ಮಾರುಕಟ್ಟೆಯ ಕಲ್ಪನೆಯೂ ಅಷ್ಟೇ ಮುಖ್ಯವಾದ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದೆ. ಅದು ರಾಷ್ಟ್ರೀಯತೆಯ ಗಡಿಯನ್ನು ಮೀರಿ ಜಾಗತಿಕ ಮಾರುಕಟ್ಟೆಯನ್ನು ಕೇಂದ್ರವಾಗಿರಿಸಿಕೊಂಡಿದೆ.ಆದರೆ ಅದರ ಸಮಸ್ಯೆಯೂ ಅಷ್ಟು ಬೇಗನೆ ನಮ್ಮ ಗಮನಕ್ಕೆ ಬರುವುದೂ ಇಲ್ಲ.ಬೆಳೆಯುತ್ತಿರುವ ತಾಂತ್ರಿಕತೆಯು ಮನುಷ್ಯರನ್ನು ಹತ್ತಿರ ತರುತ್ತಿದೆ.ಇದರಿಂದ ಸಾಂಸ್ಕೃತಿಕ ಅಧ್ಯಯನವು ಮತ್ತೆ ಬೇರೆ ರೀತಿಯಲ್ಲಿಯೂ ಬೆಳೆಯಿತು.ಆಧುನಿಕ ಬಂಡವಾಳವಾದವು ಮಾಹಿತಿ, ತಾಂತ್ರಿಕತೆ, ಮನೋರಂಜನೆ, ಮಾರುಕಟ್ಟೆಯ ವಿಸ್ತರಣೆಯನ್ನು ಒಳಗೊಂಡಿದೆ. ಏಕಕೇಂದ್ರಿತ ಬಂಡವಾಳವಾದವು ತನಗೆ ಬೇಕಾದಂತೆ ಮನುಷ್ಯರನ್ನು ವ್ಯಾಖ್ಯಾನಿಸುತ್ತದೆ. ಮನುಷ್ಯನು ಈಗ ಕೇವಲ ಗ್ರಾಹಕನಾಗಿದ್ದಾನೆ. ವ್ಯಕ್ತಿಯ ಅನನ್ಯತೆಯು ಈ ದೃಷ್ಟಿಯಿಂದ ಭಿನ್ನವಾಗಿದೆ. ಅನೇಕ ಸಾಂಸ್ಕೃತಿಕ ಅಧ್ಯಯನವು ವ್ಯಕ್ತಿಯನ್ನು ಒಂದು ಬಿಡಿಯಾದ ಭಾಗವಾಗಿ ನೋಡುತ್ತಿರುವುದರಿಂದ ಹೀಗೆ ಆಗುತ್ತಿದೆ. "ನಿರ್ಧಾರಾತ್ಮಕವಾದ ಏಕಕೇಂದ್ರಿತ ಆರ್ಥಿಕ ಚಟುವಟಿಕೆಯಿದು." ಎನ್ನುವ ಗ್ರಾಂಶಿಯ ಮಾತು ಇಲ್ಲಿಗೆ ಸರಿಯಾಗಿ ಹೊಂದಾಣಿಕೆಯಾಗುತ್ತಿದೆ. ಜಾಗತಿಕ ಮಾರುಕಟ್ಟೆಯ ಸಂದರ್ಭವನ್ನು ನಾವು ಸರಳವಾಗಿ ಪರಿಗಣಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ಈಗ ನಡೆಯುತ್ತಿರುವ ಚರ್ಚೆಯನ್ನು ನಾವು ಹೀಗೂ ವಿಶ್ಲೇಷಿಸಬಹುದು–ನಾವೀಗ ಮಾಡಬೇಕಾದುದು ಏನೆಂದರೆ ಜಾಗತಿಕ ಬಂಡವಾಳವಾದವು ಸಂಸ್ಕೃತಿಯೊಂದಿಗೆ ಯಾವ ರೀತಿಯ ಒಡನಾಟವನ್ನು ಇಟ್ಟುಕೊಂಡಿದೆ ಎಂದು ನೋಡುವುದು.ಹಾಗೂ ಈ ಸಂದರ್ಭದಲ್ಲಿ ಮನುಷ್ಯನು ಹೇಗಿದ್ದಾನೆ ಎಂದು ಗ್ರಹಿಸಿವುದು ಜಾಗತಿಕ ಬಂಡವಾಳವಾದವು ವ್ಯಕ್ತಿಯನ್ನು ನಿರೂಪಿಸುವ ಕ್ರಮಗಳು ಭಿನ್ನ. ಸ್ಥಳೀಯತೆಯು ನಾಶ ಹೊಂದಿ ಅದರ ಬದಲಿಗೆ ಹೊಸ ನಿರ್ವಚನಗಳು ಪ್ರಾರಂಭವಾಗಿದೆ. ಜಾಗತಿಕ ಸಮೂಹ ಮಾಧ್ಯಮಗಳು ತನಗೆ ಬೇಕಾದಂತೆ ಜನರನ್ನು ರೂಪಿಸುತ್ತಿದೆ. ತಮಗೆ ಬೇಕಾದಂತೆ ಸಂಸ್ಕೃತಿಯನ್ನು ಹಿಡಿತಕ್ಕೆ ತಂದು ನಿರ್ವಹಿಸುತ್ತಿದೆ. ಎನ್.ಬಿ.ಸಿ. ಎಂ.ಟಿ.ವಿ. ಮುಂತಾದವುಗಳು ನಮ್ಮನ್ನು ರೂಪಿಸುವುದು ಮಾತ್ರವೇ ಅಲ್ಲ ಕೆಲವು ಸಂಗತಿಗಳನ್ನು ಕೈಬಿಟ್ಟಿವೆ – ಇವುಗಳ ಎದುರಿನಲ್ಲಿ ಅನನ್ಯತೆ, ಪ್ರತ್ಯೇಕತೆ, ಮೌಲ್ಯ, ಸಂಸ್ಕೃತಿಯ ವ್ಯಾಖ್ಯೆಗಳು ಬದಲಾಗಿವೆ. ಕಸಿ ಸಂಸ್ಕೃತಿಯೊಂದು ಮನುಷ್ಯರನ್ನು ಆಳುತ್ತದೆ. ಮನುಷ್ಯನ ಆಸೆ, ಅವನ ಬಯಕೆ. ಅವನ ಅತೃಪ್ತಿಯನ್ನು ಮಾರುಕಟ್ಟೆಯು ನಿಯಂತ್ರಿಸುತ್ತದೆ ಎನ್ನುವುದೇ ಮುಖ್ಯ. ಸಾಂಸ್ಕೃತಿಕ – ಹಾಗೂ ಶೈಕ್ಷಣಿಕ ವರ್ಗೀಕರಣವು ಮನುಷ್ಯನ ಕೆಲಸವನ್ನು ಅನನ್ಯವೆಂದು ಹೇಳುತ್ತವೆ. ಕಲಾತ್ಮಕ ಆಧುನಿಕತೆಗೂ ಬದಲಾದ ಸಂಸ್ಕೃತಿಯ ಪ್ರಶ್ನೆಗೂ ವ್ಯತ್ಯಾಸವಿದೆ. ಆಧುನಿಕವಾದ ಅನೇಕ ಕೆಲಸಗಳು ಮತ್ತೆ ಬೇರೆ ಬೇರೆ ವರ್ಗೀಕರಣಗಳನ್ನು ಮಾಡಿದವು.ಮನುಷ್ಯನು ಹಳೆಯದಕ್ಕೆ ವಿದಾಯವನ್ನು ಹೇಳುತ್ತಾನೆ, ಹಾಗೂ ತನ್ನ ಅಸ್ತಿತ್ವವನ್ನು ತನಗೆ ತಾನೇ ರೂಢಿಸಿಕೊಳ್ಳುತ್ತಾನೆ. ಆಧುನಿಕವಾಗಿ ಮನುಷ್ಯರ ಸ್ವಭಾವವು

ಬದಲಾಗುತ್ತಿದೆ ಎನ್ನುವುದೇ ಮನನೀಯ. ಸಂಸ್ಕೃತಿಯನ್ನು ನೋಡುವಾಗ ನಾವು ಗ್ರಹಿಸುವ ವಿಧಾನಗಳು ಹೇಗೆ ಇವೆ ಎನ್ನುವುದೂ ಅಷ್ಟೇ ಮುಖ್ಯ. ರಾಜಕೀಯ ಅರ್ಥ ಶಾಸ್ತ್ರವು ಹೇಗೆ ಇದೆ ಎಂದು ಗ್ರಾಂಶಿಯು ಸ್ಪಷ್ಟವಾಗಿ ಹೇಳುತ್ತಾನೆ. ಅವನಲ್ಲಿ ಅದರ ಚರ್ಚೆಯು ಫೋರ್ಡ್ ಚರ್ಚೆಯ ಜೊತೆಗೆ ಬರುತ್ತದೆ. ಫೋರ್ಡ್ ಎನ್ನುವುದು ಹಿಂದಿನ ಬಾಗಿಲಿನಲ್ಲಿ ಬಂದ ಒಂದು ಆರ್ಥಿಕ ಚಟುವಟಿಕೆ.

ಇದನ್ನು ಸಾಮಾನ್ಯವಾಗಿ ಇಂಗ್ಲೆಂಡಿನಲ್ಲಿ ರಾಜಕೀಯ ವರ್ಗ ಎಂದು ಹೇಳುವುದು ಮಾತ್ರವೇ ಅಲ್ಲ, ಅವರನ್ನು ಏಕಾಂತವಾದಿಗಳು ಎಂದು ಹೇಳುತ್ತಿದ್ದರು. ಗ್ರಾಂಶಿಯು ಜಮೀನ್ದಾರಿ ವ್ಯವಸ್ಥೆಯಲ್ಲಿ ಜಮೀನ್ದಾರರು ಕೆಲವು ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅದರಲ್ಲಿ ಸೇನೆಯ ಥರದ ಕೆಲಸವೂ ಸೇರಿದೆ.

ಪ್ರಜ್ಞೆಯನ್ನು ಗ್ರಾಂಶಿಯು ಎರಡು ರೀತಿಯಲ್ಲಿ ಗುರುತಿಸುತ್ತಾನೆ. ಒಂದು ಸುಳ್ಳಾದ ಮತ್ತು ತಪ್ಪಾದ ಪ್ರಜ್ಞೆ. ತಾತ್ವಿಕತೆಗೆ ಯಾವಾಗ ನಿಷೇಧಾತ್ಮಕವಾದ ಅರ್ಥವು ಬರುತ್ತದೆಯೋ ಆಗ ಅಲ್ಲಿ ಸುಳ್ಳು ಪ್ರಜ್ಞೆಗೆ ಅವಕಾಶವಾಗುತ್ತದೆ. ನಾವು ಜಗತ್ತನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ನೋಡಲು ಹೊರಟರೆ ಆಗ ನಮಗೆ ಧನಾತ್ಮಕವಾದ ಪ್ರಜ್ಞೆಯು ಬರುತ್ತದೆ. ಆದರೆ ಯಾವುದು ಸಾಮಾನ್ಯವಾದ ಸಂವೇದನೆಯು ಇರುತ್ತದೆಯೋ ಅದರ ರೂಪೀಕರಣವು ಒಂದು ರೀತಿಯಲ್ಲಿ ಇರುತ್ತದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆದ್ದರಿಂದ ಬುದ್ಧಿಜೀವಿಗಳಿಗೆ ಕೆಲವು ನಿರ್ದಿಷ್ಟವಾದ ಜವಾಬ್ದಾರಿ ಇರುತ್ತದೆ. ಅದನ್ನು ಜ್ಞಾನ ಮತ್ತು ಅದರ ಹಂಚುವಿಕೆಯ ಕೆಲಸವೆಂದೂ ಹೇಳಬಹುದು. ನಮ್ಮ ಜ್ಞಾನಕ್ಕೆ ಮತ್ತು ನಮ್ಮ ಪ್ರಜ್ಞೆಗೆ ಹಾಗೂ ನಮ್ಮ ತಾತ್ವಿಕತೆಗೆ ಸಂಬಂಧವು ಇರುತ್ತದೆ., ನಮ್ಮ ಹೇಳಿಕೆಗಳು ನಮ್ಮ ವಾದವನ್ನು ಮತ್ತು ನಮ್ಮ ತಾತ್ವಿಕತೆಯನ್ನು ಹೇಳುತ್ತದೆ. ಹೊರಗಿನ ತಾತ್ವಿಕತೆಯು ನಮ್ಮ ಅಂತರಂಗದ ತಾತ್ವಿಕತೆಯನ್ನು ನಿರ್ದೇಶಿಸುತ್ತದೆ. ಫುಕೋ ಬಂಡವಾಳವಾದವನ್ನು ಕುರಿತು ಹೇಳುವಾಗ ಅದನ್ನು ಒಂದು ಘಟಕ ಎಂದು ಹೇಳುತ್ತಾನೆ. ಅದಕ್ಕೂ ಅವನು ಒಂದು ಜೀನಿಯಾಲಜಿಯನ್ನು ತೋರಿಸಿಕೊಡುತ್ತಾನೆ. ಅದಕ್ಕೆ ಒಂದು ವಂಶವಾಹಿನಿಯು ಇರುತ್ತದೆ ಎನ್ನುವುದು ಅವನ ವಾದ. ಅದು ನವ ಆರ್ಥಿಕತೆಯನ್ನು ಹೇಳುತ್ತದೆ. ಅಥವಾ ಅದನ್ನು ನವ ಆರ್ಥಿಕತೆಯ ಸ್ವರೂಪದ ಒಂದು ಮಾದರಿ ಎಂದು ಹೇಳಬಹುದು. ಆಧುನಿಕ ಆರ್ಥಿಕತೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಇಬ್ಬರನ್ನೂ ಅನೇಕರು ಜೊತೆಗೆ ತರುತ್ತಾರೆ. ಅದರಿಂದ ಗ್ರಾಂಶಿಯನ್ನು ವಿಸ್ತರಿಸುವಾಗ ಅದರ ಸಾಧ್ಯತೆಯು ಬೇರೆ ಆಗಿದ್ದು ಸುಳ್ಳಲ್ಲ. ಅಧಿಕಾರ ಮತ್ತು ಅದರ ಜೊತೆಗೆ ಇಟ್ಟುಕೊಳ್ಳುವ ಸಂಬಂಧಗಳು ಹೇಗೆ ಇರುತ್ತವೆ ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ.

ಗ್ರಾಂಶಿಯು ಒಂದು ಮಾತನ್ನು ಹೇಳುತ್ತಾನೆ: ಹಳೆಯದು ಎನ್ನುವುದು ಈಗ ಇಲ್ಲವಾಗಿದೆ. ಹೊಸತು ಎನ್ನುವುದು ಇನ್ನೂ ಹುಟ್ಟಿಲ್ಲ. ಇದರ ಮಧ್ಯೆ ನಾವು ಇದ್ದೇವೆ. ಒಂದು ಮಧ್ಯಮ ಅವಕಾಶ ಎಂದು ಇದನ್ನು ಗುರುತಿಸುತ್ತಾನೆ.ಮಾರ್ಕ್ಸವಾದದಲ್ಲಿ ಗ್ರಾಂಶಿಯು ಹೊಸತನ್ನು ಹುಡುಕುತ್ತಾನೆ.. ಹೊಸ ಬಗೆಯ ನಿರ್ವಚನವನ್ನು ಅದೇ ಚೌಕಟ್ಟಲ್ಲಿ ಮಾಡುತ್ತಾನೆ. ಅವನ ಫಿಲಾಸಫಿ ಆಫ್ ಪ್ರಾಕ್ಸಿಸ್ ಇದನ್ನು ಹೇಳುತ್ತದೆ. ಬಂಡವಾಳವಾದ ಮತ್ತು ಅದರ ಚರಿತ್ರೆಯನ್ನು

ಅವನು ಗುರುತಿಸುತಾನೆ. ಚರಿತ್ರೆ ಮತ್ತು ಅದರ ಬೆಳವಣಿಗೆಯನ್ನು ಸಮರ್ಥವಾಗಿ ಗುರುತಿಸುತ್ತಾನೆ. ಅದರ ಸಂಕೀರ್ಣತೆಯು ಅವನಿಗೆ ಹೆಚ್ಚಯು ಮುಖ್ಯವಾಗುತ್ತದೆ. ಬಂಡವಾಳವಾದ ಮತ್ತು ಅದರ ಸಾಮಾಜಿಕ ಸ್ವರೂಪವನ್ನು ಇತ್ಯಾತ್ಮಕವಾಗಿ ಹೇಳುತ್ತಾನೆ. ಪಶ್ಚಿಮದಲ್ಲಿ ಇದು ಹೇಗೆ ಬಂತು ಮತ್ತು ಅದರ ಪರಿಣಾಮವು ಏನು ಎನ್ನುವುದು ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಇಲ್ಲಿ ಇನ್ನೊಂದು ವಿಷಯವು ಇದೆ., ವಾಸ್ತವವಾಗಿ ಪಶ್ಚಿಮದಲ್ಲಿ ಅದು ಬೆಳವಣಿಗೆಯನ್ನು ಸಾಧಿಸಿದ್ದು ಹೇಗೆ ಎನ್ನುವುದು ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಸಮಾಜ ಮತ್ತು ಅದರ ಆರ್ಥಿಕ ಸಂಬಮದ, ನೈತಿಕ ರಾಜಕಾರಣ ಮತ್ತು ಆರ್ಥಿಕತೆ, ಪ್ರಭುತ್ವ ಮತ್ತು ಅದರ ಪರಿಕರಗಳು, ಚರಿತ್ರೆಯ ಪ್ರತಿಕ್ರಿಯೆಗಳು, ಬುದ್ದಿಜೀವಿಗಳ ಕಾರ್ಯಗಳನ್ನು ಅವನು ಹೇಳುತ್ತಾನೆ.

ಗ್ರಾಂಶಿಯು ಡೇವಿಡ್ ರೆಕಾರ್ಡೊನ ಆಥಿಕತೆಯನ್ನು ಅಳವಡಿಸುತ್ತಾನೆ. ಅದನ್ನು ಇಲ್ಲಿ ವಿವರವಾಗಿ ನೋಡಬಹುದು: ಅರ್ಥಶಾಸ್ತ್ರ ಮತ್ತು ಅದರ ತಾತ್ವಿಕಪ್ರಶ್ನೆಗಳನ್ನು ನಾವು ಸಾಮಾನ್ಯವಾಗಿ ಬೇರೆ ಎಂದು ಹೇಳುತ್ತೇವೆ. ಅದಕ್ಕೂ ಸಾಹಿತ್ಯಕ್ಕೂ ಯಾವುದೇ ಸಂಬಂಧವಿಲ್ಲವೆನ್ನುವುದು ನಮ್ಮ ಅನೇಕರ ಗ್ರಹಿಕೆಯಾಗಿದೆ. ಆದರೆ ವಾಸ್ತವವಾಗಿ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆ, ಕಾನೂನು, ಮತ್ತು ನಾಗರಿಕತೆಯ ಪ್ರಶ್ನೆಗಳು ಒಂದಕ್ಕೊಂದು ಪೂರಕವಾದ ನಿಲುವನ್ನು ಹೊಂದಿರುತ್ತದೆ. ಯಾವುದನ್ನು ನಾವು ನಾಗರಿಕ ಬದುಕು ಎಂದು ಕರೆಯುತ್ತೇವೆಯೋ ಅದು ರಾಜಕೀಯ ಅರ್ಥಶಾಸ್ತ್ರಗಳಿಗಿಂತ ಭಿನ್ನವಲ್ಲ. ಅಂದರೆ ರಾಜಕೀಯ ಅರ್ಥಶಾಸ್ತ್ರವು ನಮ್ಮ ಜೀವನವನ್ನು ನಿಯಂತ್ರಿಸುತ್ತದೆ. ಆದರೆ ಯಾವುದನ್ನು ರಾಜಕೀಯ ಅರ್ಥಶಾಸ್ತ್ರವೆಂದು ಹೇಳುತ್ತೇವೆಯೋ ಅದು ಪ್ರಭುತ್ವಕ್ಕಿಂತ ಭಿನ್ನವಲ್ಲ. ರಾಜಕೀಯ ಅರ್ಥಶಾಸ್ತ್ರವನ್ನು ಕುರಿತು ಹೇಳುವಾಗ ಒಂದು ರೀತಿಯ ಎಚ್ಚರವು ಬೇಕಾಗುತ್ತದೆ. ರಾಜಕೀಯ ಈವತ್ತು ಹೇಳುತ್ತಿರುವ ಅಭಿವೃದ್ಧಿಯು ಬಡ ಜನರನ್ನು ಕೇಂದ್ರಿಕರಿಸಿಕೊಂಡಿಲ್ಲ. ರಾಜಕೀಯವು ಸಾಹಿತ್ಯ ಮತ್ತು ಅದರ ಹಿಂದಿರುವ ಒಲವುಗಳನ್ನು ನೋಡುವ ಕ್ರಮಗಳು ಬೇರೆ. ರಾಜಕೀಯ ಅರ್ಥಶಾಸ್ತ್ರವು ಪ್ರಾರಂಭವಾಗುವುದೇ ಖಾಸಗಿ ಆಸ್ತಿಯ ಪರಿಕಲ್ಪನೆಯಿಂದ. ರಾಜಕೀಯ ಅರ್ಥಶಾಸ್ತ್ರವು ಮಾತ್ರವೇ ಅದನ್ನು ಸರಿಯಾಗಿ ವಿವರಿಸುತ್ತದೆ ಎಂದು ಮಾರ್ಕ್ಸ್ ಹೇಳಿದ್ದು ಉಲ್ಲೇಖನೀಯ. ರಾಜಕಾರಣ ಮತ್ತು ಅದರ ಪರಿಣಾಮಗಳು ಭೂಮಿ, ಕಂದಾಯ, ಮೆಶಿನ್‌ಗಳು, ಬಂಡವಾಳ, ಉತ್ಪಾದನೆಯ ಕ್ರಮ, ವಿನಿಮಯ, ಸ್ಪರ್ಧೆಗಳು, ಹಣ ಮುಂತಾದವುಗಳು ರಾಜಕೀಯ ಅರ್ಥಶಾಸ್ತ್ರಗಳ ಪ್ರಶ್ನೆಯೇ ಆಗಿದೆ. ಯಾವಾಗ ಸಾಮಾಜಿಕ ಸಂಪನ್ಮೂಲದಲ್ಲಿ ಸಮಸ್ಯೆಯು ಉಂಟಾಗುತ್ತದೆಯೋ ಆಗ ಅದರ ಸಮಸ್ಯೆಯು ಸಾಮಾನ್ಯರ ಮೇಲೆ ಆಗುತ್ತದೆ. ಆರ್ಥಿಕ ಬಿಕ್ಕಟ್ಟು ಕಾರ್ಮಿಕರ ಮೇಲೆ ಪರಿಣಾಮವನ್ನು ಉಂಟು ಮಾಡುತ್ತದೆ. ಹಾಗೆಯೇ ಯಾವಾಗ ಸಂಪನ್ಮೂಲದಲ್ಲಿ ಹೆಚ್ಚಳವುಂಟಾಗುತ್ತದೆಯೋ ಆಗ ಅದರ ಲಾಭವನ್ನು ಮಾತ್ರ ಸಾಮಾನ್ಯರು ಪಡೆಯುವುದಿಲ್ಲ. ಇದು ಯಾವಾಗಲೂ ಒಂದು ಸಮಾಜದಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ಬಂಡವಾಳವು ಹೆಚ್ಚಾದ ವೇಳೆ ಬರುವ ಸಮಸ್ಯೆ ಎಂದರೆ ಅದು ವರ್ಗಗಳನ್ನು ಸ್ಪಷ್ಟವಾಗಿಯೇ ಬೇರೆ ಬೇರೆ ಮಾಡುತ್ತದೆ. ಸಂಪನ್ಮೂಲದಲ್ಲಿನ ಹಂಚಿಕೆಯು ಸರಿಯಾಗಿ ಇಲ್ಲದ ವೇಳೆ ಆಗುವ ಪರಿಣಾಮವಿದು. ಮತ್ತೆ ನಾವು ಗಮನಿಸಬೇಕಾದ ಅಂಶವೆಂದರೆ ಕೆಲಸದ ವರ್ಗೀಕರಣವು ಭಿನ್ನವಾದ ಪ್ರಶ್ನೆಗಳನ್ನು ಸೃಷ್ಟಿಸುತ್ತದೆ. ಆಧುನಿಕಯುಗದ ಯಂತ್ರಗಳು ಒಂದು ಮಾದರಿಯ ಕಾರ್ಮಿಕರನ್ನು ಸೃಷ್ಟಿ

ಮಾಡುತ್ತದೆ. ಆಧುನಿಕ ಜಗತ್ತಿನಲ್ಲಿ ಯಾವುದನ್ನು ನಾಗರಿಕತೆಯೆಂದು ಕರೆಯುತ್ತೇವೆಯೋ ಅದರ ಹಿನ್ನೆಲೆಯಲ್ಲಿ ಬೇರೆ ಬೇರೆ ಪ್ರಶ್ನೆಗಳೂ ಉದ್ಭವವಾಗಿದೆ ಎನ್ನುವುದನ್ನು ನಾವು ಮರೆಯಬಾರದು. ದೊಡ್ಡ ಬಂಡವಾಳಶಾಹಿಗಳು ಸಣ್ಣ ಬಂಡವಾಳಶಾಹಿಗಳನ್ನು ನಾಶ ಮಾಡುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಸಮಾಜವು ಯಾರ ಪರ ಎನ್ನುವುದೇ ಬಹಳ ದೊಡ್ಡ ಪ್ರಶ್ನೆ. ಯಾವ ಸಮಾಜದಲ್ಲಿ ಬಂಡವಾಳವಾದವು ಅತ್ಯಂತ ಹೀನವಾದ ಅವಸ್ಥೆಗೆ ತಲುಪುತ್ತದೆಯೋ ಆಗ ಅಲ್ಲಿ ತಾರತಮ್ಯ ನೀತಿಗಳೂ ಹೆಚ್ಚಾಗುತ್ತವೆ. ಬಂಡವಾಳವಾದಿ ಸಮಾಜದಲ್ಲಿ ವ್ಯಕ್ತಿಯ ಕುರಿತಾದ ನಿರೂಪಣೆಗಳು ಬೇರೆಯಾಗುತ್ತವೆ. ಸಾಮಾಜಿಕ ಜೀವನವನ್ನು ನಾವು ಬಂಡವಾಳವಾದದ ಹಿನ್ನೆಲೆಯಿಂದ ಅರ್ಥ ಮಾಡಿಕೊಳ್ಳುವ ಕ್ರಮಗಳು ಭಿನ್ನ. ಬಂಡವಾಳವಾದವು ಮನುಷ್ಯರನ್ನು ನೋಡುವ ಕ್ರಮವು ಕೂಡಾ ಬೇರೆಯಾಗಿದೆ. ಯಾವ ಸಮಾಜಲ್ಲಿ ಬಂಡವಾಳವಾದ ಅತ್ಯಂತ ತುತ್ತ ತುದಿಗೆ ಹೋಗಿರುತ್ತದೆಯೋ ಆಗ ಅಲ್ಲಿ ವ್ಯಕ್ತಿಯ ಅಸ್ತಿತ್ವಕ್ಕೆ ಬೇರೆ ಅರ್ಥಗಳು ಬಂದಿರುತ್ತವೆ. ಆದರೆ ಬಂಡವಾಳವಾದವು ವ್ಯಕ್ತಿಯನ್ನು ಶ್ರೀಮಂತ ಮತ್ತು ಬಡವ ಎಂದು ವರ್ಗೀಕರಿಸುತ್ತದೆ. ಹಲವು ಬಡವರು ಮತ್ತು ಕೆಲವು ಶ್ರೀಮಂತರು ಎನ್ನುವ ವರ್ಗಗಳು ನಿರ್ಮಾಣವಾಗುತ್ತವೆ. ಎಲ್ಲಿ ಕಾರ್ಮಿಕರ ನಡುವೆ ಸ್ಪರ್ಧೆ ಇರುತ್ತದೆಯೋ ಅಲ್ಲಿ ಕಡಿಮೆ ಬೆಲೆಯ ಸರಕುಗಳು ಸಿಗುತ್ತವೆ. ಬಂಡವಾಳವಾದವು ಅಸಹಜವಾದ ಹಿಂಸೆಯನ್ನು ಸೃಷ್ಟಿಸುತ್ತದೆ. ಕೆಲವೇ ಶ್ರೀಮಂತರನ್ನು ಸಾಕಲು ಅದು ಅನಿವಾರ್ಯವೆಂಬಂತೆ ಹಿಂಸೆಯನ್ನು ಸೃಷ್ಟಿಸುತ್ತದೆ. ಅದಕ್ಕೆ ಅದು ಮುಖ್ಯವೆಂಬಂತೆ ಭಾಸವಾಗುತ್ತದೆ. ಬಂಡವಾಳವಾದದಲ್ಲಿ ಕಾರ್ಮಿಕರು ತಮ್ಮ ದೇಹ ಮತ್ತು ಮನಸ್ಸನ್ನು ತ್ಯಾಗ ಮಾಡಬೇಕಾಗುತ್ತದೆ. ವಾಸ್ತವವಾಗಿ ಕೆಲಸದ ವರ್ಗೀಕರಣ ಪರಿಕಲ್ಪನೆಯು ಹೆಚ್ಚು ಹೆಚ್ಚು ನಿರ್ದಿಷ್ಟ ಕೌಶಲವನ್ನು ರೂಪಿಸುತ್ತದೆ. ನಿರ್ದಿಷ್ಟವಾದ ಜನರನ್ನು ಮೆಶಿನ್‌ಗಳ ಅಗತ್ಯಕ್ಕಾಗಿ ರೂಪಿಸಲಾಗುತ್ತದೆ. ಇದು ಮಾತ್ರವೇ ಅಲ್ಲ, ಜನರಿಗೆ ಮೆಶಿನ್‌ಗಳೇ ಸ್ಪರ್ಧೆಯನ್ನು ಉಂಟು ಮಾಡುತ್ತವೆ. ಹಾಗೆ ನೋಡಿದರೆ ಯಂತ್ರಗಳು ಮನುಷ್ಯರ ಸೃಷ್ಟಿ. ಆದರೆ ಅದುವೇ ಜನರಿಗಿಂತ ಹೆಚ್ಚಿನ ಉತ್ಪಾದನೆಯನ್ನು ಮಾಡುತ್ತದೆ. ಯಾವಾಗ ಯಂತ್ರಗಳಿಂದ ಉತ್ಪಾದನೆಯು ಹೆಚ್ಚು ನಡೆಯುತ್ತದೆಯೋ ಆಗ ವೇತನವು ಕಡಿಮೆಯಾಗುತ್ತದೆ ಎನ್ನುವುದೂ ನಿಜ.ಆದರೆ ನಾವು ಮತ್ತೊಂದು ಅಂಶವನ್ನು ಹೀಗೆ ಹೇಳಬಹುದು–ಅದು ಯಂತ್ರಗಳು ಅಪಾಯವಲ್ಲ, ಆದರೆ ಅದನ್ನು ಉಪಯೋಗಿಸುವ ಸಂದರ್ಭದಲ್ಲಿ ನಮಗೆ ವಿವೇಕ ಬೇಕು. ಕಾರ್ಮಿಕರು ಎಂದರೆ ಜೀವನ ಕ್ರಮವೂ ಹೌದು. ಅದನ್ನು ಕೇವಲ ದುಡಿಮೆ ಎಂದು ಹೇಳಬೇಕಾಗಿಲ್ಲ. ಈ ಪ್ರಶ್ನೆಯು ಈಗ ಬಹಳ ಮಹತ್ವದ್ದೂ ಹೌದು. ಮಾರ್ಕ್ಸ್‌ವಾದದ ಪ್ರಕಾರ ಎಲ್ಲಿ ಸಂಪನ್ಮೂಲದ ಕೊರತೆಯು ಆಗುತ್ತದೆಯೋ ಅಗ ಅದರ ಪರಿಣಾಮವು ಜನರ ಮೇಲೆ ಆಗುತ್ತದೆ. ಅದರಲ್ಲಿಯೂ ಅದು ಹೆಚ್ಚು ಪರಿಣಾಮವನ್ನು ಬೀರುವುದು ಕಾರ್ಮಿಕರ ಮೇಲೆ. ಯಾರೋ ಒಂದಿಬ್ಬರ ಖಾಸಗಿ ಆಸಕ್ತಿ ಮತ್ತು ಅವರು ಹಣವನ್ನು ಚಲಾಯಿಸುವ ರೀತಿಯನ್ನು ನೋಡಿ ನಾವು ಇಡಿಯ ಸಮಾಜವೇ ಅಭಿವೃದ್ಧಿಯಾಯಿತು ಎಂದು ಹೇಳುವುದು ಕಷ್ಟ. ಹಣವೆನ್ನುವುದನ್ನು ನಾವು ವಿವರಿಸುವುದು ಕಷ್ಟ. ಹಣವೆನ್ನುವುದರ ಮೌಲ್ಯ ನಿರ್ಧರಿತವಾಗುವುದೇ ರಾಷ್ಟ್ರ ; ಪ್ರಭುತ್ವ ಮತ್ತು ಮಾರುಕಟ್ಟೆಯಲ್ಲಿ ; ಅಂತರರಾಷ್ಟ್ರೀಯ ಮಾರುಕಟ್ಟೆ ಮತ್ತು ದರದ ಪ್ರಶ್ನೆ ಮುಖ್ಯ. ಖಾಸಗಿಯಾದ ಅಭಿವೃದ್ಧಿಯೇ ಸಾಮಾಜಿಕ ಅಭಿವೃದ್ಧಿ ಎಂದು ಹೇಳಲು ಬರುವುದೂ ಇಲ್ಲ.

ಒಂದು ಸಮಾಜವು ಜನರ ಪರವಾಗಿ ಇಲ್ಲದೆ ಹೋದರೆ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಹೇಳುವುದು ಅಸಾಧ್ಯ. ಅನೇಕರು ರಾಜಕಾರಣವೆಂದರೆ ಅದು ಜನರಿಂದ ದೂರವಾದ ಮತ್ತು ಕೆಲವೇ ಜನರಿಗೆ ಅಗತ್ಯವಾದ ಚಟುವಟಿಕೆಯೆಂದು ಭಾವಿಸುತ್ತಾರೆ. ಈಗ ನಡೆಯುತ್ತಿರುವುದು ಇದು.

ನಿಯಮಾನುಸಾರ ಕಾರ್ಮಿಕನಿಗೆ (ವ್ಯವಸಾಯದ ಕೂಲಿಯಾಳು ಒಳಗೊಂಡಂತೆ) ಭೂಮಿ ಅಥವಾ ವ್ಯವಸಾಯದ ಸಲಕರಣೆಗಳ ಒಡೆತನವಿರುವುದಿಲ್ಲ. ಆದರೆ ಕೆಲವರು ತುಂಡು ಜಮೀನುಗಳ ಒಡೆಯರಾಗಿರುತ್ತಾರೆ ಮತ್ತು ಒಂದೆರಡು ವ್ಯವಸಾಯ ಸಲಕರಣೆಗಳನ್ನು ಹೊಂದಿರುತ್ತಾರೆ. ಕಾರ್ಮಿಕರು ತಮ್ಮ ಶ್ರಮ ಶಕ್ತಿಯನ್ನು ಪೂರ್ಣವಾಗಿ ಅಥವಾ ಪ್ರಧಾನವಾಗಿ ಮಾರುವುದರಿಂದಲೇ ಜೀವಿಸುತ್ತಾರೆ. (ಮಾವೋ ಜೆಡಾಂಗ್, ಚೀನಾ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ, 1990, ಪುಟ, 18) ಬೂರ್ಜ್ವಾಕೃತ ಕಾರ್ಮಿಕರ ಈ ಸ್ತರವು, ಅಥವಾ "ಕಾರ್ಮಿಕ ಶ್ರೀಮಂತರು," ತಮ್ಮ ಜೀವನ ವಿಧಾನದಲ್ಲೂ ಸಂಪಾದನೆಯ ಪ್ರಮಾಣದಲ್ಲೂ ತಮ್ಮ ಇಡೀ ಮನೋಧರ್ಮದಲ್ಲೂ ಸಂಪೂರ್ಣವಾಗಿ ಸಂಕುಚಿತಮತಿಗಳಾಗಿರುವ ಇವರು, ದ್ವಿತೀಯ ಇಂಟರ್ ನ್ಯಾಷನಲ್‌ನ ಪ್ರಧಾನ ಸಾಮಾಜಿಕ (ಮಿಲಿಟರಿ ಅಲ್ಲ) ಬೆನ್ನೆಲುಬಾಗಿದ್ದಾರೆ, ಏಕೆಂದರೆ ಇವರೇ ಕಾರ್ಮಿಕ ವರ್ಗ ಚಳವಳಿಯಲ್ಲಿ ಬೂರ್ಜ್ವಾ ನಿಜವಾದ ಏಜೆಂಟರಾಗಿದ್ದಾರೆ, ಬಂಡವಾಳಶಾಹಿ ವರ್ಗದ ಕಾರ್ಮಿಕ ಪ್ರತಿನಿಧಿಗಳಾಗಿದ್ದಾರೆ (Labour lieutenants of the capitalists clas), ಸುಧಾರಣಾವಾದ ಹಾಗೂ ಸ್ವದೇಶ ಮೂಢಾಭಿಮಾನದ ನಿಜವಾದ ವಾಹಕರಾಗಿದ್ದಾರೆ. (ಲೆನಿನ್ ಆಯ್ದ ಕೃತಿಗಳು 1916–1917 ಪುಟ.17) ಇದು ಹಳೆಯ ಮಾತಿರಬಹುದು ಆದರೆ ಸತ್ಯ.

ಬಂಡವಾಳವಾದಿ ವ್ಯವಸ್ಥೆಯಲ್ಲಿ ಕಾರ್ಮಿಕರು ಉತ್ಪನ್ನದ ಹೆಚ್ಚಿನ ಭಾಗವನ್ನು ಪಡೆಯುವುದಿಲ್ಲವೆನ್ನುವುದೂ ಅಷ್ಟೇ ಸತ್ಯ. ಹಾಗೆ ನೋಡುವುದಿದ್ದರೆ ಕಾರ್ಮಿಕರು ಪಡೆಯುವ ವೇತನವು ಉತ್ಪನ್ನದ ಅರ್ಧ ಭಾಗದಷ್ಟೂ ಆಗುವುದಿಲ್ಲ. ಲಾಭದ ನಾಲ್ಕನೆಯ ಒಂದು ಭಾಗವೂ ಕಾರ್ಮಿಕರಿಗೆ ತಲುಪುವುದೂ ಇಲ್ಲ. ರಾಜಕೀಯ ಆರ್ಥಿಕ ತಜ್ಞರ ಪ್ರಕಾರ ಕಾರ್ಮಿಕರ ಒಟ್ಟು ಶ್ರಮವನ್ನು ಲೆಕ್ಕ ಹಾಕದೇ ಬಂಡವಾಳ, ಅದರ ಹೂಡಿಕೆ, ಅದರ ಲಾಭ, ಹಾಗೂ ಅದರ ಒಟ್ಟು ಉತ್ಪಾದನೆಯನ್ನು ಲೆಕ್ಕ ಹಾಕಬೇಕು. ಆದರೆ ಅದು ಆಗುವುದೂ ಇಲ್ಲ. ಬಂಡವಾಳವು ಒಂದು ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸುವಾಗ ಅದರ ಬೆಲೆ ಅದರ ಹಿಂದಿನ ಶಕ್ತಿ ಎರಡೂ ನಮ್ಮ ಗಮನಕ್ಕೇ ಬರಬೇಕು. ಹಣವು ಒಂದು ಸಂದರ್ಭದಲ್ಲಿ ಮನುಷ್ಯರನ್ನು ಸುಖದ ಕಡೆಗೆ ತಳ್ಳಿತು. ಕಾರ್ಮಿಕರ ಶಕ್ತಿಯನ್ನು ನಾವು ಮನಗಾಣುವುದೇ ಇಲ್ಲ. ಮನುಷ್ಯರಾಗಿ ಅವರು ತಮ್ಮ ಜೀವನವನ್ನು ವ್ಯವಸ್ಥೆಗೆ ಬಲಿ ನೀಡುತ್ತಾರೆ. ರಾಜಕೀಯ ಅರ್ಥ ಶಾಸ್ತ್ರಜ್ಞರ ಪ್ರಕಾರ ಕಾರ್ಮಿಕರ ದುಡಿಮೆಗೆ ಕೇವಲ ನಿಗದಿತ ಬೆಲೆಯಿದೆ. ಆದರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ನಾವು ಅನೇಕ ವಿಷಯಗಳನ್ನು ನೋಡುವುದೇ ಇಲ್ಲ. ಬಂಡವಾಳವಾದವು ತನ್ನ ಲಾಭಕ್ಕೆ ತನ್ನ ಕಾರ್ಮಿಕರನ್ನೇ ಬಲಿ ತೆಗೆಯುತ್ತದೆ. ಅಷ್ಟೇ ಅಲ್ಲ ಅದು ಏನು ಮಾಡುತ್ತದೆ ಎಂದರೆ ಕಾರ್ಮಿಕರಿಗಾಗಿ ಕಾನೂನನ್ನು ರೂಪಿಸುತ್ತದೆ. ಕಾರ್ಮಿಕರು ಎಷ್ಟು ಹೊತ್ತು ಕೆಲಸವನ್ನು

ಮಾಡಬೇಕು ಎನ್ನುವುದನ್ನು ನಿರ್ಧರಿಸುವುದು ಬಂಡವಾಳವಾದವೇ. ಈಗಿನ ಖಾಸಗಿ ಕಂಪೆನಿಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದರೊಂದಿಗೆ ಅವರು ಕಾರ್ಮಿಕರನ್ನು ಆಶ್ರಯಿಸುವುದು ಕೂಡಾ ಸ್ವ ಲಾಭಕ್ಕಾಗಿ. ಆದರೆ ಕಾರ್ಮಿಕರು ಬಂಡವಾಳಿಗನನ್ನು ಆಶ್ರಯಿಸುವುದು ತಮ್ಮ ಹಸಿವೆಯನ್ನು ನೀಗಿಸುವುದಕ್ಕಾಗಿ ಮಾತ್ರ. ತಮಾಶೆಯ ವಿಷಯವೆಂದರೆ ಬಂಡವಾಳಿಗರು ತಾವೇ ಕಾರ್ಮಿಕರಿಗಿಂತ ಶ್ರೇಷ್ಠವೆಂದು ಭಾವಿಸಿಕೊಳ್ಳುವುದು. ಹಾಗೂ ಅವರು ತಮ್ಮ ಶಕ್ತಿಯನ್ನು ಪ್ರದರ್ಶಿಸುವುದು ತಮ್ಮ ಸ್ಪರ್ಧೆಗಾಗಿ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಕಾರ್ಮಿಕನು ತನ್ನ ಎಲ್ಲಾ ಶಕ್ತಿಯನ್ನು ಬಳಸಿಕೊಳ್ಳುವುದು ಹಾಗೂ ತನ್ನ ಸಮಯವನ್ನು ಮೀಸಲಿಡುವುದು ಬಂಡವಾಳಿಗರನ್ನು ಉದ್ಧಾರ ಮಾಡುವುದಕ್ಕೆ. ಆದರೆ ಬಂಡವಾಳಿಗರು ತಮ್ಮ ಸಮಯವನ್ನು ಮೀಸಲಿಡುವುದು ಲಾಭ ಮತ್ತು ಮೋಜಿಗಾಗಿ. ವ್ಯಕ್ತಿಗಳಾಗಿ ಅವರಿಗೆ ಉತ್ಪಾದನೆಯ ಜೊತೆಗೆ ನೇರ ಸಂಪರ್ಕವಿಲ್ಲ. ಆದರೆ ಕಾರ್ಮಿಕರಿಗೆ ಅದು ಇದೆ. ಬಂಡವಾಳಿಗರು ಆದಾಯ ಹಾಗೂ ಲಾಭವನ್ನು ಮಾತ್ರವೇ ಲೆಕ್ಕ ಹಾಕುತ್ತಾರೆ. ಹಾಗಾಗಿ ಅವರದು ಕೇವಲ ವರ್ತಮಾನದ ದೃಷ್ಟಿ. ಆದರೆ ಅವರು ಅದನ್ನು ಪಡೆಯುವುದು ಕಾರ್ಮಿಕರ ಶಕ್ತಿಯಿಂದ ಎಂಬುದನ್ನು ಮರೆಯುತ್ತಾರೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು– ಅದು ಕಾರ್ಮಿಕರು ಅಂದರೆ ಕೇವಲ ಬಿಡಿಯಾದ ವ್ಯಕ್ತಿಗಳು ಅಲ್ಲ. ಅವರೆಂದರೆ ಉತ್ಪಾದಕ ಶಕ್ತಿಗಳು ಮಾತ್ರ. ನಾವೀಗ ಮತ್ತೊಂದು ಅಂಶವನ್ನು ಗಮನಿಸಬೇಕು ಕಾರ್ಮಿಕರು ಯಾಕೆ ದುಡಿಯುತ್ತಾರೆ ಎಂದು ಕೇಳಿದರೆ ಅದರ ಸ್ವರೂಪವನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯ. ಅವರು ದುಡಿಯುವುದು ತಮ್ಮ ಹಸಿವೆಯನ್ನು ನೀಗುವುದಕ್ಕಾಗಿ. ಬಂಡವಾಳವೆಂದರೆ ಉತ್ಪಾದನೆಗೆ ಹಾಕುವ ಮೊತ್ತ. ಕೈಗಾರಿಕೆಯ ಪ್ರತಿಯೊಂದು ಶಾಖೆಯಲ್ಲೂ ಬೃಹತ್ ಪ್ರಮಾಣದ ಉದ್ಯಮಗಳಿಲ್ಲ. ಅಷ್ಟೇ ಅಲ್ಲ, ಬಂಡವಾಳವಾದದ ಬೆಳವಣಿಗೆಯ ಅತ್ಯುನ್ನತ ಘಟ್ಟದ ಒಂದು ಅತ್ಯಂತ ಮುಖ್ಯ ಲಕ್ಷಣವೆಂದರೆ, ಉತ್ಪಾದನೆಯ ಸಂಯೋಜನೆ ಎನ್ನುವಂತಹುದು. ಅಂದರೆ, ಕೈಗಾರಿಕೆಯ ವಿವಿಧ ಶಾಖೆಗಳನ್ನು ಒಂದೇ ಉದ್ಯಮದಲ್ಲಿ ಸಂಯೋಜಿಸುವುದು. ಈ ವಿವಿಧ ಶಾಖೆಗಳು ಕಚ್ಚಾ ಪದಾರ್ಥಗಳನ್ನು ಪರಿಷ್ಕರಿಸುವುದರಲ್ಲಿ ಅನುಕ್ರಮಿಕ ಘಟ್ಟಗಳಾಗಿರಬಹುದು (ಉದಾಹರಣೆಗೆ, ಕಬ್ಬಿಣದ ಅದುರನ್ನು ಬೀಡು ಕಬ್ಬಿಣವನ್ನಾಗಿ ಕರಗಿಸುವುದು, ಬೀಡು ಕಬ್ಬಿಣವನ್ನು ಉಕ್ಕನ್ನಾಗಿ ಪರಿವರ್ತಿಸುವುದು, ಅನಂತರ ಬಹುಶಃ ಉಕ್ಕಿನ ಪದಾರ್ಥಗಳನ್ನು ತಯಾರಿಸುವುದು): ಅಥವಾ ಅವು ಪರಸ್ಪರ ಸಹಾಯಕ ಶಾಖೆಗಳಾಗಿರಬಹುದು (ಉದಾಹರಣೆಗೆ, ನಿರುಪಯುಕ್ತ ವಸ್ತುಗಳನ್ನು ಮತ್ತು ಉಪಉತ್ಪನ್ನಗಳನ್ನು ಪರಿಷ್ಕರಿಸುವ ಶಾಖೆಗಳು, ಪ್ಯಾಕಿಂಗ್ ಸಾಮಗ್ರಿಗಳನ್ನು ತಯಾರಿಸುವ ಶಾಖೆಗಳು, ಇತ್ಯಾದಿ). ಆದರೆ ಬಂಡವಾಳವಾದವು ತನ್ನದೇ ಆದ ಚಹರೆಯನ್ನು ರೂಪಿಸುವುದು ಮಾತ್ರವೇ ಅಲ್ಲ, ಅದು ತನಗೆ ಬೇಕಾದ ಮನೋಸ್ಥಿತಿಯನ್ನು ರೂಪಿಸುತ್ತದೆ. ಅದರಲ್ಲಿ ಸಮತೋಲನವಾದ ಸಾಮಾಜಿಕ ಪರಿಸ್ಥಿತಿಯು ಇರುವುದೂ ಇಲ್ಲ. "ಸಂಯೋಜನೆಯು ವ್ಯಾಪಾರದಲ್ಲಾಗುವ ಏರುಪೇರುಗಳನ್ನು ಸಮಮಟ್ಟಕ್ಕೆ ತರುತ್ತದೆ ಮತ್ತು ಅದರಿಂದಾಗಿ ಸಂಯೋಜಿತ ಉದ್ಯಮಗಳಿಗೆ ಹೆಚ್ಚು ಸ್ಥಿರವಾದ ಲಾಭದ ದರವನ್ನು ಖಚಿತಪಡಿಸಿಕೊಡುತ್ತದೆ" ಎಂದು ಹಿಲ್ಫರ್ಡಿಂಗ್ ಬರೆಯುತ್ತಾರೆ. "ಎರಡನೆಯದಾಗಿ, ಸಂಯೋಜನೆಯು ವ್ಯಾಪಾರವನ್ನು ತೊಲಗಿಸುವ ಪರಿಣಾಮವನ್ನು ಹೊಂದಿರುತ್ತದೆ. ಮೂರನೆಯದಾಗಿ, ಅದು ತಾಂತ್ರಿಕ

ಸುಧಾರಣೆಗಳನ್ನು ಸಾಧ್ಯಮಾಡಿಕೊಡುವ, ತತ್ಫಲವಾಗಿ "ಶುದ್ಧ" (ಅಂದರೆ, ಸಂಯೋಜಿತವಲ್ಲದ) ಉದ್ಯಮಗಳು ಪಡೆಯುವ ಲಾಭಕ್ಕೂ ಮೀರಿ ಅಧಿಕಾಧಿಕ ಲಾಭ ಪಡೆಯುವುದನ್ನು ಸಾಧ್ಯಮಾಡಿಕೊಡುವ, ಪರಿಣಾಮವನ್ನು ಹೊಂದಿರುತ್ತದೆ. ನಾಲ್ಕನೆಯದಾಗಿ, ಇದು "ಶುದ್ಧ" ಉದ್ಯಮಗಳಿಗೆ ಹೋಲಿಸಿದಂತೆ ಸಂಯೋಜಿತ ಉದ್ಯಮಗಳ ಸ್ಥಾನವನ್ನು ದೃಢಗೊಳಿಸುತ್ತದೆ, ಗಹನವಾದ ಕುಸಿತಗಳ ಕಾಲಾವಧಿಗಳಲ್ಲಿ, ಕಚ್ಚಾ ಪದಾರ್ಥಗಳ ಬೆಲೆಗಳಲ್ಲಿನ ಇಳಿತಾಯವು ತಯಾರಿತ ವಸ್ತುಗಳ ಬೆಲೆಗಳ ಇಳಿತಾಯದೊಂದಿಗೆ ಸರಿಹೆಜ್ಜೆ ಹಾಕಿಕೊಂಡು ಹೋಗದಿದ್ದಾಗ, ನಡೆಯುವ ಸ್ಪರ್ಧಾತ್ಮಕ ಹೋರಾಟದಲ್ಲಿ ಅದು ಸಂಯೋಜಿತ ಉದ್ಯಮಗಳನ್ನು ದೃಢಪಡಿಸುತ್ತದೆ." (ಲೆನಿನ್ ಆಯ್ದ ಕೃತಿಗಳು 1916–1917 ಪುಟ.21–22) ಮಾರ್ಕ್ಸ್ ಡೇವಿಡ್ ರೆಕಾರ್ಡೋ, ಆಡಂಸ್ಮಿತ್ ಮೊದಲಾದವರ ವಾದವನ್ನು ತಳ್ಳಿ ಹಾಕುವುದಿಲ್ಲ. ಅದರ ಬದಲಿಗೆ ಶ್ರಮ ಮತ್ತು ಅದರ ಬೆಲೆಯನ್ನು ಕಟ್ಟುವುದು ಹೇಗೆ ಎಂಬುದನ್ನು ಹೇಳುತ್ತಾನೆ. ಅದರ ಪ್ರಕಾರ ಶ್ರಮ ಮತ್ತು ಅದರ ಬೆಲೆಯೇ ವಾಸ್ತವವಾಗಿ ಮುಖ್ಯವಾಗಿದೆ. ಶ್ರಮ ಮತ್ತು ಅದರ ಬೆಲೆಯೇ ಬಹಳ ಮುಖ್ಯವಾಗಿದೆ ಕಾರ್ಮಿಕರ ಶ್ರಮದಿಂದ ಬಂಡವಾಳವಾದವು ಹಿಗ್ಗುತ್ತದೆ. ಆದರೆ ಅದುವೇ ನಂತರ ಕಾರ್ಮಿಕರನ್ನು ಜಜ್ಜಿ ಹಾಕುತ್ತದೆ. ಅಂದರೆ ಯಾವಾಗಲೂ ವ್ಯಕ್ತಿ ಮತ್ತು ಅವನ ಶ್ರಮವನ್ನು ಗುರುತಿಸಬೇಕು. ಅದರ ಮೂಲಕವೇ ವಸ್ತುವಿನ ಬೆಲೆಯನ್ನು ಕಟ್ಟಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಕಾರ್ಮಿಕನ ಶ್ರಮ ಶಕ್ತಿಯು ಭೂಮಿಯ ಮಾಲಿಕರಿಗೆ ಮತ್ತು ಬಂಡವಾಳಗಾರರಿಗೆ ಲಾಭ ಮತ್ತು ಸಂಪತ್ತಿನ ಕ್ರೋಢಿಕರಣಕಕ್ಕೆ ಸಹಾಯವನ್ನು ಮಾಡುತ್ತದೆ ಎನ್ನುವುದು ಇಲ್ಲಿ ಉಲ್ಲೇಖನೀಯ. ಮತ್ತೆ ಒಂದು ಪ್ರಶ್ನೆಯ ಕಡೆಗೆ ಗಮನ ಹರಿಸಬಹುದು.

ಜಮೀನು ಎನ್ನುವುದಕ್ಕೆ ಇರುವ ಕಂದಾಯವು ಭಿನ್ನ. ಭೂಮಿಯಲ್ಲಿ ಯಾವುದೇ ಆದಾಯವು ಇಲ್ಲದಿದ್ದರೂ ಕಂದಾಯವನ್ನು ಕಟ್ಟಬೇಕಾಗುತ್ತದೆ. ಅದನ್ನು ಬಿಡಲು ಬರುವುದಿಲ್ಲ. ಭೂಮಿಯು ಅಭಿವೃದ್ಧಿಯಾಗಲೀ ಅಥವಾ ಬಿಡಲಿ ಅದನ್ನು ರೈತರು ಕಟ್ಟಲೇಬೇಕು. ಹಾಗೆಯೇ ಜಮೀನನ್ನು ಮಾರುವಾಗ ಅಥವಾ ಕೊಳ್ಳುವಾಗ ಸುಂಕವನ್ನು ಕಟ್ಟಬೇಕು. ಇದು ವಾಸ್ತವವಾಗಿ ತೊಂದರೆಯೂ ಹೌದು ಎನ್ನುವುದನ್ನು ನಾವು ಮರೆಯಬಾರದು. ವಾಸ್ತವವಾಗಿ ಭೂಕಂದಾಯ ಎನ್ನುವುದಕ್ಕೆ ಸರಿಯಾದ ಮಾನದಂಡವೂ ಇಲ್ಲ. ಒಂದು ಜಮೀನಿಗೆ ಭೂ ಕಂದಾಯವನ್ನು ಕೊಡುವಾಗ ಅದನ್ನು ಸುಂಕವೆಂದು ಕೊಡಲಾಗುತ್ತದೆ ಆದರೆ ಅದು ಅಷ್ಟು ಸರಳವೂ ಅಲ್ಲ. ರೈತನಿಗೆ ಯಾಕಾಗಿ ಭೂಮಿಯ ಕಂದಾಯವನ್ನು ಕಟ್ಟಬೇಕು ಎನ್ನುವುದು ಸರಿಯಾಗಿ ತಿಳಿದಿರುವುದಿಲ್ಲ. ಜಮೀನಿನ ಕಂದಾಯವನ್ನು ನಿಗದಿ ಪಡಿಸುವಾಗ ಅದರ ಒಟ್ಟಾರೆ ಆದಾಯವನ್ನು ಕುರಿತು ಯಾರೂ ಆಲೋಚನೆಯನ್ನು ಮಾಡಲು ಹೋಗುವುದಿಲ್ಲ. ಅದರ ಸ್ವರೂಪವನ್ನು ಚರ್ಚಿಸಿಕೊಂಡು ಯಾರೂ ಕಂದಾಯವನ್ನು ನಿಗದಿ ಮಾಡುವುದೂ ಇಲ್ಲ. ಜಮೀನಿನ ಬೆಳೆಗೂ ಅದಕ್ಕೆ ನಿಗದಿಪಡಿಸುವ ಕಂದಾಯಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲದಂತೆ ಸರಕಾರವು ವರ್ತಿಸುತ್ತದೆ. ಭೂಮಿಯ ಫಲವತ್ತತೆ ಎನ್ನುವುದು ನಿರ್ಧಾರ ಅಂಶವಲ್ಲ ಎಂಬಂತೆ ಸರಕಾರವು ವರ್ತಿಸುವುದರಿಂದ ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಉಂಟಾಗುತ್ತವೆ. ಭೂಮಿಯಲ್ಲಿ ಬೆಳೆಯುವ ಯವುದೇ ಬೆಳೆಗಳು ಸನ್ನಿವೇಶವನ್ನು ಆಧರಿಸಿಕೊಂಡಿರುತ್ತದೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ–ಮೀನು ಹಿಡಿಯುವುದೂ ಮತ್ತು ಅದನ್ನು ಮಾರುವುದು ಒಂದು ಬಗೆಯ ಆಸ್ತಿಯೇ. ಆದರೆ ಅವು ನಿಸರ್ಗದತ್ತವಾದುದು.

ಹಾಗೆಯೇ ಕಲ್ಲಿದ್ದಲಿನ ಗಣಿಯೂ ಕೂಡಾ. ಆದರೆ ವಿಶೇಷವೆಂದರೆ ಅವುಗಳಿಗೆ ನೀಡುವ ಮಹತ್ವವು ಭಿನ್ನ.

ಜಮೀನಿನ ಹಕ್ಕು ಯಾರಿಗೆ ಇದೆಯೋ ಅವರನ್ನು ನಾವು ಜಮೀನುದಾರರು ಎಂದು ಕರೆಯುತ್ತೇವೆ. ಅವರೇ ಭೂ ಮಾಲಿಕರು. ಅವರು ಭೂಮಿಯನ್ನು ತಮಗೆ ಬೇಕಾದಂತೆ ನಿರ್ವಹಿಸುತ್ತಾರೆ. ಭೂಮಿಯನ್ನು ನಿರ್ವಹಿಸುವುದಕ್ಕೆ ಅದರದೇ ಆದ ಕ್ರಮವೂ ಇದೆ. ಜನರಿಗೆ ಬೇಕಾಗಿರುವ ಆಹಾರದ ಉತ್ಪಾದನೆ ಅನ್ನುವುದು ಭೂಮಿಯಿಂದಲೇ ಬಂದಿರುತ್ತದೆ. ಅದನ್ನು ನಿರ್ವಹಿಸುವ ವಿಧಾನವೂ ಭಿನ್ನ. ಬೆಳೆಗಳಲ್ಲಿ ಆಹಾರದ ಉತ್ಪಾದನೆ ಮಾಡುವ ಬೆಳೆಗಳು, ವ್ಯಾವಹಾರಿಕ ಉತ್ಪಾದನೆಗಳು ಎಂದು ಎರಡು ರೀತಿಯಿಂದ ವರ್ಗೀಕರಿಸಲಾಗುತ್ತದೆ. ಈಗಿನ ಆಹಾರ ಉತ್ಪಾದಿಸುವ ಬೆಳೆಗಳು ಒಂದು ಸಮಸ್ಯಾತ್ಮಕವಾದ ಕೃಷಿಯೇ ಆಗಿದೆ. ಆದರೆ ಯಾವುದನ್ನು ನಾವು ಆಹಾರ ಉತ್ಪಾದನೆಯ ಬೆಳೆ ಮತ್ತು ವ್ಯಾವಹಾರಿಕ ಉತ್ಪಾದನೆಯ ಬೆಳೆ ಎಂದು ವರ್ಗೀಕರಿಸುತ್ತೇವೆಯೋ ಅದನ್ನು ಹೇಳುವಾಗ ನಮಗೆ ಇರುವ ಮಾನದಂಡವು ಯಾವುದೇ ಇರಲಿ ಆದರೆ ಯಾವುದೇ ಭೂ ಸಂಬಂಧಿತ ಉತ್ಪಾದನೆಗಳಿಗೆ ಮೆಶಿನರಿಗಳಿಗೆ ಕಟ್ಟುವಂತೆ ಯಾವುದೇ ರೀತಿಯ ಬೆಲೆಯನ್ನು ನಾವು ಕಟ್ಟಲು ಬರುವುದಿಲ್ಲ. ಭೂಮಿಯ ಬೆಲೆಯು ಹೆಚ್ಚಾಗುತ್ತಾ ಹೋಗುತ್ತದೆಯೇ ಹೊರತು ಅದು ಕಡಿಮೆಯಾಗುವ ಕ್ರಮವಿಲ್ಲ. ಭೂಮಿಯ ಬೆಲೆಯು ಹೆಚ್ಚಾಗುತ್ತಾ ಹೋದಂತೆ ಅದಕ್ಕೆ ಸಂಬಂಧಪಟ್ಟ ಇತರ ಸಾಮಾಗ್ರಿಗಳ ಬೆಲೆಯು ಹೆಚ್ಚಾಗುತ್ತಾ ಹೋಗುತ್ತದೆ. ಭೂಮಿಯ ಕೃಷಿಯು ದುಬಾರಿಯಾದರೆ ಉತ್ಪಾದನೆಯ ವೆಚ್ಚವೂ ಹೆಚ್ಚಾಗುತ್ತದೆ ಎನ್ನುವುನ್ನು ನಾವು ಮರೆಯಬಾರದು. ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಕೃಷಿಗೆ ದುಬಾರಿಯಾದ ಬೆಲೆಯನ್ನು ಖರ್ಚು ಮಾಡಿದರೆ ಅದನ್ನು ವಾಪಾಸು ಪಡೆಯವುದು ಕಷ್ಟ. ಉದಾ : ರಸಗೊಬ್ಬರ ಬಳಕೆ. ಜಮೀನು ಅಂದರೆ ಅದು ಒಂದು ಪ್ರತ್ಯೇಕವಾದ ಕೈಗಾರಿಕೆಯೂ ಅಲ್ಲ. ಬೆಳೆ, ಹವಾಮಾನ ಹಾಗು ಆಹಾರದ ಉತ್ಪಾದನೆಗೆ ಇರುವ ಸಂಬಂಧವು ಸಂಕೀರ್ಣ. ಭೂಮಿಯ ಕೃಷಿಯೆನ್ನುವುದು ಒಂದು ರೊಮಾಂಟಿಕ್ ಆದ ಕಲ್ಪನೆಯೂ ಅಲ್ಲ. ಒಬ್ಬ ಜಮೀನುದಾರನಿಗೂ ಒಬ್ಬ ಬಂಡವಾಳಶಾಹಿಗೂ ಅಗಾಧವಾದ ವ್ಯತ್ಯಾಸವಿದೆ. ಜಮೀನು ಹೊಂದುವುದು ಎಂದರೆ ಅದನ್ನು ನಾವು ಭಾವನಾತ್ಮಕ ಎಂದು ಕರೆಯಬೇಕಾಗಿಲ್ಲ. ಒಂದು ಹಂತದಲ್ಲಿ ಇವುಗಳ ನಡುವಣ ಸಂಬಂಧವನ್ನು ಹೋಲಿಕೆಯನ್ನು ಮಾಡುವುದೇ ಕಷ್ಟ. ಭೂ ಮಾಲಿಕನನ್ನು ನಾವು ಬಂಡವಾಳಶಾಹಿಯ ಹಿನ್ನೆಲೆಯಲ್ಲಿ ಗುರುತಿಸುವುದೂ ಕಷ್ಟ ಆದರೆ ಭೂ ಮಾಲಿಕನೂ ಕೂಡಾ ವ್ಯಕ್ತಿವಾದಿಯೂ ಆಗಿರುತ್ತಾನೆ.ಒಮ್ಮೊಮ್ಮೆ ವ್ಯಕ್ತಿತ್ವಕ್ಕೂ ಭೂಮಿಗೂ ಸಂಬಂಧವಿದೆ. ಭೂಮಿಯನ್ನು ಹೊಂದಲು ನಾವು ನಗರಾಭಿವೃದ್ಧಿಯಿಂದ ಅನುಮತಿಯನ್ನು ಪಡೆಯಬೇಕಾಗಿಲ್ಲ. ಜಮೀನನನ್ನು ನಾವು ಲೀಸಿಗೆ ಮಾಡಿಕೊಳ್ಳಬಹುದು. ಬೆಳೆಯನ್ನು ನಾವು ಮಾರುಕಟ್ಟೆಯ ವಸ್ತುವಾಗಿಯೂ ಪರಿವರ್ತಿಸಬಹುದು. ಖಾಸಗಿ ಆಸ್ತಿಯೆನ್ನುವುದು ಕೇವಲ ರಾಜಕೀಯವಾದ ನಿಲುವು ಕೂಡಾ ಅಲ್ಲ. ಜಮೀನಿನ ಯಜಮಾನ ಎಂದರೆ ಅವನು ಆಯಾ ಜಮೀನಿನ ರಾಜನೂ ಹೌದು. ಹಾಗೆಂದು ಅವನನ್ನು ನಾವು ವೈಭವೀಕರಿಸಬೇಕಾಗಿಲ್ಲ. ಜಮೀನಿಗೆ ಸಾಮಾನ್ಯವಾಗಿ ಒಂದು ದರವೂ ಇರುತ್ತದೆ. ನಾವು ರಾಜಕೀಯವಾದ ನಿಲುವನ್ನು ಬೇರೆ ವಿಷಯಗಳಲ್ಲಿ ವ್ಯಕ್ತ ಪಡಿಸಬಹುದು, ಆದರೆ ಜಮೀನಿನ

ವಿಷಯಕ್ಕೆ ಬಂದಾಗ ಮಾತ್ರ ಆ ರೀತಿಯ ನಿಲುವನ್ನು ತಳೆಯಲು ಸಾಧ್ಯವಿಲ್ಲ.ಇದಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಉದಾಹರಣೆಯನ್ನು ಕೊಡಬಹುದು–ಹಣಕ್ಕೆ ಯಜಮಾನನಿಲ್ಲ. ಆದರೆ ಜಮೀನಿಗೆ ಯಜಮಾನನಿದ್ದಾನೆ. ಜಮೀನು ಎನ್ನುವುದು ಏಕಸ್ವಾಮ್ಯಕ್ಕೆ ಸಂಬಂಧಪಟ್ಟದ್ದು. ವಸ್ತುವನ್ನು ಅನೇಕ ರೀತಿಯಲ್ಲಿ ಉತ್ಪಾದಿಸಬಹುದು, ಆದರೆ ಜಮೀನನ್ನು ಹಲವು ರೀತಿಯಲ್ಲಿ ಉತ್ಪಾದಿಸವುದು ಅಸಾಧ್ಯ. ಅದು ದ್ವಿಗುಣ ಮೌಲ್ಯವನ್ನು ಹೊಂದುವುದಿಲ್ಲ.

ರಾಜಕೀಯ ಅರ್ಥಶಾಸ್ತ್ರದ ಹಿನ್ನೆಲೆಯಿಂದ ನಾವು ಭಾಷೆ ಮತ್ತು ಅದರ ಕಾನೂನನ್ನು ಒಪ್ಪಿಕೊಂಡಿದ್ದೇವೆ. ಆದರೆ ರಾಜಕೀಯ ಅರ್ಥಶಾಸ್ತ್ರವು ಪ್ರಾರಂಭವಾಗುವುದೇ ಒಂದು ರೀತಿಯಿಂದ ಖಾಸಗಿ ಆಸ್ತಿಯ ಪರಿಕಲ್ಪನೆಯ ಹಿನ್ನೆಲೆಯಿಂದ. ಜಮೀನಿನ ಯಜಮಾನ ಆಗುವುದಕ್ಕೂ ಜಮೀನು ಇಲ್ಲದಿರುವುದಕ್ಕೂ ಅನೇಕ ವ್ಯತ್ಯಾಸವಿದೆ. ಆದರೆ ರಾಜಕೀಯ ಅರ್ಥಶಾಸ್ತ್ರವು ಹೇಗೆ ಸೋಲುತ್ತದೆ ಎನ್ನುವುದಕ್ಕೆ ಕೆಲವು ದೃಷ್ಟಾಂತವೂ ಇದೆ. ಅದು ಸ್ಪರ್ಧೆ ಮತ್ತು ಅದರ ಯಜಮಾನಿಕೆಯನ್ನು ಸರಿಯಾದ ರೀತಿಯಲ್ಲಿ ಚರ್ಚಿಸುವುದೂ ಇಲ್ಲ. ರಾಜಕೀಯ ಅರ್ಥಶಾಸ್ತ್ರದ ಪ್ರಕಾರ ಕೈಗಾರಿಕೆ ಮತ್ತು ಅದರ ಕೆಲಸಗಾರರು ಹಾಗೂ ರೈತರು ಮತ್ತು ಕಾರ್ಮಿಕರು ಹೀಗೆ ಬೇರೆ ಬೇರೆ ವಿಭಜನೆಗಳಿವೆ. ಮತ್ತು ಅದನ್ನು ಅದು ಉದ್ದೇಶ ಪೂರ್ವಕವಾಗಿಯೇ ಮಾಡುತ್ತದೆ. ಹಣ ಮತ್ತು ಅದರ ಚಲಾವಣೆಯ ಕುರಿತು ಮಾತಾಡುವಾಗಲೂ ಇದೇ ಸಮಸ್ಯೆಯು ಬರುತ್ತದೆ. 'ಚಿನ್ನ ಮತ್ತು ಬೆಳ್ಳಿಯು ಮೊದಲು ಮೌಲ್ಯವು ನಿಗದಿಯಾಯಿತು.ಅನಂತರ ಹಣವು ಚಲಾವಣೆಗೆ ಬಂತು. ಇವುಗಳಿಗೆ ಮೌಲ್ಯವು ನಿಗದಿಯಾದದನ್ನು ಮೌಲ್ಯಗಳ ನಿರ್ಧಾರ ಮತ್ತು ಅದು ಕಟ್ಟಲಾಗಿರುವ ಪರಿಕಲ್ಪನೆ ಎಂದು ಮಾರ್ಕ್ಸವಾದವು ಹೇಳುತ್ತದೆ. ಇದನ್ನು ಮಾರ್ಕ್ಸ ತನ್ನ ಪವರ್ಟಿ ಆಫ್ ಫಿಲಾಸಫಿಯಲ್ಲಿ ಚರ್ಚಿಸುತ್ತಾನೆ (ಪವರ್ಟಿ ಆಫ್ ಫಿಲಾಸಫಿ ಪುಟ–72) ಹಾಗೆ ನೋಡುವುದಿದ್ದರೆ ಹಣ ಎನ್ನುವುದು ನಿಗದಿತ ಮೌಲ್ಯ ಮಾತ್ರ. ಹಣಕ್ಕಿರುವುದು ಕಮರ್ಶಿಯಲ್ ವ್ಯಾಲ್ಯು ಮಾತ್ರ ಎನ್ನುವುದನ್ನು ನಾವು ಮನಗಾಣಬೇಕು. ಇದು ಒಂದು ರೀತಿಯಿಂದ ದುಡಿಮೆ ಮತ್ತು ಅದರ ಮೌಲ್ಯವನ್ನು ಇದರ ಮೂಲಕ ಕಂಡುಕೊಳ್ಳುವಂತೆ ಆಯಿತು.

ಆದಿ ದೈವಿಕ ಸಿದ್ಧಾಂತವು ಕೇಡನ್ನು ದೆವ್ವ ಎಂದು ಪರಿಗಣಿಸುತ್ತದೆ. ಹಾಗೆ ನೋಡುವುದಿದ್ದರೆ ಬಡತನ ಮತ್ತು ಹಸಿವೆ ಎರಡೂ ಮನುಷ್ಯ ತನ್ನ ಸ್ವಂತಿಕೆಯನ್ನು ಮರೆಯುವ ಹಾಗೆ ಮಾಡುತ್ತದೆ. ಬಡತನ ಮತ್ತು ಸಾಲವನ್ನು ನಾವು ಈಗಲೂ ಒಂದು ಶಾಪವೆಂದು ಭಾವಿಸಿದ್ದೇವೆ. ಇದರ ಅನುಕೂಲವನ್ನು ಬಂಡವಾಳವಾದವು ಬಳಸಿಕೊಳ್ಳುತ್ತದೆ. ದುಡಿಯುವ ವ್ಯಕ್ತಿಯು ತನ್ನ ಶ್ರಮ ಮತ್ತು ಅನುಭವವನ್ನು ಪರಕೀಯಗೊಳಿಸಲಾರ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು–ಜಮೀನ್ದಾರನಿಗೆ ಕೆಲಸವನ್ನು ಮಾಡಲು ವ್ಯಕ್ತಿಗಳು ಬೇಕು. ಶ್ರಮದ ಬೆಲೆಯನ್ನು ನಿಗದಿ ಪಡಿಸುವುದು ಅವನೇ. ಆಳಿಗೆ ಎಷ್ಟು ಸಂಬಳವನ್ನು ಕೊಡಬೇಕು ಎಂದು ಹೇಳುವುದು ಬೇರೆ ಯಾರು ಅಲ್ಲ–ಸ್ವತಃ ಅವನೇ. ಆಳಿಗೆ ಕೆಲಸವೆನ್ನುವುದು ಬಾಹ್ಯದ ಚಟುವಟಿಕೆ ಮಾತ್ರವೇ. ಆಳು ತನಗೆ ಬೇಕಾದುದನ್ನು ಬೇಕಾದ ರೀತಿಯಲ್ಲಿ ಸೃಜಿಸಲಾರ. ಜೀವನ ನಿರ್ವಹಣೆಯನ್ನು ಮನುಷ್ಯನು ನಿಸರ್ಗದಿಂದ ಕಲಿತಿದ್ದಾನೆ. ಹಾಗೂ ಅದಕ್ಕೆ ಅವನು ತನಗೆ ಬೇಕಾದುದನ್ನು ಮರು ಸೃಷ್ಟಿ ಮಾಡುತ್ತಾನೆ. ಇದಕ್ಕೆ ಅವನು ತನ್ನ ದೇಹವನ್ನು ದುಡಿಸಿಕೊಳ್ಳುತ್ತಾನೆ. ಆದರೆ

ಆಳು ತನಗೆ ಬೇಕಾದುದನ್ನು ತಾನೇ ಅನುಭವಿಸಿಕೊಳ್ಳುವುದು ಅಸಾಧ್ಯ. ದೇಹದ ಶ್ರಮವು ಅವನ ಅಗತ್ಯಗಳಲ್ಲಿ ಒಂದು. ದುಡಿಮೆ ಮತ್ತು ಅದರ ಶ್ರಮ ಹಾಗೂ ಅದರ ಪ್ರತಿಫಲವು ಯಾವಾಗಲೂ ಭಿನ್ನವಾಗಿರುತ್ತದೆ. ಮೊದಲು ಕೆಲಸದ ವರ್ಗೀಕರಣದ ಪ್ರಶ್ನೆಯು ಇದ್ದಿಲ್ಲ. ಅದು ಅನಂತರ ಬಂತು. ವಿನಿಮಯ ಪದ್ಧತಿಯೇ ಅದಕ್ಕೆ ಕಾರಣವಾಗಿದೆ. ಮತ್ತೊಂದು ಅಂಶವೆಂದರೆ ಕೃಷಿಕರ ಉದ್ದೇಶವೇ ಬೇರೆ. ಅವರು ತಮ್ಮ ದೇಹವನ್ನು ಅದಕ್ಕೆ ಬಳುವಳಿಯಾಗಿಯೇ ನೀಡುತ್ತಾರೆ. ಅದರಿಂದ ಅವರಿಗೆ ಉತ್ಪಾದನೆಯು ಸಾಧ್ಯವಾಗುತ್ತದೆ, ಹಾಗೂ ಅದನ್ನು ಮಾಡುವಾಗ ಸಮಾಜಸೇವೆ ಎನ್ನುವ ದೊಡ್ಡ ಬ್ಯಾನರ್ ಹಾಕಿಕೊಳ್ಳುವುದೂ ಇಲ್ಲ. ಹಾಗೂ ಅವರ ಶ್ರಮಕ್ಕೆ ಯಾರೂ ಜ್ಞಾನಪೀಠವನ್ನು ಕೊಡುವುದೂ ಇಲ್ಲ. ಭೂಮಾಲಿಕ ವರ್ಗವನ್ನು ಹೀಗೆ ಹೇಳಬಹುದು– "ಭೂಮಿ ಮೇಲೆ ಒಡತನವಿದ್ದು, ಸ್ವತಹ ಶ್ರಮ ವ್ಯಯ ಮಾಡದೆ, ಅಥವಾ ಬಹಳ ಕಡಿಮೆ ಶ್ರಮಹಾಕುತ್ತಾ, ಪ್ರಧಾನವಾಗಿ ರೈತರನ್ನು ಶೋಷಿಸಿ ಬದುಕುವವನು ಒಬ್ಬ ಭೂಮಾಲಿಕ. ಗೇಣಿ ಸಂಗ್ರಹ ಅವನ ಶೋಷಣೆಯ ಪ್ರಧಾನ ವಿಧಾನ. ಗೇಣಿದಾರರ ಸಮಸ್ಯೆಯೂ ಸಂಕೀರ್ಣವಾಗಿದೆ. ಅನೇಕ ಗೇಣಿದಾರರು ಖರ್ಚು ಕಳೆದು ಪಡೆಯುವ ಮೊತ್ತವು ಬಹಳ ಕಡಿಮೆ. ದುಡಿಮೆ + ರಾಸಾಯನಿಕ ಗೊಬ್ಬರ + ಬೆಳೆಗಳ ಔಷಧಿ ಸಿಂಪರಣೆ + ಕಾಲ + ಇತರ ವೆಚ್ಚ ಒಟ್ಟು ಸೇರಿಸಿದರೆ ಗೇಣಿದಾರನು ಪಾನು ಕೊಡಬೇಕಾದ ಗೇಣಿಯೂ ಸೇರಿದಂತೆ ತನ್ನ ಖರ್ಚಿಗೆ ಉಳಿಯುವ ಮೊತ್ತ ಅತ್ಯಲ್ಪ. ಜೊತೆಗೆ ಅವನು ಲೇವಾದೇವಿ ಮಾಡಬಹುದು ಕೂಲಿಗೆ ಆಳು ತೆಗೆದುಕೊಳ್ಳಬಹುದು, ರೈತರು ಮಾಡುವ ಸಾಲವನ್ನು ಇಲ್ಲಿಗೆ ಗಮನಕ್ಕೆ ತಂದುಕೊಳ್ಳಬೇಕು. ರಸಗೊಬ್ಬರವನ್ನು ಅವರು ಸಾಲದ ಮೂಲಕ ಪಡೆಯುತ್ತಾರೆ. ಒಂದು ಎಕ್ರೇ ಜೋಳಕ್ಕೆ ಒಂದು ಸರ್ತಿಗೆ 20.000 ದಂತೆ ಕಡಿಮೆಯೆಂದರೂ ಎರಡು ಸರ್ತಿ ಗೊಬ್ಬರ ಕೊಟ್ಟರೆ ಅಲ್ಲಿಗೆ 40.000/– ಖರ್ಚು. ಇದಕ್ಕೆ 3% ನಂತೆ ಬಡ್ಡಿ ಕೊಟ್ಟರೆ ತಗಲುವ ವೆಚ್ಚವನ್ನು ಯಾರಾದರೂ ಲೆಕ್ಕ ಹಾಕಬಹುದು. ಅಥವಾ ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ತೊಡಗಬಹುದು. ಆದರೆ ರೈತನಿಂದ ಗೇಣಿ ವಸೂಲಿಯೇ ಅವನ ಶೋಷಣೆಯ ಪ್ರಧಾನ ವಿಧಾನ. ಹಳ್ಳಿಯ ಸಾರ್ವಜನಿಕ ಜಮೀನುಗಳ ನಿಯಂತ್ರಣ ಮತ್ತು ಶಾಲಾ ಜಮೀನಿಂದ ಗುತ್ತಿಗೆ ಧಾನ್ಯ ಸಂಗ್ರಹವನ್ನು ಗೇಣಿ ಸಂಗ್ರಹ ಶೋಷಣಾ ವಿಧಾನವೆಂದು ಪರಿಗಣಿಸಲಾಗುವುದು. ಗುತ್ತಿಗೆಯೇ ವಾಸ್ತವವಾಗಿ ಕಷ್ಟ. ಭೂಮಿ ಕಳೆದುಕೊಂಡು ದಿವಾಳಿ ಎದ್ದ ಭೂಮಾಲಿಕನು ಸ್ವತಹ ಶ್ರಮಿಸದೆ ಬೇರೆ ಜನರನ್ನು ವಂಚಿಸಿ ಅಥವಾ ಅವರಿಂದ ಕದ್ದು; ಇಲ್ಲವೇ, ಸಂಬಂಧಿಕರ ಸ್ನೇಹಿತನ ಸಹಾಯದಿಂದ ಬದುಕುತ್ತಾ ಸಾಮಾನ್ಯ ಮಧ್ಯಮ ರೈತನಿಗಿಂತಲೂ ಉತ್ತಮವಾಗಿ ಬದುಕಿದರೆ ಇಂತಹ ವ್ಯಕ್ತಿಯನ್ನೂ ಭೂಮಾಲಿಕನೆಂದೇ ಪರಿಗಣಿಸಬೇಕು. ಪಾಳೆಯಗಾರರು, ಗ್ರಾಮಾಧಿಕಾರಿಗಳು, ಸ್ಥಳೀಯ ದಗಾಕೋರರು, ಹಾಗೂ ದುಷ್ಟ ರೈತರು ಭೂಮಾಲಿಕ ವರ್ಗದ ಕ್ರೂರ ಪ್ರತಿನಿಧಿಗಳು. ಸ್ಥಳೀಯ ಸಣ್ಣ ದಗಾಕೋರರು ಮತ್ತು ದುಷ್ಟ ರೈತರನ್ನು ಸಾಮಾನ್ಯವಾಗಿ ಶ್ರೀಮಂತ ರೈತರಲ್ಲಿ ಕಾಣಬಹುದು. ಗೇಣಿ ವಸೂಲಿ ಕೆಲಸದಲ್ಲಿ ಮತ್ತು ಭೂಮಾಲಿಕನ ಆಸ್ತಿ ನಿರ್ವಹಣೆಯಲ್ಲಿ ಸಹಕರಿಸುತ್ತಾ, ಈ ರೀತಿ ರೈತರನ್ನು ಪರೋಕ್ಷವಾಗಿ ಶೋಷಿಸುತ್ತಾ, ಇದರಿಂದಲೇ ತನ್ನ ಒಟ್ಟು ವರಮಾನದ ಬಹುಭಾಗವನ್ನು ಪಡೆದು ಒಬ್ಬ ಮಧ್ಯಮ ರೈತನ ಜೀವನ ಮಟ್ಟದಲ್ಲಿ ಬದುಕುವವನನ್ನೂ ಭೂಮಾಲಿಕರ ಗುಂಪಿಗೆ ಸೇರಿಸಬಹುದು. ಬಡ್ಡಿದಾರರು, ಅಂದರೆ, ತಮ್ಮ ಜೀವನೋಪಾಯಕ್ಕೆ ಪ್ರಧಾನವಾಗಿ ಲೇವಾದೇವಿಯನ್ನು ಆಧರಿಸಿ, ಸಾಮಾನ್ಯ ಮಧ್ಯಮ

ರೈತರಿಗಿಂತಲೂ ಉತ್ತಮ ಜೀವನ ಮಟ್ಟವನ್ನು ಅನುಭವಿಸುತ್ತಿರುವವರನ್ನೂ ಭೂಮಾಲಿಕರ ಗುಂಪಿಗೆ ಸೇರಿಸಲಾಗುವುದು." (ಮಾವೋ ಜೆಡಾಂಗ್, ಚೀನಾ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ, 1990, ಪುಟ, 16) ಸಾಮಾನ್ಯ ರೈತರು ಮತ್ತು ಅವರ ಕಷ್ಟಗಳು ಭಿನ್ನ ಬಗೆಯವು. ದುಡಿದದ್ದು ಸಾಲ ಮತ್ತು ಬಡ್ಡಿಗೆ ವಜಾ ಆಗುತ್ತದೆ. ಮೂರು ತಿಂಗಳು ಅಥವಾ ಆರು ತಿಂಗಳ ದುಡಿಮೆ ತಕ್ಕ ಮೌಲ್ಯ ದೊರೆಯುವುದಿಲ್ಲ. ಈ ಅರ್ಥದಲ್ಲಿ ಕೈಗಾರಿಕೆಯ ಕಾರ್ಮಿಕರು ಮತ್ತು ಸಣ್ಣರೈತರ ನಡುವೆ ವ್ಯತ್ಯಾಸವಿದೆ. "ನಿಯಮಾನುಸಾರ ಶ್ರೀಮಂತ ರೈತ ಭೂ ಒಡೆಯನಾಗಿರುತ್ತಾನೆ. ಆದರೆ ಕೆಲವು ಶ್ರೀಮಂತ ರೈತರಿಗೆ ಜಮೀನಿನ ಒಂದು ಭಾಗಮಾತ್ರಕ್ಕೆ ಒಡೆತನವಿರುತ್ತದೆ. ಉಳಿದ ಭಾಗವನ್ನು ಗೇಣಿಗೆ ಕೊಟ್ಟಿರುತ್ತಾರೆ. ಉಳಿದವರು ಸ್ವಂತ ಒಡೆತನವೇ ಇಲ್ಲದೆ ಎಲ್ಲಾ ಭೂಮಿಯನ್ನೂ ಗೇಣಿಗೆ ಕೊಟ್ಟಿರುತ್ತಾರೆ. ಒಬ್ಬ ಶ್ರೀಮಂತ ರೈತ ಉತ್ತಮ ಉತ್ಪಾದನಾ ಸಲಕರಣೆಗಳನ್ನು ಮತ್ತು ದ್ರವ್ಯ ಬಂಡವಾಳವನ್ನು (liquid capital) ಹೊಂದಿರುತ್ತಾನೆ. ತಾನು ಶ್ರಮಿಸಿದರೂ ಸಹ ತನ್ನ ವರಮಾನದ ಬಹುಭಾಗಕ್ಕಾಗಿ ಶೋಷಿಸುತ್ತಾನೆ. ಅವನ ಶೋಷಣೆಯ ಪ್ರಧಾನ ವಿಧಾನವೇನೆಂದರೆ ಕೂಲಿ ಮಾಡಿಸುವುದು (ದೀರ್ಘಾವಧಿ ಕೂಲಿಗಾರರಿಂದ) ಜೊತೆಗೆ ತನ್ನ ಭೂಮಿಯ ಒಂದು ಭಾಗವನನು ಗೇಣಿದಾರರಿಗೆ ಕೊಟ್ಟು ಅವರನ್ನೂ ಶೋಷಿಸಬಹುದು, ಅಥವಾ ಬಡ್ಡಿ ವ್ಯವಹಾರದಲ್ಲಿ, ಇಲ್ಲವೆ ಕೈಗಾರಿಕೆ ಹಾಗೂ ವ್ಯಾಪಾರದಲ್ಲಿ ತೊಡಗಬಹುದು. ಬಹುಪಾಲು ಶ್ರೀಮಂತ ರೈತರು ಊರಿನ ಸಾರ್ವಜನಿಕ ಜಮೀನುಗಳನ್ನು ನಿಯಂತ್ರಿಸುತ್ತಾರೆ. ಹೆಚ್ಚು ಉತ್ತಮ ಭೂಮಿಯ ಒಡೆತನವಿದ್ದು, ಕೂಲಿಗಾರರಿಗೆ ಕೊಡದೆ ಆದರ ಸ್ವಲ್ಪ ಭಾಗವನ್ನು ಸ್ವತಹ ವ್ಯವಸಾಯ ಮಾಡುತ್ತಾ, ಆದರೆ ಅದೇ ವೇಳೆಯಲ್ಲಿ ಗೇಣಿ ಮೂಲಕ ರೈತರನ್ನು ಶೋಷಿಸಿದಾಗ, ಅಥವಾ ಬಡ್ಡಿ ವ್ಯವಹಾರಗಳಿಂದ ಶೋಷಿಸಿದ್ದಲ್ಲಿ, ಇಂತಹ ವ್ಯಕ್ತಿಯನ್ನು ಶ್ರೀಮಂತ ರೈತನೆಂದು ಕರೆಯಬಹುದು. ಶ್ರೀಮಂತ ರೈತರು ಸಾಮಾನ್ಯವಾಗಿ ಶೋಷಣೆ ಮಾಡುತ್ತಾರೆ ಮತ್ತು ತಮ್ಮ ವರಮಾನದ ಬಹುಭಾಗವನ್ನು ಸ್ವಂತ ಶ್ರಮದಿಂದಲ್ಲದೆ, ರೈತ–ಕೂಲಿಗಳನ್ನು ಶೋಷಿಸುವುದರಿಂದ ಪಡೆಯುತ್ತಾರೆ."(ಮಾವೋ ಜೆಡಾಂಗ್, ಚೀನಾ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ, 1990, ಪುಟ, 17) ಮಧ್ಯಮ ರೈತವರ್ಗವು ಭಿನ್ನವಾಗಿದೆ. ಬಹುಪಾಲು ಮಧ್ಯಮ ರೈತರಿಗೆ ಭೂ ಒಡೆತನವಿರುತ್ತದೆ. ಕೆಲವರಿಗೆ ತಮ್ಮ ಒಟ್ಟು ಜಮೀನಿನ ಒಂದು ಭಾಗಕ್ಕೆ ಮಾತ್ರ ಒಡೆತನವಿದ್ದು ಉಳಿದದ್ದನ್ನು ಗೇಣಿಗೆ ತೆಗೆದುಕೊಂಡಿರುತ್ತಾರೆ. ಮಧ್ಯಮ ರೈತ ತನ್ನ ವರಮಾನವನ್ನು ಸಂಪೂರ್ಣವಾಗಿ ಅಥವಾ ಪ್ರಧಾನವಾಗಿ ತನ್ನದೆಯಾದ ಶ್ರಮದಿಂದ ಪಡೆಯುತ್ತಾನೆ. ನಿಯಮಾನುಸಾರ ಈತ ಉಳಿದವರನ್ನು ಶೋಷಿಸುವುದಿಲ್ಲ. ಬದಲಿಗೆ ಹೆಚ್ಚು ಸಂದರ್ಭಗಳಲ್ಲಿ ಈತನು ಗೇಣಿದಾರನಾಗಿ ಅಥವಾ ಬಡ್ಡಿ ಕಟ್ಟುವುದರಿಂದ ಊರಿನ ಭೂಮಾಲಿಕ ಮತ್ತು ಶ್ರೀಮಂತ ರೈತರಿಂದ ಶೋಷಿಸಲ್ಪಡುತ್ತಾನೆ. ಆದರೆ ಸಾಮಾನ್ಯವಾಗಿ ಅವನು ತನ್ನ ಶ್ರಮಶಕ್ತಿಯನ್ನು ಮಾರುವುದಿಲ್ಲ. ಕೆಲವು ಮಧ್ಯಮ ರೈತರು (ಸುಧಾರಿತ ಮಧ್ಯಮ ರೈತರು) ಸಣ್ಣ ಪ್ರಮಾಣಕ್ಕೆ ಶೋಷಣೆ ನಡೆಸುತ್ತಾರೆ. ಆದರಿದು ಅವರ ಆದಾಯದ ಸಾಮಾನ್ಯ ಅಥವಾ ಪ್ರಮುಖ ಭಾಗವಲ್ಲ. (ಮಾವೋ ಜೆಡಾಂಗ್, ಚೀನಾ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ, 1990, ಪುಟ, 18) ಇದು ಭೂಮಿಯ ಪ್ರಶ್ನೆ.

ಬಡರೈತ ವರ್ಗದ ಪರಿಕಲ್ಪನೆಯು ಬೇರೆಯಾಗಿದೆ. "ಬಡ ರೈತರಲ್ಲಿ ಕೆಲವರು ತಮ್ಮ ಭೂಮಿಗೆ ಒಡೆಯರಾಗಿರುತ್ತಾರೆ. ಅವರು ಕೆಲವು ವಕ್ರ ವ್ಯವಸಾಯ ಸಲಕರಣೆಗಳನ್ನು

ಹೊಂದಿರುತ್ತಾರೆ. ಇನ್ನುಳಿದವರು ಸ್ವಲ್ಪ ಭೂಮಿಯೂ ಇಲ್ಲದೆ ಗೇಣಿದಾರರಾಗಿರುತ್ತಾರೆ. ಅವರು ಸದಾ ಶೋಷಣೆಗೊಳಗಾಗಿದ್ದು ಗೇಣಿ ಮತ್ತು ಬಡ್ಡಿ ಕಟ್ಟುತ್ತಾರೆ. ಅವರು ಸ್ವಲ್ಪ ಮಟ್ಟಕ್ಕೆ ಕೂಲಿಯೂ ಮಾಡುತ್ತಾರೆ. ಒಬ್ಬ ಮಧ್ಯಮ ರೈತ ಸಾಮಾನ್ಯವಾಗಿ ತನ್ನ ಶ್ರಮಶಕ್ತಿಯನ್ನು ಮಾರುವುದಿಲ್ಲ, ಆದರೆ ಬಡ ರೈತನಿಗೆ ತನ್ನ ಶ್ರಮಶಕ್ತಿಯ ಒಂದು ಪಾಲನ್ನು ಮಾರಲೇಬೇಕು. ಮಧ್ಯಮ ಹಾಗೂ ಬಡ ರೈತರನ್ನು ಬೇರ್ಪಡಿಸುವಲ್ಲಿ ಇದು ಪ್ರಧಾನಮಾನದಂಡ. (ಮಾವೋ ಜೆಡಾಂಗ್, ಚೀನಾ ಸಮಾಜದಲ್ಲಿ ವರ್ಗಗಳ ವಿಶ್ಲೇಷಣೆ, 1990, ಪುಟ, 18)

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಹಿಂದೆ ವಸ್ತುಗಳನ್ನು ವಿನಿಮಯ ಮಾಡುತ್ತಿದ್ದರು. ಅದರ ಮೂಲಕವೇ ಸಾಮಾಜಿಕ ಸಂಬಂಧವೂ ಏರ್ಪಾಡು ಆಗುತ್ತಿತ್ತು. ಸರಕುಗಳ ವಿನಿಮಯ ಮತ್ತು ಮಾರುಕಟ್ಟೆಯಲ್ಲಿ ಅದನ್ನು ಮಾರುವ ಸಂಗತಿಯು ಬಹಳ ಮುಖ್ಯವೇ ಆಗುತ್ತಿತ್ತು. ಆದರೆ ಅದರಲ್ಲಿ ಕಾರ್ಮಿಕರನ್ನೂ ಒಂದು ಬಂಡವಾಳವೆಂದು ಹೇಳುವುದಿಲ್ಲ. ವಾಸ್ತವವಾಗಿ ಭಾರತದಲ್ಲಿ ಅಂತರರಾಷ್ಟ್ರೀಯ ಬೃಹತ್ ಉದ್ಯಮಗಳು ಜನರನ್ನು ಮತ್ತೆ ಬೀದಿಗೆ ತಳ್ಳುವಷ್ಟು ಪ್ರಬಲವಾಗಿದೆ. ಹಣಕಾಸು ಬಂಡವಾಳವು ತಾನು ಅಧೀನಗೊಳಿಸಿಕೊಳ್ಳುವ ದೇಶಗಳ ಹಾಗೂ ಜನತೆಗಳ ರಾಜಕೀಯ ಸ್ವಾತಂತ್ರ್ಯವನ್ನು ನಷ್ಟಗೊಳಿಸುವ ಅಂತಹ ಅಧೀನತೆಯನ್ನು ಅತ್ಯಂತ ಹೆಚ್ಚು "ಅನುಕೂಲ" ವಾದುದನ್ನಾಗಿ ಕಂಡುಕೊಳ್ಳುತ್ತದೆ ಮತ್ತು ಅದರಿಂದ ಅತ್ಯಂತ ಹೆಚ್ಚು ಲಾಭ ಪಡೆದುಕೊಳ್ಳುತ್ತದೆ. ಈ ಸಂದರ್ಭದಲ್ಲಿ, ಅರೆವಸಾಹತು ದೇಶಗಳು "ಮಧ್ಯಂತರ ಕಾಲ ಘಟ್ಟ"ಕ್ಕೆ ಮಾದರಿ ಉದಾಹರಣೆಗಳಾಗಿವೆ. ಜಗತ್ತಿನ ಉಳಿದ ಭಾಗವು ಆಗಲೇ ವಿಭಜಿತವಾಗಿರುವಾಗ, ಈ ಅರೆ ಪರಾಧೀನ ದೇಶಗಳಿಗಾಗಿ ಹೋರಾಟವು ಹಣಕಾಸು ಬಂಡವಾಳದ ಯುಗದಲ್ಲಿ ವಿಶೇಷವಾಗಿ ಉಗ್ರವಾಗುವುದು ಸಹಜವೇ ಆಗಿದೆ. (ಲೆನಿನ್ ಪುಟ. 106) ಬಂಡವಾಳವಾದದ ಇತ್ತೀಚೆಗಿನ ಘಟ್ಟದ ಪ್ರಧಾನ ಲಕ್ಷಣವೆಂದರೆ, ಭಾರಿ ಬಂಡವಾಳಗಾರರ ಏಕಸ್ವಾಮ್ಯ ಸಂಸ್ಥೆಗಳ ಪ್ರಾಬಲ್ಯ, ಕಚ್ಚಾ ಪದಾರ್ಥಗಳ ಎಲ್ಲ ಆಕರಗಳನ್ನೂ ಒಂದೇ ವೃಂದವು ವಶಪಡಿಸಿಕೊಂಡಾಗ ಈ ಏಕಸ್ವಾಮ್ಯ ಸಂಸ್ಥೆಗಳು ಅತ್ಯಂತ ದೃಢವಾಗಿ ಸ್ಥಾಪಿತವಾಗಿರುತ್ತವೆ. ಬೆವರಿನ ಶ್ರಮ ಮತ್ತು ಬುದ್ಧಿಯ ಶ್ರಮಗಳ ನಡುವೆ ವ್ಯತ್ಯಾಸವಿದೆ. ಅಂತರರಾಷ್ಟ್ರೀಯ ಬಂಡವಾಳಶಾಹಿ ಸಂಸ್ಥೆಗಳು ತಮ್ಮ ಪ್ರತಿಸ್ಪರ್ಧಿಗಳಿಗೆ ಸ್ಪರ್ಧಿಸುವ ಎಲ್ಲ ಅವಕಾಶಗಳನ್ನೂ ತಪ್ಪಿಸಲು, ಎಷ್ಟು ಉತ್ಸಾಹದಿಂದ ಎಲ್ಲ ಯತ್ನ ಕ್ಷೇತ್ರಗಳು, ಇತ್ಯಾದಿಗಳನ್ನು ಕೊಂಡುಕೊಂಡು ಬಿಡುತ್ತವೆಂಬುದನ್ನು ನಾವು ಕಂಡಿದ್ದೇವೆ. ಪ್ರತಿಸ್ಪರ್ಧಿಗಳೊಂದಿಗೆ ಹೋರಾಟದಲ್ಲಿ ಎಲ್ಲ ಸಂಭವಗಳ ವಿರುದ್ಧವೂ, ಪ್ರತಿಸ್ಪರ್ಧಿಯು ರಾಜ್ಯ ಏಕಸ್ವಾಮ್ಯ ಕುರಿತಾದ ಶಾಸನದ ಮೂಲಕ ರಕ್ಷಣೆ ಪಡೆಯಲು ಬಯಸುವಂಥ ಸಂಭವಗಳಲ್ಲೂ ಸಹ, ಏಕಸ್ವಾಮ್ಯ ಸಂಸ್ಥೆಗಳಿಗೆ ಸಂಪೂರ್ಣ ಸಂರಕ್ಷಣೆ ನೀಡುವುದು ವಸಾಹತು ಮೇಲಿನ ಒಡೆತನವಷ್ಟೆ. ಬಂಡವಾಳವಾದವು ಹೆಚ್ಚು ವಿಕಾಸಗೊಂಡಂತೆ, ಕಚ್ಚಾ ಪದಾರ್ಥಗಳ ಕೊರತೆ ಹೆಚ್ಚು ಪ್ರಬಲವಾಗಿ ಅನುಭವಕ್ಕೆ ಬಂದಂತೆ, ಇಡೀ ಜಗತ್ತಿನಾದ್ಯಂತ ಕಚ್ಚಾ ಪದಾರ್ಥಗಳ ಆಕರಗಳಿಗಾಗಿ ಸ್ಪರ್ಧೆಯೂ ಬೇಟೆಯೂ ಅಷ್ಟೂ ತೀವ್ರಗೊಳ್ಳುತ್ತವೆ. ವಸಾಹತುಗಳನ್ನು ಪಡೆದುಕೊಳ್ಳುವುದಕ್ಕಾಗಿ ಹೋರಾಟವೂ ಅಷ್ಟೂ ಹೆಚ್ಚು ಉಗ್ರವಾಗುತ್ತದೆ. (ಲೆನಿನ್ ಪುಟ. 107) ಬಂಡವಾಳವಾದಿ ಮುಕ್ತ ಸ್ಪರ್ಧೆಯ ಸ್ಥಳದಲ್ಲಿ ಬಂಡವಾಳವಾದಿ ಏಕಸ್ವಾಮ್ಯ ಬರುವುದಾಗಿದೆ. ಮುಕ್ತ ಸ್ಪರ್ಧೆಯು ಬಂಡವಾಳವಾದದ ಹಾಗೂ

ಒಟ್ಟಿನಲ್ಲಿ ಸರಕು ಉತ್ಪಾದನೆಯ ಮೂಲಭೂತ ಲಕ್ಷಣವಾಗಿದೆ; ಏಕಸ್ವಾಮ್ಯವು ಮುಕ್ತ ಸ್ಪರ್ಧೆಯ ವಿರುದ್ಧವಾಗಿದೆ. ಆದರೆ ಮುಕ್ತ ಸ್ಪರ್ಧೆಯು ನಮ್ಮ ಕಣ್ಣುಂದೆಯೇ ಏಕಸ್ವಾಮ್ಯವಾಗಿ ಪರಿವರ್ತನೆಯಾಗುವುದನ್ನು, ಸಣ್ಣ ಕೈಗಾರಿಕೆಯನ್ನು ಸ್ಥಾಪಿಸುವುದನ್ನು, ಉತ್ಪಾದನೆಯ ಹಾಗೂ ಬಂಡವಾಳದ ಕೇಂದ್ರಿಕರಣವನ್ನು ವಿಪರೀತಕ್ಕೆ ಕೊಂಡೊಯ್ದು ತತ್ಫಲವಾಗಿ ಅದರಿಂದ ಏಕಸ್ವಾಮ್ಯ ಸಂಸ್ಥೆಗಳು? ಕಾರ್ಟೆಲ್‌ಗಳು, ಸಿಂಡಿಕೇಟುಗಳು ಹಾಗೂ ಟ್ರಸ್ಟುಗಳು – ಬೆಳೆದುದನ್ನು ಹಾಗೂ ಬೆಳೆಯುತ್ತಿರುವುದನ್ನು, ಇವುಗಳೊಂದಿಗೆ ಸಾವಿರಾರು ಮಿಲಿಯಗಟ್ಟಲೆ ಹಣದಲ್ಲಿ ವ್ಯವಹರಿಸುವ ಹತ್ತಾರು ಬ್ಯಾಂಕುಗಳ ಬಂಡವಾಳವು ಮಿಲನಗೊಳ್ಳುವುದನ್ನು, ಕಾಣುತ್ತೇವೆ. ಅದೇ ಹೊತ್ತಿನಲ್ಲಿ, ಮುಕ್ತ ಸ್ಪರ್ಧೆಯಿಂದ ಬೆಳೆದಂಥ ಏಕಸ್ವಾಮ್ಯ ಸಂಸ್ಥೆಗಳು ಮುಕ್ತ ಸ್ಪರ್ಧೆಯನ್ನೇನೂ ತೊಡೆದು ಹಾಕುವುದಿಲ್ಲ. ಆದರೆ ಅದರ ಮೇಲೆಯೇ, ಅದರ ಬದಿಯಲ್ಲೇ ಅಸ್ತಿತ್ವದಲ್ಲಿರುತ್ತವೆ. ಇದರ ಫಲವಾಗಿ ಅನೇಕ ಅತ್ಯುಗ್ರವಾದ ಹಾಗೂ ತೀವ್ರವಾದ ವೈಷಮ್ಯಗಳು, ಘರ್ಷಣೆಗಳು ಹಾಗೂ ತಿಕ್ಕಾಟಗಳು ಉಂಟಾಗುತ್ತವೆ. ಬಂಡವಾಳವಾದವು ಅದಕ್ಕೂ ಹೆಚ್ಚು ಉನ್ನತವಾದ ಪದ್ಧತಿಗೆ ಪರಿವರ್ತನೆಯಾಗುವ ಸ್ಥಿತಿಯೇ ಏಕಸ್ವಾಮ್ಯವಾಗಿದೆ. (ಲೆನಿನ್ ಪುಟ. 114) ಉದಾರೀಕರಣ ಮತ್ತು ಅಂತರ್‍ರಾಷ್ಟ್ರೀಯ ಕಂಪೆನಿಗಳ ಹಿಂದಿರುವ ರಾಜಕಾರಣವನ್ನು ಗ್ರಹಿಸುವುದು ಸೂಕ್ತ.:

"ನಾವು ಸಾಮ್ರಾಜ್ಯವಾದದ ಬಗೆಗೆ, ಅದರ ಈ ಕೆಳಗಿನ ಐದು ಮೂಲ ಲಕ್ಷಣಗಳನ್ನೂ ಒಳಗೊಂಡಿರುವಂಥ ನಿರೂಪಣೆಯನ್ನು ನೀಡಬೇಕಾಗುತ್ತದೆ: 1) ಉತ್ಪಾದನೆಯ ಹಾಗೂ ಬಂಡವಾಳದ ಕೇಂದ್ರಿಕರಣವು ಎಷ್ಟು ಉನ್ನತ ಘಟ್ಟಕ್ಕೆ ಬೆಳೆಯುತ್ತದೆಂದರೆ ಅದು ಏಕಸ್ವಾಮ್ಯ ಸಂಸ್ಥೆಗಳನ್ನು ಸೃಜಿಸುತ್ತದೆ ಮತ್ತು ಅವು ಆರ್ಥಿಕ ಜೀವನದಲ್ಲಿ ನಿರ್ಧಾರಕ ಪಾತ್ರ ನಿರ್ವಹಿಸುತ್ತವೆ; 2) ಬ್ಯಾಕಿಂಗ್ ಬಂಡವಾಳವು ಕೈಗಾರಿಕಾ ಬಂಡವಾಳದೊಂದಿಗೆ ಮಿಳನಗೊಳ್ಳುತ್ತದೆ; ಈ "ಹಣಕಾಸು ಬಂಡವಾಳ"ದ ಆಧಾರದ ಮೇಲೆ ಒಂದು ಹಣಕಾಸು ಆಲಿಗಾರ್ಕಿ ಸ್ಥಾಪಿತವಾಗುತ್ತದೆ; 3) ಸರಕುಗಳ ರಫ್ತಿನಿಂದ ಭಿನ್ನವಾಗಿ ಬಂಡವಾಳದ ರಫ್ತು ಅತ್ಯಂತ ಹೆಚ್ಚಿನ ಪ್ರಾಮುಖ್ಯ ಪಡೆದುಕೊಳ್ಳುತ್ತದೆ; 4) ಜಗತ್ತನ್ನು ತಮ್ಮ ಮಧ್ಯೆಯೇ ಹಂಚಿಕೊಳ್ಳುವಂಥ ಏಕಸ್ವಾಮ್ಯ ಬಂಡವಾಳಶಾಹಿ ಸಮುಚ್ಚಗಳ ರಚನೆ; 5) ಅತ್ಯಂತ ದೊಡ್ಡ ಬಂಡವಾಳಶಾಹಿ ಬೃಹತ್ ರಾಷ್ಟ್ರಗಳ ಮಧ್ಯೆ ಇಡೀ ಜಗತ್ತಿನ ಪ್ರಾದೇಶಿಕ ವಿಭಜನೆ ಪೂರ್ಣಗೊಂಡಿರುತ್ತದೆ. ಸಾಮ್ರಾಜ್ಯವಾದವು ಬಂಡವಾಳವಾದದ ಬೆಳವಣಿಗೆಯ ಎಂತಹ ಘಟ್ಟವೆಂದರೆ, ಅದರಲ್ಲಿ ಏಕಸ್ವಾಮ್ಯ ಸಂಸ್ಥೆಗಳ ಹಾಗೂ ಹಣಕಾಸು ಬಂಡವಾಳದ ಪ್ರಾಬಲ್ಯ ಸುಸ್ಥಾಪಿತವಾಗಿರುತ್ತದೆ; ಅದರಲ್ಲಿ ಬಂಡವಾಳದ ರಫ್ತು ಪ್ರಧಾನ ಪ್ರಾಮುಖ್ಯ ಪಡೆದಿರುತ್ತದೆ; ಅದರಲ್ಲಿ ಅಂತರರಾಷ್ಟ್ರೀಯ ಟ್ರಸ್ಟುಗಳು ಜಗತ್ತನ್ನು ತಮ್ಮ ಮಧ್ಯೆ ಹಂಚಿಕೊಳ್ಳುವ ಕಾರ್ಯ ಪ್ರಾರಂಭವಾಗಿರುತ್ತದೆ; ಅದರಲ್ಲಿ ಭೂಮಂಡಲದ ಎಲ್ಲ ಭೂ ಭಾಗಗಳನ್ನೂ ಅತ್ಯಂತ ದೊಡ್ಡ ಬಂಡವಾಳಶಾಹಿ ಬೃಹತ್ ರಾಷ್ಟ್ರಗಳು ಹಂಚಿಕೊಳ್ಳುವ ಕಾರ್ಯ ಪೂರ್ಣಗೊಂಡಿರುತ್ತದೆ." (ಲೆನಿನ್ ಪುಟ. 115) ಅದು ನಮ್ಮ ಮುಂದೆ ಇರುವ ಸಮಸ್ಯೆಯೂ ಹೌದು. ಬಂಡವಾಳಿಗರು ತಾವು ಕೂಲಿಯನ್ನು ಎಷ್ಟು ಕೊಟ್ಟಿದ್ದೇವೆ ಎಂದು ಮಾತ್ರವೇ ಲೆಕ್ಕ ಹಾಕಿ ಅದರ ಲಾಭವನ್ನು ಮಾತ್ರವೇ ಗಮನಕ್ಕೆ ಇಟ್ಟುಕೊಟ್ಟುಕೊಂಡು ಉಳಿದದ್ದೂ ತಮ್ಮ ಪಾಲು ಎಂದು ಮಾತ್ರವೇ ಗಮನಿಸುತ್ತಾರೆ. ಆದರೆ ಕಾರ್ಮಿಕರ ದೇಹ ಮತ್ತು ಅವರ ಮನಸ್ಸು ಉತ್ಪಾದನೆಯಲ್ಲಿ ಎಷ್ಟು ಬಳಕೆಯಾಗಿದೆ? ಅದರಲ್ಲಿ ಅವರ ನೋವು ಎಷ್ಟು? ಅದಕ್ಕೆ

ಯಾವುದನ್ನು ನೀಡಬೇಕು ಎನ್ನುವುದನ್ನು ಬಂಡವಾಳಿಗರು ಮರೆಯುತ್ತಾರೆ. ಇದನ್ನು ನಾವು ಹೀಗೂ ಗಮನಿಸಬೇಕು–ವಾಸ್ತವವಾಗಿ ಕಾರ್ಮಿಕರಿಗೆ ತಾವು ಯಾವ ಸನ್ನಿವೇಶದಲ್ಲಿ ಬದುಕುತ್ತಿದ್ದೇವೆ ಎನ್ನುವುದರ ಅರಿವೇ ಇರುವುದಿಲ್ಲ. ಅವರು ದುಡಿಯುತ್ತಾರೆ ಆದರೆ ಅದರ ಪರಿಣಾಮವು ಅವರ ತಿಳುವಳಿಕೆಯ ಒಳಗೆ ಬರುವುದಿಲ್ಲ. ಈ ವಿಷಯದಲ್ಲಿ ಬಂಡವಾಳಿಗರಿಗೆ ಉದಾರವಾದ ಮನಸ್ಸೂ ಇಲ್ಲ. ಕಾರ್ಮಿಕರಿಗೆ ಸರಿಯಾದ ವೇತನವನ್ನು ಕೊಟ್ಟು ಉಳಿದ ಲಾಭದಲ್ಲಿ ಕಂದಾಯ ಮತ್ತು ಆದಾಯವನ್ನು ಲೆಕ್ಕ ಹಾಕಬೇಕು. ಆದರೆ ಆಗುವುದು ಇದಕ್ಕಿಂತ ವ್ಯತಿರಿಕ್ತವಾಗಿ. ಜನರ ಗಮನವಿರುವುದು ಯಾವಾಗಲೂ ಲಾಭದ ಕಡೆಗೆ ಮಾತ್ರವೇ. ಒಂದು ಚಾರಿತ್ರಿಕ ವ್ಯಂಗ್ಯವೆಂದರೆ ಕಾರ್ಮಿಕರನ್ನು ಗಮನದಲ್ಲಿ ಇಟ್ಟುಕೊಂಡು ಯಾರೂ ರಾಜ್ಯವನ್ನು ಕಟ್ಟುವುದಿಲ್ಲ. ರಾಜ್ಯವನ್ನು ಕುರಿತು ಏಂಗಲ್ಸ್‌ನ ಅಭಿಪ್ರಾಯವನ್ನು ಮೊದಲು ಉಲ್ಲೇಖಿಸಬೇಕು "ಆದ್ದರಿಂದ ರಾಜ್ಯವು ಸಮಾಜದ ಮೇಲೆ ಹೊರಗಿನಿಂದ ಬಲವಂತವಾಗಿ ಹೊರಿಸಿದ ಶಕ್ತಿಯೇನೂ ಅಲ್ಲ; ಅಂತೆಯೇ ಅದು ಹೆಗಲ್ ಹೇಳಿರುವಂತೆ 'ನೈತಿಕ ವಾಸ್ತವಿಕತೆ,' 'ವಿವೇಚನೆಯ ಸಾಕಾರ ಹಾಗೂ ವಾಸ್ತವಿಕ ಸ್ವರೂಪ'ವೂ ಅಲ್ಲ. ಬದಲು, ಅದು ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಘಟ್ಟದಲ್ಲಿ ಉಂಟಾದ ಉತ್ಪನ್ನವಾಗಿದೆ; ಸಮಾಜವು ತನ್ನೊಂದಿಗೇ ಅಪರಿಹಾರ್ಯವಾದಂಥ ವೈರುಧ್ಯತೆಯ ಬಲೆಯಲ್ಲಿ ಸಿಕ್ಕಿ ಬಿದ್ದಿದೆ, ಅದು ಅಸಾಂಗತ್ಯವಾದ ವೈರುಧ್ಯತೆಗಳಿಂದ ವಿಭಜನೆಗೊಂಡಿದೆ, ಇವುಗಳಿಂದ ಬಿಡಿಸಿಕೊಳ್ಳುಲು ಅದಕ್ಕೆ ಶಕ್ತಿ ಇಲ್ಲವಾಗಿದೆ, ಎಂಬುದರ ಒಪ್ಪಿಕೆಯಾಗಿದೆ ರಾಜ್ಯ.

ಬಂಡವಾಳವಾದವಿರಲಿ ಅಥವಾ ಜಮೀನುದಾರಿ ಪದ್ಧತಿಯಿರಲಿ ಕಾರ್ಮಿಕರ ಜೀವನದ ಪರಿಸ್ಥಿತಿಯು ಬದಲಾಗುವುದಿಲ್ಲ. ಕಾರ್ಮಿಕನು ಯಾಕೆ ಹೆಚ್ಚು ಕ್ರಿಯಾಶೀಲನಾಗುತ್ತಾನೆಂದರೆ ಅವನಿಗೆ ದುಡಿಯದೆ ಬೇರೆ ಗತ್ಯಂತರವಿಲ್ಲ. ರಾಜಕೀಯ ಅರ್ಥಶಾಸ್ತ್ರದಲ್ಲಿ ಕಾರ್ಮಿಕನು ಉದ್ದಿಮೆಗೆ ಲಾಭವನ್ನು ತರುವವನು ಮಾತ್ರ. ಆದರೆ ಅದನ್ನು ನಾವು ಮನಗಾಣುವುದಿಲ್ಲ. ಕಾರ್ಮಿಕನದು ಕೂಲಿಯನ್ನು ಪಡೆಯುವ ಒಂದು ಘಟಕ ಮಾತ್ರವೆಂದು ಹೇಳುವುದೇ ಸಮಂಜಸವಲ್ಲ ಆದರೆ ದೊಡ್ಡ ಬಂಡವಾಳವಾದು ಸಣ್ಣ ಬಂಡವಾಳದವರನ್ನು ನುಂಗಿ ನೀರು ಕುಡಿಯುತ್ತದೆ. ಅಷ್ಟೇ ಅಲ್ಲ ಅದು ಕಾರ್ಮಿಕರ ಶಕ್ತಿಯನ್ನು ಸಹ ನಾಶ ಪಡಿಸುತ್ತದೆ. ಹಾಗೆಯೇ ಯಂತ್ರದ ಬಳಕೆಯು ಮೂಲಭೂತವಾಗಿ ರೈತರ ಶಕ್ತಿಯನ್ನು ನಿರಾಕರಿಸುತ್ತದೆ. ಮತ್ತು ಅದರ ಮೂಲಕವೇ ರೈತರ ಆರ್ಥಿಕತೆಯನ್ನು ಕೂಡಾ ಧ್ವಂಸ ಮಾಡುತ್ತದೆ. ಸಣ್ಣ ಬಂಡವಾಳವಾದವು ನಾಶವಾದ ಮೇಲೆ ಬೃಹತ್ ಬಂಡವಾಳವು ಶ್ರಮದ ಶಕ್ತಿಯನ್ನು ವಿಸ್ತರಿಸುತ್ತಾ ಅದರ ಮೂಲಕವೇ ಮತ್ತೊಂದು ರೀತಿಯ ಲಾಭದ ಕಡೆಗೆ ಗಮನವನ್ನು ನೀಡುತ್ತದೆ. ಹಾಗೆ ನೋಡುವುದಿದ್ದರೆ ಮಿಗುತಾಯ ಮೌಲ್ಯವೇ ಬಂಡವಾಳವಾದದ ಲಾಭ ಮೂಲವಾಗಿದೆ. ಕಾರ್ಮಿಕರ ಶೋಷಣೆಗೆ ಒಂದು ಇತಿಮಿತಿ ಅನ್ನುವುದೇ ಇಲ್ಲ. ಅದಕ್ಕೆ ಒಂದು ಬೌಂಡರಿ ಅನ್ನುವುದೇ ಇಲ್ಲ. ಕಾರ್ಮಿಕರನ್ನು ಯಾವಾಗಲೂ ಒಂದು ಉತ್ಪಾದನೆಯ ಭಾಗವಾಗಿ ಮಾತ್ರವೆ ನೋಡುವುದರಿಂದ ಕಾರ್ಮಿಕರ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗಿ ಯಾವುದೇ ಒಂದು ಉತ್ಪಾದನೆಯಲ್ಲಿ ಕಾರ್ಮಿಕರಿಗೆ ಕೊಡುವ ತರಬೇತಿಯು ಒಂದು ಭಾಗ ಮಾತ್ರವೇ ಆಗಿರುತ್ತದೆ. ಮತ್ತೆ ಹಾಗೆಯೇ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ: ಅದು ಶ್ರೀಮಂತಿಕೆ ಮತ್ತು ಬಡತನಕ್ಕೆ ಇರುವ ಭಿನ್ನತೆಗಳು. ತಾನು ಬಡವನಾಗಿದ್ದೇನೆ ಇದಕ್ಕಿರುವ ಕಾರಣವು ವಿಧಿಯೆಂದು ಯಾರೂ

ಭಾವಿಸಬೇಕಾಗಿಲ್ಲ. ಶ್ರೀಮಂತನೇ ಆಗಿರಲಿ ಬಡವನೇ ಆಗಿರಲಿ ಅದಕ್ಕೆ ಕಾರಣ ಉತ್ಪಾದನೆ ಮತ್ತು ಸಂಪನ್ಮೂಲ ಮತ್ತು ಅದರ ಹಂಚುವಿಕೆ. ನಾವು ಪ್ರಜ್ಞಾಪೂರ್ವಕ ತಿಳಿಯಬೇಕಾದ ಅಂಶವಿದೆ ಅದು ಶ್ರೀಮಂತನೇ ಆಗಿರಲಿ ಬಡವನೇ ಆಗಿರಲಿ ಅವರು ತಿನ್ನುವುದು ಆಹಾರವನ್ನೇ. ಕಬ್ಬಿಣವನ್ನೋ ಬರೀ ದುಡ್ಡನ್ನೋ ತಿನ್ನಲು ಬರುವುದಿಲ್ಲ. ಶ್ರೀಮಂತ ಮತ್ತು ಬಡವ ಎನ್ನುವ ಪ್ರಭೇದವು ತಾಯಿಯ ಹೊಟ್ಟೆಯಲ್ಲಿ ನಿಶ್ಚಿತವಾಗಿಲ್ಲ. ಗಂಡು ಮತ್ತು ಹೆಣ್ಣಿನ ಪ್ರಭೇದವಾದರೆ ಭಿನ್ನ. ಅದು ನಿಶ್ಚಿತ ಹಾಗೂ ಬದಲಾವಣೆಯನ್ನು ಮಾಡಲು ಅಸಾಧ್ಯವಾದುದು. ಗಂಡು ಮತ್ತು ಹೆಣ್ಣಿನ ಸಂಬಂಧವು ಸಾಮಾಜಿಕ ಸಂಬಂಧವಾಗಿದೆ. ಅದನ್ನು ಅಳಿಸಿ ಹಾಕಲು ಸಾಧ್ಯವಿಲ್ಲ. ಬಂಡವಾಳಶಾಹಿಗಳು ಕೆಳವರ್ಗವನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಕಡಿಮೆ ದಿನಗೂಲಿ ಕಾರಣಕ್ಕೆ. ಯಾರನ್ನು ನಾವು ಪಟೇಲರು, ಸಾಹುಕಾರರು ಎಂದು ಯೋಚಿಸುತ್ತೇವೆಯೋ ಅವರು ಯೋಚಿಸುವ ಕ್ರಮಕ್ಕೂ ಕಾರ್ಮಿಕರು ಅಥವಾ ದಿನಗೂಲಿಯವರು ಯೋಚಿಸುವ ಕ್ರಮಕ್ಕೂ ವ್ಯತ್ಯಾಸವಿದೆ. ಕೂಲಿಯವರದು ಹೊಟ್ಟೆ ಮತ್ತು ಬಟ್ಟೆಯ ಚಿಂತೆ. ಆದರೆ ಸಾಹುಕಾರರದು ಮೋಜಿನ ಚಿಂತೆ. ಅವರ ಸುಖ ಮತ್ತು ಕಾರ್ಮಿಕರ ಸುಖದ ಪರಿಕಲ್ಪನೆಯು ಈ ದೃಷ್ಟಿಯಿಂದ ಬೇರೆ ಬೇರೆಯಾಗಿದೆ. ಜೊತೆಗೆ ಸೇರಿ ಕುಡಿಯುವುದು, ತಿನ್ನುವುದು ಮುಂತಾದವುಗಳನ್ನು ಮಾತ್ರವೇ ಮನುಷ್ಯನ ಸಂಬಂಧವೆಂದು ಕರೆಯುವ ಹಾಗಿಲ್ಲ. ಅದು ನಮ್ಮ ಅಸ್ತಿತ್ವವನ್ನು ಸೂಚಿಸುವುದೂ ಇಲ್ಲ."ಶ್ರಮಜೀವಿ ವರ್ಗವು ರಾಜ್ಯಾಧಿಕಾರವನ್ನು ವಶಪಡಿಸಿಕೊಳ್ಳುತ್ತದೆ ಮತ್ತು ಮೊದಲ ಕ್ರಮವಾಗಿ ಉತ್ಪಾದನಾ ಸಾಧನೆಗಳನ್ನು ರಾಜ್ಯದ ಆಸ್ತಿಯನ್ನಾಗಿ ಪರಿವರ್ತಿಸುತ್ತದೆ. ಆದರೆ ಹಾಗೆ ಮಾಡುವಾಗ ಅದು ಶ್ರಮಜೀವಿ ವರ್ಗವಾಗಿ ತನ್ನನ್ನೇ ಅಳಿಸಿ ಹಾಕಿಕೊಳ್ಳುತ್ತದೆ, ಎಲ್ಲ ವರ್ಗ ವೈಪರೀತ್ಯಗಳನ್ನೂ ಎಲ್ಲ ವರ್ಗ ವೈರುಧ್ಯತೆಗಳನ್ನೂ ತೊಡೆದು ಹಾಕುತ್ತದೆ ಮತ್ತು ರಾಜ್ಯವನ್ನು ರಾಜ್ಯವಾಗಿಯೂ ತೊಡೆದು ಹಾಕುತ್ತದೆ. ವರ್ಗ ವೈರುಧ್ಯತೆಗಳ ಮಧ್ಯೆ ಕಾರ್ಯ ನಿರ್ವಹಿಸುತ್ತಿದ್ದ ಸಮಾಜಕ್ಕೆ ಇದುವರೆವಿಗೂ ರಾಜ್ಯದ, ಅಂದರೆ ಆ ವಿಶಿಷ್ಟ ಶೋಷಕ ವರ್ಗದ ಸಂಘಟನೆಯ, ಆವಶ್ಯಕತೆ ಇದ್ದಿತು. ಉತ್ಪಾದನೆಯ ಬಾಹ್ಯ ಪರಿಸ್ಥಿತಿಗಳನ್ನು ಕಾಪಾಡಿಕೊಂಡು ಬರಲು, ಆ ನಿರ್ದಿಷ್ಟ ಉತ್ಪಾದನಾ ವಿಧಾನಗಳು (ಗುಲಾಮಗಿರಿ, ಜೀತದಾಳು ಅಥವಾ ದಾಸ್ಯ, ಕೂಲಿಕೆಲಸ ಇವುಗಳು) ನಿರ್ಧರಿಸುವ ಮರ್ದನದ ಪರಿಸ್ಥಿತಿಗಳಲ್ಲಿ ಶೋಷಿತ ವರ್ಗವನ್ನು ಬಲೋದ್ಬಂಧದಲ್ಲಿ ಇರಿಸುವ ಉದ್ದೇಶಕ್ಕಾಗಿ ವಿಶೇಷವಾಗಿ ಶೋಷಕ ವರ್ಗಕ್ಕೆ ಅದರ ಆವಶ್ಯಕತೆ ಇದ್ದಿತು. ರಾಜ್ಯವು ಇಡೀ ಸಮಾಜದ ಅಧಿಕೃತ ಪ್ರತಿನಿಧಿಯಾಗಿದ್ದಿತು ಅದು. ಅಂದರೆ ಯಾವ ವರ್ಗ, ತನ್ನ ಕಾಲದಲ್ಲಿ, ಇಡೀ ಸಮಾಜವನ್ನು ಪ್ರತಿನಿಧಿಸುತ್ತಿದ್ದಿತೋ ಆ ವರ್ಗದ ರಾಜ್ಯವಾಗಿಯಷ್ಟೆ ಆಗಿದ್ದಿತು. ಪುರಾತನ ಕಾಲದಲ್ಲಿ ಅದು ಗುಲಾಮರ ಮೇಲೆ ಒಡೆತನ ಹೊಂದಿದ್ದ ಪ್ರಜೆಗಳ ರಾಜ್ಯವಾಗಿದ್ದಿತು; ಮಧ್ಯಯುಗದಲ್ಲಿ ಅದು ಸಾಮಂತಶಾಹಿ ಕುಲೀನರ ರಾಜ್ಯವಾಗಿದ್ದಿತು; ನಮ್ಮ ಕಾಲದಲ್ಲಿ ಬೂರ್ಜ್ವಾಯ ರಾಜ್ಯವಾಗಿದೆ. ಕೊನೆಯಲ್ಲಿ ಅದು ಇಡೀ ಸಮಾಜದ ನಿಜವಾದ ಪ್ರತಿನಿಧಿಯಾದಾಗ ಅದು ತನ್ನನ್ನು ಅನಾವಶ್ಯಕವನ್ನಾಗಿ ಮಾಡಿಕೊಳ್ಳುತ್ತದೆ. ಅಧೀನದಲ್ಲಿ ಇರಿಸಬೇಕಾದಂತಹ ಯಾವ ಸಾಮಾಜಿಕ ವರ್ಗವೂ ಎಷ್ಟು ಮಾತ್ರವೂ ಇಲ್ಲದಂತಾದ ಕೂಡಲೇ, ವರ್ಗ ಆಧಿಪತ್ಯವೂ ಇಂದಿನ ಉತ್ಪಾದನೆಯಲ್ಲಿ ಅರಾಜಕತೆ ಇರುವುದರಿಂದ ವ್ಯಕ್ತಿಗಳು ಪ್ರತ್ಯೇಕ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟವೂ ಈ ಹೋರಾಟದಿಂದ ಉದ್ಭವವಾಗುವ ಸಂಘಟ್ಟನೆಗಳೂ

ಅತಿರೇಕಗಳೂ ಇಲ್ಲವಾದ ಕೂಡಲೇ, ಅಧೀನದಲ್ಲಿರಿಸಲು ಬೇರೇನೂ ಉಳಿದಿರುವುದಿಲ್ಲ, ರಾಜ್ಯವೆಂಬ ವಿಶೇಷ ಬಲೋದ್ಭಂಧದ ಶಕ್ತಿಯನ್ನು ಅವಶ್ಯವನ್ನಾಗಿ ಮಾಡುವಂತಹುದೇನೂ ಉಳಿದಿರುವುದಿಲ್ಲ. ರಾಜ್ಯವು ನಿಜಕ್ಕೂ ಇಡೀ ಸಮಾಜದ ಪ್ರತಿನಿಧಿಯಾಗಿ ಮುಂದೆ ಬಂದು ನಿರ್ವಹಿಸುವ ಮೊದಲ ಕ್ರಮವು – ಸಮಾಜದ ಹೆಸರಿನಲ್ಲಿ ಉತ್ಪಾದನಾ ಸಾಧನಗಳನ್ನು ವಶಪಡಿಸಿಕೊಳ್ಳುವ ಕ್ರಮವು ? ರಾಜ್ಯವಾಗಿ ಅದರ ಕೊನೆಯ ಸ್ವತಂತ್ರ ಕ್ರಿಯೆಯೂ ಆಗಿರುತ್ತದೆ. ಸಾಮಾಜಿಕ ಸಂಬಂಧಗಳಲ್ಲಿ ರಾಜ್ಯಾಧಿಕಾರದ ಹಸ್ತಕ್ಷೇಪವು ಒಂದು ಕ್ಷೇತ್ರದ ನಂತರ ಮತ್ತೊಂದರಲ್ಲಿ ಅನಾವಶ್ಯಕವಾಗುತ್ತ ಹೋಗುತ್ತದೆ ಮತ್ತು ಅನಂತರ ತನಗೆ ತಾನೇ ಇಲ್ಲವಾಗುತ್ತದೆ. ವ್ಯಕ್ತಿಗಳ ಮೇಲಿನ ಸರಕಾರದ ಸ್ಥಳದಲ್ಲಿ ವಸ್ತು ವಿಷಯಗಳ ಮೇಲಿನ ನಿರ್ವಹಣೆ, ಉತ್ಪಾದನಾ ಪ್ರಕ್ರಿಯೆಗಳ ಮೇಲಿನ ನಿಯಂತ್ರಣ ಸ್ಥಾಪಿತವಾಗುತ್ತವೆ. ರಾಜ್ಯವೇನೂ "ತೊಡೆದು ಹಾಕಲ್ಪಡುವುದಿಲ್ಲ." ಅದು ತನ್ನಷ್ಟಕ್ಕೆ ತಾನೆ ಕ್ಷಯಿಸಿಹೋಗುತ್ತದೆ. ಇದು "ಒಂದು ಸ್ವತಂತ್ರ ಜನತಾ ರಾಜ್ಯ" ಎಂಬ ಪದಗುಚ್ಛದ ಮೌಲ್ಯ ಎಷ್ಟೆಂಬುದರ ಭಾವನೆಯನ್ನು ನೀಡುತ್ತದೆ. ಪ್ರಕ್ಷೋಭೆಯ ದೃಷ್ಟಿಯಿಂದ ಸ್ವಲ್ಪ ಕಾಲದವರೆಗೆ ಸಮರ್ಥನೀಯವಾಗಿಯೇ ಬಳಸುವ ಈ ಪದಗುಚ್ಛದ ಮೌಲ್ಯವನ್ನಷ್ಟೆ ಅಲ್ಲ, ಅಂತಿಮವಾಗಿ ವೈಜ್ಞಾನಿಕವಾಗಿ ಅದು ಎಷ್ಟು ಅಸಮರ್ಪಕ ಎಂಬುದನ್ನೂ ತೋರಿಸಿಕೊಡುತ್ತದೆ. ರಾಜ್ಯವನ್ನು ತಕ್ಷಣವೇ ತೊಡೆದು ಹಾಕಬೇಕೆಂಬ ಅರಾಜಕತಾವಾದಿಗಳ ಕೇಳಿಕೆಯ ಮೌಲ್ಯ ಎಷ್ಟೆಂಬುದನ್ನೂ ಇದು ತೋರಿಸಿಕೊಡುತ್ತದೆ." (ವಿಜ್ಞಾನದಲ್ಲಿ ಮೌನ್ಯ ಎವ್‌ಗೆನಿ ಡ್ಯೂರಿಂಗ್ ಸಾಧಿಸಿದ ಕ್ರಾಂತಿ' (ಆ್ಯಂಟಿ ಡ್ಯೂರಿಂಗ್') ಪು.301–303, ಮೂರನೆಯ ಜರ್ಮನ್ ಆವೃತ್ತಿ.) (ಲೆನಿನ್ ಆಯ್ದ ಕೃತಿಗಳು 1916–1917 ಪುಟ.185–186) ಬಂಡವಾಳವಾದವು ಕಾರ್ಮಿಕರ ನಡುವೆ ತನಗೆ ಬೇಕಾದ ರೀತಿಯಲ್ಲಿ ಸಂಘರ್ಷವನ್ನು ಉಂಟುಮಾಡುತ್ತದೆ. ಅದರಿಂದ ಅದಕ್ಕೆ ಅನುಕೂಲವಿದೆ. ಮಾಸಿಕ ವೇತನ ಮತ್ತು ದಿನಕೂಲಿಗಳ ನಡುವೆ ಬಹಳ ವ್ಯತ್ಯಾಸವಿದೆ. ಮಕ್ಕಳ ಮಾರಾಟ, ಹೆಂಗಸರ ಮಾರಾಟ, ಹಾಗೂ ಜೀತದಾಳುಗಳ ಮಾರಾಟವು ಒಂದು ಸಾಮಾಜದಲ್ಲಿ ಯಾಕೆ ನಡೆಯುತ್ತದೆ ಎಂದರೆ ಕೆಲಸದಾಳುಗಳು ಕಡಿಮೆ ಬೆಲೆಗೆ ಸಿಗುತ್ತಾರೆ. ವಾಸ್ತವವಾಗಿ ಕೆಲಸಗಾರರು ಎಂದು ಯಾರನ್ನು ಕರೆಯುತ್ತಾರೋ ಅವರು ಸರಕುಗಳಲ್ಲ. ಆದರೆ ಅವರನ್ನು ಹಾಗೆ ಭಾವಿಸಲಾಗುತ್ತದೆ. ಆಳುಗಳಿಗೆ ಅವರದೇ ಆದ ಜೀವನ ಕ್ರಮವಿದೆ. ಆದರೆ ನಾವು ಅದನ್ನು ಯೋಚಿಸಲು ಹೋಗುವುದೇ ಇಲ್ಲ. ಕೆಲಸಗಾರರು ದುಡಿಯುವುದು ಅವರ ದೈನಂದಿನ ಆಹಾರಕ್ಕಾಗಿ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಇದನ್ನು ಮತ್ತೆ ಹೇಳಿದ್ದು ಯಾಕೆಂದರೆ ದುಡಿಮೆ ಮತ್ತು ಉಪವಾಸ ಎರಡೂ ಕಾರ್ಮಿಕರಿಗೆ ಗೊತ್ತು. ಮತ್ತು ಅದನ್ನು ಅವರ ದೇಹವು ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತದೆ. ದುಡಿಮೆ ಅಂದರೆ ದೇಹ ಹಾಗೂ ಹಸಿವೆಯ ಪ್ರಶ್ನೆ. ಆಹಾರಕ್ಕಾಗಿ ಅವರು ಕಷ್ಟವನ್ನು ಪಡುತ್ತಾರೆ. ಇರುವ ಪ್ರಶ್ನೆ ಎಂದರೆ ಅವರು ಜೀವನವನ್ನು ವಸ್ತುವಾಗಿಯೋ ಸರಕಾಗಿಯೋ ನೋಡುತ್ತಾರೆ. ಮುಕ್ತ ಬಂಡವಾಳವಾದ ಸ್ವರೂಪವೇ ಬೇರೆ ತಂತ್ರಗಾರಿಕೆಯನ್ನು ರೂಪಿಸುವ ಮಾದರಿಯದು. ಮಿಗುತಾಯ ಮೌಲ್ಯವನ್ನು ನಾವು ಲಾಭವೆಂದೇ ಪರಿಗಣಿಸುತ್ತೇವೆ. ಚೋದ್ಯದ ಸಂಗತಿಯೆಂದರೆ ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಒಂದು ಆಟವಾಗಿಯೂ ಪರಿವರ್ತಿಸುತ್ತಾರೆ. ಅವರಿಗೆ ಅದು ಒಂದು ಯುದ್ಧ. ಈ ಆಟಕ್ಕೆ ದಾಳವಾಗುವುದು ಆಳುಗಳು. ಆಳುಗಳಿಗೆ ತಾವು ಬಂಡವಾಳದ

ಕೂಸುಗಳು ಎಂದು ತಿಳಿದಿರುವುದಿಲ್ಲ. ಕೈಗಾರಿಕಾ ಸಂಸ್ಕೃತಿಯಲ್ಲಿ ಹಣವೆನ್ನುವುದು ವಿಶಿಷ್ಟವಾದ ಸಂವೇದನೆಯನ್ನು ಹುಟ್ಟು ಹಾಕಿತು. ಹಾಗೆ ನೋಡಿದರೆ ನಮಗೆ ಹಣವನ್ನ ಬಳಸಲು ಬೇರೆ ಬೇರೆ ಮಾರ್ಗವಿದೆ. ಕೈಗಾರಿಕಾ ಸಂಸ್ಕೃತಿಯಲ್ಲಿ ಸಂಪನ್ಮೂಲವನ್ನು ಗುರುತಿಸುವ ಕ್ರಮ ಬೇರೆ. ಮುಕ್ತ ಬಂಡವಾಳವಾದವಿರುವುದೇ ಮೂಲತ: ಮುಕ್ತವಾದ ಲಾಭವನ್ನು ಗಳಿಸಲು ಎಂದೂ ಹೇಳಬೇಕು. ಅದರಿಂದ ದುಡಿಯುವ ವರ್ಗಕ್ಕೆ ಯಾವುದೇ ರೀತಿಯ ಲಾಭವಿಲ್ಲ. ಹಣವು ನಮ್ಮನ್ನು ನಿಯಂತ್ರಿಸುವುದು ಮಾತ್ರವೇ ಅಲ್ಲ ಅದು ಜೀವನದ ಬಹಳ ಮುಖ್ಯವಾದ ಭಾಗವೆಂದೇ ತಿಳಿದಿದ್ದೇವೆ. ಇದನ್ನೇ ಮಾರ್ಕ್ಸ್‌ರವರು ಒಂದೇ ಮಾತಿನಲ್ಲಿ ಹೇಳುತ್ತಾರೆ: "ಮನುಷ್ಯರ ಸಾಮಾಜಿಕ ಜೀವನವನ್ನು ಅವರ ಪ್ರಜ್ಞೆ ನಿಯಂತ್ರಿಸುವುದಿಲ್ಲ; ಬದಲಾಗಿ ಸಾಮಾಜಿಕ ಜೀವನವೇ ಅವರ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ." ಪ್ರಾಕೃತಾವಸ್ಥೆಯ ಕಾಡುಮಾನವನು ಪ್ರಕೃತಿಯ ಶಕ್ತಿಗಳ ಮುಂದೆ ದುರ್ಬಲನೂ ಅಸಹಾಯಕನೂ ಆಗಿದ್ದನು. ಆ ದೌರ್ಬಲ್ಯ ಮತ್ತು ಅಸಹಾಯಕತೆಯೇ ಮತದ ಮೇಲಿನ ನಂಬಿಕೆಯ ಮೂಲ. ಪ್ರಾರ್ಥನೆ, ಬಲಿ ಅರ್ಪಣೆ, ಪೂಜೆ, ಮಂತ್ರವಾದಗಳಿಂದ ತನ್ನ ದೌರ್ಬಲ್ಯಗಳನ್ನೂ ಅಸಹಾಯಕತೆಯನ್ನೂ ನೀಗಿಸಬಹುದೆಂದು ಆ ಮಾನವ ನಂಬಿದ. ಹಾಗೆ ಮತ ವಿಶ್ವಾಸಗಳು ಆವಿರ್ಭವಿಸಿದುವು. ಬಂಡವಾಳಶಾಹಿ ದೇಶಗಳಲ್ಲಿ ಸಮಾಜವೇ ಮತ ವಿಶ್ವಾಸಗಳ ಮೂಲ ಆಧಾರವಾಗಿದೆ. ದುಡಿಯುವ ಬಹುಜನರು ಅನುಭವಿಸುತ್ತಿರುವ ಸಾಮಾಜಿಕ ಮರ್ದನದಿಂದಾಗಿ ಬಂಡವಾಳಶಾಹಿಯ ಕರಾಳಶಕ್ತಿಯ ಮುಂದೆ ತಾವು ಸಂಪೂರ್ಣ ಅಸಹಾಯಕರೆಂಬ ಭಾವನೆ ಕಾರ್ಮಿಕರಲ್ಲಿ ಹುಟ್ಟುತ್ತದೆ. ಆಧುನಿಕ ಮತದ ಬೇರುಗಳು ಜೀವಂತವಾಗಿ ಉಳಿಯುವುದಕ್ಕೆ ಆ ಭಾವನೆಯೇ ಕಾರಣ. ಯುದ್ಧ, ಭೂಕಂಪ ಮೊದಲಾದುವುಗಳಿಂದ ಉದ್ಭವಿಸುವ ಕಷ್ಟ ಕಾರ್ಪಣ್ಯಗಳಿಗಿಂತಲೂ ಸಾವಿರಾರು ಪಾಲು ಭೀಕರವಾದ ಮರ್ದನ, ನರಕ ಯಾತನೆಗಳನ್ನು ಬಂಡವಾಳಶಾಹಿಯೊಳಗೆ ಬಹುಸಂಖ್ಯಾತ ಜನರು ಪ್ರತಿದಿನ, ಪ್ರತಿ ತಾಸು, ಅನುಭವಿಸುತ್ತಿರುತ್ತಾರೆ. "ದೈವಗಳ ಸೃಷ್ಟಿಗೆ ಭಯವೇ ಮೂಲ." ಬಂಡವಾಳಶಾಹಿಯ ಅದೃಶ್ಯ ಶಕ್ತಿಗಳು-ಅವುಗಳ ಪ್ರವರ್ತನೆಗಳನ್ನು ಮೊದಲೇ ಕಾಣಲು ಜನಸಾಮಾನ್ಯರಿಗೆ ಸಾಧ್ಯವಾಗದಿರುವುದರಿಂದ ಅವುಗಳನ್ನು ಅದೃಶ್ಯ ಶಕ್ತಿಗಳೆಂದು ಹೇಳುತ್ತೇವೆ- ಅವುಗಳು ಕಾರ್ಮಿಕರಿಗೂ ಪುಟ್ಟ ಬಂಡವಾಳಗಾರರಿಗೂ ವ್ಯಾಪಾರಸ್ಥರಿಗೂ ಕೂಡ ಹೆಜ್ಜೆ ಹೆಜ್ಜೆಗೂ "ಹಠಾವತ್ತಾಗಿ ನಡೆಯುವ", "ಅನಿರೀಕ್ಷಿತವಾದ" ಹಾಗೂ "ಯಾದೃಚ್ಛಿಕವಾದ" ನಾಶ ಮತ್ತು ನಷ್ಟಗಳನ್ನು ಉಂಟುಮಾಡುತ್ತವೆ. ಭಿಕ್ಷಾಟನೆ, ದಿವಾಳಿಯೆತ್ತುವುದು, ವ್ಯಭಿಚಾರ, ಉಪವಾಸ, ಮರಣ ಇವೆಲ್ಲ ಅದರ ಪರಿಣಾಮಗಳಾಗಿವೆ. ಇದೇ ಆಧುನಿಕ ಮತದ ತಳಹದಿಯಾಗಿದೆ. ಮಾರ್ಕ್ಸ್ ಬರೆಯುತ್ತಾರೆ: "ಮತವು ಕಷ್ಟ ಪಡುವವರ ನಿಟ್ಟುಸಿರಾಗಿದೆ; ಹೃದಯಹೀನ ಜಗತ್ತಿನ ಹೃದಯವಾಗಿದೆ; ಆತ್ಮಶೂನ್ಯ ಭೌತಿಕ ಪರಿಸ್ಥಿತಿಯ ಆತ್ಮವಾಗಿದೆ; ಅದು ಜನರ ಅಫೀಮಾಗಿದೆ." ಭೌತಿಕವಾದವೆಂದರೆ ತೋಚಿದಂತೆ ನಡೆಯುವುದು, ಹೊಟ್ಟೆಗಾಗಿ ಮಾತ್ರ ಜೀವಿಸುವುದು, ಎಲ್ಲ ರೀತಿಯ ಸದಾಚಾರಗಳನ್ನೂ ವಿರೋಧಿಸುವುದು ಎಂದೆಲ್ಲ ಹೇಳುವವರನ್ನು ಕುರಿತು ಎಂಗೆಲ್ಸ್‌ರವರು ಹೀಗೆ ಬರೆದಿದ್ದಾರೆ: "ಭೌತಿಕವಾದ ಎಂಬ ಪದಕ್ಕೆ ಕೆಲವು ಮೂಢಪಂಡಿತರು ಕುಡಿತ, ಸುಖಭೋಗ, ಸ್ವೇಚ್ಛಾವೃತ್ತಿ, ಕಾಮಲಾಲಸೆ, ಲೋಭ, ಲಾಭದ ಆಸೆ, ಸ್ಟಾಕ್ (ಪಾಲು ಬಂಡವಾಳ) ಮಾರುಕಟ್ಟೆಯ ಜುಗಾರಿ, ಮೊದಲಾದವುಗಳು

ಎಂದು ಅರ್ಥ ಕಲ್ಪಿಸುತ್ತಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಅವರು ತಮ್ಮ ಖಾಸಗಿ ಜೀವನದಲ್ಲಿ ಮಾಡುವ ಎಲ್ಲ ಅನಾಚಾರಗಳನ್ನೂ ಅವರು 'ಭೌತಿಕವಾದ' ಎಂದೇ ಹೇಳುತ್ತಾರೆ. ಅದೇ ಸಮಯದಲ್ಲಿ 'ಆಧ್ಯಾತ್ಮಿಕವಾದ' ಎಂಬ ಪದದಲ್ಲಿ ಅವರು ಎಲ್ಲ ಒಳ್ಳೆಯ ವಿಚಾರಗಳ ನಂಬಿಕೆ, ಸಾರ್ವತ್ರಿಕವಾದ ಪರೋಪಕಾರ ಬುದ್ಧಿ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಪ್ರವೃತ್ತಿ ಮೊದಲಾದ ಗುಣಗಳೆಂದು ವಿವರಿಸುತ್ತಾರೆ. ಬೇರೆಯವರ ಮುಂದೆ ತಾವು ಬೂಟಾಟಿಕೆಗೆ ಹೇಳಿಕೊಳ್ಳುವ 'ಸದ್ಗುಣ'ಗಳೆಲ್ಲ 'ಆಧ್ಯಾತ್ಮಿಕವಾದ' ಎಂದು ಅವರು ಅರ್ಥ ಹೇಳುತ್ತಾರೆ. ಇದು ತೀರಾ ತಪ್ಪು. ಮಾರ್ಕ್ಸ್‌ವಾದಿಗಳು ಭೌತಿಕವಾದವೆಂಬ ಸಿದ್ಧಾಂತವನ್ನು ಒಂದು ವಿಶಿಷ್ಟವಾದ ಅರ್ಥದಲ್ಲಿ ಉಪಯೋಗಿಸುತ್ತಾರೆ. ಅದೊಂದು ವ್ಯಕ್ತಿಗತ ಸದಾಚಾರ-ದುರಾಚಾರಗಳ ಪ್ರಶ್ನೆ ಅಲ್ಲ. ಪ್ರಕೃತಿ, ಸಮಾಜ, ಮನುಷ್ಯ ಜೀವನಗಳನ್ನು ವೀಕ್ಷಿಸುವ ಒಂದು ವಿಧಾನವೇ ಭೌತಿಕವಾದವೆಂದು ಅವರು ಭಾವಿಸುತ್ತಾರೆ. "ಬ್ಯಾಂಕಿಂಗ್ ಪದ್ಧತಿಯು ನಿಜಕ್ಕೂ ಸಾಮಾಜಿಕ ಪ್ರಮಾಣದಲ್ಲಿ ಉತ್ಪಾದನಾ ಸಾಧನಗಳ ಸಾಮಾನ್ಯ ಲೆಕ್ಕಾಚಾರದ ಹಾಗೂ ವಿತರಣೆಯ ಒಂದು ರೂಪ, ಆದರೆ ಒಂದು ರೂಪವಷ್ಟೆ" ಎಂದು ಮಾರ್ಕ್ಸ್ ಅರ್ಧ ಶತಮಾನದ ಹಿಂದೆ 'ಬಂಡವಾಳ'ದಲ್ಲಿ ಬರೆದರು. ಬಂಡವಾಳದ ಮಾಲೀಕತ್ವವೂ ಬಂಡವಾಳವನ್ನು ಉತ್ಪಾದನೆಗೆ ತೊಡಗಿಸುವುದೂ ಬೇರೆಬೇರೆಯಾಗಿರುವುದು ಹಣ ಬಂಡವಾಳವು ಕೈಗಾರಿಕಾ ಅಥವಾ ಉತ್ಪಾದಕ ಬಂಡವಾಳದಿಂದ ಪ್ರತ್ಯೇಕವಾಗಿರುವುದು, ಹಣ ಬಂಡವಾಳದಿಂದ ಬರುವ ಆದಾಯದಿಂದಲೇ ಸಂಪೂರ್ಣವಾಗಿ ಜೀವನ ನಡೆಸುವ ಲಾಭಾಂಶ ಜೀವಿಯು ಉದ್ಯಮಿಯಿಂದಲೂ ಬಂಡವಾಳ ನಿರ್ವಹಣೆಯೊಂದಿಗೆ ನೇರವಾಗಿ ಸಂಬಂಧಿಸಿದ ಎಲ್ಲರಿಂದಲೂ ಪ್ರತ್ಯೇಕವಾಗಿರುವುದು ? ಇದು ಒಟ್ಟಿನಲ್ಲಿ ಬಂಡವಾಳದದ ವಿಶಿಷ್ಟ ಲಕ್ಷಣವಾಗಿದೆ. ಸಾಮ್ರಾಜ್ಯವಾದವು ಅಥವಾ ಹಣಕಾಸು ಬಂಡವಾಳದ ಆಧಿಪತ್ಯವು ಬಂಡವಾಳವಾದದ ಎಂತಹ ಅತ್ಯುನ್ನತ ಘಟ್ಟವೆಂದರೆ ಅದರಲ್ಲಿ ಈ ಪ್ರತ್ಯೇಕತೆ ಅಪಾರ ಪ್ರಮಾಣಗಳನ್ನು ತಲುಪಿರುತ್ತದೆ. ಬಂಡವಾಳದ ಇತರೆಲ್ಲ ರೂಪಗಳಿಗೂ ಮೀರಿ ಹಣಕಾಸು ಬಂಡವಾಳದ ಸರ್ವೋಚ್ಚತೆ ಎಂದರೆ, ಲಾಭಾಂಶ ಜೀವಿಯ ಹಾಗೂ ಹಣಕಾಸು ಅಲಿಗಾರ್ಕಿಯ ಪ್ರಾಧಾನ್ಯ ಎಂದರ್ಥ; ಹಣಕಾಸು ರೀತ್ಯಾ "ಪ್ರಬಲ"ವಾದ ಸಣ್ಣ ಸಂಖ್ಯೆಯ ರಾಜ್ಯಗಳನ್ನು ಉಳಿದೆಲ್ಲ ರಾಜ್ಯಗಳ ಮಧ್ಯದಿಂದಲೂ ಪ್ರತ್ಯೇಕಗೊಳಿಸುವುದು, ಎಂದರ್ಥ. ಬಂಡವಾಳವಾದವು ಸರಕು ಉತ್ಪಾದನೆಯ ಬೆಳವಣಿಗೆಯ ಅತ್ಯುನ್ನತ ಘಟ್ಟ. ಆಗ ಶ್ರಮಶಕ್ತಿಯೇ ಒಂದು ಸರಕಾಗುತ್ತದೆ. ದೇಶದೊಳಗಿನ ವಿನಿಮಯದ ಬೆಳವಣಿಗೆಯು, ನಿರ್ದಿಷ್ಟವಾಗಿ ಅಂತರರಾಷ್ಟ್ರೀಯ ವಿನಿಮಯದ ಬೆಳವಣಿಗೆಯು, ಬಂಡವಾಳವಾದದ ವಿಶಿಷ್ಟ ಲಕ್ಷಣ. ಬಿಡಿ ಉದ್ಯಮಗಳ, ಬಿಡಿ ಕೈಗಾರಿಕಾ ಶಾಖೆಗಳ ಹಾಗೂ ಬಿಡಿ ದೇಶಗಳ ಅಸಮವಾದ ಹಾಗೂ ನೆಗೆತದ ರೀತಿಯಲ್ಲಿ ಆಗುವ ಬೆಳವಣಿಗೆಯು ಬಂಡವಾಳಶಾಹಿ ಪದ್ಧತಿಯಲ್ಲಿ ಅನಿವಾರ್ಯ. ಇಂಗ್ಲೆಂಡು ಬೇರೆ ಯಾವುದೇ ದೇಶಕ್ಕೆ ಮುನ್ನ ಬಂಡವಾಳಶಾಹಿ ದೇಶವಾಯಿತು. 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಅದು ಮುಕ್ತ ವ್ಯಾಪಾರವನ್ನು ಜಾರಿಗೆ ತಂದು ತಾನು "ಜಗತ್ತಿನ ಕರ್ಮಶಾಲೆ" ಎಂದೂ, ತಾನು ಎಲ್ಲ ದೇಶಗಳಿಗೂ ತಯಾರಿತ ವಸ್ತುಗಳನ್ನು ಸರಬರಾಜು ಮಾಡುತ್ತದೆಂದೂ ಆ ದೇಶಗಳೆಲ್ಲವೂ ವಿನಿಮಯವಾಗಿ ತನಗೆ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತಿರಬೇಕೆಂದೂ, ತನ್ನ ಹಕ್ಕು

ಪ್ರತಿಪಾದಿಸಿತು. ಆದರೆ 19ನೆಯ ಶತಮಾನದ ಕೊನೆಯ ಕಾಲುಭಾಗದಲ್ಲಿ ಈ ಏಕಸ್ವಾಮ್ಯ ಆಗಲೇ ಶಿಥಿಲಗೊಂಡಿದ್ದಿತು; ಏಕೆಂದರೆ, ಇತರ ಹಲವಾರು ದೇಶಗಳು "ರಕ್ಷಣಾತ್ಮಕ" ಸುಂಕಗಳ ಆಶ್ರಯ ಪಡೆದುಕೊಂಡು ಸ್ವತಂತ್ರ ಬಂಡವಾಳಶಾಹಿ ರಾಜ್ಯಗಳಾಗಿ ಬೆಳೆದವು. 20ನೆಯ ಶತಮಾನದ ಪ್ರಾರಂಭದಲ್ಲಿ ನಾವು ಒಂದು ಹೊಸ ಮಾದರಿಯ ಏಕಸ್ವಾಮ್ಯ ರೂಪುಗೊಂಡುದನ್ನು ಕಾಣುತ್ತೇವೆ: ಮೊದಲನೆಯದಾಗಿ, ಬಂಡವಾಳಶಾಹಿ ರೀತಿಯಲ್ಲಿ ವಿಕಾಸಗೊಂಡ ಎಲ್ಲ ದೇಶಗಳಲ್ಲೂ ಬಂಡವಾಳಗಾರರ ಏಕಸ್ವಾಮ್ಯ ಕೂಟಗಳು ರೂಪುಗೊಂಡಿವೆ; ಎರಡನೆಯದಾಗಿ, ಬಂಡವಾಳ ಸಂಚಯವು ಬೃಹತ್ ಪ್ರಮಾಣ ತಲುಪಿದಂಥ ಕೆಲವೇ ಅತ್ಯಂತ ಶ್ರೀಮಂತ ದೇಶಗಳು ಏಕಸ್ವಾಮ್ಯ ಸ್ಥಾನ ಪಡೆದುಕೊಂಡಿವೆ. ಮುಂದುವರಿದ ದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ "ಬಂಡವಾಳದ ಮಿಗುತಾಯ" ಉಂಟಾಗಿದೆ.

ಮ್ಯಾಕ್ಸಿಂ ಗಾರ್ಕಿ ಬರೆಯುತ್ತಾರೆ: ನನ್ನ ಮಟ್ಟಿಗೆ ಹೇಳುವುದಾದರೆ, ಮನುಷ್ಯನಿಂದ ಅತೀತವಾದ ಯಾವುದೊಂದು ಇಲ್ಲ. ನನಗೆ ಸಂಬಂಧಿಸಿ ಹೇಳುವುದಾದರೆ ಮನುಷ್ಯನೇ, ಮನುಷ್ಯನು ಮಾತ್ರವೇ ಪ್ರಕೃತಿಯ ಎಲ್ಲ ಶಕ್ತಿಗಳ ಭಾವೀ ಯಜಮಾನ; ಮನುಷ್ಯನು ಮಾತ್ರವೇ ಅದ್ಭುತಗಳ ಕರ್ತೃ. ಲೋಕದಲ್ಲಿ ಅತೀ ಸುಂದರವಾದ ವಸ್ತುಗಳೆಲ್ಲವೂ ಮನುಷ್ಯನ ಕೈಗಳ ಪರಿಶ್ರಮದಿಂದಲೇ ಸೃಷ್ಟಿಯಾಗಿವೆ. ಪರಿಶ್ರಮದ ಮೂಲಕವೇ ನಮ್ಮ ಆಶಯಗಳೆಲ್ಲವೂ ಜನ್ಮ ತಾಳಿರುತ್ತವೆ.

"ಪರಿಪಾವನವಾದ ಕಾರ್ಯಗಳ ಕುರಿತಾಗಿ ಹೇಳುವುದಾದರೆ, ಮನುಷ್ಯನಿಗೆ ತನ್ನ ಬಗೆಗೇ ಇರುವ ಅತೃಪ್ತಿಯನ್ನು ಪರಿಹರಿಸುವುದಕ್ಕೆ ಅವನು ನಡೆಸುವ ಪರಿಶ್ರಮವೇ ಜಗತ್ತಿನಲ್ಲಿ ಅತ್ಯಂತ ಪಾವನವಾದ ಕಾರ್ಯವಾಗಿದೆ. ತಾನೇ ಸೃಷ್ಟಿಸಿರುವ ಎಲ್ಲ ತರದ ಹೀನತೆಗಳೊಂದಿಗೂ ಅವನಿಗಿರುವ ದ್ವೇಷವು ಬಹಳ ಪವಿತ್ರವಾಗಿದೆ. ದುರಹಂಕಾರ, ಅಸೂಯೆ, ಕೊಲೆಪಾತಕತನ, ರೋಗ, ಯುದ್ಧ, ಮನುಷ್ಯರೊಳಗಿನ ಪರಸ್ಪರ ಶತ್ರುತ್ವ ಮೊದಲಾದವುಗಳನ್ನೆಲ್ಲ ನಿವಾರಣೆ ಮಾಡುವ ಅವನ ಆಗ್ರಹ ಪವಿತ್ರವಾಗಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವನ ಶ್ರಮವು ಪರಿಪಾವನವಾದುದಾಗಿದೆ." ಗಾರ್ಕಿಯವರ ಈ ಮಾತೇ ಮಾರ್ಕ್ಸ್‌ವಾದದ ಮಾತಾಗಿದೆ.

"ಈ ಪ್ರಶ್ನೆಯನ್ನು ಇನ್ನೂ ಸ್ಪಷ್ಟವಾದ ರೀತಿಯಲ್ಲಿ ವ್ಯಕ್ತಪಡಿಸಲು ಒಂದೇ ಒಂದು ಪ್ರಶ್ನೆ ಕೇಳಿದರೆ ಸಾಕು: ಇಲೆಕ್ಟ್ರಾನ್‌ಗಳೇ ಮೊದಲಾದವುಗಳು ಮನುಷ್ಯರ ಮನಸ್ಸಿನಿಂದ ಸ್ವತಂತ್ರವಾದ ವಸ್ತುನಿಷ್ಠ ಯಥಾರ್ಥಗಳಾಗಿ ಅಸ್ತಿತ್ವದಲ್ಲಿವೆಯೇ? ಇಲ್ಲವೆ? ಈ ಪ್ರಶ್ನೆಗೆ ವಿಜ್ಞಾನಿಗಳು ಸಂಶಯಕ್ಕೆ ಎಡೆಯಿಲ್ಲದಂತೆ ಉತ್ತರ ಕೊಡಬೇಕು. ಅವರು ನಿಸ್ಸಂಶಯವಾಗಿ "ಹೌದು" ಎಂದೇ ಉತ್ತರಕೊಡುತ್ತಾರೆ. ಮನುಷ್ಯರೂ ಸಮಸ್ತ ಜೀವಜಾಲವೂ ಉದ್ಭವಿಸಿದುದಕ್ಕಿಂತ ಎಷ್ಟೋ ಮೊದಲೇ ಪ್ರಕೃತಿಯು ಅಸ್ತಿತ್ವದಲ್ಲಿತ್ತು ಎಂದೂ ಅವರು ಒಪ್ಪುತ್ತಾರೆ. ಹೀಗಿರುವಾಗ ಈ ಪ್ರಶ್ನೆಗೆ ಬರುವ ಉತ್ತರವು ಭೌತಿಕವಾದವನ್ನು ಸಮರ್ಥಿಸುತ್ತದೆ" ಹೊರತು ನಿಷೇಧಿಸುವುದಿಲ್ಲ. "ವಸ್ತುಗಳ ಸತ್ವ ಅಥವಾ ಅಂತಸ್ಸಾರ ಸಾಪೇಕ್ಷವಾಗಿದೆ. ವಸ್ತುವಿಗೆ ಸಂಬಂಧಿಸಿ ಮನುಷ್ಯನು ಹೊಂದಿರುವ ಜ್ಞಾನದ ಮಟ್ಟವನ್ನು ಮಾತ್ರ ಅದು ಬಹಿರಂಗ ಪಡಿಸುತ್ತದೆ. ಈ ಜ್ಞಾನದ ಆಳ ನಿನ್ನೆ ಪರಮಾಣುವಿಗಿಂತ ಆಚೆಗೆ ಹೋಗಿರಲಿಲ್ಲ. ಇಂದು ಅದು ಇಲೆಕ್ಟ್ರಾನ್ ಹಾಗೂ ತರಂಗಗಳಿಗಿಂತ ಮುಂದೆ ಹೋಗಿಲ್ಲ. ಪ್ರಗತಿ ಹೊಂದುತ್ತಿರುವ ಮನುಷ್ಯನು ಪ್ರಕೃತಿಗೆ ಸಂಬಂಧಿಸಿ ಪಡೆದಿರುವ

ಜ್ಞಾನದ ಒಂದೊಂದು ಮೆಟ್ಟಲೂ ಸಾಪೇಕ್ಷವಾಗಿರುತ್ತದೆ ಹಾಗೂ ತಾತ್ಕಾಲಿಕವಾಗಿರುತ್ತದೆ. ಧ್ವಂದ್ವಮಾನ ಭೌತಿಕವಾದ ಹಾಗೆ ಒತ್ತಿ ಹೇಳುತ್ತದೆ. ಪರಮಾಣುವಿನಂತೆಯೇ ಇಲೆಕ್ಟ್ರಾನ್ ಕೂಡ ಅಪಾರವಾಗಿದೆ, ಪ್ರಕೃತಿ ಅನಂತವಾಗಿದೆ. ಮಾತ್ರವಲ್ಲ ಅದು ಅನಂತವಾಗಿಯೇ ಉಳಿಯುತ್ತದೆ. ಮನುಷ್ಯನ ಮನಸ್ಸಿನಿಂದಲೂ ವೀಕ್ಷಣೆಗಳಿಂದಲೂ ಸ್ವತಂತ್ರವಾಗಿ ಪ್ರಕೃತಿ ನೆಲೆ ನಿಲ್ಲುತ್ತದೆ. ಈ ಯಥಾರ್ಥವನ್ನು ನಿಷೇಧಕ್ಕೆ ಎಡೆಯಿಲ್ಲದೆಯೂ ಉಪಾಧಿರಹಿತವಾಗಿಯೂ ಮಾರ್ಕ್ಸ್‌ವಾದ ಅಂಗೀಕರಿಸುತ್ತದೆ ಎನ್ನುವುದರಿಂದಲೇ ಅದು ಆಧ್ಯಾತ್ಮಿಕವಾದದಿಂದ ಪ್ರತ್ಯೇಕಿಸಲ್ಪಡುತ್ತದೆ." (ಮೆಟೀರಿಯಲಿಸಂ ಎಂಡ್ ಎಂಪೀರಿಯೋ ಕ್ರಿಟಿಸಿಸಂ.) ಬೂರ್ಜ್ವಾಗಳ ಕುರಿತು ಮಾರ್ಕ್ಸವಾದವು ವಿಭಿನ್ನವಾದ ನಿಲುವನ್ನು ತಳೆದಿದೆ. ಬೂರ್ಜ್ವಾವರ್ಗವು ತನಗೆ ಬೇಕಾದಂತೆ ಸವಲತ್ತನ್ನು ಬಳಸಿಕೊಳ್ಳುತ್ತದೆ. ಮತ್ತು ಕಾರ್ಮಿಕ ವರ್ಗವನ್ನು ಬಳಸಿಕೊಳ್ಳುತ್ತದೆ. ಆದರೂ ಇದು ಕುತೂಹಲದಾಯಕ ಸಂಗತಿ.ಯಾಕೆಂದರೆ ಬೂರ್ಜ್ವಾಗಳ ಮನೋಸ್ಥಿತಿಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಬೂರ್ಜ್ವಾ ಪದವು ಫ್ರೆಂಚ್ ಮೂಲದಿಂದ ಬಂದಿದೆ. ಬರ್ಗೆಸ್‌ಗೆ ಸೀಮಿತವಾದ ಅರ್ಥವಿದೆ. ಬೂರ್ಜ್ವಾ ವರ್ಗವನ್ನು ನಾವು ಕೇವಲ ಮಧ್ಯಮ ವರ್ಗಕ್ಕೆ ಸೇರಿಸಲು ಬರುವುದಿಲ್ಲ. ಅನೇಕ ಸಂದರ್ಭದಲ್ಲಿ ಇದನ್ನು ಅಸ್ಪಷ್ಟವಾಗಿಯೂ ಬಳಸಲಾಗಿದೆ.ಹಾಗೂ ಇದು ಬೇರೆ ಬೇರೆ ಸನ್ನಿವೇಶದಲ್ಲಿ ಬೇರೆ ಬೇರೆ ಅರ್ಥವನ್ನೂ ಕೊಟ್ಟಿದೆ. ಅನೇಕ ಸಂದರ್ಭದಲ್ಲಿ ಬೂರ್ಜ್ವಾ ಎನ್ನುವುದನ್ನು ಅಸ್ಪಷ್ಟವಾಗಿಯೂ ಬಳಸಿದ್ದೂ ಇದೆ. ಇದು ಮಧ್ಯಮ ವರ್ಗದ ಚಲನರಾಹಿತ್ಯ ಸ್ಥಿತಿಯನ್ನೂ ಸೂಚಿಸುತ್ತದೆ. ಇದು ಜುಡಿಶಿಯಲ್ ಕೆಟಗರಿಯನ್ನೂ ಸೂಚಿಸುತ್ತದೆ. ಬೂರ್ಜ್ವಾವರ್ಗಕ್ಕೆ ನಿರ್ದಿಷ್ಟವಾದ ಉದ್ಯೋಗವೆನ್ನುವುದೂ ಇಲ್ಲ. ಅಂದರೆ ಈ ವರ್ಗವು ಅನೇಕ ಸಂದರ್ಭದಲ್ಲಿ ಹೊಸ ಹೊಸ ಅರ್ಥವನ್ನೂ ಸೂಚಿಸಿರುವುದೂ ನಿಜ. ಬೂರ್ಜ್ವಾ ವರ್ಗಗಳು ಒಂದು ಸನ್ನಿವೇಶದಲ್ಲಿ ಯಾವುದೇ ರಾಜಕೀಯವಾದ ನಿಲುವನ್ನು ತೆಗೆದುಕೊಂಡಿರಲಿಲ್ಲ. ಮಾರ್ಕ್ಸವಾದದಲ್ಲಿ ಬೂರ್ಜ್ವಾ ಎನ್ನುವ ಪದವು ಕೇಂದ್ರ ಪರಿಭಾಷೆಯಾಗಿ ಬಳಕೆಗೆ ಬಂದಿದೆ. ಹೊಸತಾಗಿ ಉದಯವಾದ ಸಿವಿಲ್ ಸೊಸೈಟಿಯಲ್ಲಿ ಒಂದು ಅನುಮಾನವನ್ನು ಹುಟ್ಟಿಸುವ ನಿಲುವನ್ನು ಯಾವ ವರ್ಗವು ತೆಗೆದುಕೊಂಡಿತೋ ಅದನ್ನು ಬೂರ್ಜ್ವಾ ಎನ್ನುವ ಪದವು ಸಂಕೇತಿಸಿತು. ಮಾರ್ಕ್ಸ ಇದನ್ನು ತನ್ನ ರಾಜಕೀಯ ಸಿದ್ಧಾಂತದಲ್ಲಿ ಚರ್ಚಿಸಿದ್ದಾನೆ. ಬೂರ್ಜ್ವಾ ಎನ್ನುವುದನ್ನು ವಿಶ್ವಾತ್ಮಕ ಮಾಡಲಾಗಿದೆ ಮಾರ್ಕ್ಸ ಹೇಳುತ್ತಾನೆ. ಅವನ ಪ್ರಕಾರ ಬೂರ್ಜ್ವಾ ಎನ್ನುವುದಕ್ಕೂ ಸಿವಿಲ್ ಸೊಸೈಟಿಗೂ ಸಂಬಂಧವೇ ಇಲ್ಲ. ಬೂರ್ಜ್ವಾ ಎನ್ನುವುದು ಅನೇಕ ರೀತಿಯಲ್ಲಿ ಕೆಲಸವನ್ನು ಮಾಡುತ್ತದೆ. ಬಂಡವಾಳ ಜಗತ್ತಿನಲ್ಲಿ ಈ ಪರಿಕಲ್ಪನೆಯು ಬೇರೆ ಬೇರೆ ಹಂತಗಳನ್ನು ಸೂಚಿಸುತ್ತದೆ. ಬೂರ್ಜ್ವಾ ಎನ್ನುವುದು ಆರ್ಥಿಕವಾಗಿ ಒಂದು ವರ್ಗವಾಗಿದೆ. ಆದರೆ ಇದುವೇ ಆಲೋಚನೆಯ ಕ್ರಮ ಕಡೆಗೆ ಬರುವಾಗ ಇದರ ಅರ್ಥವು ಬೇರೆಯಾಗುತ್ತದೆ. ಆಲೋಚನೆಯಲ್ಲಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗವರನ್ನು ಮಾರ್ಕ್ಸವಾದವು ಬೂರ್ಜ್ವಾ ವರ್ಗವೆಂದು ಕರೆಯುತ್ತದೆ. ಹಾಗೆಯೇ ಯಾವ ವರ್ಗವು ಯಾವುದೇ ಸಂವೇದನೆಯನ್ನು ಪಡೆದುಕೊಳ್ಳುವುದಿಲ್ಲವೋ ಅದನ್ನು ಬೂರ್ಜ್ವಾ ವರ್ಗವೆಂದು ಹೇಳುತ್ತದೆ. ತಾತ್ವಿಕವಾಗಿ ಯಾವುದು ತನ್ನನ್ನು ರಾಜಕೀಯುವಾಗಿ ಗುರುತಿಸಿಕೊಳ್ಳಲು ಇಷ್ಟ ಪಡುವುದಿಲ್ಲವೋ ಅದನ್ನೂ ಬೂರ್ಜ್ವಾ

ಎಂದು ಕರೆಯುತ್ತಾರೆ. ಕಲೆಯು ಕೂಡಾ ಅನೇಕ ಸಂದರ್ಭದಲ್ಲಿ ಬೂರ್ಜ್ವಾ ಆಗುವುದೂ ಇದೆ. ಯಾಕೆಂದರೆ ಅದು ಯಾವುದೇ ನಿಲುವಿಗೆ ಬದ್ಧವಾಗಿರುವುದೂ ಇಲ್ಲ. ಈ ದೃಷ್ಟಿಯಿಂದ ಬೂರ್ಜ್ವಾ ಎನ್ನುವುದು ಅತ್ಯಂತ ಸಂಕೀರ್ಣ ಪದವಾಗಿದೆ. ಮಾರ್ಕ್ಸವಾದಿಗಳು ಈ ಪದವನ್ನು ಚಾರಿತ್ರಿಕ ಅಗತ್ಯಕ್ಕೆ ಅನುಗುಣವಾಗಿ ಬಳಸಲಾಗಿದೆ ಎಂದು ಹೇಳುತ್ತಾರೆ. ಇದನ್ನು ಬಳಸುವ ಕ್ರಮಕ್ಕೆ ಅನುಸಾರವಾಗಿ ಇದರ ಅರ್ಥವು ಬೇರೆಯಾಗುತ್ತದೆ ಎಂದು ಮಾರ್ಕ್ಸವಾದಿಗಳು ಹೇಳುತ್ತಾರೆ. ಕೆಲವು ಸಂದರ್ಭದಲ್ಲಿ ಈ ಪದವು ವ್ಯಕ್ತಿ ಕೇಂದ್ರಿತವಾಗಿಯೂ ಬಳಕೆಯಾಗುತ್ತದೆ. ಇನ್ನು ಅನೇಕ ಸಂದರ್ಭದಲ್ಲಿ ಇದು ಅರೆ ರಾಷ್ಟ್ರೀಯತೆಯನ್ನು ಸೂಚಿಸುತ್ತದೆ. ಇದಕ್ಕೆ ಸಂಬಂಧ ಪಟ್ಟಂತೆ ಮತ್ತೊಂದು ಸಮಸ್ಯೆಯಿದೆ–ಅದು ನಗರ ಮತ್ತು ಹಳ್ಳಿ ಎಂಬ ಅರ್ಥದಲ್ಲಿಯೂ ಬಳಕೆಯಾಗಿದೆ. ಸಾಮಾಜಿಕ ವರ್ಗವಾಗಿಯೂ ಇದನ್ನು ಬಳಸುತ್ತಾರೆ. ಬೂರ್ಜ್ವಾಗಳು ಸಾಮಾಜಿಕ ಸಂಗತಿಗಳನ್ನು ನಿಯಂತ್ರಣ ಮಾಡಲು ಇಷ್ಟ ಪಡುತ್ತಾರೆ. ಆದರೆ ಅವರಿಗೆ ನಾಯಕತ್ವದ ಗುಣವಿಲ್ಲವೆಂದು ಲುಕಾಕ್ಸ್ ಹೇಳುತ್ತಾನೆ. ಆದರೆ ಅಧಿಕಾರಶಾಹಿ ಅಥವಾ ಆಢಳಿತಶಾಹಿ ಅನ್ನುವುದು ತುಂಬಾ ಮಹತ್ವದ ಜಾಗವನ್ನು ಪಡೆದುಕೊಂಡಿರುವುದು ಹತ್ತೊಂಬತ್ತನೆಯ ಶತಮಾನದ ಅನಂತರ. ಇಂಗ್ಲಿಷಿನಲ್ಲಿ ಇದನ್ನು ಬ್ಯೂರೋಕ್ರಟ್ ಎಂದು ಕರೆಯುತ್ತಾರೆ. ಇದು ಪ್ರೆಂಚ್‌ನಿಂದ ಕನ್ನಡಕ್ಕೆ ಬಂತು. ಬ್ಯೂರೋ ಅಂದರೆ ಕಚೇರಿಯಲ್ಲಿ ಕುಳಿತು ಬರೆಯುವ ಡೆಸ್ಕ್ ಎನ್ನುವ ಅರ್ಥವಿದೆ. ಅನಂತರ ಇದು ಇಂಗ್ಲಿಷಿಗೆ ಬಂದಾಗ ಅರ್ಥವು ಬೇರೆಯಾಯಿತು. ಸರಕಾರ ಮತ್ತು ಜನತೆಯ ಮಧ್ಯೆ ಇರುವ ಒಂದು ವರ್ಗವನ್ನು ಅಧಿಕಾರಶಾಹಿ ಎಂದು ಕರೆಯುತ್ತಾರೆ. ಇದು ವಾಸ್ತವವಾಗಿ ಒಂದು ವರ್ಗ ಮಾತ್ರವೇ ಅಲ್ಲ ಜನ ಮತ್ತು ಸರಕಾರದ ನಡುವಣ ಒಂದು ಸಾಂಸ್ಥಿಕ ರೂಪವೂ ಹೌದು.ಸಾರ್ವಜನಿಕ ಮತ್ತು ಸಿವಿಲ್ ಸೇವೆಯ ನಡುವೆ ಇರುವ ಈ ವರ್ಗವು ಸರಕಾರದ ಚಟುವಟಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ನಗರ ಎಂದರೆ ಪಟ್ಟಣವಲ್ಲ. ಇದು ಇಂಗ್ಲೀಷಿನಲ್ಲಿ ವಿಶಿಷ್ಟವಾದ ಅರ್ಥವನ್ನು ಪಡೆದುಕೊಂಡಿದೆ. ಕೈಗಾರಿಕಾ ಕ್ರಾಂತಿಯ ತರುವಾಯ ಇದರ ಅರ್ಥವು ಭಿನ್ನವಾಯಿತು. ಫ್ರೆಂಚಿನಲ್ಲಿ ಸೈಟೆ ಎಂದೂ ರೋಮನ್‌ನಲ್ಲಿ ಸಿವಿಟಸ್ ಎಂಬ ಪ್ರಯೋಗಗಳಿವೆ. ಸಿವಿಸ್ ಎಂದರೆ ಸಿಟಿಜನ್ ಎಂಬ ಅರ್ಥವಿದೆ. ಇದು ನಾಗರಿಕ ಎಂಬುದರ ರೂಪ.ಕಟ್ಟಡಗಳ ಗುಂಪನ್ನು ಸಿಟಿ ಎಂದು ಕರೆಯುತ್ತಾರೆ. ಹಣಕಾಸು ಮತ್ತು ವ್ಯಾಪಾರ ಉದ್ದಿಮೆಗಳ ಕೇಂದ್ರವೇ ನಗರ. ಇದು ಜೀವನ ಕ್ರಮದ ಮೇಲೆ ಪ್ರಭಾವವನ್ನು ಬೀರುತ್ತದೆ. ಇದು ಪ್ರಭುತ್ವದ ಸಾಧನೆಯನ್ನು ಸೂಚಿಸುತ್ತದೆ. ಇದನ್ನು ಪ್ರಭುತ್ವದ ಸಾಂಸ್ಥಿಕ ವಿವರಣೆಯನ್ನು ನೀಡುತ್ತದೆ. ಪರಿಕಲ್ಪನಾತ್ಮಕವಾಗಿ ಇದು ತುಂಬಾ ಸಂಕೀರ್ಣವಾದ ಪದವಾಗಿದೆ. ಸಿವಿಲೈಸ್ ಎನ್ನುವುದರಿಂದ ಇದು ಬಂತು. ಲ್ಯಾಟಿನಿನಲ್ಲಿ ಸಿವಿಸ್ ಎಂದರೆ ನಾಗರಿಕ ಎಂದು ಅರ್ಥ. ಅನಂತರ ಇದನ್ನು ಹೊಂದಾಣಿಕೆ ಮಾಡಲಾಯಿತು. ಸಿವಿಲಿಟಿ ಎಂದರೆ ಕಮ್ಯುನಿಟಿ ಅಥವಾ ಜನಾಂಗವೆಂಬ ಅರ್ಥವಿದೆ. ಪ್ರಭುತ್ವದ ಸಾಮಾಜಿಕ ನಿಯಮಗಳನ್ನು ಇದು ಸೂಚಿಸುತ್ತದೆ. ಚರಿತ್ರೆಕಾರರು ಇದನ್ನು ವಿವರಿಸಿದ ಕ್ರಮಗಳು ಬೇರೆ. ಪುನರುಜ್ಜೀವನ ಕಾಲದ ಜೀವನದ ಸ್ಥಿತಿಯನ್ನು ಇದು ಸಂಕೇತಿಸುತ್ತದೆ. ಇದು ಬಾರ್ಬೆರಿಕ್ ಸಂಸ್ಕೃತಿಯಿಂದ ಭಿನ್ನವೆಂದು ಸೂಚಿಸಲು ಬಳಕೆಯಾಗಿದೆ. ನಾಗರಿಕತೆಯೆನ್ನುವುದು ಹೆಚ್ಚು ಪ್ರಗತಿಪರವೆಂದು ಹೇಳಲಾಯಿತು. ಇದು ಆಧುನಿಕ ಚರಿತ್ರೆಯ ಬೆಳವಣಿಗೆಯನ್ನು ಸೂಚಿಸುತ್ತದೆ. ಮನುಷ್ಯನ

ಅಭಿವೃದ್ಧಿ ಮತ್ತು ಜೀವನ ಕ್ರಮಗಳ ನಿರೂಪಣೆಯನ್ನು ಇದು ಮಾಡುತ್ತದೆ. ಹದಿನೆಂಟನೆಯ ಶತಮಾನದ ಅನಂತರ ರೂಪಿತವಾದ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಇದು ಹೇಳುತ್ತದೆ. ಹಾಗೆಯೇ ಇದು ಜ್ಞಾನ ರೂಪಗಳಲ್ಲಿ ಉಂಟಾದ ಬದಲಾವಣೆಯನ್ನು ಹೇಳುತ್ತದೆ. 1830ರಲ್ಲಿ ಮಿಲ್ ಕೊಲ್‌ರಿಜ್ ಕುರಿತು ಬರೆಯುವಾಗ ನಾಗರಿಕತೆಯ ಪೊಸಿಟಿವ್ ಮತ್ತು ನೆಗೆಟಿವ್ ದೃಷ್ಟಿಕೋನಗಳನ್ನು ಹೇಳುತ್ತಾನೆ. ಜೀವನಕ್ಕೆ ಹೆಚ್ಚಿನ ಸುಖವನ್ನು ಇದು ನೀಡುತ್ತದೆ ಎನ್ನುವುದು ಅವನ ಅಭಿಪ್ರಾಯ. ಇದು ಅಭಿವೃದ್ಧಿಯನ್ನು ಹೇಳುತ್ತದೆ. ನಾಗರಿಕತೆಯು ಜ್ಞಾನವನ್ನು ನಿರೂಪಿಸುತ್ತದೆ. ಮಾಟ, ದೆವ್ವ ಮುಂತಾದ ಕಲ್ಪನೆಗಳನ್ನು ಇದು ನಿರಾಕರಿಸುತ್ತದೆ.ಅನೇಕ ಸೌಲಭ್ಯವನ್ನು ನೀಡುತ್ತದೆ. ಜನರ ನಡವಳಿಕೆಯಲ್ಲಿ ಇದು ಹೊಸತನವನ್ನು ಸೂಚಿಸುತ್ತದೆ. ಯುದ್ಧಗಳನ್ನು ಹಾಗೂ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಘರ್ಷವನ್ನು ದೂರ ಮಾಡುತ್ತದೆ. ಇದರ ಋಣಾತ್ಮಕ ಅಂಶಗಳನ್ನು ಹೀಗೆ ಸೂಚಿಸಬಹುದು–ಇದು ಮನುಷ್ಯರ ದುರಾಸೆಗಳನ್ನು ಹೆಚ್ಚು ಮಾಡುತ್ತದೆ. ಯಾಂತ್ರಿಕತೆಯು ಹೆಚ್ಚು ಮಾಡುತ್ತದೆ. ಅಸಮತೆಯು ಪ್ರಾರಂಭವಾಗುತ್ತದೆ. ಶ್ರೀಮಂತರು ಮತ್ತು ಬಡವರು ಅನ್ನುವ ತಾರತಮ್ಯವು ಹೆಚ್ಚುತ್ತದೆ. ಈ ದೃಷ್ಟಿಯಿಂದ ನಾಗರಿಕತೆಯ ಫಲಿತಗಳು ಯಾವಾಗಲೂ ಸಂಮ್ಮಿಶ್ರವಾಗಿರುತ್ತದೆ. ಪಶ್ಚಿಮ ನಾಗರಿಕತೆ, ಆಧುನಿಕ ನಾಗರಿಕತೆ, ಕೈಗಾರಿಕಾ ನಾಗರಿಕತೆ,ವೈಜ್ಞಾನಿಕ ನಾಗರಿಕತೆ, ಆಧುನಿಕ ನಾಗರಿಕತೆ ಎಂದು ವರ್ಗೀಕರಣವನ್ನು ಮಾಡುತ್ತಾರೆ. ಸಾಮಾಜಿಕ ವರ್ಗಿಕರಣದಲ್ಲಿ ಇನ್ನು ಸುಲಭವಾಗಿ ಸೂಚಿಸಲು ಬರುವುದಿಲ್ಲ. ಲ್ಯಾಟಿನಿನ ಕ್ಲಾಸಿಸ್ ಎನ್ನುವುದರಿಂದ ಇದು ಬಂದಿದೆ. ಇದು ಸಾಮಾಜಿಕ ವರ್ಗೀಕರಣವನ್ನು ಸೂಚಿಸುವುದೂ ನಿಜ. ರೋಮನ್ ಚರಿತ್ರೆಯಲ್ಲಿ ಕ್ಲಾಸಿಸ್ ಎಂದರೆ ಚರ್ಚಿನ ಸಂಘಟನೆಯೆಂದು ಅರ್ಥ. ಹದಿನೇಳನೆಯ ಶತಮಾನದಲ್ಲಿ ಇಂಗ್ಲಿಷಿನಲ್ಲಿ ಕ್ಲಾಸ್ ಎಂದರೆ ಯಾರು ಶಿಕ್ಷಣವನ್ನು ಪಡೆದಿದ್ದಾರೋ ಅವರ ಸಮೂಹ ಎನ್ನುವ ಅರ್ಥವು ಬಂದಿತು. ಅನಂತರ ಇದು ಗುಂಪು ಅಥವಾ ವರ್ಗೀಕರಣವೆನ್ನುವ ಪರಿಕಲ್ಪನೆಯು ಬಂದಿತು. ಸಸ್ಯವರ್ಗ, ಪ್ರಾಣಿವರ್ಗ ಎನ್ನುವುದು ಬಂದಿರುವುದು ಅನಂತರ. ಕ್ಲಾಸ್ ಎಂದರೆ ಜನರ ನಡುವಣ ಗುಂಪು ಎಂಬ ಅರ್ಥಲ್ಲಿ ಹೇಳುತ್ತೇವೆ. ಮಧ್ಯಮ ವರ್ಗ, ಮೇಲು ವರ್ಗ, ಕಾರ್ಮಿಕ ವರ್ಗ ಎನ್ನುವ ಅರ್ಥಗಳಲ್ಲಿ ಬಳಸುತ್ತೇವೆ. ಕೈಗಾರಿಕೀರಣದ ಅನಂತರ ಇದರ ಅರ್ಥವು ಭಿನ್ನವಾಯಿತು. ಅಂದರೆ 1770 ಮತ್ತು 1840ರ ಸುಮಾರಿಗೆ ಇದರ ಸ್ವರೂಪವು ಬದಲಾಯಿತು. ವರ್ಗವೆಂದರೆ ಒಂದು ವಿಶಿಷ್ಟವಾದ ಗುಂಪು. ಇದು ಸಮಾಜದ ರಚನೆಯನ್ನು ಸೂಚಿಸುತ್ತದೆ. ವರ್ಗ ಎನ್ನುವುದಕ್ಕೆ ಆರ್ಥಿಕ ವಿವರಣೆಯೂ ಇದೆ. ಇದರಲ್ಲಿ ಸ್ಥಾನಮಾನ,ತಾರತಮ್ಯ, ಮೊದಲಾದವುಗಳು ಸೇರಿಕೊಂಡಿವೆ. ವರ್ಗದ ಚರಿತ್ರೆಯನ್ನು ಗಮನಿಸಿದರೆ ಅದು ತನ್ನ ಹಳೆಯ ಅರ್ಥವನ್ನು ಬಿಟ್ಟಿದೆ. ಹಳೆಯ ಸಾಮಾಜಿಕ ವರ್ಗೀಕರಣಗಳು ಬದಲಾಯಿತು. ಹಳೆಯ ಸಾಮಾಜಿಕ ಅರ್ಥದಲ್ಲಿ ಕ್ಲಾಸ್ ಎನ್ನುವುದು ಆಯಾ ಹುಟ್ಟಿಗೆ ಸಂಬಂಧ ಪಟ್ಟಿದ್ದರೆ ಹೊಸ ವ್ಯವಸ್ಥೆಯಲ್ಲಿ ಸಾಮಾಜಿಕ ಚಲನೆಯನ್ನು ಸೂಚಿಸುತ್ತದೆ. ಇದು ವ್ಯಕ್ತಿಯ ಪ್ರಜ್ಞೆಯನ್ನು ಸೂಚಿಸುತ್ತದೆ. ಇದಕ್ಕೆ ಕಾರಣ ಕೈಗಾರಿಕಾ ಕ್ರಾಂತಿ. ಕೈಗಾರಿಕಾ ಕ್ರಾಂತಿಯಿಂದ ಹುಟ್ಟಿಕೊಂಡ ಒಂದು ಗುಂಪನ್ನು ಕ್ಲಾಸ್ ಎಂದು ಗುರುತಿಸಲಾಯಿತು. ಇದು ಬರಿಯ ಸಾಮಾಜಿಕ ವರ್ಗವೇ ಆಗಿರಲಿಲ್ಲ, ಹೊಸತೊಂದು ಕಾರ್ಯವನ್ನು ಇದು ಸೂಚಿಸಿತು. ಕ್ಲಾಸ್ ಅನ್ನುವುದು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ

ಹಕ್ಕುಗಳನ್ನು ಸೂಚಿಸುತ್ತದೆ. ಕ್ಲಾಸನ್ನು ಮತ್ತೊಂದು ರೀತಿಯಲ್ಲಿಯೂ ವಿವರಿಸಲಾಗಿದೆ–ಅದೆಂದರೆ ಉತ್ಪಾದನೆ ಮತ್ತು ಅದರ ಹಂಚಿಕೆಗೆ ಸಂಬಂಧ ಪಟ್ಟದ್ದು. ಸಾಮಾಜಿಕ ಅಭಿವ್ಯಕ್ತಿ ಮತ್ತು ಸಾಮಾಜಿಕ ಉಪಯೋಗವನ್ನು ಇದು ವಿವರಿಸುತ್ತದೆ. ಕಾರ್ಮಿಕರು,ಕುಶಲ ಕರ್ಮಿಗಳು, ವ್ಯಾಪಾರಿಗಳು ಮುಂತಾದ ಸಂಗತಿಗಳನ್ನು ಕ್ಲಾಸ್ ವಿವರಿಸುತ್ತದೆ. ಅರ್ಚಕರು, ಸಾರ್ವಜನಿಕ ಗುಂಪು, ಧಾರ್ಮಿಕ ಮಧ್ಯವರ್ತಿಗಳು ಮುಂತಾದವರನ್ನು ಒಟ್ಟಾಗಿ ಜನರು ಎಂದು ಕರೆಯುತ್ತಿದ್ದರು. ಆದರೆ ಇವರು ಉನ್ನತ ದರ್ಜೆಯ ಜನರಾಗಿರಲಿಲ್ಲ. 1790–1830ರ ಕಾಲದಲ್ಲಿ ಮಧ್ಯಮ ವರ್ಗ ಮತ್ತು ಕಾರ್ಮಿಕ ವರ್ಗ ಎನ್ನುವ ಪರಿಕಲ್ಪನೆಯು ಬಂತು. ಈ ವರ್ಗೀಕರಣವು ಮುಖ್ಯವಾಗಿ ಕೆಳವರ್ಗ, ಮಧ್ಯಮ ವರ್ಗ, ಉನ್ನತ ವರ್ಗವೆಂಬ ಕಲ್ಪನೆಗಳಿಗೆ ಕಾರಣವಾಯಿತು. "ಈ ಗುಂಪಿನಲ್ಲಿ ಒಡೆತನವಿರುವ ರೈತರು, ಒಡೆಯಕುಶಲಕರ್ಮಿಗಳು ಸಣ್ಣ ವ್ಯಾಪರಸ್ತರು ಹಾಗೂ ಬುದ್ಧಿ ಜೀವಿಗಳ ಕೆಳಸ್ತರಗಳಾದ ವಿದ್ಯಾರ್ಥಿಗಳು, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರು, ಕೆಳಸ್ತರದ ಸರ್ಕಾರಿ ಸಿಬ್ಬಂದಿ, ಕಛೇರಿ ಗುಮಾಸ್ತರು, ಮತ್ತು ಪುಟ್ಟ ಲಾಯರ್‌ಗಳು ಒಳಪಡುತ್ತಾರೆ. ಇದರ ಸಂಖ್ಯೆ ಮತ್ತು ವರ್ಗ ಸ್ವಭಾವಗಳಿಂದಾಗಿ ಇವಕ್ಕೆ ವಿಶೇಷ ಗಮನ ನೀಡಬೇಕು.

"ನಾವು ಹಣವನ್ನು ಪರಿಗಣಿಸಿದಲ್ಲಿ, ಅದರ ಅಸ್ತಿತ್ವವೇ ಸರಕುಗಳ ವಿನಿಯಮದಲ್ಲಿ ಒಂದು ನಿರ್ದಿಷ್ಟ ಘಟ್ಟವನ್ನು ಸೂಚಿಸುತ್ತದೆ, ಸರಕುಗಳಿಗೆ ಕೇವಲ ಸಮಾನ ವಸ್ತುವಾಗಿ, ಅಥವಾ ಚಲಾವಣೆಯ ಸಾಧನವಾಗಿ ಅಥವಾ ಪ್ರತಿಫಲ ನೀಡಿಕೆಯ ಸಾಧನವಾಗಿ, ಕೂಡಿಟ್ಟ ರಾಶಿಯಾಗಿ ಅಥವಾ ಸಾರ್ವತ್ರಿಕ ನಾಣ್ಯವಾಗಿ ಹಣವು ನೆರವೇರಿಸುವ ನಿರ್ದಿಷ್ಟ ಕ್ರಿಯೆಗಳು. ಆ ಒಂದಲ್ಲ ಒಂದು ಕ್ರಿಯೆಯ ವ್ಯಾಪ್ತಿ ಹಾಗೂ ತುಲನಾತ್ಮಕ ಪ್ರಾಧಾನ್ಯಕ್ಕನುಗುಣವಾಗಿ, ಸಾಮಾಜಿಕ ಉತ್ಪಾದನೆಯ ಪ್ರಕ್ರಿಯೆಯಲ್ಲಿ ತೀರ ವಿಭಿನ್ನ ಘಟ್ಟಗಳನ್ನು ಸೂಚಿಸುತ್ತವೆ." (ಬಂಡವಾಳ" ಸಂ 1.)

ಈಗ ಚರ್ಚೆಯಾಗುತ್ತಿರುವ ಹಣಕಾಸು ಮತ್ತು ಬಂಡವಾಳವಾದ ಪ್ರಶ್ನೆಯು ಸಂಕೀರ್ಣವಾಗಿದೆ. ಹಾಗೆಯೇ ಯಾವುದೇ ರಾಜಕಾರಣಿಯನ್ನು ಕೇಳಿದರೂ ಅಭಿವೃದ್ಧಿಯ ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತಾರೆ. ಹಾಗೆ ನೋಡುವುದಿದ್ದರೆ ಆರ್ಥಿಕ ಸಂರಚನೆಗೂ ಅಭಿವೃದ್ಧಿಗೂ ಅನೇಕ ರೀತಿಯ ಹೊಕ್ಕು ಬಳಕೆಯ ಸಂಬಂಧ. ಒಂದನ್ನು ಬಿಟ್ಟು ಮತ್ತೊಂದು ಇರುವುದಿಲ್ಲ. ಈ ದೃಷ್ಟಿಯಿಂದ ಬಂಡವಾಳವಾದ ಕೆಲವು ಸಂದರ್ಭದಲ್ಲಿ ತನ್ನ ಹಿತ ದೃಷ್ಟಿಯಿಂದ ರಾಜಕೀಯವನ್ನು ಆಶ್ರಯಿಸುತ್ತದೆ. ಬಂಡವಾಳ ವಾದಕ್ಕೆ ಬೇಕಾಗುವುದು ಲಾಭ. ಹಾಗೂ ರಾಜಕಾರಣಕ್ಕೂ ಬೇಕಾಗಿರುವುದು ಅಧಿಕಾರದ ಶಕ್ತಿ. ಅನೇಕ ಸಂದರ್ಭದಲ್ಲಿ ಲಾಭವನ್ನು ಲೆಕ್ಕ ಹಾಕುವಾಗ ಕೂಲಿಯು ಎಷ್ಟು ಖರ್ಚಾಯಿತು ಎಂದು ಲೆಕ್ಕ ಹಾಕುವ ಕ್ರಮವಿದೆ. ಆದರೆ ಕೂಲಿಗಳಿಗೆ ಕೊಡುವ ಬಟವಾಡೆಗೂ ಅವರ ದುಡಿಮೆಗೂ ಸಂಬಂಧವೇ ಇಲ್ಲ. ಇದಕ್ಕೆ ಒಂದು ನಿದರ್ಶನವೆಂದರೆ ಆಗ ಈಸ್ಟ್ ಇಂಡಿಯಾ ಕಂಪೆನಿಯು ಭಾರತದಲ್ಲಿ ಪಡೆದ ಲಾಭ. ಆಗಿನ ಸಂದರ್ಭದಲ್ಲಿ ಕೂಲಿಯು ಬಹಳ ಕಡಿಮೆಯಿತ್ತು. ಅದನ್ನು ಅಂದಾಜು ಮಾಡಿದ ಕಂಪೆನಿಯು ಭಾರತದವರನ್ನು ಕಾರ್ಮಿಕರನ್ನಾಗಿಯೇ ನೇಮಿಸಿತು.ಇದರಿಂದ ನೋವು ಉಂಡದ್ದು ಭಾರತದ ಕೂಲಿಯವರು. ಉದ್ದಿಮೆಯಲ್ಲಿ ಲಾಭ ಮತ್ತು ನಷ್ಟದ ವ್ಯಾಪಾರವನ್ನು ನಾವು ಸುಲಭ

ಲೆಕ್ಕಾಚಾರವೆಂದು ಭಾವಿಸಬೇಕಾಗಿಲ್ಲ. ಉದ್ದಿಮೆಯಲ್ಲಿ ಗಳಿಕೆ ಎನ್ನುವುದು ಸಂಕೀರ್ಣವೂ ಹೌದು. ಒಂದು ಸಂಸ್ಥೆಯಲ್ಲಿ ಯಾವುದು ಯಾವ ರೀತಿಯಲ್ಲಿ ಲಾಭವನ್ನು ತರುತ್ತದೆ ಎನ್ನುವುದಕ್ಕೆ ಯಾವ ರೀತಿಯ ಲೆಕ್ಕನ್ನು ಇಡಬೇಕು, ಮಾರುಕಟ್ಟೆಗೂ ಅದರ ಧಾರಣೆಯ ಏರಿಳಿತಕ್ಕೂ ಇರುವ ಸಂಬಂಧವು ಯಾವ ಬಗೆಯದು ಎಂದು ಪೂರ್ವ ಯೋಜನೆಯು ಬಂಡವಾಳಿಗನಿಗೆ ಗೊತ್ತಿರುತ್ತದೆ. ಅವನು ಅದರ ರಹಸ್ಯವನ್ನು ಕೂಲಿ ಕಾರ್ಮಿಕನಿಗೆ ಹೇಳುವುದಿಲ್ಲ. ಬಂಡವಾಳಶಾಹಿಯು ತನಗೆ ಬೇಕಾದ ಹಾಗೆ ಇದಕ್ಕೆ ಸಂಬಂಧ ಪಟ್ಟ ನಿರ್ಣಯವನ್ನು ತೆಗೆದುಕೊಳ್ಳುತ್ತಾನೆ. ಪ್ರತಿಯೊಬ್ಬ ವ್ಯಾಪಾರಿಯೂ ತನ್ನ ಉದ್ದಿಮೆಯನ್ನು ಮತ್ತು ಅದರ ಉತ್ಪನ್ನಗಳನ್ನು ಗಮನಕ್ಕೆ ತಂದು ಕೊಳ್ಳುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತಾನೆ- 'ಈ ಸರಕಿನ ಬೆಲೆಯನ್ನು ತುಂಬಾ ಮಾರ್ಜಿನ್ ಇಟ್ಟುಕೊಂಡು ಮಾರುತ್ತಿದ್ದೇನೆ.' ಆದರೆ ವಾಸ್ತವವಾಗಿ ಯಾರೂ ಹೀಗೆ ಮಾರುವುದಿಲ್ಲ. ಮತ್ತು ಲಾಭವನ್ನು ಬಿಟ್ಟು ಯಾರೂ ಮಾರುಕಟ್ಟೆಯಲ್ಲಿ ಉಳಿಯುವುದು ಸಾಧ್ಯವೇ ಇಲ್ಲ. ಇದೇ ಮಾತನ್ನು ಮತ್ತೊಂದು ದಿಕ್ಕಿನಿಂದಲೂ ನೋಡಬಹುದು-ಅದು ಉತ್ಪಾದಕನು ತಾನು ಯಾವ ಮಾಲನ್ನು ಹೇಗೆ ಮಾರಬೇಕು ಮತ್ತು ಯಾವ ರೀತಿಯಲ್ಲಿ ಲಾಭವನ್ನು ಪಡೆಯಬೇಕು ಎನ್ನುವುದನ್ನು ಅವನು ಯೋಚಿಸಿಯೇ ಯೋಚಿಸುತ್ತಾನೆ. ಹಾಗೆಯೇ ಉತ್ಪಾದಕನಿಗೆ ಅದು ಗೊತ್ತಿರುತ್ತದೆ-ಯಾವುದರ ಗುಣ ಮಟ್ಟ ಹೇಗಿದೆ? ಯಾವುದರ ಮಾರುಕಟ್ಟೆ ಹೇಗಿದೆ? ದರ ನಿಗದಿಯಲ್ಲಿಯೂ ಕೂಡಾ ಹಾಗೆಯೇ ಯಾವುದನ್ನು ನಾವು ನೈತಿಕ ಯಾವುದನ್ನು ಅನೈತಿಕವೆಂದು ಕರೆಯುವುದು ಕಷ್ಟವೇ-ಒಂದು ಪ್ರದೇಶದಲ್ಲಿ ಮಾರಾಟವಾಗುವುದು ಮತ್ತೊಂದು ಪ್ರದೇಶದಲ್ಲಿ ಮಾರಾಟವಾಗದೇ ಹೋಗಬಹುದು. ಹೆಚ್ಚೇಕೆ ಅನೇಕ ಮಾರಾಟಗಾರರಿಗೆ ತಾವು ಮಾರುತ್ತಿರುವ ಮಾಲು ಎಲ್ಲಿ ತಯಾರಾಗಿದೆ ಎಂದು ತಿಳಿದಿರುವುದಿಲ್ಲ. ಮತ್ತು ಅವರು ಅದರ ಕಡೆಗೆ ಗಮನವನ್ನು ಕೊಡುವುದೂ ಇಲ್ಲ. ಮಾರುಕಟ್ಟೆಯಲ್ಲಿ ಮಾರಾಟವಾಗುವ ಸರಕಿಗೂ ಅದು ತಯಾರಾಗುವ ಸ್ಥಳಕ್ಕೂ ಅಂತರವೂ ಇರಬಹುದು. ಯಾವಾಗ ಒಂದು ವಸ್ತುವಿನ ಮಾರುಕಟ್ಟೆಯು ಏಕ ಕೇಂದ್ರಿತವಾಗಿ ಇರುತ್ತದೆಯೋ ಆಗ ಅದು ವಿಶಿಷ್ಟವಾಗಿಯೂ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತದೆ. ಮತ್ತೆ ಒಂದು ಸಂಗತಿಯನ್ನು ನಾವು ಗಮನಕ್ಕೆ ತಂದು ಕೊಳ್ಳ ಬೇಕು-ಯಾವ ಉತ್ಪನ್ನವು ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುತ್ತದೆಯೋ ಆಗ ದರವೂ ಹೆಚ್ಚಿರುತ್ತದೆ. ಮತ್ತು ಅಪರೂಪದ್ದು ಎನ್ನುವ ಭಾವನೆಯನ್ನು ತರುತ್ತದೆ. ವ್ಯಕ್ತಿಯೊಬ್ಬನೇ ಒಂದು ಕೈಗಾರಿಕೆಗೆ ಯಜಮಾನ ಆದರೆ ಅವನು ಕೈಗಾರಿಕಾ ಉತ್ಪನ್ನವನ್ನು ಅದರ ದರವನ್ನು ,ಅದರ ಲಾಭ ಮತ್ತು ನಷ್ಟವನ್ನು ತನಗೆ ಬೇಕಾದಂತೆ ವಹಿಸಿಕೊಳ್ಳುತ್ತಾನೆ. ಹಾಗೂ ಅದನ್ನು ಅವನೇ ನಿಯಂತ್ರಿಸುತ್ತಾನೆ. ಆದರೆ ಬೇರೆ ರೀತಿಯ ಉತ್ಪಾದನೆಗಳಲ್ಲಿ ಅದರ ಸ್ವರೂಪವು ಭಿನ್ನ. ಇಂಡಸ್ಟ್ರಿಯಲ್ಲಿ ಅದರ ಲಾಭ ಮತ್ತು ನಷ್ಟವನ್ನು ಲೆಕ್ಕ ಹಾಕುವುದು ಬೇರೆ ರೀತಿಯಲ್ಲಿ. ಕಾರ್ಮಿಕರಿಗೆ ಕೊಟ್ಟ ವೇತನ ಮತ್ತು ಅದರ ಅದರ ಉತ್ಪತ್ತಿಗೆ ತಗುಲಿದ ಆಯ ವ್ಯಯ ಹಾಗೂ ಇತರ ಸಂಗತಿಗಳು ಉತ್ಪಾದನೆಯ ಮೇಲೆ ಪರಿಣಾಮವನ್ನು ಬೀರುತ್ತವೆ. ಮಾರುಕಟ್ಟೆಯಲ್ಲಿ ಒಂದು ಉತ್ಪನ್ನವು ಬಿಡುಗಡೆಯಾಗ ಬೇಕು ಎಂದಾದರೆ ಅದು ಅನೇಕ ಸಂಗತಿಗಳನ್ನು ಒಳಗೊಳ್ಳಬೇಕಾಗುತ್ತದೆ.

ಯಾವುದು ಆರ್ಥಿಕವಾದ ಲಾಭ ಇದೆಯೋ ಅದನ್ನು ಮಾತ್ರವೇ ನಾವು ಈಗ ಅಭಿವೃದ್ಧಿ ಎಂದು ಹೇಳುತ್ತೇವೆ. ಅಗಲವಾದ ರಸ್ತೆ, ಓಡಾಡುವ ಕಾರುಗಳು, ಒಣ ಪ್ರತಿಷ್ಠೆಗಳು ಈಗ ಅಭಿವೃದ್ಧಿಯ ಮಾನದಂಡವೆಂದು ಹೇಳುತ್ತೇವೆ. ಈಗ ಅನೇಕ ಕಂಪೆನಿಗಳು ಸರಕಾರದೊಂದಿಗೆ ಶಾಮೀಲು ಆಗಿವೆ. ಇವು ವಾಸ್ತವವಾಗಿ ಏನನ್ನು ಸೂಚಿಸುತ್ತದೆ ಎಂದರೆ ಇದರಲ್ಲಿ ಸಾಮಾನ್ಯರು ಮೂಗು ತೂರಿಸುವುದು ಬೇಡ ಎಂದು ಮಾತ್ರವೇ. ಆರ್ಥಿಕತೆಯ ಸರಿಯಾದ ಬೆಂಬಲವು ಇಲ್ಲದೇ ಹೋದರೆ ಒಂದು ಪ್ರಭುತ್ವವು ಉಳಿಯುವುದಿಲ್ಲ.

ಆದರೆ ಮಾರುಕಟ್ಟೆಯು ನಿಶ್ಚಿತ ಅಥವಾ ಅನಿಶ್ಚಿತವಾಗಿರಬಹುದು. ಅದನ್ನು ಯಾರು ಉದ್ದಿಮೆಗಾರರು ಇರುತ್ತಾರೋ ಅವರು ಅದನ್ನು ಭರಿಸುವುದು ಅಗತ್ಯವಾಗಿರುತ್ತದೆ. ಅದನ್ನು ಅವನೇ ಜವಾಬ್ದಾರಿಯನ್ನು ಹೊತ್ತು ನಿರ್ವಹಿಸಬೇಕಾಗುತ್ತದೆ. ಲಾಭ ಮತ್ತು ನಷ್ಟವೆನ್ನುವುದು ಒಂದು ವಹಿವಾಟು ಮಾತ್ರವೇ ಆಗುತ್ತದೆ. ಆಧುನಿಕ ಏಕಸ್ವಾಮ್ಯಗಳ ನಿಜವಾದ ಆರಂಭ, ತುಂಬ ಹಿಂದೆಂದರೆ, 1860ರ ದಶಕದ ವರ್ಷಗಳಿಗೆ ಹೋಗುತ್ತದೆ. ಏಕಸ್ವಾಮ್ಯಗಳ ಬೆಳವಣಿಗೆಯ ಮೊದಲ ಮುಖ್ಯ ಕಾಲಾವಧಿ 1870ರ ದಶಕದ ವರ್ಷಗಳ ಅಂತರರಾಷ್ಟ್ರೀಯ ಕೈಗಾರಿಕಾ ಮುಗ್ಗಟ್ಟಿನೊಂದಿಗೆ ಪ್ರಾರಂಭವಾಗಿ 1890ರ ದಶಕದ ವರ್ಷಗಳ ಅದಿಯವರೆಗೆ ಇದ್ದಿತು." ಹಾಗೆ ನೋಡುವುದಿದ್ದರೆ ಮಾರುಕಟ್ಟೆಯಲ್ಲಿ ನಿಗದಿಯಾಗುವ ದರ ಮತ್ತು ಆಯಾ ವಸ್ತುವಿಗೆ ಆಗುವ ನಿಜವಾದ ವೆಚ್ಚಕ್ಕೂ ಬಹಳ ಭಿನ್ನತೆಯಿದೆ. ಮಾರುಕಟ್ಟೆಯಲ್ಲಿ ದಲ್ಲಾಳಿಯು ಪಡೆಯುವ ಲಾಭವು ಅನೇಕ ಸಂದರ್ಭದಲ್ಲಿ ಅನೇಕ ಸಾರಿ ಅನೇಕರಿಗೆ ತಿಳಿಯುವುದೇ ಇಲ್ಲ. ಹಾಗೆಯೇ ಯಾವುದೇ ವಸ್ತುವನ್ನು ಒಬ್ಬ ಬಂಡವಾಳಶಾಹಿಯೇ ತಯಾರಿಸಲಾರ. ಹಾಗೂ ಯಾಕೆ ಒಂದು ವಸ್ತುವಿಗೆ ಆ ದರವು ನಿಗದಿಯಾಗಿದೆ ಎಂದು ನಿರ್ಧರಿಸುವುದಕ್ಕೆ ಬೇರೆ ಚಾಕಚಾಕ್ಯತೆಯೇ ಬೇಕು. ಯಾವುದೇ ವಸ್ತುವು ಮಾರುಕಟ್ಟೆಯಲ್ಲಿ ತನ್ನ ನಿರ್ಮಾಣದ ವೆಚ್ಚ ವನ್ನು ಕಳೆದುಕೊಂಡು ಮಾರುಕಟ್ಟೆಗೆ ಬರಲಾರದು. ಎಲ್ಲವನ್ನು ಕಳೆದುಕೊಂಡು ಒಬ್ಬ ವ್ಯಕ್ತಿಯು ತನ್ನ ವಸ್ತುವನ್ನು ಮಾರಾಟಕ್ಕೆ ತರಲಾರ. ಯಾವ ವಸ್ತುವಿಗೆ ಹೆಚ್ಚು ಮಾರುಕಟ್ಟೆಯು ಇರುತ್ತದೆಯೋ ಅದನ್ನು ಮಾತ್ರವೇ ಮಾರಲು ಒಬ್ಬ ವ್ಯಾಪಾರಸ್ಥ ಪ್ರಯತ್ನವನ್ನು ಮಾಡುತ್ತಾನೆ. ಬೇಡಿಕೆ ಮತ್ತು ಮಾರಾಟವೆನ್ನುವುದು ಒಂದು ರೀತಿಯಿಂದ ವಿಶಿಷ್ಟವಾದ ಮಾರ್ಗವೇ ಆಗಿರುತ್ತದೆ. ಯಾವ ವಸ್ತುವಿಗೆ ಯಾವ ರೀತಿಯಲ್ಲಿ ಬೇಡಿಕೆ ಇದೆ ಎಂದು ನೋಡಿಕೊಂಡೇ ಒಬ್ಬ ವ್ಯಾಪಾರಸ್ಥ ವ್ಯಾಪಾರವನ್ನು ಮಾಡುತ್ತಾನೆ. ಅದು ಅವನ ಜಾಣತನದ ಸಂಕೇತವೂ ಹೌದು. ಒಂದು ವೇಳೆ ಅದು ತಪ್ಪಿದರೆ ಅಲ್ಲಿ ಅವನು ದಿವಾಳಿಯೂ ಆಗುತ್ತಾನೆ. ಇಲ್ಲಿ ಗಮನಿಸ ಬೇಕಾದ ಮತ್ತೊಂದು ಅಂಶವೆಂದರೆ ಯಾವುದನ್ನು ನಾವು ವ್ಯಾಪಾರವೆಂದು ಕರೆಯುತ್ತೇವೆಯೋ ಅಲ್ಲಿ ಒಳಗಿಂದೊಳಗೆ ಸ್ಪರ್ಧೆಯೂ ಇರುತ್ತದೆ. ವ್ಯಾಪಾರದಲ್ಲಿ ಇರುವ ಸ್ಪರ್ಧೆಯು ಮಾರುಕಟ್ಟೆಗೆ ಸೀಮಿತವಾದುದು ಮಾತ್ರವೇ ಆದರೂ ಅದರ ಪರಿಣಾಮವು ಬೇರೆ ಬೇರೆ ರೀತಿಯಲ್ಲಿಯೂ ಇರುತ್ತದೆ. ಸ್ಪರ್ಧೆಯು ಇರುವುದು ಬೆಲೆ ಮತ್ತು ಅದರ ಗುಣಮಟ್ಟ ಕುರಿತೂ ಹೌದು. ಬೆಲೆಯನ್ನು, ಅದರ ಗುಣ ಮೌಲ್ಯವನ್ನು ಏಕ ಕಾಲದಲ್ಲಿ ಕಾಯ್ದುಕೊಳ್ಳುವುದು ಅನಿವಾರ್ಯವೂ ಹೌದು. ಸರಕುಗಳ ವಿನಿಮಯ ಮತ್ತು ಅದರ ಮಾರಾಟ ಎನ್ನುವುದು ಆಯಾ ಸನ್ನಿವೇಶಕ್ಕೆ ಅನುಸಾರವಾಗಿ ಭಿನ್ನವಾಗುತ್ತದೆ.

ಯಾವುದು, ಯಾಕೆ, ಹೇಗೆ, ಯಾವುದನ್ನು, ಮತ್ತು ಯಾಕೆ ಎನ್ನುವುದೂ ಮಾರುಕಟ್ಟೆಯ ಮಟ್ಟಿಗೆ ಮಹತ್ವ ಪ್ರಶ್ನೆಗಳೇ ಆಗಿರುತ್ತವೆ. ಮಾರುಕಟ್ಟೆಗೆ ಸಾಮಾಗ್ರಿಗಳನ್ನು ಪೂರೈಸುವುದು ಮತ್ತು ಅದನ್ನು ಮಾರುವುದೂ ಎರಡೂ ಕಷ್ಟವೇ ಆಗಿದೆ. ರೆಕಾರ್ಡೋನ ಪ್ರಕಾರ ಮಾರುಕಟ್ಟೆಯಲ್ಲಿ ವ್ಯಕ್ತಿಯು ಪ್ರಧಾನವೇ ಅಲ್ಲ, ಅದರ ಬದಲು ಉತ್ಪಾದನೆ ಮಾತ್ರವೇ ಮುಖ್ಯ. ಅವನು ರಾಷ್ಟ್ರವನ್ನು ಕುರಿತು ವಿವರಿಸುವಾಗಲೂ ಅದನ್ನೇ ಮತ್ತೊಂದು ಬಗೆಯಲ್ಲಿ ಹೇಳುತ್ತಾನೆ- ರಾಷ್ಟ್ರವೆಂದರೆ ಅನೇಕ ರೀತಿಯ ಉತ್ಪಾದನೆಗಳು. ಮನುಷ್ಯರು ಉತ್ಪಾದನೆಯನ್ನು ಮಾಡುತ್ತಾರೆ ಹಾಗೂ ಅದನ್ನು ಕೊಂಡುಕೊಳ್ಳುತ್ತಾರೆ ಅಷ್ಟೆ. ಮಾರುಕಟ್ಟೆಯ ಕಲ್ಪನೆಯೇ ವಿಶಿಷ್ಟವಾದುದು. ಜನರು ತಮಗೆ ಬೇಕಾದುದನ್ನು ಕೊಂಡುಕೊಳ್ಳಲು ಮಾರುಕಟ್ಟೆಗೆ ಬರುತ್ತಾರೆ. ಹಾಗೆ ಬಂದಾಗ ಅವರ ಬೇಡಿಕೆಗಳಿಗೂ ವಸ್ತುವಿನ ಪೂರೈಕೆಗೂ ಒಂದು ಸಂಬಂಧವಂತೂ ಇದ್ದೇ ಇರುತ್ತದೆ. ದೊಡ್ಡ ಬಂಡವಾಳಗಾರ, ಸಣ್ಣ ಉದ್ದಿಮೆದಾರ ಎನ್ನುವ ಪರಿಕಲ್ಪನೆಯೇ ಮಾರುಕಟ್ಟೆಯದ್ದು ಅನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಆದರೆ ಮಾರುಕಟ್ಟೆಗೆ ಬಂದವನು ತನ್ನ ಸಾಮಾಗ್ರಿಯನ್ನು ಮಾರುತ್ತಾನೆ, ಅಥವಾ ಅವನು ಮಾರುಕಟ್ಟೆಯಲ್ಲಿ ಸಿಗುವ ಸಾಮಾಗ್ರಿಯನ್ನು ಕೊಂಡುಕೊಳ್ಳುತ್ತಾನೆ. ಹಾಗೆ ಮಾಡಿದಾಗ ಅವನಿಗೆ ಮಾರುಕಟ್ಟೆಯ ದರವು ಮಾತ್ರವೇ ಪ್ರಶ್ನೆಯಾಗಿರುತ್ತದೆ. ಆದರೆ ಯಾವಾಗ ಇದು ಸ್ಪರ್ಧೆಯ ಪ್ರಶ್ನೆಯು ಆಗುತ್ತದೆಯೋ ಆಗ ವಾಸ್ತವವಾಗಿ ಸಣ್ಣ ಬಂಡವಾಳಗಾರನ ಮೇಲೆ ಅನೇಕ ಪರಿಣಾಮವೂ ಆಗುತ್ತದೆ. ಮಾರುಕಟ್ಟೆಯಲ್ಲಿ ಧಾರಣೆ ಎನ್ನುವ ಪ್ರಶ್ನೆಯು ಮಹತ್ವದ್ದು ಆಗುವುದು ಈ ಕಾರಣಕ್ಕೆ. ಮತ್ತೆ ಇಲ್ಲಿ ಗಮನಿಸಬೇಕಾದ ಪ್ರಶ್ನೆ ಎಂದರೆ ದೊಡ್ಡ ಬಂಡವಾಳಗಾರನು ತೊಡಗಿಸಿಕೊಳ್ಳುವ ಮೊತ್ತವು ಸ್ಥಿರ ಠೇವಣಿಯ ರೂಪದಲ್ಲಿ ಇರುತ್ತದೆ. ಆದರೆ ಸಣ್ಣ ಬಂಡವಾಳಗಾರನದು ಸಣ್ಣ ಮೊತ್ತ. ಹಾಗೂ ಅದು ಚರ ರೂಪದ ಠೇವಣಿ. ದೊಡ್ಡ ಬಂಡವಾಳವಾದವು ಮಾರುಕಟ್ಟೆಯನ್ನು ಆವರಿಸಿಕೊಳ್ಳುತ್ತದೆ. ಏಕ ಸ್ವಾಮ್ಯದಲ್ಲಿ ಮಾತ್ರ ಬೆಲೆಯ ನಿಗದಿಯ ಸ್ವರೂಪವು ಭಿನ್ನವಾಗಿರುತ್ತದೆ. ಏಕಸ್ವಾಮ್ಯವು ಬಂಡವಾಳವಾದದಲ್ಲಿ ತನ್ನದೇ ಆದ ನಿಯಮವನ್ನು ರೂಪಿಸಿಕೊಂಡಿರುತ್ತದೆ. ಇದರೊಂದಿಗೆ ಇನ್ನೊಂದು ಅಂಶವನ್ನು ನಾವು ಮನಗಾಣಬೇಕು-ಅದು ಮಾರುಕಟ್ಟೆಯನ್ನು ಅವಲಂಬಿಸಿಕೊಂಡವರದ್ದು. ಏಕಸ್ವಾಮ್ಯವು ಕೆಲವೊಮ್ಮೆ ಮಾರುಕಟ್ಟೆಯ ದರವನ್ನು ನಿಯಂತ್ರಿಸಿಕೊಳ್ಳವುದೂ ಇದೆ. ಸಣ್ಣ ಬಂಡವಾಳ ಮತ್ತು ದೊಡ್ಡ ಬಂಡವಾಳ ಎನ್ನುವುದನ್ನು ಹಣವನ್ನು ಹೂಡುವ ವಿಷಯಕ್ಕೆ ಅನುಸಾರವಾಗಿಯೇ ವ್ಯತ್ಯಾಸ ಮಾಡುತ್ತೇವೆ. ದೊಡ್ಡ ಬಂಡವಾಳಗಾರನು ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿ ಇರಬಲ್ಲ. ಅವನು ಹೆಚ್ಚು ಸರಕನ್ನು ಕೊಂಡು ಕೊಂಡು ಹೆಚ್ಚು ಕಡೆಗೆ ತನ್ನ ಸ್ವತ್ತನ್ನು ಮಾರಬಲ್ಲ. ಹಣವೇ ಹಣವನ್ನು ಉತ್ಪಾದಿಸುತ್ತದೆ ಎನ್ನುವುದೂ ಒಂದು ತತ್ವ. ಅದರ ಅರಿವು ಬಂಡವಾಳಗಾರನಿಗೆ ಇರುತ್ತದೆ. ಖಾಸಗಿ ಆಸ್ತಿಯು ಇಲ್ಲದವರು ಅನಿವಾರ್ಯವಾಗಿ ಕೈಗಾರಿಕೆಯ ಕಾರ್ಮಿಕರೂ ಆಗಿರುತ್ತಾರೆ. ಮನುಷ್ಯನು ಕೂಲಿಯವನೋ ಕಾರ್ಮಿಕನೋ ಆದರೆ ಅದಕ್ಕೆ ಕಾರಣವು ಸಾಮಾಜಿಕ ವ್ಯವಸ್ಥೆಯಲ್ಲಿಯೇ ಇರುತ್ತದೆ. ಒಬ್ಬ ಕೂಲಿಯವನು, ಒಬ್ಬ ಕಾರ್ಮಿಕ, ಒಬ್ಬ ರೈತ ಮುಂತಾದ ಹೆಸರುಗಳು ಅವರ ದುಡಿಮೆಗೆ ಅನುಸಾರವಾದ ವ್ಯಾಖ್ಯಾನಗಳು ಮಾತ್ರವೇ ಆಗಿರುತ್ತದೆ. ಹಾಗೆಯೇ ಒಬ್ಬ ವ್ಯಕ್ತಿಯು ಜಮೀನು ಹೊಂದಬೇಕು ಎಂದಾದರೆ ಅದಕ್ಕೆ ಅನೇಕ ನಿಯಮಾವಳಿಯೂ ಬೇಕು. ಕಾನೂನೂ

ಇದೆ. ಅಷ್ಟೇ ಅಲ್ಲ ವ್ಯಕ್ತಿಯು ಹಿಡುವಳಿದಾರನಾಗಬೇಕು ಎಂದಾದರೆ ಅದಕ್ಕೆ ಅವನ ಆಸಕ್ತಿಯೂ ಅಷ್ಟೇ ಮುಖ್ಯ. ಸ್ವಂತ ಹಿಡುವಳಿ ಎನ್ನುವುದು ಒಂದು ತರಹ ಆದರೆ ಅದರ ಮತ್ತೊಂದು ರೂಪ ಅದಕ್ಕಿಂತಲೂ ಭಿನ್ನವಾಗಿರುತ್ತದೆ. ಬಂಡವಾಳವಾದವು ವ್ಯಕ್ತಿಯನ್ನು ಹೆಚ್ಚು ದುಡಿಯುವಂತೆ ಮಾಡುತ್ತದೆ. ಕಡಿಮೆ ಸಂಬಳ ಮತ್ತು ಹೆಚ್ಚು ದುಡಿಮೆ ಅನ್ನುವುದು ಯಾವಾಗಲೂ ಹೆಚ್ಚು ಸಮಸ್ಯೆಯನ್ನು ಉಂಟು ಮಾಡುತ್ತದೆ. ದೇಹದ ದುಡಿಮೆ ಮತ್ತು ಮನಸ್ಸಿನ ದುಡಿಮೆ ಅನ್ನುವುಕ್ಕೆ ಸರಿಯಾದ ಮಾನದಂಡಗಳೇ ಇಲ್ಲ. ಯಜಮಾನನು ಅತ್ಯಂತ ಕಡಿಮೆ ವೆಚ್ಚಕ್ಕೆ ಆಳನ್ನು ಮತ್ತು ಅವನ ಶ್ರಮವನ್ನು ಖರೀದಿಸುತ್ತಾನೆ. ದುಡಿಯುತ್ತಿರುವ ವ್ಯಕ್ತಿಗೆ ತಾನು ದುಡಿದು ಮಾಡಿದ ಉತ್ಪನ್ನ ಹಾಗೂ ಅದರ ಬೆಲೆ ಎಷ್ಟು ಎಂಬುದರ ಅರಿವೇ ಇರುವುದಿಲ್ಲ. ಒಂದು ಎಕ್ರೆ ಜಮೀನಿನಲ್ಲಿ ಒಬ್ಬ ವ್ಯಕ್ತಿಯು ಹೇಗೆ ದುಡಿಯುತ್ತಾನೆ, ಪೈರು ಬಂದಾಗ ಅದರ ಬೆಲೆಯೇನು ಎನ್ನುವುದೂ ಅನೇಕ ಸಂದರ್ಭದಲ್ಲಿ ಅಸ್ಪಷ್ಟವೂ ಆಗಿರುತ್ತದೆ. ಬಂಡವಾಳವಾದದಲ್ಲಿ ಯಾವುದೇ ಪಾಪದ ಭಯವಿಲ್ಲ. ದುಡ್ಡು ಎನ್ನುವುದು ಕೂಡಾ ಪರಿಕರ ಮಾತ್ರ. ಹಳೆಯ ಮಾದರಿಯ ಕೆಲಸದ ವರ್ಗೀಕರಣವು ಬಂಡವಾಳ ಪದ್ಧತಿಯ ಸಮಾಜವು ಬಂದಾಗ ಬದಲಾಯಿತು.ಮತ್ತು ಹೊಸ ರೀತಿಯ ಉತ್ಪಾದನೆಯ ದೆಸೆಯಿಂದ ವ್ಯಕ್ತಿಗಳ ಚಹರೆಗಳು ಬದಲಾದವು. ಬಂಡವಾಳವು ಮನುಷ್ಯರನ್ನು ಆ ವ್ಯವಸ್ಥೆಗೆ ಒಗ್ಗಿಸಿಕೊಳ್ಳುತ್ತದೆ. ಮತ್ತು ಬಂಡವಾಳವಾದದ ಪ್ರಾಯೋಗಿಕ ಉದ್ದೇಶವು ಭಿನ್ನವಾಗಿದೆ. ಬಂಡವಾಳದ ಉದ್ಧೇಶವೇ ಬೇರೆಯಾಗಿದೆ. ಬಂಡವಾಳವಾದವನ್ನು ಹಿಡಿಯಾಗಿ ವಿವರಿಸುವುದೂ ಕಷ್ಟ ಅದರ ಒಂದೇ ಉದ್ದೇಶವೆಂದರೆ ಎಡವನ್ನು ನಿರಾಕರಿಸುವುದು. ಬಂಡವಾಳವಾದವು ವ್ಯಕ್ತಿಯನ್ನು ಅನೇಕ ರೀತಿಯಲ್ಲಿ ನಿಯಂತ್ರಿಸುತ್ತದೆ. ಬಂಡವಾಳವಾದವು ಕೆಲವು ವಿಷಯಗಳಲ್ಲಿ ನಮ್ಮನ್ನು ಭ್ರಾಂತಿಗೆ ಗುರಿಮಾಡುತ್ತವೆ.

ಅದು ನಮ್ಮನ್ನು ಮಾನಸಿಕವಾಗಿ ಏನನ್ನೂ ಯೋಚಿಸದ ಹಾಗೆ ಮಾಡುತ್ತದೆ. ಅದರ ಸಾಮಾಜಿಕ ರೂಪವೇ ಸ್ವರೂಪವೂ ಭಿನ್ನವಾಗಿದೆ. ಅದು ರೂಪಿಸುವ ರಾಜಕಾರಣವೂ ಬೇರೆ. ಸಮಾಜದ ವಿಷಯದಲ್ಲಿ ಅದು ಭಿನ್ನವಾದ ಚಹರೆಯನ್ನು ರೂಪಿಸಿಕೊಳ್ಳುತ್ತದೆ. ಉತ್ಪಾದನೆ, ಅದರ ರಾಚನಿಕವಾದ ಸ್ವರೂಪ, ಅದು ನಮ್ಮ,ನ್ನು ನಿಯಂತ್ರಿಸುವ ಕ್ರಮವು ಬೇರೆ. ಅದು ಮನುಷ್ಯರನ್ನು ಸುಲಲಿತವಾಗಿ ಮಾರುಕಟ್ಟೆಯ ಸಾಮಾಗ್ರಿಯನ್ನಾಗಿ ಮಾಡುತ್ತದೆ. ಅದು ಮಾತ್ರವೇ ಅಲ್ಲ–ಅದು ತನ್ನ ಅಗತ್ಯಕ್ಕೆ ತಕ್ಕಂತೆ ಮನೋಲೋಕವನ್ನು ಹಿಡಿತಕ್ಕೆ ತಂದು ಹಾಕುತ್ತದೆ. ಅದು ರೂಪಿಸುವ ಸಾಂಸ್ಕೃತಿಕ ಚಹರೆಗಳು ಶುದ್ದ ರೂಪದಲ್ಲಿ ಇರುವುದಿಲ್ಲ.ತನಗೆ ಬೇಕಾದ ನವ ಮಾಧ್ಯಮಗಳನ್ನು ಕೂಡಾ ತರುತ್ತದೆ. ಆದರ್ಶ ರೂಪಗಳು ಬೇರೆ. ಅದರ ಪ್ರಾಯೋಗಿಕ ರೂಪಗಳು ಬೇರೆ. ಬಂಡವಾಳದಲ್ಲಿ ಉತ್ಪಾದನೆ, ಅದರ ಚಹರೆಗಳು ಅದರ ಹಿಂದಿರುವ ಚಿಂತನೆಯ ಕ್ರಮ ಹಾಗೂ ವ್ಯಕ್ತಿತ್ವವನ್ನು ನಿಯಂತ್ರಿಸುವುದು ಬೇರೆ. ನವ ಯಾಂತ್ರಿಕತೆಯಿಂದಾಗಿ ಉತ್ಪಾದನೆಯ ಹೆಚ್ಚಳವು ಉಂಟಾಯಿತು. ಯಂತ್ರಗಳು ಹೇಗೆ ಇದ್ದವು ಎಂದರೆ ಅನೇಕ ಜನರ ಕೆಲಸವನ್ನು ಒಂದು ಯಂತ್ರವು ಮಾಡತೊಡಗಿತು. ಇದರಿಂದಾಗಿ ವ್ಯಕ್ತಿಗಳು ಅಥವಾ ಕಾರ್ಮಿಕರು ಎನ್ನುವ ಪ್ರಶ್ನೆಗಳು ಬೇರೆಯಾದವು. ಮನುಷ್ಯರ ಚಹರೆಗಳು ಮಾತ್ರವೇ ಬದಲಾಗಲಿಲ್ಲ ಮನುಷ್ಯರನ್ನು ಗುರುತಿಸುವ ಕ್ರಮಗಳು ಕೂಡಾ ಬದಲಾದವು. ಕೆಲಸದ ನಿಯಮಗಳು ಹಾಗೂ ಕೆಲಸವನ್ನು ಮಾಡುವ ರೀತಿಗಳು ಕೂಡಾ ಬದಲಾದವು. ಕೈಗಾರಿಕೆಗಳ ಕಾರ್ಮಿಕರಿಗೂ

ಜಮೀನಿನಲ್ಲಿ ಕೆಲಸವನ್ನು ಮಾಡುವ ಕಾರ್ಮಿಕರಿಗೂ ವ್ಯತ್ಯಾಸವಿದೆ ಎನ್ನುವುದನ್ನು ನಾವು ಮರೆಯಬಾರದು. ಆಧುನಿಕ ಜಗತ್ತಿನಲ್ಲಿ ಕೃಷಿಯ ಉತ್ಪನ್ನ, ಕೈಗಾರಿಕೆಗಳ ಉತ್ಪನ್ನ, ಆಹಾರದ ಉತ್ಪನ್ನ ಮುಂತಾದವುಗಳನ್ನು ಬೇರೆ ಬೇರೆ ಮಾಡಿ ನೋಡಲಾಗುತ್ತದೆ. ಒಂದು ಕ್ಷೇತ್ರದ ಕೆಲಸಕ್ಕೂ ಮತ್ತೊಂದು ಕ್ಷೇತ್ರದ ಕೆಲಸಕ್ಕೂ ವ್ಯತ್ಯಾಸವಿದೆ. ಆಸ್ತಿಯು ಇರುವ ವ್ಯಕ್ತಿ ಮತ್ತು ಖಾಸಗಿ ಆಸ್ತಿಯು ಇಲ್ಲದ ವ್ಯಕ್ತಿ ಅನ್ನುವ ಪರಿಕಲ್ಪನೆಗಳೂ ಭಿನ್ನವಾಗಿದೆ. ಹಾಗೇ ತಾಂತ್ರಿಕ ಜ್ಞಾನ ಮತ್ತು ಸಾಂಪ್ರದಾಯಿಕ ಜ್ಞಾನವೆನ್ನುವ ಪರಿಕಲ್ಪನೆಗಳು ಕೂಡಾ ಬೇರೆಯಾಗಿವೆ. ಈಗ ನಾವು ಎದುರಿಸುತ್ತಿರುವುದು ಆಧುನಿಕ ಶ್ರೀಮಂತ ವರ್ಗವನ್ನು. ಆದ್ದರಿಂದ ನಾವು ಈಗ ಬಹಳ ಎಚ್ಚರದಲ್ಲಿ ಇರಬೇಕಾದ ಅಗತ್ಯವಿದೆ. ಮತ್ತು ಮನುಷ್ಯರ ಘನತೆಯನ್ನು ಮತ್ತು ಮನುಷ್ಯರ ಜೀವನವನ್ನು ಒಂದು ಧಾರ್ಮಿಕ ಚೌಕಟ್ಟಿಗೆ ತರುವುದು ಎಂದರೆ ಜನರನ್ನು ಸದ್ಯದ ಕಷ್ಟವನ್ನು ಮರೆಯಿರಿ ಎಂದು ಹೇಳಿದ ಹಾಗೆ. ಮತ್ತು ಕಲ್ಪಿತ ಸಂಗತಿಗಳೇ ಇಂದು ನಮ್ಮ ಮಧ್ಯೆ ಇದೆ. ವ್ಯಕ್ತಿಗೆ ಬರುವ ಲಾಭವನ್ನು ನಾವು ಕೇವಲ ವ್ಯಕ್ತಿಗಳ ಹಿನ್ನೆಲೆಯಲ್ಲಿ ಮಾತ್ರವೇ ತೆಗೆದುಕೊಳ್ಳಲು ಬರುವುದೂ ಇಲ್ಲ. ತಲಾ ಆದಾಯ ಮತ್ತು ಅವನ ಅಭಿವೃದ್ಧಿಯೇ ಸಾಮಾಜಿಕ ಮಾನದಂಡವಲ್ಲ. ಜನರ ಮುಖ್ಯವಾದ ಪ್ರಶ್ನೆಯನ್ನು ಇನ್ನು ಯಾವುದೋ ವಿಷಯದ ಕಡೆಗೆ ತಿರುಗಿಸುವುದು ಅಭಿವೃದ್ಧಿಗೆ ಮಾದರಿಯಾಗುವುದೂ ಇಲ್ಲ. ಹಣವು ಅದರಷ್ಟಕ್ಕೆ ಅದು ಮುಖ್ಯವಲ್ಲ. ಆದರೆ ಅದಕ್ಕೆ ಕೊಟ್ಟಿರುವ ಮೌಲ್ಯವನ್ನು ಈಗ ನಾವು ಹೇಗೆ ಗಣಿಸಬೇಕು ಎನ್ನವುದೇ ಬಹಳ ದೊಡ್ಡದಾದ ಪ್ರಶ್ನೆ. ಹಣ ಮತ್ತು ಅದರ ಮೌಲ್ಯವನ್ನು ಈಗ ನಿರ್ಧರಿಸುವವರು ಬ್ಯಾಂಕ್ ಮತ್ತು ಕೈಗಾರಿಕೆಗಳು.

"ಬ್ಯಾಕಿಂಗ್ ಪದ್ಧತಿಯು ನಿಜಕ್ಕೂ ಸಾಮಾಜಿಕ ಪ್ರಮಾಣದಲ್ಲಿ ಉತ್ಪಾದನಾ ಸಾಧನಗಳ ಸಾರ್ವತ್ರಿಕ ಜಮಾ–ಖರ್ಚಿನ ಹಾಗೂ ವಿತರಣೆಯ ಒಂದು ರೂಪ. ಆದರೆ ಒಂದು ರೂಪವಷ್ಟೆ" ಎಂದು ಮಾರ್ಕ್ಸ್ ಅರ್ಧ ಶತಮಾನದ ಹಿಂದೆ 'ಬಂಡವಾಳ'ದಲ್ಲಿ ಬರೆದರು". (ವಿ.ಐ. ಲೆನಿನ್, 2013, ಸಾಮ್ರಾಜ್ಯಶಾಹಿ, ಪುಟ. 83)

ದಿನ ನಿತ್ಯದ ಬಳಕೆಯ ಜಾಗದಲ್ಲಿ ಬಂದು ನಿಂತ ಹಣವನ್ನು ಈಗ ಮತ್ತೆ ಯಾವ ರೀತಿಯಲ್ಲಿ ನೋಡಬೇಕು ಎನ್ನವುದೇ ಬಹಳ ದೊಡ್ಡದಾದ ಪ್ರಶ್ನೆಯಾಗಿದೆ. ಹಣಕಾಸಿನ ದಬ್ಬಾಳಿಕೆ ಮತ್ತು ಅದರ ಪರಿಣಾಮವನ್ನು ಈಗ ವಿಶ್ಲೇಷಿಸಬೇಕಾಗಿದೆ. ಕ್ಲಾಸಿಕಲ್ ಯುಗದಲ್ಲಿ ಯುರೋಪಿನಲ್ಲಿ ಸಂಪತ್ತು ಎಂಬುದಕ್ಕೆ ಬೇರೆ ಬೇರೆ ಅರ್ಥಗಳು ಬಂದಿದ್ದವು. ಆದರೆ ಹಣ ಮತ್ತು ಅದರ ಮೌಲ್ಯ ಮತ್ತು ಮಾರುಕಟ್ಟೆಯ ಬೆಲೆಯ ನಡುವೆ ಈ ರೀತಿಯ ಸಣ್ಣ ಸಂದೇಹಗಳಿದ್ದವು (ಫುಕೋ, 1970, ಪು. 160). ಹದಿನೆಂಟನೆಯ ಶತಮಾನದಲ್ಲಿ ಅರ್ಥಶಾಸ್ತ್ರಕ್ಕೆ ಧನಾತ್ಮಕ ಅರ್ಥ ಕೂಡಾ ಬಂತು. ಈ ಶತಮಾನದಲ್ಲಿ ಹಣವೆಂದರೆ ಸಂವಾದಿ ಅಲ್ಲ. ಅದಕ್ಕೊಂದು ನಿರ್ದಿಷ್ಟ ಗುಣವಿದೆ ಎಂಬ ನಿಲುವು ಸ್ಥಾಪಿತವಾಯಿತು (ಅದೇ, ಪು. 167). ನೀತಿಯನ್ನು ಹಾಗೂ ಸದ್ಭಾವನೆಯನ್ನು ದುರ್ಲಕ್ಷಿಸುವ ಅರ್ಥಶಾಸ್ತ್ರ ಮೇಣದ ಗೊಂಬೆಗಳಿದ್ದಂತೆ, ಜೀವಂತವಿದ್ದಂತೆ ಕಂಡರೂ ಸಜೀವವಾಗಿರುವುದರಲ್ಲಿರುವ ಪ್ರಾಣ ಅಲ್ಲಿ ಇಲ್ಲ. ಪ್ರತಿಯೊಂದು ಆಯುತವೇಳೆಯಲ್ಲಿಯೂ ಈ ನವೀನ ಅರ್ಥಶಾಸ್ತ್ರದ ನಿಯಮಗಳು ವ್ಯವಹಾರದಲ್ಲಿ

ಮುರಿದುಬಿದ್ದಿವೆ. ಅವನ್ನು ನಿರ್ದೇಶಕ ತತ್ತ್ವಗಳೆಂದು ತಿಳಿಯುವ (ಒಪ್ಪುವ) ರಾಷ್ಟ್ರಗಳೂ ವ್ಯಕ್ತಿಗಳೂ ಹಾಳಾಗಲೇಬೇಕು ಎಂದು ಗಾಂಧಿ ಹೇಳುತ್ತಾರೆ. (ಗಾಂಧಿ ಅರ್ಥವಿಚಾರ ಪುಟ. 40) ಮಾರುಕಟ್ಟೆಯ ಮೌಲ್ಯ ಮತ್ತು ಹಣಕ್ಕೆ ಅತ್ಯಂತ ತುರಿಯಾವಸ್ಥೆ ಎನ್ನಬಹುದಾದ ಮೌಲ್ಯ ಬಂದಿತು (ಅದೇ, ಪು. 167). ಆದರೆ ದೇಹ ಮತ್ತು ದುಡಿಮೆ, ಹಣದ ವಿನಿಯೋಗ ಮತ್ತು ಸಂಸ್ಕೃತಿ ಹಾಗೂ ಲಾಭದ ಪ್ರಶ್ನೆಯು ಸಂಕೀರ್ಣವಾಗಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ ಹಣ, ದುಡಿಮೆ, ಶ್ರಮ, ಸಂಸ್ಕೃತಿಯ ನಡುವಣ ಸಂಬಂಧವನ್ನು ನಾವು ಸಂವಾದಿಯಾದ ಪದಗಳನ್ನು ಮಾತ್ರವೇ ಬಳಸುತ್ತೇವೆ. ಯಾವ ದುಡಿಮೆಗೆ ಯಾವ ಕೂಲಿ ಎನ್ನುವುದು ಅಸ್ಪಷ್ಟವಾಗಿದೆ. ಆದ್ದರಿಂದ ಬರೀ ದುಡ್ಡು ಮತ್ತು ಕೂಲಿಯನ್ನು ಕುರಿತು ಹೇಳುವಾಗ ಅದನ್ನು ಹೇಗೆ ವಿವರಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ವಾಸ್ತವವಾಗಿ ನಾವು ಯಾವುದನ್ನು ಲಾಭ ಎಂದು ಹೇಳುತ್ತೇವೆಯೋ ಅದು ಉಳಿತಾಯ ಅಥವಾ ಮೌಲ್ಯ ಮಿಗುತಾಯವೇ ಆಗಿರುತ್ತದೆ. ಲಾಭ ಮತ್ತು ಅದರ ವ್ಯವಹಾರವನ್ನು ಈಗ ಸುಳ್ಳು ಕೇಂದ್ರಿತ ಎಂದೂ ಹೇಳಬಹುದು. ವಾಸ್ತವವಾಗಿ ಈಗ ನಮ್ಮ ಆಸ್ತಿಯ ಪ್ರಶ್ನೆಯು ಬದಲಾಗಿದೆ. ನೀತಿ, ಕಾನೂನು, ಪ್ರಭುತ್ವ ಮುಂತಾದವುಗಳು ಬದಲಾಗಿವೆ. ಅದು ಈಗ ಒಬ್ಬ ವ್ಯಕ್ತಿಯ ಕರಪತ್ರವಲ್ಲ. ಸಂಪನ್ಮೂಲದ ಕೊರತೆಯು ಇರುವುದು ಬಡಜನರಿಗೆ. ಬಂಡವಾಳದದ ನೆರವಿಗೆ ಅನೇಕ ಕಾರ್ಮಿಕರು ಇರುತ್ತಾರೆ. ಆದರೆ ಕಾರ್ಮಿಕರ ನೆರವಿಗೆ ಬಂಡವಾಳವಾದವು ಬರುವುದಿಲ್ಲ. ದೇಹದ ದುಡಿಮೆ ಬೇರೆ ಮತ್ತು ಮನಸ್ಸಿನ ದುಡಿಮೆಯು ಬೇರೆ,

ಜನರ ವಿಭಿನ್ನ ಮಾದರಿಯ ದುಡಿಮೆ ಮತ್ತು ಅದರ ಹಿಂದೆ ಇರುವ ಶ್ರಮವನ್ನು ಈಗ ನಾವು ಮತ್ತೆ ಚರ್ಚೆಗೆ ಗುರಿಪಡಿಸುವುದು ಅಗತ್ಯವಾಗಿದೆ. ಬಡತನ ಮತ್ತು ಅದರ ಹಿಂದೆ ಇರುವ ಹಸಿವು ನಮ್ಮ ಮುಂದೆ ಮಹತ್ವದ ಸಮಸ್ಯೆಯಾಗ ಬೇಕು. ಅಭಿವೃದ್ಧಿಯ ಪ್ರಥಮ ಆದ್ಯತೆ ಎಂದರೆ ಹಸಿವಿನ ನಿವಾರಣೆ. ಆದರೆ ಕುಡಿಯಲು ಒಳ್ಳೆಯ ನೀರು, ತುತ್ತು ಅನ್ನ ಅಭಿವೃದ್ಧಿಯ ಮೊದಲ ಪ್ರಶ್ನೆಯಾಗಬೇಕು. ಬಂಡವಾಳವಾದ ಮತ್ತು ವೇತನಗಳ ನಡುವೆ ಇರುವ ಸಂಬಂಧವು ದ್ವಂದ್ವಾತ್ಮಕವೂ ಹೌದು. ಬಂಡವಾಳ, ಕೈಗಾರಿಕೆ ಮತ್ತು ವೇತನಗಳ ನಡುವೆ ಅನೇಕ ರೀತಿಯ ಸಂಘರ್ಷಗಳಿರುತ್ತದೆ. ಅದು ಅನಿವಾರ್ಯ ಕೂಡಾ. ಅದರಲ್ಲಿ ಇರುವ ಸಂಘರ್ಷವು ವ್ಯಕ್ತ ಅಥವಾ ಅವ್ಯಕ್ತವಾಗಿಯೂ ಇರಬಹುದು. ನಾವು ಇವುಗಳನ್ನು ಏಕಮುಖವಾಗಿ ನೋಡಲು ಸಾಧ್ಯವಾಗುವುದೂ ಇಲ್ಲ. ನಾವು ಇವುಗಳ ನಡುವೆ ಇರುವ ಸಂಬಂಧವನ್ನು ಏಕ ತೀರ್ಮಾನಕ್ಕೆ ಬರುವುದು ಅಸಾಧ್ಯವೂ ಹೌದು. ಇವುಗಳ ನಡುವೆ ಅನೇಕ ಪ್ರತ್ಯೇಕತೆಯೂ ಇರುತ್ತದೆ.

"ನೇರ ಉತ್ಪಾದಕರಿಂದ ಆಸ್ತಿಯನ್ನು ಕಿತ್ತುಕೊಳ್ಳುವ ಕ್ರಿಯೆಯನ್ನು ನಿಷ್ಕರುಣೆಯ ಗೂಂಡಾಗಿರಿಯಿಂದ, ಅತ್ಯಂತ ಕುಖ್ಯಾತ, ಅತ್ಯಂತ ನೀಚ, ಅತ್ಯಂತ ಕ್ಷುದ್ರ, ಅತ್ಯಂತ ಕೀಳು ಅಸಹ್ಯ ರಾಗದ್ವೇಷಗಳ ಪ್ರಚೋದನೆಯೊಂದಿಗೆ ಸಾಧಿಸಲಾಗುತ್ತದೆ. ಸ್ವಯಮಾರ್ಜಿತ ಖಾಸಗಿ ಆಸ್ತಿಯ (ರೈತನ ಹಾಗೂ ಕೈಕಸುಬುದಾರನ) "ಅಂದರೆ ಪ್ರತ್ಯೇಕವಾದ ಸ್ವತಂತ್ರನಾದ ಶ್ರಮಿಕ

ವ್ಯಕ್ತಿಯೂ ಅವನ ಶ್ರಮ ಪರಿಸ್ಥಿತಿಗಳೂ ಒಟ್ಟಿಗೆ ಬೆಸೆದುದರ ಮೇಲೆ ಆಧರಿಸಿರುವ ಖಾಸಗಿ ಆಸ್ತಿಯ ಸ್ಥಳದಲ್ಲಿ, ಇತರರ ಹೆಸರಲ್ಲಿ ಮಾತ್ರ 'ಸ್ವತಂತ್ರವಾದ' ಶ್ರಮವನ್ನು ಶೋಷಿಸುವುದರ ಮೇಲೆ ಆಧರಿಸಿದ ಬಂಡವಾಳಶಾಹಿ ಖಾಸಗಿ ಆಸ್ತಿಯನ್ನು ಸ್ಥಾಪಿಸಲಾಗುತ್ತದೆ..... ಈಗ ಯಾರಿಂದ ಆಸ್ತಿಯನ್ನು ಕಿತ್ತುಕೊಳ್ಳಬೇಕೋ ಆತ ಇನ್ನೆಷ್ಟು ಮಾತ್ರವೂ ಸ್ವಂತಕ್ಕಾಗಿ ದುಡಿಯುವ ಶ್ರಮಿಕ ಅಲ್ಲ. ಆದರೆ ಅನೇಕ ಶ್ರಮಿಕರನ್ನು ಶೋಷಿಸುವ ಬಂಡವಾಳಗಾರನಾಗಿರುತ್ತಾನೆ. ಆಸ್ತಿಯನ್ನು ಕಿತ್ತುಕೊಳ್ಳುವ ಈ ಕ್ರಿಯೆಯನ್ನು ಬಂಡವಾಳಶಾಹಿ ಉತ್ಪಾದನೆಯಲ್ಲಿ ಅಂತಃಸ್ಥವಾದ ನಿಯಮಗಳ ಕಾರ್ಯಾಚರಣೆಯೇ, ಬಂಡವಾಳದ ಕೇಂದ್ರೀಕರಣವೇ ಮಾಡುತ್ತದೆ. ಸಣ್ಣ ಆಸ್ತಿವಂತನ ಶ್ರಮದ ಮೇಲೆ ಆಧರಿಸಿದ ಖಾಸಗಿ ಒಡೆತನ, ಮುಕ್ತ ಸ್ಪರ್ಧೆ, ಪ್ರಜಾಪ್ರಭುತ್ವ–ಬಂಡವಾಳಗಾರರೂ ಅವರ ಪತ್ರಿಕೆಗಳೂ ಕಾರ್ಮಿಕರನ್ನೂ ರೈತರನ್ನೂ ಮೋಸಗೊಳಿಸಲು ಬಳಸುವ ಈ ಎಲ್ಲ ಆಕರ್ಷಕ ಘೋಷಣೆಗಳು ಬಹಳ ಹಳೆಯ ಸಂಗತಿಗಳಾಗಿವೆ. ಬಂಡವಾಳಶಾಹಿ ಪದ್ಧತಿಯು, ಕೆಲವೇ "ಮುಂದುವರಿದ" ದೇಶಗಳು ಜಗತ್ತಿನ ಜನಸಂಖ್ಯೆಯ ಅತ್ಯಧಿಕ ಭಾಗವನ್ನು ವಸಾಹತು ದಬ್ಬಾಳಿಕೆಗೂ ಹಣಕಾಸಿನ ದೌರ್ಜನ್ಯಕ್ಕೂ ಈಡು ಮಾಡುವ ಜಾಗತಿಕ ವ್ಯವಸ್ಥೆಯಾಗಿ ಬೆಳೆದಿದೆ. (ವಿ.ಐ. ಲೆನಿನ್, 2013, ಸಾಮ್ರಾಜ್ಯಶಾಹಿ, ಪುಟ. 53) ಆದರೆ ಕೊಳು ಕೊಡುವಿಕೆಗಳು ವಾಸ್ತವವಾಗಿ ಸಾಮಾಜಿಕ ಸಂಬಂಧವನ್ನು ಸೂಚಿಸುತ್ತದೆ. ಮತ್ತು ಹಣವನ್ನು ಅದರ ಮೌಲ್ಯವನ್ನು ನಿರ್ಧಾರ ಮಾಡುವುದು ವಾಸ್ತವಾಗಿ ಪ್ರಭುತ್ವವೇ. ಡೇವಿಡ್ ರೆಕಾರ್ಡೊ ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸಬೇಕು. ಅವನ ಪ್ರಕಾರ ಒಂದು ರಾಷ್ಟ್ರವೇ ಮಾರುಕಟ್ಟೆ. ಮತ್ತು ಅದು ಹಣದ ಮೌಲ್ಯವನ್ನು ನಿಗದಿಪಡಿಸುತ್ತದೆ. ಹಣ ಮತ್ತು ಉತ್ಪಾದನೆಯ ನಡುವಣ ಸಂಬಂಧವನ್ನು ನಿರ್ಧರಿಸುವುದು ಮಾರುಕಟ್ಟೆ. ಆದರೆ ಇದನ್ನು ನೋಡುವಾಗ ಮತ್ತೆ ಕೆಲವು ಅಂಶಗಳನ್ನು ಕುರಿತು ಯೋಚಿಸಬೇಕು: ಆಧುನಿಕ ಬಂಡವಾಳವಾದವು ಸಣ್ಣ ಉದ್ದಿಮೆಗಾರರನ್ನು ನಾಶಪಡಿಸುತ್ತದೆ. ಸಣ್ಣ ರೈತರು ಯಾವುದನ್ನು ಬೆಳೆಯುತ್ತಾರೆಯೋ ಅದಕ್ಕೆ ಸರಿಯಾದ ಮೌಲ್ಯವೇ ಇಲ್ಲವಾಗಿದೆ. ಕೂಲಿ ಕಾರ್ಮಿಕರು ದೇಹವನ್ನು ಪಣವಾಗಿ ಇಟ್ಟುಕೊಂಡು ದುಡಿಯುತ್ತಾರೆ. ಲೇಖಕರು ತಮ್ಮ ಮನಸ್ಸನ್ನು ತೊಡಗಿಸಿಕೊಂಡು ಪುಸ್ತಕವನ್ನು ಬರೆಯುತ್ತಾರೆ. ಮನಸ್ಸಿನ ಶ್ರಮವದು. ಬರೆದ ಮೇಲೆ ಪುಸ್ತಕವು ಪ್ರೆಸ್ಸಿಗೆ ಹೋಗುತ್ತದೆ. ಆದರೆ ಅದು ಹಾಗೆ ಹೋಗುವಾಗ ತನ್ನ ಬರಹಕ್ಕೆ ಯಾವ ಮೌಲ್ಯವಿದೆ ಮತ್ತು ಅದನ್ನು ಯಾರು ಕೊಂಡುಕೊಳ್ಳುತ್ತಾರೆ ಎನ್ನವುದರ ಅರಿವು ಲೇಖಕನಿಗೆ ಇಲ್ಲ. ಈ ಅರ್ಥದಲ್ಲಿ ಲೇಖಕ ಮತ್ತು ಅವನ ಶ್ರಮವು ಅಸ್ಪಷ್ಟವಾಗಿದೆ.

ಒಬ್ಬ ಬಂಡವಾಳಗಾರನು ಯಾವತ್ತೂ ಅನೇಕರನ್ನು ನಾಶಮಾಡುತ್ತಾನೆ. ಈ ಕೇಂದ್ರಿಕರಣದ ಜೊತೆಗೇ, ಅಥವಾ ಕೆಲವು ಬಂಡವಾಳಗಾರರು ಅನೇಕ ಬಂಡವಾಳಗಾರರಿಂದ ಆಸ್ತಿಯನ್ನು ಕಿತ್ತುಕೊಳ್ಳುವ ಈ ಕ್ರಿಯೆಯ ಜೊತೆಗೇ ಶ್ರಮ ಪ್ರಕ್ರಿಯೆಯ ಸಹಕಾರಿ ರೂಪವೂ, ವಿಜ್ಞಾನದ ತಂತ್ರಗಳನ್ನು ಬುದ್ಧಿಪೂರ್ವಕವಾಗಿ ಅನ್ವಯಿಸುವುದೂ, ಜಮೀನನ್ನು ಕ್ರಮಬದ್ಧವಾಗಿ ಸಾಗುವಳಿ ಮಾಡುವುದೂ, ಶ್ರಮ ಸಲಕರಣೆಗಳನ್ನು ಎಲ್ಲರೂ ಒಟ್ಟಾಗಿ ಮಾತ್ರ ಬಳಸಲು ಸಾಧ್ಯವಾಗುವ ಶ್ರಮ ಸಲಕರಣೆಗಳನ್ನಾಗಿ ಪರಿವರ್ತಿಸುವುದೂ, ಎಲ್ಲ ಉತ್ಪಾದನಾ ಸಾಧನಗಳನ್ನೂ ಸಾಮಾಜೀಕರಿಸಿದ ಸಂಯುಕ್ತ ಉತ್ಪಾದನಾ ಸಾಧನಗಳನ್ನಾಗಿ ಬಳಸುವ ಮೂಲಕ ಅವುಗಳಲ್ಲಿ

ಮಿತವ್ಯಯವನ್ನು ಸಾಧಿಸುವುದೂ, ಎಲ್ಲ ಜನತೆಗಳನ್ನೂ ಜಾಗತಿಕ ಮಾರುಕಟ್ಟೆಯ ಬಲೆಯಲ್ಲಿ ಸಿಕ್ಕಿಬೀಳಿಸುವುದೂ ಮತ್ತು ಇದರೊಂದಿಗೆ ಬಂಡವಾಳಶಾಹಿ ಆಡಳಿತವು ಅಂತರರಾಷ್ಟ್ರೀಯ ಸ್ವರೂಪ ಪಡೆಯುವುದೂ ಇವೆಲ್ಲಾ ಸತತವಾಗಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತ ಹೋಗುತ್ತವೆ. ಈ ಪರಿವರ್ತನಾ ಪ್ರಕ್ರಿಯೆಯ ಎಲ್ಲ ಅನುಕೂಲಗಳನ್ನೂ ಸ್ವಾಧೀನಪಡಿಸಿಕೊಂಡು ತಮ್ಮ ಗುತ್ತಿಗೆಯನ್ನಾಗಿ ಮಾಡಿಕೊಳ್ಳುವ ಬಂಡವಾಳ ಪ್ರಭುಗಳ ಸಂಖ್ಯೆ ಸತತವಾಗಿ ಕಮ್ಮಿಯಾಗುತ್ತ ಹೋಗುವುದರೊಂದಿಗೇ, ದಾರಿದ್ರ್ಯ, ದಬ್ಬಾಳಿಕೆ, ಗುಲಾಮಗಿರಿ, ಅವನತಿ, ಶೋಷಣೆಗಳ ಸಾಮೂಹಿಕ ಪ್ರಮಾಣವೂ ಹೆಚ್ಚುತ್ತ ಹೋಗುತ್ತದೆ. ಆದರೆ ಇದರ ಜೊತೆಗೆ ಕಾರ್ಮಿಕ ವರ್ಗದ ಬಂಡಾಯವೂ ಬೆಳೆಯುತ್ತದೆ. ಕಾರ್ಮಿಕ ವರ್ಗವು, ಸತತವಾಗಿ ಸಂಖ್ಯೆ ಹೆಚ್ಚುವ, ಶಿಸ್ತಿನಿಂದ ಕೂಡಿದ, ಐಕ್ಯಗೊಂಡ, ಬಂಡವಾಳಶಾಹಿ ಉತ್ಪಾದನೆಯ ಪ್ರಕ್ರಿಯೆಯು ಕಾರ್ಯ ಜರುಗಿಸುವ ರೀತಿಯಿಂದಲೇ ಸಂಘಟಿತವಾದ, ವರ್ಗವಾಗಿರುತ್ತದೆ. ಬಂಡವಾಳ ಏಕಸ್ವಾಮ್ಯಕ್ಕೊಳಪಡುವುದು, ಬಂಡವಾಳದೊಂದಿಗೇ ಬಂಡವಾಳದಡಿಯೇ ಉದ್ಭವಿಸಿ ಏಳಿಗೆ ಕಂಡ ಉತ್ಪಾದನಾ ವಿಧಾನಕ್ಕೆ ಕಾಲ್ತೊಡಕಾಗುತ್ತದೆ. ಉತ್ಪಾದನಾ ಸಾಧನಗಳು ಕೇಂದ್ರೀಕರಣ ಮತ್ತು ಶ್ರಮವು ಸಾಮಾಜೀಕರಣ ಕೊನೆಗೆ ಯಾವ ಘಟ್ಟ ಮುಟ್ಟುತ್ತವೆಂದರೆ, ಅವು ತಮ್ಮ ಬಂಡವಾಳಶಾಹಿ ಕವಚಕ್ಕೆ ಹೊಂದಿಕೊಳ್ಳಲಾರದವು ಆಗುತ್ತವೆ. ಆ ಕವಚವು ಸಿಡಿದೊಡೆಯುತ್ತದೆ. ಬಂಡವಾಳಶಾಹಿ ಖಾಸಗಿ ಆಸ್ತಿಯ ಅವಸಾನದ ಘಂಟಾರವ ಮೊಳಗುತ್ತದೆ. ಆಸ್ತಿಯನ್ನು ಕಿತ್ತುಕೊಂಡವರಿಂದ ಆಸ್ತಿಯನ್ನು ಕಿತ್ತುಕೊಳ್ಳಲಾಗುತ್ತದೆ." (ಬಂಡವಾಳ," ಸಂ1) ಗ್ರಾಂಶಿಯಲ್ಲಿ ಇದು ನೈತಿಕವಾದ ಒಂದು ನೆಲೆಯನ್ನು ಪಡೆಯುತ್ತದೆ. ಅವನು ಇದು ಸಂಸ್ಕೃತಿಯ ಮೇಲೆ ಪ್ರಭಾವವನ್ನು ಬೀರಿದೆ ಎಂದು ಹೇಳುತ್ತಾನೆ. ಪ್ರಭುತ್ವವು ಹೇಗೆ ಬೇರೆ ಬೇರೆ ತಂತ್ರಗಳನ್ನು ಹೂಡುತ್ತದೆ ಎಂದೂ ಅವನು ಹೇಳುತ್ತಾನೆ, ಕೆಲವು ವ್ಯಕ್ತಿಗಳು ಮಾತ್ರವೇ ಹೇಗೆ ಮುಂದೆ ನಿಲ್ಲುತ್ತಾರೆ ಎಂದೂ ಅವನು ವಿವರಿಸುತ್ತಾನೆ. ಇದನ್ನು ಅವನು ಎಕಾನಾಮಿಕ್ ಕಾರ್ಪೊರೇಟ್ ಎಂದು ಕರೆಯುತ್ತಾನೆ.

ಗ್ರಾಂಶಿಯು ಯಜಮಾನಿಕೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅದನ್ನು ಬೇರೆ ಅರ್ಥದಲ್ಲಿ ಬಳಸಿದ್ದಾನೆ. ಅವನಲ್ಲಿ ಪ್ರಭುತ್ವವು ಒಂದು ಭಾವನಾತ್ಮಕವಾದ ಸಂಗತಿಯು ಅಲ್ಲ. ಎರಡನೆಯದಾಗಿ ಅವನು ಯಜಮಾನಿಕೆಯನ್ನು ಹೇಳುವಾಗ ಅದರ ರೂಪೀಕರಣವನ್ನು ವಿವರಿಸಿದ್ದಾನೆ. ಬಹು ಸಂಸ್ಕೃತಿಯೆಂದು ಹೇಳುವಾಗಲೂ ನಮಗೆ ಒಂದು ಅರಿವು ಇರಬೇಕಾಗುತ್ತದೆ. ಅಧಿಕಾರ ಮತ್ತು ಹಣ ಎರಡೂ ಹೇಗೆ ವಸಾಹತು ಕಾಲದಲ್ಲಿ ನಿಯಂತ್ರಣವನ್ನು ರೂಪಿಸಿದವು ಎಂದೂ ನೋಡಬೇಕು. ವಾಸ್ತವವಾಗಿ ನಮಗೆ ಇವುಗಳು ಸಂವಾದಿಯಾದ ಅಥವಾ ಒಂದು ರೂಪಕದ ಭಾಷೆಯು ಅಲ್ಲ ಎಂದು ಮನದಟ್ಟು ಮಾಡಬೇಕಾಗುತ್ತದೆ. ವಿಶ್ವರಹಿತವಾದ ಒಂದು ಜಗತ್ತು ಎನ್ನುವುದನ್ನು ಗ್ರಹಿಸಿದರೆ ಈ ಮಾತು ಅರ್ಥವಾಗಲು ಸಾಧ್ಯ. ಯಾವುದೇ ತಾತ್ವಿಕತೆಯು ಇಲ್ಲದ ಮತ್ತು ಯಾವುದೇ ತಾಂತ್ರಿಕತೆ ಇಲ್ಲದ ಒಂದು ಜಗತ್ತನ್ನು ನಾವು ಈವತ್ತು ಕಲ್ಪಿಸಿಕೊಳ್ಳುವ ಸಾಧ್ಯತೆಯೇ ಕಡಿಮೆ. ಮತ್ತೊಂದು ಪ್ರಶ್ನೆಯು ಇದೆ: ಒಂದು ರಾಜಕಾರಣವು ಹೇಗೆ ವ್ಯಕ್ತಿಯನ್ನು ಮತ್ತು ಸಮಾಜವನ್ನು ನೋಡುತ್ತದೆ ಎಂದೂ ಗ್ರಹಿಸುವುದು ಅತ್ಯಂತ ಅಗತ್ಯ. ಮೌಲ್ಯವೇ ಇಲ್ಲದ ಒಂದು ರಾಜಕಾರಣವು ಇದ್ದರೆ ಸರಿ ಆದರೆ ಪರಿಸ್ಥಿತಿಯು ಹಾಗೆ ಇಲ್ಲ. ಬೇರೆ ಬೇರೆ

ಸನ್ನಿವೇಶಗಳಲ್ಲಿ ವ್ಯಕ್ತಿಗಳು ಮತ್ತು ಸಮುದಾಯಗಳು ಬೇರೆ ಬೇರೆ ರೀತಿಯಲ್ಲಿ ಆಗುತ್ತಾರೆ ಎನ್ನುವುದೂ ಅತ್ಯಂತ ಮುಖ್ಯ (ಬೆಂಜಮಿನ್, ಅಡರ್ನೊ, ಮೆಶಿಯರಿ ಮುಂತಾದವರು ಅತ್ಯಂತ ಪ್ರಬಲವಾಗಿ ಹೇಳಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು: ನೋಡಿ- ಬೆಂಜಮಿನ್ ಕೈಗಾರಿಕಾ ಯುಗದ ಬಗ್ಗೆ ಮಾತಾಡುವಾಗ ಇದನ್ನು ಸ್ಪಷ್ಟ ಪಡಿಸಿದ್ದ. ಮೆಶಿಯರಿಯು ಲಿಟರರಿ ಪ್ರೊಡಕ್ಷನ್ ಬಗ್ಗೆ ಹೇಳುವಾಗಲೂ ಇದನ್ನು ಹೇಳುತ್ತಾನೆ. ಅಡರ್ನೊನ ಕಲ್ಚರ್ ಇಂಡಸ್ಟ್ರಿಯಲ್ಲಿಯೂ ಇದರ ಪ್ರಸ್ತಾಪವಿದೆ. ಎರಿಕ್ ಫ್ರಾಂನ ಮಾರ್ಕ್ಸ್‌ನ ಕಾನ್ಸೆಪ್ಟ ಆಫ್ ಮ್ಯಾನ್‌ನಲ್ಲಿ ಕೂಡಾ ಬರುತ್ತದೆ) ರಾಜಕೀಯವಾದ ಕೆಲವು ನಿಯಮಗಳು ಹೇಗೆ ನಿರ್ವಚನಕ್ಕೆ ಗುರಿಯಾಗಿದೆ ಎಂದೂ ನೋಡಬೇಕಾಗುತ್ತದೆ. ಇರಲಿ. ಕೊಡು ಮತ್ತು ತೆಗೆದುಕೋ ಎನ್ನುವುದು ಈಗ ಚಾಲ್ತಿಯಲ್ಲಿದೆ.

ತಾತ್ವಿಕತೆಯು ಅನೇಕವನ್ನು ನಿರ್ಧಾರ ಮಾಡುತ್ತದೆ ಎಂದು ಮಾರ್ಕ್ಸವಾದಿಗಳು ನಂಬುತ್ತಾರೆ. ಆದರೆ ಮಾರ್ಕ್ಸವಾದವು ಬುದ್ಧಿಜೀವಿಗಳನ್ನು ಪ್ರತ್ಯೇಕವಾದ ಒಂದು ವರ್ಗ ಎಂದು ಭಾವಿಸುವುದೂ ಇಲ್ಲ. ಲೇಖಕರು ಯಾರನ್ನು ಉದ್ದೇಶಿಸಿಕೊಂಡು ಮಾತಾಡುತ್ತಾರೆ ಎನ್ನುವುದು ಇಲ್ಲಿ ಮುಖ್ಯ. ತಾತ್ವಿಕತೆಗೆ ಒಂದು ರಾಜಕೀಯವಾದ ಒಂದು ಆಯಾಮವು ಇದೆ. ತಾತ್ವಿಕ ಎನ್ನುವುದು ಭೌತಿಕವಾದ ಒಂದು ಅಗತ್ಯವಾಗಿದೆ. ಅದನ್ನು ಅದೇ ಅರ್ಥದಲ್ಲಿ ನೋಡಬೇಕಾಗುತ್ತದೆ. ತಾತ್ವಿಕ ಎನ್ನುವುದು ಒಂದು ಸಮಾಜದ ಅಗತ್ಯಕ್ಕಾಗಿ ಇರುತ್ತದೆ. ಅದನ್ನು ನಾವು ಮರೆಯಬಾರದು. ಗ್ರಾಂಶಿಯು ಇದನ್ನು ಒಂದು ಸಮಾಜದ ಆವಶ್ಯಕತೆ ಎಂದು ಭಾವಿಸುತ್ತಾನೆ.

ಆಧುನಿಕ ಜಗತ್ತಿನಲ್ಲಿ ನಮ್ಮ ಹೋರಾಟಗಳು ಮಾನವೀಯತೆಯನ್ನು ಮತ್ತು ವಿಶ್ವಾತ್ಮಕತೆಯನ್ನು ಗ್ರಹಿಸುವಾಗ ಬೇರೆ ರೀತಿಯಲ್ಲಿ ಹಂಚಿಹೋಗಿವೆ. ಸ್ತ್ರೀವಾದ, ಪರಿಸರವಾದ, ಕಾರ್ಮಿಕರ ಹೋರಾಟ, ಜಾತಿ ಹೋರಾಟಗಳು, ಜನಾಂಗವಾದಿ ಹೋರಾಟಗಳು ಹೀಗೆ ಹರಿಹಂಚಾಗಿ ಹೋಗಿವೆ. ಇದರಿಂದ ಸಮಸ್ಯೆಯೂ ಆಗಿದೆ. ಕೆಲವು ಹೋರಾಟಗಳು ಒಂದು ಹಂತದಲ್ಲಿ ನಿಂತು ಬಿಡುತ್ತವೆ. ಉದಾರವಾದ ಮತ್ತು ಅದರ ಹೋರಾಟಗಳು ಕೂಡಾ ಒಂದು ಹಂತದಲ್ಲಿ ವಿರಮಿಸಿವೆ. ಎಷ್ಟೋ ಹೋರಾಟಗಳಿಗೆ ರಾಜಕೀಯ ಮತ್ತು ಆರ್ಥಿಕ ಆಯಾಮಗಳೂ ಇಲ್ಲವಾಗಿವೆ. ಈ ದೃಷ್ಟಿಯಲ್ಲಿ ಒಂದು ನಿರ್ಣಾಯಕವಾದ ವಿಶ್ವಾತ್ಮಕತೆಯು ಅವಶ್ಯವಿದೆ, ಅದು ಗ್ರಾಂಶಿಯು ಹೇಳುವ ಯಜಮಾನಿಕೆಯ ಕಲ್ಪನೆಯಿಂದ ಹುಟ್ಟುವುದು ಅಗತ್ಯವಿದೆ. ಪಶ್ಚಿಮದ ಲೇಖಕರು ಮತ್ತು ಪೂರ್ವದ ಲೇಖಕರು ಎಂದು ವರ್ಗೀಕರಿಸಿಕೊಂಡು ಯಜಮಾನಿಕೆಯ ಧೋರಣೆಯನ್ನು ವಿರೋಧಿಸುವುದು ಸಾಧ್ಯವಾಗುತ್ತದೆಯೇ ಎನ್ನುವುದು ಮೂಲ ಪ್ರಶ್ನೆಯೂ ಆಗಿದೆ. ತಪ್ಪಾದ ವಿಶ್ವಾತ್ಮಕತೆಯು ನಮಗೆ ಯಾವುದೇ ದಾರಿಯನ್ನು ಕೊಡುವುದೂ ಇಲ್ಲ. ಜಾಗತಿಕ ಮಟ್ಟದಲ್ಲಿ ಮನುಷ್ಯ ಹಕ್ಕುಗಳು ಬೇರೆ ಬೇರೆ ಹೆಸರಿನಲ್ಲಿ ದಮನಕ್ಕೆ ಗುರಿಯಾಗುತ್ತಿವೆ.

ಪ್ರಜ್ಞೆಯನ್ನು ಗ್ರಾಂಶಿಯು ಎರಡು ರೀತಿಯಲ್ಲಿ ಗುರುತಿಸುತ್ತಾನೆ. ಒಂದು ಸುಳ್ಳಾದ ಮತ್ತು ತಪ್ಪಾದ ಪ್ರಜ್ಞೆ. ತಾತ್ವಿಕತೆಗೆ ಯಾವಾಗ ನಿಷೇಧಾತ್ಮಕವಾದ ಅರ್ಥವು ಬರುತ್ತದೆಯೋ ಆಗ ಅಲ್ಲಿ ಸುಳ್ಳು ಪ್ರಜ್ಞೆಗೆ ಅವಕಾಶವಾಗುತ್ತದೆ. ನಾವು ಜಗತ್ತನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ನೋಡಲು ಹೊರಟರೆ ಆಗ ನಮಗೆ ಧನಾತ್ಮಕವಾದ ಪ್ರಜ್ಞೆಯು ಬರುತ್ತದೆ. ಆದರೆ ಯಾವುದು ಸಾಮಾನ್ಯವಾದ ಸಂವೇದನೆಯು ಇರುತ್ತದೆಯೋ ಅದರ ರೂಪೀಕರಣವು ಒಂದು ರೀತಿಯಲ್ಲಿ

ಇರುತ್ತದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆದ್ದರಿಂದ ಬುದ್ಧಿಜೀವಿಗಳಿಗೆ ಕೆಲವು ನಿರ್ದಿಷ್ಟವಾದ ಜವಾಬ್ದಾರಿ ಇರುತ್ತದೆ. ಅದನ್ನು ಜ್ಞಾನ ಮತ್ತು ಅದರ ಹಂಚುವಿಕೆಯ ಕೆಲಸವೆಂದೂ ಹೇಳಬಹುದು. ನಮ್ಮ ಜ್ಞಾನಕ್ಕೆ ಮತ್ತು ನಮ್ಮ ಪ್ರಜ್ಞೆಗೆ ಹಾಗೂ ನಮ್ಮ ತಾತ್ವಿಕತೆಗೆ ಸಂಬಂಧವು ಇರುತ್ತದೆ., ನಮ್ಮ ಹೇಳಿಕೆಗಳು ನಮ್ಮ ವಾದವನ್ನು ಮತ್ತು ನಮ್ಮ ತಾತ್ವಿಕತೆಯನ್ನು ಹೇಳುತ್ತದೆ. ಹೊರಗಿನ ತಾತ್ವಿಕತೆಯು ನಮ್ಮ ಅಂತರಂಗದ ತಾತ್ವಿಕತೆಯನ್ನು ನಿರ್ದೇಶಿಸುತ್ತದೆ.

ಫುಕೋ ಅಧಿಕಾರ ಮತ್ತು ಆರ್ಥಿಕತೆಯನ್ನು ಜೊತೆಗೆ ಇಟ್ಟುಕೊಂಡು ಚರ್ಚೆಯನ್ನು ಮಾಡುತ್ತಾನೆ, ಪ್ರಭುತ್ವವು ಹೇಗೆ ಆರ್ಥಿಕತೆಯನ್ನು ನಿಯಂತ್ರಣ ಮಾಡುತ್ತದೆ ಎಂದು ಅವನು ಹೇಳುತ್ತಾನೆ. ಅವನಿಗೆ ಈಗಾಗಲೇ ಹೇಳಿದಂತೆ ಅರ್ಥಶಾಸ್ತ್ರವನ್ನು ಅವನು ಒಂದು ಜೀನಿಯಾಲಿಜಿಯ ಮೂಲಕ ಗುರುತಿಸುತ್ತಾನೆ. ಅಸನ್ನು ಅವನು ಶಿಸ್ತು ಮತ್ತು ನಿಯಂತ್ರಣವು ಹೇಗೆ ಪ್ರಭುತ್ವವನ್ನು ನಿರೂಪಿಸುತ್ತದೆ ಎನ್ನುವುದು ಮುಖ್ಯವಾಗುತ್ತದೆ.

ಅಡರ್ನೊನ ವಾದಗಳು ಬೇರೆ – ಮನುಷ್ಯ ಪರಕೀಯತೆಯಿಂದ ಅಥವಾ ಪ್ರತ್ಯೇಕತೆಯಿಂದ ನಿಯಂತ್ರಿಸಲ್ಪಡುತ್ತಾನೆ. ಕಲೆಯೆನ್ನುವುದು ವಾಸ್ತವದ ಅನುಭವ. ಹಾಗೂ ಕಲೆಗೆ ಸಾಹಿತ್ಯಕ ಅಥವಾ ಸಾಂಸ್ಕೃತಿಕ ಸೂಚನೆಗಳು ಇರುತ್ತವೆ. ಕಲೆಯು ವಸ್ತುವನ್ನು ಒಂದು ಸೂಚಕವಾಗಿ ಸೆರೆ ಹಿಡಿಯುತ್ತದೆ ಮತ್ತು ಕಲೆಯು ಒಂದಲ್ಲ ಒಂದು ಅರ್ಥದಲ್ಲಿ ಸ್ವಾಯತ್ತವಾದುದು. ಅಡರ್ನೊ ಇದನ್ನು ಎತ್ತಿ ಹಿಡಿಯುತ್ತಾನೆ. ಕಲೆಗೆ ಶಾಸ್ತ್ರೀಯವೆನ್ನಬಹುದಾದ ಕ್ರಿಯಾತ್ಮಕ ಗುಣವಿದೆ. ಹಾಗಾಗಿ ಯಾವುದೇ ಕಲೆಯು ಸಂಘರ್ಷಗಳನ್ನು ನೇರವಾಗಿ ಪ್ರತಿನಿಧಿಸುವುದಿಲ್ಲ. ಕಲೆಯಲ್ಲಿ ಸಂಘರ್ಷವೆನ್ನುವುದು ಪಾರ್ಶ್ವನೋಟ ಮಾತ್ರವೇ ಆಗಿರುತ್ತದೆ. ಲುಕಾಕ್ಸ್ ಮತ್ತು ಅಡರ್ನೊರಿಗೆ ಕೆಲವು ವಿಷಯಗಳಲ್ಲಿ ಭಿನ್ನತೆಯಿದೆ. ವಸ್ತುವಿನ ಆಯ್ಕೆ ಆಯಾ ಕಾಲದ ಚರಿತ್ರೆಗೆ ಸಂಬಂಧಿಸಿದ್ದು ಎನ್ನುವುದು ಲುಕಾಕ್ಸ್‌ನವಾದ. ಸಾಹಿತ್ಯವು ವರ್ಗ ಸಂಘರ್ಷದ ಪರಿಕರ ಅಥವಾ ಉಪ ಉತ್ಪಾದನೆಯೆಂದು ಅವನು ಪ್ರತಿಪಾದಿಸುತ್ತಾನೆ. ಈ ವಿಷಯದಲ್ಲಿ ಅಡರ್ನೊ ಸ್ವಲ್ಪ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಸಾಹಿತ್ಯವೆನ್ನುವುದು ಒಂದೇ ಒಂದು ರಾಜಕೀಯ ದೃಷ್ಟಿಕೋನ ಹೊಂದಿರಬೇಕೆಂದು ಇಲ್ಲ. ಸಾಹಿತ್ಯದ ಹೊರಗೆ ಒಂದು ಪದವು ಕೆಲಸ ಮಾಡುವ ರೀತಿಯಲ್ಲಿ; ಅಥವಾ ಅದು ಹೊಂದುವ ಅರ್ಥವಂತಿಕೆಯ ರೀತಿಯಲ್ಲಿ ಒಂದು ಪದವು ಒಂದು ಕೃತಿಯ ಒಳಗೆ ಕೆಲಸ ಮಾಡುವುದಿಲ್ಲ. ಒಂದು ಪದದ ಸಂವಹನದ ಅರ್ಥವು ಒಂದು ಸಂಸ್ಕೃತಿಯೊಳಗೆ ರೂಪುಗೊಳ್ಳುತ್ತದೆ. ಆದರೆ ಕೃತಿಯೊಳಗೆ ಪದದ ಸಂವಹನವು ತುಂಬಾ ಸರಳವಾದ ಸಂದೇಶವನ್ನು ಮಾತ್ರ ಓದುಗರಿಗೆ ಮುಟ್ಟಿಸುವುದಿಲ್ಲ. ಕಲೆಯೆನ್ನುವುದು ವಾಸ್ತವವನ್ನು ಪ್ರತಿನಿಧಿಸುತ್ತದೆ. ಅದು ಮನುಷ್ಯನ ಪ್ರಜ್ಞೆಯ ಪ್ರಾತಿನಿಧೀಕರಣ. ಆದುದರಿಂದ ಕಲೆಯಲ್ಲಿ ಮನುಷ್ಯನ ಆಂತರಿಕ ಜೀವನವೆನ್ನುವುದು ತುಂಬಾ ಮುಖ್ಯ. ಇದು ಅಡರ್ನೊ ಪ್ರತಿಪಾದಿಸುವ ನಿಲುವು.

ಮೂಲ : ಗ್ರಾಂಶಿ : ಹಿಸ್ಟಾರಿಯನ್ ಆಫ್ ಮಾಡರ್ನಿಟಿ

(ಮೂಲ ಅಲ್ಬರ್ಟ್ ಬರ್ಗಿಯೊ ಕೃತಿ: ಗ್ರಾಂಶಿ ಇನ್ ವರ್ಲ್ಡ್ ಪ್ರೆಡ್ರಕ್ ಜೇಮ್ಸನ್ (ಸಂ)

೨

ಆಡಂ ಸ್ಮಿತ್

ಗ್ರಾಂಶಿಯ ಅತ್ಯಂತ ಮುಖ್ಯವಾದ ಒಂದು ಚರ್ಚೆಯು ಇರುವುದು ಬುದ್ಧಿಜೀವಿಗಳ ಕುರಿತು. ಅದನ್ನು ಮೊದಲು ಒಂದು ಪ್ರತ್ಯೇಕವಾದ ವರ್ಗ ಎಂದು ಹೇಳುತ್ತಿದ್ದರು. ಅದರಲ್ಲಿಯೂ ಅವರನ್ನು ಅತಿ ವಿಶಿಷ್ಟವಾದ ಜನರು ಕಾವ್ಯ, ತತ್ವಜ್ಞಾನ, ಸಮಾಜ ಚಿಂತನೆಯನ್ನು ಬೇರೆ ಥರ ಮಾಡುತ್ತಾರೆ ಎಂದು ಹೇಳುತ್ತಿದ್ದರು. ಆದರೆ ಗ್ರಾಂಶಿಯು ಇದನ್ನು ಒಪ್ಪುವುದಿಲ್ಲ. ಆದರೆ ಅವನು ಇದನ್ನು ಪ್ರತ್ಯೇಕವಾದ ವರ್ಗ ಎಂದು ಭಾವಿಸುವ ಬದಲು ಅವರನ್ನು ಉಳಿದವರಂತೆ ನೋಡಬೇಕಾದ ಅಗತ್ಯವಿದೆ ಎಂದು ಹೇಳುತ್ತಾನೆ. ಒಂದು ಜನವರ್ಗವು ಆಧುನಿಕ ವಿದ್ಯಾಭಾಸವನ್ನು ಪಡೆದು ಬುದ್ಧಿಜೀವಿಗಳು ಎನಿಸಿಕೊಂಡಿದ್ದಾರೆ. ಅವರಿಗೆ ಸಮಾಜದ ಮನ್ನಣೆಯು ಇರುತ್ತದೆ. ಇದರಲ್ಲಿ ಲೇಖಕರು ಇದ್ದಾರೆ. ವಿಜ್ಞಾನದಲ್ಲಿ ಕೆಲಸ ಮಾಡುವವರೂ ಇದ್ದಾರೆ. ಮತ್ತೊಂದು ಬಗೆಯ ಜನರು ಇದ್ದಾರೆ. ಅವರಿಗೆ ಈ ಬಗೆಯ ಮಾನ್ಯತೆಯು ಇಲ್ಲ. ಅವರು ಬೇರೆ ಥರ ಇದ್ದಾರೆ. ಅವರನ್ನು ಸಾಮಾಜಿಕ ಜೀವನದ ಅತ್ಯಂತ ಅನಿವಾರ್ಯವಾದ ವರ್ಗ. ಇವರನ್ನು ಗ್ರಾಂಶಿಯು ಸಾವಯವ ಥರದ ಎಂದು ಹೇಳಬಹುದು ಎಂದು ಹೇಳುತ್ತಾನೆ. ಸಮಾಜದಲ್ಲಿ ಈ ವರ್ಗವು ಅತ್ಯಂತ ಮುಖ್ಯವಾದ ವರ್ಗ ಎಂದು ಮಾತ್ರವೇ ಹೇಳುವುದಲ್ಲ, ಇವರು ಸಮಾಜದಲ್ಲಿ ಬುನಾದಿಯೂ ಆಗಿರುತ್ತಾರೆ. ಅವರು ಸಮಾಜದಲ್ಲಿ ಮಾಡುವ ಕೆಲಸಗಳು ಬೇರೆಯಾಗಿರುತ್ತವೆ. ಆದರೆ ಅವನು ಮತ್ತೊಂದು ಮಾತನ್ನು ಹೇಳುತ್ತಾನೆ. ಲೇಖಕರು ಮಾತ್ರವೇ ನಾವು ಬುದ್ಧಿಜೀವಿಗಳು ಎಂದು ಭಾವಿಸುವುದು ಅಗತ್ಯವಿಲ್ಲ. ಎಲ್ಲಾ ಮನುಷ್ಯರು ಬುದ್ಧಿಜೀವಿಗಳು ಎಂದು ಭಾವಿಸುವುದು ಅತ್ಯಂತ ಅಗತ್ಯ ಎಂದು ಅವನು ಹೇಳುತ್ತಾನೆ. ಅವರ ಚಟುವಟಿಕೆಗಳು ಬೇರೆ ಎನ್ನುವುದು ಸಮಾಜಕ್ಕೆ ಅನಿವಾರ್ಯ. ಇದನ್ನು ನಾವು ಶಿಕ್ಷಣದ ಹಿನ್ನೆಲೆಯಲ್ಲಿಯೂ ಗಮನಿಸಬೇಕಾಗುತ್ತದೆ. ಶಿಕ್ಷಣ ಮತ್ತು ಅದರ ಪ್ರಜಾಪ್ರಭುತ್ವ ಮಾದರಿಯ ಸ್ವರೂಪವು ನಮಗೆ ಬುದ್ಧಿಜೀವಿಗಳನ್ನು ರೂಪಿಸಲು ಅವಕಾಶವನ್ನು ಮಾಡಿಕೊಡುತ್ತದೆ ಎನ್ನುವುದು ಅವನ ಮತ್ತೊಂದು

ವಾದವಾಗಿದೆ. ರಾಜಕಾರಣ ಮತ್ತು ಅದರ ಸ್ವರೂಪವು ನಮಗೆ ಹೋರಾಟದ ಅಗತ್ಯವನ್ನು ಹೇಳುತ್ತದೆ. ಇದನ್ನು ಹೇಳುವಾಗ ಗ್ರಾಂಶಿಯು ನಮಗೆ ರಿಸೊಗಿಮೆನಂಟೂ ಎಂದು ಹೇಳುತ್ತಾನೆ. ವರ್ಗ ಮತ್ತು ಅದರ ಸಮರದಲ್ಲಿ ಈ ಬಗೆಯ ವರ್ಗವು ಅತ್ಯಂತ ಮುಖ್ಯ. ಹೋರಾಟದಲ್ಲಿ ಲೇಖಕರು ಮತ್ತು ಬುದ್ಧಿಜೀವಿಗಳ ಅಗತ್ಯವನ್ನು ಗ್ರಾಂಶಿಯು ಒಪ್ಪುತ್ತಾನೆ. ಅವರ ಅಗತ್ಯವಿದೆ ಎಂದೂ ಹೇಳುತ್ತಾನೆ. ಇದನ್ನು ಹೇಳುವಾಗ ಅವನು ಲೆನಿನ್‌ನ ಅತ್ಯಂತ ಮುಖ್ಯವಾದ ಒಂದು ಮಾತನ್ನು ಎತ್ತಿ ಹಿಡಿಯುತ್ತಾನೆ: ನಾವು ಮಾಡಬೇಕಾದುದು ಏನು? ಕಾರ್ಮಿಕರು ಮಾತ್ರವೇ ಅಲ್ಲ, ಎಲ್ಲಾ ಜನರು ಹೋರಾಟದಲ್ಲಿ ಭಾಗವಹಿಸುವುದು ಅತ್ಯಂತ ಅಗತ್ಯ ಎನ್ನುವುದು ಅವನ ವಾದ. ಒಂದು ರೀತಿಯಿಂದ ಗ್ರಾಂಶಿಯು ಲೆನಿನ್ ವಾದದ ಮುಖ್ಯವಾದ ಅಂಶಗಳನ್ನು ಎತ್ತಿ ಹಿಡಿಯುತ್ತಾನೆ. ಆದರೆ ಅದನ್ನು ಸ್ವಲ್ಪ ನವೀಕರಣ ಮಾಡುತ್ತಾನೆ. ಬುದ್ಧಿಜೀವಿಗಳು ಕೂಡಾ ರಾಜಕೀಯ ಮತ್ತು ಅದರ ಬದ್ಧತೆಯನ್ನು ಒಪ್ಪಿಕೊಳ್ಳುವುದು ಅಗತ್ಯ ಎನ್ನುವುದು ಅವನ ವಾದ., ಯಾವುದೇ ಚಟುವಟಿಕೆಯನ್ನು ಹೆಚ್ಚು ಚಾಲ್ತಿಗೆ ಬರುವಂತೆ ಮತ್ತು ಒಂದು ಪ್ರವಾಹದ ಭಾಗವಾಗುವಂತೆ ನೋಡುವುದು ಅಗತ್ಯ.. ಸಾಮಾನ್ಯ ಮನುಷ್ಯರಿಗೂ ಬುದ್ಧಿಜೀವಿಗಳಿಗೂ ಒಂದು ಸಂಬಂಧ ಇರಬೇಕಾದ ಅಗತ್ಯವಿದೆ. ಸಾಮಾನ್ಯ ಮನುಷ್ಯರಿಗೆ ಕೆಲವು ಬಗೆಯ ಜ್ಞಾನವು ಇರುತ್ತದೆ ಎಂದು ಅವನು ಹೇಳುತ್ತಾನೆ.ಅವರೂ ರಾಜಕೀಯ ನಿರ್ಧಾರಗಳಲ್ಲಿ ಒಂದು ಪಾತ್ರವನ್ನು ವಹಿಸುತ್ತಾರೆ. ಇಲ್ಲಿಯೂ ಆಳ್ವಿಕೆ ಮತ್ತು ಅದರ ಪ್ರಶ್ನೆಗಳು ಇದ್ದೇ ಇರುತ್ತವೆ. ಅದರ ಅರಿವು ನಮಗೆ ಇರಬೇಕು. ನಮ್ಮ ಅನೇಕ ಸಾಂಪ್ರದಾಯಿಕ ಕ್ರಮಗಳೂ ಕೂಡಾ ಚರಿತ್ರೆಯ ಭಾಗವಾಗಿವೆ ಅತಿಯಾದ ವಿಜೃಂಭಣೆಯಿಂದ ಅವರನ್ನು ನೋಡುವುದು ಸರಿಯಾದ ಒಂದು ಕ್ರಮವಲ್ಲ., ಇದರಲ್ಲಿ ಸಾಮಾಜಿಕ ಜೀವನ ಮತ್ತು ಅದರ ವರ್ಗೀಕರಣವು ಇಲ್ಲ. ಅದರ ಬದಲು ಜನರನ್ನು ಪ್ರತಿಭಾವಂತ ಮತ್ತು ಪ್ರತಿಭೆಯು ಇಲ್ಲದವರು ಎಂದು ಹೇಳಬೇಕಾದ ಅಗತ್ಯವಿಲ್ಲ.ಅಡರ್ನೊನ ಪ್ರಕಾರ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಬುದ್ಧಿಜೀವಿಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಬುದ್ಧಿಜೀವಿಗಳ ಶಕ್ತಿಯು ವಿಶೇಷ ಅಧ್ಯಯನಗಳಲ್ಲಿ ವ್ಯಕ್ತವಾಗುತ್ತದೆ. ಬುದ್ಧಿಜೀವಿಗಳ ಚಟುವಟಿಕೆಯು ಯಾವಾಗಲೂ ಒಂದು ಮಿತಿಯ ಒಳಗಡೆಗೆ ಕೆಲಸವನ್ನು ಮಾಡುತ್ತದೆ.

ಯಾವುದನ್ನು ನಾವು ಬೌದ್ಧಿಕ ಸ್ವಾತಂತ್ರ್ಯವೆಂದು ಹೇಳುತ್ತೇವೆಯೋ ಅದನ್ನು ಕೂಡಾ ಚರಿತ್ರೆಯ ಅಗತ್ಯವೆಂದು ಹೇಳುತ್ತೇವೆ. ಪುನರುಜ್ಜೀವನದ ಅನಂತರ ಮನುಷ್ಯನ ಸಂವೇದನೆ ಮತ್ತು ಮನಸ್ಸಿನ ಕುರಿತು ಅನೇಕ ಚರ್ಚೆಗಳಾದವು ಎನ್ನುವುದನ್ನು ಮರೆಯಬಾರದು. ಆ ಕಾಲದ ಬುದ್ಧಿಜೀವಿ ವರ್ಗದ ವಿಚಾರಧಾರೆಗಳು ಒಂದು ಬಗೆಯಲ್ಲಿದ್ದವು. ಇದನ್ನು ಅನಂತರ ವೈಚಾರಿಕ ಸಂಘರ್ಷವೆಂದು ಕರೆಯಲಾಯಿತು. ಆದರೆ ಆಗಿನ ವಿಚಾರ ಧಾರೆಗಳನ್ನು ಮತ್ತೆ ಬೇರೆ ವಿಧದಲ್ಲಿ ನಿರೂಪಿಸಲಾಯಿತು. ಜ್ಞಾನದ ಚರ್ಚೆಯು ರಾಜಕೀಯ ಸಂಗತಿಗಳನ್ನು ಸೂಚಿಸಿತು. ಹಾಗಯೇ ಆಗಿನ ವಿಚಾರಗಳು ನೈತಿಕ, ರಾಜಕೀಯ, ಸಾಮಾಜಿಕ ಅರಿವನ್ನು ಸೂಚಿಸಿತು. ಆಗಿನ ರಾಜಕೀಯ ಎಚ್ಚರವು ಭಿನ್ನವಾಗಿತ್ತು. ಅದಕ್ಕೆ ಅನುಗುಣವಾಗಿ ಸಂವಹನ ಪ್ರಕ್ರಿಯೆಗಳು ಬದಲಾದವು. ಈ ಸಂದರ್ಭದಲ್ಲಿ ಮಾತು ಎನ್ನುವುದು ಕೂಡಾ ಆಗ ಭಿನ್ನವಾದ

ಚಹರೆಗಳನ್ನು ಸೂಚಿಸಿತು. ರಾಜಕೀಯ ಮತ್ತು ಚಾರಿತ್ರಿಕ ಸಂಗತಿಗಳು ಆಗುತ್ತಿರುತ್ತವೆ. ಅವುಗಳ ಸ್ವರೂಪವು ಅಸ್ಪಷ್ಟವೆಂದು ಹೇಳಬೇಕಾಗಿಲ್ಲ. ಚರಿತ್ರೆಯಲ್ಲಿ ಬೇಕಾದ್ದು ಯಾವುದು ಬೇಡವಾದ್ದು ಎಂದು ಅನೇಕ ಸಂದರ್ಭದಲ್ಲಿ ವರ್ಗೀಕರಿಸಲು ಬರುವುದಿಲ್ಲ. ಅದು ಸತ್ಯವೂ ಹೌದು. ಚರಿತ್ರೆಯನ್ನು ನಾವು ಹಗುರವಾದ ವಿಷಯವೆಂದು ಪರಿಗಣಿಸಬೇಕಾಗಿಲ್ಲ. ಚರಿತ್ರೆಯ ಅನಿರ್ದಿಷ್ಟವಾದುದು ಅಲ್ಲ. ಅಸ್ಪಷ್ಟವೂ ಅಲ್ಲ. ಅದಕ್ಕೆ ವಿಶಿಷ್ಟವಾದ ಅಸ್ತಿತ್ವವಿದೆ. ಅದು ಗಾಳಿಯಲ್ಲಿ ನಾವು ತೇಲಿಬಿಡಬಹುದಾದ ಸಂಗತಿಯೂ ಅಲ್ಲ. ಕಳೆದು ಹೋದುದಕ್ಕೆ ಮತ್ತು ನಮ್ಮ ವರ್ತಮಾನಕ್ಕೆ ಒಂದು ನಿಕಟವಾದ ಸಂಬಂಧವಿದೆ. ಅದು ಅನೇಕ ಸಂದರ್ಭದಲ್ಲಿ ಅವ್ಯಕ್ತವೂ ಹೌದು. ಆದರೆ ಭೂತ ಮತ್ತು ವರ್ತಮಾನಕ್ಕೆ ಒಂದು ಅವ್ಯಕ್ತವಾದ ನಂಟು ಇದೆ. ಚರಿತ್ರೆಯು ಮರುಕಳಿಸುತ್ತದೆ ಎಂದು ಹೇಳುವಂತಿಲ್ಲ. ಚರಿತ್ರೆಯು ಅಸ್ತಿತ್ವದಲ್ಲಿತ್ತು ಮತ್ತು ಇದೆ. ಅದಕ್ಕೂ ನಮ್ಮ ಜೀವನಕ್ಕೂ ಒಂದು ನಂಟು ಇದೆ. ಅದು ನಮ್ಮ ಅಸ್ತಿತ್ವವನ್ನು ರೂಪಿಸಿದೆ. ಚಾರಿತ್ರಿಕ ಭೌತವಾದವು ಅದನ್ನು ಸೂಚಿಸುತ್ತದೆ. ನಾವು ಇದ್ದಕ್ಕಿಂತ ಸೃಷ್ಟಿಯಾದವರಲ್ಲ. ನಮ್ಮ ಅಸ್ತಿತ್ವವು ಪಾಪವಲ್ಲ. ಚರಿತ್ರೆಯು ಬರೀ ಕಥನವೂ ಅಲ್ಲ. ನಮ್ಮ ಅನೀರಿಕ್ಷಿತವಲ್ಲವೆಂದು ಬೆಂಜಮಿನ್ ಹೇಳುತ್ತಾನೆ. ಅದು ಕಲ್ಪಿತವಲ್ಲ. ಅದು ಸತ್ಯವೂ ಹೌದು. ಆದರೆ ನಾವು ಏನು ಮಾಡುತ್ತೇವೆಂದರೆ ಚರಿತ್ರೆಯನ್ನು ವರ್ಗೀಕರಿಸುತ್ತೇವೆ. ಚರಿತ್ರೆಯ ವರ್ಗೀಕರಣವೆಂದರೆ ಮೇಜರ್ ಮತ್ತು ಮೈನರ್. ಚರಿತ್ರೆಯನ್ನು ನಾವು ಸತ್ಯವೆಂದು ಗ್ರಹಿಸಲು ಹೋದರೆ ಅದರಲ್ಲಿ ಈ ವರ್ಗೀಕರಣವು ಬರುವುದಿಲ್ಲ. ಸತ್ಯದಲ್ಲಿ ಮೇಜರ್ ಮತ್ತು ಮೈನರ್ ಎಂಬ ವ್ಯತ್ಯಾಸವಿದೆಯೇ ಎನ್ನವುದು ಮಾರ್ಕ್ಸವಾದದ ನಿಲುವು. ಚರಿತ್ರೆಯು ಆಗಿರುವುದು. ಅದನ್ನು ಒರಸಿ ಹಾಕಲು ಬರುವುದಿಲ್ಲ. ಯಾವುದು ನಡೆದಿದೆಯೋ ಅದು ನಿಜವಾಗಿ ಆಗಿ ಹೋಗಿದೆ. ಮತ್ತು ಅದನ್ನು ಬೇರೆ ಬೇರೆ ಹಿನ್ನೆಲೆಯಲ್ಲಿಯೂ ಅರ್ಥ ಮಾಡಿಕೊಳ್ಳಬೇಕು. ಸತ್ಯವು ನಮ್ಮಿಂದ ಓಡಿಹೋಗಿ ಎಲ್ಲೋ ಅಡಗಿ ಕೂತುಕೊಳ್ಳುವುದಿಲ್ಲ. ಚರಿತ್ರೆಯನ್ನು ಅನೇಕರು ಅಲೌಕಿಕವೆಂದು ಅನೇಕರು ಭಾವಿಸುತ್ತಾರೆ. ಆದರೆ ಮಾರ್ಕ್ಸವಾದದ ಪ್ರಕಾರ ಅದು ಅಲೌಕಿಕವಲ್ಲ. ಅದು ಮನುಷ್ಯರಿಗೆ ಸಂಬಂಧ ಪಟ್ಟದ್ದೂ ಹೌದು. ಆದರೆ ನಾವು ನಮ್ಮ ವರ್ತಮಾನದಿಂದಲೇ ಭೂತವನ್ನು ಕಟ್ಟಿಕೊಳ್ಳುತ್ತೇವೆ. ಅದು ನಿಜವಾಗಿಯೂ ಏನಾಗಿತ್ತು ಎನ್ನವುದೇ ಮುಖ್ಯವಾದ ಪ್ರಶ್ನೆ. ಅದು ನಮ್ಮ ನೆನಪೂ ಹೌದು. ನೆನಪು ಎನ್ನುವುದು ವಾಸ್ತವವಾಗಿ ಏಕ ಕೇಂದ್ರಿತವಾಗಿ ಇರಬೇಕಾಗಿಲ್ಲ. ಅದು ಆಳುವವರ ಕಥನವೂ ಹೌದು. ಮತ್ತು ಆಳಿಸಿಕೊಂಡವರ ಕತೆಗಳು ಕೂಡಾ ಹೌದು. ಚರಿತ್ರೆಯೆಂದರೆ ಅದು ಹೋರಾಟಗಳ ಕಥನವೂ ಅಲ್ಲ. ಅನೇಕ ಹೋರಾಟಗಳು ನಮ್ಮನ್ನು ನಿಯಂತ್ರಿಸಿದ್ದೂ ಹೌದು. ಪರಂಪರೆಯಲ್ಲಿ ಅವುಗಳು ನಡೆದು ಹೋಗಿವೆ. ಆದ್ದರಿಂದ ಅದನ್ನು ನಾವು ಅರ್ಥ ಮಾಡಿಕೊಳ್ಳುವಾಗ ಎಚ್ಚರದಲ್ಲಿ ಇರಬೇಕು. ಚರಿತ್ರೆಯ ಯಾವಾಗಲೂ ನಮ್ಮಲ್ಲಿ ಕೆಲವು ಸೂಚನೆಗಳನ್ನು ಕೊಡುತ್ತವೆ. ಯಾವುದೇ ಯುದ್ಧ ನಡೆದಿದ್ದರೂ ಕೂಡಾ ಚರಿತ್ರೆಯನ್ನು ನಿಯಂತ್ರಿಸಲು ಆಗಲಿಲ್ಲ. ಹಾಗೆ ನೋಡುವುದಿದ್ದರೆ ಯಾವುದೇ ಯುದ್ಧಗಳು ನಮ್ಮಲ್ಲಿ ಕೇವಲ ದುಃಖವನ್ನು ಮಾತ್ರವೇ ಬಿಟ್ಟು ಹೋಗಿವೆ. ಯುದ್ಧಗಳನ್ನು ನೀತಿಶಾಸ್ತ್ರಗಳು ಕೂಡಾ ನಿಯಂತ್ರಿಸಲು ಶಕ್ತವಾಗಲಿಲ್ಲ.

ಇಲ್ಲಿ ಮತ್ತೊಂದು ಅಂಶವನ್ನು ನಾವು ನೆನಪಿನಲ್ಲಿಡಬೇಕು: ಚರಿತ್ರೆಯನ್ನು ಸಂಸ್ಕೃತಿಗಿಂತ ಭಿನ್ನವಾಗಿ ನೋಡಲು ಬರುವುದೂ ಇಲ್ಲ. ಇಸವಿಗಳೇ ಚರಿತ್ರೆಯಲ್ಲ ಯಾರನ್ನು ನಾವು

ಸಾಂಪ್ರದಾಯಿಕ ಬುದ್ಧಿಜೀವಿಗಳು ಎಂದು ಹೇಳುತ್ತೇವೆಯೋ ಅವರು ಉತ್ಪಾದನೆಯಲ್ಲಿ ನೇರವಾದ ಪಾತ್ರವನ್ನು ವಹಿಸುತ್ತಾರೆ. ಅವರ ವರ್ಗವು ಹೆಚ್ಚು ಸ್ಪಷ್ಟವಾಗಿ ನಮಗೆ ಕಾಣಿಸುತ್ತದೆ. ಬೂರ್ಜ್ವಾ ಬುದ್ಧಿಜೀವಿಗಳು ವಹಿಸುವ ಪಾತ್ರಕ್ಕೂ ಇವರಿಗೂ ತುಂಬಾ ವ್ಯತ್ಯಾಸವಿದೆ. ಇದರ ಇನ್ನೊಂದು ಪ್ರಶ್ನೆಯನ್ನು ನಾವು ನೋಡಬೇಕಾಗುತ್ತದೆ. ನಾವು ಯಾವುದನ್ನು ಆಲೋಚನೆ ಮಾಡುತ್ತೇವೆಯೋ ಅದರ ರೂಪವು ನಮಗೆ ನಿರ್ಧಾರವಾಗುವುದು ನಮ್ಮ ಪ್ರಜ್ಞೆಯಲ್ಲಿ. ಆಲೋಚನೆ ಎನ್ನುವುದು ನಮಗೆ ಪ್ರಾತಿನಿಧಿಕವೂ ಆಗಿರುತ್ತದೆ. ನಮ್ಮ ಆಲೋಚನೆ ಎನ್ನುವುದು ಯಾವಾಗಲೂ ಈ ದೃಷ್ಟಿಯಿಂದ ಬೇರೆಯಾಗುತ್ತವೆ. ಇದರ ಜೊತೆಗೆ ನಾವು ನಮ್ಮ ಆವಶ್ಯಕತೆಗೆ ಹೇಗೆ ಬೇರೆ ಬೇರೆ ಆಯಾಮವು ಇರುತ್ತದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ನಮ್ಮ ಪ್ರಜ್ಞೆಯು ನಮ್ಮ ಜೀವನದ ಕ್ರಮವನ್ನು ನಿರ್ಧಾರ ಮಾಡುತ್ತದೆ. ಎಂದು ಮಾರ್ಕ್ಸವಾದವು ಹೇಳುತ್ತದೆ. ಇಲ್ಲಿ ಇನ್ನೊಂದು ಸಂಗತಿಯನ್ನು ನಾವು ಹೇಳಬೇಕು: ನಮ್ಮ ಅನೇಕ ಆಲೋಚನೆ ಮತ್ತು ಅನೇಕ ಸಂಗತಿಗಳು ಚರಿತ್ರೆ ಮತ್ತು ಸಾಮಾಜಿಕ ಕಾರಣದಿಂದ ಬರುತ್ತವೆ. ಯಾವುದು ನಮ್ಮ ಆಲೋಚನೆಯು ಆಗುತ್ತದೆಯೋ ಅದು ಬೇರೆ ಬೇರೆ ಉತ್ಪಾದನೆಗಳನ್ನು ಮಾಡುತ್ತವೆ. ದೇವರ ಮತ್ತು ಅವನ ಅಸ್ತಿತ್ವಕ್ಕೆ ಜನರು ಒಂದು ರೂಪವನ್ನು ಕೊಟ್ಟಿದ್ದಾರೆ. ಆದರೆ ಇರುವ ಸಂಗತಿಯೆಂದರೆ ನಾವು ಈಗ ದೇವರನ್ನು ರೂಪಿಸುವುದು ಅಲ್ಲ. ಅದರ ಬದಲಿಗೆ ನಾವು ಈವತ್ತು ಮನುಷ್ಯರಿಗೆ ಒಂದು ಚಹರೆಯನ್ನು ಕೊಡಬೇಕಾಗುತ್ತದೆ. ನಮ್ಮ ಆಲೋಚನೆ, ನಮ್ಮ ಕ್ರಿಯಾಶೀಲತೆ, ನಾವು ಬರೆಯುವ ಚಿತ್ರ, ನಾವು ಬರೆಯುವ ಸಾಹಿತ್ಯ ಮುಂತಾದವುಗಳು ದೈವಿಕ ವಾಸ್ತವದಿಂದ ಮನುಷ್ಯನ ವಾಸ್ತವವು ಅತ್ಯಂತ ಮುಖ್ಯ ಎಂದು ಮಾರ್ಕ್ಸವಾದವು ಹೇಳುತ್ತವೆ.

ಜರ್ಮನಿಯ ಒಂದು ತತ್ವಜ್ಞಾನವನ್ನು ಹೇಳಬೇಕೆಂದರೆ ದೇವ ಲೋಕದಿಂದ ಮನುಷ್ಯನ ಲೋಕಕ್ಕೆ ಇಳಿಯುವುದು ಅತ್ಯಂತ ಅಗತ್ಯ. ಮನುಷ್ಯನನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅವನ ಕಾರ್ಯವನ್ನು ಮತ್ತೆ ಮತ್ತೆ ಪರಿಶೀಲನೆ ಮಾಡುವುದೂ ಹೌದು. ಇದರ ಭಾವಾರ್ಥವನ್ನು ನಾವು ನೋಡಬೇಕು: ಭ್ರಮೆಯಿಂದ ವಾಸ್ತವದ ಕಡೆಗೆ ಎನ್ನುವುದು ಇಲ್ಲಿ ಮುಖ್ಯವಾದ ಒಂದು ತತ್ವ. ಇಂಥ ವಾದವನ್ನು ಮಂಡಿಸುವವರು ವಾಸ್ತವವನ್ನು ಮಾತ್ರವೇ ಗ್ರಹಿಸುತ್ತಾರೆ. ಅವರಿಗೆ ದೈವೀವಾದವು ಬೇಕಾಗುವುದಿಲ್ಲ. ಅದು ಮುಖ್ಯ. ನಮಗೆ ಈಗ ತತ್ವಜ್ಞಾನವನ್ನು ನೋಡಿದರೆ ಒಂದು ಸಂಗತಿಯು ಅರ್ಥವಾಗುತ್ತದೆ. ಮನುಷ್ಯ ಮತ್ತು ಅವನ ಅಸ್ತಿತ್ವವು ಹೇಗೆ ಕಾರಣಗಳಿಂದ ಕೂಡಿರುತ್ತವೆ ಎಂದು ನೋಡಬೇಕಾಗುತ್ತದೆ. ಆದರೆ ವರ್ಗ ಆಳುವ ಆಲೋಚನೆಯ ಕ್ರಮವೂ ಹೌದು. ಅದು ಅನೇಕ ಸಂಪನ್ಮೂಲಗಳನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳುತ್ತದೆ. ಬೂರ್ಜ್ವಾ ಚಿಂತಕರು ಬೂರ್ಜ್ವಾ ಸಮಾಜವನ್ನು ಎತ್ತಿ ಹಿಡಿಯುತ್ತಾರೆ. ಅತ್ಯಂತ ಸಣ್ಣ ಆರ್ಥಿಕ ಚಟುವಟಿಕೆಯು ಸಮಾಜದ ಮೇಲೆ ಪ್ರಭಾವವನ್ನು ಬೀರುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಸೂಕ್ತ ಎಂದು ಗ್ರಾಂಶಿಯು ಭಾವಿಸುತ್ತಾನೆ. ವಾಸ್ತವವಾಗಿ ಇದು ಸಮಾಜದ ಮೂಲಭೂತವಾದ ಪ್ರಕ್ರಿಯೆ ಕೂಡಾ ಹೌದು. ಮಾರ್ಕ್ಸವಾದದಲ್ಲಿ ಇದು ಅತ್ಯಂತ ಶಕ್ತಿಯುತವಾದ ಒಂದು ಪಾತ್ರವನ್ನು ವಹಿಸುತ್ತದೆ ಎನ್ನುವುದು ನಿಜ. ಮನುಷ್ಯನನ್ನು ಗುಲಾಮನಂತೆ ನಡೆಸಿಕೊಳ್ಳುವುದು ಇದರ ಭಾಗವಾಗಿದೆ.

ಇನ್ನೊಂದು ಅಂಶವನ್ನು ನಾವು ಇಲ್ಲಿ ನೋಡಬೇಕು: ಯಾವುದನ್ನು ಉತ್ಪಾದನೆ ಎಂದು ಹೇಳುತ್ತೇವೆಯೋ ಅದು ಸಮಾಜ ಪ್ರಮುಖವಾದ ಒಂದು ಕೇಂದ್ರವೂ ಆಗಿರುವುದರಿಂದ ಅದಕ್ಕೆ ಒಂದು ವಿಶಿಷ್ಟವಾದ ಶಕ್ತಿಯು ಇರುತ್ತದೆ., ಇದು ಸಾಂಸ್ಕೃತಿಕ ಮತ್ತು ರಾಜಕೀಯ ಬದಲಾವಣೆಗೆ ಕಾರಣವಾಗುತ್ತದೆ ಎನ್ನುವುದು ಅವನ ನಿಲುವು. ಗ್ರಾಂಶಿಯು ಹೇಳುತ್ತಿದ್ದ ಮತ್ತೊಂದು ವಾಕ್ಯವನ್ನು ನಾವು ಇಲ್ಲಿ ಗಮನಿಸಬೇಕು. ಪ್ರತಿಯೊಂದು ಸಮಾಜದಲ್ಲಿಯೂ ಗುಂಪುಗಳು ಇರುತ್ತವೆ. ಅವು ಅಸ್ತಿತ್ವಕ್ಕೆ ಬಂದ ಮೇಲೆ ತಮಗೆ ಬೇಕಾದ್ದನ್ನು ರೂಪಿಸುತ್ತವೆ. ಸಮಾಜವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಗುಂಪುಗಳು. ಮಾರ್ಕ್ಸವಾದವೂ ಇದನ್ನು ಹೇಳಿತ್ತು. ಹೇಗೆ ಅರ್ಥಶಾಸ್ತ್ರವು ಕೆಲಸವನ್ನು ಮಾಡುತ್ತದೆಯೋ ಅದಕ್ಕೆ ಅನುಗುಣವಾಗಿ ಗುಂಪುಗಳು ಆಗುತ್ತವೆ. ಆದ್ದರಿಂದ ಇದನ್ನು ಇಟ್ಟುಕೊಂಡು ನಾವು ಅನೇಕವನ್ನು ಚರ್ಚೆ ಮಾಡಬೇಕಾದ ಅಗತ್ಯವಾಗಿರುತ್ತದೆ. ಇದನ್ನು ನಾವು ಅನೇಕ ದೇಶಗಳಲ್ಲಿ ಕಾಣುತ್ತೇವೆ.

ಒಂದು ಸಮಾಜದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಾಗ ನಾವು ಬುದ್ಧಿಜೀವಿಗಳು ಮತ್ತು ಅವರ ಪಾತ್ರವನ್ನೂ ಗಮನಿಸಬೇಕಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಚರಿತ್ರೆಯಲ್ಲಿ ಅವರದೂ ಒಂದು ಪಾತ್ರವಿದೆ. ಇಲ್ಲಿ ಎರಡು ಸಂಗತಿಗಳನ್ನು ನಾವು ಗಮನಿಸಬೇಕು: ಮೊದಲನೆಯದಾಗಿ ಈ ಗುಂಪು ಅತ್ಯಂತ ಸಹಜವಾಗಿ ರೂಪುಗೊಳ್ಳುತ್ತದೆ. ಅವರದೂ ಒಂದು ಪಾತ್ರವಿದೆ. ಅವರಿಗೂ ಒಂದು ಸಮಾಜದಲ್ಲಿ ಪಾತ್ರವಿದೆ. ಒಂದು ಸಾಮಾಜಿಕ ಗುಂಪು ಎಂದು ಹೇಳುವಾಗ ಅವನು ಉತ್ಪಾದನೆ ಮತ್ತು ಅದರ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಗುಂಪು ಎಂದು ಹೇಳುತ್ತಾನೆ. ಹಾಗೆ ನೋಡಿದರೆ ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಬುದ್ಧಿಜೀವಿಗಳು ಮತ್ತು ಅವರ ಕ್ರಿಯಾಶೀಲತೆಯು ಅತ್ಯಂತ ಮುಖ್ಯವಾಗಿದೆ. ಬುದ್ಧಿಜೀವಿಗಳು ಮತ್ತು ಅವರ ತಜ್ಞತೆಯು ಒಂದು ಥರ ಇರುತ್ತದೆ. ಆದರೆ ತಳಮಟ್ಟದಲ್ಲಿ ಇರುವ ಜನರು ಬೇರೆ ಬಗೆಯ ಅನುಭವವನ್ನು ಹೊಂದಿರುತ್ತಾರೆ. ಯಾರು ವಿಶೇಷವಾದ ಒಂದು ತಜ್ಞತೆಯನ್ನು ಹೊಂದಿರುತ್ತಾರೆಯೋ ಅವರು ಬರೀ ತಾಂತ್ರಿಕವಾದ ಕುಶಲ ಕರ್ಮಿಗಳು ಆಗಿರುವುದಿಲ್ಲ..ಅವರು ಮತ್ತೊಂದು ಬಗೆಯ ಸಾಮಾಜಿಕ ಸಂಬಂಧವನ್ನು ಹೊಂದಿರುತ್ತಾರೆ. ಇದರಿಂದ ಯಾರು ಬಂಡವಾಳವನ್ನು ಹೂಡಿರುತ್ತಾರೆಯೋ ಅವರ ಪರವಾಗಿ ಈ ಬಗೆಯ ಬುದ್ಧಿಜೀವಿಗಳು ಕೆಲಸವನ್ನು ಮಾಡುತ್ತಾರೆ.,ಯಜಮಾನ ಮತ್ತು ಅವನ ನಂಬಿಕೆಗೆ ಸರಿಯಾಗಿ ಈ ಗುಂಪು ಕೆಲಸವನ್ನು ಮಾಡುವುದು ಸತ್ಯವಾಗಿದೆ. ಒಂದು ಹಂತದಲ್ಲಿ ಇವರು ಪ್ರಭುತ್ವದ ಪರವಾದ ಕೆಲಸವನ್ನೂ ಮಾಡುತ್ತಾರೆ. ಆದರೆ ಇದು ಅವರಿಗೆ ಅರ್ಥವಾಗದೆ ಹೋಗಬಹುದು. ಯಾರು ಈ ಕೆಲಸಗಳನ್ನು ಮಾಡುತ್ತಾರೆಯೋ ಅವರು ಒಂದು ಹಂತದಲ್ಲಿ ಕೆಲವು ವಿಷಯಗಳಲ್ಲಿ ಮಾತ್ರವೇ ಪರಿಣಿತಿಯನ್ನು ಹೊಂದಿರುತ್ತಾರೆ. ಆಗ ಅವರು ನಿರ್ದಿಷ್ಟವಾದ ಸಂಗತಿಗಳಿಗೆ ಮಾತ್ರವೇ ಬದ್ಧರಾಗಿರುತ್ತಾರೆ. ಬುದ್ಧಿಜೀವಿಗಳು ಒಂದು ಸಮಾಜದಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಗ್ರಾಂಶಿಯಲ್ಲಿ ಇದು ವಿಶಿಷ್ಟವಾದ ಚರ್ಚೆಯಾಗಿದೆ ಎಂದು ಈ ಮೊದಲು ಹೇಳಲಾಗಿದೆ. ಅವರ ಅರಿವು ಅತ್ಯಂತ ಮುಖ್ಯ. ಅವರಿಗೆ ರಾಜಕೀಯವಾದ ಒಂದು ನಿಲುವು ಇರುತ್ತದೆ. ಅವರ ತಿಳುವಳಿಕೆಯು ಒಂದು ಸಿದ್ಧಾಂತವನ್ನು ಕಟ್ಟುತ್ತದೆ. ಅದು

ಸಮಾಜ ಮತ್ತು ರಾಜಕೀಯವಾದ ಅರಿವೂ ಹೌದು. ಆಧುನಿಕ ಸಮಾಜದಲ್ಲಿ ತಾಂತ್ರಿಕ ಶಿಕ್ಷಣವು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮವು ಏನು ಎಂದು ಅವನು ವಿವರಿಸುತ್ತಾನೆ. ಆದರೆ ಇವರು ಆಧುನಿಕ ಶಿಕ್ಷಣವನ್ನು ಪಡೆಯುವ ಮೂಲಕ ಆಧುನಿಕ ಬಂಡವಾಳವಾದಕ್ಕೆ , ಕೈಗಾರಿಕೆಗಳಿಗೆ ಬೇಕಾದ ಆವಶ್ಯಕತೆಯನ್ನು ಪೂರೈಸುತ್ತಾರೆ. ತಾಂತ್ರಿಕವಾದ ಜ್ಞಾನವು ಒಂದು ಬಗೆಯಲ್ಲಿ ಇದ್ದರೆ ವೈದ್ಯಕೀಯ ಜ್ಞಾನವು ಮತ್ತೊಂದು ಬಗೆಯಲ್ಲಿ ಇರುತ್ತದೆ. ಇದು ನೇರವಾಗಿ ಇರುವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಯತ್ನವನ್ನು ಮಾಡುತ್ತದೆ. ಬೌದ್ಧಿಕವಾದ ಜಗತ್ತು ಬದಲಾಗುತ್ತದೆ. ಅದನ್ನು ಹೊಸ ರೂಪದ ಜ್ಞಾನ ಮಾದರಿಗಳು ಎಂದು ಹೇಳಬೇಕಾಗುತ್ತದೆ. ಇದು ಅರ್ಥಶಾಸ್ತ್ರದ ಹೊಸದಾದ ಪರಿಭಾಷೆಯೂ ಹೌದು.

ಜಾಸೆಫ್ ಬುಟ್ಟಿಗೆಗ್ ಒಂದು ಮಾತನ್ನು ಹೇಳುತ್ತಾನೆ ಗ್ರಾಂಶಿಯ ಅತ್ಯಂತ ಮುಖ್ಯವಾದ ತತ್ವ ವೆಂದರೆ ಅವನು ಬುದ್ಧಿಜೀವಿಗಳ ಕುರಿತು ಮಾತಾಡಿದ್ದು. ಅದರ ಸುತ್ತ ಅವನ ತಾತ್ವಿಕತೆಯು ನಿಂತಿದೆ. ಅದು ಅವನ ಬರಹಗಳ ಮುಖ್ಯವಾದ ಆಶಯ. ಬುದ್ಧಿಜೀವಿಗಳನ್ನು ಸಮಾಜವು ಉತ್ಪಾದಿಸುತ್ತದೆ. ಅದಕ್ಕೆ ಅದು ಬೇಕಾಗುತ್ತದೆ. ಆದರೆ ವ್ಯಕ್ತಿಯನ್ನು ಕೇಂದ್ರ ಮಾಡಿಕೊಂಡು ಅವನು ಮಾತಾಡುವುದಿಲ್ಲ. ವ್ಯಕ್ತಿಯಾಗಿ ಒಬ್ಬ ಬುದ್ಧಿಜೀವಿಯನ್ನು ಅವನು ಕೇಂದ್ರ ಮಾಡುವುದಿಲ್ಲ. ಜ್ಞಾನವನ್ನು ಸಮಾಜವು ಉತ್ಪಾದಿಸುತ್ತದೆ. ಸಮಾಜಕ್ಕೆ ಅದು ಬೇಕಾಗುತ್ತದೆ.

ಗ್ರಾಂಶಿಯು ನಮಗೆ ಒಂದು ಸಂಸ್ಕೃತಿಯ ಮೇಲೆ ಯಾವುದು ಹೆಚ್ಚು ಪ್ರಭಾವವನ್ನು ಬೀರುತ್ತದೆ ಎಂದು ಹೇಳುವಾಗ ಗ್ರಾಂಶಿಯು ಆರ್ಥಿಕ ಸಂಗತಿಗಳನ್ನು ಮಾರೆಯಬಾರದು ಎಂದು ಭಾವಿಸುತ್ತಾನೆ. ಅದನ್ನು ಬಿಡಬಾರದು ಎನ್ನುವುದು ಅವನ ವಾದವಾಗಿದೆ. ಮೇಲು ನೋಟಕ್ಕೆ ಗ್ರಾಂಶಿಯು ಆರ್ಥಿಕತೆ ಮತ್ತು ಅದರ ಪರಿಣಾಮಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಾನೆ ಎಂದು ಅನಿಸುತ್ತದೆ ಎನ್ನುವುದು ಸತ್ಯ. ಆರ್ಥಿಕತೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ ಇದು ಮೂಲವಾಗಿದೆ. ಅದನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಇಲ್ಲಿ ಅವನ ಅಭಿಪ್ರಾಯವು ಲಿಂಗ ಪ್ರಭೇದವನ್ನು ಸೂತ್ರದಲ್ಲಿ ಹೇಳುತ್ತದೆ.ಧರ್ಮ ಮತ್ತು ಅದರ ರೂಪಿಸುವ ಸಂಬಂಧಗಳನ್ನು ನಿರ್ವಚನ ಮಾಡುತ್ತದೆ. ಆರ್ಥಿಕತೆ ಎನ್ನುವುದು ಹೇಗೆ ರಾಜಕಾರಣ, ಸಂಸ್ಕೃತಿ, ಒಂದು ಸಾವಯವ ಸಂಬಂಧವನ್ನು ಇಟ್ಟುಕೊಂಡಿರುತ್ತದೆ ಎನ್ನುವುದು ಗ್ರಾಂಶಿಯ ವಾದವಾಗಿದೆ. ಇದನ್ನು ಅವನು ಹೆಜಮನಿ ಎಂದು ಹೇಳುತ್ತಾನೆ. ಇದು ಒಂದು ಸೂತ್ರವಾಗಿದೆ ಎಂದು ಅನಿಸುತ್ತದೆ. ಅದು ಯಜಮಾನಿಕೆಯನ್ನು ಹೇಳುತ್ತದೆ. ಗ್ರಾಂಶಿಯಲ್ಲಿ ಇದು ಕೂಡಾ ಚಲನಶೀಲವಾದ್ದು ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಾಂಸ್ಕೃತಿಕ ಉತ್ಪಾದನೆಯಲ್ಲಿಯೂ ಇದು ಕೆಲಸವನ್ನು ಮಾಡುತ್ತದೆ. ಸಾಂಸ್ಕೃತಿಕವಾದ ಉತ್ಪಾದನೆಯಲ್ಲಿ ಕೆಲವು ಮಾನ್ಯವಾಗುತ್ತವೆ. ಕೆಲವು ಅಮಾನ್ಯವಾಗುತ್ತವೆ. ಇದು ಸಾಂಸ್ಕೃತಿಕ ರಾಜಕಾರಣದಿಂದ ಆಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ನಮ್ಮ ಸಮಾಜದ ಅನೇಕ ಸಂಬಂಧಗಳು ಇದನ್ನು ಆಧರಿಕೊಂಡು ಇರುತ್ತದೆ. ಇದರ ನಡುವೆ ಆಧುನಿಕ ಜಗತ್ತು ಸ್ಪರ್ಧೆಯನ್ನು ಅವಲಂಬಿಸಿದೆ ಎನ್ನುವುದು ಗ್ರಾಂಶಿಗೆ ಗೊತ್ತಿದೆ. ಅದಕ್ಕೆ ಅವನು ಚರಿತ್ರೆ ಮತ್ತು ಸಂಸ್ಕೃತಿಗಳ ಸಂಬಂಧವನ್ನು ಹೇಳುತ್ತಾನೆ. ಒಂದು

ಅವನು ಜ್ಞಾನ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುವಾಗ ಅತ್ಯಂತ ಸರಳವಾದ ಒಂದು ನಿಲುವಿಗೆ ಬರುವುದಿಲ್ಲ. ಆಳ್ವಿಕೆ ಮತ್ತು ಆಳ್ವಿಸಿಕೊಳ್ವಿಕೆ ಎನ್ನುವುದು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಆಳುವುದು ಮತ್ತು ಆಳಿಸಿಕೊಳ್ಳುವುದು ಎಂದರೆ ಅದರಲ್ಲಿ ಪರಿವರ್ತನೆಯು ಇರುತ್ತದೆ. ಹಾಗೆಯೇ ಅದರಲ್ಲಿ ನಿರಾಕರಣೆಯು ಇರುತ್ತದೆ, ಅದರಲ್ಲಿ ಒಂದು ಬಗೆಯ ಒಪ್ಪಂದವೂ ಇರುತ್ತದೆ. ಯಜಮಾನಿಕೆ ಎನ್ನುವುದು ಸಂಸ್ಕೃತಿಯಲ್ಲಿ ಇರುತ್ತದೆ. ಸಂವೇದನೆಯಲ್ಲಿ ಇದರ ಪ್ರಭಾವವು ಇರುತ್ತದೆ. ಅದರಲ್ಲಿ ಸಂಘರ್ಷಗಳು ಇರುತ್ತವೆ.

ಸಂಸ್ಕೃತಿಯ ಅಧ್ಯಯನವು ಒಂದು ಗುಂಪಿನ ಪ್ರಾತಿನಿಧಿಕ ಮಾದರಿಯೆನ್ನುವಂತೆ ನಡೆದ ಅಧ್ಯಯನಗಳಿಗೆ ಸೀಮಿತವಾದ ಗಡಿರೇಖೆಗಳಿವೆ. ಯಾವಾಗ ಪೋಸ್ಟ್ ಫೋರ್ಡಿಸಂ ಮತ್ತು ಪೋಸ್ಟ್ ಮೊರ್ಡನಿಸಂ ಬಂತೋ ಅಗ ಅದರ ಚರ್ಚೆಗಳ ಸ್ವರೂಪವೂ ಬದಲಾಯಿತು. ಉದಾಹರಣೆಗೆ ನಾವು ಬಳಸುವ ಆಧುನಿಕೋತ್ತರವೆಂದು ಯಾವುದನ್ನು ಹೇಳುತ್ತಿದ್ದೇವೆಯೋ ಅದು ಯಾರಿಗೆ ಮತ್ತು ಹೇಗೆ ಅನ್ವಯವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಪ್ರೆಡ್ರಿಕ್ ಜೇಮ್ಸನ್ ಹೇಳುವುದು ಏನೆಂದರೆ ಆಧುನಿಕ ಜಾಗತಿಕ ಮಾರುಕಟ್ಟೆಯ ಕಲ್ಪನೆಯೂ ಅಷ್ಟೇ ಮುಖ್ಯವಾದ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದೆ ಅದು ರಾಷ್ಟ್ರೀಯತೆಯ ಗಡಿಯನ್ನು ಮೀರಿ ಜಾಗತಿಕ ಮಾರುಕಟ್ಟೆಯನ್ನು ಕೇಂದ್ರವಾಗಿರಿಸಿಕೊಂಡಿದೆ.ಆದರೆಅದರ ಸಮಸ್ಯೆಯೂ ಅಷ್ಟು ಬೇಗನೆ ನಮ್ಮ ಗಮನಕ್ಕೆ ಬರುವುದೂ ಇಲ್ಲ.ಬೆಳೆಯುತ್ತಿರುವ ತಾಂತ್ರಿಕತೆಯು ಮನುಷ್ಯರನ್ನು ಹತ್ತಿರ ತರುತ್ತಿದೆ.ಇದರಿಂದ ಸಾಂಸ್ಕೃತಿಕ ಅಧ್ಯಯನವು ಮತ್ತೆ ಬೇರೆ ರೀತಿಯಲ್ಲಿಯೂ ಬೆಳೆಯಿತು.ಆಧುನಿಕ ಬಂಡವಾಳವಾದವು ಮಾಹಿತಿ, ತಾಂತ್ರಿಕತೆ, ಮನೋರಂಜನೆ, ಮಾರುಕಟ್ಟೆಯ ವಿಸ್ತರಣೆಯನ್ನು ಒಳಗೊಂಡಿದೆ. ಏಕಕೇಂದ್ರಿತ ಬಂಡವಾಳವಾದವು ತನಗೆ ಬೇಕಾದಂತೆ ಮನುಷ್ಯರನ್ನು ವ್ಯಾಖ್ಯಾನಿಸುತ್ತದೆ. ಮನುಷ್ಯನು ಈಗ ಕೇವಲ ಗ್ರಾಹಕನಾಗಿದ್ದಾನೆ. ವ್ಯಕ್ತಿಯ ಅನನ್ಯತೆಯು ಈ ದೃಷ್ಟಿಯಿಂದ ಭಿನ್ನವಾಗಿದೆ. ಅನೇಕ ಸಾಂಸ್ಕೃತಿಕ ಅಧ್ಯಯನವು ವ್ಯಕ್ತಿಯನ್ನು ಒಂದು ಬಿಡಿಯಾದ ಭಾಗವಾಗಿ ನೋಡುತ್ತಿರುವುದರಿಂದ ಹೀಗೆ ಆಗುತ್ತಿದೆ. "ನಿರ್ಧಾರಾತ್ಮಕವಾದ ಏಕಕೇಂದ್ರಿತ ಆರ್ಥಿಕ ಚಟುವಟಿಕೆಯಿದು." ಎನ್ನುವ ಗ್ರಾಂಶಿಯ ಮಾತು ಇಲ್ಲಿಗೆ ಸರಿಯಾಗಿ ಹೊಂದಾಣಿಕೆಯಾಗುತ್ತಿದೆ. ಜಾಗತಿಕ ಮಾರುಕಟ್ಟೆಯ ಸಂದರ್ಭವನ್ನು ನಾವು ಸರಳವಾಗಿ ಪರಿಗಣಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ಈಗ ನಡೆಯುತ್ತಿರುವ ಚರ್ಚೆಯನ್ನು ನಾವು ಹೀಗೂ ವಿಶ್ಲೇಷಿಸಬಹುದು–ನಾವೀಗ ಮಾಡಬೇಕಾದುದು ಏನೆಂದರೆ ಜಾಗತಿಕ ಬಂಡವಾಳವಾದವು ಸಂಸ್ಕೃತಿಯೊಂದಿಗೆ ಯಾವ ರೀತಿಯ ಒಡನಾಟವನ್ನು ಇಟ್ಟುಕೊಂಡಿದೆ ಎಂದು ನೋಡುವುದು.ಹಾಗೂ ಈ ಸಂದರ್ಭದಲ್ಲಿ ಮನುಷ್ಯನು ಹೇಗಿದ್ದಾನೆ. ಜಾಗತಿಕ ಬಂಡವಾಳವಾದವು ವ್ಯಕ್ತಿಯನ್ನು ನಿರೂಪಿಸುವ ಕ್ರಮಗಳು ಭಿನ್ನ. ಸ್ಥಳೀಯತೆಯು ನಾಶ ಹೊಂದಿ ಅದರ ಬದಲಿಗೆ ಹೊಸ ನಿರ್ವಚನಗಳು ಪ್ರಾರಂಭವಾಗಿದೆ. ಕಸಿ ಸಂಸ್ಕೃತಿಯೊಂದು ಮನುಷ್ಯರನ್ನು ಆಳುತ್ತದೆ. ಮನುಷ್ಯನ ಆಸೆ, ಅವನ ಬಯಕೆ. ಅವನ ಅತೃಪ್ತಿಯನ್ನು ಮಾರುಕಟ್ಟೆಯು ನಿಯಂತ್ರಿಸುತ್ತದೆ ಎನ್ನುವುದೇ ಮುಖ್ಯ. ಸಾಂಸ್ಕೃತಿಕ – ಹಾಗೂ ಶೈಕ್ಷಣಿಕ ವರ್ಗೀಕರಣವು ಮನುಷ್ಯನ ಕೆಲಸವನ್ನು ಅನನ್ಯವೆಂದು ಹೇಳುತ್ತವೆ. ಕಲಾತ್ಮಕ ಆಧುನಿಕತೆಗೂ ಬದಲಾದ ಸಂಸ್ಕೃತಿಯ ಪ್ರಶ್ನೆಗೂ ವ್ಯತ್ಯಾಸವಿದೆ.

ಆಧುನಿಕವಾದ ಅನೇಕ ಕೆಲಸಗಳು ಮತ್ತೆ ಬೇರೆ ಬೇರೆ ವರ್ಗೀಕರಣಗಳನ್ನು ಮಾಡಿದವು.ಮನುಷ್ಯನು ಹಳೆಯದಕ್ಕೆ ವಿದಾಯವನ್ನು ಹೇಳುತ್ತಾನೆ, ಹಾಗೂ ತನ್ನ ಅಸ್ತಿತ್ವವನ್ನು ತನಗೆ ತಾನೇ ರೂಢಿಸಿಕೊಳ್ಳುತ್ತಾನೆ. ಆಧುನಿಕವಾಗಿ ಮನುಷ್ಯರ ಸ್ವಭಾವವು ಬದಲಾಗುತ್ತಿದೆ ಎನ್ನುವುದೇ ಮನನೀಯ. ಸಂಸ್ಕೃತಿಯನ್ನು ನೋಡುವಾಗ ನಾವು ಗ್ರಹಿಸುವ ವಿಧಾನಗಳು ಹೇಗೆ ಇವೆ ಎನ್ನುವುದೂ ಅಷ್ಟೇ ಮುಖ್ಯ.

ಗ್ರಾಂಶಿಯು ನಮಗೆ ಇನ್ನೊಂದು ಬಗೆಯ ದೃಷ್ಟಿಕೋನವನ್ನು ಮೇಲ್ ರಚನೆಯ ಬಗ್ಗೆ ಕೊಡುತ್ತಾನೆ. ತಳಹದಿ ರಚನೆ ಮತ್ತು ಮೇಲ್ ಪದರಕ್ಕೆ ಒಂದು ಸಂಬಂಧವು ಇದೆ.ಮಾರ್ಕ್ಸವಾದವು ಇದನ್ನು ಹೆಚ್ಚು ಚಾಲ್ತಿಗೆ ತಂದಿತು. ಆದರೆ ಇದನ್ನು ಗ್ರಾಂಶಿಯು ಹೇಳುವಾಗ ನಾಗರಿಕ ಸಮಾಜ ಮತ್ತು ಮೇಲ್ ರಚನೆಗೆ ಯಾವ ಬಗೆಯ ಸಂಬಂಧವು ಇದೆ ಎಂದು ವಿವರಿಸುತ್ತಾನೆ. ಮೇಲು ರಚನೆ ಎನ್ನುವುದು ಬರೀ ಅರ್ಥಶಾಸ್ತ್ರವನ್ನು ಹೇಳುತ್ತಾನೆ ಎಂದು ಭಾವಿಸಲು ಸಾಧ್ಯವಿಲ್ಲ. ಅದು ಚರಿತ್ರೆಯ ಜೊತೆಗೆ ಒಂದು ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಸಾಮಾಜಿಕ ಸಂಬಂಧವನ್ನು ಅದು ಹೇಳುತ್ತದೆ. ಇಟಲಿಯ ಅತ್ಯಂತ ಪ್ರಸಿದ್ಧ ಲೇಖಕ ಬಾಬಿಯೋ ಆಳಿಸಿಕೊಳ್ಳುವುದು ಎನ್ನುವುದು ಕೂಡಾ ಚರಿತ್ರೆಯಲ್ಲಿ ಬದಲಾಗುತ್ತದೆ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ನಮಗೆ ತಳಹದಿ ರಚನೆಯು ಮಾತ್ರವೇ ಮುಖ್ಯವಲ್ಲ ಎಂದು ಹೇಳುತ್ತಾನೆ. ಅವನು ಅಸಮತೆಯು ಹೇಗೆ ಇರುತ್ತದೆ ಎಂದು ಹೇಳುತ್ತಾನೆ. ಅದನ್ನು ಬಿಟ್ಟು ಸಮಾಜ ಮತ್ತು ಸಂಸ್ಕೃತಿಯನ್ನು ನಾವು ಚರ್ಚೆ ಮಾಡಲು ಸಾಧ್ಯವಿಲ್ಲ., ಮತ್ತೊಂದು ದೃಷ್ಟಿಯಿಂದ ಯಾವುದು ಮೇಲ್ ರಚನೆಯು ಇದೆಯೋ ಅದರ ಬಗ್ಗೆ ಗ್ರಾಂಶಿಯು ಹೆಚ್ಚು ಹೇಳುತ್ತಾನೆ. ಆದ್ದರಿಂದಲೇ ಅವನನ್ನು ಮೇಲ್ ರಚನೆಗಳ ವಿದ್ವಾಂಸ ಎಂದು ಕರೆಯುತ್ತಾರೆ. ಅವನು ಹೇಗೆ ಆಧುನಿಕ ಸಂಸ್ಥೆಗಳು ರಚನೆಯಾಗುತ್ತವೆ ಮತ್ತು ಅದರ ಪರಿಣಾಮವು ಯಾವ ಬಗೆಯಲ್ಲಿ ಇರುತ್ತದೆ ಎಂದು ವಿವರಿಸುತ್ತಾನೆ. ಆರ್ಥಿಕತೆ ಎನ್ನುವುದು ಅನೇಕ ಮಾದರಿಯ ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ ಎನ್ನುವುದು ಅವನ ಗ್ರಹಿಕೆ. ಅದು ಮೂಲಭೂತವಾದ್ದು ಎನ್ನುವುದರಲ್ಲಿ ಅವನಿಗೆ ತಕರಾರು ಇಲ್ಲ. ಮನುಷ್ಯ ಅನೇಕವನ್ನು ಸೃಷ್ಟಿಮಾಡಿದ್ದಾನೆ. ಅದರಲ್ಲಿ ಧಾರ್ಮಿಕ ಸಂಕೇತಗಳು ಇವೆ. ಶಾಲೆಗಳು, ಕಾನೂನುಗಳು, ಕೋರ್ಟ್‌ಗಳು ಇವೆ., ಆದ್ದರಿಂದ ನಮ್ಮ ನಡುವೆ ಹುಟ್ಟುವ ಸಮಸ್ಯೆ ಮತ್ತು ಅದರ ಪರಿಹಾರಗಳು ನಮ್ಮ ನಡುವೆಯೇ ಇರುತ್ತದೆ. ರಾಜಕಾರಣ, ಧರ್ಮ, ಸಂಸ್ಕೃತಿ, ಸೌಂದರ್ಯ ಮೀಮಾಂಸೆಗಳು ಇರುತ್ತವೆ. ನಮ್ಮ ಪ್ರಜ್ಞೆಯು ಇವುಗಳ ನಡುವೆ ಸಹಯೋಗವನ್ನು ಇಟ್ಟುಕೊಂಡಿರುತ್ತದೆ. ಅವುಗಳ ಜೊತೆಗೆ ಸಂಘರ್ಷವನ್ನು ಇಟ್ಟುಕೊಂಡಿರುತ್ತವೆ. ಬಾಬಿಯೋ ಆರ್ಥಿಕತೆಯು ಕೆಲವು ಮಿತಿಗಳನ್ನು ಹೊಂದಿವೆ ಎಂದು ಹೇಳುತ್ತಾನೆ. ಉತ್ಪಾದನೆಗಳೂ ಕೂಡಾ ತನ್ನದೇ ಸಾಂಸ್ಕೃತಿಕ ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಅನುಮಾನವಿಲ್ಲ. ಇದನ್ನು ಹೇಳುವಾಗ ಚರಿತ್ರೆ ಮತ್ತು ಅದು ಸೃಷ್ಟಿಸುವ ಚರಿತ್ರೆಯ ಪ್ರತ್ಯೇಕ ವಿನ್ಯಾಸವನ್ನು ನೋಡಬೇಕಾಗುತ್ತದೆ. ಅದು ಚರಿತ್ರೆಯಲ್ಲಿ ದ್ವಂದ್ವಾತ್ಮಕವೂ ಆಗಿರುತ್ತದೆ. ಆದರೆ ಆರ್ಥಿಕ ಎನ್ನುವುದು ಮೂಲಭೂತವಾದ್ದು. ಹಾಗೆಂದು ಅದುವೇ ಸಂಸ್ಕೃತಿಯ ಮೇಲೆ ಯಾವ ಪ್ರಭಾವವನ್ನು ಬೀರುತ್ತದೆ. ಒಂದು ಮಾತನ್ನು ಹೇಳಬಹುದು. ನಮಗೆ ಅನೇಕವು ಸಂವಾದಿಯಾಗಿರುತ್ತವೆ. ಆದ್ದರಿಂದ ಸ್ತ್ರೀಯರು ಈ

ಸಮಸ್ಯೆಯನ್ನು ಬೇರೆ ಥರ ಗಮನಿಸಬೇಕಾಗುತ್ತದೆ. ಮಾರ್ಕ್ಸವಾದದಲ್ಲಿ ಕೆಲಸವನ್ನು ಮಾಡುವ ಸ್ತ್ರೀವಾದಿಗಳು ಇದನ್ನು ಒಪ್ಪುತ್ತಾರೆ. ಇದು ಗಮನಿಸಬೇಕಾದ ಅಂಶ.

ಹೆಜೆಮನಿ ಮತ್ತು ಅದರ ಸ್ವರೂಪವನ್ನು ಅತ್ಯಂತ ಸರಳವಾದ ಅರ್ಥದಲ್ಲಿ ಗ್ರಾಂಶಿಯು ಹೇಳುತ್ತಾನೆ. ಇಟಲಿಯಲ್ಲಿ ಮುಸ್ಸಲೋನಿಯ ಆಡಳಿತ ಮತ್ತು ಅದರ ಸ್ವರೂಪ ನೋಡಿದ ಅವನು ಕಾರ್ಮಿಕರು ಮತ್ತು ಸಾಮಾನ್ಯ ಮನುಷ್ಯರು ಯಾಕೆ ದಂಗೆ ಎದ್ದಿಲ್ಲ ಎಂದು ಭಾವಿಸುತ್ತಾನೆ. ಅವನ ಈ ಪ್ರಶ್ನೆಯಲ್ಲಿ ಬುದ್ಧಿಜೀವಿಗಳೂ ಇದ್ದಾರೆ ಎನ್ನುವುದು ಅತ್ಯಂತ ಮುಖ್ಯ. ಈ ಗುಂಪುಗಳು ಪ್ರತ್ಯೇಕವಾಗಿದ್ದವು ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆಯೂ ಹೌದು. ಈ ಪ್ರಶ್ನೆಗಳು ಗ್ರಾಂಶಿಗೆ ಹೆಚ್ಚು ಕಾಡಿದ್ದವು ಎನ್ನುವುದು ನಿಜ. ಇವು ಪ್ರತ್ಯೇಕ ಗುಂಪುಗಳೂ ಹೌದು. ಲೇಖಕರು, ಕಾರ್ಮಿಕರು, ರೈತರು, ಅಲ್ಪಸಂಖ್ಯಾತರು ಒಂದು ಕಡೆಗೆ ಬಂದು ಹೋರಾಟವನ್ನು ಮಾಡದೇ ಹೋದರೆ ಪ್ರಭುತ್ವಕ್ಕೆ ಅತ್ಯಂತ ಸುಲಭವಾಗುತ್ತದೆ ಎನ್ನುವುದು ಗ್ರಾಂಶಿಗೆ ಗೊತ್ತಿತ್ತು. ಆದರೆ ಹೆಜೆಮನಿ ಎನ್ನುವುದಕ್ಕೆ ಅತ್ಯಂತ ಸುದೀರ್ಘವಾದ ಒಂದು ಇತಿಹಾಸವೂ ಇದೆ. ಲೆನಿನ್ ಇದನ್ನು ಬಳಸಿದ್ದ. ಯಾವುದೇ ಕ್ರಾಂತಿಯು ಅತ್ಯಂತ ಸುಲಭವಾಗಿ ಉಂಟಾಗುವುದಿಲ್ಲ ಎನ್ನುವುದು ಅವನ ಅರಿವಿನಲ್ಲಿ ಇದೆ. ಎಲ್ಲಾ ವೈರುದ್ಧ್ಯಗಳ ನಡುವೆ ಉಂಟಾಗುವ ಹೋರಾಟಗಳು ಮತ್ತು ಅದರ ಕುರಿತಾದ ನಿಲುವು ಅತ್ಯಂತ ಮುಖ್ಯ ಎಂದು ಅದು ತಾತ್ವಿಕವೂ ಆಗಿರುತ್ತದೆ. ಲೆನಿನ್ ಯಾವೆಲ್ಲಾ ರೀತಿಯಲ್ಲಿ ಮನುಷ್ಯರು ಶೋಷಣೆಗೆ ಒಳಗಾಗಿದ್ದಾರೆಯೋ ಅವರನ್ನು ಹೋರಾಟವು ತನ್ನ ಪರಿಧಿಯ ಒಳಗೆ ತರಬೇಕಾಗುತ್ತದೆ. ಬೇರೆ ಬೇರೆ ವರ್ಗಗಳು ಮತ್ತು ಅವುಗಳ ಸಂಬಂಧವನ್ನು ಮಾತಾಡುವಾಗ ಅವುಗಳು ಸಂಬಂಧವನ್ನು ಇಟ್ಟುಕೊಳ್ಳುವುದು ಅತ್ಯಂತ ಅನಿವಾರ್ಯ ಎಂದು ಲೆನಿನ್ ಹೇಳುತ್ತಾನೆ. ಸ್ವಲ್ಪ ಮಟ್ಟಿಗೆ ಇದನ್ನು ಗ್ರಾಂಶಿಯು ಒಪ್ಪುತ್ತಾನೆ. ಆದ್ದರಿಂದ ಪ್ರಭುತ್ವವು ಒಂದು ಹಂತದಲ್ಲಿ ತನ್ನ ಕೆಳಗೆ ಇರುವವರನ್ನು ಒಪ್ಪುವಂತೆ ಮಾಡುತ್ತದೆ. ಇದು ರಾಜಕೀಯ ಪರಿಕರವೂ ಆಗಿದೆ.

ಹೆಜೆಮನಿ ಎನ್ನುವುದಕ್ಕೆ ರಾಜಕೀಯ ಮತ್ತು ಚಾರಿತ್ರಿಕವಾದ ಒಂದು ಆಯಾಮವೂ ಇದೆ. ಅಷ್ಟೇ ಅಲ್ಲ ಅದು ಸಂಬಂಧಗಳ ಬದಲಾವಣೆಯನ್ನು ಹೇಳುತ್ತದೆ. ಇದನ್ನು ಅವನು ಹೇಳುವಾಗ ಅವನ ಮನಸ್ಸನಲ್ಲಿ ಇಟಲಿಯ ಗ್ರಾಮೀಣ ಜಗತ್ತು ಮತ್ತು ಅದರ ಸಮಸ್ಯೆಗಳ ತಿಳುವಳಿಕೆಗಳು ಇದ್ದವು. ಕಾರ್ಮಿಕವರ್ಗವು ಜನರನ್ನು ಕರೆದೊಯ್ಯುವ ಸ್ಥಿತಿಯು ಇರಬೇಕೆ ಹೊರತು ಬಂಡವಾಳವಾದವು ಜನರನ್ನು ಕರೆದುಕೊಂಡು ಹೋಗುವ ಸ್ಥಿತಿಯು ಬರುವುದಿಲ್ಲ ಸರಿಯಾದ ಕ್ರಮವಲ್ಲ ಎಂದು ಗ್ರಾಂಶಿಯು ನಂಬಿದ್ದ. ಕಾರ್ಮಿಕರು ಮತ್ತು ಅವರ ಅನುಭವವವು ಒಂದು ಪ್ರಮಾಣದಲ್ಲಿ ಇರುತ್ತದೆ. ಆದರೆ ಬಂಡವಾಳಶಾಹಿಗಳ ಅನುಭವ ಬೇರೆ ಮಾದರಿಯದು. ಕಾರ್ಮಿಕರು ತಾವು ನಿಜವಾದ ಅರ್ಥದಲ್ಲಿ ಒಂದು ವರ್ಗದ ಪ್ರತಿನಿಧಿಗಳಾಗಬೇಕು ಎಂದು ತಿಳಿಯಬೇಕೇ ಹೊರತು ಮತ್ತೇನೂ ಅಲ್ಲ. ಅದರ ಜೊತೆಗೆ ಕಾರ್ಮಿಕರು, ರೈತರು ಹಾಗೂ ಬುದ್ಧಿಜೀವಿಗಳು ಜೊತೆಗೆ ಹೋದರೆ ಮಾತ್ರವೇ ನಮಗೆ ಸಮಾಜವಾದ ಮತ್ತು ಅದರ ಅರಿವು ಸಿಗಲು ಸಾಧ್ಯ. ಯಾವುದೇ ಗುಂಪನ್ನು ಒಬ್ಬ ವ್ಯಕ್ತಿ ಅಥವಾ ಮತ್ತೊಂದು ಗುಂಪನ್ನು ನಿಯಂತ್ರಣ ಮಾಡಿದರೆ ಆಗ ಅದರ ಸ್ವರೂಪವನ್ನು ನಾವು ಭಿನ್ನವಾದ ರೀತಿಯಲ್ಲಿ ಗಮನಿಸಬೇಕಾದ

ಅಗತ್ಯವಿರುತ್ತದೆ. ಅಧಿಕಾರವು ಒಂದು ಮಧ್ಯಸ್ತಿಕೆಯನ್ನು ಬಯಸುತ್ತದೆ. ಅದನ್ನು ನಾವು ಮಧ್ಯವರ್ತಿ ಗುಂಪು ಎಂದೂ ಹೇಳಬಹುದು. ಅದಕ್ಕೂ ತಾತ್ವಿಕತೆಗೂ ಒಂದು ಸಂಬಂಧವು ಇರುತ್ತದೆ. ಎರಡನೆಯಾಗಿ ಆಧುನಿಕ ಆಳಿಸಿಕೊಳ್ಳುವ ಸಂಸ್ಕೃತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದೂ ಗ್ರಹಿಸುವುದು ಅತ್ಯಂತ ಅಗತ್ಯ. ಸಂಸ್ಕೃತಿಯಲ್ಲಿ ಆಳುವುದು ಅಥವಾ ಅಳಿಸಿಕೊಳ್ಳುವುದು ಎನ್ನುವುದಕ್ಕೆ ವಿಶೇಷವಾದ ಅರ್ಥವಿದೆ. ಆಳುವುದಕ್ಕೆ ಹೇಗೆ ಒಂದು ನಿರ್ದಿಷ್ಟವಾದ ಮೌಲ್ಯವಿದೆಯೋ ಅದೇ ರೀತಿಯಲ್ಲಿ ಆಳಿಸಿಕೊಳ್ಳುವ ಸಂಸ್ಕೃತಿಗೂ ಒಂದು ನಿರ್ದಿಷ್ಟವಾದ ಮೌಲ್ಯವು ಇರುತ್ತದೆ. ಇಲ್ಲಿ ಗ್ರಾಂಶಿಯು ಹೇರಲ್ಪಡುವ ಮೌಲ್ಯಗಳು ಎಂದು ಹೇಳುತ್ತಾನೆ. ಗ್ರಾಂಶಿಯು ಇಲ್ಲಿ ಇನ್ನೊಂದು ಅಂಶವನ್ನು ಹೇಳುತ್ತಾನೆ. ಕ್ಯಾಥೋಲಿಕ್ ಚರ್ಚ್‌ಗಳು ತಮ್ಮ ಮೌಲ್ಯಗಳನ್ನು ಜನರಿಗೆ ಹೇಳಿದೆ. ಅದರಿಂದ ಜನರು ಅದಕ್ಕೆ ಆಕರ್ಶಿತರಾದರು. ಇದನ್ನು ಹೇಳುವಾಗ ಉಳಿದವರು ಹೇಳುವಂತೆ ಚರ್ಚ್‌ಗಳು ಪ್ರಗತಿಪರವೇ ಅಥವಾ ಪ್ರಗತಿವಿರೋಧವೆ ಎಂದು ನಿರ್ಧಾರ ಮಾಡಲು ಆಗುವುದಿಲ್ಲ ಎಂದು ಅವನು ಭಾವಿಸುತ್ತಾನೆ. ತನ್ನಿಂದ ತಾನಾಗಿಯೇ ಚರ್ಚ್ ಪ್ರಗತಿ ವಿರೋಧಿಯಾಗಲು ಸಾಧ್ಯವಿಲ್ಲ.. ಚರ್ಚ್‌ನ್ನು ನಂಬುವವರು ಜನರನ್ನು ಒಂದು ಧರ್ಮಕ್ಕೆ ಅನುಕೂಲವಾಗುವಂತೆ ಸಂಘಟನೆ ಮಾಡುತ್ತದೆ. ಮೂಲಭೂತವಾದಿಗಳು ಅನೇಕರನ್ನು ಧರ್ಮದ ಹೆಸರಿನಲ್ಲಿ ಸಂಘಟನೆ ಮಾಡಲು ಬಯಸುತ್ತಾರೆ. ಯಾವುದನ್ನು ಈವತ್ತು ಮೂಲಭೂತವಾದ ಎಂದು ಹೇಳುತ್ತೇವೆಯೋ ಅದು ಕೂಡಾ ಈವತ್ತು ಪ್ರಗತಿಯ ಚಿಂತನೆಯನ್ನು ದೂರ ಇಟ್ಟಿದೆ, ಧಾರ್ಮಿಕ ಮೂಲಭೂತವಾದವು ನಾಯಕತ್ವವವನ್ನು ವಹಿಸಿದೆ ಎಂದಾದರೆ ಆಗ ಅದರ ಕೈಕೆಳಗೆ ಅನೇಕರು ಇರುತ್ತಾನೆ., ಹಾಗೆ ನೋಡಿದರೆ ಜನರು ಮತ್ತು ಅವರ ಗುಂಪುಗಳು ತಮ್ಮದೇ ಆದ ಒಂದು ಚೌಕಟ್ಟನ್ನು ಹೊಂದಿರುವುದು ನಮ್ಮ ಕಣ್ಣಿಗೆ ಕಾಣಿಸುತ್ತವೆ. ಸಮೂಹ ಸಂಸ್ಕೃತಿ ಮತ್ತು ಅದರ ಸ್ವಭಾವನ್ನು ನಾವು ಗ್ರಹಿಸಬಹುದು ಎಂದು ವಿವರಿಸಲು ಅಡರ್ನೊ ಬಂಡವಾಳವಾದ ಮತ್ತು ಅದರ ಸ್ವರೂಪವನ್ನು ವಿವರಿಸುತ್ತಾರೆ. ಆಲೋಚನೆಯ ಕ್ರಮದಲ್ಲಿಯೂ ಧನಾತ್ಮಕ ಮತ್ತು ಋಣಾತ್ಮಕವಾದ ನಿಲುವುಗಳಿಗ ವಿವಿಧ ಆಯಾಮಗಳು ಇರುತ್ತವೆ. ಗ್ರಾಂಶಿಯು ಇದನ್ನು ಹೀಗೆ ಭಾವಿಸುತ್ತಾನೆ. ಋಣಾತ್ಮಕ ಮತ್ತು ಧನಾತ್ಮಕವಾದ ನಿಲುವುಗಳು ಹೇಗೆ ಇರುತ್ತವೆ ಎನ್ನುವುದು ಅವನಿಗೂ ಅತ್ಯಂತ ಮುಖ್ಯ. ಇದರ ಹಿಂದೆ ಒಂದು ಚರಿತ್ರೆಯು ಇರುತ್ತದೆ ಎನ್ನುವುದು ಅವನ ವಾದವಾಗಿದೆ. ಬಂಡವಾಳವಾದ ಮತ್ತು ಅದರ ರೀತಿಯು ಬೇರೆ ಇರುತ್ತದೆ. ಅದನ್ನೂ ಗ್ರಾಂಶಿಯು ಹೇಳುತ್ತಾನೆ. ನಾವು ಕಾರನ್ನು ಬಳಸುತ್ತೇವೆ. ಅದು ಒಂದು ವಾಹನವೂ ಆಗಿದೆ. ಆದರೆ ಕಾರನ್ನು ತಯಾರು ಮಾಡುವುದು ಬೃಹತ್ ಕೈಗಾರಿಕೆ. ಬೃಹತ್ ಕೈಗಾರಿಕೆಗೆ ಬಂಡವಾಳವಾದವೂ ಬೇಕಾಗುತ್ತದೆ. ಅದು ಕಾರನ್ನು ಉತ್ಪಾದನೆ ಮಾಡಿದೆ ಎಂದರೆ ಕೈಗಾರಿಕೆ ಮತ್ತು ಅದರ ಲಾಭವನ್ನು ನಾವು ಬಳಸುತ್ತಿದ್ದೇವೆ ಎಂದು ಅರ್ಥ. ಬಂಡವಾಳವಾದವು ಹೇಗೆ ನಮ್ಮನ್ನು ತನ್ನ ಒಟ್ಟಿಗೆ ಇಟ್ಟುಕೊಂಡಿದೆ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಕಾಲು ಹಾದಿಯಲ್ಲಿ ನಡೆಯುವವರಿಗೆ ಕಾರು ಮತ್ತು ಅದರ ಬಳಕೆಯು ಬೇಕಾಗಿಲ್ಲ. ಕಾರು ಇದ್ದರೆ ಅದಕ್ಕೆ ರಸ್ತೆಯು ಬೇಕಾಗುತ್ತದೆ, ರಸ್ತೆ ಮತ್ತು ವಾಹನಗಳ ಸಹಯೋಗವು ಈ ದೃಷ್ಟಿಯಿಂದ ಅತ್ಯಂತ ಮುಖ್ಯ. ವಾಸ್ತವವಾಗಿ ಈವತ್ತು ಒಂದು ಸಮಾಜದಲ್ಲಿ ಈ ಬಗೆಯ ಅನೇಕ ರೀತಿಗಳನ್ನು ಕಾಣುತ್ತೇವೆ. ಇವುಗಳಲ್ಲಿ ಅನೇಕ

ವೈರುದ್ಧ್ಯಗಳೂ ಇರುತ್ತವೆ. ಇಲ್ಲಿ ಕಾರು ಎನ್ನುವುದು ಹೇಗೆ ಇದೆ ಎಂದು ನೋಡಬೇಕು. ಕಾರು ನಮ್ಮನ್ನು ಬೇಗನೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತದೆ. ಅದರ ಜೊತೆಯಲ್ಲಿ ಅದು ಸರಕನ್ನು ಸಾಗಿಸುತ್ತದೆ. ಆದ್ದರಿಂದ ಕಾರು ಎನ್ನುವುದು ನಮಗೆ ಅತ್ಯಂತ ಉಪಯುಕ್ತವಾದ ವಾಹನವೂ ಹೌದು. ನಾಗರಿಕ ಸಮಾಜದಲ್ಲಿಯೂ ಇದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಒಂದು ವಿಷಯವಾದರೆ ಮತ್ತೊಂದು ಕಡೆಯಿಂದ ಆಧುನಿಕ ನಾಗರಿಕತೆಗೆ ಅನೇಕ ಬಗೆಯ ಆಲೋಚನೆಗಳೂ ಬಂದಿವೆ. ಈವತ್ತು ತಾಂತ್ರಿಕತೆಗೆ ವಿವಿಧ ಆಯಾಮಗಳೂ ಇವೆ. ಅದು ನಮ್ಮ ಜೀವನದ ಮೇಲೆ ಪ್ರಭಾವವನ್ನು ಬೀರಿದೆ. ಈ ತಾಂತ್ರಿಕತೆಯೂ ನಮ್ಮ ಮೇಲೆ ಅಧಿಪತ್ಯವನ್ನು ಹೊಂದಿದೆ ಎನ್ನುವುದು ಸ್ಪಷ್ಟ.

ವ್ಯಕ್ತಿಯ ವಿಶ್ವಾತ್ಮಕ ಸತ್ಯವನ್ನು ಕೂಡಾ ವರ್ಗೀಕರಣಕ್ಕೆ ಅನುಸಾರವಾಗಿ ರೂಪಿಸುವ ಅಗತ್ಯವಿದೆ ಎನ್ನುವುದು ಮುಖ್ಯ. ಬಂಡವಾಳವಾದದ ಮುಖ್ಯ ಸಂಗತಿಯೆಂದರೆ ಅದು ಬುದ್ಧಿ ಜೀವಿಗಳನ್ನು ಮತ್ತು ದೈಹಿಕ ಶಕ್ತಿಯನ್ನು ಬಳಸುವವರನ್ನು ಬೇರೆ ಬೇರೆಯಾಗಿ ನೋಡುತ್ತದೆ ಇಲ್ಲಿಯೇ ನಾವು ಮತ್ತೊಂದು ಮಾತನ್ನು ಗಮನಿಸಬೇಕು. ಅದು ವ್ಯಕ್ತಿ ಮತ್ತು ಅವನ ವ್ಯಕ್ತಿತ್ವದ ಕುರಿತು ಮಾರ್ಕ್ಸ್‌ವಾದವು ತಳೆಯುವ ನಿಲುವು. ವ್ಯಕ್ತಿ ಮತ್ತು ಅವನ ಸ್ಥಾನವನ್ನು ಮಾರ್ಕ್ಸ್‌ವಾದವು ಹೇಳುವ ವಿಧಾನವು ಬೇರೆ. ಉದಾರವಾದಿ ಮಾನವತಾವಾದವು ವ್ಯಕ್ತಿಯನ್ನು ಭಿನ್ನವಾಗಿ ಗ್ರಹಿಸುತ್ತದೆ. ಅದರಲ್ಲಿ ವ್ಯಕ್ತಿತ್ವದ ಚಿಂತನೆಯು ತಾತ್ವಿಕವಲ್ಲ. ಅದು ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲು ಹೋಗುವುದಿಲ್ಲ. ಆದರೆ ಮಾರ್ಕ್ಸ್‌ವಾದವು ವ್ಯಕ್ತಿಯನ್ನು ನೋಡುವಾಗಲೇ ಅವನ ವ್ಯಕ್ತಿತ್ವವನ್ನು ಯಾವುದು ನಿಯಂತ್ರಿಸಿದೆ ಎನ್ನುವುದನ್ನೂ ಗಮನಿಸುತ್ತದೆ. ಉದಾರವಾದಿಗಳಿಗೆ ಸ್ವಾತಂತ್ರ್ಯವೆನ್ನುವುದು ಒಂದು ಆದರ್ಶ. ಆದರೆ ಸ್ವಾತಂತ್ರ್ಯವು ಕೇವಲ ಒಂದು ಕಲ್ಪನೆ ಮಾತ್ರ. ವ್ಯಕ್ತಿ ಮತ್ತು ಅವನ ಹಿನ್ನೆಲೆಯು ಬಹಳ ಮುಖ್ಯವಾಗಿದೆ. ವ್ಯಕ್ತಿಯನ್ನು ಒಂದು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯು ನಿಯಂತ್ರಿಸುತ್ತದೆ ಎನ್ನುವುದು ಮಾರ್ಕ್ಸ್‌ವಾದದ ನಿಲುವು. ಅದು ತತ್ವಜ್ಞಾನವೂ ಹೌದು. ಹೀಗಾಗಿಯೇ ಮಾರ್ಕ್ಸ್‌ವಾದವು ಸಮಾಜವಾದಿ ದೃಷ್ಟಿಕೋನದ ಮಾನವೀಯತೆಯನ್ನು ಎತ್ತಿ ಹಿಡಿಯುತ್ತದೆ. ಮನುಷ್ಯತ್ವ ಅನ್ನುವುದು ಕೇವಲ ಮಾನವೀಯತೆಯನ್ನು ಒಳಗೊಂಡ ಸಮಸ್ಯೆ ಅಲ್ಲ. ಅದು ವೈಜ್ಞಾನಿಕವಾದ ಕಲ್ಪನೆಯೂ ಹೌದು. ವಿವರಣೆಯು ಮಾತ್ರವೇ ಸಾಕಾಗುವುದಿಲ್ಲ. ಆದರ ರಾಜಕೀಯ ಪ್ರಶ್ನೆಗಳು ಸಮಾಜದ ಹೊರಗಿನ ಪ್ರಶ್ನೆಗಳು ಅಲ್ಲವೆನ್ನುವುದನ್ನು ಗಮನಿಸಬೇಕು. ರಾಜಕೀಯವಾಗಿ ಯಾವುದನ್ನು ಎಡವೆಂದು ಹೇಳುತ್ತೇವೆಯೋ ಅದು ಕೇವಲ ಎಡ ಮಾತ್ರವೇ ಅಲ್ಲ. ಅದು ರಾಜಕೀಯ ಪ್ರಶ್ನೆಯೆಂದೂ ಭಾವಿಸಬೇಕಾಗಿಲ್ಲ. ಅದು ಸಾಮಾಜಿಕ ಜೀವನದ ಪ್ರಶ್ನೆಯೂ ಹೌದು. ವಾಸ್ತವವಾಗಿ ಈವತ್ತು ನಾವು ಬುದ್ಧಿಜೀವಿಗಳನ್ನು ನೋಡುವಾಗ ಅವರು ಅನೇಕವನ್ನು ಒಂದು ರೂಪಕ್ಕೆ ತರುತ್ತಾರೆ ಎನ್ನುವುದು ಒಂದು ಅಂಶವಾಗಿದೆ. ಅವರು ಕೆಲವನ್ನು ಅಭಿವ್ಯಕ್ತಿ ಮಾಡುತ್ತಾರೆ. ಅದರಲ್ಲಿ ಸಮಾಜ, ತಾತ್ವಿಕತೆ ಮತ್ತು ವಿಜ್ಞಾನದ ಸಂಗತಿಗಳೂ ಇರುತ್ತವೆ. ಅವರೂ ಅನೇಕವನ್ನು ನಿರ್ಧಾರ ಮಾಡುತ್ತಾರೆ. ಎಷ್ಟೋ ಸರ್ತಿ ಅವರು ಯಜಮಾನಿಕೆಯ ಮಧ್ಯವರ್ತಿಗಳಂತೆ ಕೆಲಸವನ್ನು ಮಾಡುತ್ತಾರೆ ಎನ್ನುವುದು ಸತ್ಯ. ಆದರೆ ಗ್ರಾಂಶಿಯ ಅತ್ಯಂತ ಮಹತ್ವದ ವಾಕ್ಯವೆಂದರೆ ಎಲ್ಲಾ ಮನುಷ್ಯರು ಮೂಲತಃ

ಬುದ್ಧಿಜೀವಿಗಳೇ ಆಗಿರುತ್ತಾರೆ. ಆದರೆ ಈವತ್ತು ನಾವು ಯಾರನ್ನು ಬುದ್ಧಿಜೀವಿಗಳು ಎಂದು ಕರೆಯುತ್ತೇವೆಯೋ ಅವರು ಕೂಡಾ ಅನೇಕ ಮಿತಿಗಳನ್ನು ಹೊಂದಿರುತ್ತಾರೆ. ಹಾಗೆಂದು ಅವರಿಗೆ ಯಾವುದೇ ಚಟುವಟಿಕೆ ಇಲ್ಲ ಎಂದು ಅರ್ಥವಲ್ಲ. ಅವರದೂ ಒಂದು ಬಗೆಯ ಜೀವನದ ಕ್ರಮವೂ ಹೌದು. ಮತ್ತೊಂದು ದೃಷ್ಟಿಯಿಂದ ಹೇಳುವುದಾದರೆ ಸಮಾಜದ ಜೊತೆಗೆ ಅವರ ಸಂಬಂಧ ಎನ್ನುವುದು ಅತ್ಯಂತ ಸಂಕೀರ್ಣವಾಗಿರುತ್ತದೆ. ಈ ಬಗೆಯ ಸಂಬಂಧವು ಚರಿತ್ರೆಯಲ್ಲಿ ಬದಲಾಗಬಹುದು. ಅದರ ಜೊತೆಗೆ ಈವತ್ತು ನಾವು ಕರೆಯುತ್ತಿರುವ ವಿದ್ವಾಂಸರು ಅವರದೇ ಆದ ಸ್ಥಾನಮಾನವನ್ನು ಹೊಂದಿರುತ್ತಾರೆ. ನಾವು ಇಪ್ಪತ್ತನೆಯ ಶತಮಾನದ ಬುದ್ಧಿಜೀವಿಗಳನ್ನು ಹನ್ನೆರಡನೆಯ ಶತಮಾನದ ಬುದ್ಧಿಜೀವಿಗಳ ಜೊತೆಗೆ ಹೋಲಿಸುವುದು ಅತ್ಯಂತ ಕಷ್ಟ. ಈಗ ಇರುವ ಕೆಲವು ಬುದ್ಧಿಜೀವಿಗಳನ್ನು ನಾವು ಮತ್ತೊಮ್ಮೆ ನಮ್ಮ ಗಮನಕ್ಕೆ ತಂದುಕೊಳ್ಳಬೇಕು. ಈಗ ಮಾಧ್ಯಮಾದಲ್ಲಿ ಕೆಲಸವನ್ನು ಮಾಡುವವರು ಇದ್ದಾರೆ. ಹೋಟೇಲಿನಲ್ಲಿ ಮ್ಯಾನೇಜರ್ ಆಗಿ ಕೆಲಸವನ್ನು ಮಾಡುವವರೂ ಇದ್ದಾರೆ. ಇವರೆಲ್ಲರಿಗೆ ಅವರದಾದ ಒಂದು ಚಿಂತನೆಯ ಕ್ರಮವು ಇರುತ್ತದೆ. ಅವರಿಗೆ ಇರುವ ಜ್ಞಾನವು ಒಂದು ಬಗೆಯದು. ಅಡುಗೆ ಮತ್ತು ಅದರ ರುಚಿಯನ್ನು ನೋಡಿ ತೀರ್ಮಾನ ಮಾಡುವವನಿಗೆ ಬೇಕಾಗಿರುವುದು ಪ್ರಯೋಗದ ಪ್ರಶ್ನೆ ಮಾತ್ರ. ಇವರಿಗೆ ಸಾರ್ವಜನಿಕರ ಜೊತೆಗೆ ಒಂದು ಸಂಬಂಧವಂತೂ ಇದ್ದೇ ಇದೆ. ಹೀಗೆ ಇದ್ದರೂ ವೈಯಕ್ತಿಕ ಅಭಿರುಚಿಯು ಮಾತ್ರವೇ ಕೆಲಸವನ್ನು ಮಾಡುತ್ತವೆ.

ಈಗ ಇದರ ಮತ್ತೊಂದು ರೂಪವನ್ನು ನಾವು ಗಮನಿಸಬೇಕು. ಆಧುನಿಕ ಉತ್ಪಾದನೆಗಳು ಬದಲಾಗುತ್ತಿವೆ. ಬಂಡವಾಳವಾದವು ತನ್ನ ಸಂಪನ್ಮೂಲವನ್ನು ಬೇರೆ ಬೇರೆ ಚಟುವಟಿಕೆಗಳಲ್ಲಿ ಪ್ರಯೋಗವನ್ನು ಮಾಡುತ್ತವೆ. ಉದ್ಯಮ ಎನ್ನುವುದು ಮಾತ್ರವೇ ಈವತ್ತು ನಮ್ಮ ಮುಂದೆ ಇದೆ. ಆದರೆ ಉದ್ಯಮ ಎನ್ನುವುದು ಈವತ್ತು ಅತ್ಯಂತ ಸಾಮಾನ್ಯವಾದ ಕಾರ್ಮಿಕರು ಇಷ್ಟ ಪಡುವುದಿಲ್ಲ. ಅದಕ್ಕೆ ಹೆಚ್ಚು ತರಬೇತಿ ಹೊಂದಿರುವ ಜನರು ಬೇಕಾಗುತ್ತಾರೆ. ಅವರನ್ನು ಕಂಪೆನಿಯ ಉದ್ಯೋಗಕ್ಕೆ ಒಗ್ಗಿಸುವುದು ಮುಖ್ಯ. ಅವರೂ ನಿರ್ದಿಷ್ಟವಾದ ಜ್ಞಾನವನ್ನು ಮಾತ್ರವೇ ಹೊಂದಿರುತ್ತಾರೆ. ಅದಕ್ಕಾಗಿಯೇ ಅನೇಕ ತರಬೇತಿ ಕಾರ್ಯಕ್ರಮವೂ ನಡೆಯುತ್ತದೆ. ಹೀಗಾಗಿ ಬಂಡವಾಳವಾದವು ತನ್ನದೇ ಒಂದು ಜ್ಞಾನವನ್ನು ಸೃಷ್ಟಿ ಮಾಡುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಉತ್ಪಾದನೆಯು ಹೇಗೆ ನಮ್ಮನ್ನು ಒಂದು ಸಿದ್ಧವಾದ ಚೌಕಟ್ಟಿಗೆ ತರುತ್ತದೆ ಎನ್ನುವುದಕ್ಕೆ ಇದು ನಿದರ್ಶನ. ಜನರು ಹೇಗೆ ಬಂಡವಾಳವಾದಕ್ಕೆ ಪೂರಕವಾದ ಕೆಲಸವನ್ನು ಮಾಡುತ್ತಾರೆ ಎನ್ನುವುದಕ್ಕೆ ಗ್ರಾಂಶಿಯು ಸಮೂಹ ಮಾಧ್ಯಮದ ಉದಾಹರಣೆಯನ್ನು ಕೊಡುತ್ತಾನೆ. ಮಾಧ್ಯಮಗಳಲ್ಲಿ ಕೆಲಸವನ್ನು ಮಾಡುವವರು ಬಂಡವಾಳವಾದದ ಮಧ್ಯವರ್ತಿಯಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಇದೇ ರೀತಿಯಲ್ಲಿ ಅನೇಕ ಸಂಸ್ಥೆಗಳು ಇರುತ್ತವೆ. ಅವು ಮನುಷ್ಯನ ದೇಹದ ಶ್ರಮ , ಮನಸ್ಸಿನ ಶ್ರಮವನ್ನು ಬಳಸುತ್ತವೆ. ಯಾವುದೇ ಒಂದು ಸಮೂಹ ಮಾಧ್ಯಮದಲ್ಲಿ ಕೆಲಸವನ್ನು ಮಾಡುವವರು ಬರೀ ಒಬ್ಬ ವ್ಯಕ್ತಿ ಮಾಡುವಷ್ಟು ಮಾತ್ರ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಅದರಲ್ಲಿ ಒಂದು ಗುಂಪು ಕೆಲಸವನ್ನು ಮಾಡಬೇಕಾಗುತ್ತದೆ. ಸಂಪಾದಕ, ವರದಿಗಾರ ಸತ್ಯದ ವರದಿ, ಪಥ್ಯವನ್ನು ಸೋಸುವುದು, ಯಾವ ಸುದ್ಧಿಯನ್ನು ಯಾವ

ಪುಟದಲ್ಲಿ ಹಾಕಬೇಕು ಎಂದು ನಿರ್ಧಾರವಾಗಿರುತ್ತದೆ. ಆಧುನಿಕ ಜಗತ್ತಿನಲ್ಲಿ ಆಲೋಚನೆ ಮತ್ತು ಅದರ ಅಭಿವ್ಯಕ್ತಿ ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಗ್ರಾಂಶಿಯು ಮಧ್ಯಮ ವರ್ಗದ ಬುದ್ಧಿಜೀವಿಗಳು ಮತ್ತು ಕಾರ್ಮಿಕರು ಜೊತೆ ಸೇರಿಯೆ ಹೋರಾಟವನ್ನು ಮಾಡಬೇಕಾದ್ದು ಅತ್ಯಂತ ಅನಿವಾರ್ಯ ಎಂದು ಹೇಳುತ್ತಾನೆ. ಲೆನಿನ್ ಇದನ್ನು ಸ್ಪಷ್ಟವಾಗಿ ಹೇಳಿದ್ದ ಎನ್ನುವುದು ಇಲ್ಲಿ ಉಲ್ಲೇಖನೀಯ. ಅದರಲ್ಲಿ ಬುದ್ಧಿ ಮತ್ತು ದೇಹದ ಶ್ರಮ ಒಟ್ಟಿಗೆ ಇರಬೇಕಾಗುತ್ತದೆ. ಗ್ರಾಂಶಿಯು ಬರೀ ಒಬ್ಬ ಸಿದ್ಧಾಂತಿಯಾಗಿ ನೋಡುವುದಿಲ್ಲ. ಅದರ ಬದಲು ಅವನು ಪ್ರಯೋಗವನ್ನು ಕೂಡಾ ಮನಸ್ಸಿನಲ್ಲಿ ಇಟ್ಟುಕೊಂಡಿದ್ದ. ಇದನ್ನು ನಾವು ಅವನ ಆರ್ಗ್ಯಾನಿಕ್ ಬುದ್ಧಿಜೀವಿಗಳು ಮತ್ತು ಪಾರಂಪರಿಕವಾದ ಬುದ್ಧಿಜೀವಿಗಳು ಎನ್ನುವುದರಲ್ಲಿ ಕಾಣುತ್ತದೆ. ಲೆನಿನ್ ಒಮ್ಮೆ ಮೇಲು ಸ್ತರದ ಮತ್ತು ಕೆಳಸ್ತರದ ಎನ್ನುವ ವರ್ಗೀಕರಣವನ್ನು ಮಾಡಿದ್ದು ಇಲ್ಲಿ ಗಮನಾರ್ಹ. ಆದರೆ ಗ್ರಾಂಶಿಯು ಬುದ್ಧಿಜೀವಿಗಳು ಮತ್ತು ಕಾರ್ಮಿಕರ ನಡುವೆ ಒಂದು ಸಂಬಂಧ ಇರಬೇಕು ಎಂದು ಬಯಸುತ್ತಾನೆ. ಈವತ್ತು ಬುದ್ಧಿಜೀವಿಗಳಿಗೆ ರಾಜಕಾರಣ, ಕಲಾತ್ಮಕವಾದ ಒಂದು ಅಭಿವ್ಯಕ್ತಿ , ಹಾಗೂ ವಿಜ್ಞಾನ ಮತ್ತು ನೈತಿಕತೆಯು ಇದ್ದರೆ ಲೋಕವನ್ನು ನೋಡುವ ಕ್ರಮಗಳು ಬೇರೆಯಾಗುತ್ತವೆ. ಆದರೂ ಅವರು ಸಮಾಜದಲ್ಲಿ ಇರುತ್ತಾರೆ. ಸಮಾಜವನ್ನು ಹೊರತುಪಡಿಸಿಕೊಂಡು ಬುದ್ಧಿಜೀವಿಗಳು ಇರಲು ಸಾಧ್ಯವೇ ಇಲ್ಲ.

ಸಂಪ್ರದಾಯವು ಕೆಲವು ಮಾದರಿಗಳನ್ನು ಸೃಷ್ಟಿಸುತ್ತದೆ. ಅದರಲ್ಲಿ ಜ್ಞಾನವೂ ಒಂದು. ಆಧುನಿಕ ಜ್ಞಾನದ ಮಾದರಿಯಲ್ಲಿ ಅದು ಇರುವುದಿಲ್ಲ. ಆಧುನಿಕ ಮತ್ತು ಸಾಂಪ್ರದಾಯಿಕ ಜ್ಞಾನಗಳ ರೂಪಕ್ಕೆ ಭಿನ್ನತೆಗಳು ಇವೆ. ಈಗ ಜ್ಞಾನಕ್ಕೆ ಮತ್ತು ಉದ್ಯೋಗಕ್ಕೆ ಒಂದು ಸಂಬಂಧವು ಇದೆ. ವಿದ್ಯಾಭ್ಯಾಸ ಮತ್ತು ಉದ್ಯೋಗ ಎನ್ನುವುದರ ಸಂಬಂಧ ಈವತ್ತು ಬೇರೆ ಬೇರೆ ವಲಯವನ್ನು ಸೃಷ್ಟಿ ಮಾಡಿದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆಧುನಿಕ ಶಿಕ್ಷಣವು ಹಳೆಯ ಜ್ಞಾನವನ್ನು ನಿರಾಕರಿಸುತ್ತದೆ ಎನ್ನುವುದು ಅವನ ನಿಲುವು. ಸಂಪ್ರದಾಯ ಮತ್ತು ಆಧುನಿಕ ಎನ್ನುವುದಕ್ಕೆ ಅತ್ಯಂತ ವಿಶಾಲವಾದ ವ್ಯಾಪ್ತಿಯೂ ಇದೆ. ಇದು ಸಾಂಸ್ಕೃತಿಕ ಉತ್ಪಾದನೆಯ ಮೇಲೆಯು ಪರಿಣಾಮವನ್ನು ಬೀರುತ್ತದೆ. ಹಾಗೆ ನೋಡಿದರೆ ಜ್ಞಾನವು ಒಂದು ಬಗೆಯದೇ ಆಗಿರುವುದು ಇಲ್ಲ. ಜ್ಞಾನ ಎನ್ನುವುದು ನಮಗೆ ಮತ್ತೆ ಇನ್ನೊಂದು ಸಂಗತಿಯನ್ನು ಹೇಳುತ್ತದೆ. ಪರಂಪರೆಯಲ್ಲಿ ಬರುವ ಜ್ಞಾನವನ್ನು ಲಿಖಿತವಾದ ರೂಪದಲ್ಲಿ ಕಾಣುವುದು ಸಾಧ್ಯವಿಲ್ಲ. ಸೊರೆ ಕಾಯಿಯನ್ನು ಬೆಳೆಯುವುದು ಹೇಗೆ ಎನ್ನುವುದನ್ನು ಹಿಂದಿನವರು ಮಾತಿನಲ್ಲಿ ಹೇಳುತ್ತಿದ್ದರು ಆದರೆ ಇವು ಬರಹದಲ್ಲಿ ಇಲ್ಲ. ಹಾಗೆಂದು ಅದು ಜ್ಞಾನವೇ ಅಲ್ಲ ಎಂದು ಹೇಳುವಂತೆ ಇಲ್ಲ. ಆದ್ದರಿಂದ ನಾವು ಇದಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕಾಗುತ್ತದೆ. ಒಂದು ಸಮಾಜದಲ್ಲಿ ಪಾರಂಪರಿಕವಾದ ಜ್ಞಾನ ಮತ್ತು ಆಧುನಿಕ ಜ್ಞಾನಗಳು ಹೇಗೆ ಬರುತ್ತವೆ ಎನ್ನುವುದು ಗ್ರಾಂಶಿಗೆ ಅತ್ಯಂತ ಮುಖ್ಯ.

ಗ್ರಾಂಶಿಯಲ್ಲಿ ರಾಜಕೀಯ ಮತ್ತು ಬುದ್ಧಿಜೀವಿಗಳ ಕುರಿತು ಚರ್ಚೆಯು ಅತ್ಯಂತ ಮುಖ್ಯವಾದ್ದು ಇದಕ್ಕೂ ಅರ್ಥಶಾಸ್ತ್ರಕ್ಕೂ ಸಂಬಂಧವಿದೆ.

ಸಮಾಜ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಲು ಹೊರಟವರು ಈವತ್ತು ಮತ್ತೆ ಗ್ರಾಂಶಿಯನ್ನು ಓದಬೇಕಾಗಿದೆ. ಸಮಕಾಲೀನ ಚರ್ಚೆಯು ಹೇಗೆ ಇದೆ ಎಂದು ಅತ್ಯಂತ ಸೂಕ್ಷ್ಮವಾಗಿ ನೋಡಿದರೆ ಇದರ ಅರ್ಥವು ತಿಳಿಯುತ್ತದೆ. ಅಷ್ಟೇ ಅಲ್ಲ ಯಾರು ಈವತ್ತು ಮಾರ್ಕ್ಸವಾದವನ್ನು ಅಧ್ಯಯನ ಮಾಡಲು ಹೊರಟಿದ್ದಾರೆಯೋ ಅವರಿಗೆ ಅತ್ಯಂತ ಹೆಚ್ಚು ಉಪಯೋಗಕ್ಕೆ ಬರುವುದು ಗ್ರಾಂಶಿಯ ಬರಹಗಳು. ಅವನ ಬರಹಗಳಲ್ಲಿ ನಮಗೆ ಮತ್ತೆ ಮತ್ತೆ ಬರುವ ಕಾರ್ಮಿಕರ ಪ್ರಶ್ನೆ, ಬುದ್ಧಿಜೀವಿಗಳು ಮತ್ತು ಅವರ ಕಾರ್ಯ ವಿಧಾನ, ಫೋರ್ಡನ ಚರ್ಚೆ, ಜಾನಪದ ನಮಗೆ ಈಗಲೂ ಅತ್ಯಂತ ಉಪಯುಕ್ತವಾಗಿದೆ. ಅವನು ಉಳಿದವರಂತೆ ಕೇವಲ ಜನಪ್ರಿಯ ಸಂಸ್ಕೃತಿ ಮತ್ತು ಅದರ ಸ್ವರೂಪವನ್ನು ದೂರ ಇಟ್ಟವನು ಅಲ್ಲ. ಅವನ ಚರ್ಚೆಯಲ್ಲಿ ಫುಟ್‌ಬಾಲ್, ಸಂಗೀತ ಮುಂತಾದವು ಬರುತ್ತವೆ. ಇವು ಹೇಗೆ ಜಗತ್ತಿನಲ್ಲಿ ಒಂದು ಸಂಚಲನವನ್ನು ಉಂಟು ಮಾಡಿದೆ ಎಂದು ವಿವರಿಸುವಾಗ ಅದಕ್ಕೆ ಒಂದು ತಾತ್ವಿಕವಾದ ಆಯಾಮವನ್ನು ಕೊಡುತ್ತಾನೆ., ಅದಕ್ಕೆ ಒಂದು ವಿಮರ್ಶಾತ್ಮಕವಾದ ಆಯಾಮವು ಇರುತ್ತದೆ. ನಾವು ಇವುಗಳನ್ನು ಅರ್ಥಮಾಡಿಕೊಳ್ಳುವುದು ಸೂಕ್ತ ಎಂದು ಅವನು ಹೇಳಿದ್ದು ಮೇಲಿನ ವಾಕ್ಯಕ್ಕೆ ಪುಷ್ಟಿಯನ್ನು ಕೊಡುತ್ತದೆ. ಅವನು ಸನ್ನಿವೇಶವು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮದ ಸ್ವರೂಪವು ಮನುಷ್ಯರ ಮೇಲೆ ಯಾವ ದಿಕ್ಕನ್ನು ಸೂಚಿಸುತ್ತದೆ ಎಂದು ವಿವರಿಸುತ್ತಾನೆ. ಅದನ್ನು ಇನ್ನೊಂದು ಥರ ಹೇಳುತ್ತಾನೆ: ಆರೋಗ್ಯಕರವಾದ ಮತ್ತು ವಿಮರ್ಶಾತ್ಮಕವಾದ ಒಂದು ವಿಸ್ತರಣೆ ಎಂದು ಭಾವಿಸುತ್ತಾನೆ. ಅವನು ಇದನ್ನು ಹೇಳುವಾಗ ಅದರ ಹಿಂದೆ ಇರುವ ಚರಿತ್ರೆ ಮತ್ತು ಅದರ ವಿಶಿಷ್ಟವಾದ ಆಯಾಮವನ್ನು ಹೇಳುತ್ತಾನೆ. ಯಾವುದೇ ರಚನೆಗಳು ಮತ್ತು ಆದರ ಆಂಶಿಕವಾದ ರೂಪಗಳು ಜಗತ್ತಿನಲ್ಲಿ ಇದ್ದೇ ಇರುತ್ತವೆ. ಆದರೆ ಅವುಗಳನ್ನು ನಾವು ಹೇಗೆ ನಿರೂಪಿಸುತ್ತೇವೆ ಎನ್ನುವುದು ಅತ್ಯಂತ ಮುಖ್ಯ. ಗ್ರಾಂಶಿಯ ಮಾತುಗಳಿಗೆ ಇನ್ನೊಂದು ಆಯಾಮವು ಇದೆ. ಅದನ್ನು ಹೇಳುವಾಗ ಅವನು ಯಾವುದೇ ಪ್ರಭಾವಕ್ಕೆ ಸಿಕ್ಕಿದವನೂ ಅಲ್ಲ. ಅವನಲ್ಲಿ ಅನೇಕ ಚಿಂತನೆಗಳು ಬೇರೆ ಬೇರೆ ಆಯಾಮವನ್ನು ಹೊಂದಿದೆ. ಒಂದು ಸೈದ್ಧಾಂತಿಕವಾದ ತಿಳುವಳಿಕೆಯು ಹೇಗೆ ಮುಖ್ಯವಾಗಿದೆ ಎಂದು ಅವನ ಬರಹಗಳನ್ನು ನೋಡಿದರೆ ನಮಗೆ ತಿಳಿಯುತ್ತದೆ. ಅವನ ಬರಹಗಳೇ ಒಂದು ಅರ್ಥದಲ್ಲಿ ಬೌದ್ಧಿಕವಾದ ಚಿಂತನೆಗಳನ್ನು ಹೇಳುತ್ತವೆ. ಅವನು ರಾಜಕೀಯ ಚಿಂತಕ ಎಂದು ಹೇಳಿ ನಾವು ಕೈ ತೊಳೆಯುವಂತೆ ಇಲ್ಲ. ಅವನು ರಾಜಕಾರಣದಲ್ಲಿ ಅತ್ಯಂತ ಕ್ರಿಯಾಶಾಲಿಯಾದ ಕಾರ್ಯಕರ್ತನೂ ಆಗಿದ್ದ. ಅವನ ದೃಷ್ಟಿಯಲ್ಲಿ ರಾಜಕಾರಣ ಎನ್ನುವುದು ತಪ್ಪಲ್ಲ. ಲೇಖಕರು ಮತ್ತು ಬುದ್ಧಿಜೀವಿಗಳು ರಾಜಕಾರಣವನ್ನು ಮೈಲಿಗೆ ಎಂದು ತಿಳಿಯಬೇಕಾದ ಅಗತ್ಯವಿಲ್ಲ.

ಸ್ವಾತಂತ್ರ್ಯ ಎನ್ನುವುದು ಹೇಗೆ ವ್ಯಕ್ತಿಯನ್ನು ಬಿಡುಗಡೆ ಮಾಡುತ್ತದೆಯೋ ಅದೇ ರೀತಿಯಲ್ಲಿ ವ್ಯಕ್ತಿಗೆ ಸವಲತ್ತನ್ನು ಕೊಡುತ್ತದೆ. ವ್ಯಕ್ತಿಯ ಸ್ವಾತಂತ್ರ್ಯ ಎನ್ನುವುದು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮವು ಏನು ಎನ್ನುವುದನ್ನು ವಿವರವಾಗಿ ಅವನು ಚರ್ಚೆ ಮಾಡುತ್ತಾನೆ. ಆರ್ಥಿಕವಾದ ಉತ್ಪಾದನೆಗೆ ಮತ್ತು ಬುದ್ಧಿಜೀವಿಗಳಿಗೆ ಒಂದು ಸಂಬಂಧವು ಇರುತ್ತದೆ. ಒಬ್ಬ ಬುದ್ಧಿಜೀವಿಗೆ ನಿಜವಾಗಿಯು ಆಗುತ್ತಿರುವುದು ಏನು ಮತ್ತು ಅವನು ಯಾವ ಜವಾಬ್ದಾರಿಯನ್ನು

ನಿರ್ವಹಿಸಬೇಕಾಗುತ್ತದೆ ಎಂದು ಗ್ರಾಂಶಿಯು ವಿವರವಾಗಿ ಹೇಳುತ್ತಾ ಹೋಗುತ್ತಾನೆ. ಅವನು ಅದನ್ನು ಮಾತ್ರವೇ ಹೇಳುವುದಿಲ್ಲ, ಅದರ ಜೊತೆಗೆ ಅವನು ರಾಜಕೀಯ ಎಚ್ಚರವನ್ನು ಇಟ್ಟುಕೊಂಡಿರುತ್ತಾನೆ. ಒಂದು ನಿರ್ದಿಷ್ಟವಾದ ವರ್ಗವು ತನಗೆ ಬೇಕಾದ ಒಂದು ನಿರೂಪಣೆಯನ್ನು ನೆರವೇರಿಸುತ್ತದೆ ಎನ್ನುವುದು ಕ್ರೋಸೆಯ ಮಾತು. ಅದನ್ನು ಗ್ರಾಂಶಿಯು ಒಪ್ಪುತ್ತಾನೆ. ವರ್ಗವು ಕೆಲವನ್ನು ಒಪ್ಪುತ್ತದೆ. ಅದು ಒಪ್ಪಿದೆ ಎನ್ನುವ ಮೌಲ್ಯವು ಸಾರ್ವಜನಿಕವಾಗಿರುತ್ತದೆ. ಅದರ ಜೊತೆಗೆ ಅದಕ್ಕೆ ಒಂದು ಲೋಕ ದೃಷ್ಟಿಯೂ ಇರುತ್ತದೆ. ಬುದ್ದಿಜೀವಿಗಳು ಹೇಳುವ ಕೆಲವು ವಿಚಾರಗಳು ಮುಖ್ಯವಾಗಿ ಲೋಕ ಸಂಹಿತೆಗೆ ಹತ್ತಿರವಾಗುತ್ತದೆ. ಅದು ಸಾಮಾಜಿಕ ಸಂಬಂಧವೂ ಹೌದು. ಬುದ್ಧಿಜೀವಿಯು ಸಮಾಜದ ಜೊತೆಗೆ ಒಂದು ನಿರ್ದಿಷ್ಟವಾದ ಸಂಬಂಧವನ್ನು ಹೊಂದಿರುತ್ತಾನೆ. ಸಾಮಾಜಿಕ ಸಂಬಂಧ ಎನ್ನುವುದು ಅತ್ಯಂತ ಸಂಕೀರ್ಣವಾದ್ದು. ಬೂರ್ಜ್ವಾ ಬುದ್ದಿಜೀವಿಗಳು ಮತ್ತೊಂದು ಥರ ಕೆಲಸವನ್ನು ಮಾಡುತ್ತಾರೆ. ಅವರು ಒಂದು ವರ್ಗದ ಹಿತಾಸಕ್ತಿಯನ್ನು ಮಾತ್ರವೇ ಗಮನದಲ್ಲಿ ಇಟ್ಟುಕೊಳ್ಳುತ್ತಾರೆ. ಅವರು ಬೇರೆ ವಿಚಾರಗಳನ್ನು ಮಾಡಲು ಹೋಗುವುದಿಲ್ಲ. ಅದರಲ್ಲಿಯೂ ಅವರಿಗೆ ಬೂರ್ಜ್ವಾವರ್ಗದ ಹಿತಾಸಕ್ತಿಯು ಹೆಚ್ಚು ಮುಖ್ಯ. ಸಮಾಜವು ಬುದ್ಧಿಜೀವಿಗಳನ್ನು ಉತ್ಪಾದಿಸುತ್ತದೆ ಎನ್ನುವುದು ಗ್ರಾಂಶಿ ಚಿಂತನೆಯ ಪ್ರಮುಖವಾದ ಮಾತು. ಇದನ್ನು ಅವನು ಬೇರೆ ಬೇರೆ ಥರ ಹೇಳಿದ್ದಾನೆ. ಇದನ್ನು ನಾವು ಇನ್ನೊಂದು ಉದಾಹರಣೆಯ ಮೂಲಕ ಅರ್ಥ ಮಾಡಿಕೊಳ್ಳಬೇಕು.

ಆಡಂ ಸ್ಮಿತ್ ಅತ್ಯಂತ ಮುಖ್ಯ ಅರ್ಥ ಶಾಸ್ತ್ರಜ್ಞ, ಸ್ಕಾಟಿಶ್ ದೇಶದವನು ಅವನು ಮುಖ್ಯವಾಗಿ ವೆಲ್ತ್ ಆಫ್ ನೇಶನ್ ಕೃತಿಯನ್ನು ಬರೆದ. ಅವನ ಬೌದ್ಧಿಕತೆಗೆ ಮತ್ತು ಅವನ ಸಮಾಜದ ಆವಶ್ಯಕತೆಯು ಬೇರೆಯಿತ್ತು. ಅವನು ಬೂರ್ಜ್ವಾವರ್ಗದ ಅರ್ಥಶಾಸ್ತ್ರಜ್ಞ ಎಂದು ಪ್ರಸಿದ್ಧ ನಾದ. ರಾಷ್ಟ್ರ ಮತ್ತು ಅದರ ಸಂಪತ್ತು ಅವನ ಆದರ್ಶಗಳಲ್ಲೊಂದು.

ಚರಿತ್ರೆಯನ್ನು ನೋಡಲು ನಮಗೆ ಅವಕಾಶವನ್ನು ಕೊಟ್ಟವರಲ್ಲಿ ಗ್ರಾಂಶಿಯೂ ಒಬ್ಬ. ಸಮಾಜದಲ್ಲಿ ಅಸಮತೆಗಳು ಇವೆ ಎನ್ನುವಲ್ಲಿಂದ ಗ್ರಾಂಶಿಯು ಶುರುಮಾಡುತ್ತಾನೆ, ಅಸಮತೆ ಎನ್ನುವುದು ಒಂದು ಮಟ್ಟದಲ್ಲಿ ಮಾತ್ರವೇ ಇದೆ ಎಂದು ಹೇಳಲು ಸಾಧ್ಯವಾಗುತ್ತದೆ. ಸತ್ಯವನ್ನು ಹೇಳುವವರು ಇದನ್ನು ಗಮನಿಸಬೇಕು ಎನ್ನುವುದು ಅವನ ವಾದ. ಅಷ್ಟೇ ಅಲ್ಲ ಅದು ನಮ್ಮ ನಿಜವಾದ ಒಂದು ಸಂವೇದನೆಯನ್ನು ಹೇಳುತ್ತದೆ. (ಸೆನಸೊ ಕಮ್ಯೂನ್) ಗ್ರಾಂಶಿಯು ಇದನ್ನು ಸೈದ್ಧಾಂತಿಕ ಮಾಡುತ್ತಾನೆ. ಆದ್ದರಿಂದ ಅವನಲ್ಲಿ ಇದು ಬೇರೆಯಾಗುತ್ತದೆ. ಸ್ಥಳ ಮತ್ತು ಅವಕಾಶಗಳು ಬೇರೆಯಾಗುವಂತೆ ಆಳುವುದು ಮತ್ತು ಆಳಿಸಿಕೊಳ್ಳುವುದು ಬೇರೆಯಾಗುತ್ತದೆ. ಇದು ಸಬಾಲ್ಟ್ರನ್ ಅಧ್ಯಯನಕ್ಕೆ ಅವಕಾಶವನ್ನು ಕೊಡುತ್ತದೆ. ಸಬಾಲ್ಟ್ರನ್ ಎನ್ನುವುದು ಜೊತೆಗೆ ಹೋಗುತ್ತದೆ. ಯಜಮಾನ್ಯ ಮತ್ತು ಅದರ ಪರಿಣಾಮವನ್ನು ಅದು ಹೇಳಿಕೊಳ್ಳುತ್ತದೆ. ಸಬಾಲ್ಟ್ರನ್ ಗುಂಪು ಎನ್ನುವುದರಲ್ಲಿ ಅನೇಕ ವಿಚಾರಗಳು ಅಡಕವಾಗಿದೆ. ರೈತರು, ಮಹಿಳೆಯರು , ಸಾಮಾನ್ಯರು, ಕಾರ್ಮಿಕರು ಇದರಲ್ಲಿ ಬರುತ್ತಾರೆ. ಅಧಿಕಾರ ಮತ್ತು ಅದರ ಸ್ವರೂಪವನ್ನು ಹೇಳುವಾಗ ಗ್ರಾಂಶಿಯು ಈ ಪದನ್ನು ಬಳಸುತ್ತಾನೆ. ಅವನ ಪ್ರಿಸನ್ ನೋಟ್‌ಬುಕ್ ಕೃತಿಯಲ್ಲಿ ಒಮ್ಮೆ ಮಾತ್ರವೇ ಇದು ಬರುತ್ತದೆ ಎಂದು ವಿದ್ವಾಂಸರು ಹೇಳುತ್ತಾರೆ., ಆಡಂಸ್ಮಿತ್ನಲ್ಲಿ ಇದು

ಬರುತ್ತದೆ. ಯಜಮಾನಿಕೆ ಮತ್ತು ಆಳ್ವಿಕೆ ಎನ್ನುವುದು ಅವನ ವಾದದಲ್ಲಿ ಬರುತ್ತದೆಯಾದರೂ ಅದನ್ನು ಅವನು ಬೇರೆ ಸನ್ನಿವೇಶದಲ್ಲಿ ಬಳಸುತ್ತಾನೆ ಎನ್ನುವುದು ಗಮನಾರ್ಹ. ಹದಿನೆಂಟನೆಯ ಶತಮಾನದಲ್ಲಿ ಸ್ಕಾಟ್‌ಲೆಂಡನಲ್ಲಿ ಅನೇಕ ಬುದ್ಧಿಜೀವಿಗಳು ನಮಗೆ ಸಿಗುತ್ತಾರೆ. ಅವರ ಪಾಂಡಿತ್ಯವು ಆ ಕಾಲಕ್ಕೆ ಹೆಚ್ಚು ಅಗತ್ಯವಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಅವರು ಬೇರೆಬೇರೆ ವಿಷಗಳ ಮೇಲೆ ಬೋಧನೆಯನ್ನು ಮಾಡುತ್ತಾರೆ. ಅದರಲ್ಲಿ ಮಾನವಿಕ ಅಧ್ಯಯನಗಳು, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಅರ್ಥಶಾಸ್ತ್ರಗಳು ಸೇರಿವೆ. ಅದರಲ್ಲಿ ವೈದ್ಯ ಪದ್ಧತಿಯು ಇತ್ತು. ಇವುಗಳು ಬುದ್ಧಿಜೀವಿಗಳನ್ನು ರೂಪಿಸಲು ಸಹಾಯವನ್ನು ಮಾಡಿದವು. ವಿಶ್ವವಿದ್ಯಾನಿಲಯಗಳು ನವೀನ ಮಾದರಿಯ ಜ್ಞಾನವನ್ನು ಹೇಳಿಕೊಟ್ಟವು. ಅದರ ಜೊತೆಗೆ ನಮ್ಮ ಗುಣ ಮತ್ತು ನಡತೆಯು ಹೇಗೆ ಇರಬೇಕೆಂದು ಪ್ರತಿಪಾದಿಸಿದವು. ಅರ್ಥಶಾಸ್ತ್ರಕ್ಕೆ ಹೊಸದಾದ ಆಯಾಮವನ್ನು ಕಲ್ಪಿಸಿದವು. ಜ್ಞಾನವನ್ನು ಹಂಚಿದವು ಎಂದು ಹೇಳುವುದು ಸರಿಯಾದ ಮಾತು. ಬುದ್ಧಿಜೀವಿಗಳ ನೈತಿಕತೆಯೆ ಮುಖ್ಯ ಎಂದು ಪ್ರತಿಪಾದಿಸಿದವು. ಇದು ಪುನರುಜ್ಜೀವನಕ್ಕೆ ಕಾರಣವಾಯಿತು. ಜ್ಞಾನವನ್ನು ಮಾತ್ರ ಆನ್ವಯಿಕವಾಗಿ ನೋಡಲಾಯಿತು. ಇದರಿಂದ ಶುದ್ಧ ವಿಜ್ಞಾನ ಮತ್ತು ಆನ್ವಯಿಕ ವಿಜ್ಞಾನಗಳು ಚಾಲ್ತಿಗೆ ಬಂದವು ಎಂದು ಹೇಳುತ್ತಾರೆ. ವಿಶ್ವವಿದ್ಯಾನಿಲಯಗಳು ರೈತರನ್ನು ಮತ್ತು ಕಾರ್ಮಿಕರನ್ನು ನೋಡಿ ವ್ಯವಸ್ಥೆಯ ಬದಲಾವಣೆಗೆ ಒಂದು ಪ್ರಯತ್ನಮಾಡಿದ್ದು ಇಲ್ಲಿ ಉಲ್ಲೇಖನೀಯ. ಇದನ್ನು ಗ್ರಾಂಶಿಯಲ್ಲಿ ಜನಪ್ರಿಯ ವಿಶ್ವವಿದ್ಯಾನಿಲಯ ಎಂದು ಹೇಳಬಹುದು.

ಒಂದು ಜನಪ್ರಿಯವಾದ ವಿಶ್ವವಿದ್ಯಾನಿಲಯವು ನಮಗೆ ಅನೇಕ ರೀತಿಯಲ್ಲಿ ಉಪಯುಕ್ತವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಆದರೆ ಈವತ್ತು ಯಾವುದೇ ವಿಶ್ವವಿದ್ಯಾನಿಲಯವು ತನ್ನ ಅನನ್ಯತೆಯನ್ನು ಉಳಿಸಿಕೊಳ್ಳಲು ಸೋತಿವೆ ಎನ್ನುವುದು ನಿಜ. ಮತ್ತೊಂದು ಮಾತಿನಲ್ಲಿ ಹೇಳಬೇಕೆಂದರೆ ಈವತ್ತು ವಿಶ್ವವಿದ್ಯಾನಿಲಯಗಳು ಜನರ ಜೊತೆಗೆ ಒಂದು ಕ್ರಿಯಾತ್ಮಕವಾದ ಸಂಬಂಧವನ್ನು ಹೊಂದಿಲ್ಲ. 1916ರ ಕಾಲದಲ್ಲಿ ಇದ್ದ ಸಂಗತಿಯನ್ನು ಗ್ರಾಂಶಿಯು ನೆನಪು ಮಾಡಿಕೊಳ್ಳುತ್ತಾನೆ. ಆಗ ವಿಶ್ವವಿದ್ಯಾನಿಲಯದಲ್ಲಿ ನಿಸರ್ಗ ವಿಜ್ಞಾನ, ಇಟಾಲಿಯನ್ ಸಾಹಿತ್ಯ, ತತ್ವಜ್ಞಾನ ಇದ್ದು ನಿಜ. ಆದರೆ ಅದು ಅಷ್ಟೊಂದು ಯಶಸ್ವಿಯಾಗಬೇಕಾದರೆ ಅದರ ಹಿಂದೆ ಕೆಲವು ನಿರ್ದಿಷ್ಟವಾದ ಜ್ಞಾನ ಮಾದರಿಗಳೂ ಅಗತ್ಯವಿದ್ದವು. ಆದರೆ ಇದು ಯಾಕೆ ಹೆಚ್ಚು ಯಶಸ್ವಿಯಾಗಿಲ್ಲ ಎನ್ನುವುದರ ಉತ್ತರವು ಅಷ್ಟು ಸರಳವಲ್ಲ ಎನ್ನುವುದು ಅವನ ನಿಲುವು. ಅದನ್ನು ಯಾವ ಮಾನದಂಡದಲ್ಲಿ ನೋಡುವುದು ಎನ್ನುವುದೇ ಸಮಸ್ಯೆ. ಆಗ ಸಂಸ್ಕೃತಿ ಮತ್ತು ಅದರ ಚರ್ಚೆಯು ನಡೆಯುತ್ತಿದ್ದವು. ಅವನದೇ ಮಾತಿನಲ್ಲಿ ಹೇಳಬೇಕೆಂದರೆ ಅತ್ಯಂತ ಹೆಚ್ಚು ಶಾಖ ಇರುವ ಸಾಂಸ್ಕೃತಿಕ ವಾಗ್ವಾದಗಳು ಒಂದು ಥರವಿದ್ದರೆ, ಜನಪ್ರಿಯ ವಿಶ್ವವಿದ್ಯಾನಿಲಯಗಳು ಮತ್ತು ಅವುಗಳ ಚರ್ಚೆಯು ಅತ್ಯಂತ ಶೀತಲವಾದ ಗುಣವನ್ನು ಹೊಂದಿತ್ತು, ಇದು ಕೂಡಾ ಗ್ರಾಂಶಿಯ ಮಾತು. ಯಾರು ನಿಜವಾದ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದ್ದಾರೆಯೋ ಅವರಿಗೂ ಜನಪ್ರಿಯ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತದೆ ಅಧ್ಯಯನಗಳಿಗೂ ಬಹಳ ವ್ಯತ್ಯಾಸವಿದ್ದವು. ಯಾರು ನಿತ್ಯವೂ ಶಾಲೆಯಲ್ಲಿ ಓದುವುದಿಲ್ಲವೋ ಅವರಿಗೆ ಮಾತ್ರವೇ ಈ ಜನಪ್ರಿಯವಾದ ಒಂದು ವಿಶ್ವವಿದ್ಯಾನಿಲಯವು ನಡೆಯುತ್ತದೆ ಎಂದು

ಅದರ ನಿರ್ದೇಶಕರು ಭಾವಿಸಿದ್ದರಿಂದ ಅದರ ಕೌಶಲ್ಯವೂ ಕುಂದಿತು. ಅವರು ನಿಜವಾದ ಜ್ಞಾನ ಮತ್ತು ಅದರ ಸಾಧ್ಯತೆಯನ್ನು ಮುಚ್ಚಿದಂತೆ ಭಾಸವಾಯಿತು. ಪ್ರಭುತ್ವ ನಡೆಸುವ ವಿಶ್ವವಿದ್ಯಾನಿಲಯಕ್ಕೆ ಮತ್ತು ಜನಪ್ರಿಯವಾದ ವಿಶ್ವವಿದ್ಯಾನಿಲಯಕ್ಕೆ ಈ ದೃಷ್ಟಿಯಿಂದ ಭಿನ್ನತೆಯು ಉಂಟಾಯಿತು. ಅದಕ್ಕೂ ಈ ವಿಶ್ವವಿದ್ಯಾನಿಲಯಕ್ಕೂ ಬರುವ ಜನರಲ್ಲಿ ಅಂಥಾ ವ್ಯತ್ಯಾಸವು ಇದ್ದಿರಲಿಲ್ಲ. ಆದರೆ ಅದು ರಚನೆಯಾದ ಒಂದು ಕಂದರ ಮಾತ್ರ. ಯಾವಾಗ ಜನಪ್ರಿಯವಾದ ವಿಶ್ವವಿದ್ಯಾನಿಲಯವು ಕೆಲವು ತಪ್ಪುಗಳನ್ನು ಮಾಡಿತೋ ಆಗ ಅದರ ವಿರುದ್ಧವಾದ ಒಂದು ನಿಲುವನ್ನು ಸಮಾಜವು ತಾಳಬೇಕಾಯಿತು. ಒಂದು ಹಂತದ ಅನಂತರ ಜನಪ್ರಿಯವಾದ ವಿಶ್ವವಿದ್ಯಾನಿಲಯವು ನೀತಿಯನ್ನು ಹೇಳು ಮಾತ್ರವೇ ಸೀಮಿತವಾಯಿತು. ವಿಶ್ವವಿದ್ಯಾನಿಲಯಗಳು ವಾಸ್ತವವಾಗಿ ಜ್ಞಾನಿಗಳನ್ನು ತಯಾರು ಮಾಡುತ್ತದೆ. ಅದರ ಉದ್ದೇಶವೂ ಅದೇ. ಆದರೂ ಯಾವುದೇ ವಿಶ್ವವಿದ್ಯಾನಿಲಯಗಳು ಜ್ಞಾನ ಮತ್ತು ಸ್ವಾತಂತ್ರ್ಯವನ್ನು ಹೇಳಲೇ ಬೇಕಾಗುತ್ತದೆ. ಅದನ್ನು ಗ್ರಾಂಶಿಯು ಹೇಳುತ್ತಾನೆ. ಜನಪ್ರಿಯವಾದ ವಿಶ್ವವಿದ್ಯಾನಿಲಯಗಳು ಕೂಡಾ ಒಂದು ಹಂತದಲ್ಲಿ ವ್ಯಕ್ತಿಗಳು ಮತ್ತು ಅವರ ಜ್ಞಾನದ ಮಾದರಿಗಳನ್ನು ಹೇಳಿದವು.

ಕೈಗಾರಿಕಾ ತಂತ್ರಜ್ಞಾನವು ವಿವಿಧ ರೀತಿಯ ಉದ್ಯೋಗಿಗಳನ್ನು ಸೃಷ್ಟಿ ಮಾಡಿದವು ಎಂದು ಗ್ರಾಂಶಿಯು ಹೇಳುತ್ತಾನೆ. ಮಾತು ಮತ್ತು ಬರಹದ ಭಾಷೆಗೆ ಇರುವ ವ್ಯತ್ಯಾಸವನ್ನು ಕ್ರೋಸೆಯು ಹೇಳಿದ್ದಾನೆ. ಅದರಲ್ಲಿ ಅಂತರವು ಇದೆ ಎನ್ನುವುದು ಅವನ ವಾದ. ಅವನ ವಾದವನ್ನು ಗ್ರಾಂಶಿಯು ಗಮನಿಸಿದ್ದಾನೆ. ಸ್ಕಾಟ್‌ಲೆಂಡನ ಇಂಗ್ಲೀಷ್ ಭಾಷೆಯು ಬೇರೆ ತರ ರೂಪಿತವಾಗುತ್ತದೆ. ಅದನ್ನು ಅವರು ಸಾಧಿಸಿದ್ದು. ಮಾತು ಮತ್ತು ಬರಹವನ್ನು ಅದು ಬೇರೆ ಮಾಡುತ್ತದೆ. ಅದನ್ನು ಇನ್ನೊಂದು ತರಹ ಹೇಳಬೇಕೆಂದರೆ AO ಹ್ಯೂಂ ತನ್ನ ಸಿದ್ಧಾಂತವನ್ನು ಇಂಗ್ಲೀಷಿನಲ್ಲಿ ಬರೆದಿದ್ದಾನೆ. ಅದನ್ನು ಅವನು ಯುರೋಪಿಯನ್ನು ಇಂಗ್ಲೀಷಿನಲ್ಲಿ ಬರೆದಿಲ್ಲ ತನ್ನದೇ ಆದ ಒಂದು ಇಂಗ್ಲೀಷಿನಲ್ಲಿ ಬರೆಯುತ್ತಾನೆ. ಮಾತಾಡುವ ಇಂಗ್ಲೀಷಿಗೆ ಮಾತ್ರವೇ ಪ್ರಾಶಸ್ತ್ಯವು ಬಂದಿತು. ಅವರಿಗೆ ಆ ಭಾಷೆಯು ವಿದೇಶಿಯ ಭಾಷೆಯಾಗಿತ್ತು ಎನ್ನುವುದು ಇಲ್ಲಿ ಗಮನಾರ್ಹ. ಆದ್ದರಿಂದ ಅಲ್ಲಿ ಒಂದು ಸಬಾಲ್ಟರ್ನ್ ಎನ್ನಬಹುದಾದ ದೃಷ್ಟಿಕೋನವೂ ಇದೆ. ಅದರಲ್ಲಿ ಒಂದು ಬಗೆಯ ಆತಂಕವೂ ಇದೆ. ಇಂಗ್ಲೀಷನ್ನು ನಾವು ಪುಸ್ತಕಗಳ ಮೂಲಕ ಕಲಿಯುತ್ತಿದ್ದೇವೆ ಎಂದು ಅಲ್ಲಿಯ ಜನರು ಹೇಳಿಕೊಂಡರು. ಗಡಿ ಪ್ರದೇಶಗಳಲ್ಲಿ ಇದು ಸರಿಯಾಗಿತ್ತು ಕೂಡಾ.

ಮತ್ತೆ ಸ್ಮಿತ್‌ನ ವಾದದದ ಕಡೆಗೆ ಬರಬೇಕು. ಅದರಲ್ಲಿ ಅವನು ಮುಕ್ತವಾದ ವಾಣಿಜ್ಯವನ್ನು ಹೇಳುತ್ತಾನೆ. ಅದನ್ನು ಈಗ ಎಲ್ಲರೂ ಹೆಚ್ಚು ಪ್ರಸ್ತುತ ಎಂದು ಹೇಳುತ್ತಾರೆ. ಅವನು ವಿನಿಮಯವನ್ನು ಹೇಳಿಕೊಳ್ಳುತ್ತಾನೆ. ಅದರ ಜೊತೆಗೆ ಆಡಂಸ್ಮಿತ್ ಸ್ವಾತಂತ್ರ್ಯವನ್ನು ಕುರಿತು ಹೆಚ್ಚು ಮಾತಾಡುತ್ತಾನೆ. ಆದರೆ ಸ್ವಾತಂತ್ರ್ಯ ಎನ್ನುವುದು ವ್ಯಕ್ತಿ ಕೇಂದ್ರಿತವಾದಾಗ ಅದರ ಸ್ವರೂಪವು ಬೇರೆ ಇರುತ್ತದೆ ಗ್ರಾಂಶಿಯಲ್ಲಿ ಸಮೂಹ ಕೇಂದ್ರಿತವಾದ ಸ್ವಾತಂತ್ರ್ಯ ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಆಡಂಸ್ಮಿತ್ ಮುಕ್ತವಾದ ಮಾರುಕಟ್ಟೆಯನ್ನು ಹೇಳುತ್ತಾನೆ. ಆದರೆ ಗ್ರಾಂಶಿಯು ಕ್ರೋಸೆಯು ಕುರಿತು ಮಾತಾಡುವಾಗ ಅವನಲ್ಲಿ ವರ್ಗಗಳಿಗೆ ವಿಶ್ವಾತ್ಮಕವಾದ ಮೌಲ್ಯಗಳು ಇರುತ್ತವೆ. ಅದರ ಜೊತೆಗೆ ಲೋಕ ದೃಷ್ಟಿಯೂ ಇರುತ್ತದೆ. ಇದನ್ನು ನಾವು ಧರ್ಮ ಹೇಗೆ ಇರುತ್ತದೆಯೋ

ಅದೇ ರೀತಿಯಲ್ಲಿ ಎಂದು ಹೇಳುತ್ತಾನೆ. ಸ್ಮಿತನ ಬೌದ್ಧಿಕ ವಲಯವುನ ಹೀಗೆ ಸಾಮಾಜಿಕ ಅಗತ್ಯವೂ ಆಗುತ್ತದೆ. ಅದನ್ನು ನಿರ್ದಿಷ್ಟ ಸನ್ನಿವೇಶದ ದೃಷ್ಟಿಕೋನ ಎಂದು ಹೇಳಬಹುದು. ಯಜಮಾನಿಕೆ ಎನ್ನುವುದು ಇಲ್ಲಿಯು ಬಳಕೆಯಾಗುತ್ತದೆ. ಅದನ್ನು ಮರೆಯಬಾರದು. ಮತ್ತೆ ಗ್ರಾಂಶಿಯು ಹೇಳಿದ ಮಾತಿಗೆ ಬರಬೇಕು : ಅದನ್ನು ಚಾರಿತ್ರಿಕ ವಿಸ್ತರಣೆ ಎಂದು ಕರೆಯುತ್ತಾನೆ. ಒಂದು ಮಾತು ಸತ್ಯ– ಸ್ಮಿತ್‌ನಲ್ಲಿ ವಾಣಿಜ್ಯ ಶಾಸ್ತ್ರದ ಜ್ಞಾನವು ಮುಖ್ಯವಾಗುತ್ತದೆ ಅವನು ಒಂದು ಅರ್ಥದಲ್ಲಿ ಏಕ ಸ್ವಾಮ್ಯತೆಯನ್ನು ಹೇಳುತ್ತಾನೆ ಎನ್ನುವುದೂ ಅಷ್ಟೇ ನಿಜ.

*** ಆಡಂಸ್ಮಿತ್ ಎ ಬೂರ್ಜ್ವಾಸಿಸ್ ಆರ್ಗೆನಿಕ್ ಇಂಟಲೆಕ್ಚುವಲ್ ? ಕಾತೆ ಕ್ರೆಹನ್**
(ಸಂ: ಫ್ರೆಡ್ರಿಕ್ ಜೇಮ್ಸನ್ – ಗ್ರಾಂಶಿ ಇನ್ ದ ವರ್ಲ್ಡ್) ಲೇಖನದ ಸಾರಾನುವಾದ)

೩

ತಾತ್ವಿಕತೆ ಮತ್ತು ರಾಜಕಾರಣ

ಕ್ರೋಸೆಯು ತಾತ್ವಿಕತೆಯನ್ನು ಕುರಿತು ಹೇಳುವಾಗ ರಾಜಕಾರಣವನ್ನ ಪ್ರಸ್ತಾವಿಸುತ್ತಾನೆ ರಾಜಕಾರಣವು ಮೇಲು ರಚನೆಗೆ ಸಂಬಂದ ಪಟ್ಟಿದೆ. ಆದರೆ ಗ್ರಾಂಶಿಯ ದೃಷ್ಟಿಕೋನವು ಬೇರೆ.

ಪ್ರತಿಯೊಂದು ತಾತ್ವಿಕತೆಯು ಆಗಿರುತ್ತದೆ ಅಥವಾ ಪ್ರತಿಯೊಂದೂ ರಾಜಕಾರಣವು ಆಗಿರುತ್ತದೆ. ಅದನ್ನು ನಾವು ಮರೆಯುವಂತೆ ಇಲ್ಲ. ಆದ್ದರಿಂದ ನಾವು ಜೀವನವನ್ನು ರಾಜಕೀಯವಲ್ಲದ ಒಂದು ಸ್ಥಿತಿಯೆಂದು ಭಾವಿಸುವುದು ಅತ್ಯಂತ ಕಷ್ಟ. ನಾವು ಈವತ್ತು ಏನು ಅನುಭವಿಸುತ್ತಿದ್ದೇವೆ ಎಂದು ನೋಡಿದರೆ ಇದರ ಅರ್ಥವು ತಿಳಿಯುತ್ತದೆ. ಈವತ್ತು ನಮ್ಮ ನಂಬಿಕೆಗಳು ಹೇಗೆ ಬದಲಾಗುತ್ತಿದೆಯೋ ಅದೇ ರೀತಿಯಲ್ಲಿ ನಮ್ಮ ರಾಜಕೀಯ ಬದ್ಧತೆಗಳು ಬೇರೆ ಆಗುತ್ತವೆ. ಇದು ಕೇವಲ ಒಂದು ವಿಚಾರಕ್ಕೆ ಮಾತ್ರವೇ ಸಂಬಂಧ ಪಟ್ಟದ್ದು ಅಲ್ಲ. ನೀಶೆ ಮತ್ತು ಫುಕೋ ಇಬ್ಬರೂ ಅಧಿಕಾರವು ಎಲ್ಲಾ ಕಡೆಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಆದರೆ ವಿಷಯವು ಅಷ್ಟು ಸಹಜ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅಧಿಕಾರವನ್ನು ನಾವು ಒಂದು ಸಾಮಾಜಿಕ ಮತ್ತು ರಾಜಕೀಯವಾದ ಸ್ಥಿತಿ ಎಂದು ಭಾವಿಸಿಕೊಳ್ಳುವುದು ಉತ್ತಮ. ಯಾವುದು ಇದರಲ್ಲಿ ನಿಜವಾದ ಅಧಿಕಾರ ಮತ್ತು ಯಾವುದು ನಿಜವಾದ ಅಧಿಕಾರವು ಅಲ್ಲ ಎಂದು ಯೋಚನೆಯನ್ನು ಮಾಡಬೇಕು..ನಾವು ಮಾಡುವ ಅನೇಕ ಸಂಕಥನಗಳಲ್ಲಿ ಅನೇಕವು ಒಂದು ನಿರ್ದಿಷ್ಟವಾದ ರಾಜಕಾರಣವನ್ನು ಹೇಳುತ್ತದೆ ಎಂದು ನಮಗೆ ಗೊತ್ತಿರಬೇಕು. ಹಾಗೆ ನೋಡಿದರೆ ನಮ್ಮಲ್ಲಿ ಅನೇಕ ಸಂಗತಿಗಳು ಮೌನದಲ್ಲಿ ಇರುತ್ತವೆ. ಆದರೆ ಅದರಲ್ಲಿ ಯಾವುದೇ ತಾತ್ವಿಕತೆಯು ಇಲ್ಲವೆಂದು ಅರ್ಥವಲ್ಲ. ಮೌನದಲ್ಲಿ ಇರುವ ಸಂಗತಿಗಳು ನಿಜವಾದ ಕೆಲವು ಸಂವಹನವನ್ನು ಹೇಳುತ್ತವೆ. ಅದರ ರೂಪವು ಮಾತ್ರವು ಬೇರೆ. ಯಾವುದು ಇಲ್ಲವೋ ಆಗ ಮಾತ್ರವೇ ಅಲ್ಲಿ

ನಮಗೆ ಒಂದು ತಾತ್ವಿಕತೆಯು ಇದೆ ಎಂದು ಹೇಳಲು ಬರುವುದೂ ಇಲ್ಲ. ಹಾಗೆ ನೋಡಿದರೆ ನಮಗೆ ಈವತ್ತು ಸಂಕಥನ ಎನ್ನುವುದು ಹೆಚ್ಚು ಪ್ರಚಲಿತಾವಗಿದೆ. ಆದರೆ ಸಂಕಥನ ಎನ್ನುವುದು ಒಂದು ಅರ್ಥವನ್ನು ಹೇಳುತ್ತದೆ. ಆದರೆ ಅದು ಬರೀ ಒಂದು ಪದವು ಅಲ್ಲ ಅಷ್ಟೇ ಅಲ್ಲ ಅದು ಒಂದು ಭಾಷೆಯನ್ನು ಹೇಳುವುದು ಇಲ್ಲ. ಸಂಕಥನ ಎನ್ನುವುದು ಭಾಷೆಯನ್ನು ಮೀರಿ ನಡೆಯುತ್ತದೆ. ಸಂಕಥನವು ಅತ್ಯಂತ ಮಹತ್ವದ ಪರಿಕಲ್ಪನೆಯೂ ಹೌದು. ಅದು ಆತಾತ್ವಿಕವೂ ಆಗಿರುತ್ತದೆ ಎಂದು ಭಾವಿಸಬೇಕಾಗಿಲ್ಲ. ಅದಕ್ಕೆ ಅರ್ಥವಿದೆ. ಅದು ನಿರ್ದಿಷ್ಟವಾಗಿದೆ. ಅದು ಭಾಷಿಕವಾದ ಒಂದು ಸಂಗತಿಯನ್ನು ಮಾತ್ರವೇ ಹೇಳುವುದಿಲ್ಲ. ತಾತ್ವಿಕತೆ ಎನ್ನುವುದು ಒಂದು ನಿರ್ದಿಷ್ಟವಾದ ಪದವಾಗಿದ್ದು ಅದನ್ನು ಸಮಾಜದ ಸಂಬಂಧದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು ಎಂದು ರೇಮಾಂಡ್ ವಿಲಿಯಂಸ್ ಹೇಳುತ್ತಾನೆ. ತಾತ್ವಿಕತೆಯನ್ನು ಮತ್ತು ಸತ್ಯವನ್ನು ಜೊತೆಗಿರಿಸಿ ನೋಡಲಾಗುವುದಿಲ್ಲವೆನ್ನುವುದು ಫುಕೋನ ವಾದ. ಫುಕೋ ಅನೇಕ ಕಡೆ ತಾತ್ವಿಕತೆ ಎನ್ನುವುದರ ಬದಲಾಗಿ ಸಂಕಥನವೆಂಬ ಪದವನ್ನು ಬಳಸಿದ್ದಾನೆ. ಸಂಕಥನವು ಜ್ಞಾನಕ್ಕಿರುವ ಒಂದು ದಾರಿಯೆಂದು ಅವನ ಅಭಿಪ್ರಾಯವಾಗಿದೆ. ಅಧಿಕಾರವು ನಿಯಮಿತವಾಗಿ ಕೆಲಸವನ್ನು ಮಾಡುತ್ತಾರೆ. ಅದರ ಒಂದು ಭಾಗ ಸಂಕಥನವು ಇರುತ್ತದೆಯೆಂದು ಅವನ ಅಭಿಪ್ರಾಯವಾಗಿದೆ. ಪ್ರತಿಯೊಂದು ಸಮಾಜದಲ್ಲಿಯೂ ನಾವು ಸರ್ವೇಸಾಮಾನ್ಯ ಎನ್ನಬಹುದಾದ ರಾಜಕಾರಣವನ್ನು ಕಾಣುತ್ತೇವೆ. ಅದು ಸಮಾಜದ ಮೇಲೆ ಪ್ರಭಾವವನ್ನು ಬೀರುತ್ತದೆ.

ಆದರೆ ನಿಸರ್ಗವನ್ನು ಹೇಗೆ ನೋಡುತ್ತೇವೆ ಎನ್ನುವುದರ ಆಧಾರದ ಮೇಲೆ ನಮ್ಮ ನಿಲುವು ವ್ಯಕ್ತವಾಗುತ್ತದೆ. ಅದನ್ನು ನಾವು ಒಂದು ತತ್ವಜ್ಞಾನದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನೋಡಬಹುದು, ಇಲ್ಲವೇ ಅದನ್ನು ನಮ್ಮ ಉಪಯೋಗಕ್ಕೆ ಅನುಗುಣವಾಗಿಯೂ ನೋಡಬಹುದು. ಇದನ್ನು ಅತಾತ್ವಿಕವಾಗಿ ನೋಡುವವರು ಇದ್ದಾರೆ. ನಮ್ಮ ಜೀವನಕ್ಕೆ ಯಾವುದೇ ಮೂಲಭೂತವಾದ ಒಂದು ನಂಬಿಕೆಯು ಇರಬೇಕಾಗಿಲ್ಲ. ಅಷ್ಟೇ ಅಲ್ಲ ನಾವು ನಂಬಿಕೆಯನ್ನು ಆಧರಿಸಿಕೊಂಡು ಬದುಕುವುದಿಲ್ಲವಾದ್ದರಿಂದ ನಮಗೆ ನಂಬಿಕೆಗಳು ಅಗತ್ಯವಿಲ್ಲ ಕೆಲವರು ಹೇಳುತ್ತಾರೆ. ನೀಶೆ ಮತ್ತು ಫುಕೋ ಒಮ್ಮೆ ಇದನ್ನು ಹೇಳಿದ್ದರು. ನೈತಿಕತೆಗೆ ಹೇಗೆ ಒಂದು ಸಾಪೇಕ್ಷವಾಗಿದೆ ಎಂದು ಅವರು ಭಾವಿಸುತ್ತಾರೆ. ಮನುಷ್ಯ ಮತ್ತು ಅವನ ಜೀವನದ ಕ್ರಮಕ್ಕೆ ಒಂದು ನಿರ್ದಿಷ್ಟವಾದ ನೈತಿಕತೆಯು ಇರುತ್ತದೆ. ಆದ್ದರಿಂದ ಈವತ್ತು ನಾವು ಅನೇಕವನ್ನು ಮುಂದುವರಿಸುತ್ತೇವೆ ಹಾಗೂ ಅದು ನಮಗೆ ಒಂದು ಅತ್ಯಂತ ಮುಖ್ಯವಾದ ಪ್ರಶ್ನೆಯು ಆಗಿದೆ ಎನ್ನುವುದು ಫುಕೋನ ವಾದ. ನಮ್ಮ ಅನೇಕ ಅಭ್ಯಾಸಗಳು ಬೇರೆ ಬೇರೆ ಥರ ಮುಂದುವರಿಯುತ್ತವೆ. ಅಷ್ಟೇ ಅಲ್ಲ ಕೆಲವನ್ನು ನ್ಯಾಯ ಸಮ್ಮತ ಮಾಡಲಾಗುತ್ತದೆ. ಅದರ ಜೊತೆಗೆ ನಾವು ಸಮಾಜ ಮತ್ತು ಅದರ ವಿಶ್ಲೇಷಣೆಗೆ ಗಂಡು ಮತ್ತು ಹೆಣ್ಣು, ಮೇಲು ಕೆಳಗು ಎಂದು ವರ್ಗೀಕರಣ ಮಾಡುತ್ತೇವೆ. ಇದು ಒಂದು ಹಂತದಲ್ಲಿ ಸಾಮಾಜಿಕ ರಚನೆಗಳಾಗಿ ಬಂದಿವೆ. ಈವತ್ತು ನಮಗೆ ಒಂದು ಭಯವು ಆವರಿಸಿದೆಎ ನ್ನುವುದು ಸತ್ಯ. ಅದನ್ನು ಸಾಂಸ್ಕೃತಿಕವಾದ ಒಂದು ಸಂಮಿಶ್ರಣ ಎಂದು ಕರೆಯಬಹುದು. ಮತ್ತೊಂದು ಅಂಶವು ಇಲ್ಲಿ ಅತ್ಯಂತ ಮುಖ್ಯ.

ಅನೇಕ ಸಂದರ್ಭದಲ್ಲಿ ಇದು ಸಾಂದರ್ಭಿಕವಾದ ನಿಲುವನ್ನು ಹೊಂದಿರುತ್ತದೆ. ಸಾಪೇಕ್ಷ ಎನ್ನುವುದು ಯಾವತ್ತೂ ಒಂದು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳುವುದಿಲ್ಲ ಎಂದು ಸೈದ್ ಭಾವಿಸಿದ್ದು ಇಲ್ಲಿ ಉಲ್ಲೇಖನೀಯ. ಮನುಷ್ಯ ಮತ್ತು ಅವನ ಗುಣಗಳು ಬೇರೆಯಾಗಿರುತ್ತದೆ. ಅದನ್ನೇ ನಾವು ಮನುಷ್ಯನ ಸ್ವಭಾವ ಎಂದು ಹೇಳುತ್ತೇವೆ. ಸ್ವಭಾವವು ಭಿನ್ನ ಮಾತ್ರವೇ ಅಲ್ಲ, ಅದು ಸ್ವಯಂ ಅಸ್ತಿತ್ವನ್ನು ಪಡೆದಿರುತ್ತದೆ. ನಮ್ಮ ಅಸ್ತಿತ್ವ ಎಂದರೆ ಅದು ರಾಜಕಾರಣವೂ ಆಗಿರುತ್ತದೆ ಎಂದು ಸಾರ್ತ್ರೆಯು ಹೇಳುತ್ತಾನೆ. ಆದ್ದರಿಂದ ಅದಕ್ಕೆ ಒಂದು ನಿಲುವು ಇರುತ್ತದೆ. ಅವನ ಅಸ್ತಿತ್ವದ ಪ್ರಶ್ನೆಯು ಈ ದೃಷ್ಟಿಯಲ್ಲಿ ಮಹತ್ವದ್ದೂ ಹೌದು. ಮನುಷ್ಯನು ತನ್ನ ಸ್ವಭಾವವನ್ನು ಒಂದು ಅರ್ಥದಲ್ಲಿ ಕಟ್ಟಿಕೊಳ್ಳುತ್ತಾನೆ. ಒಂದು ವಿಚಾರವನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕು: ನಾವು ಮನುಷ್ಯರಾಗಿಯೇ ಹುಟ್ಟುತ್ತೇವೆ. ಅನಂತರ ಆಗುತ್ತೇವೆ. ಈ ಜಗತ್ತಿನಲ್ಲಿ ಅನೇಕವು ಆಗುತ್ತವೆ. ಆಗುವುದು ಮನಸ್ಸಿಗೆ ಸಂಬಂಧ ಪಟ್ಟ ಕ್ರಿಯೆಯೂ ಹೌದು. ಯಾವಾಗ ನಾವು ಆಗುತ್ತೇವೆಯೋ ಅದನ್ನು ನಾವು ನಮ್ಮ ಗುಣ ಎಂದು ಗುರುತಿಸುತ್ತೇವೆ. ಆದರೆ ಇಲ್ಲಿ ಗುಣ ಎನ್ನುವುದು ನಮಗೆ ನಮ್ಮ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಮನಸ್ಸು ಮತ್ತು ವ್ಯಕ್ತಿತ್ವ ಎನ್ನುವುದು ಹೇಗೆ ಜೊತೆಗೆ ಹೋಗುತ್ತದೆ ಎಂದು ಸಾರ್ತ್ರೆಯು ಹೇಳುತ್ತಾನೆ. ಆದರೆ ವ್ಯಕ್ತಿತ್ವವು ಸ್ವಯಂಸಂಪೂರ್ಣವೂ ಅಲ್ಲ. ಸ್ವಂತಿಕೆ ಮತ್ತು ಬೇರೆಯವರು ಎನ್ನುವುದು ಅರ್ಥಪೂರ್ಣವೂ ಆಗಿರುತ್ತದೆ. ಸ್ವ ಮತ್ತು ಅನ್ಯ ಎನ್ನುವುದು ಹೇಗೆ ಒಂದು ತಾತ್ವಿಕ ಮೀಮಾಂಸೆಯು ಆಯಿತು ಎನ್ನುವುದನ್ನು ನಾವು ಸೈಮನ್ ಡಿ ಬುವಾ ಮತ್ತು ಫ್ರಾಂಜ್ ಫ್ಯಾನನ್ ಬರಹಗಳಲ್ಲಿ ನೋಡಬಹುದು. ಸೈಮನ್ ಡಿ ಬುವಾ ಗಂಡು ಮತ್ತು ಹೆಣ್ಣು ಎನ್ನುವ ಸಂಬಂಧವನ್ನು ಹೇಳಲು ಹೊರಡುವಾಗ ಇದನ್ನು ಹೇಳುತ್ತಾಳೆ. ಆದರೆ ಫುಕೋ ಇದನ್ನು ಮತ್ತೆ ಬೇರೆ ಥರ ಹೇಳುತ್ತಾನೆ,. ಅವನಲ್ಲಿ ಇದು ಬರೀ ಒಂದು ದ್ವಂದ್ವ ಮಾತ್ರವೇ ಅಲ್ಲ ಅದರ ಆಚೆಗೆ ಹೋಗುವ ಅತ್ಯಂತ ಮುಖ್ಯವಾದ ಪ್ರಕ್ರಿಯೆಯೂ ಆಗುತ್ತದೆ. ಅವನು ಇದನ್ನು ಮತ್ತೆ ವಿವರಿಸುವಾಗ ಹೇಗೆ ಇದು ಒಂದು ವೈರುದ್ಧ್ಯವಾಗಿದೆ ಎಂದೂ ಹೇಳುತ್ತಾನೆ. ಫುಕೋನಲ್ಲಿ ದೃಶ್ಯಾತ್ಮಕ ಭ್ರಮೆಯ ಪ್ರಶ್ನೆಯು ಅತ್ಯಂತ ಮುಖ್ಯವಾಗುತ್ತದೆ. ಯಾವುದು ನಮಗೆ ಕಾಣುತ್ತದೆಯೋ ಅದನ್ನು ಮಾತ್ರವೇ ನಾವು ಒಪ್ಪುವುದು ಸರಿಯಾದ ಒಂದು ಕ್ರಮವು ಅಲ್ಲ ಎಂದು ಅರ್ಥಮಾಡಿಕೊಳ್ಳಬೇಕು.ಎಲ್ಲವೂ ಅತ್ಯಂತ ಸಹಜವಾಗಿ ನಡೆಯುತ್ತದೆ, ಅದು ಸಮಾನವಾಗಿರುತ್ತದೆ ಎಂದು ಹೇಳಲು ಸಾಧ್ಯವೂ ಇಲ್ಲ. ನಾವು ಅನೇಕರು ಒಂದು ವಸ್ತು ಮತ್ತು ಒಂದು ಘಟನೆಯ ಸಾರವು ಇದು ಎಂದು ಹೇಳುತ್ತೇವೆ. ಅದು ನಮ್ಮನ್ನು ಒಂದು ಮಿತಿಗೆ ಒಳಪಡಿಸುತ್ತದೆ. ನಮ್ಮ ಕೆಲವು ನಂಬಿಕೆಗಳು ಹೇಗೆ ಇರುತ್ತವೆ ಎಂದರೆ ಅದನ್ನು ನಾವು ಪ್ರಶ್ನೆಯೇ ಮಾಡುವುದಿಲ್ಲ. ಒಂದು ವೇಳೆ ನಾವು ಪ್ರಶ್ನೆಯನ್ನು ಮಾಡಿದರೆ ಅದನ್ನು ನಮ್ಮ ಅಧಿಕ ಪ್ರಸಂಗ ಎಂದು ಜನರು ತಿಳಿಯುತ್ತಾರೆ. ಮನುಷ್ಯನು ತನ್ನ ಅಸ್ತಿತ್ವದಲ್ಲಿ ಇದನ್ನು ಅತ್ಯಂತ ಮುಖ್ಯವಾದ್ದು ಎಂದು ಭಾವಿಸುವುದೂ ನಿಜ. ಅದು ತಾತ್ವಿಕವಾದ ಪ್ರಶ್ನೆಯು ಹೌದು. ಅದನ್ನು ತತ್ವಜ್ಞಾನವು ಇದನ್ನು ನೋಡುವ ಕ್ರಮವು ಬೇರೆ. ತತ್ವಜ್ಞಾನಗಳ ನಿರೂಪಣೆಯಲ್ಲಿ ಭಿನ್ನವಾಗುತ್ತವೆ. ಸಾಂಪ್ರದಾಯಿಕವಾದ ತತ್ವಜ್ಞಾನವು ನಂಬಿಕೆಯನ್ನು ಪ್ರಶ್ನೆ ಮಾಡಬೇಡಿ ಎಂದು ಹೇಳುತ್ತದೆ. ಅದರಲ್ಲಿ ತರ್ಕ ಮತ್ತು ಪ್ರಮಾಣವು ಒಂದು ಥರ ಇರುತ್ತದೆ. ಆದರೆ ಈವತ್ತು ನಮ್ಮ ನವೀನ ತತ್ವಜಾನದ ರೂಪವು ಭಿನ್ನ. ಅದು

ನಮಗೆ ಚರಿತ್ರೆಯ ಆಗುಹೋಗುಗಳನ್ನು ಹೇಳುತ್ತದೆ. ಚರಿತ್ರೆಯಲ್ಲಿ ಅದು ಅತ್ಯಂತ ಮಹತ್ವದ ಸೂಚನೆಗಳನ್ನು ಕೊಡುತ್ತದೆ. ನಮ್ಮ ಆಯ್ಕೆಯು ಯಾವುದು ಆಗಿರುತ್ತದೆ ಎನ್ನುವ ಪ್ರಶ್ನೆಯನ್ನು ಲೈಟಾರ್ಡ್ ಕೇಳುತ್ತಾನೆ. ಬಯಕೆಯೇ ಅಥವಾ ತತ್ವಜ್ಞಾನವೆ ಎನ್ನುವುದು ಅವನ ಅವನಲ್ಲಿ ಮುಖ್ಯವಾಗುತ್ತದೆ. ಜ್ಞಾನ ಮತ್ತು ಅದರ ಮಾದರಿಗಳು ವಿವಿಧ ರೀತಿಗಳಲ್ಲಿ ಇರುತ್ತವೆ. ಅದನ್ನು ನಿರೂಪಣಾ ಮಾದರಿಯ ಜ್ಞಾನ ಮತ್ತು ವೈಜ್ಞಾನಿಕ ರೂಪವಾದ ಜ್ಞಾನ ಎಂದು ಹೇಳುತ್ತಾರೆ. ಈಗ ಇದರ ಜೊತೆಗೆ ಮತ್ತೆ ಬೇರೆ ಪದಗಳೂ ಸೇರಿಕೊಂಡಿದೆ. ಅದನ್ನು ಜ್ಞಾನದ ಅರ್ಥಶಾಸ್ತ್ರ ಮತ್ತು ಸಾಮಾಜಿಕ ಜೀವನದ ಅರಿವು ಎಂದು ಕರೆಯುತ್ತಾರೆ. ಜ್ಞಾನವೇ ಅಧಿಕಾರ ಎಂದು ಹೇಳುವಾಗ ಅದರ ಸಾಧ್ಯತೆಯನ್ನು ಮತ್ತು ಅದರ ಸಂಕೀರ್ಣತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಜ್ಞಾನ ಮತ್ತು ಅಧಿಕಾರವನ್ನು ಕುರಿತು ಹೆಚ್ಚು ಚರ್ಚೆಗಳು ನಡೆದವು .ಆಧುನಿಕವಾದ ಜ್ಞಾನವು ಹೇಗೆ ಸಮಾಜವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವನ್ನು ಮಾಡುತ್ತದೆ ಎಂದು ಲಿಯೋಟಾರ್ಡ್ ಹೇಳುತ್ತಾನೆ. ಚಲನೆ, ಪ್ರತಿಚಲನೆ ಮತ್ತು ಸ್ಥಳಾಂತರಗಳು ಹೇಗೆ ಆಧುನಿಕವಾದ ಪರಿಭಾಷೆಗಳು ಆಗಿವೆ ಎಂದು ಅವನು ಹೇಳುತ್ತಾನೆ. ತಾತ್ವಿಕತೆಯನ್ನು ಫುಕೋ ಈ ಅರ್ಥದಲ್ಲಿ ಒಂದು ಸಂಕಥನ ಎಂದು ಕರೆಯುತ್ತಾನೆ.

ಆಲೋಚನೆ ಮತ್ತು ಸ್ವಾತಂತ್ರ್ಯ ಎನ್ನುವುದು ನಿಜವಾದ ಅರ್ಥದಲ್ಲಿ ಅತ್ಯಂತ ಸಂಕೀರ್ಣ ಎಂದು ಕಿರ್ಕೆಗಾರ್ಡ ಹೇಳುತ್ತಾನೆ. ಸ್ವಾತಂತ್ರ್ಯ ಎಂದು ಯಾವುದನ್ನು ಹೇಳುತ್ತೇವೆಯೋ ಅದು ಕೂಡಾ ಕೆಲವು ನಿಯಮವನ್ನು ಹೊಂದಿರುತ್ತವೆ. ಈ ದೃಷ್ಟಿಯಿಂದ ನಮಗೆ ನಮ್ಮ ಕ್ರಿಯೆಗಳು ಹೆಚ್ಚು ಮುಖ್ಯವಾಗಿರುತ್ತವೆ. ಅಸ್ತಿತ್ವಕ್ಕೆ ಚರಿತ್ರೆ ಮತ್ತು ಆಯ್ಕೆಗಳು ಅತ್ಯಂತ ಮುಖ್ಯವಾದವುಗಳು. ಅದನ್ನು ನಿರಾಕರಿಸಲು ಬರುವುದೂ ಇಲ್ಲ. ಚರಿತ್ರೆಯನ್ನುವುದು ಮುಖ್ಯ. ಆದರೆ ಇಲ್ಲಿ ಮತ್ತೊಂದು ಪ್ರಶ್ನೆಯನ್ನು ಅವನು ಇಡುತ್ತಾನೆ. ಅದು ವಿಶ್ವಾತ್ಮಕವಾಗಿರಬಹುದು ಅಥವಾ ಇಲ್ಲದೆಯೂ ಇರಬಹುದು. ಆದರೆ ಆಯ್ಕೆ ಎನ್ನುವುದು ಇರುತ್ತದೆ. ಆಯ್ಕೆಯು ಹೆಚ್ಚು ನಿರ್ಧಾರಾತ್ಮಕವಾದ್ದೂ ಆಗಿದೆ. ಆಯ್ಕೆಯನ್ನು ಮಾಡಿಕೊಳ್ಳುವುದು ಅಂದರೆ ಅದು ನಮ್ಮನ್ನು ನಾವು ರೂಪಿಸಿಕೊಳ್ಳುವುದೂ ಹೌದು. ಬರಹವೂ ನಮಗೆ ಒಂದು ಆಯ್ಕೆ ಆಗಿರುತ್ತದೆ. ತಾನು ಮತ್ತು ತನ್ನ ಆಯ್ಕೆ ಎನ್ನುವುದು ಇಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಯಾವುದೇ ವ್ಯಕ್ತಿಯನ್ನಾಗಲೀ ವ್ಯಕ್ತಿತ್ವವನ್ನಾಗಲೀ ಅಷ್ಟು ಸುಲಭವಾಗಿ ನಿರ್ಧಾರ ಮಾಡಲು ಆಗುವುದೂ ಇಲ್ಲ. ಆದರೆ ವೈಯಕ್ತಿಕತೆಗೂ ಬಾಹ್ಯಕ್ಕೂ ಸಂಬಂಧವಿದೆ ಎನ್ನುವುದೂ ಅಷ್ಟೇ ನಿಜ. ಆಯ್ಕೆ ಎಂದರೆ ಇದುವಾ ಅಥವಾ ಅದುವಾ ಎನ್ನುವುದು ಅಲ್ಲ. ಅದಕ್ಕೆ ಕೆಲವು ಮೌಲ್ಯಗಳು ಇವೆ. ಆಯ್ಕೆಗಳು ಮೊದಲು ಇರುವುದಿಲ್ಲ ಅದು ಆಯ್ಕೆ ಮಾಡಿಕೊಂಡ ಮೇಲೆ ಅಸ್ತಿತ್ವಕ್ಕೆ ಬರುತ್ತದೆ. ಆಯ್ಕೆಯನ್ನು ಮಾಡಿಕೊಳ್ಳದೇ ಹೋದರೆ ಅದರ ಅಸ್ತಿತ್ವಕ್ಕೆ ಬೆಲೆಯು ಇಲ್ಲ. ಆಯ್ಕೆಗಳು ನಮ್ಮ ಹೊಸದಾದ ಹಾದಿಗಳೂ ಹೌದು. ಒಂದು ಮಗುವು ನಗ್ನವಾಗಿ ಇದೆ ಎಂದಾದರೆ ಅದರ ಅರ್ಥವಿಷ್ಟೆ : ಅದಕ್ಕೆ ಅದರ ಅರಿವು ಇಲ್ಲ. ನಮ್ಮ ಅಗತ್ಯಕ್ಕೆ ಅನುಸಾರವಾಗಿ ಮಾತ್ರವೇ ನಾವು ಅನೇಕ ಆಯ್ಕೆಗಳನ್ನು ಮಾಡುತ್ತೇವೆ. ನಾವು ನಮಗೆ ಇರುವ ಜ್ಞಾನದ ಆಧಾರದ ಮೇಲೆ ಆಯ್ಕೆಯನ್ನು

ಮಾಡುತ್ತೇವೆ. ನೈತಿಕತೆ ಮತ್ತು ಆಸ್ತಿಕತೆಯು ನಮ್ಮ ಆಯ್ಕೆಗಳು ಆದರೆ ಅವುಗಳು ಬಾಹ್ಯವಾಗಿವೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅವುಗಳ ನಮಗೆ ಬಾಹ್ಯದ ಸಂಬಂಧವನ್ನು ಹೇಳುತ್ತವೆ. ನೀತಿಯನ್ನು ನಂಬುವವನು ಮತ್ತು ದೈವೀವಾದಿಯು ದೇವರ ದೃಷ್ಟಿಯಲ್ಲಿ ತಾನು ಏನು ಎಂದು ನಿರ್ವಚನಮಾಡಿಕೊಳ್ಳುತ್ತಾನೆ. ಆದರೆ ನನ್ನ ಆಯ್ಕೆಗೆ ನನ್ನದೇ ಆದ ಮಾನದಂಡವೂ ಇದೆ. ಅಷ್ಟೇ ಅಲ್ಲ, ನಮ್ಮ ಪ್ರತಿಭೆ ಎನ್ನುವುದು ಕೂಡಾ ನಮ್ಮ ಅಹಮಿಕೆಯನ್ನು ಹೇಳುತ್ತದೆ ನಾವು ನಮ್ಮ ಶಕ್ತಿಯ ಮೂಲಕವೇ ಸತ್ಯವನ್ನು ಸೌಂದರ್ಯಾತ್ಮಕವಾಗಿ ಹೇಳುತ್ತೇವೆ. ಪ್ರಯೊಬ್ಬನಿಗೂ ಕೆಲಸವು ಇದೆ, ಆ ಕೆಲಸವನ್ನು ಮಾಡಿತೋರಿಸುತ್ತಾನೆ. ವ್ಯಕ್ತಿತ್ವ ಮತ್ತು ಅದರ ಭಾಗವಾಗಿಯೇ ನಾವು ನಮ್ಮ ಕೆಲಸವನ್ನು ರೂಪಿಸುತ್ತೇವೆ. ವ್ಯಕ್ತಿಯಾಗಿ ತನ್ನ ಪೂರ್ಣತೆಯನ್ನು ಹಂಬಲಿಸುತ್ತಾನೆ. ಇದಕ್ಕೆ ಪ್ರತಿಭೆ ಮತ್ತು ಕೌಶಲವನ್ನು ಬಳಸುತ್ತಾನೆ. ಭೌತಿಕತೆಯು ವ್ಯಕ್ತವೂ ಹೌದು. ಅದನ್ನು ಯಾವುದನ್ನು ಅತ್ಯಂತ ಶುದ್ಧವಾದ ಕಾರಣವೆಂದು ಹೇಳುತ್ತೇವೆಯೋ ಅದು ನಮ್ಮ ಅಗತ್ಯಗಳ ಪೂರೈಕೆಗೆ ಮಾತ್ರವೇ ಇರುತ್ತದೆ. ವಾಸ್ತವವಾಗಿ ನಮಗೆ ಅಗತ್ಯವಾಗಿದೆಯೋ ಅದನ್ನು ನಾವು ಪೂರ್ಣ ಮಾಡಲು ಯತ್ನವನ್ನು ಮಾಡುತ್ತೇವೆ. ಅವಕಾಶ ಮತ್ತು ಕಾಲವು ನಮ್ಮನ್ನು ನಿಯಂತ್ರಿಸುತ್ತದೆ. ಆದರೆ ಅದು ನಮಗೆ ದಾರಿಯನ್ನು ತೋರಿಸುತ್ತದೆ. ನಮಗೆ ಇದು ಅಗತ್ಯ. ನಾವು ಜಗತ್ತನ್ನು ಹೇಗೆ ನೋಡುತ್ತೇವೆ ಮತ್ತು ಅದು ಹೇಗೆ ನಮ್ಮ ಸಂವೇದನೆಯನ್ನು ರೂಪಿಸುತ್ತದೆ ಎನ್ನುವುದೂ ಅತ್ಯಂತ ಮುಖ್ಯವಾಗಿದೆ. ವಿಶ್ವಾತ್ಮಕತೆಗೂ ನಮ್ಮ ಸಂವೇದನೆಗೂ ಸಂಬಂಧವು ಇದೆ. ಈ ದೃಷ್ಟಿಯಿಂದ ಕಾರಣವು ನಮಗೆ ಒಂದು ಪ್ರಾಗ್ರೂಪವಾದ ಸಂಕೇತವೂ ಆಗಿರುತ್ತದೆ. ವ್ಯಕ್ತಿ ಮತ್ತು ಅವನ ಕಾರಣಗಳನ್ನು ನಾವು ನೋಡುವಾಗ ನಮಗೆ ಅದರ ಅರ್ಥವೂ ಬೇರೆಯಾಗಿಯೂ ಕಾಣಬಹುದು. ನೀತಿಯು ಕಾರಣವನ್ನು ಹೇಳುವುದು ಬೇರೆ ಕ್ರಮದಲ್ಲಿ ಎನ್ನುವುದು ಅತ್ಯಂತ ಸ್ಪಷ್ಟವಾಗಿದೆ. ಆದರೆ ಜ್ಞಾನ ಮತ್ತು ನೀತಿಯು ಒಂದೇ ರೀತಿಯದು ಅಲ್ಲ. ಅದು ಬೇರೆಯಾಗುತ್ತದೆ. ಫುಕೋನಿಗೆ ಸತ್ಯವು ಒಂದು ಮಾನದಂಡವಾಗಿದೆ. ಅದು ಸಂಕೀರ್ಣ, ಸತ್ಯವೂ ಕೂಡಾ ಉತ್ಪಾದಿಸಲ್ಪಡುತ್ತದೆಯೆಂದು ಫುಕೋ ಹೇಳುತ್ತಾನೆ. ಜ್ಞಾನಕ್ಕೆ ಮತ್ತು ಸತ್ಯಕ್ಕೆ ಸಂಬಂಧವಿದೆ. ಅದೇ ರೀತಿಯಲ್ಲಿ ಅಧಿಕಾರಕ್ಕೆ ಮತ್ತು ಸಂಕಥನಕ್ಕೆ ಸಂಬಂಧವಿದೆ. ಫುಕೋ ಇದನ್ನು ಹೇಳುತ್ತಾನೆ. ಅದರ ಜೊತೆಗೆ ಅವನು ಹೇಳುವ ಉದಾರವಾದಿ ಆರ್ಥಿಕತೆ ಎನ್ನುವುದು ಮಾರುಕಟ್ಟೆಯನ್ನು ಭಿನ್ನವಾಗಿ ನೋಡುತ್ತದೆ. ಅವನ ಸಂಕಥನ ಸಿದ್ಧಾಂತವನ್ನು ರಚನೋತ್ತರವಾದಿಗಳು ತೆಗೆದು ಕೊಂಡರು. ರಾಜಕೀಯ ಅರ್ಥ ಶಾಸ್ತ್ರ ಎನ್ನುವುದು ಅವನಲ್ಲಿ ಬೇರೆಯಾಗುತ್ತದೆ. ಅಧಿಕಾರವು ಹೇಗೆ ಜನರನ್ನು ನಿಯಂತ್ರಣ ಮಾಡುತ್ತದೆಯೋ ಅದೇ ರೀತಿಯಲ್ಲಿ ಆರ್ಥಿಕತೆಯನ್ನು ಕೂಡಾ ನಿಯಂತ್ರಣ ಮಾಡುತ್ತದೆ. ವಸ್ತು ಮತ್ತು ಅದರ ವಿನಿಮಯವು ಹಿಂದೆ ಹೇಗಿತ್ತು ಎಂದು ಅವನು ಹೇಳುತ್ತಾನೆ. ಪ್ರಭುತ್ವ ಮತ್ತು ಶಿಸ್ತು ಎನ್ನುವುದು ಹೇಗೆ ಇರುತ್ತದೆ ಎಂದು ಅವನು ಹೇಳುತ್ತಾನೆ., ಉತ್ಪಾದನೆಗೆ ಮತ್ತು ಮನುಷ್ಯರ ಸ್ವಭಾವಕ್ಕೆ ಒಂದು ಸಂಬಂಧವು ಇದೆ ಎನ್ನುವುದು ಅವನ ಪ್ರಮುಖವಾದ ವಾದವಾಗಿದೆ. ಅದನ್ನು ನಾವು ಹೀಗೆ ಹೇಳಬಹುದು. (ವಿವರಗಳಿಗೆ ನೋಡಿ : ಗ್ರಾಂಶಿ ರೀಡರ್ ಪುಟ ೧೯೬ – ೯೯) ಕ್ರೋಸೆಯಲ್ಲಿ ರಾಜಕಾರಣ ಎನ್ನುವುದು ಒಂದು ಭ್ರಮೆಯೂ ಹೌದು. ಆದರೆ ಗ್ರಾಂಶಿಯು ಆ ರೀತಿಯಲ್ಲಿ ಚಿಂತನೆಯನ್ನು ಮಾಡುವುದಿಲ್ಲ.

.ಪಶ್ಚಿಮದ ಸಂಪ್ರದಾಯದಲ್ಲಿ ಸ್ವಾತಂತ್ರ್ಯ ಮತ್ತು ಅದರ ಚರ್ಚೆಯು ಬಹಳ ಹಿಂದಿನಿಂದಲೂ ಇದೆ. ಅದಕ್ಕೆ ಒಂದು ಪರಂಪರೆಯು ಇದೆ. ಸ್ವತಂತ್ರನಾಗುವುದು ಅಂದರೆ ಎಲ್ಲಾ ರೀತಿಯ ಬಂಧನದಿಂದ ಬಿಡುಗಡೆ ಹೊಂದುವುದೂ ಹೌದು. ಆದ್ದರಿಂದ ಪಶ್ಚಿಮದ ಧರ್ಮ ಮತ್ತು ನೀತಿ ಶಾಸ್ತ್ರವು ಇದರ ಬಗ್ಗೆ ಹೆಚ್ಚು ಚರ್ಚೆಯನ್ನು ಮಾಡಿವೆ. ಪ್ರಾಚೀನವಾದ ಗ್ರೀಕ್ ಪರಂಪರೆಯು ಈ ಪ್ರಶ್ನೆಯನ್ನು ಎತ್ತಿಕೊಂಡಿದೆ. ನೀತಿಶಾಸ್ತ್ರದ ಚರಿತ್ರೆಗೆ ಮತ್ತು ಸ್ವಾತಂತ್ರ್ಯದ ಕಲ್ಪನೆಗೆ ಒಂದು ಸಂಬಂಧವು ಇದೆ. ಮಾನವೀಯತೆ, ಮನುಷ್ಯತ್ವ ಮತ್ತು ಸ್ವಾತಂತ್ರ್ಯ ಎನ್ನುವುದು ಗ್ರೀಕ್ ಪರಂಪರೆಯಲ್ಲಿ ಅತ್ಯಂತ ಮಹತ್ವದ ವಾಗ್ವಾದವೂ ಹೌದು. ಮನುಷ್ಯ ಎನ್ನುವ ಪ್ರಾಣಿಯು ಹೆಚ್ಚು ಸ್ವತಂತ್ರ ಮತ್ತು ಪ್ರಾಣಿಗಳು ಸ್ವತಂತ್ರ ವಲ್ಲ ಎನ್ನುವುದು ಅಲ್ಲಿ ಮುಖ್ಯವಾದ ಚರ್ಚೆಯನ್ನು ಹುಟ್ಟುಹಾಕಿತ್ತು. ಆದರೆ ಯಾವುದು ನಿಜವಾದ ಒಂದು ಸ್ವಾತಂತ್ರ್ಯ ಎನ್ನುವುದು ಇಲ್ಲಿ ಮುಖ್ಯ. ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇರುವ ನಿಜವಾದ ರೇಖೆಯು ಯಾವುದು ಎಂದು ಹೇಳುವುದು ಕಷ್ಟ. ನಮ್ಮ ಭಾವನೆಗಳು ಮತ್ತು ಸ್ವಾತಂತ್ರ್ಯಕ್ಕೆ ಯಾವ ಸಂಬಂಧವಿದೆ? ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇಷ್ಟೊಂದು ವ್ಯತ್ಯಾಸವು ಬರಲು ಕಾರಣವೇನು? ನಾವು ಸ್ವತಂತ್ರರಾಗಿದ್ದರೆ ನಮ್ಮನ್ನು ಯಾವುದು ನಿಯಂತ್ರಣ ಮಾಡುತ್ತದೆ? ಸ್ವಾತಂತ್ರ್ಯ ಮತ್ತು ದೇವರಿಗೆ ಯಾವ ಸಂಬಂಧವು ಇದೆ ಮುಂತಾದ ಪ್ರಶ್ನೆಗಳು ಆಗ ಇದ್ದು ಸತ್ಯ. ಈ ಪ್ರಶ್ನೆಗಳಿಗೆ ಒಂದು ಚಾರಿತ್ರಿಕವಾದ ಮಹತ್ವವು ಇದೆ. ಬೇರೆ ಬೇರೆ ಚಾರಿತ್ರಿಕ ಸನ್ನಿವೇಶದಲ್ಲಿ ಈ ಪ್ರಶ್ನೆಗಳು ಮತ್ತೆ ಮತ್ತೆ ಪುನರಾವರ್ತನೆಯಾಗಿರುವುದೂ ಈ ಪ್ರಶ್ನೆಗಳ ಮಹತ್ವವನ್ನು ಹೇಳುತ್ತವೆ. ಈ ಪ್ರಶ್ನೆಗಳ ಮತ್ತೊಂದು ರೂಪವನ್ನು ನಾವು ನೋಡಬೆಕು. ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಎನ್ನುವುದು ಇದ್ದರೆ ಕಪ್ಪು ಮನುಷ್ಯ ಮತ್ತು ಬಿಳಿಯ ಮನುಷ್ಯ ಎನ್ನುವ ಪ್ರಶ್ನೆಯು ಯಾಕೆ ಬಂತು ಎಂದು ಕೇಳಬೇಕಾಗುತ್ತದೆ. ಈ ತಾರತಮ್ಯವನ್ನು ದೇವರು ಸೃಷ್ಟಿಮಾಡಿಲ್ಲ. ಇದರ ಜೊತೆಗೆ ಯಾವ ನೀತಿ ಶಾಸ್ತ್ರವು ಕೆಲಸವನ್ನು ಮಾಡಿದೆ ಎಂದರೆ ಉತ್ತರವು ಅಷ್ಟು ಸುಲಭವಲ್ಲ. ಫುಕೋ ಈ ದೃಷ್ಟಿಯಿಂದಲೇ ಕೆಲವು ಪರಿಕಲ್ಪನೆಗಳನ್ನು ಚಾಲ್ತಿಗೆ ತಂದಿದ್ದಾನೆ. ಅವನು ಯಜಮಾನಿಕೆ, ಅಪರಾಧ, ಸ್ವಾತಂತ್ರ್ಯ, ಹಕ್ಕುಗಳ ಕುರಿತು ತನ್ನದೇ ಆದ ವಾದವನ್ನು ಮಂಡಿಸಿದ್ದಾನೆ. ಅವನ ಪ್ರಕಾರ ಸ್ವಾತಂತ್ರ್ಯ ಎನ್ನುವುದನ್ನು ಯಾರೂ ನಮಗೆ ಕೊಡುವುದಿಲ್ಲ. ಅದು ದಾನವೂ ಅಲ್ಲ. ಸ್ವಾತಂತ್ರ್ಯ ಎನ್ನುವುದು ನಮ್ಮ ಆಗುವ ಪ್ರಕ್ರಿಯೆಯಲ್ಲಿ ಒಂದು ಭಾಗ. ನಾವು ಜಗತ್ತಿನ ಜೊತೆಗೆ ಯಾವ ಸಂಬಂಧವನ್ನು ಇಟ್ಟುಕೊಳ್ಳುತ್ತೇವೆ ಅದರಂತೆ ಸ್ವಾತಂತ್ರ್ಯವು ಇರುತ್ತದೆ. ಅದು ಸ್ವಂತಿಕೆ ಮತ್ತು ಅದರ ಚಟುವಟಿಕೆಯನ್ನು ಹೇಳುತ್ತದೆ. ಅದು ಹಿಂದಿನಿಂದ ಬಂದ ಒಂದು ಕ್ರಿಯೆ. ನಿಜವಾದ ಸ್ವಾತಂತ್ರ್ಯವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದರ ವಂಶಾವಳಿ ಚಿಹ್ನೆಗಳನ್ನು ಅರ್ಥ ಮಾಡಿಕೊಳ್ಳುವುದು. ನಮ್ಮ ವರ್ತಮಾನವನ್ನು ಈ ದೃಷ್ಟಿಯಲ್ಲಿ ನೋಡಬೇಕಾಗುತ್ತದೆ. ಅವನಲ್ಲಿ ಅದು ವಂಶಾವಳಿಯ ಪ್ರಶ್ನೆಯೂ ಹೌದು ಸ್ವಾತಂತ್ರ್ಯ ಮತ್ತು ಅದರ ಹಿಂದೆ ಇರುವ ಚರಿತ್ರೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕೆಂದು ಅವನು ಹೇಳುತ್ತಾನೆ. ವಾಸ್ತವವಾಗಿ ಸ್ವಾತಂತ್ರ್ಯ ಎನ್ನುವುದು ಪಶ್ಚಿಮದ ತತ್ವಜ್ಞಾನವನ್ನು ಗ್ರಹಿಸಲು ಬೇಕಾದ ಕೀಲಿ ಕೈ ಕೂಡಾ ಹೌದು.

ಫುಕೋ ನ್ಯಾಯ ಪಲ್ಲಟಗಳನ್ನು ಬೇರೆ ಅರ್ಥದಲ್ಲಿ ನೋಡುತ್ತಾನೆ. ಅವನು ನ್ಯಾಯ ಮತ್ತು ಮನುಷ್ಯತ್ವ ಎನ್ನುವುದು ಹೇಗೆ ಚಾಲ್ತಿಗೆ ಬಂತು ಎಂದು ಚರ್ಚೆ ಮಾಡುತ್ತಾನೆ. ಆಧುನಿಕ

ಯುಗವು ಹೇಗೆ ಹಿಂಸೆ ಮತ್ತು ಅಧಿಕಾರ ಮತ್ತು ಅದರ ಅರ್ಥವು ಹೇಗೆ ಬೇರೆಯಾಯಿತು ಎಂದು ಹೇಳುವುದು ಮಾತ್ರವೇ ಅಲ್ಲ, ಅವನು ಆಧುನಿಕ ಯುಗದ ಶಿಕ್ಷೆಯ ರೂಪಗಳು ಹೇಗೆ ಬೇರೆಯಾದವು ಎಂದೂ ಹೇಳುತ್ತಾನೆ. ಆದರೆ ಚರಿತ್ರೆಯ ಮಹಾನ್ ನಿರೂಪಣೆಯನ್ನು ಅವನು ನಿರಾಕರಿಸುತ್ತಾನೆ. ಅವನ ಚರ್ಚೆಯಲ್ಲಿ ಶಾಶ್ವತವಲ್ಲದ ನಂಬಿಕೆಗಳು ಹೇಗೆ ಚಾಲ್ತಿಗೆ ಬಂದವು ಎನ್ನುವುದೂ ಇದೆ. ಯಾವುದನ್ನು ನಾವು ನ್ಯಾಯ ಎಂದು ಹೇಳುತ್ತೇವೆಯೋ ಅದರ ರೂಪಗಳು ಹೇಗೆ ಬದಲಾದವು ಎನ್ನುವುದೂ ಅವನಿಗೆ ಮುಖ್ಯವಾಗುತ್ತದೆ. ಅಧಿಕಾರ ಮತ್ತು ಯಂತ್ರಗಳು ಹೇಗೆ ಒಂದು ಮೈತ್ರಿಯನ್ನು ಸಾಧಿಸುತ್ತವೆ ಎಂದು ಅವನು ತನ್ನ 'ಬರ್ತ್ ಆಫ್ ಪ್ರಿಸನ್' ಕೃತಿಯಲ್ಲಿ ಹೇಳುತ್ತಾನೆ. ಕುತೂಹಲಕಾರಿಯಾದ ಒಂದು ಸಂಗತಿಯನ್ನು ಅವನು ಹೇಳುತ್ತಾನೆ: ಹೇಗೆ ನ್ಯಾಯ ಮತ್ತು ಅಧಿಕಾರವು ಹಿಂಸೆಯನ್ನು ಮತ್ತು ಅನೈತಿಕತೆಯನ್ನು ನ್ಯಾಯವಾಗಿ ಪರಿವರ್ತನೆ ಮಾಡುತ್ತದೆ ಎನ್ನುವುದು ಅವನ ಗ್ರಹಿಕೆಯ ಅತ್ಯಂತ ಮಹತ್ವದ ಸಾರವೂ ಆಗಿದೆ. ಶಿಸ್ತು ಮತ್ತು ಅಧಿಕಾರವು ಹೇಗೆ ಆಧುನಿಕ ಸಮಾಜದಲ್ಲಿ ಒಂದು ಮಾನದಂಡವೂ ಆಯಿತು ಎಂದು ಫುಕೋ ವಿವರಿಸುತ್ತಾನೆ. ಅವನೇ ಹೇಳಿದ ಮತ್ತೊಂದು ಪರಿಕಲ್ಪನೆಯೆಂದರೆ ದಂಡನಾತ್ಮಕವಾದ ಕಾರಣಗಳು (ಪುನಿಟೇಟಿವ್ ರೀಸನ್) ಅಧಿಕಾರವು ಒಂದು ಹಂತದಲ್ಲಿ ಹೆಚ್ಚು ಆದರ್ಶೀಕರಣಕ್ಕೆ ಗುರಿಯಾಗುತ್ತದೆ. ಅಂದರೆ ಅಧಿಕಾರವನ್ನು ಜನರು ಒಂದು ಆದರ್ಶವೆಂದು ಭಾವಿಸುತ್ತಾರೆ. (ಫುಕೋ – ಡಿಸಿಪ್ಲಿನ್ ಅಂಡ್ ಪನಿಶ್) ಅದರ ಜೊತೆಗೆ ಜ್ಞಾನ ಮತ್ತು ಶಿಸ್ತು ಎನ್ನುವುದು ಒಟ್ಟಿಗೆ ಹೋಗುತ್ತವೆ. ಅಧಿಕಾರದಲ್ಲಿ ವಸ್ತು ಮತ್ತು ಪರಿಣಾಮ ಎನ್ನುವುದು ಮಾನದಂಡ. ಆದರೆ ಒಂದು ಹಂತದಲ್ಲಿ ಫುಕೋ ಸ್ವಯಂ ವಿಮರ್ಶೆ, ಅದರ ಕಾರಣಗಳನ್ನು ಒಪ್ಪುತ್ತಾನೆ. ಈ ವಿಷಯದಲ್ಲಿ ಅವನು ಕಾಂಟ್ ವಾದಕ್ಕೆ ಕೃತಜ್ಞನೂ ಆಗಿದ್ದಾನೆ. (ಬ್ಯಾಕ್ ಟು ಕಾಂಟ್)

ಫುಕೋ ಅದನ್ನು ಅತ್ಯಂತ ಸಂಕೀರ್ಣವಾದ ಒಂದು ಮನೋಸ್ಥಿತಿಯೆಂದು ಹೇಳುವಾಗ ಅದರಲ್ಲಿ ಸಮಾಜ, ಸಂಸ್ಕೃತಿ, ಆರ್ಥಿಕತೆ, ರಾಜಕಾರಣ ಇರುತ್ತದೆ ಎಂದು ಹೇಳುತ್ತಾನೆ. ಆದರೆ ಇದರಲ್ಲಿ ಸಾಮಾಜಿಕ ವಿಘಟನೆಯೂ ಇರುತ್ತದೆ. ಆದರೆ ಅದರ ವರ್ಗೀಕರಣವು ಬೇರೆ ಥರ ಇರುತ್ತದೆ. ಅದನ್ನು ಒಂದು ನೆಲೆಯಲ್ಲಿ ಮಾತ್ರವೇ ಗ್ರಹಿಸಲು ಬರುವುದಿಲ್ಲ. ಎಲ್ಲಿ ನಿರಂಕುಶ ಪ್ರಭುತ್ವವು ಇರುತ್ತದೆಯೋ ಅಲ್ಲಿ ವರ್ಗ ಸಮರಗಳು ಇರುವುದೂ ಇಲ್ಲ. ಫುಕೋ ಸಾಮಾಜಿಕ ಪ್ರತಿಭಟನೆಯು ಇರುವುದಿಲ್ಲ ಎಂದು ಭಾವಿಸುತ್ತಾನೆ. ಅವನು ಸ್ವಂತಿಕೆ ಮತ್ತು ಅದರ ರಕ್ಷಣೆಯು ಹೇಗೆ ಇರುತ್ತದೆ ಎಂದೂ ವಿವರಿಸುತ್ತಾನೆ. (ಫುಕೋ – ಡಿಸಿಪ್ಲಿನ್ ಅಂಡ್ ಪನಿಶ್) ನಮ್ಮನ್ನು ನಾವು ಪರೀಕ್ಷೆ ಮಾಡದೆ ಜೀವಿಸುವುದು ಎನ್ನುವುದಕ್ಕೆ ಯಾವುದೇ ಅರ್ಥವಿಲ್ಲ. ಇದನ್ನು ಸಾಕ್ರೆಟಿಸ್ ಹೇಳುತ್ತಾನೆ. ಆದರೆ ಇದನ್ನು ಫುಕೋ ಮತ್ತೆ ಪರಿಶೀಲನೆ ಮಾಡುತ್ತಾನೆ.

ರಾಜಕೀಯ ತತ್ವಶಾಸ್ತ್ರವನ್ನು ಫುಕೋ ವಿಶಿಷ್ಟವಾದ ಅರ್ಥದಲ್ಲಿ ಬಳಸುತ್ತಾನೆ. ಇದನ್ನು ಇನ್ನೊಂದು ಅರ್ಥದಲ್ಲಿ ಬಳಸಿದ್ದಾನೆ ತತ್ವಶಾಸ್ತ್ರ ಮತ್ತು ಅದರ ಬಳಕೆಯನ್ನು ಹೇಳುವಾಗ ಅವನು ರಾಜಕೀಯ ಆಧ್ಯಾತ್ಮವನ್ನು ಹೇಳುತ್ತಾನೆ. ಇದು ನಮಗೆ ಒಂದು ಪರ್ಯಾಯವಾದ ದೃಷ್ಟಿಕೋನವನ್ನು ಕೊಡುತ್ತದೆ. ಫುಕೋ ಇದನ್ನು ಹೇಳುವಾಗ ಯಾವುದು ಸಹಜ ಮತ್ತು

ಯಾವುದನ್ನು ನಾವು ಅಸಹಜ ಎಂದು ಕರೆಯುತ್ತೇವೆ ಎಂದು ನೋಡುತ್ತೇವೆ ಎಂದೂ ಹೇಳುತ್ತಾನೆ. ರಾಜಕೀಯ ತತ್ವಶಾಸ್ತ್ರವು ನಮ್ಮನ್ನು ಮತ್ತೆ ಮತ್ತೆ ರೂಪಿಸುತ್ತದೆ, ಹೇಗೆ ರೂಪಿಸಲು ಅದು ತನಗೆ ಬೇಕಾದ ಪರಿಕರವನ್ನು ಬಳಸುತ್ತದೆ. ಸರಕಾರಗಳು ತಮಗೆ ಬೇಕಾದ್ದನ್ನು ಸತ್ಯ ಎಂದೂ ಉಳಿದುದನ್ನು ಮಿಥ್ಯೆ ಎಂದು ಸಾಬೀತು ಮಾಡಲು ಪ್ರಯತ್ನ ಮಾಡುತ್ತದೆ, ಯಾವುದು ನಮ್ಮನ್ನು ಆಳುತ್ತದೆಯೋ ಅದು ಸತ್ಯ ಮತ್ತು ಸುಳ್ಳು ಎಂದು ಹೇಳುವಾಗ ಅದರದೇ ಆದ ಒಂದು ಮಾನದಂಡವನ್ನು ಇಟ್ಟುಕೊಂಡು ಜನರನ್ನು ರೂಪಿಸುತ್ತದೆ. ಪುನರುಜ್ಜೀವನದ ಅನಂತರ ಕ್ರಿಶ್ಚಿಯಾನಿಟಿಯು ಕೂಡಾ ತನ್ನದೇ ಆದ ರೀತಿಯಲ್ಲಿ ರಾಜಕೀಯ ತತ್ವಜ್ಞಾನವನ್ನು ರೂಪಿಸಲು ಯತ್ನ ಮಾಡಿತ್ತು. ಆಧ್ಯಾತ್ಮಕತೆ ಎನ್ನುವುದು ರಾಜಕೀಯ ಸನ್ನಿವೇಶದಲ್ಲಿ ಸಂಕೇತಗಳನ್ನು ರೂಪಿಸುತ್ತವೆ. ಹಾಗೆಯೇ ಜನರು ಅದಕ್ಕೆ ವಿನಯರಾಗಿ ಇರುವಂತೆ ನೋಡಿಕೊಳ್ಳುತ್ತದೆ. ಆದರೆ ಇಲ್ಲಿ ಫುಕೋ ಇನ್ನೊಂದು ಮಾತನ್ನು ಹೇಳುತ್ತಾನೆ. ಇದು ಧಾರ್ಮಿಕವಾದ ನವೀಕರಣವೂ ಹೌದು.

ಶಿಸ್ತು ಮತ್ತು ಅದರ ಪರಿಣಾಮವು ಆರ್ಥಿಕತೆಯ ಮೇಲೆಯೂ ಆಗುತ್ತದೆ ಎನ್ನುವುದು ಫುಕೋನ ವಾದ. ಅದು ಒಂದು ವಿವರಣೆಯು ಮಾತ್ರವೇ ಅಲ್ಲ. ಅದರಲ್ಲಿ ತಾತ್ವಿಕವಾದ ಚರ್ಚೆಯೂ ಇದೆ. ಆಂಗ್ಲೋ ಫುಕೋಡಿಯನ್ ವಿವರಣೆಯು ಬೇರೆ ಇದೆ., ಪ್ರಭುತ್ವವು ಒಂದು ಅರ್ಥದಲ್ಲಿ ಸ್ವತಂತ್ರವಾಗಿರುತ್ತದೆ ಎಂದು ಫುಕೋ ಹೇಳುತ್ತಾನೆ. ಸಮಾಜದ ವಿವಿಧ ಸಂಘಟನೆಗಳ ಮೇಲೆ ಪ್ರಭುತ್ವವು ಪ್ರಭಾವವನ್ನು ಬೀರುತ್ತದೆ ಎಂದು ಅವನು ಹೇಳುತ್ತಾನೆ. ಅಧಿಕಾರ ಮತ್ತು ಆಳುಗಳ ಪ್ರಶ್ನೆಯೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ., ಆಳುಗಳನ್ನು ಅವನು ಅವಲಂಬಿತರು ಎಂದು ಹೇಳುತ್ತಾನೆ.

ಗುಲಾಮರು ಎನ್ನುವ ಕಲ್ಪನೆಯು ಪ್ರಾರಂಭವಾಗಿರುವುದು ಈವತ್ತು ನಿನ್ನೆಯ ಸಂದರ್ಭದಲ್ಲಿ ಅಲ್ಲ. ಅದಕ್ಕೆ ಒಂದು ದೊಡ್ಡದಾದ ಇತಿಹಾಸವು ಇದೆ. ಅದರಲ್ಲಿಯೂ ಅತ್ಯಂತ ವೈಭವೀಕರಿಸಿದ ಗುಲಾಮರನ್ನು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ಬಂದ ರೊಮಾಂಟಿಕ್ ಪಂಥವು ಇದನ್ನು ಹೆಚ್ಚು ಚಾಲ್ತಿಗೆ ತಂದಿತು. ಆದರೆ ಅದಕ್ಕಿಂತ ಮೊದಲೇ ಶ್ರೇಷ್ಠ ಗುಲಾಮ ಎನ್ನುವ ಪರಿಕಲ್ಪನೆಯು ಇತ್ತು. ಅದನ್ನು ಮತ್ತೆ ಚರ್ಚೆಯನ್ನು ಮಾಡಿರುವುದು ರೂಸ್ಸೋ (೧೭೬೨) ಅವನು ತಪ್ಪೊಪ್ಪಿಗೆ ಎನ್ನುವುದನ್ನು ನಿರಾಕರಿಸಿದ್ದ. ಪ್ರಾಚೀನ ಗ್ರೀಸ್ ದೇಶದಲ್ಲಿ ಇದನ್ನು ಹೇಳುತ್ತಿದ್ದರು. ಪರಂಪರಾಗತವಾಗಿ ಬಂದ ಒಂದು ವರ್ಗವು ಇದೆ. ಅದರ ಜೊತೆಗೆ ಇದು ನಮಗೆ ನೈತಿಕವಾದ ನಿಲುವನ್ನು ಹೇಳುತ್ತದೆ. ಮೂರನೆಯದಾಗಿ ಘನತೆಯನ್ನು ಸೂಚಿಸುತ್ತದೆ. ಇಲ್ಲಿ ಇನ್ನೊಂದು ಸೂಕ್ಷ್ಮತೆಯು ಇದೆ. ಅದನ್ನು ಒಳ್ಳೆಯತನ ಇರುವ ಆಳು ಎಂದೂ ಹೇಳುತ್ತಾರೆ. ಅವರು ಒಳ್ಳೆಯವರು ಆಗಿರುತ್ತಾರೆ. ಆದರೆ ಈ ಪದವು ಅತ್ಯಂತ ಹಳೆಯದು. ಅದನ್ನು ಬೇರೆ ಬೇರೆಯವರು ಬೇರೆ ಬೇರೆ ಥರ ಬಳಸಿದ್ದಾರೆ. ಡ್ರೈಡನ್ ಒಂದು ಮಾತನ್ನು ಹೇಳುತ್ತಾನೆ: ನಾನು ತುಂಬಾ ಒಳ್ಳೆಯನಾಗಿದ್ದೆ. ನಾನು ಎಷ್ಟು ಒಳ್ಳೆಯವನಾಗಿದ್ದೆ ಎಂದರೆ ಒಂದು ನಿಸರ್ಗದಷ್ಟು.. ಉತ್ತಮನಾದ ಗುಲಾಮ ಎನ್ನುವುದರ ಇನ್ನೊಂದು ಅರ್ಥವು ರೊಮಾಂಟಿಕ್ ಪಂಥದಲ್ಲಿ ಸಿಗುತ್ತದೆ. ಅದು ಗುಲಾಮ ಮತ್ತು ಅವನ ಮನೋಸ್ಥಿತಿಗೆ

ಸಂಬಂಧಪಟ್ಟದ್ದು. ಆಳು ಕೂಡಾ ಆಳುವವನಿಗಿಂತ ಹೆಚ್ಚು ಬುದ್ಧಿವಂತನಾಗಿರುತ್ತಾನೆ. ಗಿಲ್ಗೆಮಿಷ್ ಕೃತಿಯಲ್ಲಿ ಎಂಕಿಡು ಒಳ್ಳೆಯವನು. ಅವನು ಪ್ರಾಣಿಗಳ ಜೊತೆಗೆ ಜೀವಿಸುತ್ತಾನೆ. ಅವನಿಗೆ ಯಾವುದೇ ತರಬೇತಿಯು ಇಲ್ಲ. ಇದನ್ನು ಹೇಳಲು ಕಾರಣವಿದೆ. ಯಾವ ಮನುಷ್ಯನಿಗೆ ಸರಿಯಾದ ತರಬೇತಿಯು ಇಲ್ಲವೋ ಅವನು ಕೂಡಾ ಒಳ್ಳೆಯ ಗುಲಾಮನಾಗುತ್ತಾನೆ. ಇದು ಚರಿತ್ರೆಯ ಕಥನವನ್ನು ಹೇಳುತ್ತದೆ. ಅದರ ಜೊತೆಗೆ ಇದು ರಮ್ಯದ ಸಂಪ್ರದಾಯದಲ್ಲಿಯೂ ಬಂದಿದೆ. ರಮ್ಯ ಸಂಪ್ರದಾಯವು ಬಂದುದು ಇದನ್ನು ನಿರೂಪಿಸಲು ಹೊಸದಾದ ಅವಕಾಶವನ್ನು ಹೇಳಿತು. ಇದು ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ್ದು ಇದು ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಹದಿನೆಂಟನೆಯ ಶತಮಾನದಲ್ಲಿ ಇದು ಬೇರೆ ಬೇರೆ ಪರಿಣಾಮವನ್ನು ಉಂಟು ಮಾಡಿದ್ದು ಸತ್ಯ.

ನಾವು ಹೇಳುವ ಪವಿತ್ರ ಮತ್ತು ಶ್ರೇಷ್ಟ ಗುಲಾಮ ಎನ್ನುವುದು ನಮಗೆ ವಿವಿಧ ಆಯಾಮಗಳಲ್ಲಿ ಅತ್ಯಂತ ಮುಖ್ಯವಾದ ಒಂದು ಚರಿತ್ರೆಯನ್ನು ಹೇಳುತ್ತದೆ. ಯಾವುದನ್ನು ನಾವು ನೈತಿಕವಾದ ಒಂದು ಗುಲಾಮಗಿರಿ ಎಂದು ಹೇಳುತ್ತೇವೆಯೋ ಅದರ ರೂಪವನ್ನು ಮೊದಲು ಪ್ರಸ್ತಾವಿಸಿದ್ದು ಜಾನ್ ಡ್ರೈಡನ್. ಅವನಿಗೆ ಈ ಆದರ್ಶ ಗುಲಾಮ ಎನ್ನುವುದು ನಿಸರ್ಗದ ಹತ್ತಿರದ ಒಬ್ಬ ವ್ಯಕ್ತಿಯೂ ಆಗಿದ್ದಾನೆ. ಇದರಲ್ಲಿ ಇರುವ ಭಾವನಾತ್ಮಕವಾದ ಸಂಗತಿಯನ್ನು ಅವನು ಒಪ್ಪುತ್ತಾನೆ. ಇದರಲ್ಲಿ ಧರ್ಮ ಮತ್ತು ಅದರ ಚೌಕಟ್ಟುಗಳೂ ಕೆಲಸವನ್ನು ಮಾಡುತ್ತದೆ. ಒಂದು ನಿರ್ದಿಷ್ಟವಾದ ಧರ್ಮ ಮತ್ತು ಅದನ್ನು ಅನುಸರಿಸುವುದು ಒಂದು ವರ್ಗವಾದರೆ ಅದನ್ನು ಅನುಸರಿಸದೇ ಇರುವವರದ್ದು ಮತ್ತೊಂದು ವರ್ಗ. ಇದರ ಜೊತೆಗೆ ಇನ್ನೊಂದು ಪ್ರಶ್ನೆಯೂ ಇದೆ. ಅದನ್ನು ಹೀಗೆ ಹೇಳುಬಹುದು. ಒಂದು ಶ್ರೇಷ್ಟವಾದ ಜನಾಂಗವನ್ನು ಯಾರು ಅನುಸರಿಸುವುದಿಲ್ಲವೋ ಅವರನ್ನು ಗುಲಾಮ ಮತ್ತು ಅನಾಗರಿಕರು ಎಂದು ಕರೆಯುತ್ತಿದ್ದರು. ವಸಾಹತು ದೇಶಗಳಲ್ಲಿ ಹೇಗೆ ಯಂತ್ರಗಳು ಒಂದು ವರ್ಗವನ್ನು ಬೇರೆ ಮಾಡಿತು ಎನ್ನುವುದನ್ನು ಅತ್ಯಂತ ವಿವರವಾಗಿ ಮಿಕಾಯಿಲ್ ಅದಾಸ್ ವಿವರಿಸುತ್ತಾನೆ (ಮೆಶಿನ್ ಅಸ ೧೯೮೯ದ ಮೆಶರ್ ಆಫ್ ಮೆನ್ ಕಾರ್ನೆಲ್ ಯುನಿರ್ವಸಿಟಿ ಪ್ರೆಸ್) ಮೂರು ಪ್ರಶ್ನೆಗಳು ಇವೆ. ಅದರಲ್ಲಿ ಒಂದು ಕೈಗಾರಿಕೆಗಳು ಮತ್ತು ಅದರ ಉಪಯೋಗಗಳು. ಇನ್ನೊಂದು ಅತ್ಯಂತ ಅನಾಗರಿಕವಾದ ಒಂದು ಸಂಸ್ಕೃತಿ. ಇನ್ನೊಂದು ದೆವ್ವಗಳು ಮತ್ತು ಭೂತಗಳ ನಂಬಿಕೆಗಳು. ಆದರೆ ಕೈಗಾರಿಕಗಳು ಕೂಡಾ ಭಾರತವನ್ನು ನಿಯಂತ್ರಣವನ್ನು ಮಾಡಲು ಸಹಾಯವನ್ನು ಮಾಡಿತ್ತು ಎಂದು ಮಾರ್ಕ್ಸವಾದವು ಗುರುತಿಸುತ್ತದೆ. ಅದರ ಜೊತೆಗೆ ಭಾರತದಲ್ಲಿ ಅದು ಗುಡಿ ಕೈಗಾರಿಕೆಗಳನ್ನು ನಾಶ ಮಾಡಿದೆ. (ಅದೇ ೨೩೮) ಅದರ ಜೊತೆಗೆ ಹೊಸದಾದ ಒಂದು ಉತ್ಪಾದನೆಯ ಕ್ರಮವಾಗಿತ್ತು. ಇದರಿಂದ ರಾಜಕೀಯ ಅರ್ಥಶಾಸ್ತ್ರವು ಬದಲಾಯಿತು. ಭಾರತದಲ್ಲಿ ರೈಲ್ವೆ ಎನ್ನುವುದು ಒಂದು ಹೊಸದಾದ ಸಾಧ್ಯತೆಯು ಆಗಿತ್ತು ಎನ್ನುವುದು ಮಾರ್ಕ್ಸವಾದಿಗಳು ಗುರುತಿಸುತ್ತಾರೆ. ಅದರ ಸಮಾಜದಲ್ಲಿ ಹೊಸದಾದ ಬದಲಾವಣೆಯನ್ನು ತಂದಿದೆ ಎನ್ನುವುದರಲ್ಲಿ ಅವರಿಗೆ ಅನುಮಾನವು ಇಲ್ಲ. ಯಾವಾಗ ಕೆಲಸವನ್ನು ಮಾಡುವ ಕ್ರಮಗಳು ಮತ್ತು ಅದರ ಸ್ವರೂಪಗಳು ಬೇರೆಯಾಗುತ್ತವೆಯೋ ಆಗ ಅದರ ಸ್ವರೂಪಕ್ಕೆ ಅನುಸಾರವಾಗಿ ನಮ್ಮ ಜೀವನ ಮತ್ತು

ಅದರ ಕ್ರಮಗಳು ಬೇರೆಯಾಗುತ್ತವೆ. ಬ್ರಿಟೀಶರು ನವೀನ ಉತ್ಪಾದನೆಯನ್ನು ತಂದರು. ಹೊಸದಾದ ಕಾಲಮಾನದ ರೀತಿಯನ್ನು ಅಳವಡಿಸಿದರು. ಗಡಿಯಾರಕ್ಕೂ ಜೀವನದಲ್ಲಿ ಅತ್ಯಂತ ಮಹತ್ವವವು ಬಂದಿತು. ಕಾಲವನ್ನು ನೋಡುವ ವಿಧಾನವು ಬೇರೆಯಾದರೆ ಅದಕ್ಕೆ ತಕ್ಕಂತೆ ಜೀವನದ ರೂಪವು ಬದಲಾಗುತ್ತದೆ. ಅದರಕ್ಕಿಂತ ಪೂರ್ವದಲ್ಲಿ ಇದ್ದ ಕ್ರಮವನ್ನು ನಾವು ಮಳೆಗಾಲ, ಚಳಿಗಾಲ ಮತ್ತು ಬೇಸಗೆ ಎಂದು ಹೇಳುತ್ತಿದ್ದವೆ. ಅದು ಸ್ವಲ್ಪ ಅಸ್ಪಷ್ಟವೂ ಹೌದು. ಒಮ್ಮೆ ಡೇವಿಡ್ ಲಿವಿಂಗ್ ಸ್ಟನ್ ಹೇಳಿದ್ದ: ನಮಗೆ ಈವತ್ತು ಗಡಿಯಾರ ಬಂದಿದೆ. ಆದ್ದರಿಂದ ನಾವು ಈವತ್ತು ಹೆಚ್ಚು ಆಧುನಿಕರಾಗಿದ್ದೇವೆ. ಈ ಮಾತು ಎಲ್ಲಾ ವಸಾಹತು ದೇಶಗಳಿಗೂ ಅನ್ವಯವಾಗುತ್ತವೆ. ಜನರು ರೈಲಿಗೆ ಕಾಯಬೇಕು ಮತ್ತು ರೈಲು ಜನರಿಗೆ ಕಾಯುವುದಿಲ್ಲ ಎನ್ನುವುದೂ ಕಾಲವನ್ನು ಹೇಳುತ್ತದೆ. ಹಾಗೆ ನೋಡಿದರೆ ನಮಗೆ ಗಡಿಯಾರ ಕೇಂದ್ರಿತವಾದ ಕಾಲವು ಒಂದು ನಿಯಂತ್ರಣವಾಗಿಯೂ ಕೆಲಸವನ್ನು ಮಾಡುತ್ತದೆ. ಕೈಗಾರಿಕೆಯ ಕೆಲಸಕ್ಕೆ ಹೋಗುವವರು ಸರಿಯಾದ ಸಮಯಕ್ಕೆ ಹೋಗುವುದು ಒಂದು ನಿದರ್ಶನ ಮಾತ್ರ. ಭಾರತ ಮತ್ತು ಚೀನಾದಲ್ಲಿ ಅದಕ್ಕಿಂತ ಮೊದಲು ಒಂದು ವ್ಯವಸ್ಥೆಯು ಇತ್ತು. ಅದನ್ನು ಚಂದ್ರ ಮತ್ತು ಸೂರ್ಯನ ಚಲನೆಯ ಮೂಲಕವೂ ಕಾಣುತ್ತಿದ್ದರು. ಇದು ಬೇರೆಯಾಯಿತು. ಸಮಯಕ್ಕೆ ಸರಿಯಾಗಿ ಹೋಗುವುದು ಮತ್ತು ಸಮಯಕ್ಕೆ ಸರಿಯಾಗಿ ಹಿಂದೆ ಬರುವುದು ಎನ್ನುವುದಕ್ಕೆ ಶಿಸ್ತುಬದ್ಧವಾದ ಒಂದು ಕಾಲದ ಗಣನೆ ಎಂದು ಹೇಳಿದರು. ಇದನ್ನು ಹೇಳಿದವರು ಬ್ರಿಟೀಶರು ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕು. ಯರೋಪಿಯನ್ ಕಾಲದ ಕಲ್ಪನೆಯು ಭಾರತದಲ್ಲಿ ಬಂದಿರುವುದಕ್ಕೆ ಒಂದು ಉದಾಹರಣೆಯು ಇದು. ಇದು ಒಂದು ದೃಷ್ಟಿಯಲ್ಲಿ ನಮಗೆ ಹೊಸದಾದ ಒಂದು ಅರಿವನ್ನು ಹೇಳಿದೆ ಎನ್ನುವುದೂ ನಿಜ. ಕಾಲವನ್ನು ಖಚಿತಮಾಡುವುದು ಅಂದರೆ ನಾವು ನಮ್ಮ ಜೀವನ ಕ್ರಮವನ್ನು ಅದಕ್ಕೆ ಹೊಂದಿಸುವುದು ಸತ್ಯ. ಕಾಲ ಮತ್ತು ಜೀವನದ ಕ್ರಮಕ್ಕೆ ಒಂದು ಹೊಂದಾಣಿಕೆಯು ಬಂದರೆ ಆಗ ಅದರ ಆಯಾಮವೂ ಬೇರೆಯಾಗುತ್ತದೆ. ಯಾವಾಗ ತಂತ್ರಜ್ಞಾನವು ಮುಂದೆ ಬಂದಿತೋ ಆಗ ಅದು ಜನರನ್ನು ನಿಯಂತ್ರಣ ಮಾಡಿತೋ ಆಗ ಅದರ ಯಜಮಾನಿಕೆಯು ಬಹಳ ಮುಖ್ಯವಾದ ಜೀವನವನ್ನು ಹೇಳಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಯುರೋಪಿನ ಚರಿತ್ರೆ ಮತ್ತು ಅದರ ಜ್ಞಾನವು ಬೇರೆಯಾಯಿತು. ಅವರು ಚಾರಿತ್ರಿಕತೆಯನ್ನು ಕುರಿತು ಹೇಳತೊಡಗಿದರು. ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಮತ್ತು ಅದರ ಜ್ಞಾನವನ್ನು ಗ್ರಹಿಸುವ ವಿಧಾನಗಳು ಭಿನ್ನವಾದವು. ಪರಿಶೀಲನೆ ಮಾಡುವ ಕ್ರಮದಲ್ಲಿ ವ್ಯತ್ಯಾಸವಾಯಿತು. ಈ ಹಿಂದೆ ಬಂದ ಚರಿತ್ರೆ ಮತ್ತು ಅದರ ಕುರಿತಾದ ಚಿಂತನೆಗಳ ಮರುಶೋಧನೆ. ಜ್ಞಾನ ರೂಪವಾಗಿ ಇದು ಅತ್ಯಂತ ಮಹತ್ವದ್ದು. ಮತ್ತೊಂದು ಚರಿತ್ರೆ ಮತ್ತು ಅದರ ನಿರೂಪಣೆಗಳ ಚರ್ಚೆ. ಕಳೆದು ಹೋದ ಸಂಗತಿಗಳು ಮತ್ತು ಅವುಗಳ ಸಂಕಥನವನ್ನು ಇದು ಹೇಳುತ್ತದೆ.

ಆಗಲೇ ಕಾವ್ಯ ಮತ್ತು ಕಥನಗಳು ಚರಿತ್ರೆಯ ಅಧ್ಯಯನಕ್ಕೆ ಹೇಗೆ ಪೂರಕವಾಗುತ್ತದೆ ಎಂದು ವಿದ್ವಾಂಸರು ಚರ್ಚೆಯನ್ನು ಮಾಡಿದರು. ಚರಿತ್ರೆಯನ್ನು ಯಾರೋ ಒಬ್ಬರು ಹೇಳಿದ ಮಾತ್ರಕ್ಕೆ ಅದು ಮುಗಿಯುವುದೂ ಇಲ್ಲ. ಅದು ದೃಷ್ಟಿಕೋನಕ್ಕೆ ಅನುಗುಣವಾಗಿ ಬೇರೆಯಾಗುತ್ತದೆ.

ಕಾವ್ಯಕ್ಕೆ ಅದರದೇ ಆದ ಒಂದು ನಿಯಮವು ಇದೆ ನಿಜ. ಆದರೆ ಅದು ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದ ಒಂದು ಪ್ರತಿಕ್ರಿಯೆಯನ್ನು ಕೊಡುತ್ತದೆ. ವಾಸ್ತವವಾಗಿ ಚರಿತ್ರೆಯ ಹಲವು ದಾರಿಗಳಲ್ಲಿ ಎಲ್ಲವೂ ಅನುಕರಣೆಗೆ ಯೋಗ್ಯವಲ್ಲ. ಅವುಗಳು ಅತ್ಯಂತ ದೊಡ್ಡದಾದ ಆದರ್ಶವೂ ಅಲ್ಲ. ಚರಿತ್ರೆಯಲ್ಲಿ ಕಥನದ ಅಂಶಗಳು ಇರುವುದು ಸತ್ಯ. ಚರಿತ್ರೆಯೆಂದರೆ ಅದು ಒಂದು ಅನುಕ್ರಮಾದ ಹೊಂದಾಣಿಕೆ. ಎರಡನೆಯದಾಗಿ ಅದರಲ್ಲಿ ಕಥನ ಅಂಶಗಳು ಇರುತ್ತವೆ. ಅದರಲ್ಲಿ ಕೆಲವು ಘಟನೆಗಳೂ ಇರುತ್ತವೆ. ಚರಿತ್ರೆಗೆ ಮತ್ತೊಂದು ಅತ್ಯಂತ ಮುಖ್ಯವಾದ ಅಂಶವೆಂದರೆ ಅದು ತನ್ನದೇ ಆದ ಒಂದು ವಾದವನ್ನು ಮುಂದೆ ಇಡುತ್ತದೆ. ಅಷ್ಟೇ ಅಲ್ಲ ಅದರಲ್ಲಿ ನಿರ್ದಿಷ್ಟವಾದ ಕೆಲವು ಪರಿಣಾಮವೂ ಇರುತ್ತದೆ. ಈ ಅಂಶಗಳು ಕಥನದಲ್ಲಿಯೂ ಇರುತ್ತದೆ. ಆದ್ದರಿಂದಲೇ ಅದಗ ಸಾಂಸ್ಕೃತಿಕವಾದ ಪರಿಣಾಮವು ಅತ್ಯಂತ ದೊಡ್ಡದು. ಅದು ಮಹಾನ್ ವ್ಯಕ್ತಿಗಳು ಮತ್ತು ಅವರ ಮಹಾನ್ ಚರಿತ್ರೆಯಲ್ಲ. ಅದರಲ್ಲಿ ಬರುವವರು ಅತ್ಯಂತ ಸಣ್ಣ ಮನುಷ್ಯರು. ಚರಿತ್ರೆಯಲ್ಲಿ ಅಷ್ಟಾಗಿ ಚರ್ಚೆಯಾಗದ ಸಾಮಾನ್ಯರಾದ ಹೆಂಗಸರು. ಅವರು ಧಾರ್ಮಿಕರೂ ಅಲ್ಲ. ಭಾರತದ ಯಜಮಾನ ಪರಂಪರೆಯ ಬೆಂಬಲವೂ ಇಲ್ಲ. ಆದ್ದರಿಂದ ಇಲ್ಲಿ ಕಥನವು ಹರಡುತ್ತದೆ. ಅದು ಅಂಗಳದಲ್ಲಿ ನಾವು ಹರವಿ ಇಟ್ಟ ಆಹಾರ ಧಾನ್ಯಗಳ ಹಾಗೆ. ಅವುಗಳು ಒಂದರ ಮೇಲೆ ಒಂದು ಸೇರಿಸಿ ಇಟ್ಟ ಹಾಗೆ ಕಾಣುವುದಿಲ್ಲ. ಚರಿತ್ರೆಯ ಉದ್ದೇಶವೆಂದರೆ ಅದು ಕಾಣದೆ ಇರುವುದನ್ನು ತೋರಿಸುವುದು ಎಂದಾದರೆ ಆ ಕೆಲಸವನ್ನು ಅವರ ಕೃತಿಗಳು ಮಾಡುತ್ತವೆ. ಕೆಲವು ಮುಖ್ಯವಾದ ಸಂಗತಿಗಳನ್ನು ಹೇಳುತ್ತವೆ. ಇಲ್ಲಿ ಒಂದು ವಿಚಾರವನ್ನು ಹೇಳಬೇಕು: ಪಶ್ಚಿಮದ ಮಹಾಕಾವ್ಯ ಮತ್ತು ಅದರ ಸ್ವರೂಪವು ಒಂದು ಥರ ಇದೆ. ನಮ್ಮಲ್ಲಿ ಮಹಾಕಾವ್ಯ ಮತ್ತು ಅದರ ಸ್ವರೂಪವು ಇನ್ನೊಂದು ಥರ ಇದೆ. ನವ ಚಾರಿತ್ರಿಕ ಸಿದ್ಧಾಂತದಲ್ಲಿ ಬರುವ ಒಂದು ಪರಿಕಲ್ಪನೆಯನ್ನು ಇಲ್ಲಿ ಬಳಸುವುದು ಅತ್ಯಂತ ಸೂಕ್ತ– ಅದು ಎಂಪ್ಲಾಂಟ್ಮೆಂಟ್. ಒಂದು ಕಾವ್ಯವು ಅನೇಕ ಘಟನೆಗಳನ್ನು ಕೂಡಿದ್ದು ಅದಕ್ಕೆ ಬೇಕಾದ ನಿರೂಪಣೆಯನ್ನು ಹೊಂದಿದ್ದರೆ ಅದನ್ನು ಎಂಪ್ಲಾಟ್ ಮೆಂಟ್ ಎಂದು ಹೇಳುತ್ತಾರೆ. ರಮ್ಯ, ದುರಂತ, ಹಾಸ್ಯ ಮತ್ತು ವ್ಯಂಗ್ಯಗಳ ಮಾದರಿಗಳು ಬೇರೆ ಎಂದು ಫ್ರೈ ಹೇಳುತ್ತಾನೆ. ಆದರೆ ಮಹಾಕಾವ್ಯಗಳಿಗೆ ಮತ್ತು ಚರಿತ್ರೆಗೆ ಅತ್ಯಂತ ನಿಕಟವಾದ ಒಂದು ಸಂಬಂಧವು ಇದೆ. ಅದರಲ್ಲಿ ಇನ್ನೊಂದು ಅಂಶವೂ ಇದೆ. ಅದು ಅದರ ನಾಟಕೀಯತೆಯ ಗುಣ. ಅಭಿಜಾತ ಪರಂಪರೆಯಲ್ಲಿ ದೇಹವನ್ನು ಒಂದು ವಸ್ತು ಎಂದು ಭಾವಿಸುತ್ತಿದ್ದರು ಎಂದು ಫುಕೋ ಗುರುತಿಸುತ್ತಾನೆ.

ವಾಸ್ತವವಾಗಿ ಗ್ರಾಂಶಿಯು ಇದನ್ನು ಅತ್ಯಂತ ಸೂಕ್ಷ್ಮವಾದ ಸಂಗತಿಯೆಂದು ಹೇಳುತ್ತಾನೆ. ನಮ್ಮ ಚರ್ಚೆಗಳ ಹಿಂದೆ ಬೇರೆ ಬೇರೆ ಒತ್ತಡಗಳೂ ಇರುತ್ತವೆ. ಹಾಗೆಯೇ ಕೆಲವೊಮ್ಮೆ ರಾಜಕೀಯ ಆಸಕ್ತಿಗಳೂ ಇರುತ್ತವೆ. ಚರ್ಚೆಗಳಿಗೆ ಇರುವ ರಾಜಕೀಯ ಆಯಾಮವು ಒಂದು ಅಧಿಕಾರದ ವಿಭಿನ್ನವಾದ ಒಂದು ನಿಲುವನ್ನು ಹೇಳುತ್ತದೆ. ಅದನ್ನು ನಾವು ಯಜಮಾನಿಕೆಯ ನಿಲುವು ಎಂದೂ ಹೇಳಬಹುದು. ಯಾವುದು ಒಂದು ದೇಶದಲ್ಲಿ ಯಜಮಾನಿಕೆಯನ್ನು ಸೂಚಿಸುತ್ತದೆಯೋ ಅದು ತನ್ನ ಹಿತಾಸಕ್ತಿಗಾಗಿ ತನ್ನದೇ ಆದ ಮೌಲ್ಯವನ್ನು ಉಳಿದವರ ಮೇಲೆ ಹೇರುತ್ತದೆ. ಆದರೆ ಸಾಮಾನ್ಯ ಮನುಷ್ಯರು ರಾಜಕಾರಣವನ್ನು ಮತ್ತು ಅಧಿಕಾರದ

ಕೇಂದ್ರವನ್ನು ನೋಡುವ ಕ್ರಮಗಳು ಬೇರೆಯಾಗುತ್ತದೆ. ಅವರು ಯಾವುದೇ ವಿಮರ್ಶೆಯನ್ನು ಮಾಡುವದಿದ್ದರೂ ಅದರ ನಿರೂಪಣೆಯು ಬೇರೆಯಾಗಿರುತ್ತದೆ. ಲೇಖಕರು ಮತ್ತು ಬುದ್ಧಿಜೀವಿಗಳು ರಾಜಕಾರಣವನ್ನು ನೋಡುವ ವಿಧಾನವು ಬೇರೆಯಾಗಿರುತ್ತದೆ. ಸಾಧಾರಣ ವರ್ಗದ ಜನರು ರಾಜಕಾರಣವನ್ನು ನೋಡುವ ಕ್ರಮದಲ್ಲಿ ವ್ಯತ್ಯಾಸವಿದೆ. ಅದನ್ನು ಇನ್ನೊಂದರ ಥರ ಹೇಳುವುದು ಸಾಧ್ಯವಿಲ್ಲ. ಯಾವುದೇ ವಾಗ್ವಾದ ಮತ್ತು ಚರ್ಚೆಯಲ್ಲಿ ಅತ್ಯಂತ ಮುಖ್ಯವಾಗಿ ಇರುವುದು ಒಂದು ಸಂಗತಿ: ಅದನ್ನು ನಾವು ಹೀಗೆ ಹೇಳಬಹುದು. ಮೌಖಿಕ ಶಕ್ತಿ ಮತ್ತು ವೈಯಕ್ತಿಕವಾದ ನಿರೂಪಣೆಗಳು. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ನಡೆಯುತ್ತಿರುವ ಚರ್ಚೆಗಳನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಇಬ್ಬರು ಚರ್ಚೆಯನ್ನು ಮಾಡುತ್ತಾರೆ ಎಂದರೆ ಅದರಲ್ಲಿ ಬರುವ ಚರ್ಚೆಗೆ ಮತ್ತು ಹೊರಗೆ ನಡೆಯುತ್ತಿರುವ ವಿದ್ಯಮಾನಕ್ಕೆ ಎಷ್ಟೋ ಸರ್ತಿ ಸಂಬಂಧವು ಇಲ್ಲದೆ ಹೋಗಬಹುದು. ಒಂದು ಅಸಂಗತವಾದ ನಾಟಕದಂತೆ ನಮಗೆ ಭಾಸವಾಗಬಹುದು. ಅಧಿಕಾರ ಎನ್ನುವುದು ಇರುವುದು ದೂರದರ್ಶನದ ಆಚೆಗೆ. ದೂರದರ್ಶನದಲ್ಲಿ ನಡೆಯುವ ಚರ್ಚೆಗಳು ಹೇಗೆ ಇರುತ್ತವೆ ಎಂದು ಪೀಟರ್ ಲಂಟ್ ಹೀಗೆ ಹೇಳುತ್ತಾನೆ: ಅದರಲ್ಲಿ ಭಾಗವಹಿಸುವವರು ಒಂದು ದೃಷ್ಟಿಯಿಂದ ಜನರ ಪ್ರತಿನಿಧಿಗಳಂತೆ ಕಾಣಿಸುತ್ತಾರೆ. ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ. ರಾಜಕಾರಣಿಗಳು ಮತ್ತು ರಾಜಕೀಯವನ್ನು ಹೇಳುವಾಗ ಅವರಲ್ಲಿ ಒಂದು ಅಧಿಕೃತತೆಯು ಕಾಣುತ್ತದೆ. ಸಂವಹನದ ದೃಷ್ಟಿಯಿಂದ ಅವರಿಗೆ ಒಂದು ಅವಕಾಶವೂ ಸಿಕ್ಕಿದೆ. ಅದನ್ನು ಸಾಮಾಜಿಕ ಮತ್ತು ರಾಜಕೀಯ ಅವಕಾಶ ಎಂದೂ ಹೇಳಬಹುದು. ದೂರದರ್ಶನದಲ್ಲಿ ಕೇಳುಗರು ಇರುತ್ತಾರೆ. ಅವರು ನೋಟಕರ ಮೇಲೆ ಒಂದು ನಿಲುವನ್ನು ಪ್ರಸ್ತುತಪಡಿಸುತ್ತಾರೆ, ಆದರೆ ಒಂದು ಸಂಗತಿಯನ್ನು ನಾವು ನಮ್ಮ ಗಮನಕ್ಕೆ ತರುವುದು ಅತ್ಯಂತ ಆವಶ್ಯಕ. ಅಧಿಕಾರ ಎನ್ನುವುದು ಒಂದು ಎಳೆಯ ಸರವಲ್ಲ. ಅದರಲ್ಲಿ ಬೇರೆ ಬೇರೆ ಎಳೆಗಳು ಇರುತ್ತವೆ. ಅದರ ರೂಪವನ್ನು ನಾವು ಒಂದು ಮುಷ್ಟಿಯಲ್ಲಿ ಹಿಡಿಯಲು ಆಗುವುದಿಲ್ಲ ಎನ್ನುವುದು ಗ್ರಾಂಶಿಯವರಿಗೆ ಗೊತ್ತಿದೆ. ಅಧಿಕಾರಗಳ ನಡುವೆ ಒಂದು ಒಪ್ಪಂದವು ಇರುತ್ತದೆ. ಮತ್ತೊಂದು ಕಡೆಯಿಂದ ಅದರಲ್ಲಿ ಸಹಮತವು ಇರುತ್ತದೆ. ಇನ್ನೊಂದು ದೃಷ್ಟಿಯಲ್ಲಿ ಪ್ರತ್ಯೇಕವಾದ ಸಂಗತಿ ಎಂದು ಹೇಳಬೇಕಾದ ಅಗತ್ಯವಿಲ್ಲ. ಸಂವಹನದ ಸಾಮಾಜಿಕ ಅನ್ವಯಗಳು ಹೊಸದಾದ ಅವಕಾಶವನ್ನು ನಮ್ಮ ಮುಂದೆ ಇಡುತ್ತದೆ ಎನ್ನುವುದೂ ನಿಜ. ಸಂವಹನ ಮತ್ತು ಅದರ ಸಾಮಾಜಿಕ ಸಂಬಂಧಗಳನ್ನು ಇದು ಹೇಳುತ್ತದೆ. ಇದಕ್ಕೆ ಹೆಚ್ಚು ಮಹತ್ವವು ಇದೆ. ಗ್ರಾಂಶಿಯು ಸಮಾಜದ ಸ್ವರೂಪವನ್ನು ಹೇಳುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಸಮಾಜದಲ್ಲಿ ಇರುವ ಅಧಿಕಾರ ಮತ್ತು ಅದರ ರೂಪಗಳನ್ನು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ಗುಂಪುಗಳು ಇನ್ನೊಂದು ಗುಂಪನ್ನು ಆಳಿಸಿಕೊಳ್ಳುವ ಗುಂಪಾಗಿ ಪರಿವರ್ತನೆ ಮಾಡುತ್ತದೆ. ಅವನಲ್ಲಿ ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗವು ಸ್ಪಷ್ಟವಾಗಿ ಕಾಣುತ್ತದೆ. ಆಳುವವರು ಮತ್ತು ಆಳಿಸಿಕೊಳ್ಳುವವರು ಎನ್ನುವುದು ಇಲ್ಲಿ ಖಚಿತ. ಇದನ್ನು ಸಂವಾದಿ ಎಂದು ಹೇಳಬೇಕಾಗಿಲ್ಲ. ಆದರೆ ಇದರ ನಿಯಮ ಎನ್ನುವುದು ಬೇರೆಯಾಗುತ್ತದೆ. ಆಳುವವರು ನಿರ್ದಿಷ್ಟವಾದ ಅಧಿಕಾರವನ್ನು ಹೊಂದಿರುತ್ತಾರೆ. ಇದರಲ್ಲಿಯೂ ಪ್ರಜಾಪ್ರಭುತ್ವವು ಇದನ್ನು ಬಹಳ ಚೆನ್ನಾಗಿ ಬಳಸುತ್ತದೆ. ಅದು ಜನರನ್ನು ಕೆಲವು ನಿಯಮಕ್ಕೆ ಒಪ್ಪುವ ಹಾಗೆ ಮಾಡುತ್ತದೆ. ಹಾಗೆಂದು ಇದನ್ನು

ಹೇಳುವಾಗ ಗ್ರಾಂಶಿಯು ಸನ್ನಿವೇಶ ಎನ್ನುವುದನ್ನು ಗಮನಿಸುತ್ತಾನೆ. ಯಾವಾಗ ನಾವು ಅಧಿಕಾರವನ್ನು ಒಪ್ಪುತ್ತೇವೆಯೋ ಆಗ ಅದನ್ನು ನಾವು ಒಪ್ಪಿದ್ದೇವೆ ಮತ್ತು ಅದನ್ನು ನಾವು ಅಂಗೀಕರಿಸಿದ್ದೇವೆ ಎನ್ನುವುದೂ ನಮ್ಮ ಅರಿವಿಗೆ ಬರುವುದಿಲ್ಲ. ಆಳುವ ವರ್ಗವು ಯಾವಾಗಲೂ ಆಳಿಸಿಕೊಳ್ಳುವ ವರ್ಗಕ್ಕೆ ನಾನು ನಿನ್ನನ್ನು ಆಳು ಎಂದು ಭಾವಿಸುವುದಿಲ್ಲ ಎಂಬಂತೆ ಸೂಚಿಸುತ್ತದೆ. ಇದು ಕೇವಲ ಸೂಚನೆಯು ಮಾತ್ರವೇ. ಆಳುವ ವರ್ಗವು ಆಳಿಸಿಕೊಳ್ಳುವ ವರ್ಗದಿಂದ ವಿನಯವನ್ನು ನಿರೀಕ್ಷೆ ಮಾಡುತ್ತದೆ ಎನ್ನುವುದು ಪುಕೋನ ವಾದ.

ಶಿಸ್ತು ಗುಲಾಮರ ಮೇಲೆ ಒತ್ತಡವನ್ನು ಹೇರುತ್ತದೆ. ಅದರ ಹಿಂದೆ ಒಂದು ರಾಜಕಾರಣವೂ ಇರುತ್ತದೆ ಎಂದು ಫುಕೋ ಹೇಳುತ್ತಾನೆ.

ಅಧಿಕಾರ ಎನ್ನುವುದು ಕೂಡಲೇ ಯಾರೋ ಒಬ್ಬರು ತಕ್ಷಣವೇ ಇದನ್ನು ಹೇಳುವುದಿಲ್ಲ. ಅದು ಒಂದು ಚಲನೆಯೂ ಆಗಿರುತ್ತದೆ. ಹಾಗೆಯೇ ಅದು ನಿರಂತರವೂ ಹೌದು. ಆದ್ದರಿಂದ ಇದನ್ನು ನಾವು ಬೇರೆ ಥರ ನೋಡಬೇಕು ಆಳುವ ವರ್ಗವು ತನಗೆ ಬೇಕಾದ ರೀತಿಯಲ್ಲಿ ಹೇಗೆ ಕಾನೂನು ಮುಂತಾದವುಗಳನ್ನು ಚಲಾವಣೆಗೆ ತರುತ್ತದೆ ಎಂದರೆ ಇದರಲ್ಲಿ ಮೇಲು ನೋಟಕ್ಕೆ ಯಾವುದೇ ಹುಳುಕು ಕಾಣಿಸುವುದೇ ಇಲ್ಲ. ಅದು ಎಷ್ಟರ ಮಟ್ಟಿಗೆ ಇದೆ ಎಂದರೆ ಯಾವುದೋ ಒಂದು ಕ್ಷಣಕ್ಕೆ ತನ್ನ ನಿಯಮವನ್ನು ಕೂಡಾ ಮುರಿಯಬಹುದು. ಮತ್ತೊಂದು ನಿರ್ಧಾರವನ್ನು ಚಾಲ್ತಿಗೆ ತರಬಹುದು. ಇದು ವಾಸ್ತವವಾಗಿ ಸಮಸ್ಯೆ. ಇದು ನಡೆಯುವಾಗ ಒಂದು ಪ್ರಭುತ್ವವು ಆಳಿಸಿಕೊಳ್ಳುವವರ ಒಪ್ಪಿಗೆಯನ್ನು ಪಡೆದೇ ಪಡೆಯುತ್ತದೆ ಎಂದು ಅರ್ಥವಲ್ಲ. ಇದು ನಡೆಯುವಾಗ ಸಮಾಜವು ಪರಿವರ್ತನೆಯನ್ನು ಕಾಣುತ್ತದೆ. ಅದರ ಮತ್ತೊಂದು ಬಗೆಯಲ್ಲಿ ಹರಡುತ್ತದೆ. ಇದು ಅತ್ಯಂತ ಮುಖ್ಯವಾದ ಅಂಶವೂ ಹೌದು. ಆಳುವ ವರ್ಗ ಮತ್ತು ಅದರ ಯಜಮಾನಿಕೆಗೆ ಬೇಕಾದ ಪೋಲಿಸ್ ವ್ಯವಸ್ಥೆಯು ಇರುತ್ತದೆ. ಅದರ ಮೂಲಕವೇ ಒಂದು ವ್ಯವಸ್ಥೆಯು ಮತ್ತೊಂದು ವ್ಯವಸ್ಥೆಯಾಗಿಯೂ ಪಲ್ಲಟವಾಗುತ್ತದೆ. ಜನರ ಮಧ್ಯೆ ಕಾನೂನು ಇರುತ್ತದೆ. ಮತ್ತೊಂದು ಅರ್ಥದಲ್ಲಿ ಈ ಪೋಲಿಸ್ ವ್ಯವಸ್ಥೆಯೇ ಒಂದು ಸೀಮಾ ರೇಖೆಯನ್ನು ನಿರ್ಮಾಣ ಮಾಡುತ್ತದೆ. ಆಳುವವರ ಆಸೆಗಳು ಮತ್ತು ಆಳುವ ವರ್ಗದ ಹಿತಾಸಕ್ತಿಯು ಮಾತ್ರವೇ ಮುಖ್ಯವಾಗಿ ಉಳಿದ ವಿಚಾರಗಳು ಗೌಣವಾಗುತ್ತದೆ. ಸಾಮಾನ್ಯರು ಮತ್ತು ಅವರ ಬಯಕೆಗಳು ಹೇಗೆ ಇರುತ್ತವೆ ಎಂದರೆ ಅದು ಹೆಚ್ಚು ವಿಶೇಷವನ್ನು ಹೊಂದಿರುವುದು ಸಾಧ್ಯವಿಲ್ಲ. ಆದರೆ ಜನರು ಮತ್ತು ಅವರ ಬಯಕೆಗಳನ್ನು ಆಳುವ ವರ್ಗ ಸಹಿಸುವುದು ಸಾಧ್ಯವಿಲ್ಲ. ಜನರು ಮತ್ತು ಅವರ ಬಯಕೆಗಳನ್ನು ನಿಯಂತ್ರಣ ಮಾಡುವುದು ಹೇಗೆ ಎನ್ನುವುದು ಅದಕ್ಕೆ ಗೊತ್ತು. ಗುಲಾಮರನ್ನಾಗಿ ಮಾಡುವುದು ಎಂದರೆ ಅದರ ಅರ್ಥ ಅವನ ದೇಹದ ಮೇಲೆ ಕೂಡಾ ಅಧಿಕಾರವನ್ನು ಸ್ಥಾಪಿಸುವುದು. ಗುಲಾಮನು ಯಜಮಾನನಿಗೆ ಸೇವೆಯನ್ನು ಸಲ್ಲಿಸಬೇಕು. ಈ ಪದ್ಧತಿಯು ಹೇಗೆ ಇತ್ತು ಎಂದು ಪುಕೋ ವಿವರಿಸುತ್ತಾನೆ. ಗುಲಾಮರನ್ನು ಅನೇಕ ಕಡೆಗಳಲ್ಲಿ ಬಳಸುತ್ತಿದ್ದರು. ಇದು ಗುಲಾಮ ಮತ್ತು ಯಜಮಾನನ ಸಂಬಂಧದ ಪ್ರಶ್ನೆಯಾದರೆ ಶಾಲೆಗಳಲ್ಲಿ ವಿದ್ಯಾರ್ಥಿಯು ಶಿಕ್ಷಕರ ಮೇಲೆ ಗೌರವವನ್ನು ತೋರಿಸಬೇಕು. ಅವರು ವಿಧೇಯರಾಗಬೇಕು. ಅಂದರೆ ವಿಧೇಯತೆ ಎನ್ನುವುದು ಸಾಮಾಜಿಕವಾಗಿ ಒಪ್ಪಿತವಾದ

ಸಂಗತಿಯೂ ಹೌದು. ಅಧಿಕಾರ ಮತ್ತು ಜ್ಞಾನ ಎನ್ನುವುದು ನಿಯಂತ್ರಣ ಶಕ್ತಿಗಳು ಆಗಿರುತ್ತವೆ. ಇದು ಫುಕೋನ ಅಭಿಪ್ರಾಯ.

ಗ್ರಾಂಶಿಯು ನಮಗೆ ಇರುವ ಕೆಲವು ಸಾಮಾನ್ಯವಾದ ಸಂವೇದನೆಯು ಹೇಗೆ ಇರುತ್ತದೆ ಎನ್ನುವುದನ್ನು ವಿಚಾರವನ್ನು ಮಾಡುವಾಗ ಇದನ್ನು ಹೇಳುತ್ತಾನೆ. ಇಲ್ಲಿ ನಿಯಂತ್ರಣ ಎನ್ನುವುದಕ್ಕೆ ಹೆಚ್ಚು ವಿಶಾಲವಾದ ವ್ಯಾಪ್ತಿಯು ಇದೆ. ಹಾಗೆ ನೋಡಿದರೆ ಇಲ್ಲಿ ಅತ್ಯಂತ ಮುಖ್ಯವಾದ ಅಂಶವನ್ನು ನೆನಪು ಮಾಡಬೇಕಾಗುತ್ತದೆ. ವಿಲಿಯಂಸ್ ಒಂದು ಮಾತನ್ನು ಹೇಳುತ್ತಾನೆ. ವಸ್ತು ಮತ್ತು ಅದರ ಅಸ್ತಿತ್ವ ಎನ್ನುವುದು ಪರಿಪೂರ್ಣವಾದರೆ ಅದರಲ್ಲಿ ಒಂದು ರೂಪವು ಸಿದ್ಧವಾಗುತ್ತದೆ. ಮನುಷ್ಯ ಮತ್ತು ಅವನ ಸಾಮಾನ್ಯವಾದ ಸಂವೇದನೆಯು ಬೇರೆ ಬೇರೆ ಥರ ಇರುತ್ತಾರೆ. ಅನೇಕ ಜನರು ಈವತ್ತು ಸಮಾಜದಲ್ಲಿ ತಮ್ಮ ಸಂವೇದನೆಯ ಮೂಲಕ ಒಂದು ನಿರ್ಧಾರವನ್ನು ಮಾಡುತ್ತಾರೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ನಮಗೆ ಒಂದು ಸಂವೇದನೆಯು ಇರಬೇಕಾಗುತ್ತದೆ. ಸಮಾಜ ಮತ್ತು ಅದರ ಅರ್ಥವನ್ನು ಗಮನಿಸಲು ಕೂಡಾ ನಮಗೆ ಸಂವೇದನೆಯು ಇರಬೇಕಾಗುತ್ತದೆ. ಆದ್ದರಿಂದ ತಾತ್ವಿಕ ಎನ್ನುವುದು ನಮಗೆ ಒಂದು ಅಮೂರ್ತವಾದ ಸಂಗತಿಯೂ ಆಗಿರುತ್ತದೆ. ತಾತ್ವಿಕ ಎನ್ನುವುದು ನಮ್ಮ ಅಸ್ತಿತ್ವವನ್ನು ನಿರೂಪಿಸುತ್ತದೆ. ಅದನ್ನು ನಾವು ಇನ್ನೊಂದು ಥರ ಯೋಚಿಸಬಹುದು. ಎಷ್ಟೋ ಸರ್ತಿ ನಮ್ಮ ಅನುಭವ ಎನ್ನುವುದು ಸಾಚಾ ಆಗಿರುತ್ತದೆ ಎಂದು ಹೇಳುವುದು ಅತ್ಯಂತ ಕಷ್ಟ. ನಮ್ಮ ವ್ಯಕ್ತಿತ್ವವನ್ನು ಅನೇಕ ಸಂಗತಿಗಳು ನಿರ್ಧಾರ ಮಾಡುತ್ತದೆ. ಅದರ ಮೂಲಕ ಕೆಲವನ್ನು ತರಬೇತು ಮಾಡುತ್ತದೆ. ಇದನ್ನು ನಾವು ಇನ್ನೂ ಅನೇಕ ಸಂಗತಿಗಳಲ್ಲಿ ಕಾಣುತ್ತೇವೆ. ಗುಂಪು ಮತ್ತು ಅವುಗಳ ವಿಚಾರಧಾರೆಗಳು ಬೇರೆ ಬೇರೆ ಸಂಸ್ಥೆಗಳ ಮೂಲಕ ವ್ಯಕ್ತವಾಗುತ್ತದೆ. ಶಾಲೆಗಳು, ಸಂಸತ್ತು, ಆಸ್ಪತ್ರೆಗಳು ಸಂಸ್ಕೃತಿಯ ಮೇಲೆ ಪ್ರಭಾವವನ್ನು ಬೀರುತ್ತವೆ ಎಂದು ವಿಲಿಯಂಸ್ ಹೇಳುತ್ತಾನೆ. ಆದರೆ ಗ್ರಾಂಶಿಯು ನಮಗೆ ಒಂದು ಸಂಸ್ಕೃತಿಯ ಮೇಲೆ ಯಾವುದು ಹೆಚ್ಚು ಪ್ರಭಾವವನ್ನು ಬೀರುತ್ತದೆ ಎಂದು ಹೇಳುವಾಗ ಗ್ರಾಂಶಿಯು ಆರ್ಥಿಕ ಸಂಗತಿಗಳನ್ನು ಮರೆಯಬಾರದು ಎಂದು ಭಾವಿಸುತ್ತಾನೆ. ಅದನ್ನು ಬಿಡಬಾರದು ಎನ್ನುವುದು ಅವನ ವಾದವಾಗಿದೆ. ಮೇಲು ನೋಟಕ್ಕೆ ಗ್ರಾಂಶಿಯು ಆರ್ಥಿಕತೆ ಮತ್ತು ಅದರ ಪರಿಣಾಮಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಾನೆ ಎಂದು ಅನಿಸುತ್ತದೆ ಎನ್ನುವುದು ಸತ್ಯ. ಆರ್ಥಿಕತೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ ಇದು ಮೂಲವಾಗಿದೆ. ಅದನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಇಲ್ಲಿ ಅವನ ಅಭಿಪ್ರಾಯವು ಲಿಂಗ ಪ್ರಭೇದವನ್ನು ಸೂತ್ರದಲ್ಲಿ ಹೇಳುತ್ತದೆ.ಧರ್ಮ ಮತ್ತು ಅದರ ರೂಪಿಸುವ ಸಂಬಂಧಗಳನ್ನು ನಿರ್ವಚನ ಮಾಡುತ್ತದೆ. ಆರ್ಥಿಕತೆ ಎನ್ನುವುದು ಹೇಗೆ ರಾಜಕಾರಣ, ಸಂಸ್ಕೃತಿ, ಒಂದು ಸಾವಯವ ಸಂಬಂಧವನ್ನು ಇಟ್ಟುಕೊಂಡಿರುತ್ತದೆ ಎನ್ನುವುದು ಗ್ರಾಂಶಿಯ ವಾದವಾಗಿದೆ. ಇದನ್ನು ಅವನು ಹೆಜಮನಿ ಎಂದು ಹೇಳುತ್ತಾನೆ. ಇದು ಒಂದು ಸೂತ್ರವಾಗಿದೆ ಎಂದು ಅನಿಸುತ್ತದೆ. ಅದು ಯಜಮಾನಿಕೆಯನ್ನು ಹೇಳುತ್ತದೆ. ಗ್ರಾಂಶಿಯಲ್ಲಿ ಇದು ಕೂಡಾ ಚಲನಶೀಲವಾದ್ದು ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಾಂಸ್ಕೃತಿಕ ಉತ್ಪಾದನೆಯಲ್ಲಿಯೂ ಇದು ಕೆಲಸವನ್ನು

ಮಾಡುತ್ತದೆ. ಸಾಂಸ್ಕೃತಿಕವಾದ ಉತ್ಪಾದನೆಯಲ್ಲಿ ಕೆಲವು ಮಾನ್ಯವಾಗುತ್ತವೆ. ಕೆಲವು ಅಮಾನ್ಯವಾಗುತ್ತವೆ. ಇದು ಸಾಂಸ್ಕೃತಿಕ ರಾಜಕಾರಣದಿಂದ ಆಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ ಆದರೆ ಫುಕೋ ಮತ್ತೆ ಬೇರೆ ನಿಲುವನ್ನು ಎತ್ತುತ್ತಾನೆ.

ಯಾವುದೇ ಅಧಿಕಾರವು ಮತ್ತೊಬ್ಬ ವ್ಯಕ್ತಿಯನ್ನು ನಿಯಂತ್ರಿಸುವುದು ಸತ್ಯ. ಹಿಂದೆ ಅಧಿಕಾರ ಮತ್ತೊಬ್ಬನ ದೇಹದ ಮೇಲೆ ಕೂಡಾ ಅಧಿಕಾರ ಸ್ಥಾಪಿಸಿದ್ದು ಒಂದೇ ದೃಷ್ಟಿಯಿಂದ ಎಂದು ತಿಳಿದುಕೊಳ್ಳುವಂತಿಲ್ಲ. ಅದಕ್ಕೆ ಬೇರೆ ಬೇರೆ ದೃಷ್ಟಿಕೋನಗಳಿವೆ. ಅಧಿಕಾರ, ಹಿಂಸೆ, ನಿಗ್ರಹಗಳು ಅಧಿಕಾರ ಸ್ಥಾಪನೆಗೆ ಮುಖ್ಯ ಕಾರಣಗಳಾಗುತ್ತವೆ. ಗುಲಾಮಿ ಪದ್ಧತಿಯು ಪರಂಪರಾಗತವಾಗಿಯೂ ಬಂದಿದೆ. ಆಳಿಸಿಕೊಳ್ಳುವವನಲ್ಲಿ ಅಧಿಕಾರವು ಇರುವುದಿಲ್ಲ. ಆದರೆ ಆಳುವವನಲ್ಲಿ ಅಧಿಕಾರ ಇರುತ್ತದೆ. ಯಜಮಾನಿಕೆಯೇ ಇಲ್ಲಿ ಪ್ರಧಾನ. ಅಧಿಕಾರದ ಗುಣವೆಂದರೆ ತನ್ನ ಪ್ರಾಬಲ್ಯವನ್ನು ಇನ್ನೊಬ್ಬ ವ್ಯಕ್ತಿಯ ಮೇಲೆ ಹೇರುವುದು.

ಲೈಂಗಿಕ ತಾರತಮ್ಯದಲ್ಲಿಯೂ ಆಳುವುದು ಮತ್ತು ಆಳಿಸಿಕೊಳ್ಳುವುದು ಎನ್ನುವ ಸಂಕಥನವೇ ಇರುತ್ತದೆ. ಈ ಅಧಿಕಾರದ ಕೇಂದ್ರವನ್ನು ದಾಟಿದರೆ ಮಾತ್ರ ಸ್ವಾತಂತ್ರ್ಯ ಸಾಧ್ಯ. ಆದರೆ ಯಾವುದೇ ಒಂದು ಅಧಿಕಾರವು ಅಂತಿಮವಲ್ಲ. ಬೇರೆಬೇರೆ ಅಧಿಕಾರಗಳು ನಿಯಂತ್ರಿಸುತ್ತವೆ. ಗುಲಾಮಿತನ ಎನ್ನುವುದು ಹಿಂಸೆಯ ಆಧಾರ ಮೇಲೆ ನಿಂತಿದೆಯೆಂದು ಫುಕೋ ಹೇಳುತ್ತಾನೆ. ಗುಲಾಮರು ಆಳುವವನಿಗಾಗಿ ತಮ್ಮ ಶ್ರಮವನ್ನು ವಿನಿಯೋಗಿಸುತ್ತಾರೆ. ಅವರ ನಡುವೆ ಹಿಂಸೆ ಹೊರತುಪಡಿಸಿ ಬೇರೆ ಏನೂ ಇರುವುದಿಲ್ಲ. ಅಲ್ಲಿ ಒಂದು ಹಂಗು ಇರುತ್ತದೆ.

ಇದರ ಜೊತೆಗೆ ಫುಕೋ ಸಾರ್ವಭೌಮತ್ವ ಕೂಡಾ ಅಧಿಕಾರದ ಒಂದು ರೂಪವಾಗಿದ್ದು ಅನ್ಯರನ್ನು ಕೆಳಗಿನ ಮಟ್ಟದಲ್ಲಿ ನೋಡುತ್ತದೆಯೆಂದು ಫುಕೋ ಹೇಳುತ್ತಾನೆ. ಆದರೆ ಇಲ್ಲಿ ರಾಜಕೀಯ ತಂತ್ರಗಾರಿಕೆಯು ಅಸ್ತಿತ್ವದಲ್ಲಿ ಇರುತ್ತದೆ. ಸಾರ್ವಭೌಮತ್ವ ಹೊಂದಿದವನು ಪರಮೋಚ್ಚ ಅಧಿಕಾರವನ್ನು ಹೊಂದಿರುತ್ತಾನೆ. ಅವನು ಗುಲಾಮರನ್ನು ಶಿಕ್ಷಿಸಬಲ್ಲ. ಇದರಲ್ಲಿ ಕರುಣೆಯೂ ಇರುವುದಿಲ್ಲ.

ಶಿಸ್ತು ಕೂಡಾ ಪ್ರಭುತ್ವವನ್ನು ಬಲಪಡಿಸುತ್ತದೆ. ಸ್ವಶಿಸ್ತಿಗೆ ಅದು ಒತ್ತಾಯಪಡಿಸುತ್ತದೆಯೆಂದು ಫುಕೋ ಹೇಳುತ್ತಾನೆ. ಪ್ರಭುತ್ವ ಹಿಂಸೆಯನ್ನು ಮಾಡುತ್ತದೆ. ಶಿಸ್ತು ಎನ್ನುವುದಕ್ಕೆ ಒಂದು ಪ್ರಾಚೀನ ರೂಪವಿದೆ.

*** ಗ್ರಾಂಶಿ ರೀಡರ್**

೮

ಬೆಟ್‌ನೋಯಿರ್; ಫಾರ್ಟಿಯರಿ ಮತ್ತು ಅಸಿಟೆಮಾ

ಇದನ್ನು ಹೇಳುವಾಗ ಫುಕೋನಲ್ಲಿ ಪಶ್ಚಿಮದ ರಾಜಕಾರಣವು ಇತ್ತು, ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬರೆಯುತ್ತಾನೆ. ವಿಚಾರವಾದ ಮತ್ತು ರಾಜಕಾರಣದಲ್ಲಿ ಒಂದು ಅಂಶವು ಹೆಚ್ಚು ಮುಖ್ಯವಾಗುತ್ತದೆ. ಇದು ಅಸಹಜ ಮತ್ತು ಸಹಜ ಎನ್ನುವುದನ್ನು ಬೇರೆ ಮಾಡುತ್ತದೆ. ಅದರೆ ಯಾರು ನಿಜವಾದ ರಾಜ್ಯದಲ್ಲಿ ಇರುತ್ತಾರೆ ಹಾಗೂ ಇರಬೇಕು ಎಂದು ನಿರ್ಧಾರವನ್ನು ಮಾಡುತ್ತದೆ. ಒಂದು ಅರ್ಥದಲ್ಲಿ ಇದು ಜನರ ವರ್ಗೀಕರಣವನ್ನು ಮಾಡುತ್ತಲೇ ಪ್ರಭುತ್ವದ ಸಂಹಿತೆಗಳನ್ನು ಜಾರಿಗೆ ತರುತ್ತದೆ. ಮತ್ತೊಂದು ಅಂಶವು ಇಲ್ಲಿ ಅತ್ಯಂತ ಮುಖ್ಯ. ಫುಕೋ ಈವತ್ತು ಯಾವುದು ಹೆಚ್ಚು ಮುಖ್ಯವಾಗುತ್ತದೆ ಎಂದು ಹೇಳುವಾಗ ಅದರ ಹಿಂದೆ ಇರುವ ನ್ಯಾಯ ಸಂಹಿತೆಯನ್ನು ಮುಖ್ಯ ಎಂದು ಪ್ರಭುತ್ವವು ಪರಿಗಣಿಸುತ್ತದೆ ಎಂದು ಭಾವಿಸುತ್ತಾನೆ. ಇದಕ್ಕೆ ಕೆಲವು ಮಾನದಂಡವನ್ನು ಅದು ಸೂಚಿಸಿದೆ ಎಂದು ಭಾವಿಸುತ್ತಾನೆ. ಆದರೆ ವೈಚಾರಿಕ ಎನ್ನುವುದೇ ಇಲ್ಲಿ ಮುಖ್ಯ ಸಹಜವಾದ್ದನ್ನು ಪ್ರಭುತ್ವವು ಹೆಚ್ಚು ಅಂಗೀಕರಿಸುತ್ತದೆ. ಆದ್ದರಿಂದ ಶಿಸ್ತು ಮತ್ತು ದಂಡನೆ ಎನ್ನುವುದಕ್ಕೆ ಅವನಲ್ಲಿ ಹೆಚ್ಚು ಅರ್ಥವಿದೆ. ಸ್ವಯಂನಿಯಂತ್ರಣವು ಅದಕ್ಕೆ ಬೇಕಾಗುತ್ತದೆ. ಅದು ಹೆಚ್ಚು ಮುಖ್ಯ ಎಂದು ಫುಕೋ ಹೇಳುತ್ತಾನೆ. ಪ್ರಭುತ್ವವು ಹೇಗೆ ನಿಯಂತ್ರಣ ಎನ್ನುವುದು ಹೆಚ್ಚಿನ ಅರ್ಥವನ್ನು ಕೊಡುತ್ತದೆ ಎಂದೂ ಅವನು ಚರ್ಚೆಮಾಡುತ್ತಾನೆ. ಇದಕ್ಕಾಗಿ ಅದು ಮನೋವಿಜ್ಞಾನ. ಔಷಧಿಗಳನ್ನು ಪ್ರಯೋಗಿಸಿತು. ಮನುಷ್ಯರ ಲೈಂಗಿಕ ಬಯಕೆಯನ್ನು ಕೂಡಾ ಅದು ನಿಯಂತ್ರಣ ಮಾಡಲು ಹೋಗಿದ್ದು ಇಲ್ಲಿ ಉಲ್ಲೇಖನೀಯ. ಇದರಲ್ಲಿ ವ್ಯಕ್ತಿ ಮತ್ತು ಅವನ ಸತ್ಯವನ್ನು ಬಯಲು ಮಾಡುವುದು ಎನ್ನುವುದಕ್ಕೆ ಹೆಚ್ಚು ಅರ್ಥವಿದೆ. ಇದನ್ನು ಹೇಳುವಾಗ ಫುಕೋ ಬೆಟೆನೋಯಿರ್ ಎನ್ನುವ ಪರಿಕಲ್ಪನೆಯನ್ನು ತರುತ್ತಾನೆ. ಸಮಾಜ ಮತ್ತು ಸಂಸ್ಕೃತಿಯಲ್ಲಿ ಯಾವುದನ್ನು ದೂರ ಇರಿಸಲಾಗಿದೆ ಮತ್ತು ಅದರ ಮೂಲಕ ಸಮಾಜ ಹಾಗೂ ಅದರ ಸ್ವಾಸ್ಥ್ಯವನ್ನು ಕಾಪಾಡಲು ಯತ್ನವನ್ನು ಮಾಡಲಾಗಿದೆ

ಎಂದು ಅವನು ಚರ್ಚೆ ಮಾಡುತ್ತಾನೆ. ಇದು ಭಾವನೆಗಳನ್ನು ಹೇಳುತ್ತದೆ. ನಾವು ಯಾವುದನ್ನು ಇಷ್ಟ ಪಡುತ್ತೇವೆ ಮತ್ತು ಯಾವುದನ್ನು ಇಷ್ಟ ಪಡುವುದಿಲ್ಲ ಎನ್ನುವುದನ್ನು ಸೂಚಿಸುತ್ತದೆ. ಅದರ ಜೊತೆಗೆ ಇದು ಮನಸ್ಸಿನ ಆಳದಲ್ಲಿ ಇರುವ ಭಾವನೆಗಳನ್ನು ಸೂಚಿಸುತ್ತದೆ. ಇದನ್ನು ಹೇಳುವಾಗ ಫುಕೋ ಮತ್ತೊಂದು ಪರಿಕಲ್ಪನೆಯನ್ನು ಹೇಳುತ್ತಾನೆ. ಫಾರ್ಟಿಯರಿ ಎನ್ನುವುದು ಲ್ಯಾಟಿನ್ ಪದ. ಇದು ಬಲಶಾಲಿ ಎನ್ನುವುದನ್ನು ಹೇಳುತ್ತದೆ. ಸಮಾಜದಲ್ಲಿ ಯಾವುದು ಅಧಿಕೃತವಾಗುತ್ತದೆ ಮತ್ತು ಯಾವುದನ್ನು ಅಂಗೀಕರಿಸಲಾಗುತ್ತದೆ ಎನ್ನುವುದನ್ನು ಇದು ಹೇಳುತ್ತದೆ. ಕಾನೂನು ಸಮ್ಮತಿಯಿಂದ ಯಾವುದು ನಿರ್ಣಯಕ್ಕೆ ಗುರಿಯಾಗುತ್ತದೆಯೋ ಅದನ್ನು ಫಾರ್ಟಿಯರಿ ಸೂಚಿಸುತ್ತದೆ. ಆದರೆ ಈ ಎರಡೂ ಪದಗಳು ಆಂತರಿಕ ಭಾವನೆಗಳನ್ನು ಹೇಳುತ್ತವೆ. ಇದನ್ನು ಹೇಳುವಾಗಲೇ ಫುಕೋ ದೈಹಿಕ ರಾಜಕಾರಣವನ್ನು ಹೇಳುತ್ತಾನೆ. ಅಧಿಕಾರವು ಹೇಗೆ ಅನೇಕ ನಿಯಂತ್ರಣಗಳನ್ನು ಮಾಡುತ್ತದೆ ಎಂದು ಹೇಳುವಾಗ ಈ ವಿಷಯವನ್ನೂ ಪ್ರಸ್ತಾವಿಸುತ್ತಾನೆ. ೧೯೭೬ರಲ್ಲಿ ಈ ಪರಿಕಲ್ಪನೆಯನ್ನು ತನ್ನ ಉಪನ್ಯಾಸದಲ್ಲಿ ಬಳಸುತ್ತಾನೆ. ರಾಜಕಾರಣವು ಹೇಗೆ ಖಾಸಗಿಯಾದ ಜೀವನಕ್ಕೆ ಪ್ರವೇಶಿಸುತ್ತದೆ ಎಂದು ಹೇಳುವುದು ಪುಕೋ ಯಾವಾಗ ಸಾಮಾಜಿಕವಾದ ಔಷಧಿ ವಿಜ್ಞಾನವು ಮುಂದೆ ಬಂದಿತೋ ಆಗ ಇದರ ಅರ್ಥವೂ ಬೇರೆಯಾಯಿತು. ವೈದ್ಯರು ಮತ್ತೊಂದು ಅರ್ಥದಲ್ಲಿ ಅನ್ಯರ ದೇಹವನ್ನು ತಮ್ಮ ಔಷಧಿಯ ಮೂಲಕ ನಿಯಂತ್ರಣಕ್ಕೆ ತಂದರು. ಬಂಡವಾಳವಾದವು ರೈತರ ದೇಹವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ರೈತರು ಹೆಚ್ಚು ಉತ್ಪಾದನೆಯನ್ನು ಮಾಡುತ್ತದೆ ಎನ್ನುವುದು ಅದರ ಅರಿವಿಗೆ ಬಂದಿತು. ಸಮೂಹ ಜೀವನ ಮತ್ತು ಅದರ ಉತ್ಪಾದನೆಗೆ ವಿಭಿನ್ನವಾದ ಆಯಾಮವೂ ಇದೆ. ಇದರ ಹಿಂದೆ ಒತ್ತಡ ಮತ್ತು ನಿಯಂತ್ರಣವು ಕೆಲಸವನ್ನು ಮಾಡುತ್ತದೆ. ಬಂಡವಾಳವಾದವು ವ್ಯಕ್ತಿಗಳನ್ನು ಸಮೂಹವನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಬಳಸುತ್ತದೆ. ಅದು ವ್ಯಕ್ತಿಯನ್ನು ಮತ್ತು ಸಮೂಹವನ್ನು ಬೇರೆ ಮಾಡುತ್ತದೆ. ಅದರ ಜೊತೆಗೆ ವ್ಯಕ್ತಿಯನ್ನು ಪ್ರತ್ಯೇಕ ಮಾಡುವುದರಿಂದ ಅದರ ಅರ್ಥವೂ ಬೇರೆಯಾಗುತ್ತದೆ. ಒಂದು ಮಾತನ್ನು ಅವನು ಹೇಳುತ್ತಾನೆ: ಅದನ್ನು ಅವನು ಅತ್ಯಂತ ಸಂಕ್ಷಿಪ್ತ ಮಾಡಿದ್ದಾನೆ. ಪುಕೋ ಇದನ್ನು ಅನಟೆಮೋ ಪಾಲಿಟಿಕ್ಸ್ ಎಂದು ಹೇಳುತ್ತಾನೆ. ಇದೇ ಬಯೋಪಾಲಿಟಿಕ್ಸ್ ಜನಸಂಖ್ಯೆ ಮತ್ತು ಅದರ ನಿಯಂತ್ರಣಕ್ಕೂ ಮನಸ್ಸು ಮಾಡಿದೆ. ಈ ಮೂಲಕ ಅದು ದೇಹವನ್ನು ಒಂದು ಹೊಸದಾದ ವ್ಯವಸ್ಥೆಯಲ್ಲಿ ತಂದು ಇಡುತ್ತದೆ. ಅನಟೆಮೋ ಪಾಲಿಟಿಕ್ಸ್ ಅಂದರೆ ದೇಹ ಮತ್ತು ರಾಜಕಾರಣ. ದೈಹಿಕವಾದ ವ್ಯತ್ಯಾಸ ಮತ್ತು ಸಮಾಜದ ಸಂಬಂಧದ ನಡುವೆ ಪ್ರಭುತ್ವವು ಬರುತ್ತದೆ. ಒಂದು ಹಂತದಲ್ಲಿ ಲೈಂಗಿಕ ಸಂಬಂಧವೂ ಅಧಿಕಾರ ಮತ್ತು ಅದರ ಕೇಂದ್ರದ ಒಳಗೆ ಬರುತ್ತದೆ.

(ಪುಕೋ ಕೀ ಕಾನ್ಸೆಪ್ಟ್ಸ)

ಸಾಂಸ್ಕೃತಿಕ ಸಂಕರಗಳು ಮತ್ತು ಸ್ವಾತಂತ್ರ್ಯ

ನೀತಿಯು ನಮ್ಮನ್ನು ರೂಪಿಸುತ್ತದೆ ಎನ್ನುವುದನ್ನು ಈಗಾಗಲೆ ನೋಡಿದ್ದೇವೆ.,ಅದು ಅನೇಕ ಆಚರಣೆಗಳನ್ನು ಹುಟ್ಟುಹಾಕುತ್ತದೆ. ಆದರೆ ಪಶ್ಚಿಮವು ಧರ್ಮವನ್ನು ನೋಡುವ ಕ್ರಮಕ್ಕೂ ಪೂರ್ವ ದೇಶಗಳು ಧರ್ಮವನ್ನು ನೋಡುವ ಕ್ರಮಕ್ಕೂ ವ್ಯತ್ಯಾಸವಿದೆ. ಅದನ್ನು ಪರಿಶೀಲನೆ ಮಾಡುವಾಗ ಅನೇಕರು ಅದನ್ನು ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದರೆ ಫುಕೋ ಅದನ್ನು ಬಿಟ್ಟು ಮತ್ತೊಂದು ದೃಷ್ಟಿಕೋನದಿಂದ ಸಂಸ್ಕೃತಿ ಮತ್ತು ಧರ್ಮವನ್ನು ನೋಡಲು ಯತ್ನ ಮಾಡುತ್ತಾನೆ. ಈ ಕಾರಣದಿಂದ ಅವನು ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಗಳು ಬೇರೆ ಎಂದು ತಿಳಿಯುತ್ತಾನೆ. ಪಶ್ಚಿಮದ ಜನರು ಮತ್ತು ಅವರ ಸಾಂಸ್ಕೃತಿಕವಾದ ಅಭಿವ್ಯಕ್ತಿಗಳು ತುಂಬಾ ಅಂತಸ್ಥವಾಗಿರುತ್ತದೆ. ಇವುಗಳಲ್ಲಿ ನಿಜವಾದ ಸತ್ಯವು ಹೇಗೆ ಇದೆ ಎಂದು ನೋಡಬೇಕಾಗುತ್ತದೆ. ಇದರ ಚರ್ಚೆಯಲ್ಲಿ ಫುಕೋ ಪ್ರತಿ ಸಂಕಥನವನ್ನು ಹುಟ್ಟು ಹಾಕುತ್ತಾನೆ. ಪಶ್ಚಿಮ ಮತ್ತು ಅದರ ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ಅವನು ಒಬ್ಬ ಅಧ್ಯಾಪಕ ಅಥವಾ ಒಬ್ಬ ನೀತಿವಾದಿಯಂತೆ ನೋಡುತ್ತಾನೆ ಎನ್ನುವ ಆರೋಪವೂ ಇದೆ.ಆದರೆ ಯಾವುದೇ ಸಂದೇಹವು ಇಲ್ಲದೆ ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಯು ತನ್ನದೇ ತತ್ವಜ್ಞಾನಗಳನ್ನು ಹೊಂದಿವೆ, ಅದರಲ್ಲಿ ನೀತಿ,ಜೀವನ ಮತ್ತು ಅದರ ಬಗೆಗೆ ಇರುವ ದೃಷ್ಟಿಕೋನಗಳು ಬೇರೆಯಾಗಿವೆ. ಜೆನ್ ಬೌದ್ಧವಾದ ಮತ್ತು ಕ್ರಿಶ್ಚಿಯನ್ ತತ್ವಜ್ಞಾನವನ್ನು ಅವನು ತೌಲನಿಕವಾಗಿ ಗ್ರಹಿಸಿದ್ದಾನೆ. ಆದರೆ ಸಾಂಸ್ಕೃತಿಕವಾದ ಸಂಕರವು ನಡೆಯುತ್ತದೆ.

ಆಧುನಿಕ ರಾಷ್ಟ್ರ ಮತ್ತು ಅದರ ನಂಬಿಕೆಗಳು ಅತ್ಯಂತ ವಿಚಿತ್ರವಾಗಿದೆ. ರಾಷ್ಟ್ರಗಳು ಅತ್ಯಂತ ಹೆಚ್ಚು ಕುಪಿತರನ್ನು ನಿರ್ಮಾಣ ಮಾಡುತ್ತವೆ. ಅದ್ದರಿಂದ ಅದಕ್ಕೆ ಬೇಕಾದ ತರಬೇತಿಗಳನ್ನು ಕೂಡಾ ಕೊಡುತ್ತವೆ. ಮುಂದೆ ಒಂದು ದಿನ ಅನ್ಯ ರಾಷ್ಟ್ರದ ಅತಿಕ್ರಮಣವು ಆಗಬಹುದು

ಅಥವಾ ಮುಂದೆ ಒಂದು ದಿನ ಮೂರನೆಯ ಮಹಾಯುದ್ಧವು ಆಗಬಹುದು ಎಂದು ಈವತ್ತು ಅತ್ಯಂತ ಹೆಚ್ಚು ಮಿಲಿಟರಿಗಾಗಿ ದೇಶಗಳು ಹಣವನ್ನು ಸುರಿಯುತ್ತವೆ. ರಾಷ್ಟ್ರ ಮತ್ತು ಅದರ ಪ್ರಕಟಣೆಯು ಜರೂರು ಎಂದು ಬಿಂಬಿಸಲಾಗುತ್ತವೆ. ಮಿಲಿಟರಿ ಎನ್ನುವುದು ಒಂದು ದೇಶವನ್ನು ಉಳಿಸಿಕೊಳ್ಳುವ ಶಕ್ತಿ ಎಂದು ಭಾವಿಸಿಕೊಂಡದ್ದರ ಫಲವೂ ಅನೇಕವಾಗಿದೆ. ರಾಷ್ಟ್ರ ಎನ್ನುವುದೂ ನಮ್ಮನ್ನು ಅನೇಕ ಸಂದರ್ಭದಲ್ಲಿ ನಮ್ಮನ್ನು ಮೆನಿಪ್ಲೇಟ್ ಮಾಡುತ್ತದೆ ಎನ್ನುವುದು ಎಲ್ಲರಿಗೂ ಗೊತ್ತು. ಯಾರು ರಾಷ್ಟ್ರವನ್ನು ಪ್ರೀತಿಸುತ್ತಾರೆ ಅವರು ಮಾತ್ರವೇ ಆ ದೇಶದಲ್ಲಿ ಬದುಕುವ ಅಧಿಕಾರವನ್ನು ಹೊಂದುತ್ತಾರೆ. ಹಾಗೆ ನೋಡಿದರೆ ರಾಷ್ಟ್ರ ಮತ್ತು ಅದರ ನಾಗರಿಕತೆಯ ಪ್ರಶ್ನೆಯು ಅತ್ಯಂತ ಸಂಕೀರ್ಣವಾಗಿದೆ. ರಾಷ್ಟ್ರವು ನಮ್ಮನ್ನು ಹದಗೆಡಿಸುತ್ತದೆ. ಅದರಲ್ಲಿ ಈಗ ಒಂದು ರಕ್ತ ಮತ್ತು ಒಂದು ಬಂಧುತ್ವ ಎನ್ನುವುದು ಮುಖ್ಯವಾಗುತ್ತದೆ. ಒಂದು ಕಡೆಗೆ ನಾವು ಆಧುನಿಕೋತ್ತರವಾದ ಮತ್ತು ಜಾಗತಿಕ ಮಾರುಕಟ್ಟೆಯ ಪ್ರಶ್ನೆಯನ್ನು ತೆಗೆದುಕೊಂಡಿದ್ದೇವೆ. ಮತ್ತೆ ಮತ್ತೊಂದು ಕಡೆಗೆ ನಾವು ಮೂಲಭೂತವಾದವನ್ನು ಕುರಿತು ಹೇಳುತ್ತಿದ್ದೇವೆ. ಇದು ಚೋದ್ಯದ ಸಂಗತಿಯ ಹಾಗೆ ಕಾಣಿಸುತ್ತದೆ. ಆದ್ದರಿಂದ ಯಾವುದರಿಂದ ಯಾರು ಮುಕ್ತಿಯನ್ನು ಕಾಣುತ್ತಾರೆ ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ರಾಷ್ಟ್ರವೂ ನಮಗೆ ಒಂದು ಅಹಂಕಾರವೂ ಹೌದು. ಪ್ರಭುತ್ವವು ತನ್ನ ಯಜಮಾನಿಕೆಯನ್ನು ಸ್ಥಾಪಿಸಲು ಇದನ್ನು ಬಳಸಿಕೊಳ್ಳುತ್ತದೆ. ಅನೇಕ ಸಂದರ್ಭದಲ್ಲಿ ಯಾವುದೇ ಸರಕಾರಗಳು ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳಲು ಮಿಲಿಟರಿಯೆನ್ನುವುದನ್ನೂ ತರುತ್ತದೆ ಎನ್ನುವುದು ಎಲ್ಲರೂ ತಿಳಿದುಕೊಂಡಿರುವ ಅಂಶವಾಗಿದೆ. ಅದರ ದೃಷ್ಟಿಯಲ್ಲಿ ಜನರು ಮತ್ತು ಅವರ ಸಮೂಹವೆಂದರೆ ಅದಕ್ಕೆ ಬೇರೆ ಅರ್ಥವೂ ಇದೆ. ಅದು ಭಿನ್ನವಾದ್ದನ್ನು ಹೇಳುತ್ತದೆ. ಯಾವುದನ್ನು ನಾವು ರಾಷ್ಟ್ರವೆಂದು ಹೇಳುತ್ತೇವೆಯೋ ಅದಕ್ಕೆ ಅನೇಕ ಮಿತಿಗಳು ಇವೆ. ಅಧಿಕಾರ ಮತ್ತು ಸೀಮೆಗಳ ಪ್ರಶ್ನೆಯು ಅದಕ್ಕೆ ಅತ್ಯಂತ ಮಹತ್ವದ್ದು ಎನ್ನುವುದನ್ನು ನೆಗ್ರಿಯು ಹೇಳುತ್ತಾನೆ. (ಆಂಟನಿಯೋ ನೆಗ್ರಿ ರ್ಗ್ರ್ ಇನ್ಸರ್ಸಜೀಸ್ ಯುನಿರ್ವಸಿಟಿ ಮಿನನೆಸೊಟ ಪ್ರೆಸ್) ರಾಷ್ಟ್ರ ಮತ್ತು ಅದರ ಅಧಿಕಾರವು ಹೆಚ್ಚು ಸಾಂಸ್ಥಿಕವಾದಾಗ ಅದರ ಅರ್ಥವೂ ಬೇರೆಯಾಗುತ್ತದೆ. ಇದರ ಜತೆಗೆ ಈವತ್ತು ನಾವು ಅತ್ಯಂತ ಆಧುನಿಕವಾದ ಉತ್ಪಾದನೆಯನ್ನು ಕುರಿತು ಮಾತಾಡುತ್ತೇವೆ. ಫೋರ್ಡ್ ಮತ್ತು ಅದರ ಪರಂಪರೆಗೆ ಒಂದು ರೀತಿಯಲ್ಲಿ ಬುದ್ಧಿಜೀವಿಗಳು ಸೇರಿದರೋ ಆಗ ಅದರ ಸ್ವರೂಪವು ಬದಲಾಯಿತು. ಅದು ಸೀಮೆಯನ್ನು ದಾಟಿತು. ಅದರ ಅಂತರಾಷ್ಟ್ರೀಯ ಮಾರುಕಟ್ಟೆ ಮತ್ತು ಅದರ ವ್ಯವಸ್ಥೆಯು ಹೇಗೆ ಇದೆಯೆಂದರೆ ಅದರಲ್ಲಿ ಹೊಸದಾದ ಅನೇಕ ಪರಿಭಾಷೆಗಳು ಉಂಟಾದವು. ಅದನ್ನು ಡೆಮಾಗ್ರಾಫಿಕ್ ಎಂದು ಅವರೇ ಕರೆದುಕೊಂಡು ಮಾರುಕಟ್ಟೆಯನ್ನು ವಿಸ್ತಾರ ಮಾಡಿದವು. ಕೆಲವು ಲೇಖಕರು ಅದರ ವಕ್ತಾರರೂ ಆದರು. ಹೊಸದಾದ ಉತ್ಪಾದನೆಯಿಂದಾಗಿ ಹಳೆಯ ಮಾದರಿಗಳು ಪಲ್ಲಟವಾದನ್ನು ಗ್ರಾಂಶಿಯು ಗುರುತಿಸುತ್ತಾನೆ. ಹಳೆಯ ಚರಿತ್ರೆ ಮತ್ತು ಅದರ ಮಾದರಿಗಳು ಈಗ ಬೇಡವೆಂದು ಅನೇಕರು ವಾದಿಸಿದರು. ಮತ್ತು ಅವರ ಚಟುವಟಿಕೆಗಳು ಬದಲಾದವು ಎನ್ನುವುದೂ ಅತ್ಯಂತ ಸ್ಪಷ್ಟವಾಗಿದೆ. ಹಳೆಯ ಮಾದರಿಯ ಉತ್ಪಾದಕರು ಆಧುನಿಕ ಮಾದರಿಯ ಉತ್ಪಾದನೆಗೆ ಬೇಕಾಗಿರಲಿಲ್ಲ. ಆಧುನಿಕ ಬಂಡವಾಳವಾದವು ಅತ್ಯಂತ ಅನಾರೋಗ್ಯಕರವಾದ ದೃಷ್ಟಿಕೋನವನ್ನು ಹೊಂದಿದೆ. ನಗರ ಅದರ ಸ್ವರೂಪವು ಬದಲಾದ್ದಕ್ಕೂ

ಆಧುನಿಕವಾದ ನಮ್ಮ ಬುದ್ಧಿಜೀವಿಗಳಿಗೂ ಸಂಬಂಧವಿದೆ. ಇದನ್ನು ಹೀಗೆಯೂ ಹೇಳಬಹುದು : ದೈಹಿಕವಾದ ಕಾರ್ಮಿಕರಿಗೆ ಮಾನ್ಯತೆಯು ಕಡಿಮೆಯು ಆಯಿತು. ಹೊಸದಾದ ಕಾರ್ಮಿಕರು ಮತ್ತು ಅವರ ಚಹರೆಗಳು ಬೇರೆಯಾದವು. ಆಧುನಿಕ ಸಂದರ್ಭದಲ್ಲಿ ಇರುವ ಕಾರ್ಮಿಕರು ಮತ್ತು ಅವರ ದೇಹದ ಸ್ಥಿತಿಯು ಸಾಮಾನ್ಯವಾಗಿಲ್ಲ. ಬಹಳ ಕೊರತೆಗಳೂ ಇವೆ. ಸಣ್ಣ ರೈತರು ಮತ್ತು ಅವರ ಪರಿಸ್ಥಿತಿಯು ಚಿಂತಾಜನಕವಾಗಿದೆ. ಅವರು ಬೇರೆ ಕಡೆಗೆ ಕೆಲಸಕ್ಕೆ ಹೋದರೆ ಅವರ ಸಣ್ಣ ಹಿಡುವಳಿಯು ಹಳ್ಳ ಹಿಡಿಯುತ್ತದೆ. ಅವರ ಸರಕಿಗೆ ಸರಿಯಾದ ಬೆಲೆಯು ಇಲ್ಲ. ಈಗ ಮತ್ತೆ ಅದೇ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು : ಕನ್ನಡದ ಕವಿಗಳು ಒಂದು ಕಾಲ ಕ್ಕೆ ರಾಷ್ಟ್ರ ಮತ್ತು ಅದರ ಪ್ರಶ್ನೆಯನ್ನು ಹೇಗೆ ನೋಡಿದರು. ಮತ್ತು ನಾವು ಈಗ ರಾಷ್ಟ್ರ ಮತ್ತು ಅದರ ಪ್ರಶ್ನೆಯನ್ನು ಹೇಗೆ ನೋಡುತ್ತಿದ್ದೇವೆ.

ಪಶ್ಚಿಮದ ಸಂಪ್ರದಾಯದಲ್ಲಿ ಸ್ವಾತಂತ್ರ್ಯ ಮತ್ತು ಅದರ ಚರ್ಚೆಯು ಬಹಳ ಹಿಂದಿನಿಂದಲೂ ಇದೆ. ಅದಕ್ಕೆ ಒಂದು ಪರಂಪರೆಯು ಇದೆ. ಸ್ವತಂತ್ರನಾಗುವುದು ಅಂದರೆ ಎಲ್ಲಾ ರೀತಿಯ ಬಂಧನದಿಂದ ಬಿಡುಗಡೆ ಹೊಂದುವುದೂ ಹೌದು. ಆದ್ದರಿಂದ ಪಶ್ಚಿಮದ ಧರ್ಮ ಮತ್ತು ನೀತಿ ಶಾಸ್ತ್ರವು ಇದರ ಬಗ್ಗೆ ಹೆಚ್ಚು ಚರ್ಚೆಯನ್ನು ಮಾಡಿವೆ. ಪ್ರಾಚೀನವಾದ ಗ್ರೀಕ್ ಪರಂಪರೆಯು ಈ ಪ್ರಶ್ನೆಯನ್ನು ಎತ್ತಿಕೊಂಡಿದೆ. ನೀತಿಶಾಸ್ತ್ರದ ಚರಿತ್ರೆಗೆ ಮತ್ತು ಸ್ವಾತಂತ್ರ್ಯದ ಕಲ್ಪನೆಗೆ ಒಂದು ಸಂಬಂಧವು ಇದೆ. ಮಾನವೀಯತೆ, ಮನುಷ್ಯತ್ವ ಮತ್ತು ಸ್ವಾತಂತ್ರ್ಯ ಎನ್ನುವುದು ಗ್ರೀಕ್ ಪರಂಪರೆಯಲ್ಲಿ ಅತ್ಯಂತ ಮಹತ್ವದ ವಾಗ್ವಾದವೂ ಹೌದು. ಮನುಷ್ಯ ಎನ್ನುವ ಪ್ರಾಣಿಯು ಹೆಚ್ಚು ಸ್ವತಂತ್ರ ಮತ್ತು ಪ್ರಾಣಿಗಳು ಸ್ವತಂತ್ರ ವಲ್ಲ ಎನ್ನುವುದು ಅಲ್ಲಿ ಮುಖ್ಯವಾದ ಚರ್ಚೆಯನ್ನು ಹುಟ್ಟುಹಾಕಿತ್ತು. ಆದರೆ ಯಾವುದು ನಿಜವಾದ ಒಂದು ಸ್ವಾತಂತ್ರ್ಯ ಎನ್ನುವುದು ಇಲ್ಲಿ ಮುಖ್ಯ. ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇರುವ ನಿಜವಾದ ರೇಖೆಯು ಯಾವುದು ಎಂದು ಹೇಳುವುದು ಕಷ್ಟ. ನಮ್ಮ ಭಾವನೆಗಳು ಮತ್ತು ಸ್ವಾತಂತ್ರ್ಯಕ್ಕೆ ಯಾವ ಸಂಬಂಧವಿದೆ? ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇಷ್ಟೊಂದು ವ್ಯತ್ಯಾಸವು ಬರಲು ಕಾರಣವೇನು? ನಾವು ಸ್ವತಂತ್ರರಾಗಿದ್ದರೆ ನಮ್ಮನ್ನು ಯಾವುದು ನಿಯಂತ್ರಣ ಮಾಡುತ್ತದೆ? ಸ್ವಾತಂತ್ರ್ಯ ಮತ್ತು ದೇವರಿಗೆ ಯಾವ ಸಂಬಂಧವು ಇದೆ ಮುಂತಾದ ಪ್ರಶ್ನೆಗಳು ಆಗ ಇದ್ದು ಸತ್ಯ. ಈ ಪ್ರಶ್ನೆಗಳಿಗೆ ಒಂದು ಚಾರಿತ್ರಿಕವಾದ ಮಹತ್ವವು ಇದೆ. ಬೇರೆ ಬೇರೆ ಚಾರಿತ್ರಿಕ ಸನ್ನಿವೇಶದಲ್ಲಿ ಈ ಪ್ರಶ್ನೆಗಳು ಮತ್ತೆ ಮತ್ತೆ ಪುನರಾವರ್ತನೆಯಾಗಿರುವುದೂ ಈ ಪ್ರಶ್ನೆಗಳ ಮಹತ್ವವನ್ನು ಹೇಳುತ್ತವೆ. ಈ ಪ್ರಶ್ನೆಗಳ ಮತ್ತೊಂದು ರೂಪವನ್ನು ನಾವು ನೋಡಬೇಕು. ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಎನ್ನುವುದು ಇದ್ದರೆ ಕಪ್ಪು ಮನುಷ್ಯ ಮತ್ತು ಬಿಳಿಯ ಮನುಷ್ಯ ಎನ್ನುವ ಪ್ರಶ್ನೆಯು ಯಾಕೆ ಬಂತು ಎಂದು ಕೇಳಬೇಕಾಗುತ್ತದೆ. ಈ ತಾರತಮ್ಯವನ್ನು ದೇವರು ಸೃಷ್ಟಿಮಾಡಿಲ್ಲ. ಇದರ ಜೊತೆಗೆ ಯಾವ ನೀತಿ ಶಾಸ್ತ್ರವು ಕೆಲಸವನ್ನು ಮಾಡಿದೆ ಎಂದರೆ ಉತ್ತರವು ಅಷ್ಟು ಸುಲಭವಲ್ಲ. ಫುಕೋ ಈ ದೃಷ್ಟಿಯಿಂದಲೇ ಕೆಲವು ಪರಿಕಲ್ಪನೆಗಳನ್ನು ಚಾಲ್ತಿಗೆ ತಂದಿದ್ದಾನೆ. ಅವನು ಯಜಮಾನಿಕೆ, ಅಪರಾಧ, ಸ್ವಾತಂತ್ರ್ಯ, ಹಕ್ಕುಗಳ ಕುರಿತು ತನ್ನದೇ ಆದ ವಾದವನ್ನು ಮಂಡಿಸಿದ್ದಾನೆ. ಅವನ ಪ್ರಕಾರ ಸ್ವಾತಂತ್ರ್ಯ ಎನ್ನುವುದನ್ನು ಯಾರೂ ನಮಗೆ ಕೊಡುವುದಿಲ್ಲ. ಅದು ದಾನವೂ ಅಲ್ಲ. ಸ್ವಾತಂತ್ರ್ಯ ಎನ್ನುವುದು ನಮ್ಮ ಆಗುವ ಪ್ರಕ್ರಿಯೆಯಲ್ಲಿ ಒಂದು ಭಾಗ. ನಾವು ಜಗತ್ತಿನ ಜೊತೆಗೆ

ಯಾವ ಸಂಬಂಧವನ್ನು ಇಟ್ಟುಕೊಳ್ಳುತ್ತೇವೆ ಅದರಂತೆ ಸ್ವಾತಂತ್ರ್ಯವು ಇರುತ್ತದೆ. ಅದು ಸ್ವಂತಿಕೆ ಮತ್ತು ಅದರ ಚಟುವಟಿಕೆಯನ್ನು ಹೇಳುತ್ತದೆ. ಅದು ಹಿಂದಿನಿಂದ ಬಂದ ಒಂದು ಕ್ರಿಯೆ. ನಿಜವಾದ ಸ್ವಾತಂತ್ರ್ಯವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದರ ವಂಶಾವಳಿ ಚಿಹ್ನೆಗಳನ್ನು ಅರ್ಥ ಮಾಡಿಕೊಳ್ಳುವುದು. ನಮ್ಮ ವರ್ತಮಾನವನ್ನು ಈ ದೃಷ್ಟಿಯಲ್ಲಿ ನೋಡಬೇಕಾಗುತ್ತದೆ. ಅವನಲ್ಲಿ ಅದು ವಂಶಾವಳಿಯ ಪ್ರಶ್ನೆಯೂ ಹೌದು ಸ್ವಾತಂತ್ರ್ಯ ಮತ್ತು ಅದರ ಹಿಂದೆ ಇರುವ ಚರಿತ್ರೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕೆಂದು ಅವನು ಹೇಳುತ್ತಾನೆ. ವಾಸ್ತವವಾಗಿ ಸ್ವಾತಂತ್ರ್ಯ ಎನ್ನುವುದು ಪಶ್ಚಿಮದ ತತ್ವಜ್ಞಾನವನ್ನು ಗ್ರಹಿಸಲು ಬೇಕಾದ ಕೀಲಿ ಕೈ ಕೂಡಾ ಹೌದು. ಪುಕೋ ಸ್ವಾತಂತ್ರ್ಯವನ್ನು ಒಂದು ಬಗೆಯ ಧನಾತ್ಮಕವಾದ ಸ್ವಯಂಬಲ ಎಂದು ಕರೆಯುತ್ತಾನೆ. ವ್ಯಕ್ತಿಯು ಇದನ್ನು ಅನುಭವಿಸುತ್ತಾನೆ. ಆದರೆ ಅಧಿಕಾರವನ್ನು ಮೀರಿ ಅವನು ನಡೆಯಲಾರ. ಅವನ ಸ್ವಾತಂತ್ರ್ಯವನ್ನು ಅಧಿಕಾರವು ನಿಯಂತ್ರಣ ಮಾಡುವುದರಿಂದ ಸೀಮಿತವಾಗಿ ಮಾತ್ರವೇ ಸ್ವಾತಂತ್ರ್ಯವನ್ನು ಅನುಭವಿಸಬಲ್ಲ ಎಂದು ಪುಕೋ ಹೇಳುತ್ತಾನೆ.

ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಹೇಳುವಾಗ ಮೊದಲ ಚರ್ಚೆಯನ್ನು ಪ್ರಾರಂಭ ಮಾಡಿದವರಲ್ಲಿ ಸಾಕ್ರೆಟಿಸ್ ಕೂಡಾ ಒಬ್ಬ. ಅದನ್ನು ಫುಕೋ ಗಮನಿಸಿದ್ದಾನೆ ಅವನ ಅಭಿಪ್ರಾಯವು ಈ ದೃಷ್ಟಿಯಿಂದ ಬೇರೆಯಾಗಿದೆ. ಅವನು ಸಾಕ್ರೆಟಿಸ್ ತನ್ನ ಬರಹಗಳಲ್ಲಿ ತತ್ವಜ್ಞಾನ ಮತ್ತು ಜೀವನ ಕ್ರಮವು ಒಂದಾಗಿದೆ ಎಂದು ಹೇಳುತ್ತಾನೆ. ನಾವು ಯಾವುದನ್ನೂ ಪರಿಶೀಲನೆ ಮಾಡದೆ ಒಪ್ಪಿಕೊಳ್ಳುವುದು ಸರಿಯಲ್ಲ ಎನ್ನುವುದು ಅವನ ನಿಲುವು. ಸಾಕ್ರೆಟಿಸ್ ಯುವ ಜನರನ್ನು ಹಾದಿ ತಪ್ಪಿಸುತ್ತಾನೆ ಎನ್ನುವ ಅಪಾದನೆಯು ಇತ್ತು. ಆದರೂ ವ್ಯಕ್ತಿ ಮತ್ತು ಅವನ ಘನತೆ ಹಾಗೂ ಅವನ ಜ್ಞಾನ ಮತ್ತು ಧೈರ್ಯವನ್ನು ಕುರಿತು ಅವನು ಹೇಳುತ್ಥಾನೆ. ಜ್ಞಾನ ಮತ್ತು ವ್ಯಕ್ತಿಯ ಘನತೆ ಎನ್ನುವುದಕ್ಕೆ ವಿವಿಧ ಆಯಾಮಗಳೂ ಇರುತ್ತವೆ. ಅವನಿಗೆ ಜ್ಞಾನ ಮತ್ತು ಸಮಾಜ ಎನ್ನುವುದು ಬೇರೆ ಸೂಚನೆಗಳನ್ನು ಕೊಡುತ್ತವೆ. ಸ್ವಂತಿಕೆ ಮತ್ತು ಅದರ ಯಜಮಾನಿಕೆಯನ್ನು ಅವನು ಒಪ್ಪುತ್ತಾನೆ. ಅವನಲ್ಲಿ ಒಂದು ನೈತಿಕವಾದ ನಿಲುವು ಇದೆ. ಅದರ ಚೌಕಟ್ಟಿನಲ್ಲಿ ನಿಂತು ಕೊಂಡು ಜ್ಞಾನವನ್ನು ವಿಶ್ಲೇಷಣೆ ಮಾಡುತ್ತಾನೆ. ಪ್ಲೆಟೋನಿಗಿಂತ ಭಿನ್ನವಾದ ಒಂದು ನಿಲುವನ್ನು ಅವನು ಹೊಂದಿದ್ದಾನೆ. ಸಾಕ್ರೇಟಿಸ್ ಪ್ರಶ್ನೆಗಳನ್ನು ಎತ್ತುತ್ತಾನೆ. ಆದರೆ ಅನೇಕ ವಿಷಯಗಳ ಕುರಿತು ಒಂದು ಮೌನವನ್ನು ಹೊಂದುತ್ತಾನೆ. ವ್ಯಕ್ತಿ ಮತ್ತು ಅವನ ಘನತೆ ಎನ್ನುವುದು ಯಾವತ್ತೂ ಜ್ಞಾನ ಎನ್ನುವುದು ಅವನ ನಿಲುವು. ನನಗೆ ಏನೂ ಗೊತ್ತಿಲ್ಲ ಎನ್ನುವುದು ನನಗೆ ಗೊತ್ತಿದೆ ಎಂದು ಅವನು ಹೇಳುತ್ತಾನೆ. ವ್ಯಕ್ತಿ ಮತ್ತು ಅವನ ಘನತೆಯು ಹೇಗೆ ಇರುತ್ತದೆ ಎನ್ನುವುದನ್ನು ಅವನು ವಿವರಿಸುತ್ತಾನೆ. ಆಲೋಚನೆ, ಸಂವೇದನೆ, ತೀರ್ಪು ಅತ್ಯಂತ ಮುಖ್ಯ ಆದರೆ ಇನ್ನೊಂದು ವಿಚಾರದಲ್ಲಿ ಅವನು ಅತ್ಯಂತ ಮುಖ್ಯನಾಗಿದ್ದಾನೆ. ಅವನು ದ್ವಂದ್ವಾತ್ಮಕತೆ ಎನ್ನುವುದನ್ನು ಚಾಲ್ತಿಗೆ ತರುತ್ತಾನೆ. ಆತ್ಮ ಮತ್ತು ಅದರ ಶಕ್ತಿಯನ್ನು ಅವನು ಅವಲಂಬಿಸುತ್ತಾನೆ. ನಿಜವಾದ ವಿವೇಕಿಯಾದ ಮನುಷ್ಯನು ಈ ಜಗತ್ತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲ ಎನ್ನುವುದು ಅವನ ಮತ್ತೊಂದು ವಾದ. ಪ್ರಜಾಪ್ರಭುತ್ವ ಎನ್ನುವುದು ಕಾರ್ಯ ಸಾಧುವೇ ಎನ್ನುವುದು ಅವನ ಪ್ರಶ್ನೆ. ಆದ್ದರಿಂದ ಆತ್ಮದ ವಿಮರ್ಶೆ ಎನ್ನುವುದನ್ನು ಅವನು ವಿಶಿಷ್ಟವಾದ ಅರ್ಥದಲ್ಲಿ ಬಳಸಿದ್ದಾನೆ. ಪ್ರಜಾಪ್ರಭುತ್ವ ಎನ್ನುವುದನ್ನು ನಾವು ಇಂಗ್ಲೀಶಿನಲ್ಲಿ

ಡೆಮಾಕ್ರಸಿ ಎಂದು ಕರೆಯುತ್ತಾರೆ. ಡೆಮೋಸ್ ಅಂದರೆ ಜನರು ಎಂದು ಅರ್ಥ. ಅಗೊಗಸ್ ಅಂದರೆ ನೇತೃತ್ವವನ್ನು ವಹಿಸಿಕೊಳ್ಳುವುದು. ಇದು ಗ್ರೀಕ್ ಬಾಷೆಯಲ್ಲಿ ಚಾಲ್ತಿಯಲ್ಲಿ ಇತ್ತು. ಆದರೆ ಅದು ಅಥೆನ್ಸ್ ನಗರದಲ್ಲಿ ಕೆಟ್ಟ ಅನುಭವವನ್ನು ಕೊಟ್ಟಿತ್ತು. ಆದ್ದರಿಂದ ಸಾಕ್ರೇಟಿಸ್ ಪ್ರಜಾಪ್ರಭುತ್ವವನ್ನು ವಿರೋಧಿಸಿದ್ದ. ಆದರೆ ಸಾಕ್ರೆಟಿಸ್ ನೈತಿಕತೆ ಮತ್ತು ಜ್ಞಾನವನ್ನು ಸಮೀಕರಿಸಿದ್ದು ಫುಕೋನ ಗಮನದಲ್ಲಿ ಇದೆ. ಯಾವುದು ಸರಿಯೆಂದು ನಾವು ತಿಳಿದುಕೊಂಡರೆ ಆಗ ಅಪಾಯವಿಲ್ಲ. ಆದರೆ ಯಾವಾಗ ನಾವು ತಪ್ಪು ನಂಬಿಕೆ ತಪ್ಪು ಫಲಿತಾಂಶಕ್ಕೆ ಕಾರಣವಾಗುತ್ತದೆ. ಗ್ರೀಕ್‌ನಲ್ಲಿ ಎಡುಯ್ಯೆಮೊನಿಯಾ ಎಂದು ಹೇಳುತ್ತಾರೆ. ಯಾರಿಗೆ ನಿಜವಾದ ಅರಿವು ಇದೆಯೋ ಅವರು ತಪ್ಪು ಆಯ್ಕೆಯನ್ನು ಮಾಡಲಾರರು. ಅಜ್ಞಾನ ಎನ್ನುವುದು ನಿಜವಾದ ಅರ್ಥದಲ್ಲಿ ಒಂದು ನೈತಿಕ ಅದಃಪತನ. ಇದನ್ನು ಫುಕೋ ತನ್ನ ವಾದದದಲ್ಲಿ ಮುಂದುವರಿಸುತ್ತಾನೆ. ಅವನ ಹಿಸ್ಟ್ರಿ ಆಫ್ ಸೆಕ್ಸುವಲಿಟಿಯಲ್ಲಿ ಇದರ ಚರ್ಚೆಯನ್ನು ನಾವು ಕಾಣುತ್ತೇವೆ. ಸಾಕ್ರೆಟಿಸ್ ಬಾಳುವ ತಂತ್ರಗಾರಿಕೆಯನ್ನು ಹೇಳುತ್ತಾನೆ.. (ತೆಕ್ನೆ ತೌಬಿವೌ) ಇದು ಮುಂದುವರಿದು ಸ್ವಂತಿಕೆ ಮತ್ತು ಅದರ ರಕ್ಷಣೆಯ ಕಡೆಗೆ ಹೋಗುತ್ತದೆ. ಸಾಕ್ರೆಟಿಸ್ ಜೀವನ ಮತ್ತು ಅದರ ಕಲೆ ಎನ್ನುವುದು ಮತ್ತೊಂದು ಅರ್ಥದಲ್ಲಿ ಆತ್ಮವನ್ನು ರಕ್ಷಿಸುವ ಒಂದು ವಿಧಾನವೂ ಹೌದು. ಅವನಲ್ಲಿ ಆತ್ಮ ರಕ್ಷಣೆ ಎನ್ನುವುದು ಕೂಡಾ ಒಂದು ಬಗೆಯ ಜ್ಞಾನ,.ಮತ್ತೊಂದು ಕಡೆಯಿಂದ ಅದು ತನ್ನನ್ನು ತಾನು ನಿಯಂತ್ರಿಸಿಕೊಳ್ಳುವ ವಿಧಾನ. ತನ್ನ ಅರಿವು ಮತ್ತು ತನ್ನ ತಿಳುವಳಿಕೆ ಎನ್ನುವುದಕ್ಕೆ ಸಾಕ್ರೆಟಿಸ್‌ನಲ್ಲಿ ವಿಶೇಷವಾದ ಅರ್ಥವಿದೆ. ಆತ್ಮ ರಕ್ಷಣೆ ಎನ್ನುವುದು ಕೂಡಾ ಆತ್ಮರತಿಯನ್ನು ಹೇಳಬಹುದು. ಅದನ್ನು ಪುಕೋ ವಿವರಿಸುತ್ತಾನೆ. ಆತ್ಮ ರಕ್ಷಣೆ ಅಥವಾ ಆತ್ಮರತಿಯು ಹೆಚ್ಚು ಮುಂದುವರಿದರೆ ಅದು ಇನ್ನೊಬ್ಬರನ್ನು ಆಳುವುದಕ್ಕೆ ಅವಕಾಶವನ್ನು ಕಲ್ಪಿಸಬಹುದು.

ಫುಕೋ ಸತ್ಯ ಮತ್ತು ಸ್ವಯಂ ಅಸ್ತಿತ್ವಗಳ ನಡುವೆ ಒಂದು ಸಂಬಂಧವನ್ನು ಕಲ್ಪಿಸುತ್ತಾನೆ. ಸತ್ಯವನ್ನು ಹೇಳುವುದು ಅಂದರೆ ಅದು ತನಗೂ ಹೌದು, ಅನ್ಯರಿಗೂ ಹೌದು. ತನ್ನ ಅಸ್ತಿತ್ವದಲ್ಲಿ ಹೇಗೆ ಸತ್ಯವು ಮುಖ್ಯವಾಗುತ್ತದೆಯೋ ಅದೇ ರೀತಿಯಲ್ಲಿ ಅದೇ ಅನ್ಯರಿಗೂ ಮುಖ್ಯವಾಗುತ್ತದೆ. ಸಾಕ್ರೆಟಿಸ್ ಹೇಳಿದ ವಿಚಾರಗಳನ್ನು ಫುಕೋ ಇಲ್ಲಿಗೆ ಅನ್ವಯವನ್ನು ಮಾಡುತ್ತಾನೆ. ಸಾಕ್ರೆಟಿಸ್ ಕೊನೆಯ ದಿನಗಳಲ್ಲಿ ಪ್ರಸ್ತಾವಿಸಿದ ಸಂಗತಿಗಳು ಇಲ್ಲಿ ಮುಖ್ಯವಾಗುತ್ತದೆ ಎಂದು ಫುಕೋ ಭಾವಿಸುತ್ತಾನೆ. ಸತ್ಯ ಮತ್ತು ಅದರ ನಿರೂಪಣೆಯಲ್ಲಿ ನಮಗೆ ಬೇಕಾಗಿರುವುದು ಮೊದಲನೆಯದಾಗಿ ಒಂದು ಧೈರ್ಯ. ಸಾಕ್ರೆಟಿಸ್ ಹೇಳಿದ ಪರೆಶೀಯಾವನ್ನು ಫುಕೋವನ್ನು ಈ ರೀತಿಯಲ್ಲಿ ಅನುವಾದವನ್ನು ಮಾಡಿದ್ದಾನೆ.: ಮುಕ್ತತೆ, ಸತ್ಯ ಮತ್ತು ಮುಕ್ಕಾಗದ ಮಾತು (ಕಪಟದ ಮಾತು) ವಾಸ್ತವವಾಗಿ 'ಪ್ಲೇಟೋ ಮತ್ತು ಸಾಕ್ರೆಟಿಸ್ ನಡುವೆ ಒಂದು ಮಾತುಕತೆಯು ನಡೆದಿತ್ತು. ಆಗ ಈ ಮಾತುಗಳು ಬಂದಿದ್ದವು. ಸಾಕ್ರೆಟಿಸ್ ದೇವರು ಮತ್ತು ಮಾನವ ಅಧಿಕಾರವನ್ನು – ಅದು ಕಾನೂನು ಬದ್ಧವಾಗಿರುವಾಗ ಪಾಲಿಸಬೇಕು ಎಂದು ಬಯಸುತ್ತಾನೆ. ಅಪಾಲಜಿಯಲ್ಲಿ ಬರುವ ಒಂದು ಮಾತನ್ನು ಸಾಕ್ರೆಟಿಸ್ ಫುಕೋ ಮತ್ತೆ ಹೇಳುತ್ತಾನೆ. ನಾವು ನಮ್ಮನ್ನು ಪರೀಕ್ಷೆ ಮಾಡದ ಹೊರತು ಜೀವಿಸಲು ಅರ್ಹರಲ್ಲ. ಹಾಗೆ ನೋಡಿದರೆ ಅಥೆನ್ಸ್ ಮತ್ತು ಅಲ್ಲಿಯ ರಾಜಕಾರಣಗಳ ಸ್ವರೂಪಗಳು ಬೇರೆ ಇದ್ದವು. ಅದನ್ನು ನಾವು ಗ್ರೀಕ್ ರಂಗಭೂಮಿಯಲ್ಲಿಯೂ ಕಾಣುತ್ತೇವೆ.

ಅದು ಮತ್ತೊಂದು ಪ್ರಶ್ನೆ. ಪ್ಲೇಟೋ ಇದನ್ನು ಗಮನಿಸಿಕೊಂಡೇ ದಿ ಅಫಾಲಜಿ ಆಫ್ ಸಾಕ್ರೆಟಿಸ್ ಬರೆದ. ಆದರೆ ಫುಕೋ ಕೆಲವು ವಿಚಾರಗಳಲ್ಲಿ ಸಾಕ್ರೆಟಿಸ್ ಹೇಳುವ ಕೆಲವು ಚರ್ಚೆಯನ್ನು ಒಪ್ಪುತ್ತಾನೆ. ಆತ್ಮ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನ ಪರಿಶಿಯಾದ ಮಾತುಗಳನ್ನು ಒಪ್ಪುತ್ತಾನೆ. ಮುಕ್ತತೆ ಮತ್ತು ಯಾವುದೇ ಭಯವು ಇಲ್ಲದೆ ಮಾತಾಡುವುದು ಅತ್ಯಂತ ಮುಖ್ಯ. ಫುಕೋ ಎಪೆಕ್ಟಿಸ್‌ನ ಚರ್ಚೆಯನ್ನು ಬಳಸುತ್ತಾನೆ. ಯಾವುದೇ ಒಂದು ವಸ್ತುವು ತನ್ನಿಂದ ತಾನೇ ನಮ್ಮನ್ನು ಕಾಡುವುದಿಲ್ಲ. ನಮ್ಮ ನೋಟವು ಯಾವುದು ಇದೆಯೋ ಅದು ನಮ್ಮನ್ನು ಕಾಡುತ್ತದೆ ಎನ್ನುವುದು ಅವನ ವಾದ. ಫುಕೋ ಇದನ್ನು ಗಮನಿಸಿಕೊಂಡು ಹಾಗೆ ನೋಡಿದರೆ ತನ್ನ ಸ್ವಂತಿಕೆಯನ್ನು ರಕ್ಷಿಸಿಕೊಳ್ಳುವುದು ಅತ್ಯಂತ ಕಷ್ಟ. ಇದನ್ನೇ ಫುಕೋ ಹೇಳುತ್ತಾನೆ. ಆತ್ಮ ಮತ್ತು ಅದರ ರಕ್ಷಣೆ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಅವನು ಹೇಳುತ್ತಾನೆ.

ಅಗಸ್ಟಿನ್. ಮೊದಲ ಕ್ರಿಶ್ಚಿಯನ್ ತತ್ವಶಾಸ್ತ್ರಜ್ಞಾನ ಎನ್ನುವ ಹೆಸರಿಗೆ ಪಾತ್ರನಾಗಿದ್ದಾನೆ. ಅವನ ಅತ್ಯಂತ ಮಹತ್ವದ ಕೃತಿಗಳೆಂದರೆ ದ ಸಿಟಿ ಆಫ್ ಗಾಡ್, ಓನ್ ಪ್ರೀ ಚಾಯಿಸ್ ಆಫ್ ದ ವಿಲ್, ಕನ್ಸರಿಂಗ್ ದ ನೇಚರ್ ಆಫ್ ಗಾಡ್. ಅವನ ಅತ್ಯಂತ ಮುಖ್ಯವಾದ ನಿಲುವು ಹೀಗೆ ಇದೆ: ದೇವರೇ ಕೆಲವು ವಿಷಯಗಳಲ್ಲಿ ನಮಗೆ ನ್ಯಾಯವನ್ನು ಕೊಡುತ್ತಾನೆ.ಅವನಲ್ಲಿ ಥಿಯೋ ಅಂದರೆ ದೇವರು. ಡೈಕೆ ಅಂದರೆ ನ್ಯಾಯ ಇದು ಅವನ ಅತ್ಯಂತ ಮುಖ್ಯವಾದ ಪರಿಕಲ್ಪನೆ. ಅದರ ಮೂಲಕ ಅವನು ಒಂದು ಪ್ರಮೇಯವನ್ನು ರೂಪಿಸುತ್ತಾನೆ. ಅವನು ಮತ್ತೊಂದು ಮಹತ್ವದ ವಿಚಾರವನ್ನು ನಮ್ಮ ಮುಂದೆ ಇಡುತ್ತಾನೆ. ಕೇಡು ಮತ್ತು ಒಳ್ಳೆಯತನ ಎನ್ನುವುದು ಮನುಷ್ಯರಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಜಗತ್ತಿನಲ್ಲಿ ನಾವು ಕೇಡು ಎನ್ನುವುದು ಇಲ್ಲವೇ ಇಲ್ಲ ಎಂದು ವಾದಿಸಲು ಬರುವುದಿಲ್ಲ. ಕೇಡು ಎನ್ನುವುದು ಯಾವತ್ತೂ ನಮಗೆ ಕಣ್ಣಿಗೆ ಕಾಣಿಸುವ ಸಂಗತಿಯು ಅಲ್ಲ. ಅದರಲ್ಲಿ ಬೇರೆ ಬೇರೆ ಅಂಶಗಳೂ ಇರುತ್ತವೆ. ಕೇಡು ಎನ್ನುವುದು ಹುಟ್ಟುವುದೇ ಮನುಷ್ಯ ಮತ್ತು ಅವನ ಅಸ್ತಿತ್ವದಲ್ಲಿ ಎನ್ನುವುದನ್ನು ಗಮನಿಸಬೇಕು ಎಂದು ಅವನು ಹೇಳುತ್ತಾನೆ. ನಮಗೆ ನಮ್ಮ ಬಯಕೆಯನ್ನು ಗೆಲ್ಲಲು ಸಾಧ್ಯವಾದರೆ ಆಗ ಅಲ್ಲಿ ಕೇಡು ಇರುವುದೂ ಇಲ್ಲ. ಇದನ್ನು ಹೇಳುವಾಗಲೇ ಅವನು ನಮಗೆ ಶ್ರೇಷ್ಠ ಎಂದು ಅನಿಸುತ್ತದೆ ಹಾಗೂ ಯಾವುದು ಕೇಡು ಎನ್ನುವುದು ಸೃಷ್ಟಿಯಾಗುವುದು ನಮ್ಮ ಮನಸ್ಸಿನಲ್ಲಿ ಎಂದು ಭಾವಿಸುತ್ತಾನೆ. ಆದರೂ ಅಗಸ್ಟಿನ್ ದೇಹ ಮತ್ತು ಮನಸ್ಸುಗಳ ದ್ವಂದ್ವವನ್ನು ಹೇಳುತ್ತಾನೆ. ಇದರ ಆಧಾರದ ಮೇಲೆ ಫುಕೋ ತನ್ನ ವಾದವನ್ನು ಮಂಡಿಸುತ್ತಾನೆ. ಕ್ರಿಶ್ಚಿಯಾನಿಟಿಯು ಒಮ್ಮೆ ಭೋಗ ಮತ್ತು ಬಯಕೆಗಳನ್ನು ದೂರವಿಟ್ಟಿತ್ತು. ದೇಹ ಮತ್ತು ಅದರ ಬಯಕೆಗಳನ್ನು ನಿಯಂತ್ರಣ ಮಾಡುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆಯೂ ಆಗಿತ್ತು. ದೇಹ ಅಥವಾ ಇಂದ್ರಿಯಗಳ ಆಸಕ್ತಿಯು ನಮ್ಮ ಜೀವನದ ಜೊತೆಗೆ ಇದೆ. ಅದನ್ನು ನಿಯಂತ್ರಣ ಮಾಡುವುದು ಅತ್ಯಂತ ಮುಖ್ಯವೆಂದು ಆಗ ಕ್ರಿಶ್ಚಿಯಾನಿಟಿಯು ನಂಬಿತ್ತು. ಬಯಕೆಗಳು, ಲೈಂಗಿಕ ಸಂಬಂಧಗಳು ಹಾಗೂ ಮದುವೆಗಳನ್ನು ಜೊತೆಗೆ ಸಮೀಕರಿಸಲಾಗಿದೆ. ಆದರೆ ವಿಷಯವು ಅಷ್ಟು ಸುಲಭ ಇಲ್ಲ ಎನ್ನುವುದನ್ನು ಫುಕೋ ತಿಳಿದುಕೊಂಡಿದ್ದಾನೆ. ಆದ್ದರಿಂದ ಅವನು ಕಾಮ ಎನ್ನುವುದು ಒಂದು ಅಪರಾಧವೇ ಎಂದು ಕೇಳುತ್ತಾನೆ. ಒಂದು ರೀತಿಯಿಂದ

ಮದುವೆ ಮತ್ತು ಗಂಡು ಹೆಣ್ಣಿನ ಸಂಯೋಗವು ಬಯಕೆಯನ್ನು ಹೇಳುತ್ತದೆ. ಆಗಸ್ಟಿನ್ ಹೇಳಿದ ಮತ್ತೊಂದು ಪ್ರಮುಖವಾದ ಸಂಗತಿಯನ್ನು ಫುಕೋ ಎತ್ತಿಕೊಂಡಿದ್ದಾನೆ. ದೇವರಿಗೆ ಮತ್ತು ಮನುಷ್ಯರ ಬಯಕೆಗಳಿಗೆ ಒಂದು ಸಂಬಂಧವು ಇದೆ. ನಾವು ಅತ್ಯಂತ ಸಾಧಾರಣವಾದ ಅರ್ಥದಲ್ಲಿ ಹೇಳುವ ಇಂದ್ರಿಯದ ಬಯಕೆಯನ್ನು ಅಗಸ್ಟಿನ್ ದೇವರು ಮತ್ತು ಮನುಷ್ಯರ ಬಯಕೆಗಳ ನಡುವೆ ಇರುವ ಸಂಬಂಧ ಎನ್ನುವ ಅರ್ಥದಲ್ಲಿ ಬಳಸುತ್ತಾನೆ. ಆದರೆ ಸ್ವಂತ ಮತ್ತು ಅದರ ಸ್ವರೂಪವನ್ನು ಹೇಳುವಾಗ ಫುಕೋ ಅದನ್ನು ಸ್ವಂತಿಕೆ ಮತ್ತು ಅದರ ತಂತ್ರಗಾರಿಕೆ ಎಂದು ಹೇಳುತ್ತಾನೆ. ಇದೇ ಸ್ವಂತಿಕೆ ಎನ್ನುವುದು ನಮ್ಮ ಬರಹಗಳಲ್ಲಿ ಕಂಡು ಬರುತ್ತದೆ. ಸಾಹಿತ್ಯದಲ್ಲಿ ಅನೇಕ ಪುನರುತ್ಥಾನವಾದಿಗಳು ಮತ್ತು ರೊಮಾಂಟಿಕ್‌ವಾದಿಗಳು ಸ್ವಂತಿಕೆ ಮತ್ತು ಅದರ ಅಭಿವ್ಯಕ್ತಿಯನ್ನು ಹೇಳಿದರು. ಅವರ ವಾದಗಳಿಗೆ ಅತ್ಯಂತ ದೊಡ್ಡ ಇತಿಹಾಸವಿದೆ ಎಂದು ಫುಕೋ ಭಾವಿಸುತ್ತಾನೆ. ಪಶ್ಚಿಮದ ಪರಂಪರೆಯಲ್ಲಿ ಅದು ಬಂದಿದೆ ಎನ್ನುವುದು ಅವನ ವಾದ. ಇದರ ಒಂದು ಮೂಲವನ್ನು ನಾವು ಅಗಸ್ಟಿನ್ ತತ್ವಜ್ಞಾನದಲ್ಲಿ ಕಾಣಬಹುದು. ಗ್ರೀಕ್ ಪರಂಪರೆಯಲ್ಲಿ ದಿನಚರಿಯನ್ನು ಬರೆಯುವುದು ಹೇಗೆ ಪ್ರಾರಂಭವಾಯಿತು ಮತ್ತು ಅದರ ಪರಿಣಾಮವು ಏನು ಎಂದು ಫುಕೋ ಪರಿಶೀಲನೆ ಮಾಡುತ್ತಾನೆ. ನಾವು ಹೇಳುವುದಕ್ಕೆ ಬರಹವೂ ಒಂದು ಪರಿಕರವಾಗಿದೆ. ಬರಹ ಎನ್ನುವುದು ನಮಗೆ ಒಂದು ಬಗೆಯಲ್ಲಿ ಸಂಶೋಧನೆಯು ಕೂಡಾ ಹೌದು. ಜ್ಞಾನ ಮತ್ತು ಅದರ ಪರಿವರ್ತನೆ ಹಾಗೂ ಅದರ ಮೂಲಕ ನಾವು ನಡೆಸುವ ಸಂಕಥನಗಳನ್ನು ಸೂಚಿಸಲು ನಮಗೆ ಬರಹ ಅಗತ್ಯವಿದೆ. ದಿನಚರಿ ಎನ್ನುವುದು ನಮ್ಮ ವೈಯಕ್ತಿಕವಾದ ಸಂಗತಿಯೂ ಹೌದು. ಆದರೆ ಅದರಲ್ಲಿಯೂ ನಮ್ಮ ಜ್ಞಾನವು ಅಸ್ತಿತ್ವವನ್ನು ಪಡೆದಿರುತ್ತದೆ.ಖಾಸಗಿಯಾದ ಬರಹಗಳು ನಮಗೆ ಜ್ಞಾನವನ್ನು ಸೂಚಿಸಲು ಇರುವ ಸಾಧ್ಯತೆಯೂ ಹೌದು. ಜ್ಞಾನವನ್ನು ನಾವು ನಮ್ಮ ಬರಹಗಳನ್ನು ರೂಪಿಸಲು ನಮ್ಮ ಜ್ಞಾನವೇ ಆಧಾರವಾಗಿರುತ್ತದೆ. ನಾವು ನಮ್ಮ ಜ್ಞಾನವನ್ನು ಇನ್ನೊಬ್ಬರಿಗೆ ವರ್ಗಾಯಿಸಬಹುದು. ಗ್ರೀಕ್ ಭಾಷೆಯಲ್ಲಿ ಒಂದು ಪದವು ಚಾಲ್ತಿಯಲ್ಲಿ ಇತ್ತು. ಅದನ್ನು ಎಥ್ನೋಪೊಯಿಸ ಎಂದು ಹೇಳುತ್ತಿದ್ದರು. ಅದರ ಅರ್ಥವು ಸ್ಪಷ್ಟ. ಜ್ಞಾನ ಎನ್ನುವುದು ನಮಗೆ ನಿರ್ಣಾಯಕ. ಅದು ಪರಿವರ್ತನಶೀಲವೂ ಹೌದು. ಆದ್ದರಿಂದ ಜ್ಞಾನವನ್ನು ನಾವು ಉತ್ಪಾದಿಸುತ್ತೇವೆ. ಅದನ್ನು ನಾವು ಬೇರೆಯವರಿಗೆ ಕೊಡುತ್ತೇವೆ. ಹಾಗಿದ್ದಾಗ ಅದನ್ನು ಇನ್ನೊಬ್ಬರಿಗೆ ಹೇಳಿಕೊಳ್ಳುವುದು ಹೇಗೆ ? ಅದಕ್ಕಿರುವ ದಾರಿ ಎಂದರೆ ಅದು ಬರಹ. ಯಾವುದನ್ನು ನಾವು ಖಾಸಗಿಯಾದ ಬರಹ ಎಂದು ಹೇಳುತ್ತೇವೆಯೋ ಈ ಎಥ್ನೋ ಪೊಯೆಟಿಕ್ ಜ್ಞಾನವನ್ನು ಹೇಳುತ್ತದೆ. ಬರಹದಲ್ಲಿ ಅದು ಇನ್ನೊಬ್ಬರಿಗೆ ತಲುಪುತ್ತದೆ. ಬರೆಯುವುದು ಅಂದರೆ ಅದು ನಮ್ಮ ಸ್ವಾತಂತ್ರ್ಯವೂ ಹೌದು.

ಒಂದು ಅರ್ಥದಲ್ಲಿ ಆಧುನಿಕ ತತ್ವಜ್ಞಾನವು ಕಾಂಟ್‌ನಿಂದ ಪ್ರಾರಂಭವಾಗುತ್ತದೆ. ಅವನ ಕಾರಣವಾದವು ಅತ್ಯಂತ ಪ್ರಮುಖವಾದ ಪ್ರಶ್ನೆಗಳನ್ನು ಎತ್ತಿಕೊಂಡಿತ್ತು. ಅದರ ಜೊತೆಗೆ ಅವನು ನೈತಿಕತೆ ಮತ್ತು ಅದರ ಪರಿಣಾಮಗಳನ್ನು ಹೇಳುತ್ತಾನೆ. ವಾಸ್ತವವಾಗಿ ನಾವು ಅನೇಕರು ನೈತಿಕತೆ ಮತ್ತು ಅದರ ಸ್ವರೂಪವನ್ನು ಅವಲಂಬಿಸಿಕೊಂಡು ನೈತಿಕತೆಯನ್ನು ತೀರ್ಮಾನ ಮಾಡುತ್ತೇವೆ. ಎಲ್ಲವೂ ಈ ಜಗತ್ತಿನಲ್ಲಿ ಇದೆ. ಈ ಜಗತ್ತಿನಿಂದ ಹೊರತಾಗಿ ಯಾವುದೂ ಇರುವುದಿಲ್ಲ.

ನಮಗೆ ಅತ್ಯಂತ ಒಳ್ಳೆಯ ಗುಣವು ಇದ್ದಾರೆ ನಾವು ಒಳ್ಳೆಯದನ್ನು ಸಾಧಿಸುತ್ತೇವೆ. ನಮಗೆ ಬೇಕಾದ್ದು ಒಳ್ಳೆಯ ಉದ್ದೇಶವೆಂದು ಕಾಂಟ್ ಹೇಳುತ್ತಾನೆ. ನಮಗೆ ಯಾವ ಬಗೆಯ ನೈತಿಕತೆಯು ಇರುತ್ತದೆಯೋ ಅದಕ್ಕೆ ಅನುಸಾರವಾಗಿ ನಾವು ಜೀವಿಸಿಕೊಳ್ಳುತ್ತೇವೆ. ಯಾವುದು ನಿಜವಾದ ಒಂದು ಒಳ್ಳೆಯತನ ಎಂದು ಹೇಳುತ್ತೇವೆಯೋ ಯಾವತ್ತೂ ಕೆಡುಕು ಆಗಿರುವುದಿಲ್ಲ. ಅದರ ಜೊತೆಗೆ ಅದು ನಮಗೆ ವಿಶ್ವಾತ್ಮಕವಾಗಿರುತ್ತದೆ. ಅಷ್ಟೇ ಅಲ್ಲ ಅದು ನೈತಿಕವೂ ಆಗಿರುತ್ತದೆ. ಅದರ ಜೊತೆಗೆ ಕಾಂಟ್ ಇನ್ನೊಂದು ಮುಖ್ಯವಾದ ಅಂಶವನ್ನು ನಮ್ಮ ಮುಂದೆ ಇಡುತ್ತಾನೆ. ಯಾವುದು ಪುನರುಜ್ಜೀವನ ಎನ್ನುವುದು ಅವನ ಪ್ರಶ್ನೆಯೂ ಹೌದು. ಕಾರಣಗಳು, ಪುನರುಜ್ಜೀವನ ಮತ್ತು ವಿಶ್ವಾತ್ಮಕತೆಗೆ ಒಂದು ಸಂಬಂಧವು ಇದೆ. ಅದರ ಜೊತೆಗೆ ಕಾರಣಗಳು ಮತ್ತು ಸ್ವಾತಂತ್ರ್ಯದ ಸಂಬಂಧವನ್ನು ಕಾಂಟ್ ಹೇಳುತ್ತಾನೆ. ಸ್ವಾತಂತ್ರ್ಯ ಎನ್ನುವುದು ಹೇಗೆ ಹಿಂದಿನಿಂದಲೂ ಬಂದಿದೆ ಮತ್ತು ಅದಕ್ಕೂ ಒಂದು ಇತಿಹಾಸವು ಇದೆ ಎಂದು ಕಾಂಟ್ ಚರ್ಚೆಯನ್ನು ಮಾಡುತ್ತಾನೆ. ಆದರೆ ಫುಕೋ ಸ್ವಾತಂತ್ರ್ಯ ಎನ್ನುವುದು ನಮಗೆ ಅಭ್ಯಾಸವಾಗಿ ಬಂದಿಲ್ಲ ಎಂದು ಹೇಳುತ್ತಾನೆ.

ಹಾಗೆ ನೋಡಿದರೆ ನಮಗೆ ಸ್ವಾತಂತ್ರ್ಯ ಎನ್ನುವುದು ಬಂದರೂ ಅದರ ಸ್ವರೂಪವನ್ನು ಅಧಿಕಾರದ ಕೇಂದ್ರಗಳು ಯಾವ ರೀತಿಯಲ್ಲಿ ನಿರೂಪಣೆ ಮಾಡುತ್ತವೆ ಎಂದು ಫುಕೋ ಕೇಳುತ್ತಾನೆ. ಸ್ವಾತಂತ್ರ್ಯ ಎನ್ನುವುದು ಒಂದು ಅಲ್ಲ. ಅದರಲ್ಲಿ ಏಕತೆಯು ಇಲ್ಲ. ಅದರ ಜೊತೆಗೆ ಅದು ಸ್ಥಿರವಾದ ಒಂದು ರೂಪವನ್ನು ಹೊಂದಿರುವುದೂ ಇಲ್ಲ. ಎಲ್ಲಾ ಅಧಿಕಾರ ಕೇಂದ್ರಗಳು ಕೂಡಾ ತನಗೆ ಬೇಕಾದಂತೆ ಸ್ವಾತಂತ್ರ್ಯವನ್ನು ಬದಲಿಸುತ್ತವೆ. ಹೀಗೆ ಇರುವುದರಿಂದಲೇ ಸ್ವಾತಂತ್ರ್ಯ ಮತ್ತು ಸತ್ಯಗಳು ಸಂವಾದಿಯಾಗುತ್ತವೆ.

(ಗ್ರಾಂಶಿ ರೀಡರ್)

೬

ಪೌವೋಯಿರ್

ಪೌವೋಯಿರ್ ಎನ್ನುವುದು ಒಂದು ಪದ. ಅದನ್ನು ಫ್ರೆಂಚ್ ಭಾಷೆಯಲ್ಲಿ ಬಳಸುತ್ತಾರೆ. ಹಾಗೆ ಹೇಳಿದರೆ ನಾವು ಮಾಡಬಹುದು ಅಥವಾ ಮಾಡುವ ಒಂದು ಸಾಧ್ಯತೆಯು ಇದೆ ಎಂದು ಅರ್ಥ. ಆದರೆ ಆ ಸಾಧ್ಯತೆ ಎನ್ನುವುದು ಹೇಗೆ ಅಧಿಕಾರವನ್ನು ಹೇಳುತ್ತದೆ ಎಂದು ಅವನು ಸೂಚಿಸುತ್ತಾನೆ. ಅದರೆ ಮತ್ತೊಂದು ಅರ್ಥ ನಾವು ನಿಜವಾಗಿಯೂ ಕೆಲವನ್ನು ಮಾಡಲು ಸಾಧ್ಯವಾಗುತ್ತದೆ. ಸಾಧ್ಯ ಎನ್ನುವುದು ನಮಗೆ ಒಂದು ಅಧಿಕೃತತೆಯನ್ನು ಕೊಡುತ್ತದೆ ಎನ್ನುವುದೂ ನಿಜ. ಅವನು ಇದನ್ನು ಎರಡು ಅರ್ಥದಲ್ಲಿ ಬಳಸುತ್ತಾನೆ. ಒಂದು ಶಕ್ತಿ. ಮತ್ತೊಂದು ಸಾಧ್ಯತೆ. ಭಾಷೆಯಲ್ಲಿ ನಾವು ಪಡೆಯುವ ಸಾಧ್ಯತೆ ಮತ್ತು ಅದರಲ್ಲಿ ನಾವು ಅಧಿಕೃತವಾಗಿ ಪಡೆಯುವ ಶಕ್ತಿ. ಅದು ನಿಜವಾದ ಒಂದು ಅಧಿಕಾರ ಎನ್ನುವುದು ಅವನಿಗೆ ಗೊತ್ತಿದೆ. ಭಾಷೆ ಮತ್ತು ಜ್ಞಾನದಲ್ಲಿ ನಾವು ಪಡೆಯುವ ಶಕ್ತಿಯು ಅಪಾರವಾದ ಒಂದು ಸಾಧ್ಯತೆಯನ್ನು ಹೇಳುತ್ತದೆ. ಜ್ಞಾನ ಎನ್ನುವುದಕ್ಕೆ ಅತ್ಯಂತ ಅಪಾರವಾದ ಒಂದು ಶಕ್ತಿಯು ಇದೆ . ಅದನ್ನು ನಾವು ಒಂದು ಸೀಮಿತವಾದ ಗಡಿಯಲ್ಲಿ ನೋಡಲು ಆಗುವುದಿಲ್ಲ ಎಂದು ಎನ್ನುವುದು ಫುಕೋನ ಅತ್ಯಂತ ಮುಖ್ಯವಾದ ಒಂದು ನಿಲುವು. ಆದರೆ ಅವನು ಹಳೆಯ ರಾಜಪ್ರಭುತ್ವ ಮತ್ತು ಅದರ ಶಕ್ತಿ ಎನ್ನುವ ಅರ್ಥದಲ್ಲಿ ಬಳಸುವುದಿಲ್ಲ. ಅದರ ಮೂಲಕ ಅವನು ಇನ್ನೊಂದು ಅರ್ಥವನ್ನು ಕೊಡುತ್ತಾನೆ. ಅದರ ಬದಲು ವ್ಯಕ್ತಿಯು ಜ್ಞಾನವನ್ನು ಹೇಗೆ ಸಾಧಿಸುತ್ತಾನೆ ಮತ್ತು ಅದು ಹೇಗೆ ವ್ಯಕ್ತಿಗೆ ಮುಖ್ಯವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಸಾಧನೆ ಮತ್ತು ತನ್ನ ಸುತ್ತಣ ಪರಿಸರದಿಂದ ಅನೇಕವನ್ನು ಕಲಿಯುತ್ತಾನೆ. ಮನುಷ್ಯ ಮತ್ತು ಅವನ ಶಕ್ತಿಗೆ ವಿವಿಧ ಸಾಧ್ಯತೆಯು ಇರುತ್ತದೆ ಎನ್ನುವುದು ಇಲ್ಲಿ ಗಮನಾರ್ಹ. ವ್ಯಕ್ತಿ ಮತ್ತು ಅವನ ಜೀವನದ ಕ್ರಮದ ಮೇಲೆ ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಸಂಸ್ಥೆಗಳು ಪ್ರಭಾವವನ್ನು ಬೀರುತ್ತದೆ ಎನ್ನುವುದೂ ಅಷ್ಟೇ ನಿಜ. ಆದರೆ ಅದು ಅತ್ಯಂತ ಸುಲಭವಾಗಿ ರೂಪಾಂತರ ಮಾಡಬಹುದಾದ ಕ್ರಮವೂ ಅಲ್ಲ. ಯಾವುದೋ

ಸಂಗತಿಗಳು ಅತ್ಯಂತ ಸುಲಭವಾಗಿ ಮತ್ತೊಂದು ಕಡೆಗೆ ಹೋಗುವುದು ಸಾಧ್ಯವೇ ಇಲ್ಲ ಎನ್ನುವ ಅರ್ಥದಲ್ಲಿ ಸ್ಪಿವಾಕ್ ಹೇಳುತ್ತಾರೆ. ಅರ್ಥವಿಸಿಕೊಳ್ಳುವುದು ಎನ್ನುವುದು ಸ್ಪಿವಾಕ್ ಅವರಿಗೆ ಹೆಚ್ಚು ಮುಖ್ಯವಾಗುತ್ತದೆ. ಜ್ಞಾನ ಎನ್ನುವುದು ನಮಗೆ ಒಂದು ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಒಂದು ಪರಿಕರವೂ ಆಗಿರುತ್ತದೆ ಎನ್ನುವುದರಲ್ಲಿ ಹೆಚ್ಚು ಭಿನ್ನಾಭಿಪ್ರಾಯವಿಲ್ಲ. ಅದರ ಜೊತೆಗೆ ಜ್ಞಾನಕ್ಕೂ ಚರಿತ್ರೆಗೆ ಸಂಬಂಧವಿದೆ. ಆದ್ದರಿಂದ ನಾವು ಕೆಲವನ್ನು ಸಾಧ್ಯ ಮಾಡಬಹುದು. ಅದು ನಮಗೆ ಅತ್ಯಂತ ಅಗತ್ಯವೂ ಹೌದು. ಆದರೆ ಫುಕೋ ಇದನ್ನು ಹೇಳುವಾಗ ಜ್ಞಾನ ಮತ್ತು ಸತ್ಯಕ್ಕೆ ಇರುವ ಸಂಬಂಧವನ್ನು ಹೇಳುತ್ತಾನೆ. ಒಂದು ಅರ್ಥದಲ್ಲಿ ನಮಗೆ ಸತ್ಯವನ್ನು ಅರ್ಥಮಾಡಿಕೊಳ್ಳಲು ನಮಗೆ ನಿರ್ದಿಷ್ಟವಾದ ಜ್ಞಾನವೂ ಅಗತ್ಯ. ಅದರ ಜೊತೆಗೆ ವಿವಿಧ ಕಾಲದಲ್ಲಿ ಹೇಗೆ ವಿವಿಧ ರೀತಿಯ ಜ್ಞಾನವು ಕೆಲಸವನ್ನು ಮಾಡುತ್ತದೆ ಎಂದು ಫುಕೋ ವಾದಿಸುತ್ತಾನೆ. ವಿವಿಧ ಕಾಲದ ಪಠ್ಯಗಳು ವಿವಿಧ ಕಾಲದ ಜ್ಞಾನವನ್ನು ಸೂಚಿಸುತ್ತವೆ. ಜ್ಞಾನ ಎನ್ನುವುದು ಹೇಗೆ ಪ್ರಾತಿನಿಧಿಕವಾಗುತ್ತದೆ ಎಂದೂ ಆಲೋಚನೆ ಮಾಡುವುದು ಅತ್ಯಂತ ಅಗತ್ಯ ಎನ್ನುವುದು ಮಾತ್ರವೇ ಫುಕೋನ ನಿಲುವು ಆಗಿದೆ. ಅವನಲ್ಲಿ ಜ್ಞಾನ ಮತ್ತು ಅಧಿಕಾರ ಎನ್ನುವುದು ಅತ್ಯಂತ ಮುಖ್ಯವಾದ ಪರಿಕಲ್ಪನೆ ಹೌದು. ಸ್ವಾತಂತ್ರ್ಯ ಎನ್ನುವುದು ಒಂದು ಬಗೆಯ ಜವಾಬ್ದಾರಿಯೂ ಹೌದು. ಆದರೆ ಇದು ಆಧುನಿಕ ಯುಗದ ಉತ್ಪಾದನೆಯೂ ಹೌದು. ಅದರೆ ಅದು ಅತ್ಯಂತ ಅತಿರೇಕದ ಮಟ್ಟಿಗೆ ಹೋದರೆ ಸ್ವಾತಂತ್ರ್ಯವು ಅರಾಜಕತೆಯ ಕಡೆಗೆ ಹೋಗಬಹುದು ಎನ್ನುವುದು ಅವನ ನಿಲುವು ಕೂಡಾ ಹೌದು.,

ಡಿಸ್ ಪೊಸಿಟಿಫ್ (ಪರಿಕರಗಳು) ಎನ್ನುವುದನ್ನು ಫುಕೋ ಹೇಳುತ್ತಾನೆ ಪರಿಕರಗಳು ಎಂದು ಇದರ ಅರ್ಥ. ಇದನ್ನು ಅಧಿಕಾರವು ತನಗೆ ಬೇಕಾದ ಪರಿಕರವನ್ನು ಬಳಸುತ್ತದೆ. ಮತ್ತು ಅದರಲ್ಲಿ ಸಹಜತೆಯನ್ನು ನಿರ್ಧರಿಸುವ ರೂಪವೂ ಇರುತ್ತದೆ. ಸಮಾಜದಲ್ಲಿ ನಮ್ಮ ಜೊತೆಯಲ್ಲಿ ಇರುವವರ ಸಂಬಂಧವನ್ನು ಅದು ನಿರ್ಧರಿಸುತ್ತದೆ. ನಾವು ಯಾವ ಪಾತ್ರವನ್ನು ವಹಿಸಬೇಕು ಮತ್ತು ಹೇಗೆ ವರ್ತಿಸಬೇಕು ಯಾವುದನ್ನು ಅನುಸರಿಸಬೇಕು ಎನ್ನುವುದನ್ನು ಅಧಿಕಾರವೇ ನಿರ್ಧರಿಸುತ್ತದೆ. ಅಧಿಕಾರ ಮತ್ತು ಅದರ ನಿರ್ವಹಣೆಯನ್ನೂ ಈ ದೃಷ್ಟಿಯಿಂದ ಬೇರೆಯಾಗಿಯೂ ನೋಡಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಅಧಿಕಾರವು ಒಂದು ನಿರ್ಣಯವನ್ನು ಹೇಳುತ್ತದೆ. ನಿಯಮವನ್ನು ಹೇಳುತ್ತದೆ. ಮತ್ತು ಅದರಲ್ಲಿ ನಿರ್ಣಾಯಕವಾದ ತಾಂತ್ರಿಕತೆಯೂ ಇರುತ್ತದೆ. ನಾವು ಯಾರ ಮೇಲೆ ಹೇಗೆ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ ಎಂದು ಹೇಳುವುದೂ ಕೂಡಾ ಪ್ರಭುತ್ವವೇ. ಅನೇಕ ಸಂದರ್ಭದಲ್ಲಿ ಪ್ರಭುತ್ವದ ನಿಯಮಗಳು ಚಲನರಾಹಿತ್ಯವೂ ಆಗಿರುತ್ತದೆ. ಅದು ಕೆಲವು ಚಟುವಟಿಕೆಯನ್ನು ಮಾತ್ರವೇ ಹೇಳುತ್ತದೆ. ಮತ್ತೆ ಕೆಲವು ಸಂದರ್ಭದಲ್ಲಿ ಅಧಿಕಾರವು ಕೆಲವು ಚಟುವಟಿಕೆಯನ್ನು ಮಾತ್ರವೇ ಪ್ರೋತ್ಸಾಹಿಸುತ್ತದೆ. ಕೆಲವು ಅಧಿಕಾರವು ವಿವಿಧವಾದ ರೂಪದಲ್ಲಿ ಇರುತ್ತದೆ. ಅದು ಕೆಲವನ್ನು ರೂಪಿಸುತ್ತದೆ. ಶೈಕ್ಷಣಿಕವಾದ ಅನೇಕ ಸಂಗತಿಗಳನ್ನು ಹೇಳುವುದೂ ಇದೇ ಅಧಿಕಾರ. ಅದರಲ್ಲಿ ತಾರತಮ್ಯವು ಇರುತ್ತದೆ. ಯಾವುದನ್ನು ಅಧಿಕಾರವು ಶಿಸ್ತು ಎಂದು ಹೇಳುತ್ತದೆಯೋ ಅದರಲ್ಲಿ ತಾರತಮ್ಯವು ಬರುವುದೂ ಚಾರಿತ್ರಿಕವಾದ ಕಾರಣದಿಂದ. ಅಧಿಕಾರದ ರಚನೆಗಳು ಅಂದರೆ ಕೆಲವು ರೀತಿಯ ಆಜ್ಞೆಗಳನ್ನು ಕೊಡುವುದೂ ಹೌದು. ಹಾಗೆಂದು ಅದು ತರ್ಕರಹಿತವಾದದ್ದೂ ಅಲ್ಲ. ಅವು

ಕೆಲವು ನಿರ್ದಿಷ್ಟವಾದ ನಿಯಮಗಳನ್ನು ರೂಪಿಸಿಕೊಳ್ಳುತ್ತವೆ. ಅದರಲ್ಲಿ ನಿಯಮಗಳು ಎಂದರೆ ಪರಿಕರಗಳು ಮಾತ್ರವೇ ಆಗಿರುತ್ತವೆ. ಅದು ಕೆಲವು ರೀತಿಯಲ್ಲಿ ನಿರ್ಣಯಗಳನ್ನು ಹೇಳುತ್ತವೆ. ಕಾನೂನುಗಳೊಂದಿಗೆ ಸಹಮತವನ್ನು ಸೂಚಿಸುತ್ತವೆ. ನಾವು ಅಧಿಕಾರವನ್ನು ಚಲಾಯಿಸುತ್ತೇವೆ ಎಂದರೆ ಕೆಲವು ರಚನೆಗಳನ್ನು ಮಾಡುತ್ತೇವೆ ಎಂದು ಮಾತ್ರವೇ ಅರ್ಥವಾಗಿರುತ್ತದೆ. ಅಧಿಕಾರವು ಸಾಧ್ಯವಾದಷ್ಟು ಮಟ್ಟಿಗೆ ಕಾನೂನನ್ನು ಸಾಂಸ್ಥಿಕ ಮಾಡುತ್ತದೆ. ಅದನ್ನು ಅಧ್ಯಯನ ಮಾಡಲು ನಾವು ಬೇರೆ ವಿಧಾನಗಳನ್ನು ನೋಡಬೇಕಾಗುತ್ತದೆ. ವಾಸ್ತವವಾಗಿ ಯಾವುದೇ ಅಧಿಕಾರಗಳು ನಡೆಯುವುದು ಇನ್ನೊಬ್ಬನನ್ನು ಹತೋಟಿಯಲ್ಲಿ ಇಡುವುದರ ಮೂಲಕ. ಅದರಲ್ಲಿ ತಾರತಮ್ಯವೇ ಬಹಳ ಮುಖ್ಯವಾಗುತ್ತದೆ. ಆದ್ದರಿಂದ ಅಧಿಕಾರವನ್ನು ನೋಡುವ ಮತ್ತು ಅದನ್ನು ವಿಶ್ಲೇಷಣೆ ಮಾಡುವ ಕ್ರಮಗಳು ಬೇರೆಯಾಗಬೇಕಾಗುತ್ತದೆ. ದೇಹದ ಮೇಲೆ ನಡೆಸುವ ಹಿಂಸೆಯನ್ನು ಪೋಲಿಸರು ಒಂದು ಪರಿಕರವಾಗಿಯೂ ಬಳಸುತ್ತಾರೆ.

ಸಂಸ್ಕೃತಿಯಲ್ಲಿ ಅನೇಕ ಸಂಕೇತಗಳು ಸೇರಿಕೊಂಡಿವೆ. ಆದ್ದರಿಂದ ನಾವು ಯಾವುದನ್ನು ಅನ್ವಯಮಾಡುತ್ತೇವೆಯೋ ಅದರಲ್ಲಿ ಅನೇಕವು ನಮಗೆ ನಮ್ಮ ಮನೋಭಾವವನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ನಮಗೆ ಯಾವುದು ನಿಜವಾದ ನೈತಿಕವಾಗಿದೆ ಮತ್ತು ಯಾವುದನ್ನು ಸ್ವೀಕರಿಸುತ್ತೇವೆ ಎನ್ನುವುದು ನಮಗೆ ಈ ಚರ್ಚೆಯಲ್ಲಿ ಅತ್ಯಂತ ಮುಖ್ಯವಾಗುತ್ತದೆ. ತಾತ್ವಿಕವಾಗಿ ನಮಗೆ ಯಾವುದು ಅತ್ಯಂತ ಮುಖ್ಯವಾಗುತ್ತದೆಯೋ ಅದನ್ನು ನಾವು ಅನೇಕ ಸಂದರ್ಭದಲ್ಲಿ ನಮ್ಮ ಗಮನಕ್ಕೆ ತಂದು ಕೊಳ್ಳುವುದೂ ಇಲ್ಲ. ಹಾಗೆ ನೋಡಿದರೆ ಸಂಸ್ಕೃತಿಯಲ್ಲಿ ಅನೇಕವನ್ನು ರಚನೆ ಮಾಡಲಾಗಿದೆ ಎನ್ನುವುದೂ ಸತ್ಯ. ಅದನ್ನು ಒಂದು ಹಂತದಲ್ಲಿ ಫುಕೋ (ರಚನೋತ್ತರದ ಸನ್ನಿವೇಶದಲ್ಲಿ) ಆಲೋಚನೆ ಮತ್ತು ಅದರ ರಚನೆ ಎಂದು ಹೇಳುತ್ತಾನೆ. ಆದರ ಜೊತೆಗೆ ಡೆರಿಡಾ ಒಂದು ಅನ್ವಯ ಮತ್ತು ಅದರ ಕ್ರಮವನ್ನು ಹೇಳುತ್ತಾನೆ. ಆದ್ದರಿಂದ ಈವತ್ತು ನಾವು ಸಮಾಜದಲ್ಲಿ ಯಾವ ಸಿದ್ಧಾಂತದ ಆಧಾರದ ಮೇಲೆ ಸಂಸ್ಕೃತಿಯನ್ನು ವಿವರಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ನಮ್ಮ ಆಲೋಚನೆಯಲ್ಲಿ ಅತ್ಯಂತ ಪ್ರಧಾನವಾಗಿದೆ ಮತ್ತು ಯಾವುದು ಹೆಚ್ಚು ಆಧ್ಯತೆಯನ್ನು ನೀಡುತ್ತೇವೆ ಎನ್ನುವುದು ನಮ್ಮ ಬದ್ಧತೆಯ ಪ್ರಶ್ನೆಯೂ ಆಗುತ್ತದೆ. ಪುಕೋ ಹಿಸ್ಟ್ರಿ ಆಫ್ ಮಾಡ್ನೆಸ್ ಕೃತಿಯಲ್ಲಿ ಇದನ್ನು ವಿವರವಾಗಿ ಚರ್ಚೆಯನ್ನು ಮಾಡಿದ್ದಾನೆ, ಸಾಮಾಜಿಕ ಚರಿತ್ರೆಯ ಸಂಗತಿಗಳನ್ನು ಹೇಳುತ್ತಾನೆ, ಕಮ್ಯುನಿಸ್ಟ್ ತಾತ್ವಿಕತೆ ಮತ್ತು ಅದರ ಪರಿಣಾಮ, ಅದರ ಕ್ರಿಯಾಶೀಲತೆಯನ್ನು ಕೂಡಾ ಇದರಲ್ಲಿ ಹೇಳಿದ್ದಾನೆ,. ಹೇಗೆ ಎರಡನೆಯ ಮಹಾಯುದ್ಧವು ಜಗತ್ತಿನ ಮೇಲೆ ಪ್ರಭಾವವನ್ನು ಬೀರಿತು ಎಂದು ಕೂಡಾ ಹೇಳಿದ್ದಾನೆ. ಕಮ್ಯುನಿಸಂ ಎನ್ನುವುದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಯು ಹೇಗೆ ನಮ್ಮನ್ನು ಬದಲು ಮಾಡುತ್ತದೆ ಎಂದು ವಿವರಿಸುತ್ತಾನೆ. ವರ್ಗಕ್ಕೆ, ಚರಿತ್ರೆಗೆ ಮತ್ತು ಮನೋಸ್ಥಿತಿಗೆ ಯಾವ ಬಗೆಯ ಸಂಬಂಧವು ಇದೆ ಎಂದು ಅವನು ಹೇಳುತ್ತಾನೆ.

ಫುಕೋ ಹೇಳಿರುವ ಸಂಗತಿಗಳು ಇಲ್ಲಿ ಮುಖ್ಯ. ಹದಿನಾರನೆಯ ಶತಮಾನದ ತರುವಾಯ ಜ್ಞಾನ ಮತ್ತು ಅದರ ರೂಪಗಳು ಬದಲಾದವು. ಅದರ ಸ್ವರೂಪಕ್ಕೆ ಅನುಸಾರವಾಗಿ ಪಠ್ಯಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾದವು. ಸಾಹಿತ್ಯ ಮತ್ತು ಅದರ ಅನ್ವಯದ

ದೃಷ್ಟಿಕೋನವೂ ಭಿನ್ನವಾದವು. ಯಾವುದು ನಮಗೆ ಹಿತವಾಗುತ್ತದೆಯೋ ಅದನ್ನು ನಾವು ಹೇಳಿದೆವು. ಅದರಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ನಾವು ರೂಪಿಸುವ ಸಂಕಥನಗಳು ನಮಗೆ ಅನುಕೂಲವನ್ನು ಉಂಟು ಮಾಡಬೇಕು. ಇದನ್ನು ಮಾತಿನ ಅನುಕೂಲ ಎಂದು ಗಣಿಸಿದರೆ ಅದರಲ್ಲಿ ನಾವು ಬಳಸುವ ಸಂಕೇತಗಳು ಕೂಡಾ ಆತ್ಯಂತ ಮುಖ್ಯವಾಗುತ್ತದೆ. ಅದನ್ನು ನಾವು ನಮ್ಮ ಅನುಕೂಲದ ಸೂಚನೆ ಎಂದೂ ಭಾವಿಸಬಹುದು. ಗದ್ಯ ಮತ್ತು ಕತೆಗಳಿಗೆ ಒಂದು ಸಂಬಂಧವು ಇದೆ. ನಾವು ಯಾವ ರೀತಿಯಲ್ಲಿ ನಿರೂಪಣೆ ಮಾಡುತ್ತೇವೆ ಎನ್ನುವುದು ಅತ್ಯಂತ ಮುಖ್ಯ ಕತೆಗಳು ನಮಗೆ ಅತ್ಯಂತ ಮುಖ್ಯವಾಗಿವೆ. ಅವುಗಳು ನಮ್ಮ ಸಂಸ್ಕೃತಿಯ ಒಂದು ಭಾಗವೂ ಹೌದು ಹಾಗೆ ನೋಡಿದರೆ ನಮಗೆ ಯಾವುದೇ ಕಥನಗಳು ನಮಗೆ ನಮ್ಮ ಸಾಧ್ಯತೆಯನ್ನು ಹೇಳುತ್ತವೆ. ಮನುಷ್ಯರಿಗೆ ಅತ್ಯಂತ ಸಹಜವಾಗಿ ಬಂದಿರುವ ಒಂದು ಮಾದರಿ ಎಂದರೆ ಮಾತಾಡುವುದು. ಅದು ಇರುವುದು ನಿಜವಾಗಿಯೂ ಒಂದು ನಿರೂಪಣೆಯಲ್ಲಿ. ಕತೆಯನ್ನು ಹೇಳುವುದಕ್ಕೆ ಒಂದು ಪರಂಪರೆಯು ಇದೆ. ಅದು ಅರ್ಧ ಚಾರಿತ್ರಿಕ ಮತ್ತು ಅರ್ಧ ಸಾಂಸ್ಕೃತಿಕ ಎಂದು ಬಾರ್ತ್ ಹೇಳುತ್ತಾನೆ. ಎರಡು ಪ್ರಕ್ರಿಯೆಗಳು ಇರುತ್ತವೆ: ತಿಳಿಯುವುದು ಮತ್ತು ಹೇಳುವುದು. ನಮಗೆ ಕತೆಯನ್ನು ಹೇಳವುದು ಯಾವಾಗ ಮುಖ್ಯವಾಗುತ್ತದೆ ಎಂದರೆ ನಾವು ಸರಿಯಾಗಿ ಅದನ್ನು ಅರ್ಥ ಮಾಡಿಕೊಂಡರೆ ಮಾತ್ರವೇ. ನಮಗೆ ಯಾವುದೇ ವಿಷಯಗಳು ಸರಿಯಾಗಿ ಅರ್ಥವಾದರೆ ಆಗ ಅದನ್ನು ಹೇಳುತ್ತೇವೆ. ಹೇಳುವುದು ಅಂದರೆ ಅದಕ್ಕೆ ಒಂದು ಮೌಲ್ಯವು ಇದೆ ಎಂದು ಅರ್ಥ. ಪಂಪ ವ್ಯಾಸನನ್ನು ಅರ್ಥಮಾಡಿಕೊಂಡು ಅನಂತರ ನಮ್ಮ ಅಗತ್ಯಕ್ಕೆ ಅನುಸಾರವಾಗಿ ನಿರೂಪಣೆಯನ್ನು ಮಾಡಿದ. ಆದರೆ ಕತೆಗಳಿಗೆ ಇನ್ನೊಂದು ಆಯಾಮವೂ ಇದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕತೆಯು ಬರುವಾಗ ಅದರ ನಿರೂಪಣೆಯು ಹೆಚ್ಚು ಭೇದವು ಉಂಟಾಗದಂತೆ ನೋಡುತ್ತೇವೆ. ಆದರೆ ಯಾವುದೇ ಕತೆಗಳಿಗೆ ಇರುವ ಸಾಂಸ್ಕೃತಿಕವಾದ ಒಂದು ಆಯಾಮವನ್ನು ನಾವು ಮರೆಯುವಂತೆ ಇಲ್ಲ. ನಿರೂಪಣೆಗಳಿಗೆ ನಿರ್ದಿಷ್ಟವಾದ ಸಂಹಿತೆಗಳು ಇರುತ್ತವೆ. ಅನುಭವ ಮತ್ತು ನಿರೂಪಣೆಗೆ ಯಾವ ಮಾದರಿಯ ಸಂಬಂಧವು ಇದೆ ಎಂದು ಹೇಳುವಾಗ ಬಾರ್ತ್ ಒಂದು ಮಾತನ್ನು ಹೇಳುತ್ತಾನೆ. ನಿರೂಪಣೆಗಳು ವಿವಿಧ ರೀತಿಯಲ್ಲಿ ಇರುತ್ತವೆ. ಅದರಲ್ಲಿ ಕಲ್ಪನೆ, ವಾಸ್ತವ ಮುಂತಾದ ಸಂಗತಿಗಳೂ ಇರುತ್ತವೆ. ನಾವು ಯಾವುದನ್ನು ಕತೆಯಲ್ಲಿ ನಿಜ ಎಂದು ಹೇಳುತ್ತೇವೆಯೋ ಅದನ್ನು ನಾವು ವಾಸ್ತವವಾದ ಎಂದು ಕರೆಯುತ್ತೇವೆ. ನಿರೂಪಣೆಗೆ ಮತ್ತು ಅದರ ಸ್ವರೂಪಕ್ಕೆ ಹಾಗೂ ಅದರ ಕಾಲಕ್ಕೆ ಒಂದು ಸಂಬಂಧವು ಇದೆ. ಯಾವುದು ನಿಜವಾದ ಕಥನವು ಆಗಿದೆಯೋ ಅದರ ಹಿಂದೆ ಒಂದು ನಿರ್ದಿಷ್ಟವಾದ ಚರಿತ್ರೆಯು ಇರುತ್ತದೆ. ಜೈಲುಗಳು, ಶಾಲೆಗಳು, ಆಸ್ಪತ್ರೆಗಳು, ಮಿಲಿಟರಿಗಳು ಆಧುನಿಕ ಸಮಾಜದ ಸಂಕೇತಗಳಾಗಿವೆ ಎಂದು ಫುಕೋ ಹೇಳುತ್ತಾನೆ.

ಸಾಂಕೇತಿಕ ಅನನ್ಯತೆಯು ಮೂಲಭೂತವಾಗಿ ಸಮಾಜ ಮತ್ತು ಅದರ ಹಿಂದೆ ಇರುವ ಅನನ್ಯತೆಯನ್ನು ಹೇಳುತ್ತದೆ ಎನ್ನುವುದು ನಿಜ. ಸಂಕೇತಗಳನ್ನು ಕೂಡಾ ಸಮಾಜವೇ ಕಟ್ಟುತ್ತದೆ. ಆದರೆ ಸಂಕೇತ ಮತ್ತು ಅದರ ಸಾಧ್ಯತೆಗಳು ಬೇರೆಯೂ ಹೌದು. ಅದರಲ್ಲಿ ಸಂಬಂಧಗಳು ನೇರವಾಗಿರುತ್ತವೆ ಎಂದು ಹೇಳಲು ಬರುವುದೂ ಇಲ್ಲ. ಬರಹವು ವಾಸ್ತವವಾಗಿ ಅತ್ಯಂತ

ಸಂಕ್ಷಿಪ್ತವಾಗಿ ಹೇಳುವ ಪ್ರಕ್ರಿಯೆಯೂ ಆಗಿದೆ. ಕಲ್ಪನೆಯು ರೋಚಕವೂ ಆಗಿರುತ್ತದೆ. ಅದು ಮನಸು ಮತ್ತು ಅದರ ಬಯಕೆಯನ್ನು ಹೇಳುತ್ತದೆ. ಕಲ್ಪನೆಯ ಹಿಂದೆ ಹೋಗುವುದು ಅಂದರೆ ವಾಸ್ತವದಿಂದ ದೂರ ಹೋಗುವುದೂ ಹೌದು. ಅದರಲ್ಲಿ ಸಹಜತೆಯು ಗೈರು ಹಾಜರಿಯೂ ಆಗುತ್ತದೆ. ಆದರೆ ಅದು ವ್ಯಕ್ತಿಯ ಆಂತರಿಕ ಸಂಗತಿಗಳನ್ನು ವ್ಯಕ್ತ ಮಾಡುತ್ತದೆ. ಭ್ರಮಾತ್ಮಕವಾದ ಜಾಗಗಳು ಬೇರೆಯಾಗುತ್ತವೆ. ಅದು ಕೆಲವನ್ನು ತೃಪ್ತಿಗೊಳಿಸುತ್ತವೆ. ಭ್ರಮಾತ್ಮಕವಾದ ಖುಶಿಗಳೇ ಬೇರೆಯಾಗಿರುತ್ತವೆ. ಭ್ರಮೆಗಳು ವಾಸ್ತವವಾಗಿ ಕೆಲವನ್ನು ಸೂಚಿಸುತ್ತವೆ. ಆದರೆ ಸಂಕೇತ, ಕಲ್ಪನೆ, ವಾಸ್ತವ ಮುಂತಾದವುಗಳು ಹುಟ್ಟುವುದೇ ನಮ್ಮ ಚರಿತ್ರೆಯಲ್ಲಿ ಎನ್ನುವುದನ್ನು ನಾವು ಮರೆಯಬಾರದು. ಯಾವುದೇ ಅನನ್ಯತೆಯು ಮೂಲಭೂತವಾಗಿ ಪೂರ್ತಿಯಾಗಿ ರಚನೆಯು ಆಗಿರುವುದೂ ಇಲ್ಲ. ಅದು ಮುಕ್ತವೂ ಹೌದು ಎಂದು ಫುಕೋ ಹೇಳುತ್ತಾನೆ. ವಸಾಹತು ಅಧಿಕಾರವು ಸಂಸ್ಕೃತಿಯನ್ನು ಒಂದು ಪರಿಕರವಾಗಿಯೂ ಬಳಸಿಕೊಂಡಿತು. ಆಗ ಬಂಡವಾಳವಾದ ಮತ್ತು ಆಧುನಿಕತೆ ಎರಡೂ ಇದ್ದುದರಿಂದ ಈ ಪ್ರಶ್ನೆಯು ಹೆಚ್ಚು ಸಂಕೀರ್ಣವೂ ಆಗಿತ್ತು. ಸಂಸ್ಕೃತಿಯನ್ನು ಆಯುಧವಾಗಿ ಬಳಸುವಾಗ ಅದರ ಪ್ರಶ್ನೆಗಳು ಬೇರೆಯಾಗುತ್ತವೆ. ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ನಾವು ಬೇರೆ ರೀತಿಯಲ್ಲಿ ನೋಡಲು ಸಾಧ್ಯ. ಅನನ್ಯತೆಯು ವ್ಯಕ್ತ ಮತ್ತು ಅವ್ಯಕ್ತಗಳ ನಡುವೆ ಇರುತ್ತದೆ. ಅದು ಮುಕ್ತವೂ ಹೌದು. ಆದೇ ರೀತಿಯಲ್ಲಿ ಅದು ವ್ಯಕ್ತವಾಗದೆಯೂ ಹೋಗಬಹುದು. ಅದು ಕೆಲವೊಮ್ಮೆ ವ್ಯತ್ಯಾಸವಾಗುತ್ತದೆ. ಅದು ಕೂಡಾ ಸ್ಥಾನ ಪಲ್ಲಟವಾಗುತ್ತದೆ. ನಾವು ಯಾವುದನ್ನು ನೋಡುತ್ತೇವೆ ಮತ್ತು ಅದರ ಸ್ವರೂಪವು ಯಾವುದು ಎನ್ನುವುದೆ ಆಧಾರದ ಮೇಲೆ ಅಧಿಕಾರ ಮತ್ತು ಅದರ ನಿಯಂತ್ರಣಗಳ ಪ್ರಶ್ನೆಯು ಬರುತ್ತದೆ. ವಸ್ತುನಿಷ್ಟವಾದ ಅನೇಕ ಸಂಗತಿಗಳು ನಮಗೆ ಒಂದು ಬಗೆಯ ಜ್ಞಾನವನ್ನು ಕೊಡುತ್ತವೆ. ವಾಸ್ತವಾಗಿ ಮಗು ತಾನು ಏನು ಎಂದು ತಿಳಿದುಕೊಂಡು ಇರುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವಿದೆ. ತಿಳಿವು ಬಂದಾಗ ಮಗುವು ತಾನು ಏನು ಎಂದು ಅರ್ಥ ಮಾಡಿಕೊಳ್ಳುತ್ತದೆ. ಮಗುವಿಗೆ ಹಣಕಾಸು ಮತ್ತು ರಾಜಕಾರಣ ಎರಡೂ ಗೊತ್ತಿರುವುದೂ ಇರುವುದಿಲ್ಲ. ಅದು ತನ್ನ ಪಾಡಿಗೆ ತಾನು ಇರುತ್ತದೆ. ಅದರ ಆಟಗಳು ಮತ್ತು ಅದರ ಮುಗ್ಧತೆಯು ಬೇರೆ ಥರ ಇರುತ್ತದೆ. ಆದರೆ ಬೆಳೆಯುತ್ತಾ ಬಂದಂತೆ ವಿಷಯವು ಬದಲಾಗುತ್ತದೆ, ವ್ಯಕ್ತಿಯು ತನ್ನ ವರ್ತಮಾನ ಮತ್ತು ತನ್ನ ಪರಿಸರವನ್ನು ಬೇರೆ ಥರ ನೋಡಲು ಶುರುಮಾಡುತ್ತಾನೆ. ವ್ಯಕ್ತಿ ಮತ್ತು ಅವನ ಅನುಭವ ಎನ್ನುವುದು ಮೂಲತಃ ಕೆಲವು ನಿಯಮವನ್ನು ಹೇಳುತ್ತವೆ. ನೀತಿ ಮತ್ತು ಲೈಂಗಿಕತೆಯು ಹೇಗೆ ಒಂದು ಆಯಾಮವನ್ನು ಒಂದು ಕಾಲದಲ್ಲಿ ಪಡೆಯಿತು ಎಂದು ಫುಕೋ ವಿವರಿಸುತ್ತಾನೆ. ನೈತಿಕ ಪರಂಪರೆಗಳು ವ್ಯಕ್ತಿಯ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತದೆ. ಅದು ಅಧಿಕಾರವನ್ನು ಸ್ಥಾಪಿಸುತ್ತದೆ. ಜೀವನ ಮತ್ತು ಅದರ ಸ್ವರೂಪಗಳು ಒಂದು ಅರ್ಥದಲ್ಲಿ ಮದುವೆ ಆದ ಮೇಲೆ ಬೇರೆಯಾಗುತ್ತವೆ.

ನಾನು ಮತ್ತು ನನ್ನ ಮಕ್ಕಳು ಎನ್ನುವುದು ಬೇರೆ ನಿರೂಪಣೆಯನ್ನು ಮಾಡುತ್ತದೆ. ನಾನು ಅನ್ನುವಾಗ ನಮಗೆ ಮಾತ್ರವೇ ಭಿನ್ನವಾದ ಒಂದು ಅಸ್ತಿತ್ವ ಮತ್ತು ನೋವು ಇದೆಯೇ ಎಂದೂ ಕೇಳಿಕೊಳ್ಳಬೇಕಾಗುತ್ತದೆ. ನೋವು ಎನ್ನುವುದು ಭಿಕಾರಿಗೂ ಇದೆ. ಶ್ರೀಮಂತನಿಗೂ ಇದೆ. ಅನುಭವ ಎನ್ನುವುದು ಒಂದು ಹಸಿಯಾದ ವಿವರಣೆಯು ಅಲ್ಲ. ಆಧುನಿಕ ವೈದ್ಯ

ವಿಜ್ಞಾನವು ವ್ಯಕ್ತಿಯನ್ನು ಮತ್ತು ಅವನ ದೇಹವನ್ನು ನೋಡುವುದೇ ಬೇರೆ ಕ್ರಮದಲ್ಲಿ. ಆಧ್ಯಾತ್ಮವು ವ್ಯಕ್ತಿಯನ್ನು ನೋಡುವುದು ಭಿನ್ನವಾಗಿ. ಅದು ವ್ಯಕ್ತಿಯನ್ನು ಪಂಚ ಇಂದ್ರಿಯಗಳ ಮೂಲಕ ಗ್ರಹಿಸುತ್ತದೆ. ನಾಡಿ ವೈದ್ಯರು ದೇಹವನ್ನು ನಾಡಿಯ ಮೂಲಕ ನೋಡುತ್ತಾರೆ. ಆದರೆ ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳು ಇವೆ. ಕೆಲವು ನೀತಿವಂತರು ದೇಹವನ್ನು ಮತ್ತು ಲೈಂಗಿಕತೆಯನ್ನು ನೋಡುವುದು ಪಾಪ ಮತ್ತು ಪುಣ್ಯಗಳ ಮೂಲಕ. ನೀತಿಯು ಕೆಲವು ಸಂಬಂಧವನ್ನು ಹೆಚ್ಚು ಅಧಿಕೃತ ಮಾಡುತ್ತದೆ. ಕೆಲವು ಕ್ರಿಯೆಗಳನ್ನು ಅದು ಮಾನ್ಯ ಮಾಡುತ್ತದೆ. ಯಾರು ಹಸಿವೆಯಿಂದ ಇರುತ್ತಾರೆಯೋ ಅವರು ಊಟವನ್ನು ಮಾಡಿದ ಕನಸನ್ನು ಕಾಣುವುದು ಸಹಜ ಎಂದು ಅವನು ಹೇಳುತ್ತಾನೆ. ಮೊದಲು ದೇಹ ಮತ್ತು ಮನಸ್ಸಿನ ಪ್ರಶ್ನೆ. ಅನಂತರವೇ ರಾಜ್ಯದ ಪ್ರಶ್ನೆ. ವಿವೇಕವು ವಾಸ್ತವವನ್ನು ಗ್ರಹಿಸಲು ಇರುವ ಒಂದು ಸಾಧನ ಎಂದು ಪ್ಲೆಟೋ ಹೇಳುತ್ತಾನೆ. ನಮಗದು ವಾಸ್ತವ. ಅದು ನಮ್ಮ ವಿವೇಕವನ್ನು ಸೂಚಿಸುತ್ತದೆ. . ವ್ಯಕ್ತಿ ಮತ್ತು ಅವನ ಅಸ್ತಿತ್ವವು ಹೇಗೆ ಆಗುತ್ತದೆ ಹಾಗೂ ಅದರ ಮೇಲೆ ಕಾಲವು ಯಾವ ಪರಿಣಾಮವನ್ನು ಬೀರುತ್ತದೆ, ಯಾಕೆ ಮನುಷ್ಯನು ಹೀಗೆ ಇರುತ್ತಾನೆ ಮುಂತಾದ ಪ್ರಶ್ನೆಗಳನ್ನು ಅದು ಎತ್ತಿಕೊಂಡಿತು. ಕಾಲ ಮತ್ತು ಅಸ್ತಿತ್ವ ಹಾಗೂ ಆಗುವಿಕೆಗಳ ನಡುವೆ ಸಂಬಂಧಗಳು ಇವೆ ಎಂದು ಅದರ ಮುಖ್ಯವಾದ ಪ್ರತಿಪಾದನೆಯು ಆಗಿದೆ. ಆಲೋಚನೆ ; ಅಭಿಪ್ರಾಯ ; ನಿಜವಾದ ಜಗತ್ತು, ಭೌತಿಕ ಸಂಗತಿಗಳು ; ವ್ಯಕ್ತಿಯ ಸಂಬಂಧಗಳು ವ್ಯಕ್ತಿಯ ಆಗುವಿಕೆಗೆ ಕಾರಣವಾಗುತ್ತದೆ. ಆಧುನಿಕ ಶಾಹಿಯಲ್ಲಿ ವ್ಯಕ್ತಿಯ ಭಾಗವಹಿಸುವಿಕೆ ಅನ್ನುವುದು ಭಿನ್ನವಾಗಿರುತ್ತದೆ. ಆದರೆ ಸಾಮೂಹಿಕ ಉತ್ಪಾದನೆಯಲ್ಲಿ ಪರಕೀಯತೆ ಪ್ರಶ್ನೆಯು ಬರುವುದಿಲ್ಲ. ಸಂಸ್ಕೃತಿ ಮತ್ತು ಚರಿತ್ರೆಗೆ ಒಂದು ಸಂಬಂಧವು ಇದೆ ಎನ್ನುವುದು ಅವನ ಪ್ರಮುಖವಾದ ವಾದ. ಅವನಲ್ಲಿ ಆಧುನಿಕ ಚರಿತ್ರೆ ಮತ್ತು ಅದರ ವಿವರಣೆಗಳು ಹೆಚ್ಚು ಮುಖ್ಯವಾಗಿವೆ.

ಚರಿತ್ರೆ ಮತ್ತು ಅದರ ಪರಿಣಾಮಗಳು ಒಂದೇ ರೀತಿಯವು ಅಲ್ಲ. ಚರಿತ್ರೆಕಾರರಿಗೆ ಇರುವ ಅನೇಕ ಮಿತಿಗಳನ್ನುಅವನು ಹೇಳುತ್ತಾನೆ.,ನಾನು ಯಾರು ಎಂದು ಕೇಳಬೇಡಿ. ನಾನು ನಿಜವಾಗಿಯೂ ಔದ್ಯೋಗಿಕ ಚರಿತ್ರೆಕಾರನು ಅಲ್ಲ. ನನಗೆ ಮತಿಗಳು ಇವೆ ಎಂದು ಅವನು ಒಪ್ಪುತ್ತಾನೆ. ಆದರೆ ಚರಿತ್ರೆ ಮತ್ತು ಸಂಸ್ಕೃತಿಗೆ ಅವನಿಗೆ ಹೆಚ್ಚು ಒಳನೋಟಗಳು ಇದ್ದವು ಎನ್ನುವುದು ಸತ್ಯ. ಅದನ್ನು ಸೀಮಿತಗೊಳಿಸಲು ಬರುವುದಿಲ್ಲ. ಆದರೆ ಪುನರುಜ್ಜೀವನ ಅನಂತರ ವ್ಯಕ್ತಿಯ ಕಲ್ಪನೆಯು ಬದಲಾಯಿತು. ಹೊಸರೀತಿಯ ವ್ಯಾಖ್ಯೆಗಳು ಬಂದವು. ವಿಜ್ಞಾನ ಮತ್ತು ತಂತ್ರಜ್ಞಾನಗಳು ಬಂದಿರುವುದಕ್ಕೂ ವ್ಯಕ್ತಿ ಕಲ್ಪನೆಗೂ ಸಂಬಂಧವಿದೆ. 13ನೇ ಶತಮಾನದ ಕ್ರಿಶ್ಚಿಯಾನಿಟಿಯ ಪರಿಕಲ್ಪನೆಗೂ ವ್ಯಕ್ತಿತ್ವದ ಪರಿಕಲ್ಪನೆಗೂ ಸಂಬಂಧವಿದೆ. ಎಲ್ಲಾ ವ್ಯಕ್ತಿಗಳು ಸ್ವಯಂಸಂಪೂರ್ಣ ಎಂದು ನಾನು ಒಪ್ಪುವುದಿಲ್ಲ ಎಂದು ಪುಕೋ ಹೇಳುತ್ತಾನೆ. ತಾನು ಚರಿತ್ರೆಯ ವಿಷಯದಲ್ಲಿ ಅನ್ಯನಾಗಿದ್ದೇನೆ ಎಂದು ಹೇಳುತ್ತಾನೆ. ನಾವು ಯಾವುದನ್ನು ನೋಡುತ್ತಿದ್ದೆವೋ ಅದು ನಮ್ಮ ಮೇಲೆ ಪ್ರಭಾವವನ್ನು ಬೀರುತ್ತದೆ ಎನ್ನುವುದು ಅವನ ವಾದ,.ಅವನಿಗೆ ಸಾಂಸ್ಕೃತಿಕ ಚರಿತ್ರೆಯ ಮೇಲೆ ಹೆಚ್ಚು ಆಸಕ್ತಿಯು ಇತ್ತು. ಆರ್ಕಿಯಾಲಜಿ ಆಫ್ ನಾಲೆಜ್ ಕೃತಿಯಲ್ಲಿ ಅವನು ಚರಿತ್ರೆ ಮತ್ತು ಅದು ನಡೆದು ಬಂದ ದಾರಿಯನ್ನು ಹೇಳುತ್ತಾನೆ. ಒಂದು ಸಮಾಜದಲ್ಲಿ ಇರುವ ವಿವಿಧ ಸಂಗತಿಗಳು ಹೇಗೆ ನಮಗೆ ಮುಖ್ಯವಾಗುತ್ತವೆ ಎಂದು

ವಿವರಿಸುತ್ತಾನೆ. ವ್ಯಕ್ತಿ ಯನ್ನು ನಾವು ಸರಿಯಾಗಿ ಗುರುತಿಸಲು ಶುರು ಮಾಡಿದ್ದು ಹದಿನಾರನೆಯ ಶತಮಾನದ ತರುವಾಯ ಎಂದು ಅವನು ಪ್ರತಿಪಾದಿಸುತ್ತಾನೆ, ನಮ್ಮ ಮನೋಸ್ಥಿತಿಗೂ ಸಾಮಾಜಿಕವಾದ ಸ್ಥಿತಿಗು ಸಂಬಂಧವಿದೆ. ನಮ್ಮ ವ್ಯಕ್ತಿತ್ವದ ಹಿಂದೆ ಒಂದು ವಂಶಾವಳಿ ಇರುತ್ತದೆ. ಅದನ್ನು ನಾವು ಗಮನಿಸಬೇಕು.

18ನೆಯ ಶತಮಾನದ ಪುನರುಜ್ಜೀವನ ಯುಗದ ವ್ಯಕ್ತಿಯ ಕಲ್ಪನೆಗೂ 19ನೆಯ ಶತಮಾನದ ಸಮಾಜವಾದದ ಸ್ವರೂಪಕ್ಕೂ ಭಿನ್ನತೆಯಿದೆ. ಹಾಗೆಯೇ ಇವುಗಳಲ್ಲಿ ಸ್ಪಿರುಚ್ಯುಯಲ್ ಜೀವನದ ಕ್ರಮಗಳೇ ಭಿನ್ನ. (eric fromm - marx's concept of man 1961 milestones of thought fredrick ungar publing co newyork p67) ಭೌತಿಕ ಜಗತ್ತಿನ ಜೊತೆಗೆ ನಾವು ಹೇಗೆ ಸಂಬಂಧವನ್ನು ಇರಿಸಿಕೊಳ್ಳುತ್ತೇವೆಯೋ ಅದರಂತೆ ನಾವು ಆಗುತ್ತೇವೆ. ಆಗುವಿಕೆಯು ಆಲೋಚನೆಗೆ ಸಂಬಂಧಿಸಿದ್ದು ಭೌತಿಕತೆಯು ನಮ್ಮ ಆಗುವಿಕೆಯನ್ನು ನಿರ್ಧರಿಸುತ್ತದೆ. ಸಾಮಾಜಿಕ 'ಆಗುವಿಕೆ' ಮತ್ತು ಸಾಮಾಜಿಕ ಪ್ರಜ್ಞೆಗೆ ಸಂಬಂಧವಿದೆ. ಜೀವನದ ಕ್ರಮವು ಅನಿಶ್ಚಿತ ಮತ್ತು ಅತಾರ್ಕಿಕವೆಂದು ಭಾವಿಸಬೇಕಾಗಿಯೂ ಇಲ್ಲ. ಸಾಮಾಜಿಕ ರಚನೆಗಳು ವ್ಯಕ್ತಿಯ ಆಗುವಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ನಿರ್ದಿಷ್ಟ ವ್ಯಕ್ತಿ ನಿರ್ದಿಷ್ಟವಾದ ಸಾಮಾಜಿಕ ಉತ್ಪಾದನೆಯ ಸಂದರ್ಭದಲ್ಲಿ ಆಗುತ್ತಾನೆ. ಯಾವುದನ್ನು ಭೌತಿಕವಾದ ನಡವಳಿಕೆ ಎಂದು ಹೇಳುತ್ತೇವೆಯೋ ಅದು ಪ್ರಜ್ಞೆಗೆ ಸಂಬಂಧಿಸಿದೆ. ಮತ್ತು ನಮ್ಮ ದೈನಂದಿನ ಚಟುವಟಿಕೆಗಳು ಅದಕ್ಕೆ ಕಾರಣವಾಗಿರುತ್ತದೆ. ಆಗುವಿಕೆಗೆ ಭೌತಿಕ ಅರ್ಥಗಳಿವೆ. ನಾವು ಯಾವ ಸಾತ್ವಿಕ ನಂಬಿಕೆಯನ್ನು ಹೊಂದಿರುತ್ತೇವೆಯೋ ಅದಕ್ಕೆ ಅನುಸಾರವಾಗಿ ಆಗುತ್ತೇವೆ. ಪ್ರಜ್ಞೆಗೂ ಆಗುವಿಕೆಗೂ ಈ ದೃಷ್ಟಿಯಿಂದ ಸಂಬಂಧವಿದೆ. ನಮ್ಮ ಅಗತ್ಯಗಳು ನಮ್ಮನ್ನು ಆಗಿಸುತ್ತವೆ. ಇನ್ನೊಬ್ಬರ ಜೊತೆಗಿನ ಸಂಬಂಧಕ್ಕೂ ಆಗುವಿಕೆಗೂ ಸಂಬಂಧವಿದೆ. ಈ ದೃಷ್ಟಿಯಿಂದ ಆಗುವಿಕೆಯು ಸಾಮಾಜಿಕ ಉತ್ಪನ್ನ. ಪೂರ್ವಕರ್ಮದಿಂದ ಅಥವಾ ಜನ್ಮಾಂತರದ ಪುಣ್ಯದಿಂದ ನಾವು ಹುಟ್ಟಿಲ್ಲ ಮತ್ತು ಆಗಿಯೂ ಇಲ್ಲ. ಆದುದರಿಂದ ಆಗುವುದು ಮತ್ತು ಆಗುವಿಕೆ ಹಾಗೂ ವ್ಯಕ್ತಿಯ ಪ್ರಶ್ನೆಗಳು ಹೆಚ್ಚು ಸಂಕೀರ್ಣವಾಗಿದೆ. ಅದನ್ನು ಹೀಗೆಯೂ ಹೇಳಬಹುದು : ಆಗುವಿಕೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. (Jean paul Sartre, 1992, Truth and Existence the university of chicago press p. 16)

ನಾವು ಆಗಿದ್ದೇವೆ. ನಮ್ಮನ್ನು ಆಗುವಂತೆ ಮಾಡಲಾಗಿದೆ. ಇದನ್ನು ಚರಿತ್ರೆಯೆಂದು ಸರಳವಾಗಿ ಹೇಳುತ್ತೇವೆ. ಪುಕೋ ಇದನ್ನು ಒಂದು ವಂಶಾವಳಿಯ ಹಿನ್ನೆಲೆಯಲ್ಲಿ ಗುರುತಿಸುತ್ತಾನೆ., ಕಾಲ ಮತ್ತು ಆಗುವಿಕೆಗೆ ಸಂಬಂಧವು ಇದೆ ಎಂದು ಹೈಡೆಗಾರ್ ಹೇಳಿದ. ಅವನ ಸುಪ್ರಸಿದ್ಧವಾದ ಒಂದು ಕೃತಿಯು ಇದನ್ನು ಹೇಳುತ್ತದೆ : ಅನನ್ಯತೆ ಮತ್ತು ವ್ಯತ್ಯಾಸ (ಐಡೆಂಟಿಟಿ ಅಂಡ್ ಡಿಫರೆನ್ಸ್) ಅನನ್ಯತೆಯು ವ್ಯಕ್ತಿಯನ್ನು ಸೂಚಿಸುತ್ತದೆ, ವ್ಯತ್ಯಾಸವು ಅವನು ಆಗುವುದನ್ನು ಹೇಳುತ್ತದೆ. ಪಶ್ಚಿಮದ ತತ್ವಜ್ಞಾನದಲ್ಲಿ ವ್ಯಕ್ತಿ ಮತ್ತು ಅವನ ಅನನ್ಯತೆಗೆ ಭಿನ್ನತೆಯು ಇದೆ. ವ್ಯಕ್ತಿಯು ಆಗುತ್ತಾನೆ. ಆಗುವುದು ಎಂದರೆ ಅದನ್ನು ಆಲೌಕಿವಾದ ಅರ್ಥದಿಂದ ನೋಡಲಾಗಿತ್ತು. ಅದನ್ನು ವಿಧಿಯೆಂದೂ ಭಾವಿಸಲಾಗಿತ್ತು. ಅನನ್ಯತೆಗೆ ಅದರದೇ ಆದ ಅರ್ಥವೂ ಇದೆ.

ವ್ಯಕ್ತಿಯ ಸಹಜ ಸ್ವಭಾವವನ್ನು ಅದು ಸೂಚಿಸುತ್ತದೆ. ವಾಸ್ತವಾಗಿ ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳು ಇರುತ್ತವೆ. ಅನನ್ಯತೆಯೆಂದರೆ ಅದು ಸ್ವಯಂ ಸಂಪೂರ್ಣ ಹಾಗೂ ಅದು ಸಮಗ್ರವಾಗಿದೆ. ಅದರಲ್ಲಿ ನಿರ್ದಿಷ್ಟವಾದ ಚಹರೆಗಳೂ ಇವೆ. ಆಗಿರುವುದು ಅಂದರೆ ಆಗುವುದು ಮಾತ್ರವೇ ಅದಕ್ಕೆ ಬೇರೆ ವ್ಯಾಖ್ಯಾನಗಳು ಇಲ್ಲ. ಆಗುವುದು ಮತ್ತು ಆಗುವಿಕೆಯು ಬೇರೆ ಬೇರೆ ಕಾರಣಗಳ ಮೂಲಕವೂ ನಡೆಯುತ್ತದೆ. ಆಗುವುದು ಅಂದರೆ ಅದು ನಿರ್ದಿಷ್ಟವಾದ ಅರ್ಥವನ್ನು ಹೇಳುತ್ತದೆ. ಅದರಲ್ಲಿ ಖಚಿತತೆಯೂ ಇದೆ. ಅದಕ್ಕೆ ಕೆಲವು ನಿಯಮವೂ ಇರುತ್ತದೆ. ಒಂದು ವಸ್ತುವನ್ನು ಮತ್ತೊಂದು ವಸ್ತುವಿನಿಂದ ಬೇರೆ ಮಾಡುವುದು ಅದರ ಅಸ್ತಿತ್ವದ ಕಾರಣದಿಂದ. ಅದನ್ನು ನಾವು ಗುರುತಿಸುವುದೂ ಸಾಧ್ಯವಾಗುತ್ತದೆ, ಒಂದು ವಸ್ತುವನ್ನು ಮತ್ತೊಂದು ವಸ್ತುವಿನಿಂದ ಬೇರೆ ಮಾಡಲು ನಮಗೆ ಸಾಧ್ಯವಾಗುವುದು ಈ ಅನನ್ಯತೆಯ ಕಾರಣದಿಂದ. ಬೇರೆ ಎನ್ನುವುದು ಅರ್ಥ ಪೂರ್ಣವಾಗಿದೆ. ನಾನು ನನ್ನ ಅಸ್ತಿತ್ವವು ಬೇರೆ ಎನ್ನುವುದನ್ನು ಇದು ಹೇಳುತ್ತದೆ. ಅದರಲ್ಲಿಯೂ ಇದು ಅನೇಕ ವ್ಯತ್ಯಾಸಗಳು ನಮ್ಮ ನಡುವೆ ಯಾಕೆ ಇರುತ್ತದೆ ಎಂದರೆ ನಾವು ನಮ್ಮ ಅನನ್ಯತೆಯನ್ನು ಭಿನ್ನವಾಗಿರಿಸುತ್ತೇವೆ. ಎನ್ನುವ ಕಾರಣಕ್ಕೆ. ಆಗುವುದು ಮತ್ತು ಅದರ ಕಾರಣಗಳು ಅತ್ಯಂತ ಪ್ರಧಾನವಾದ್ದು ಆಗಿದೆ. ಯಾವುದು ಆಗಿದೆ ಹಾಗೂ ಅದರ ಕಾರಣಗಳು ಏನು ಎನ್ನುವುದೇ ಮುಖ್ಯವಾದ ಪ್ರಶ್ನೆ. ಅದನ್ನು ಅನೇಕ ಅಥೆಂಟಿಕ್ ಎಂದೂ ಹೇಳುತ್ತೇವೆ. ಇದು ಚರಿತ್ರೆಗೆ ಸಂಬಂಧಪಟ್ಟದ್ದೂ ಹೌದು. ವ್ಯಕ್ತಿತ್ವದ ಅನನ್ಯತೆಯನ್ನು ಫುಕೋ ಒಪ್ಪುತ್ತಾನೆ.

ಆಗುವಿಕೆ ಎನ್ನುವುದಕ್ಕೆ ಅದರದೇ ಆದ ಲಕ್ಷಣಗಳೂ ಇವೆ. ನಾನು ಅಂದರೆ ನಾನು ಇದರಲ್ಲಿ ಬೇರೆ ಅರ್ಥವಿಲ್ಲ. ನಾನು ಅಂದರೆ ನಾನು ಎನ್ನುವಾಗ ವ್ಯಕ್ತಿಯಾಗಿ ನನ್ನತನಗಳು ಮತ್ತು ಅದರ ಸ್ವರೂಪಗಳು ಹೆಚ್ಚು ಮುಖ್ಯವಾಗುತ್ತವೆ. ಕೆ ಎಂದರೆ ಬಿಯು ಅಲ್ಲವೆನ್ನುವುದು ಅತ್ಯಂತ ಸ್ಪಷ್ಟ. ಗಿಡವೆಂದರೆ ಗಿಡ. ಅದು ಬೇರೆಯಲ್ಲ. ಇಂಗ್ಲೀಷಿನಲ್ಲಿ ಐಡೆಂಟಿಟಿ ಎನ್ನುವುದು ಒಂದು ಪದವಿದೆ. ಅದು ಅನನ್ಯತೆಯನ್ನು ಹೇಳುತ್ತದೆ. ಐಡೆಂಟಿಟಿ ಎನ್ನುವುದು ಲ್ಯಾಟೀನಿಂದ ಬಂತು. ಅಂದರೆ ಒಂದೇ ಥರ ಎನ್ನುವುನ್ನು ಇದು ಹೇಳುತ್ತದೆ. ಅ= ಅ ಎನ್ನುವುದು ಒಂದು ನಿಯಮ. ಕ=ಕ ಅದು ಅ ಆಗುವುದೂ ಇಲ್ಲ ರಾಮ ಅಂದರೆ ರಾಮ. ಭೀಮನು ರಾಮನಲ್ಲ. ಅದರ ಅನನ್ಯತೆಗಳು ಅದರ ಪಾಡಿಗೆ ಅರ್ಥಪೂರ್ಣವೂ ಆಗಿರುತ್ತದೆ. ಆದರೆ ಮರಗಳು ಎಂದು ಹೇಳುವಾಗ ಅದರ ಲಕ್ಷಣಗಳು ನಮ್ಮ ಗಮನಕ್ಕೆ ಬಂದಿರುತ್ತವೆ. ಎರಡು ವಸ್ತುಗಳ ನಡುವೆ ಸಾಮಾನ್ಯವಾದ ಲಕ್ಷಣಗಳು ಇದ್ದಾಗ ಅದನ್ನು ಒಂದು ವರ್ಗಕ್ಕೆ ಸೇರಿಸುತ್ತೇವೆ. ಒಂದರ ಥರ ಮತ್ತೊಂದು ಎನ್ನುವಾಗ ನಾವು ಈ ಅನನ್ಯತೆಯನ್ನು ಸೂಚಿಸುತ್ತೇವೆ. ರಾಮ ಅಂದರೆ ರಾಮ ಎಂದಾಗ ನಾವು ಅವನು ಭೀಮನು ಅಲ್ಲವೆಂದು ಅರ್ಥ ಮಾಡಿಕೊಳ್ಳುತ್ತೇವೆ.. ವಸ್ತುಗಳನ್ನು ಅವುಗಳ ಅನನ್ಯತೆಯ ಮೂಲಕವೇ ನಾವು ಗುರುತಿಸುತ್ತೇವೆ. ಆಲೋಚಿಸುವುದು ಮತ್ತು ಆಗುವುದು ಎಂದರೆ ಅದು ಒಂದು ಚಲನೆಯೂ ಹೌದು. ಒಂದು ವಸ್ತುವು ತನ್ನ ಜೊತೆಗೆ ಇದ್ದರೆ ಅದರ ಅನನ್ಯತೆಯು ತನ್ನ ಮೂಲಕವೇ ಗುರುತಿಸಲ್ಪಡುತ್ತವೆ. ಅದು ಅಗತ್ಯವಾಗುತ್ತದೆ. ವಾಸ್ತವವಾಗಿ ಅನನ್ಯತೆಯು ಹೀಗೆ ಒಂದು ಮತ್ತೊಂದರ ಜೊತೆಗೆ ಗುರುತಿಸಲ್ಪಡುತ್ತದೆ. ಹಾಗಿದ್ದರೆ ಆಗುವುದು ಅಂದರೆ ಏನು ಮತ್ತು ಅದು ಹೇಗೆ ಆಗುತ್ತದೆ ಎನ್ನುವುದು ಮಾತ್ರವೇ ಪ್ರಶ್ನೆ. ಆಗುವುದು ಅಂದರೆ ಏನು ಮತ್ತು ಯಾರು ಮನುಷ್ಯರು

ಆಗುತ್ತಾರೆ ಯಾರು ಹೇಗೆ ಆಗುತ್ತಾರೆ ಮುಂತಾದ ಪ್ರಶ್ನೆಗಳು ಇವೆ. ಇದನ್ನು ಯಾರೂ ಉತ್ತರಿಸಬಹುದು. ಆಗುವಿಕೆಗೆ ಒಂದು ಅರ್ಥವೂ ಇದೆ. ಆಗುವುದು ಅಂದರೆ ಅದರ ಸ್ವರೂಪವು ಅದರ ಅಸ್ತಿತ್ವದಲ್ಲಿ ಇರುತ್ತದೆ. ಮನುಷ್ಯನು ಆಗುತ್ತಾನೆ ಅಂದರೆ ಅವನು ಮನುಷ್ಯತ್ವದ ಲಕ್ಷಣಗಳನ್ನು ಪ್ರಸ್ತುತಪಡಿಸುವುದೂ ಹೌದು. ಆಲೋಚನೆಯ ಕ್ರಮವನ್ನು ಪ್ರತಿಪಾದಿಸುತ್ತದೆ. ಅಷ್ಟೇ ಅಲ್ಲ ಆಧುನಿಕ ತಾಂತ್ರಿಕತೆಯು ವ್ಯಕ್ತಿಯನ್ನು ಮತ್ತು ಅವನ ಚಹರೆಗಳನ್ನು ಬದಲು ಮಾಡಿದೆ. ಹಾಗೆ ವ್ಯಕ್ತಿಯು ಒಂದು ಚೌಕಟ್ಟಿನೊಳಗೆ ಬದಲಾಗುತ್ತಾನೆ. ಯಂತ್ರಗಳು, ಸಂವಹನಗಳು, ಆಧುನಿಕ ಪರಿಸ್ಥಿತಿಗಳ ಪರಿಣಾಮವಾಗಿ ವ್ಯಕ್ತಿಯು ವ್ಯತ್ಯಾಸವಾಗುತ್ತಾನೆ. ಮನುಷ್ಯ ಮತ್ತು ಅವನ ಆಗುವಿಕೆಯಲ್ಲಿ ಒಂದಕ್ಕೆ ಒಂದು ಸಂಬಂಧವೂ ಇದೆ.

ನಿಧಾನವಾಗಿ ಮಾನವನ ಇತಿಹಾಸವು ಬದಲಾಯಿತು. ಮತ್ತು ಹೀಗೆ ಬದಲಾದಾಗ ಸನ್ನಿವೇಶದಲ್ಲಿ ವ್ಯಕ್ತಿ ಮತ್ತು ಅವನ ಚಹರೆಗಳು ಬದಲಾದವು. ಮನುಷ್ಯನು ಚರಿತ್ರೆಯನ್ನು ಆಡಿದ ಎಂದರೆ ಅದರ ಅರ್ಥವನ್ನು ಬೇರೆ ಥರ ನೋಡಲು ಸಾಧ್ಯವಾಗುತ್ತದೆ. ಮನುಷ್ಯ, ಮಾಡು, ಚರಿತ್ರೆ, ಅರಿಯವಿಕೆ ಇವುಗಳು ಬೇರೆ ಬೇರೆ ಅರ್ಥವನ್ನು ಹೊಂದುತ್ತದೆ. ಮನುಷ್ಯನು ಚರಿತ್ರೆಯನ್ನು ಮಾಡಿದ ಎಂದರೆ ಅದರ ಅರ್ಥ ಅವನು ಒಬ್ಬನೆ ಮಾಡಿದ ಎಂದು ಅಲ್ಲ, ಬಡಗಿಯು ನಾನು ಈ ಮೇಜನ್ನು ಮಾಡಿದೆ ಎಂದು ಹೇಳುತ್ತಾನೆ. ನಾವು ನಾನು ತಪ್ಪುಮಾಡಿದೆ ಎಂದು ಹೇಳುತ್ತೇವೆ. ಮಾಡಿದೆ ಎಂದರೆ ಅದರ ಅರ್ಥವು ಎಲ್ಲರಿಗೂ ತಿಳಿಯುತ್ತದೆ. ಈಗಾಗಲೇ ಮರವು ಇತ್ತು ಬಡಗಿಯು ಅದನ್ನು ಮಾಡಿದ ಎಂದು ಮಾತ್ರವೇ ಅರ್ಥ, ಕಚ್ಚಾಪದಾರ್ಥವು ಬದಲಾಗುತ್ತದೆ ಮಾತ್ರವೇ .ಅಂದರೆ ಪರಿವರ್ತನೆಯು ಆಗಿದೆ ಎಂದು ಮಾತ್ರವೇ ತಿಳಿದುಕೊಳ್ಳಬೇಕು ಈಗಾಲೇ ಚರಿತ್ರೆಯು ಇದೆ. ಅದನ್ನು ಪರಿವರ್ತನೆ ಮಾಡುತ್ತೇವೆ ಮಾರ್ಕ್ಸ್ ವ್ಯಕ್ತಿಯನ್ನು ಪರಿಕರವುಳ್ಳ ಪ್ರಾಣಿ ಎಂದು ಕರೆದ ಎನ್ನುವುದನ್ನು ಈ ಹಿನ್ನೆಲೆಯಿಂದ ಅರ್ಥ ಮಾಡಿಕೊಳ್ಳಬೇಕು. ಪರಿವರ್ತನೆಯನ್ನು ವ್ಯಕ್ತಿಯು ಮಾಡುತ್ತಾನೆ (ಅಲ್ತೂಸರ್ 1976 ಎಸ್ಸೇಸ್ ಇನ್ ಸೆಲ್ಫ್ ಕ್ರಿಟಿಸಿಸಂ ಪು 43) ಅನನ್ಯತೆಯು ವ್ಯಕ್ತಿಯ ಆಗುವಿಕೆಯಲ್ಲಿ ಅತ್ಯಂತ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಅದು ನಿರ್ದಿಷ್ಟವಾದ ಲಕ್ಷಣವೂ ಹೌದು. ಹಾಗೆಯೇ ವ್ಯಕ್ತಿ ಮತ್ತು ಅವನ ಅನ್ಯತೆಯು ಬದಲಾಗುತ್ತದೆ. ನಾವು ಮನುಷ್ಯರು ಆಗಿದ್ದೇವೆ ಎಂದರೆ ನಾವು ದೆವ್ವಗಳು ಆಗಿಲ್ಲ ಎನ್ನುವುದೂ ಒಂದು ಅರಿವು. ಯೋಚಿಸುವುದು ಮತ್ತು ಚಟುವಟಿಕೆಯಿಂದ ಇರುವುದು ನಮ್ಮ ಅನನ್ಯತೆಯನ್ನು ಹೇಳುತ್ತದೆ. ಅಷ್ಟೇ ಅಲ್ಲ ಕಾಲಬದ್ಧವಾಗಿ ನಮ್ಮ ಅನನ್ಯತೆಯು ರೂಪುಗೊಳ್ಳುತ್ತದೆ. ಆದರೆ ಆಲೋಚನೆ ಮತ್ತು ಅದರ ಸ್ವಭಾವವು ಮುಖ್ಯವಾಗಿ ಹೃದಯ ಅಥವಾ ಮೆದುಳಿನ ಪ್ರಶ್ನೆಯೂ ಆಗಿದೆ. ಆಗುವುದು ಒಂದು ಅರ್ಥದಲ್ಲಿ ತರ್ಕ ಬದ್ಧವೂ ಆಗಿರುತ್ತದೆ. ಆಗುವಿಕೆಯು ಸ್ವಂತಿಕೆಯ ಲಕ್ಷಣವೂ ಹೌದು. ಬಾಹ್ಯದ ಚರಿತ್ರೆಯು ನಮ್ಮ ಆಗುವಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಅದರ ಜೊತೆಗೆ ನಮಗೆ ದ್ವಂದ್ವಾತ್ಮಕವಾದ ಸಂಬಂಧವೂ ಇರುತ್ತದೆ.

*** ವಿವರಗಳಿಗೆ ನೋಡಿ: ಲೈನ್ ಹಂಟ್ – ದ ನ್ಯೂ ಕಲ್ಚುರಲ್ ಹಿಸ್ಟರಿ**

೨

ಕಾರ್ಮಿಕರು ಸಿದ್ಧಾಂತ, ಅದರ ಮೌಲ್ಯಗಳ ವಿವೇಚನೆ

ಮಾರ್ಕ್ಸ್‌ವಾದದ ಪ್ರಕಾರ ಎಲ್ಲಿ ಸಂಪನ್ಮೂಲದ ಕೊರತೆಯು ಆಗುತ್ತದೆಯೋ ಅಗ ಅದರ ಪರಿಣಾಮವು ಜನರ ಮೇಲೆ ಆಗುತ್ತದೆ. ಅದರಲ್ಲಿಯೂ ಅದು ಹೆಚ್ಚು ಪರಿಣಾಮವನ್ನು ಬೀರುವುದು ಕಾರ್ಮಿಕರ ಮೇಲೆ. ಯಾರೋ ಒಂದಿಬ್ಬರ ಖಾಸಗಿ ಆಸಕ್ತಿ ಮತ್ತು ಅವರು ಹಣವನ್ನು ಚಲಾಯಿಸುವ ರೀತಿಯನ್ನು ನೋಡಿ ನಾವು ಇಡಿಯ ಸಮಾಜವೇ ಅಭಿವೃದ್ಧಿಯಾಯಿತು ಎಂದು ಹೇಳುವುದು ಕಷ್ಟ. ಹಣವೆನ್ನುವುದನ್ನು ನಾವು ವಿವರಿಸುವುದು ಕಷ್ಟ. ಖಾಸಗಿಯಾದ ಅಭಿವೃದ್ಧಿಯೇ ಸಾಮಾಜಿಕ ಅಭಿವೃದ್ಧಿ ಎಂದು ಹೇಳಲು ಬರುವುದೂ ಇಲ್ಲ. ಒಂದು ಸಮಾಜವು ಜನರ ಪರವಾಗಿ ಇಲ್ಲದೆ ಹೋದರೆ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಹೇಳುವುದು ಅಸಾಧ್ಯ. ಬಂಡವಾಳವಾದಿ ವ್ಯವಸ್ಥೆಯಲ್ಲಿ ಕಾರ್ಮಿಕರು ಉತ್ಪನ್ನದ ಹೆಚ್ಚಿನ ಭಾಗವನ್ನು ಪಡೆಯುವುದಿಲ್ಲವೆನ್ನುವುದೂ ಅಷ್ಟೇ ಸತ್ಯ. ಹಾಗೆ ನೋಡುವುದಿದ್ದರೆ ಕಾರ್ಮಿಕರು ಪಡೆಯುವ ವೇತನವು ಉತ್ಪನ್ನದ ಅರ್ಧ ಭಾಗದಷ್ಟೂ ಆಗುವುದಿಲ್ಲ. ಲಾಭದ ನಾಲ್ಕನೆಯ ಒಂದು ಭಾಗವೂ ಕಾರ್ಮಿಕರಿಗೆ ತಲುಪುವುದೂ ಇಲ್ಲ. ರಾಜಕೀಯ ಆರ್ಥಿಕ ತಜ್ಞರ ಪ್ರಕಾರ ಕಾರ್ಮಿಕರ ಒಟ್ಟು ಶ್ರಮವನ್ನು ಲೆಕ್ಕ ಹಾಕದೇ ಬಂಡವಾಳ,ಅದರ ಹೂಡಿಕೆ,ಅದರ ಲಾಭ,ಹಾಗೂ ಅದರ ಒಟ್ಟು ಉತ್ಪಾದನೆಯನ್ನು ಲೆಕ್ಕ ಹಾಕಬೇಕು. ಆದರೆ ಅದು ಆಗುವುದೂ ಇಲ್ಲ. ಬಂಡವಾಳವು ಒಂದು ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸುವಾಗಅದರ ಬೆಲೆ ಅದರ ಹಿಂದಿನ ಶಕ್ತಿ ಎರಡೂ ನಮ್ಮ ಗಮನಕ್ಕೇ ಬರಬೇಕು. ಹಣವು ಒಂದು ಸಂದರ್ಭದಲ್ಲಿ ಮನುಷ್ಯರನ್ನು ಸುಖದ ಕಡೆಗೆ ತಳ್ಳಿತು. ಕಾರ್ಮಿಕರ ಶಕ್ತಿಯನ್ನು ನಾವು ಮನಗಾಣುವುದೇ ಇಲ್ಲ. ಅವರು ತಮ್ಮ ಜೀವನವನ್ನು ಉತ್ಪಾದನೆಗೆ ಬಲಿ ನೀಡುತ್ತಾರೆ. ಮನುಷ್ಯರಾಗಿ ಅವರು ತಮ್ಮ ಜೀವನವನ್ನು ವ್ಯವಸ್ಥೆಗೆ ಬಲಿ ನೀಡುತ್ತಾರೆ. ರಾಜಕೀಯ ಅರ್ಥ ಶಾಸ್ತ್ರಜ್ಞರ ಪ್ರಕಾರ ಕಾರ್ಮಿಕರ ದುಡಿಮೆಗೆ ಕೇವಲ ನಿಗದಿತ ಬೆಲೆಯಿದೆ. ಆದರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ನಾವು ಅನೇಕ ವಿಷಯಗಳನ್ನು

ನೋಡುವುದೇ ಇಲ್ಲ. ಬಂಡವಾಳವಾದವು ತನ್ನ ಲಾಭಕ್ಕೆ ತನ್ನ ಕಾರ್ಮಿಕರನ್ನೇ ಬಲಿ ತೆಗೆಯುತ್ತದೆ. ಅಷ್ಟೇ ಅಲ್ಲ ಅದು ಏನು ಮಾಡುತ್ತದೆ ಎಂದರೆ ಕಾರ್ಮಿಕರಿಗಾಗಿ ಕಾನೂನನ್ನು ರೂಪಿಸುತ್ತದೆ. ಕಾರ್ಮಿಕರು ಎಷ್ಟು ಹೊತ್ತು ಕೆಲಸವನ್ನು ಮಾಡಬೇಕು ಎನ್ನುವುದನ್ನು ನಿರ್ಧರಿಸುವುದು ಬಂಡವಾಳವಾದವೇ. ಅದರೊಂದಿಗೆ ಅವರು ಕಾರ್ಮಿಕರನ್ನು ಆಶ್ರಯಿಸುವುದು ಕೂಡಾ ಸ್ವ ಲಾಭಕ್ಕಾಗಿ. ಆದರೆ ಕಾರ್ಮಿಕರು ಬಂಡವಾಳಿಗನನ್ನು ಆಶ್ರಯಿಸುವುದು ತಮ್ಮ ಹಸಿವೆಯನ್ನು ನೀಗಿಸುವುದಕ್ಕಾಗಿ ಮಾತ್ರ. ತಮಾಶೆಯ ವಿಷಯವೆಂದರೆ ಬಂಡವಾಳಿಗರು ತಾವೇ ಕಾರ್ಮಿಕರಿಗಿಂತ ಶ್ರೇಷ್ಟವೆಂದು ಭಾವಿಸಿಕೊಳ್ಳುವುದು. ಹಾಗೂ ಅವರು ತಮ್ಮ ಶಕ್ತಿಯನ್ನು ಪ್ರದರ್ಶಿಸುವುದು ತಮ್ಮ ಸ್ಪರ್ಧೆಗಾಗಿ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಕಾರ್ಮಿಕನು ತನ್ನ ಎಲ್ಲಾ ಶಕ್ತಿಯನ್ನು ಬಳಸಿಕೊಳ್ಳುವುದು ಹಾಗೂ ತನ್ನ ಸಮಯವನ್ನು ಮೀಸಲಿಡುವುದು ಬಂಡವಾಳಿಗರನ್ನು ಉದ್ಧಾರ ಮಾಡುವುದಕ್ಕೆ. ಆದರೆ ಬಂಡವಾಳಿಗರು ತಮ್ಮ ಸಮಯವನ್ನು ಮೀಸಲಿಡುವುದು ಲಾಭ ಮತ್ತು ಮೋಜಿಗಾಗಿ. ವ್ಯಕ್ತಿಗಳಾಗಿ ಅವರಿಗೆ ಉತ್ಪಾದನೆಯ ಜೊತೆಗೆ ನೇರ ಸಂಪರ್ಕವಿಲ್ಲ. ಆದರೆ ಕಾರ್ಮಿಕರಿಗೆ ಅದು ಇದೆ. ಬಂಡವಾಳಿಗರು ಆದಾಯ ಹಾಗೂ ಲಾಭವನ್ನು ಮಾತ್ರವೇ ಲೆಕ್ಕ ಹಾಕುತ್ತಾರೆ. ಹಾಗಾಗಿ ಅವರದು ಕೇವಲ ವರ್ತಮಾನದ ದೃಷ್ಟಿ. ಆದರೆ ಅವರು ಅದನ್ನು ಪಡೆಯುವುದು ಕಾರ್ಮಿಕರ ಶಕ್ತಿಯಿಂದ ಎಂಬುದನ್ನು ಮರೆಯುತ್ತಾರೆ.ಇಲ್ಲಿ ಒಂದು ಅಂಶವನ್ನು ಗಮನಿಸಬೇಕು– ಅದು ಕಾರ್ಮಿಕರು ಅಂದರೆ ಕೇವಲ ಬಿಡಿಯಾದ ವ್ಯಕ್ತಿಗಳು ಅಲ್ಲ. ಅವರೆಂದರೆ ಉತ್ಪಾದಕ ಶಕ್ತಿಗಳು ಮಾತ್ರ. ನಾವೀಗ ಮತ್ತೊಂದು ಅಂಶವನ್ನು ಗಮನಿಸಬೇಕು ಕಾರ್ಮಿಕರು ಯಾಕೆ ದುಡಿಯುತ್ತಾರೆ ಎಂದು ಕೇಳಿದರೆ ಅದರ ಸ್ವರೂಪವನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯ. ಅವರು ದುಡಿಯುವುದು ತಮ್ಮ ಹಸಿವೆಯನ್ನು ನೀಗುವುದಕ್ಕಾಗಿ. ಬಂಡವಾಳವೆಂದರೆ ಉತ್ಪಾದನೆಗೆ ಹಾಕುವ ಮೊತ್ತ. ಆದರೆ ಅದರಲ್ಲಿ ಕಾರ್ಮಿಕರನ್ನೂ ಒಂದು ಬಂಡವಾಳವೆಂದು ಹೇಳುವುದಿಲ್ಲ. ಅದು ನಮ್ಮ ಮುಂದೆ ಇರುವ ಸಮಸ್ಯೆಯೂ ಹೌದು. ಬಂಡವಾಳಿಗರು ತಾವು ಕೂಲಿಯನ್ನು ಎಷ್ಟು ಕೊಟ್ಟಿದ್ದೇವೆ ಎಂದು ಮಾತ್ರವೇ ಲೆಕ್ಕ ಹಾಕಿ ಅದರ ಲಾಭವನ್ನು ಮಾತ್ರವೇ ಗಮನಕ್ಕೆ ಇಟ್ಟುಕೊಂಡು ಉಳಿದದ್ದೂ ತಮ್ಮ ಪಾಲು ಎಂದು ಮಾತ್ರವೇ ಗಮನಿಸುತ್ತಾರೆ. ಆದರೆ ಕಾರ್ಮಿಕರ ದೇಹ ಮತ್ತು ಅವರ ಮನಸ್ಸು ಉತ್ಪಾದನೆಯಲ್ಲಿ ಎಷ್ಟು ಬಳಕೆಯಾಗಿದೆ? ಅದರಲ್ಲಿ ಅವರ ನೋವು ಎಷ್ಟು? ಅದಕ್ಕೆ ಯಾವುದನ್ನು ನೀಡಬೇಕು ಎನ್ನುವುದನ್ನು ಬಂಡವಾಳಿಗರು ಮರೆಯುತ್ತಾರೆ. ಇದನ್ನು ನಾವು ಹೀಗೂ ಗಮನಿಸಬೇಕು–ವಾಸ್ತವವಾಗಿ ಕಾರ್ಮಿಕರಿಗೆ ತಾವು ಯಾವ ಸನ್ನಿವೇಶದಲ್ಲಿ ಬದುಕುತ್ತಿದ್ದೇವೆ ಎನ್ನುವುದರ ಅರಿವೇ ಇರುವುದಿಲ್ಲ. ಅವರು ದುಡಿಯುತ್ತಾರೆ ಆದರೆ ಅದರ ಪರಿಣಾಮವು ಅವರ ತಿಳುವಳಿಕೆಯ ಒಳಗೆ ಬರುವುದಿಲ್ಲ. ಈ ವಿಷಯದಲ್ಲಿ ಬಂಡವಾಳಿಗರಿಗೆ ಉದಾರವಾದ ಮನಸ್ಸೂ ಇಲ್ಲ. ಕಾರ್ಮಿಕರಿಗೆ ಸರಿಯಾದ ವೇತನವನ್ನು ಕೊಟ್ಟು ಉಳಿದ ಲಾಭದಲ್ಲಿ ಕಂದಾಯ ಮತ್ತು ಆದಾಯವನ್ನು ಲೆಕ್ಕ ಹಾಕಬೇಕು. ಆದರೆ ಆಗುವುದು ಇದಕ್ಕಿಂತ ವ್ಯತಿರಿಕ್ತವಾಗಿ. ಜನರ ಗಮನವಿರುವುದು ಯಾವಾಗಲೂ ಲಾಭದ ಕಡೆಗೆ ಮಾತ್ರವೇ. ಒಂದು ಚಾರಿತ್ರಿಕ ವ್ಯಂಗ್ಯವೆಂದರೆ ಕಾರ್ಮಿಕರನ್ನು ಗಮನದಲ್ಲಿ ಇಟ್ಟುಕೊಂಡು ಯಾರೂ ರಾಜ್ಯವನ್ನು ಕಟ್ಟುವುದಿಲ್ಲ. ಬಂಡವಾಳವಾದ ವಿರಲಿ ಅಥವಾ ಜಮೀನುದಾರಿ ಪದ್ಧತಿಯಿರಲಿ ಕಾರ್ಮಿಕರ ಜೀವನದ ಪರಿಸ್ಥಿತಿಯು ಬದಲಾಗುವುದಿಲ್ಲ.

ಕಾರ್ಮಿಕನು ಯಾಕೆ ಹೆಚ್ಚು ಕ್ರಿಯಾಶೀಲನಾಗುತ್ತಾನೆಂದರೆ ಅವನಿಗೆ ದುಡಿಯದೆ ಬೇರೆ ಗತ್ಯಂತರವಿಲ್ಲ. ರಾಜಕೀಯ ಅರ್ಥಶಾಸ್ತ್ರದಲ್ಲಿ ಕಾರ್ಮಿಕನು ಉದ್ದಿಮೆಗೆ ಲಾಭವನ್ನು ತರುವವನು ಮಾತ್ರ. ಆದರೆ ಅದನ್ನು ನಾವು ಮನಗಾಣುವುದಿಲ್ಲ. ಕಾರ್ಮಿಕನದು ಕೂಲಿಯನ್ನು ಪಡೆಯುವ ಒಂದು ಘಟಕ ಮಾತ್ರವೆಂದು ಹೇಳುವುದೇ ಸಮಂಜಸವಲ್ಲ. ಕಾರ್ಮಿಕರ ಶೋಷಣೆಗೆ ಒಂದು ಇತಿಮಿತಿ ಅನ್ನುವುದೇ ಇಲ್ಲ. ಅದಕ್ಕೆ ಒಂದು ಬೌಂಡರಿ ಅನ್ನುವುದೇ ಇಲ್ಲ. ಕಾರ್ಮಿಕರನ್ನು ಯಾವಾಗಲೂ ಒಂದು ಉತ್ಪಾದನೆಯ ಭಾಗವಾಗಿ ಮಾತ್ರವೆ ನೋಡುವುದರಿಂದ ಕಾರ್ಮಿಕರ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗಿ ಯಾವುದೇ ಒಂದು ಉತ್ಪಾದನೆಯಲ್ಲಿ ಕಾರ್ಮಿಕರಿಗೆ ಕೊಡುವ ತರಬೇತಿಯು ಒಂದು ಭಾಗ ಮಾತ್ರವೇ ಆಗಿರುತ್ತದೆ.

ಬಂಡವಾಳವಾದವು ಕಾರ್ಮಿಕರ ನಡುವೆ ತನಗೆ ಬೇಕಾದ ರೀತಿಯಲ್ಲಿ ಸಂಘರ್ಷವನ್ನು ಉಂಟುಮಾಡುತ್ತದೆ. ಅದರಿಂದ ಅದಕ್ಕೆ ಅನುಕೂಲವಿದೆ.ಮಾಸಿಕ ವೇತನ ಮತ್ತು ದಿನಕೂಲಿಗಳ ನಡುವೆ ಬಹಳ ವ್ಯತ್ಯಾಸವಿದೆ. ಮಕ್ಕಳ ಮಾರಾಟ,ಹೆಂಗಸರ ಮಾರಾಟ, ಹಾಗೂ ಜೀತದಾಳುಗಳ ಮಾರಾಟವು ಒಂದು ಸಾಮಾಜದಲ್ಲಿ ಯಾಕೆ ನಡೆಯುತ್ತದೆ ಎಂದರೆ ಕೆಲಸದಾಳುಗಳು ಕಡಿಮೆ ಬೆಲೆಗೆ ಸಿಗುತ್ತಾರೆ. ವಾಸ್ತವವಾಗಿ ಕೆಲಸಗಾರರು ಎಂದು ಯಾರನ್ನು ಕರೆಯುತ್ತಾರೋ ಅವರು ಸರಕುಗಳಲ್ಲ. ಆದರೆ ಅವರನ್ನು ಹಾಗೆ ಭಾವಿಸಲಾಗುತ್ತದೆ. ಆಳುಗಳಿಗೆ ಅವರದೇ ಆದ ಜೀವನ ಕ್ರಮವಿದೆ. ಆದರೆ ನಾವು ಅದನ್ನು ಯೋಚಿಸಲು ಹೋಗುವುದೇ ಇಲ್ಲ. ಕೆಲಸಗಾರರು ದುಡಿಯುವುದು ಅವರ ದೈನಂದಿನ ಆಹಾರಕ್ಕಾಗಿ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಇದನ್ನು ಮತ್ತೆ ಹೇಳಿದ್ದು ಯಾಕೆಂದರೆ ದುಡಿಮೆ ಮತ್ತು ಉಪವಾಸ ಎರಡೂ ಕಾರ್ಮಿಕರಿಗೆ ಗೊತ್ತು. ಮತ್ತು ಅದನ್ನು ಅವರ ದೇಹವು ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತದೆ. ದುಡಿಮೆ ಅಂದರೆ ದೇಹ ಹಾಗೂ ಹಸಿವೆಯ ಪ್ರಶ್ನೆ. ಆಹಾರಕ್ಕಾಗಿ ಅವರು ಕಷ್ಟವನ್ನು ಪಡುತ್ತಾರೆ. ಇರುವ ಪ್ರಶ್ನೆ ಎಂದರೆ ಅವರು ಜೀವನವನ್ನು ವಸ್ತುವಾಗಿಯೋ ಸರಕಾಗಿಯೋ ನೋಡುತ್ತಾರೆ. ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಒಂದು ಆಟವಾಗಿಯೂ ಪರಿವರ್ತಿಸುತ್ತಾರೆ. ಅವರಿಗೆ ಅದು ಒಂದು ಯುದ್ಧ. ಈ ಆಟಕ್ಕೆ ದಾಳವಾಗುವುದು ಆಳುಗಳು. ಆಳುಗಳಿಗೆ ತಾವು ಬಂಡವಾಳದ ಕೂಸುಗಳು ಎಂದು ತಿಳಿದಿರುವುದಿಲ್ಲ. ಕೈಗಾರಿಕಾ ಸಂಸ್ಕೃತಿಯಲ್ಲಿ ಹಣವೆನ್ನುವುದು ವಿಶಿಷ್ಟವಾದ ಸಂವೇದನೆಯನ್ನು ಹುಟ್ಟು ಹಾಕಿತು. ಹಾಗೆ ನೋಡಿದರೆ ನಮಗೆ ಹಣವನ್ನ ಬಳಸಲು ಬೇರೆ ಬೇರೆ ಮಾರ್ಗವಿದೆ. ಕೈಗಾರಿಕಾ ಸಂಸ್ಕೃತಿಯಲ್ಲಿ ಸಂಪನ್ಮೂಲವನ್ನು ಗುರುತಿಸುವ ಕ್ರಮ ಬೇರೆ.

ರಾಜಕೀಯ ಅರ್ಥಶಾಸ್ತ್ರದಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆಯು ಬಂದಿದೆ. ಅದರೆ ಕಾರ್ಮಿಕರು ಮತ್ತು ಅವರ ಶಕ್ತಿಗೆ ಇರುವ ಬೆಲೆಯ ಪ್ರಶ್ನೆ. ಕಾರ್ಮಿಕರು ಮತ್ತು ಅದರ ಶಕ್ತಿಯು ಹೇಗೆ ಒಂದು ಮೌಲ್ಯವಾಗಿ ಪರಿವರ್ತನೆಯು ಆಗುತ್ತದೆ ಎಂದು ಮಾರ್ಕ್ಸ್ ಅದರಲ್ಲಿ ಹೇಳುತ್ತಾನೆ. ಅವರ ಶಕ್ತಿಯು ಹೇಗೆ ವ್ಯಕ್ತವಾಗುತ್ತದೆ ಮತ್ತು ಅದರಲ್ಲಿ ಮೌಲ್ಯವು ಹೇಗೆ ಇರುತ್ತದೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ಆಧುನಿಕ ಬಂಡವಾಳವಾದವು ಕಾರ್ಮಿಕರನ್ನು ಬಳಸುತ್ತದೆ. ಹಾಗೆ ನೋಡಿದರೆ ವ್ಯಕ್ತಿ ಮತ್ತು ಅವನ ಶಕ್ತಿಯು ಅನೇಕವನ್ನು ಸೃಷ್ಟಿ ಮಾಡುತ್ತದೆ. ಅದು

ಮೌಲ್ಯವಾಗಿ ರೂಪುಗೊಳ್ಳುತ್ತದೆ. ಕಾರ್ಮಿಕರು ಎರಡು ಥರ ಇರುತ್ತಾರೆ: ಒಂದು ಮೂರ್ತ ರೂಪದ ಕಾರ್ಮಿಕರು ಮತ್ತೊಂದು ಅಮೂರ್ತ ರೂಪದ ಕಾರ್ಮಿಕರು. ಮಾರ್ಕ್ಸ್ ಕಾರ್ಮಿಕರು ಮತ್ತು ಅವರ ಸ್ವರೂಪವನ್ನು ಹೇಳುವಾಗ ಅವರು ಮಾಧ್ಯಮವೂ ಆಗಿರುತ್ತಾರೆ ಎಂದು ಹೇಳುತ್ತಾನೆ. ಆವರು ಮಾಧ್ಯಮವು ಮಾತ್ರವೇ ಆಗಿರುವಾಗ ಅವರ ಅರ್ಥವು ಬೇರೆಯಾಗುತ್ತದೆ. ಮತ್ತೊಂದು ರೀತಿಯಲ್ಲಿ ಕಾರ್ಮಿಕರು ನೇರವಾಗಿ ಭಾಗವಹಿಸುತ್ತಾರೆ. ಒಂದು ಉತ್ಪಾದನೆಯನ್ನು ಅವರ ಮಾಡುತ್ತಾರೆ ಅದನ್ನೇ ಅವರು ಮಾರಾಟವನ್ನು ಮಾಡುತ್ತಾರೆ. ಕಾರ್ಮಿಕರು ಒಂದು ಮಾಧ್ಯಮವಾಗಿ ಕೆಲಸವನ್ನು ನಿರ್ವಹಿಸುವಾಗ ಒಂದು ವ್ಯವಸ್ಥೆಗೆ ಮಾಧ್ಯಮವಾಗುತ್ತಾರೆ. ಆದರೆ ನೇರವಾಗಿ ಇರುವಾಗ ಅವರ ಕಾರ್ಯವನ್ನು ನಾವು ನೇರವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಒಂದು ಯಜಮಾನಿಕೆಗೆ ಪೂರಕವಾಗಿ ಅವರು ಕೆಲಸವನ್ನು ಮಾಡುವಾಗ ಅವರ ಶಕ್ತಿಗೆ ತಕ್ಕ ಬೆಲೆಯು ಸಿಗುತ್ತದೆ ಎಂದು ಹೇಳಲು ಬರುವುದಿಲ್ಲ. ಬಂಡವಾಳವಾದಿ ರಚನೆಯು ಹಾಗೆ ಇರುತ್ತದೆ. ಅದನ್ನು ನಾವು ಮರೆಯುವಂತೆ ಇಲ್ಲ. ಆದ್ದರಿಂದ ನಾವು ಮೊದಲ ನೋಟಕ್ಕೆ ಎಲ್ಲವನ್ನು ತೀರ್ಮಾನ ಮಾಡಲು ಆಗುವುದಿಲ್ಲವೆಂದು ಮಾರ್ಕ್ಸ್ ಹೇಳುತ್ತಾನೆ. ವಸ್ತು ಮತ್ತು ಅದರ ವಿನಿಮಯದ ಮೌಲ್ಯವು ನಮಗೆ ಅನೇಕವನ್ನು ಸೂಚಿಸುತ್ತವೆ ಎನ್ನುವುದು ಅವನ ಅಭಿಪ್ರಾಯವೂ ಆಗಿದೆ. ವಿನಿಮಯ ಮತ್ತು ಅದರ ಗುಣಾತ್ಮಕವಾದ ಸ್ವರೂಪವು ವಿನಿಮಯವನ್ನು ಹೇಳುತ್ತದೆ. ಯಾವುದೇ ಉಪಯೋಗಕ್ಕೆ ಬಾರದಿರುವ ವಸ್ತುವಿಗೆ ಯಾವುದೇ ವಿನಿಮಯದ ಮೌಲ್ಯವು ಇರುವುದಿಲ್ಲ. ಎರಡನೆಯದಾಗಿ ವಿನಿಮಯವೂ ಕಾಲ ಮತ್ತು ಸ್ಥಳವನ್ನು ಹೊಂದಿರುತ್ತವೆ. ಆದ್ದರಿಂದಲೇ ನಮಗೆ ಇದರಲ್ಲಿ ಅನೇಕ ವೈರುದ್ಧ್ಯಗಳು ಕಾಣಿಸುತ್ತವೆ. ಯಾವುದೇ ವಸ್ತುವಿಗೆ ಒಂದು ಪರಂಪರಾಗತವಾದ ಮೌಲ್ಯ ಎನ್ನುವುದು ಇರುವುದಿಲ್ಲ ಎಂದು ಅವನು ಹೇಳುತ್ತಾನೆ. ಸಹಜವಾದುದನ್ನು ವ್ಯಕ್ತಿಯು ಪಲ್ಲಟ ಮಾಡುತ್ತಾನೆ. ಅದರ ಮೂಲಕ ವಸ್ತುವಿಗೆ ಹೊಸರೂಪವು ಬರುತ್ತದೆ. ಆದರೆ ಎಲ್ಲವೂ ಹೀಗೆ ಆಗುತ್ತವೆ ಎಂದು ಅರ್ಥವಲ್ಲ. ಅಗತ್ಯವಾದದ್ದನ್ನು ನಾವು ಪಲ್ಲಟ ಮಾಡುತ್ತೇವೆ. ಯಾವುದಕ್ಕೆ ಉಪಯೋಗ ಎನ್ನುವುದು ಇದೆಯೋ ಅದರ ಅಸ್ತಿತ್ವಕ್ಕೆ ಬೆಲೆಯು ಇರುತ್ತದೆ. ಕೆಲವನ್ನು ಅತ್ಯಂತ ಸಹಜವಾದ ಸಂಗತಿಗಳು ಎಂದು ಮಾರ್ಕ್ಸ್ ಹೇಳುತ್ತಾನೆ. ಯಾವಾಗ ಅದಕ್ಕೆ ಮೌಲ್ಯವು ಬರುತ್ತದೆಯೋ ಆಗ ಸಾಧ್ಯತೆಯು ಬೇರೆಯಾಗುತ್ತದೆ. ವಸ್ತುವು ಹೇಗೆ ಮೌಲ್ಯವನ್ನು ಸೂಚಿಸುತ್ತದೆ ಎನ್ನುವುದು ಇಲ್ಲಿ ಮುಖ್ಯ. ಆದ್ದರಿಂದ ವಸ್ತು ಮತ್ತು ಅದರ ಮೌಲ್ಯವು ಆಯಾ ಸನ್ನಿವೇಶದಲ್ಲಿ ಬೇರೆಯಾಗುತ್ತದೆ. ಅಮೂರ್ತವಾದ ಕಾರ್ಮಿಕರ ಶಕ್ತಿ ಎನ್ನುವುದು ಹೇಗೆ ಮೌಲ್ಯವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದೂ ಮಾರ್ಕ್ಸ್‌ನ ಗಮನದಲ್ಲಿ ಇದೆ. ಸಾಮಾಜಿಕ ಅಗತ್ಯಗಳು ಮತ್ತು ಮೌಲ್ಯಗಳು ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾಗಿದೆ. ಮನುಷ್ಯ ಮತ್ತು ಅವನ ಶಕ್ತಿ, ಅವನ ಕೆಲಸ, ವಸ್ತುವು ಪಡೆದುಕೊಳ್ಳುವ ಸ್ಥಾನಮಾನ ಮೌಲ್ಯವನ್ನು ನಿರ್ಧಾರ ಮಾಡಲು ಸಹಕಾರವನ್ನು ನೀಡುತ್ತವೆ, ನಮ್ಮ ಕೆಲಸದಿಂದ ಅಮೂರ್ತವಾದುದು ಮೂರ್ತತೆಗೂ ಬರುತ್ತದೆ. ಉಪಯೋಗ ಮತ್ತು ಅದರ ಸ್ವರೂಪವು ಇಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಾರ್ಕ್ಸ್ ವಿನಿಮಯವನ್ನು ಶೂನ್ಯ ಎಂದು ಪರಿಗಣಿಸುವುದೂ ಇಲ್ಲ. ಕಾರ್ಮಿಕರು ಮತ್ತು ಅವರ ಉತ್ಪಾದನೆ ಹಾಗೂ ಬಂಡವಾಳವಾದದ ರೂಪಗಳನ್ನು ಮಾರ್ಕ್ಸ್ ದ್ವಂದ್ವಾತ್ಮಕವಾಗಿಯೇ ಗ್ರಹಿಸುತ್ತಾನೆ. ಹೆಚ್ಚು ಉತ್ಪಾದನೆ ಮತ್ತು

ಮೌಲ್ಯಗಳು ಅವನ ಗಮನದಲ್ಲಿ ಇದೆ. ಒಂದು ವಸ್ತು ಮತ್ತು ಅದರ ಶಕ್ತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಅವನು ವಿವರಿಸುತ್ತಾನೆ. ವಾಸ್ತವವವಾಗಿ ಬಂಡವಾಳವಾದವು ವ್ಯಕ್ತಿ ಮತ್ತು ಅವನ ಶ್ರಮಕ್ಕೆ ಸರಿಯಾದ ಒಂದು ಬೆಲೆಯನ್ನು ಕೊಡುವುದೂ ಇಲ್ಲ. ಇದರಲ್ಲಿ ಸಮಸ್ಯೆಯು ಇರುತ್ತದೆ. ಬೂರ್ಜ್ವಾ ಮಾರುಕಟ್ಟೆಯು ಕೆಲವನ್ನು ನಿಯಂತ್ರಿಸುವುದೂ ಅಷ್ಟೇ ನಿಜ. ಇಲ್ಲಿ ಮತ್ತೊಂದು ವ್ಯಂಗ್ಯವನ್ನು ನಾವು ಗಮನಿಸಬೇಕು: ಅವರ ಮಾರುಕಟ್ಟೆಯು ಇರುವುದು ಒಂದು ಥರ. ಅದನ್ನು ಭ್ರಮಾ ಜಗತ್ತಿನ ಹಾರುವಿಕೆ ಎಂದು ಹೇಳುತ್ತಾರೆ. ಅದು ಜಾಗತಿಕ ಸತ್ಯವನ್ನು ಕಲ್ಪಿತವಾದ ಸತ್ಯವೆಂಬಂತೆ ಬಿಂಬಿಸುತ್ತದೆ. ಆಧುನಿಕ ಮಾರುಕಟ್ಟೆಯು ಹೇಗಿದೆ ಎಂದರೆ ಅದರಲ್ಲಿ ಭ್ರಮೆಗಳು ಹೆಚ್ಚು ಕಾಣಿಸುತ್ತವೆ. ಅದರ ಮೂಲಕ ಕೆಲವರು ಮಾತ್ರವೇ ಜಗತ್ತನ್ನು ನಿಯಂತ್ರಿಸುತ್ತಾರೆ. ಮುಕ್ತ ಮಾರುಕಟ್ಟೆಯು ತಾನು ಸ್ವಯಂ ಸಂಪೂರ್ಣ ಎಂದು ಹೇಳಿಕೊಳ್ಳುತ್ತದೆ. ಮುಕ್ತವಾದ ಸ್ಪರ್ಧೆಯನ್ನು ಅದು ವಿವರಿಸುತ್ತದೆ. ಆದರೆ ಮಾರುಕಟ್ಟೆಯ ವಕಾಲತ್ತು ವಹಿಸಿದವರು ಮಾತ್ರವೇ ಇದನ್ನು ಹೇಳುತ್ತಾರೆ. ಆದರೆ ಇದರಲ್ಲಿ ಎಲ್ಲಾ ಜನರ ಒಳಿತು ಎನ್ನುವುದೇ ಇಲ್ಲವೆಂದು ಹೇಳಲಾಗುತ್ತದೆ. ಆರ್ಥಿಕತೆಯು ಇದರಲ್ಲಿ ತಪ್ಪಾದ ನೆಲೆಯನ್ನು ಪಡೆಯುತ್ತದೆ. ಮಾರುಕಟ್ಟೆ ಮತ್ತು ಅದರ ವಿಫಲತೆಯು ಈವತ್ತು ಎದ್ದು ಕಾಣುತ್ತದೆ. ಆಧುನಿಕ ಮಾರುಕಟ್ಟೆಯು ಬೇರೆ ಬೇರೆ ಕಾರಣಗಳಿಂದ ಸೋಲನ್ನು ಕಂಡಿವೆ. ಪ್ರಭುತ್ವ ಮತ್ತು ಮಾರುಕಟ್ಟೆಯ ನಡುವಣ ಸಂಬಂಧವು ಒಂದೇ ರೀತಿಯಲ್ಲಿ ಇಲ್ಲ. ಮಾಹಿತಿಯು ನಮಗೆ ಸರಿಯಾಗಿ ದೊರೆಯುವುದೂ ಇಲ್ಲ ಮೂರನೆಯದಾಗಿ ಬಾಹ್ಯ ಮತ್ತು ಅದರ ರೂಪವನ್ನು ನಾವು ನಿರ್ಧರಿಸುವುದು ಅತ್ಯಂತ ಕಷ್ಟ. ಮಾರ್ಕ್ಸ್ ಮೂರು ಅಂಶಗಳನ್ನು ಗಮನಿಸುತ್ತಾನೆ: ಮಾರುಕಟ್ಟೆ ಮತ್ತು ಅದರ ಅವಕಾಶಗಳು ಇರುವುದು ಒಂದನೆಯ ಅಂಶ. ಎರಡನೆಯಾಗಿ ಅದರ ಸೀಮಾರೇಖೆಗಳು, ಮೂರನೆಯದಾಗಿ ಕಾರ್ಮಿಕರು ಮತ್ತು ಮಾರುಕಟ್ಟೆಯ ಸಂಬಂಧ. ಕೊಳ್ಳುವ ಸ್ವಾತಂತ್ರ್ಯ ಮತ್ತು ಮಾರುವ ಸ್ವಾತಂತ್ರ್ಯ ಕಾರ್ಮಿಕರು ಮತ್ತು ಅವರ ಶಕ್ತಿ, ಸಮಾನತೆ, ವಸ್ತು ಮತ್ತು ಅದರ ಒಡೆತನ, ವಿನಿಮಯ, ಸಂಬಂಧಗಳು, ಸ್ವಾರ್ಥ ಮಾರುಕಟ್ಟೆಯ ಮೇಲೆ ವಿವಿಧ ಪ್ರಭಾವವನ್ನು ಬೀರುತ್ತದೆ. ಹಣ ಮತ್ತು ಅದರ ಒಡೆತನವೂ ಇಲ್ಲಿ ಮುಖ್ಯವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎಲ್ಲರಿಗೂ ಸಂಪನ್ಮೂಲದ ಬಗ್ಗೆ ಒಂದು ಬಗೆಯ ಆಸಕ್ತಿಯು ಇರುತ್ತದೆ. ಹಣ ಇರುವವನು ಮಾರುಕಟ್ಟೆಯಲ್ಲಿ ಮುಂಚೂಣಿಗೆ ಬರುತ್ತಾನೆ. ಅವನು ಕಾರ್ಮಿಕರ ಶಕ್ತಿಯನ್ನು ಕೊಂಡುಕೊಳ್ಳುತ್ತಾನೆ. ಕಾರ್ಮಿಕರು ತಮ್ಮ ಶಕ್ತಿಯನ್ನು ಮಾರುತ್ತಾರೆ. ಯಾವುದು ಹೀಗೆ ಮಾರುಕಟ್ಟೆಯಲ್ಲಿ ಮಾರಲ್ಪಡುತ್ತದೆಯೋ ಅದರ ಲಾಭವನ್ನು ಬಂಡವಾಳವಾದಿಯು ಅನುಭವಿಸುತ್ತಾನೆ. ಅದನ್ನು ರಾಚನಿಕವಾದ ಅನುಕೂಲ ಎಂದು ಹೇಳುತ್ತಾನೆ. ಅತ್ಯಂತ ಕಡಿಮೆ ಬೆಲೆಗೆ ಕಾರ್ಮಿಕರ ಶಕ್ತಿಯು ದೊರೆಯುವಾಗ ಬಂಡವಾಳವಾದಿ ಲಾಭವನ್ನು ಹೆಚ್ಚು ಮಾಡಿಕೊಳ್ಳುತ್ತಾನೆ. ಹಾಗಿದ್ದರೆ ಯಾಕೆ ಕಾರ್ಮಿಕರು ತಮ್ಮ ಶಕ್ತಿಯನ್ನು ಮಾರುಕಟ್ಟೆಯಲ್ಲಿ ಕಡಿಮೆ ಮಾರುತ್ತಾರೆಂದರೆ ಅವರಿಗೆ ಬೇರೆ ದಾರಿಗಳು ಇರುವುದೂ ಇಲ್ಲ. ಒಮ್ಮೆ ಉದ್ಯೋಗವು ದೊರೆತರೆ ಸಾಕಪ್ಪಾ ಎಂದು ಅವರಿಗೆ ಅನಿಸುತ್ತದೆ. ವಾಸ್ತವವಾಗಿ ಕೊಳ್ಳುವವನಿಗೆ ತಾನು ಕೊಂಡುಕೊಳ್ಳುತ್ತಿರುವ ವಸ್ತುವಿನ ನಿಜವಾದ ಧಾರಣೆಯು ಯಾವುದು ಎಂದು ತಿಳಿಯುವುದೇ ಇಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು: ಮೊದಲು ಒಂದು ಬಗೆಯ ಚಾಕಲೇಟ್‌ನ್ನು ಮಾರುಕಟ್ಟೆಗೆ ಬಿಡುತ್ತಾರೆ. ಅದರ ಉದ್ದ ಮತ್ತು ಅಗಲ ಹಾಗೂ ದಪ್ಪ ಒಂದು

ರೀತಿಯಲ್ಲಿ ಇರುತ್ತದೆ. ಅದನ್ನು ತೂಕಕ್ಕೆ ಹಾಕಿದರೆ 100 ಗ್ರಾಂ ಅಂದು ಭಾವಿಸೋಣ. ಸ್ವಲ್ಪ ಸಮಯವು ಆದ ಮೇಲೆ ಅದರ ತೂಕವು ಕಡಿಮೆಯಾಗುತ್ತದೆ. ಅದರ ಬದಲು ಅದರ ಅಗಲವು ಮಾತ್ರವೇ ಹೆಚ್ಚಾಗುತ್ತದೆ. ಆಕರ್ಷಕವಾದ ಒಂದು ಕವರು ಬರುತ್ತದೆ. ಅದಾದ ಸ್ವಲ್ಪ ಸಮಯದಲ್ಲಿ ಅದರ ಸ್ವರೂಪವು ಬದಲಾಗುತ್ತದೆ. ಚಾಕಲೇಟ್ ಜನರಿಗೆ ಹಿಡಿಸಿದರೆ ಅದರ ಮಾರುಕಟ್ಟೆ ಮತ್ತು ಅದರ ಸ್ವರೂಪವು ಬದಲಾಗುತ್ತದೆ. ಅದರ ಏರಿಳಿತವನ್ನು ನಿರ್ಧಾರ ಮಾಡುವುದು ಬಂಡವಾಳಶಾಹಿ. ವಾಸ್ತವವಾಗಿ ನಾವು ಕೊಳ್ಳುವ ಆ ಚಾಕಲೇಟ್ ಹೇಗೆ ಇರಲಿ ಅದರ ರುಚಿಯು ನಮಗೆ ಹಿಡಿಸಿದರೆ ಅದರಿಂದ ಮುಕ್ತವಾಗಲಾರೆವು. ಇನ್ನೊಂದು ಉದಾಹರಣೆಯನ್ನು ನಾವು ಕೊಡಬಹುದು: ಈವತ್ತು ಕೋಕ್ ತುಂಬಾ ಜನಪ್ರಿಯವಾಗಿದೆ. ಅದರ ಬದಲು ಬೇರೆ ಉತ್ಪನ್ನ ನಮಗೆ ಹಿಡಿಸಲಿಲ್ಲವಾದರೆ ಮಾತ್ರವೇ ನಾವು ಬೇರೆ ಬ್ರಾಂಡ್‌ಗೆ ಹೋಗುತ್ತೇವೆ. ಇದನ್ನು ನಾವು ಮಾರುತಿ ಕಂಪೆನಿಗೆ ಅನ್ವಯವನ್ನು ಮಾಡಬಹುದು ಇಲ್ಲವೇ ಸ್ಯಾಂಸಂಗ್ ಮೊಬೈಲಿಗೂ ಅನ್ವಯ ಮಾಡಬಹುದು. ಯಾವುದೋ ಕಂಪೆನಿಯ ಬಿಡಿಭಾಗಗಳು ಬೇರೆ ಬೇರೆ ಕಡೆಗೆ ಸಿಗುತ್ತವೆ. ಆದರೆ ಅದನ್ನು ಯಾರು ಮಾಡುತ್ತಾರೆ ಎಂದು ತಿಳಿಯುವುದೂ ಇಲ್ಲ. ನೇರ ಕಾರ್ಮಿಕರು ಇರುವುದಿಲ್ಲ. ಅಂದರೆ ಸೂಚಕರು ಅನಾಮಿಕರಾಗಿ ಉಳಿಯುತ್ತಾರೆ. ನಮಗೆ ತಿಳಿಯುವುದು ಮಧ್ಯದಲ್ಲಿ ಇರುವ ಬ್ರಾಂಡ್ ಮತ್ತು ಅದರ ಹೆಸರು ಮಾತ್ರವೇ. ಈ ತರಹದ ಕಂಪೆನಿಗಳಲ್ಲಿ ಯಾರು ಯಾವ ಕೆಲಸವನ್ನು ಮಾಡುತ್ತಾರೆ ಎನ್ನುವುದು ನಮಗೆ ಮತ್ತು ಬೇರೆ ಬೇರೆ ಕೆಲಸವನ್ನು ಮಾಡುತ್ತಿರುವವರಿಗೆ ಗೊತ್ತಿರುವುದೂ ಇಲ್ಲ. ಅನೇಕ ಬ್ರಾಂಡ್ ನಮ್ಮ ಜೀವನದ ಶೈಲಿಯೊಂದಿಗೆ ಸರಿಯಾಗಿಯೇ ಬೆರೆತುಕೊಂಡಿವೆ. ಈಗ ಮಾರುಕಟ್ಟೆಯಲ್ಲಿ ಮತ್ತೊಂದು ವಿದ್ಯಮಾನವು ನಡೆಯುತ್ತದೆ. ಯಾವುದಾದರೂ ವಸ್ತುವನ್ನು ನಾವು ಕೊಳ್ಳುವುದಕ್ಕೆ ಇಷ್ಟಪಟ್ಟರೂ ಕೊಂಡುಕೊಳ್ಳಲು ಸಾಧ್ಯವಾಗದೇ ಹೋದರೆ ಆ ಕಂಪೆನಿಯವರು ನಮಗೆ ಯಾವುದಾದರೂ ಬ್ಯಾಂಕಿಗೆ ಒಪ್ಪಂದ ಮಾಡಿಕೊಳ್ಳುವಂತೆ ಪ್ರೇರಣೆಯನ್ನು ನೀಡುತ್ತಾರೆ. ಇದರಿಂದ ಕಂಪೆನಿಗೆ ಮತ್ತು ಬ್ಯಾಂಕಿಗೆ ಲಾಭವಾಗುತ್ತದೆ. ಮಾರುಕಟ್ಟೆಯಲ್ಲಿ ಮತ್ತೊಂದು ಸಂಗತಿಯು ನಡೆಯುತ್ತದೆ: ಯಾವುದಾದರೂ ಹಳೆಯ ಕಂಪೆನಿಗಳು ನಷ್ಟದಲ್ಲಿ ಇದ್ದರೆ ಆ ಕಂಪೆನಿಯನ್ನು ಬೇರೆಯವರು ಕೊಂಡುಕೊಳ್ಳುತ್ತಾರೆ. ಕಂಪೆನಿ ಮತ್ತು ಅದರ ಹೆಸರೇ ಮಾರಾಟವಾಗುತ್ತವೆ. ಮಾರುಕಟ್ಟೆಯಲ್ಲಿ ಮತ್ತೆ ಅದೇ ಹೆಸರು ಚಾಲ್ತಿಗೆ ಬರುತ್ತವೆ. ಹೊಸದಾದ ವಿನ್ಯಾಸವು ಹೇಗೆ ಮತ್ತೆ ಚಾಲ್ತಿಗೆ ಬರುತ್ತದೆಯೋ ಆಗ ಅದರ ವ್ಯಾಪಾರ ಮತ್ತು ಉದ್ದಿಮೆಗಳೂ ಬೇರೆಯಾಗುತ್ತವೆ. ಈಗ ಅನೇಕ ಕಂಪನಿಗಳು ಹೊರಗುತ್ತಿಗೆ ಮೂಲಕವೇ ಕೆಲಸವನ್ನು ಮಾಡಿಸುವುದರಿಂದ ಕಾರ್ಮಿಕರು ಮತ್ತು ಅವರ ಅರ್ಥಗಳು ಬೇರೆಯಾಗಿವೆ. ಈ ದೃಷ್ಟಿಯಿಂದ ಕಂಪೆನಿಗಳು ತಮ್ಮ ಕೆಲಸವನ್ನು ರಾಚನಿಕವಾಗಿ ಬದಲಾವಣೆಯನ್ನು ಮಾಡಿಕೊಂಡಿವೆ. ವಾಸ್ತವವಾಗಿ ಈಗ ಮಾರುಕಟ್ಟೆ ಮತ್ತು ಅದರ ತಂತ್ರಗಳೂ ವ್ಯತ್ಯಾಸವಾಗಿವೆ. ಕೇವಲ ನೂರು ರೂಪಾಯಿ ಇರುವ ಚಪ್ಪಲಿಯು ಪ್ರತಿಷ್ಠಿತ ಕಂಪೆನಿಗಳ ಹೆಸರಿನಲ್ಲಿ ಇನ್ನೂರು ರೂಪಾಯಿಗೆ ಮಾರಾಟವಾಗುತ್ತವೆ. (ವಿವರಗಳಿಗೆ ನೋಡಿ : ದಮಶರ ಆಫ್ ಲೇಬರ್.)

1980ರ ವೇಳೆಗೆ ಹೇಗೆ ಮಾರ್ಕ್ಸ್ ತನ್ನ ರಾಜಕೀಯ ಅರ್ಥಶಾಸ್ತ್ರವನ್ನು ಸಮರ್ಥಿಸಿದ ಎಂದು ಅಲ್ತೂಸರ್ ಹೇಳುತ್ತಾನೆ (ಫಾರ್ ಮಾರ್ಕ್ಸ್) ವಾಸ್ತವವಾಗಿ ಆಧುನಿಕ ಚಿಂತನೆಗಳಲ್ಲಿ

ಒಂದಾದ ಮಾರ್ಕ್ಸ್‌ವಾದವನ್ನು ಅಲ್ಲಗಳೆಯುವುದು ಸುಲಭವಿರಬಹುದು ಮತ್ತು ಅದನ್ನು ವಿರೋಧಿಸಲು ಆಧುನಿಕೋತ್ತರವಾದವು ಯತ್ನ ಮಾಡುತ್ತಿರುವುದು ನಿಜವೂ ಹೌದು. ಆದರೆ ಮಾರ್ಕ್ಸ್ ಹೇಳುವ ಅತ್ಯಂತ ವೈಜ್ಞಾನಿಕವಾದ ರಾಜಕೀಯ ಅರ್ಥಶಾಸ್ತ್ರವನ್ನು ವಿರೋಧಿಸುವುದು ನಿಜಕ್ಕೂ ಅತ್ಯಂತ ಕಷ್ಟ. ಎರಡು ಸಂಗತಿಗಳು ಅದರಲ್ಲಿ ಅತ್ಯಂತ ಮುಖ್ಯವಾಗಿವೆ. ಒಂದು ನಿಜವಾದ ಜೀವನ ಮತ್ತು ಅದರ ಪಲ್ಲಟ. ಮತ್ತೊಂದು ಅದರ ನಿರ್ದಿಷ್ಟವಾದ ಗುರಿಗಳು. ಚರಿತ್ರೆ ಮತ್ತು ಅದರ ಬದಲಾವಣೆಯಲ್ಲಿ ಹೇಗೆ ಮನುಷ್ಯರ ಸಾಮಾನ್ಯವಾದ ಜ್ಞಾನವು ಕೆಲಸವನ್ನು ಮಾಡುತ್ತದೆ. ಮತ್ತು ಅದರ ಪರಿಣಾಮವು ಯಾವುದು ಎನ್ನುವುದು ಅತ್ಯಂತ ಮುಖ್ಯವೆಂದು ಮಾರ್ಕ್ಸ್ ಗಣಿಸುತ್ತಾನೆ. ಮನುಷ್ಯನು ತನ್ನ ಚಟುವಟಿಕೆಯಿಂದ ನಿಸರ್ಗವನ್ನು ಬದಲಾವಣೆ ಮಾಡುತ್ತಾನೆ. ಮನುಷ್ಯ ಮತ್ತು ನಿಸರ್ಗವನ್ನು ಚರಿತ್ರೆಯು ಬದಲು ಮಾಡುತ್ತದೆ. ಹಾಗೂ ಚರಿತ್ರೆಯನ್ನು ಸಮಾಜವು ಬದಲು ಮಾಡುತ್ತದೆ. ಈ ದೃಷ್ಟಿಯಿಂದ ಕಾರ್ಮಿಕರು ಮತ್ತು ಅವರ ಶಕ್ತಿಯು ಅತ್ಯಂತ ಮಹತ್ವದ್ದು. ಒಂದು ಅರ್ಥದಲ್ಲಿ ಕಾರ್ಮಿಕರು ಮತ್ತು ಅವರ ಶಕ್ತಿಯೇ ಸಮಾಜದ ಸಂಪನ್ಮೂಲ. ಕಾರ್ಮಿಕರು ಸಮಾಜವನ್ನು ಕಟ್ಟುತ್ತಾರೆ ಹಾಗೂ ಅದನ್ನು ವಿಶ್ವಾತ್ಮಕ ಮಾಡುತ್ತಾರೆ. ಆದರೆ ಯಾವಾಗ ಬಂಡವಾಳವಾದವು ಬರುತ್ತದೆಯೋ ಆಗ ಅದರ ಅರ್ಥವು ಬೇರೆಯಾಗುತ್ತದೆ. ಬಂಡವಾಳವಾದವು ಕಾರ್ಮಿಕರು ಮತ್ತು ಅವರ ಶಕ್ತಿಯನ್ನು ಛಿದ್ರಮಾಡುತ್ತದೆ. ಮಾರುಕಟ್ಟೆಯಲ್ಲಿ ಕಾರ್ಮಿಕರು ಮತ್ತು ಅವರ ಶಕ್ತಿಯನ್ನು ದೂರಮಾಡಿ ಸ್ವಾರ್ಥಕ್ಕಾಗಿ ತನ್ನ ಲಾಭವನ್ನು ಮಾತ್ರವೇ ಗುರಿಮಾಡುತ್ತದೆ. ಇದರಿಂದ ಉತ್ಪಾದನೆ ಮತ್ತು ಅದರ ಸಂಬಂಧಗಳ ಸ್ವರೂಪವು ಬೇರೆಯಾಗುತ್ತದೆ. ಬಂಡವಾಳವಾದವು ಒಂದು ಹಂತದಲ್ಲಿ ಸ್ವಂತಿಕೆ ಮತ್ತು ಅದರ ಅರಿವನ್ನು ಮಾತ್ರವೇ ಹೇಳುತ್ತದೆ. ಆದ್ದರಿಂದಲೇ ಈವತ್ತು ನಾವು ಮತ್ತೆ ಮಾರ್ಕ್ಸ್‌ವಾದವನ್ನು ಓದಬೇಕಾಗಿದೆ. ಬಂಡವಾಳವಾದ ಮತ್ತು ಅದರ ವಿಕಾಸವು ಆಗಿರುವುದಂತೂ ನಿಜ. ಅನಗತ್ಯವಾಗಿ ವಿಕಾಸವಾದವನ್ನು ತಿರುಚುವ ಮತ್ತು ತನಗೆ ಬೇಕಾದಂತೆ ವ್ಯಾಖ್ಯಾನ ಮಾಡುವ ವಿಚಾರಗಳು ನಮಗೆ ಈಗ ಬೇಕಾಗಿಲ್ಲ. ಮಾರ್ಕ್ಸ್ ಹೊಕೆಮಾರ್ ನಮಗೆ ಬೇರೆ ತಿಳುವಳಿಕೆಯನ್ನು ಕೊಡುತ್ತಾನೆ. ಬಂಡವಾಳವಾದ ಮತ್ತು ಅದರ ರಚನೆಯಲ್ಲಿಯೇ ಅನೇಕ ವೈರುಧ್ಯಗಳು ಇವೆ. ಅವನು ತಾಂತ್ರಿಕವಾದ ಯಜಮಾನಿಕೆಯನ್ನು ನೋಡುತ್ತಾನೆ. ಅವನ ಪ್ರಕಾರ ಆಧುನಿಕ ಜಗತ್ತಿನಲ್ಲಿ ಕಾರ್ಮಿಕರು ಮತ್ತು ಅವರ ಸ್ವರೂಪವು ಬದಲಾಗಿದೆ. ತಾಂತ್ರಿಕತೆಯು ಹೆಚ್ಚು ಮುಂಚೂಣಿಗೆ ಬಂದಾಗ ಜನರು ಮತ್ತು ಅವರ ಭಾವನೆಗಳು ಬದಲಾಗುತ್ತವೆ. ಹೈಡೆಗಾರ್ ಕೂಡಾ ಒಂದು ವಾದವನ್ನು ಮಂಡಿಸುತ್ತಾನೆ. ಅವನು ಪುನರುಜ್ಜೀವನ ಮತ್ತು ಅದರ ತಾಂತ್ರಿಕತೆಯನ್ನು ಇಟ್ಟುಕೊಂಡು ಹೇಳುತ್ತಾನೆ. ಪರಿಕರ ಕೇಂದ್ರಿತವಾದ ಕಾರಣಗಳು ಹೇಗೆ ಯಜಮಾನಿಕೆಯನ್ನು ವಹಿಸುತ್ತವೆ ಎನ್ನುವುದು ಅವನ ಮುಖ್ಯವಾದ ಕಾಳಜಿಯೂ ಆಗಿದೆ. ಆದರೆ ಯಾವುದನ್ನು ಈವತ್ತು ನಾವು ಬಂಡವಾಳೋತ್ತರವೆಂದು ಹೇಳುತ್ತೇವೆಯೋ ಅದರಲ್ಲಿಯೂ ಕಾರ್ಮಿಕರು ಇದ್ದಾರೆ ಎನ್ನುವುದನ್ನು ಮರೆಯಲಾಗುವುದೂ ಇಲ್ಲ. ಪಲ್ಲಟಗೊಳ್ಳುತ್ತಿರುವ ಸಂದರ್ಭದಲ್ಲಿ ಕಾರ್ಮಿಕರು ಹೇಗೆ ಇದ್ದಾರೆ ಎಂದು ನೋಡಬೇಕಾಗಿದೆ. ಮಾರುಕಟ್ಟೆ ಮತ್ತು ಬಂಡವಾಳ ಹೂಡುವಿಕೆಯು ಹೇಗೆ ಬೇರೆ ಬೇರೆ ರೂಪಗಳನ್ನು ಪಡೆದುಕೊಂಡಿವೆಯೋ ಅದೇ ರೀತಿಯಲ್ಲಿ ಬೇರೆ ಬೇರೆ ರೂಪಾಂತರಗಳು ಕಾರ್ಮಿಕ ವರ್ಗದಲ್ಲಿಯೂ ಆಗಿದೆ ಎನ್ನುವುದು ಸ್ಪಷ್ಟ. ಆದ್ದರಿಂದ ಬಿಡುಗಡೆ ಎನ್ನುವುದು ಈಗ

ಬೇರೆ ಅರ್ಥವನ್ನು ಪಡೆದುಕೊಂಡಿವೆ. ಈಗ ನಮ್ಮ ಎದುರು ಇರುವುದು ಹೊಸ ರೀತಿಯ ಸಾಮಾಜಿಕ ಸಂಬಂಧ. ಮನುಷ್ಯ ಮತ್ತು ಅವನು ಒಂದು ಇತಿಹಾಸದಲ್ಲಿ ಪರಿಕರವಾಗುವುದು ಒಂದು ಥರ. ಅವನೇ ಪರಿಕರವನ್ನು ಸೃಷ್ಟಿ ಮಾಡಿಕೊಂಡು ತನಗೆ ಬೇಕಾದ್ದನ್ನು ರೂಪಿಸುವುದು ಮತ್ತೊಂದು ಥರ. ಆದರೆ ಇಲ್ಲಿ ಬೇರೆ ನಡೆಯುತ್ತದೆ. ಇದನ್ನು ಅಡರ್ನೊ ಮತ್ತು ಹೊರ್ಕೈಮಾರ್ ಹೇಳುವುದು ಮತ್ತೊಂದು ರೀತಿಯಲ್ಲಿ. ಅವರು ಹೇಳುವುದು ಪುನರುಜ್ಜೀವನ ಮತ್ತು ಅದರ ಅನಂತರ ವ್ಯಾಪಕವಾದ ವ್ಯತ್ಯಾಸವು ಆಯಿತು. ಪರಿಕರ ಕೇಂದ್ರಿತವಾದ ಬದಲಾವಣೆಯು ನಮ್ಮನ್ನು ವ್ಯತ್ಯಾಸದ ರೂಪಕ್ಕೆ ತಂದಿತು ಎಂದು ಹೇಳುತ್ತಾರೆ. ಬಂಡವಾಳವಾದ ಮತ್ತು ಸಮಾಜವಾದ ಎರಡೂ ಪರಿಕರವನ್ನು ಒಪ್ಪುತ್ತವೆ. ಆದರೆ ಪರಿಕರ ಮತ್ತು ಅದರ ಕಾರಣಗಳನ್ನು ವಿಶ್ಲೇಷಣೆಯನ್ನು ಮಾಡುವಾಗ ಮಾತ್ರವೇ ಬೇರೆಯಾಗುತ್ತವೆ. ಉತ್ಪಾದನೆಯಲ್ಲಿ ಕಾರ್ಮಿಕರು ಮತ್ತು ಅವರ ಪಾತ್ರದ ನಿರ್ವಹಣೆಯನ್ನು ನೋಡುವಾಗ ಅವರು ಬೇರೆಯಾಗುತ್ತಾರೆ. ತಾಂತ್ರಿಕತೆ ಮತ್ತು ಅದರ ಯಜಮಾನಿಕೆಯನ್ನು ಕುರಿತು ಹೇಳುವಾಗ ಹೈಡೆಗಾರ್ ಕೂಡಾ ಅಧಿಕಾರ, ನಮ್ಮ ಶಕ್ತಿ, ಹಾಗೂ ಪುನರುತ್ಪಾದನೆಯನ್ನು ಪ್ರಾಸ್ತವಿಸಿದ್ದಾನೆ ಎನ್ನುವುದು ಇಲ್ಲಿ ಮುಖ್ಯವಾಗಿ ನಾವು ನೋಡಬೇಕಾಗಿದೆ. ಬಂಡವಾಳವಾದ ಮತ್ತು ಪುನರ್ ಉತ್ಪಾದನೆ ಎನ್ನುವುದು ಹೇಗೆ ನಮಗೆ ಅಗತ್ಯವಾಗುತ್ತದೆ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆಯು ಅಲ್ಲ. ಅದರ ಬದಲು ನಾವು ನೋಡಬೇಕಾದದ್ದು ಅದು ಮನುಷ್ಯರನ್ನು ಹೇಗೆ ಗ್ರಹಿಸುತ್ತದೆ ಎನ್ನುವುದನ್ನು ಮಾತ್ರವೇ. ಬಂಡವಾಳವಾದ ಎನ್ನುವುದು ವಿಸ್ತರಣೆಯು ಆಗುವಾಗ ಅದು ಕೆಲವನ್ನು ಹೆಚ್ಚು ಚಾಲ್ತಿಗೆ ತರುತ್ತದೆ. ಅದರ ಗುರಿಯು ಬೇರೆಯಿರುತ್ತದೆ. ಮಾರ್ಕ್ಸ್ ಇದನ್ನು ಒಂದು ಶಾಸ್ತ್ರಭಾಗದ ವಿಚ್ಛೇದ ಎಂದು ಹೇಳುತ್ತಾನೆ. ಅವನು ಸ್ವಯಂಸಾಕ್ಷ್ಯ ಮತ್ತು ನಿಜವಾದ ಜೀವನಕ್ರಮ ಎನ್ನುವುದನ್ನು ವಿವರಿಸಿದ್ದಾನೆ (ಜರ್ಮನ್ ಈಡಿಯಾಲಜಿ) ಒಂದು ನಿರ್ದಿಷ್ಟವಾದ ಸಾಮಾಜಿಕ ಸನ್ನಿವೇಶ ಮತ್ತು ಉತ್ಪಾದನೆ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಮಾರ್ಕ್ಸ್ ವಿವರಿಸುತ್ತಾನೆ. ಮನುಷ್ಯನಿಗೆ ಒಂದು ಕಲ್ಪನೆಯ ಶಕ್ತಿಯು ಇದೆ. ಅದರ ಮೂಲಕ ಅವನು ಉತ್ಪಾದನೆಯನ್ನು ಮಾಡುತ್ತಾನೆ. ಪ್ರಜ್ಞೆಯ ಕಾರಣಕ್ಕೆ ವ್ಯಕ್ತಿಯು ಪ್ರಾಣಿಗಿಂತ ಬೇರೆಯಾಗುತ್ತಾನೆ. ಅವನು ದೇಹವನ್ನು ಬಳಸಿಕೊಂಡು ಉತ್ಪಾದನೆಯನ್ನು ಮಾಡುತ್ತಾನೆ. ಮತ್ತೊಂದು ಪ್ರಶ್ನೆಯು ಬರುತ್ತದೆ. ನಾವು ಸ್ವರ್ಗದಿಂದ ಭೂಮಿಗೆ ಬಂದಿದ್ದೇವೆ ಎನ್ನುವುದಕ್ಕಿಂತ ಹೆಚ್ಚಾಗಿ ನಾವು ಭೂಮಿಯನ್ನು ಸ್ವರ್ಗ ಮಾಡಬೇಕಾಗುತ್ತದೆ. ನಮ್ಮ ಭೌತಿಕವಾದ ಅಗತ್ಯಗಳು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗಿವೆ. ನೀತಿ, ಧರ್ಮ, ಆಧ್ಯಾತ್ಮ ಎನ್ನುವುದು ನಮಗೆ ಈ ದೃಷ್ಟಿಯಿಂದ ಅನಂತರದ ಪ್ರಶ್ನೆಗಳು ಮಾತ್ರವೇ ಆಗಿರುತ್ತವೆ. ನಮ್ಮ ಆಲೋಚನೆ ಮತ್ತು ನಮ್ಮ ಉತ್ಪಾದನೆಗೆ ಈ ದೃಷ್ಟಿಯಿಂದ ಸಂಬಂಧವೂ ಇದೆ. ಇದನ್ನು ರಾಜಕೀಯ ಅರ್ಥಶಾಸ್ತ್ರವು ಹೇಳುತ್ತದೆ. ಆದ್ದರಿಂದ ನಾವು ತತ್ವಜ್ಞಾನದ ಜೊತೆಗೆ ಯಾವ ಸಂವಹನವನ್ನು ಹೊಂದಿರಬೇಕು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ. ಅದು ಲೈಂಗಿಕ ಸಂಗಾತಿಯು ಇಲ್ಲದ ಬರೀ ಮುಷ್ಟಿ ಮೈಥುನದ ರೀತಿಯಲ್ಲಿ ಇರಬಾರದು ಎಂದು ಜಿಜೆಕ್ ಹೇಳುತ್ತಾನೆ. ಉತ್ಪಾದನೆ ಮತ್ತು ಅದರ ಸತ್ಯಗಳು ಮಾತ್ರವೇ ಮಾರ್ಕ್ಸ್‌ಗೆ ಹೆಚ್ಚು ಮುಖ್ಯವಾಗುತ್ತದೆ. ನಿಜವಾದ ಉತ್ಪಾದನೆ ಮತ್ತು ಅದರ ಸ್ವರೂಪವನ್ನು ಮಾರ್ಕ್ಸ್ ಹೆಚ್ಚು ಒತ್ತುಕೊಟ್ಟು ನೋಡಿದ್ದಾನೆ. ಆದರ್ಶ ಕೇಂದ್ರಿತವಾದ ತತ್ವಜ್ಞಾನವನ್ನು ಮಾರ್ಕ್ಸ್

ಅಷ್ಟು ಒಪ್ಪುವುದಿಲ್ಲ. ಅದನ್ನು ಅವನು ಭಾವನಾವಾದಿ ಎಂದು ಹೇಳುತ್ತಾನೆ. ಯಾವುದೇ ಧಾರ್ಮಿಕತೆಯು ತನ್ನ ಮಟ್ಟಿಗೆ ಉತ್ಪಾದನಾ ಶಕ್ತಿಯನ್ನು ಹೊಂದಿಲ್ಲ ಎಂದು ಅವನು ಭಾವಿಸುತ್ತಾನೆ. ಆರ್ಥಿಕತೆ ಎನ್ನುವುದು ಭೂಮಿಗೆ ಸಂಬಂಧಪಟ್ಟಿದೆ ಎಂದು ಅವನು ಹೇಳುತ್ತಾನೆ ವಸ್ತು ಮತ್ತು ಅದರ ವಿಶ್ಲೇಷಣೆಗೆ ಮಾರ್ಕ್ಸ್ ಆದ್ಯತೆಯನ್ನು ಕೊಡುತ್ತಾನೆ. ಆದರೆ ಮಾರ್ಕ್ಸ್ ಮತ್ತೊಂದು ಮಾತನ್ನು ಕ್ಯಾಪಿಟಲ್ ಕೃತಿಯಲ್ಲಿ ಹೇಳುತ್ತಾನೆ: ವಸ್ತುವಿನ ಉಪಯೋಗದ ಮೌಲ್ಯ ಮತ್ತು ವಿನಿಮಯದ ಮೌಲ್ಯ. ಇದುವೇ ಅನಂತರ ಬಂಡವಾಳವಾದದಲ್ಲಿ ಹೆಚ್ಚು ಸಂಕೀರ್ಣವಾಯಿತು. ಉಪಯೋಗ ಮತ್ತು ವಿನಿಮಯ ಎನ್ನುವುದು ತಾರತಮ್ಯಕ್ಕೆ ಗುರಿಯಾಯಿತು. ಮನುಷ್ಯ ಮತ್ತು ಅವನ ಕ್ರಿಯೆ ಅಥವಾ ಕೌಶಲವು ಉಪಯೋಗತಾ ಮೌಲ್ಯವನ್ನು ಹೇಳುತ್ತದೆ. ಅದು ನಮಗೆ ಅಗತ್ಯವಾಗಿದೆ. ಮನುಷ್ಯ ಮತ್ತು ನಿಸರ್ಗ ಎರಡೂ ಸಂಬಂಧವು ಇದರ ಮೂಲಕವೇ ವ್ಯಕ್ತವಾಗುತ್ತವೆ. ಮನುಷ್ಯ ಮತ್ತು ಅವನ ಪರಿಸರದ ನಡುವೆ ಸಂಬಂಧವಿದೆ. ಒಂದು ವಿನಿಮಯವೂ ಇದೆ. ನಿಸರ್ಗವು ನಮ್ಮ ಅಸ್ತಿತ್ವದ ಮೇಲೆ ಪ್ರಭಾವವನ್ನು ಬೀರುತ್ತದೆ ಮತ್ತು ಕೆಲವೊಮ್ಮೆ ನಿಸರ್ಗದ ರೂಪವನ್ನು ನಾವು ವ್ಯತ್ಯಾಸ ಮಾಡುತ್ತೇವೆ. ಮನುಷ್ಯ ಮತ್ತು ಅವನ ಶಕ್ತಿಯು ಒಂದು ಕಡೆಗೆ ಇರುತ್ತದೆ ಮತ್ತೊಂದು ಕಡೆಗೆ ನಿಸರ್ಗವು ಇರುತ್ತದೆ. ಬತ್ತವನ್ನು ಬೆಳೆಯುವುದನ್ನು ಮನುಷ್ಯನು ನಿಸರ್ಗದಿಂದ ಕಲಿತುಕೊಂಡ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಯಾವಾಗ ಭತ್ತದಿಂದ ನಾವು ರೊಟ್ಟಿ ಮಾಡಿಕೊಂಡು ಸುಡಲು ಕಲಿತೆವೋ ಆಗ ನಮ್ಮ ಕೌಶಲವು ಭಿನ್ನವಾಯಿತು. ಸಮಾಜ ಮತ್ತು ಸನ್ನಿವೇಶವು ನಮಗೆ ಅನೇಕವನ್ನು ಕಲಿಸುತ್ತದೆ. ಆದರೆ ನಾವು ಈ ಕೆಲಸಕ್ಕೆ ಬೇರೆಯವರನ್ನು ಅದರಲ್ಲಿಯೂ ಮುಖ್ಯವಾಗಿ ಗುಲಾಮರಿಂದ ಅದನ್ನು ಮಾಡಿಸಲು ಪ್ರಾರಂಭ ಮಾಡಿದೆವೋ ಆಗ ಅದರ ಸ್ವರೂಪವು ಬೇರೆಯಾಯಿತು. ಇನ್ನೊಬ್ಬರ ಕ್ರಿಯೆ ಅದರ ಲಾಭ ನಮಗೆ. ಯಾವಾಗ ಉಪಯೋಗದ ಮೌಲ್ಯವು ಒಂದು ರೀತಿಯಾಗಿದ್ದು ಅದರ ಸ್ವರೂಪವು ಇನ್ನೊಂದು ಥರವಾಯಿತೋ ಆಗ ಅದರ ಅರ್ಥವು ಬೇರೆಯಾಯಿತು. ಇವುಗಳು ಸ್ವಲ್ಪ ಬದಲಾವಣೆ ಆದರೂ ಅನೇಕ ವ್ಯತ್ಯಾಸಗಳು ಆಗುತ್ತವೆ. ಸಾಮಾಜಿಕ ಉತ್ಪನ್ನ ವಿನಿಮಯದ ಉತ್ಪನ್ನವಾಗಿ ಪಲ್ಲಟವಾಗುತ್ತವೆ. ಅದರ ಮೂಲಕವೇ ಕಾರ್ಮಿಕರನ್ನು ಪರಕೀಯರನ್ನಾಗಿ ಮಾಡಲಾಗುತ್ತದೆ. ಆದರೆ ಇವುಗಳು ತಾತ್ವಿಕ ಪ್ರಶ್ನೆಗಳೂ ಆಗಿರುತ್ತವೆ. ಸಾಮಾಜಿಕ ಮತ್ತು ಚಾರಿತ್ರಿಕ ಸನ್ನಿವೇಶದ ಹಿನ್ನೆಲೆಯಿಂದ ಇದನ್ನು ನೋಡಬೇಕಾಗುತ್ತದೆ. ಆದರೆ ಈ ಪ್ರಕ್ರಿಯೆಗಳು ಸುಮ್ಮನೆ ನಡೆಯುವುದೂ ಇಲ್ಲ ಎಂದು ಮಾರ್ಕ್ಸ್ ಹೇಳುತ್ತಾನೆ. ಕೆಲವು ವಿಚಾರಗಳು ಒಂದು ಸಾಮಾನ್ಯವಾದ ಬುದ್ಧಿವಂತಿಕೆಯಿಂದ ನಡೆಯುತ್ತದೆ ಎಂದು ಮಾರ್ಕ್ಸ್ ಹೇಳುತ್ತಾನೆ. ಸಾಮಾನ್ಯವಾದ ಬುದ್ಧಿವಂತಿಕೆಯು ಕೆಲವನ್ನು ಪ್ರಾರಂಭಿಸುತ್ತದೆ. ಉತ್ಪಾದನೆಯನ್ನು ರೂಪಿಸುತ್ತದೆ. ಅವುಗಳು ಸಮಾಜ ಮತ್ತು ಚರಿತ್ರೆಯ ಅಗತ್ಯವೂ ಆಗಿರುತ್ತದೆ. ಯಾವುದೇ ವಸ್ತುವು ನಮಗೆ ಒಂದು ನಿರ್ದಿಷ್ಟವಾದ ಸಾಮಾಜಿಕ ಸಂಬಂಧವನ್ನು ಹೇಳುತ್ತದೆ ಎನ್ನುವುದನ್ನು ಮಾರ್ಕ್ಸ್ ಅಲ್ಲಗಳೆಯುವುದೂ ಇಲ್ಲ ಸಾಮಾಜಿಕ ಚಟುವಟಿಕೆ ಮತ್ತು ಅದರ ಸ್ವರೂಪಕ್ಕೂ ಉತ್ಪಾದನೆಗೂ ಒಂದು ಸಂಬಂಧವಿದೆ. ಅದುವೇ ನಮಗೆ ವಿಶ್ವಾತ್ಮಕವಾದ ಗ್ರಹಿಕೆಗೆ ಕಾರಣವಾಗುತ್ತದೆ ಎಂದು ಅವನು ಹೇಳುತ್ತಾನೆ. ವಸ್ತು ಮತ್ತು ಅದರ ಜೊತೆಗೆ ನಾವು ಸ್ಥಾಪಿಸುವ ಸಂಬಂಧವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಶ್ರಮ ಮತ್ತು ಅದರ ಬೆಲೆಯು ಒಂದು ರೀತಿಯಲ್ಲಿ

ಇರುತ್ತದೆ. ಆದರೆ ಹಣವನ್ನು ಲೆಕ್ಕ ಹಾಕುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ಲಕಾನ್ ಅದನ್ನು ಕಲ್ಪಿತ, ಸಾಂಕೇತಿಕ ಮತ್ತು ವಾಸ್ತವ ಎಂದು ಹೇಳುತ್ತಾನೆ. ಹಣವನ್ನು ವಿಮರ್ಶೆ ಮಾಡುವಾಗ ಅದರ ಕಾರ್ಯವನ್ನು ಮಾರ್ಕ್ಸ್ ಕೂಡಾ ಹೇಳುತ್ತಾನೆ. ಅವನ ಪ್ರಕಾರ ಹಣವು ನಮಗೆ ಅಗತ್ಯವಾಗುವುದು ವಸ್ತು ಮತ್ತು ಅದರ ಮೌಲ್ಯಕ್ಕೆ ಅನುಸಾರವಾಗಿ, ಆದರೆ ಮಾರ್ಕ್ಸ್ ವಸ್ತು ಮತ್ತು ಅದರ ಮೌಲ್ಯವನ್ನು ಒಂದು ಮಾನದಂಡವಾಗಿ ಅವನು ನೋಡುತ್ತಾನೆ. ವಸ್ತು ಮತ್ತು ಅದರ ಮೌಲ್ಯವು ನಿಗದಿಯಾಗುವುದು ಒಂದು ಕಲ್ಪನೆಯ ಮೂಲಕವೂ ಹೌದು. ಬ್ಯಾಂಕಿನ ನೋಟುಗಳು ನಮಗೆ ಪ್ರಾತಿನಿಧಿಕವಾದ ಒಂದು ರೂಪವು ಮಾತ್ರವೇ ಆಗಿರುತ್ತದೆ. ಅದರ ಅಗತ್ಯವಿರುವುದು ನಮಗೆ ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಮಾತ್ರವೇ ಎಂದು ಅರ್ಥಮಾಡಿಕೊಳ್ಳುವುದು ಈ ಸನ್ನಿವೇಶದಲ್ಲಿ ಅಗತ್ಯವಿದೆ. ಮಾರ್ಕ್ಸ್ ನಿಜವಾದ ಮನುಷ್ಯರು ಮತ್ತು ಹಣವನ್ನು ಕುರಿತು ಹೇಳುವಾಗ ಅದರ ಸಾಮಾಜಿಕ ಅಗತ್ಯವನ್ನು ಮಾತ್ರವೇ ಹೇಳುತ್ತಾನೆ. ಉತ್ಪಾದನೆ ಮತ್ತು ಅದರ ಸ್ವರೂಪವನ್ನು ಮಾರ್ಕ್ಸ್ ಮತ್ತು ಏಂಗಲ್ಸರು ಚರ್ಚೆ ಮಾಡಿದ್ದು ಮತ್ತೊಂದು ಕೃತಿಯಲ್ಲಿ. ಅದು ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವವನ್ನು ಹೇಳುತ್ತದೆ. ಭೌತಿಕವಾದ ಉತ್ಪಾದನೆ ಮತ್ತು ರಕ್ತ ಸಂಬಂಧಗಳು ಹೇಗಾದವು ಅದಕ್ಕೂ ಸಾಮಾಜಿಕ ಸ್ವರೂಪಕ್ಕೂ ಏನು ಕೊಂಡಿಗಳು ಇವೆ ಎಂದು ಅವನು ವಿವರಿಸುತ್ತಾನೆ. ಜೀವನ ಮತ್ತು ಉತ್ಪಾದನೆಗೆ ಒಂದು ಸಂಬಂಧವು ಇದೆ ಎಂದು ಮಾರ್ಕ್ಸ್ ಹೇಳಿದ್ದು ಇಲ್ಲಿ ಈ ದೃಷ್ಟಿಯಿಂದ ಬಹಳ ಮಹತ್ವದ್ದು. ಆಹಾರ, ವಸತಿ ಮತ್ತು ಪರಿಕರಗಳು ಮನುಷ್ಯನಿಗೆ ಹೇಗೆ ಅಗತ್ಯವಾಗುತ್ತವೆ ಎಂದು ಅವನು ಹೇಳುತ್ತಾನೆ. ಉದಾಹರಣೆಗೆ ಭೂಮಿಯಲ್ಲಿ ಇರುವ ಗಡ್ಡೆಯನ್ನು ಬಾಯಲ್ಲಿ ಕಚ್ಚಿ ತೆಗೆಯಲು ಬರುವುದೂ ಇಲ್ಲ ಅದಕ್ಕೆ ನಮಗೆ ಸಲಾಕೆ ಬೇಕಾಗುತ್ತದೆ, ಸಲಾಕೆಯು ಒಂದು ಪರಿಕರ. ಗಂಡು ಮತ್ತು ಹೆಣ್ಣು ಸಂಬಂಧವು ನಮಗೆ ವಸಾಹತುಗೆ ಕಾರಣವೂ ಆಯಿತು. ಉತ್ಪಾದನೆ ಮತ್ತು ಅದರ ವಿವಿಧ ಹಂತಗಳು ನಮಗೆ ಬೇರೆ ಬೇರೆ ಅನುಭವನ್ನು ಕೊಟ್ಟವು. ಅದು ಸಾಮಾಜಿಕ ರೂಪಕ್ಕೆ ಕಾರಣವೂ ಆಯಿತು. ಇದುವೇ ಲೆವಿಸ್ಟ್ರಾಸಿಗೆ ಮುಖ್ಯವಾದ ಒಳನೋಟಗಳನ್ನು ಕೊಟ್ಟಿತು. ನಮಗೆ ಬೇಕಾದ ಜೀವನವನ್ನು ನಾವು ರೂಪಿಸಿಕೊಳ್ಳುತ್ತೇವೆ. ಉತ್ಪಾದನೆ ಮತ್ತು ಮರು ಉತ್ಪಾದನೆ ಎನ್ನುವುದು ಸಮಾಜದಲ್ಲಿ ಅತ್ಯಂತ ಮುಖ್ಯವಾದ ಅಂಶವೂ ಆಗಿದೆ. ಅದು ಅಗತ್ಯವಾದದ್ದು. ಆಹಾರ, ವಸತಿ, ಮತ್ತು ಬೇರೆ ಬೇರೆ ಪರಿಕರಗಳಿಂದ ನಾವು ಸಮಾಜವನ್ನು ಮುನ್ನಡೆಸುತ್ತೇವೆ. ಮನುಷ್ಯನು ತನಗೆ ಬೇಕಾದ್ದನ್ನು ಉತ್ಪಾದಿಸುವ ಶಕ್ತಿಯನ್ನು ಹೊಂದಿದ್ದಾನೆ. ಸಮಾಜ ಮತ್ತು ಅದರ ಸಂಸ್ಥೆಗಳು ನಮಗೆ ಬೇರೆ ಬೇರೆ ಮಜಲುಗಳನ್ನು ಹೇಳುತ್ತವೆ. ಒಂದೇ ಕ್ಷಣದಲ್ಲಿ ಒಂದು ಸಮಾಜವು ಉಂಟಾಗಿಲ್ಲ. ಸಾಮಾಜಿಕ ಸಂಸ್ಥೆಗಳು ಚರಿತ್ರೆಯಿಂದ ಬಂದಿವೆ. ಒಂದು ಸಮಾಜದಲ್ಲಿ ಬೇರೆ ಬೇರೆ ಉತ್ಪಾದನೆಗಳು ಹೇಗಾಗುತ್ತವೆ ಎನ್ನುವುದರ ಆಧಾರದ ಮೇಲೆಯೇ ನಾವು ಆ ಸಮಾಜದ ನಿಜವಾದ ಸಂಪತ್ತನ್ನು ಗುರುತಿಸಬಹುದು ಎಂದು ಮಾರ್ಕ್ಸ್ ಮತ್ತು ಏಂಗಲ್ಸರು ಹೇಳುತ್ತಾರೆ. ಆದರೆ ಅದರಲ್ಲಿ ಒಂದು ಸಮಾಜದ ನಿಯಮಗಳು ಅಥವಾ ಸಂಹಿತೆಗಳು ಕೆಲಸವನ್ನು ಮಾಡುತ್ತವೆ. ಹಾಗಿದ್ದರೆ ನಿಜವಾಗಿಯೂ ಸಮಾಜವನ್ನು ರೂಪುಗೊಳಿಸುವುದು ಲೈಂಗಿಕ ಸಂಬಂಧಗಳು ಎನ್ನುವುದರಲ್ಲಿ ಅನುಮಾನವೂ ಇಲ್ಲವೆಂದು ಅವರ ಪ್ರತಿಪಾದನೆಯು ಆಗಿದೆ. ಗಂಡು ಮತ್ತು ಹೆಣ್ಣು, ಪಾಲಕರು ಮತ್ತು ಮಕ್ಕಳು ಒಂದು ಕುಟುಂಬದ ರಚನೆಯನ್ನು ಸಂಕೇತಿಸುತ್ತಾರೆ. ಉತ್ಪಾದನೆಯು ಅವರ

ಅಗತ್ಯವೂ ಆಗಿರುತ್ತದೆ. ಅದರಲ್ಲಿ ಸಮಾಜ ಮತ್ತು ಅದರ ಸಂಬಂಧಗಳು ಸೇರಿಕೊಳ್ಳುತ್ತವೆ. ಜೀವನದಲ್ಲಿ ಎರಡು ನಮೂನೆಯ ಸಂಬಂಧಗಳು ಇರುತ್ತವೆ. ಒಂದು ಸಹಜವಾದದ್ದು. ಅದನ್ನು ನೈಸರ್ಗಿಕವೆಂದು ಹೇಳುತ್ತಾರೆ. ಮತ್ತೊಂದು ಸಮಾಜಕ್ಕೆ ಸೇರಿದ್ದು. ಸಾಮಾಜಿಕ ಸಂಬಂಧಗಳು ಸಹಕಾರವನ್ನು ಆಧರಿಸಿಕೊಂಡು ಇರುತ್ತವೆ. ಸಹಕಾರಗಳು ಉತ್ಪಾದನೆಗೆ ಸಹಾಯವನ್ನು ಮಾಡುತ್ತವೆ (ಜರ್ಮನ್ ಈಡಿಯಾಲಜಿ) ಇದೇ ತರಹದ ಮತ್ತೊಂದು ವಾದವನ್ನು ಫ್ರಾಯ್ಡ್ ಹೇಳುತ್ತಾನೆ. ಉತ್ಪಾದನೆ ಮತ್ತು ಜ್ಞಾನವು ಬಾಹ್ಯವಾದದ್ದು ಮತ್ತು ಅದರ ಕೆಲವನ್ನು ರೂಪಿಸುತ್ತದೆ ಎಂದು ಅವನ ವಾದವಾಗಿದೆ. ಜ್ಞಾನ ಮತ್ತು ಉತ್ಪಾದನೆಯ ಒತ್ತಡಗಳು ನಮ್ಮ ಬಾಹ್ಯವನ್ನು ರೂಪಿಸುತ್ತವೆ. ಮತ್ತೊಂದು ಸಮಾಜದ ಸಂಬಂಧಗಳು. ಇದನ್ನು ಹೇಳುವಾಗ ಮತ್ತೊಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕು: ಇದು ಈವತ್ತಿನ ಒಂದು ಸಂಗತಿಯನ್ನು ಹೇಳುತ್ತದೆ. ಒಂದೋ ದುಡ್ಡು ಮಾಡು ಅಥವಾ ಪ್ರೇಮಿಸು. ಇದು ಹಳೆಯ ಅಮೇರಿಕನ್ ಜೋಕನ ಥರ ಕಾಣಿಸಬಹುದು ಆದರೆ ಇದು ಫ್ರಾಯ್ಡನ ವಾದವನ್ನು ಹೇಳುತ್ತದೆ. ಆದರೆ ಇದನ್ನು ತಪ್ಪಾಗಿ ಓದಿದ ಸ್ತ್ರೀವಾದಿಗಳು ಕುಟುಂಬ ಮತ್ತು ಅದರಾಚೆಗೆ ಏನು ಎಂದು ವಾದಿಸತೊಡಗಿದರು. ಲಿಂಗ ವ್ಯತ್ಯಾಸವೂ ಉತ್ಪಾದನೆ ಎನ್ನುವುದನ್ನು ಮರೆತರು ಎಂದು ಜಿಜೆಕ್ ಹೇಳುತ್ತಾನೆ ವಾಸ್ತವವಾಗಿ ಕುಟುಂಬ ಮತ್ತು ಖಾಸಗಿ ಆಸ್ತಿಯನ್ನು ಕುರಿತು ಹೇಳುವಾಗ ಬಹುಸಂಬಂಧಿತ ರೂಪಗಳನ್ನು ಮಾರ್ಕ್ಸ್ ಮತ್ತು ಏಂಗಲ್ಸರು ಹೇಳಿಲ್ಲ. ಮನುಷ್ಯರ ಉತ್ಪಾದನೆ ಎನ್ನುವುದಕ್ಕೆ ಅದರಲ್ಲಿ ವಿಶಿಷ್ಟವಾದ ಅರ್ಥವೂ ಇದೆ. ಅದನ್ನು ಅವರು ವ್ಯಕ್ತಿ ಕೇಂದ್ರಿತವಾದ ಅರ್ಥದಲ್ಲಿ ಹೇಳಿಲ್ಲ. ಮತ್ತು ಅದರಲ್ಲಿ ವೈಯಕ್ತಿಕವಾದ ಕಾರಣವನ್ನು ನಾವು ಹುಡುಕಬೇಕಾದ ಅಗತ್ಯವೂ ಇಲ್ಲ. ಮಾರ್ಕ್ಸ್‌ನ ಪವರ್ಟಿ ಆಫ್ ಫಿಲಾಸಫಿಯಲ್ಲಿ ಮತ್ತೆ ಒಂದು ಮಾತು ಬರುತ್ತದೆ. ನಿಲುವು, ಪ್ರತಿರೋಧ ಹಾಗೂ ಪ್ರಬಂಧ ಗ್ರೀಕಿನ ಪದವನ್ನು ಹೇಳಬೇಕೆಂದರೆ ಥೀಸಿಸ್, ಆಂಟಿ ಥೀಸಿಸ್, ಮತ್ತು ಸಿಂಥೆಸಿಸ್. ಆದರೆ ಸಮಾಜ ಮತ್ತು ರಾಜಕಾರಣವು ನಮಗೆ ಎಂಥಾ ಒತ್ತಡವನ್ನು ಹೇರುತ್ತದೆ ಎಂದರೆ ಅದರಿಂದ ನಾವು ಅರಾಜಕತಾವಾದಿಗಳು ಆಗುವುದು ಈಗ ಅತ್ಯಂತ ಸುಲಭ. ಎಲ್ಲಾ ಬಂಡವಾಳವಾದಿ ಸಮಾಜವು ವರ್ಗಗಳು ಆಗುತ್ತವೆ. ಬೇರೆ ಬೇರೆ ತಾರತಮ್ಯವನ್ನು ಅವುಗಳು ಒಳಗೊಂಡಿರುತ್ತವೆ. ಆದರೆ ಮಾರ್ಕ್ಸ್ ಹೇಳಿದ್ದು ಕಾರ್ಮಿಕರು ಮತ್ತು ಅವರ ಸತ್ಯ ಎನ್ನುವುದು ಒಂದು ಇದೆ. ಅದು ಅಮೂರ್ತವಲ್ಲ. ಅದನ್ನು ಚಾರಿತ್ರಿಕವಾಗಿಯೂ ನಾವು ಗಮನಿಸಬಹುದು. ಯಾವುದು ನಮ್ಮ ನಿಜವಾದ ಕೌಶಲ ಮತ್ತು ಅದರ ಸ್ವರೂಪವು ಯಾವುದು ಎನ್ನುವುದರ ಆಧಾರದ ಮೇಲೆ ನಾವು ಇದನ್ನು ನಿರ್ಣಯಿಸಬಹುದು. ವರ್ಗ ಮತ್ತು ಅದರ ಸ್ವರೂಪಕ್ಕೆ ಒಂದು ಅರ್ಥವಿದೆ. ಅದು ಅರ್ಥರಹಿತವಲ್ಲ. ಅಥವಾ ಅದನ್ನು ನಾವು ಅರ್ಥವಿಸಿಕೊಳ್ಳುವ ಕ್ರಮಕ್ಕೆ ಅನುಸಾರವಾಗಿ ಬೇರೆಯಾಗುವುದೂ ಇಲ್ಲ. ಆದ್ದರಿಂದ ವರ್ಗ ಎನ್ನುವುದು ಒಂದು ಸಾಮಾಜಿಕವಾದ ಲಕ್ಷಣವನ್ನು ಹೊಂದಿರುತ್ತದೆ. ಅದು ನಮ್ಮ ವಾಸ್ತವವೂ ಆಗಿದೆ. ಅದನ್ನು ನಾವು ಸಾಮಾಜಿಕ ವಾಸ್ತವ ಎಂದು ಹೇಳಬಹುದು. ಅದನ್ನು ವಿಷಯನಿಷ್ಟವಾದ ಪ್ರಕ್ರಿಯೆ ಎಂದು ಭಾವಿಸಬೇಕಾಗಿಲ್ಲ.

* (ಗ್ರಾಂಶಿ ರೀಡರ್)

೮

ಹೆಚ್ಚುವರಿ ಮೌಲ್ಯ ಮತ್ತು ಹೆಚ್ಚುವರಿ ಅಧಿಕಾರ

ಮಾರ್ಟಿನ್ ಹೈಡೆಗಾರ್ ಒಂದು ಪ್ರಶ್ನೆಯನ್ನು ಒಂದು ಸಂದರ್ಭದಲ್ಲಿ ಕೇಳಿದ: ನಾನು ಯಾಕೆ ಇದೇ ಪ್ರದೇಶದಲ್ಲಿ ಇದ್ದೇನೆ? ನಮ್ಮ ಅಸ್ತಿತ್ವಕ್ಕೂ ನಮಗೂ ಇರುವ ಸಂಬಂಧವನ್ನು ಈ ಪ್ರಶ್ನೆಯು ಕೇಳುತ್ತದೆ. ಆದರೆ ಕಾಲ ಮತ್ತು ಪ್ರದೇಶದಿಂದ ನಾವು ತಪ್ಪಿಕೊಳ್ಳುವುದು ಅತ್ಯಂತ ಕಷ್ಟ. ಒಂದು ಹಂತದಲ್ಲಿ ಮಾರ್ಕ್ಸ್‌ವಾದಿಗಳು ಕೂಡಾ ಆಗುವುದು, ಕಾಲ ಮತ್ತು ಪ್ರದೇಶಗಳನ್ನು ಕುರಿತು ಹೇಳಿದರು. ಮನುಷ್ಯನು ಈ ಜಗತ್ತಿಗೆ ದಬ್ಬಲ್ಪಟ್ಟಿದ್ದಾನೆ. ಕೆಲವು ಸಂಗತಿಗಳು ಅವನನ್ನು ನಿಯಂತ್ರಿಸುತ್ತವೆ. ಆದ್ದರಿಂದ ಮನುಷ್ಯನನ್ನು ನಿಜವಾಗಿಯೂ ಎಲ್ಲಿ ನಿಲ್ಲಿಸಬೇಕು ಎನ್ನುವುದು ತಾತ್ವಿಕವಾದ ಪ್ರಶ್ನೆಯೂ ಹೌದು. ನಾವು ಏನನ್ನಾದರೂ ಅರ್ಥವಿಸಿಕೊಳ್ಳಬೇಕು ಎನ್ನುವುದು ಒಂದು ಮೂಲಭೂತವಾದ ನಿಲುವು ಹೌದು. ಕಾಲ ಮತ್ತು ಸ್ಥಳವು ನಮಗೆ ಹೆಚ್ಚು ಮಹತ್ವದ್ದು ಆಗಿದೆ. ನಾವು ನಮ್ಮ ಚರಿತ್ರೆಯೊಂದಿಗೆ ವಾಸ ಮಾಡುತ್ತವೆ. ಹೈಡೆಗಾರ್ ಈ ಮೂಲಭೂತವಾದ ಒಂದು ಪ್ರಶ್ನೆಯನ್ನು ಕೇಳುತ್ತಾನೆ: ನಾವು ನಮ್ಮ ಅಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳುತ್ತವೆ ಮತ್ತು ನಮಗೆ ಇದು ಯಾವ ಅನನ್ಯತೆಯನ್ನು ಕೊಡುತ್ತದೆ. ನಮ್ಮ ಸಮಾಜವು ನಮಗೆ ಅನೇಕ ವಿಧದ ಅಭ್ಯಾಸಗಳನ್ನು ಹೇಳಿಕೊಡುತ್ತದೆ. ಸ್ಥಳ ಮತ್ತು ಲೋಕ ಎನ್ನುವುದು ನಮ್ಮ ಆಗುವಿಕೆಯ ಜೊತೆಗೆ ಇರುತ್ತದೆ. ಆಗುವುದು ಎನ್ನುವುದು ನಮಗೆ ಒಂದು ಸಾಧ್ಯತೆಯೂ ಹೌದು. ಮನುಷ್ಯ ಮತ್ತು ಅವನ ಆಗುವಿಕೆ ಹಾಗೂ ಅದರ ಕಾರಣಗಳನ್ನು ಕಾಂಟ್ ಕೂಡಾ ಹೇಳಿದ್ದ. ಅವನ ನಿಲುವು ಅನೇಕರನ್ನು ಪ್ರಭಾವಿಸಿತು. ಆದುದು, ಆಗುತ್ತಿರುವುದು ಮತ್ತು ಆಗಬೇಕಾದದ್ದು ಎನ್ನುವುದಕ್ಕೆ ಅಂತರಗಳು ಇವೆ. ಆದರೆ ಆಗುವುದು ಎಂದರೆ ಅದು ನಮ್ಮನ್ನು ನಾವು ಒಂದು ಸನ್ನಿವೇಶದಲ್ಲಿ ರೂಪಿಸಿಕೊಳ್ಳುವುದು. ಕಾಂಟ್ ವಿಶ್ವಾತ್ಮಕತೆಯನ್ನು ಹೇಳುವಾಗ ಅದರ ಸಾಧ್ಯತೆಯನ್ನು ವಿವರಿಸುತ್ತಾನೆ. ಅವನು ಈ ಜಗತ್ತು ಆಗಿದೆ. ಅದರಲ್ಲಿ ನಾವು ಆಗುತ್ತೇವೆ, ಆಗುವುದಕ್ಕೆ ಕಾರಣಗಳು ಇವೆ ಎಂದು ಪ್ರತಿಪಾದಿಸುತ್ತಾನೆ. ನಾವು ಹಾಜರಾಗುವುದು ಮತ್ತು ನಮ್ಮ ಆಗುವಿಕೆಗೆ

ಕಾಂಟ್‌ನಲ್ಲಿ ಅರ್ಥವೂ ಇದೆ. ಮನುಷ್ಯನು ಆಗುತ್ತಾನೆ ಎಂದರೆ ಅವನು ಪರಿವರ್ತನೆಯೂ ಆಗುತ್ತಾನೆ ಎಂದು ಅರ್ಥ. ದೇವರು ಇದ್ದಾನೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಆದರೆ ನಾವು ಇದ್ದೇವೆ ಎನ್ನುವುದು ಒಂದು ಅರಿವು. ಡೆಸ್ಕಾರ್ಟೆಸ್ ಸಂಕಥನದಲ್ಲಿ ಒಂದು ಸತ್ಯ ಮತ್ತು ಕಾರಣಗಳ ಪ್ರಶ್ನೆಯು ಬರುತ್ತದೆ. ಅವನ ಸಂಕಥನದ ಚರ್ಚೆಯು ಅತ್ಯಂತ ಮಹತ್ವದ್ದು. ಅವನು ಕಾರಣಗಳನ್ನು ಕುರಿತು ಹೇಳುತ್ತಾನೆ. ಆಲೋಚನೆ ಮತ್ತು ನಮ್ಮ ಭೌತಿಕತೆಗೆ ಒಂದು ಸಂಬಂಧವು ಇದೆ ಎಂದು ಅವನು ಹೇಳುತ್ತಾನೆ ನಮ್ಮ ತೀರ್ಮಾನದ ಶಕ್ತಿಯಿಂದ ನಾವು ಸರಿ ಮತ್ತು ತಪ್ಪುಗಳನ್ನು ನಿರ್ಧಾರ ಮಾಡುತ್ತೇವೆ. ಒಳ್ಳೆಯದು ಮತ್ತು ಕೆಟ್ಟದ್ದು ಎನ್ನುವುದು ಎಲ್ಲರಿಗೂ ಸಮಾನವಾದ ಅಂಶಗಳೂ ಆಗಿವೆ. ನಮಗೆ ಎಷ್ಟು ಒಳ್ಳೆಯದೋ ಅದನ್ನು ನಾವು ಆಯ್ಕೆ ಮಾಡಿಕೊಳ್ಳುತ್ತೇವೆ ನಮ್ಮ ಸಂಕಥನಕ್ಕೂ ಅಗತ್ಯಕ್ಕೂ ಒಂದು ಸಂಬಂಧವು ಇದೆ. ನಾನು ಯೋಚನೆಯನ್ನು ಮಾಡುತ್ತಿರುವುದರಿಂದ ನಮಗೆ ಒಂದು ಅಸ್ತಿತ್ವವು ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾನೆ (ಡೆಸ್ಕಾರ್ಟೆಸ್ ಡಿಸ್ಕೋರ್ಸ್ ಓನ್ ಮೆಥಡ್ 2006 ಓಕ್ಸ್‌ಫರ್ಡ್ ವರ್ಲ್ಡ್ ಕ್ಲಾಸಿಕ್ಸ್ ಪಾರ್ಟ್ 4) ಅವನು ಸಂವೇದನೆಯನ್ನು ಅಲ್ಲಗಳೆಯುವುದಿಲ್ಲ. ಆದರೆ ಮನುಷ್ಯರು ಬೇರೆ ಪ್ರಾಣಿಗಳು ತಮ್ಮ ಸಂವೇದನೆಯ ಕಾರಣಕ್ಕೆ ಬೇರೆಯಾಗುತ್ತಾರೆ ಎಂದು ಅವನು ಪ್ರತಿಪಾದಿಸುತ್ತಾನೆ (ಪಾರ್ಟ್ 5) ಪ್ರತಿಯೊಬ್ಬನೂ ತನ್ನದಾದ ಸಂಕಥನವನ್ನು ರೂಪಿಸುತ್ತಾನೆ. ಅವನು ಅತ್ಯಂತ ದೊಡ್ಡ ಹುಚ್ಚನೇ ಇರಬಹುದು ಅಥವಾ ಮೂರ್ಖನೇ ಇರಬಹುದು ಇಲ್ಲವೇ ಆತ್ಯಂತ ದಡ್ಡನೇ ಇರಬಹುದು. ಆದರೆ ಅವರೆಲ್ಲರೂ ಮಾತಾಡುತ್ತಾರೆ. ಮನುಷ್ಯರಾಗಿ ನಮಗೆ ನಮ್ಮದೇ ಆದ ಒಂದು ಭಾಷೆಯೂ ಇರುತ್ತದೆ. ನಾವು ಅದರಲ್ಲಿ ವ್ಯವಹರಿಸುತ್ತೇವೆ. ಪ್ರಾಣಿಗಳಿಗೆ ಮನುಷ್ಯರಿಗಿಂತ ಅತ್ಯಂತ ಕಡಿಮೆಯಾದ ಕಾರಣವೂ ಇದೆ. ನಾವು ನಮಗೆ ಇರುವ ವಿವೇಕದಲ್ಲಿ ಮಾತಾಡುತ್ತೇವೆ. ನಮಗೆ ಅದು ಅತ್ಯಂತ ಅಗತ್ಯವಾಗಿರುತ್ತದೆ. ಈ ದೃಷ್ಟಿಯಿಂದ ಅವನ ಚರ್ಚೆಯು ಅತ್ಯಂತ ಮಹತ್ವದ್ದು ಎನ್ನುವುದರಲ್ಲಿ ಎರಡು ಮಾತು ಇಲ್ಲ. ಆದರೆ ಇಲ್ಲಿ ಮತ್ತೆ ನಾವು ಹೈಡೆಗಾರನ ನಿಲುವನ್ನು ನೆನಪು ಮಾಡಿಕೊಳ್ಳಬೇಕು. ನಾವು ಚರಿತ್ರೆಗೆ ದುಮುಕಿದ್ದೇವೆ. ಅದರಿಂದ ಆಚೆಗೆ ಬರಲು ಸಾಧ್ಯವೇ ಇಲ್ಲ. ಆದರೆ ಅವನು ಆಧುನಿಕತೆಯನ್ನು ಒಪ್ಪಿಕೊಂಡಿದ್ದಾನೆ. ಇಲ್ಲಿ ಹೀಗೆ ಚರಿತ್ರೆಗೆ ಎಸೆಯಲ್ಪಟ್ಟವರಲ್ಲಿ ಹಿಟ್ಲರ್ ಕೂಡಾ ಇದ್ದಾನೆ. ಹಿಟ್ಲರ್ ಚರಿತ್ರೆಯಲ್ಲಿ ಪ್ರತಿಯಾದ ಚರಿತ್ರೆಯನ್ನು ಕಟ್ಟಿದ್ದಾನೆ ಎನ್ನುವುದೂ ಇಲ್ಲಿ ಗಮನಾರ್ಹ. ಇರಲಿ ಅದು ಬೇರೆ ಪ್ರಶ್ನೆ. ಆದರೆ ನಮಗೆ ಆಗುವುದು ಎನ್ನುವುದೇ ಅತ್ಯಂತ ಮಹತ್ವದ್ದು. ಆಗುವುದು ಎನ್ನುವುದು ಮನುಷ್ಯನ ಅಗತ್ಯ. ಹೈಡೆಗಾರ್ ಆಗುವುದು ಎನ್ನುವಾಗ ಜಗತ್ತಿನಲ್ಲಿ ಆಗುವುದು ಒಂದು ಅರ್ಥದಲ್ಲಿ ಇದೆ ಎಂದು ಹೇಳುತ್ತಾನೆ. ನಾವು ಆಗುವುದು, ಮತ್ತೊಬ್ಬರು ಆಗುವುದು ಎನ್ನುವುದು ನಡೆಯುತ್ತದೆ. ಅವನು ಅದನ್ನು ಚಾರಿತ್ರಿಕ ಮಾಡುವುದಿಲ್ಲ. ಚರಿತ್ರೆಯಲ್ಲಿ ಒಂದು ಜಾತಿ ಮತ್ತು ಜನಾಂಗವೂ ಆಗುತ್ತಿರುತ್ತದೆ. ಅನ್ವಯ ಎನ್ನುವುದೂ ನಮಗೆ ಬಹಳ ಮುಖ್ಯವಾಗುತ್ತದೆ. ಅದು ಅರ್ಥವಿಸಿಕೊಳ್ಳುವ ಒಂದು ಪ್ರಕ್ರಿಯೆ (ಹೈಡೆಗಾರ್ 1953 ಬೀಯಿಂಗ್ ಅಂಡ್ ಟೈಮ್ ಪುಟ 139 ಸ್ಟೇಟ್ ಯುನಿರ್ವಸಿಟಿ ಆಫ್ ನ್ಯೂಯರ್ಕ್) ಉದ್ದೇಶಿತವಾದ ಅನ್ವಯ ಮತ್ತು ಅನುದ್ದೇಶಿತವಾದ ಅನ್ವಯ ಭಿನ್ನವಾಗುತ್ತವೆ ಆದರೆ ಅವನು ವಾಸ್ತವ ಮತ್ತು ಅದರ ಆಗುವಿಕೆ, ಅದು ಬದಲಾಗುವುದು ಮುಂತಾದ

ವಿವರಗಳನ್ನು ಚರ್ಚೆಮಾಡಿದ್ದಾನೆ (ಅದೇ) ಅವನ ವಾದವನ್ನು ಮುಂದುವರಿಸುವುದಾದರೆ ಗ್ರೀಕಿನ ಪೊಲೀಸ್ ಸ್ಟೇಟ್ ಕೂಡಾ ಆಗಿದೆ. ಆಧುನಿಕ ತಂತ್ರಜ್ಞಾನ ಮತ್ತು ಕೈಗಾರಿಕೆಗಳು ವ್ಯಕ್ತಿಯನ್ನು ಬೇರೆ ಬೇರೆ ಥರ ಆಗಿಸುತ್ತವೆ. ಚರಿತ್ರೆ ಎನ್ನುವುದು ಯಾವತ್ತೂ ಅತ್ಯಂತ ಆಳದಲ್ಲಿ ಇರುತ್ತದೆ ಎಂದು ಬೆಂಜಮಿನ್ ಕೂಡಾ ಹೇಳುತ್ತಾನೆ. ಒಮ್ಮೆ ಹೈಡೆಗಾರ್ ದೇವರನ್ನು ಭಂಜನಗೊಳಿಸಬೇಕು ಎಂದು ನಿರೂಪಿಸುತ್ತಾನೆ. ನಾವು ನಮ್ಮ ಅಥೆಂಟಿಕ್ ಆದ ಹುಡುಕಾಟದಲ್ಲಿ ಇದ್ದೇವೆ. ನಮಗೂ ನಮ್ಮ ಜೀವನ; ಅದರ ಅರ್ಥ ತಿಳಿಯುತ್ತದೆ. ಜೀವನ ಮತ್ತು ಅದರ ಕುರಿತಾದ ವ್ಯಾಮೋಹವಿದೆ. ಅದರ ಜೊತೆಗೆ ನಾವು ಸಮಾಜವನ್ನು ಪ್ರೀತಿಸುತ್ತೇವೆ. ಚೆಗೆವಾರ ಹೇಳಿದ ಮಾತಿದು: ಯಾರಿಗೆ ಅತ್ಯಂತ ತೀವ್ರವಾದ ಪ್ರೀತಿಯ ಭಾವನೆಗಳು ಇವೆಯೋ ಅವರು ನಿಜವಾದ ಅರ್ಥದಲ್ಲಿ ಕ್ರಾಂತಿಕಾರಿಗಳೂ ಆಗಿರುತ್ತಾರೆ. ಇದನ್ನು ಲೆನಿನ್ ಕೂಡಾ ಭಾವಿಸಿದ್ದ. ಸ್ವಾತಂತ್ರ್ಯವೆಂದರೆ ಅದು ಸುಮ್ಮನೆ ಆಗುವ ಪ್ರಕ್ರಿಯೆ ಅಲ್ಲ. ಹಾಗೆ ನೋಡಿದರೆ ಹೈಡೆಗಾರ್ ಸಾಹಿತ್ಯ, ಕಲೆ ಮುಂತಾದ ಸಂಭ್ರಮವನ್ನು ಮರೆಯುವುದಿಲ್ಲ. ಅದು ಬೇಕು ಎಂದು ಹೇಳುತ್ತಾನೆ. ಸತ್ಯವು ಹೇಗೆ ಜ್ಞಾನದ ರೂಪವನ್ನು ಪಡೆಯುತ್ತದೆ ಎನ್ನುವುದೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ (ಅದೇ ಪುಟ 200) ಯಾವುದು ತಿಳಿವು ಎನ್ನುವುದು ಇದೆಯೋ ಅದರ ರೂಪವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಮಗೆ ಈಗ ಬಂದಿರುವ ಆಧುನಿಕ ತಂತ್ರಜ್ಞಾನವೂ ಹೆಚ್ಚು ಅಥೆಂಟಿಕ್ ಆಗಿದೆ. ಈಗ ಅಮೇರಿಕಾ ತಂತ್ರಜ್ಞಾನ, ಜಪಾನ್ ತಂತ್ರಜ್ಞಾನವೂ ಹೊಸದಾದ ಮಾದರಿಯದು ಆಗಿದೆ. ಇವುಗಳು ನಮಗೆ ಹೊಸದಾದ ಅಥೆಂಟಿಕ್ ಆಯಾಮವನ್ನು ರೂಪಿಸುತ್ತವೆ. ನಮ್ಮ ವ್ಯಕ್ತಿತ್ವದ ಮೇಲೆ ಒಂದು ಒತ್ತಡವು ಇದೆ. ಈವತ್ತು ಎಲ್ಲರೂ ಕೆಲಸವನ್ನು ಮಾಡಲೇಬೇಕು ಎನ್ನುವ ಪರಿಸ್ಥಿತಿಯು ಬಂದಿದೆ. ನಾವು ಈಗ ಹೊಸದಾದ ಸನ್ನಿವೇಶದಲ್ಲಿ ಇದ್ದೇವೆ. ನಾವು ಹೊಸದಾಗಿ ಆಗುತ್ತಿದ್ದೇವೆ. ಸತ್ಯದ ಬಹುತ್ವದ ಜೊತೆಗೆ ನಾವು ಅನುಸಂಧಾನ ಮಾಡಬೇಕಾಗುತ್ತದೆ. ಮಾಧ್ಯಮಗಳು ಬದಲಾಗಿವೆ. ನಾವು ಈಗ ಕರಾರುವಕ್ಕಾದ ಲೆಕ್ಕವನ್ನು ಮಾಡುವುದು ಸಾಧ್ಯ. ಒಂದು ನಾವು ಗಮನಿಸುತ್ತಿರುವ ಅಸ್ತಿತ್ವವು ಇದೆ. ಮತ್ತೊಂದು ಅದರ ಜೊತೆಗೆ ನಮಗೆ ಸಂಬಂಧವೂ ಇದೆ. (ಅಲೆನ್ ಬದಿವೌ ಬೀಯಿಂಗ್ ಅಂಡ್ ಇವೆಂಟ್ 2005 ಪುಟ 401 ಕಂಟಿನ್ಯೂಂ) ಅಧಿಕಾರ ಮತ್ತು ಅದರ ರಚನೆಯು ವ್ಯತ್ಯಾಸವಾಗುತ್ತಿದೆ. ಅದರ ಜೊತೆಗೆ ನಾವು ಈವತ್ತು ವ್ಯಕ್ತಿಗಳಾಗಿಯೇ ಭಿನ್ನವಾಗುತ್ತಿದ್ದೇವೆ. ಪಶ್ಚಿಮ ಮತ್ತು ಅದರ ಅನುಕರಣೆಯನ್ನು ನಾವು ಬೇರೆ ಬೇರೆ ಥರ ಮಾಡುತ್ತಿದ್ದೇವೆ. ನಮಗೆ ಪಶ್ಚಿಮದ ಮಾದರಿಯ ಫ್ರಿಜ್, ಕೋಲಾ, ಸಂಸ್ಕೃತಿಯು ಆರಾಮಾಗಿ ಸಿಗುತ್ತದೆ. ಇಡೀ ಸಮಾಜವೇ ಬದಲಾಗುತ್ತಿದೆ. ಈಗ ಯಾರನ್ನು ನಾವು ಶೋಷಿತರು ಎಂದು ಕರೆಯುವುದು ಎಂದು ಜಿಜೆಕ್ ಕೇಳುತ್ತಾನೆ. ನಮ್ಮ ಆಧುನಿಕ ಬರಹಗಾರರು ವಸ್ತುವನ್ನು ವಿಷಯವನ್ನಾಗಿ ಪರಿವರ್ತನೆ ಮಾಡುತ್ತಾರೆ.

ಅದೇ ರೀತಿಯಲ್ಲಿ ಆಧುನಿಕ ಬಂಡವಾಳವಾದವು ವ್ಯಕ್ತಿ ಅವನ ಹಿತಾಸಕ್ತಿಯನ್ನು ಮಾತ್ರವೇ ಮುಖ್ಯವೆಂದು ಹೇಳುತ್ತದೆ. ಅದರ ಸಾಂಸ್ಕೃತಿಕವಾದ ನಂಬಿಕೆಯು ಬೇರೆಯೂ ಆಗಿದೆ. ಮೂಲಭೂತವಾದವು ಸಂಸ್ಕೃತಿಯನ್ನು ಹೀಗೆ ಇರಬೇಕೆಂದು ನಿರ್ದೇಶಿಸಿದರೆ ಆಧುನಿಕತಾವಾದವು ವ್ಯಕ್ತಿ ಮತ್ತು ಅವನ ವೈಯಕ್ತಿಕ ನಂಬಿಕೆಯನ್ನು ಮಾತ್ರವೇ ಕೇಂದ್ರವಾಗಿರಿಸಿಕೊಂಡಿದೆ. ಸಂಸ್ಕೃತಿ

ಮತ್ತು ಅದರ ಕುರಿತಾದ ನಂಬಿಕೆಗಳು ಕಾಲ ಕಾಲಕ್ಕೆ ಬದಲಾಗಿದೆ. ಮತ್ತು ಅದನ್ನು ನಾವು ಹೇಗೆ ಗ್ರಹಿಸಬೇಕು ಎನ್ನುವುದು ದೊಡ್ಡ ಪ್ರಶ್ನೆಯೂ ಹೌದು. ಮಾರ್ಕ್ಸವಾದಿ ಚಿಂತನೆಯು ಭಿನ್ನವಾದ ಬಗೆಯನ್ನು ಹುಟ್ಟು ಹಾಕಿದೆ. ಸತ್ಯ ಮತ್ತು ಅದರ ಹಿನ್ನೆಲೆಯಲ್ಲಿ ಇರುವ ತಾತ್ವಿಕ ಗ್ರಹಿಕೆಗಳನ್ನು ಮಾತ್ರವೇ ಮಂಡಿಸುವುದು ಅಗತ್ಯವೆಂದು ಅದು ನಂಬುತ್ತದೆ. ಸತ್ಯ, ಕಾರ್ಯ ಕಾರಣ ಸಂಬಂಧ, ಅನನ್ಯತೆ, ವಸ್ತು ನಿಷ್ಟತೆ ಮುಂತಾದವುಗಳು ಬಹಳ ಮುಖ್ಯವಾದ ಸಂಗತಿಯಾಗಿದೆ.

ವಿಶ್ವಾತ್ಮಕವಾದ ಪ್ರಗತಿ ಮತ್ತು ಅದರ ಸಾಧ್ಯತೆಯನ್ನು ಮಾರ್ಕ್ಸವಾದವು ಗ್ರಹಿಸುವ ಕ್ರಮಗಳು ಭಿನ್ನ. ಜೀವನದ ಸರಿಯಾದ ನಿರೂಪಣೆಯೂ ಬಹಳ ಮುಖ್ಯ. ಅನೇಕರು ಇದನ್ನು ಗ್ರಹಿಸುವಾಗ ತಪ್ಪನ್ನು ಮಾಡುತ್ತಾರೆ. ಅವರು ಜೀವನವೆಂದರೆ ನನ್ನ ನಿಲುವು ಮಾತ್ರವೇ ಆಗಿದೆ. ಅದಕ್ಕಿಂತ ಹೊರತಾದುದು ಅಲ್ಲವೆಂದು ಅವರು ಹೇಳುತ್ತಾರೆ. ಆದರೆ ಅದು ಹಾಗಲ್ಲ. ಆದರೆ ಅನೇಕರು ಮತ್ತೊಂದು ವಿವರವನ್ನು ಮಂಡಿಸುತ್ತಾರೆ. ಅದೆಂದರೆ ಜೀವನವೆಂದರೆ ಅಸಂಗತವೆಂದು ಅವರ ಆಭಿಪ್ರಾಯವಾಗಿದೆ. ಆದರೆ ವಿಷಯವು ಹಾಗಲ್ಲ. ಜೀವನ ಮತ್ತು ಅದರ ನಿರೂಪಣೆಯನ್ನು ಯಾರು ಮಾಡುತ್ತಾರೆ ಎನ್ನುವುದು ಅತ್ಯಂತ ಮುಖ್ಯ. ಪುನರುಜ್ಜೀವನದ ಅನಂತರ ಬಂದ ಅನೇಕ ವಾಗ್ವಾದಗಳಲ್ಲಿ ಇವುಗಳೂ ಸೇರಿಕೊಂಡಿವೆ. ಆಗ ಉದಯವಾದ ಬಂಡವಾಳವಾದಿ ವ್ಯವಸ್ಥೆಯೇ ಈ ಮಾತುಗಳಿಗೆ ಕಾರಣವಾಗಿವೆ. ಅನನ್ಯತೆ ಮತ್ತು ಅದರ ಚಹರೆಗಳಿಗೂ ಆಗಿನ ಇತಿಹಾಸಕ್ಕೂ ಒಂದು ಸಂಬಂಧವಿದೆ.ಹಾಗೆ ನೋಡುವುದಿದ್ದರೆ ಸಂಸ್ಕೃತಿಯ ಸಿದ್ಧಾಂತಗಳು ಈಗ ಮಾರುಕಟ್ಟೆಗೆ ಬಂದಿವೆ, ಯಾರು ಯಾವ ಸಿದ್ಧಾಂತವನ್ನು ಕೊಂಡುಕೊಳ್ಳಬಹುದು. ಮತ್ತು ಅದನ್ನು ಸ್ವಂತದ ಸಿದ್ಧಾಂತ ಎನ್ನುವ ರೀತಿಯಲ್ಲಿ ಮಾತಾಡಲೂಬಹುದು. ಆದರೆ ಯಾವುದೇ ಸಿದ್ಧಾಂತಗಳು ನಮ್ಮನ್ನು ಮತ್ತು ನಮ್ಮ ಆಸಕ್ತಿಯನ್ನು ರೂಪಿಸುತ್ತದೆ. ಅವುಗಳು ಮಾರುಕಟ್ಟೆಗೆ ಬಂದಾಗ ನಾವು ಬರೀ ಗಿರಾಕಿಗಳು ಎನ್ನುವ ಥರ ಕೃತಿಯನ್ನು ಓದುತ್ತೇವೆ. ಆದರೆ ಸಂಸ್ಕೃತಿಯ ಸಿದ್ದಾಂತಕ್ಕೂ ಒಂದು ಚರಿತ್ರೆಯು ಇದೆ. ಸಂಸ್ಕೃತಿಯ ಅಧ್ಯಯನವು ಈಗ ವಿಶ್ವವನ್ನು ನೋಡುವ ಕ್ರಮವನ್ನು ನಿರ್ದೇಶಿಸುತ್ತದೆ. ಮತ್ತು ಅವುಗಳನ್ನು ನಾವು ಗ್ರಹಿಸುವಾಗ ಅದರ ಅಗತ್ಯ ಮತ್ತು ಅದರ ತಾತ್ವಿಕತೆಯನ್ನು ಅನೇಕರು ಗ್ರಹಿಸಲು ಹೋಗುವುದೂ ಇಲ್ಲ. ಸ್ತ್ರೀ ಸಂಸ್ಕೃತಿ ಚಿಂತನೆಗೂ ಅದರ ಹಿಂದೆ ಇರುವ ಸನ್ನಿವೇಶಕ್ಕೂ ಒಂದು ಸಂಬಂಧವಿದೆ. ಅದು ಅದರಿಂದ ಹೊರತಾಗಿ ಇರುವುದು ಸಾಧ್ಯವಿಲ್ಲ. ಬರೆದಿರುವುದು ಮಾತ್ರವೇ ಸಂಸ್ಕೃತಿಯಲ್ಲ. ಅದರಾಚೆಗೂ ಸಂಸ್ಕೃತಿಯು ಇರುತ್ತದೆ. ಒಂದು ಸಾಂಸ್ಕೃತಿಕ ಸನ್ನಿವೇಶವು ಒಂದು ಸಾಮಾಜಿಕ ಮತ್ತು ಆರ್ಥಿಕ ನೆಲೆಗೆ ಅನುಸಾರವಾಗಿ ರೂಪುಗೊಂಡಿರುತ್ತದೆ. ಆದರೆ ಅದು ಅದರ ಪಾಡಿಗೆ ಸ್ವತಂತ್ರವಲ್ಲ. ಅದನ್ನು ಆವುಗಳನ್ನು ಗ್ರಹಿಸಲು ನಮಗೆ ಬೇರೆ ಅನ್ವಯಗಳ ಕ್ರಮಗಳು ಗೊತ್ತಿರಬೇಕಾಗುತ್ತದೆ. ಮತ್ತು ಜನರ ನಂಬಿಕೆಗೂ ಸಂಸ್ಕೃತಿಗೂ ಇರುವ ಸಂಬಂಧವನ್ನು ನಾವು ಗ್ರಹಿಸಲು ಬೇರೆ ಆನ್ವಯಿಕ ಕ್ರಮವನ್ನೂ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಅದು ಯಾವುದು ಎನ್ನವುದೇ ಬಹಳ ದೊಡ್ಡ ಪ್ರಶ್ನೆಯೂ ಆಗಿದೆ. ಜನರ ನಂಬಿಕೆಯನ್ನು ನಾವು ಹೇಗೆ ಅನ್ವಯಿಸಬೇಕು ಎನ್ನುವುದೇ ತಾತ್ವಿಕ ಪ್ರಶ್ನೆಯಾಗಿದೆ. ಇದನ್ನು ಮಾರ್ಕ್ಸವಾದವು ಹೇಳುತ್ತದೆ. ನಮಗೆ ಗೊತ್ತಿರುವ ಪರಿಕರವು ಯಾವ ಬಗೆಯದು ಎನ್ನುವುದೇ ಮುಖ್ಯ. ಈ ದೃಷ್ಟಿಯಿಂದಲೇ

ಸಂಸ್ಕೃತಿಯನ್ನು ನಾವು ಆನ್ವಯಿಕವಾಗಿ ನೋಡುವಾಗ ಚರಿತ್ರೆ ಮತ್ತು ಅದರ ನೆಲೆಯನ್ನು ಗ್ರಹಿಸಬೇಕಾಗುತ್ತದೆ. ದ್ವಿತೀಯಾ ಮಹಾಯುದ್ಧದ ತರುವಾಯ ಸಂಸ್ಕೃತಿ ಮತ್ತು ಅದರ ಕುರಿತಾದ ಚರ್ಚೆಗಳಿಗೆ ಹೆಚ್ಚಿನ ಮಹತ್ವವು ಬಂದಿತು. ಆಗ ಪ್ರಾರಂಭವಾದ ಅನೇಕ ಹೊಸ ಸಾಂಸ್ಕೃತಿಕ ಸಿದ್ಧಾಂತಗಳಿಗೂ ನಾಗರಿಕ ಹಕ್ಕುಗಳಿಗೂ ಸಂಬಂಧವಿದೆ. ರಾಷ್ಟ್ರೀಯತೆ, ಅಣುಬಾಂಬ್ ನಿರೋಧ, ಹಿಂಸೆಯ ಕುರಿತಾದ ಪ್ರತಿರೋಧ ಎಲ್ಲವೂ ಆಗ ಅಗತ್ಯವಾಗಿತ್ತು. ಇದಕ್ಕೂ ಆಗಿನ ಸಾಂಸ್ಕೃತಿಕ ಚಟುವಟಿಕೆಗೂ ಒಂದು ಸಂಬಂಧವಿದೆ. ಮಾಧ್ಯಮಗಳಿಂದಾಗಿ ಆಗ ಜನಪ್ರಿಯ ಸಂಸ್ಕೃತಿ ಮತ್ತು ಉಪಸಂಸ್ಕೃತಿ, ಯುವ ಸಂಸ್ಕೃತಿಯ ಪರಿಕಲ್ಪನೆಗಳು ಬಂದವು. ಇವುಗಳು ಆಗ ಹೊಸ ರೀತಿಯ ಸಂವಾದವನ್ನು ರೂಪಿಸಿದ್ದು ನಿಜ. ಆಗ ಸಾಮಾಜಿಕ ಶ್ರೇಣೀಕರಣವೂ ಬದಲಾದವು. ಹೊಸ ಪರಿವರ್ತನೆಗಳು ಕಾಣಿಸಿಕೊಂಡವು. ಸ್ವಯಂನಿಗ್ರಹವನ್ನು ಪ್ರತಿಪಾದಿಸಲಾಯಿತು. ಪರಿವರ್ತನೆಗೂ ಸಾಹಿತ್ಯದ ಮೀಮಾಂಸೆಗೂ ಒಂದು ಸಂಬಂಧವಿದೆ. ಅಗತ್ಯಗಳು ಬದಲಾದವು. ಇವುಗಳನ್ನು ನಾವು ಸಾಹಿತ್ಯೇತರ ಕಾರಣಕ್ಕೂ ಪರಿಶೀಲಿಸಬೇಕು. ಆಗಿನ ಸಂದರ್ಭವು ಹೇಗಿತ್ತೆಂದರೆ ಮನುಷ್ಯರ ಸಾಧ್ಯತೆಗಳೇ ಭಿನ್ನವಾದವು. ಬಂಡವಾಳವಾದ ಮತ್ತು ಸಾಂಸ್ಕೃತಿಕ ನಿಲುವುಗಳ ನಡುವೆ ಒಂದು ಸಂಘರ್ಷವುಂಟಾಯಿತು. ಬಂಡವಾಳವಾದವು ಹೆಣ್ಣನ್ನು ನೋಡಿದ ಕ್ರಮವು ಬೇರೆ. ಇದನ್ನು ಆಗಿನ ಬುದ್ಧಿಜೀವಿಗಳನ್ನು ಗಮನಿಸಬಹುದು. ಸಾಮಾಜಿಕ ಪರಿವರ್ತನೆಯನ್ನು ಕೇವಲ ಬಾಹ್ಯವೆಂದು ಹೇಳಬಾರದು. ಮನುಷ್ಯ ಮತ್ತು ಅವನ ಹಿನ್ನೆಲೆಗಳಿಗೂ ಆವನ ಆಲೋಚನಾಕ್ರಮಕ್ಕೂ ಆಂತರಿಕ ಸಂಬಂಧವಿದೆ. ಮಹಾಯುದ್ಧದ ತರುವಾಯ ಸಂಸ್ಕೃತಿಯ ಚಿಂತನೆ ಮತ್ತು ಆಗ ಉದಯವಾದ ಮಧ್ಯಮವರ್ಗಕ್ಕೂ ಒಂದು ಸಂಬಂಧವಿದೆ.

ಸಾಂಸ್ಕೃತಿಕ ಪ್ರಶ್ನೆಯೆಂದರೆ ಅದರ ಸ್ವರೂಪವನ್ನು ನಾವು ಹೇಗೆ ಬೇಕಾದರೂ ಮಾತಾಡುವ ಸಂಗತಿಯೆಂದು ಅನೇಕರು ಭಾವಿಸಿದ್ದಾರೆ. ಆದರೆ ಅದನ್ನು ಹಾಗೆ ಭಾವಿಸುವುದು ಸರಿಯೇ ಎನ್ನುವುದು ಮಾರ್ಕ್ಸವಾದವು ಎತ್ತಿಕೊಳ್ಳುವ ಪ್ರಶ್ನೆಯಾಗಿದೆ. ಇದರಿಂದ ಮಾರ್ಕ್ಸವಾದವು ಹೇಳುವ ಸಂಗತಿಯು ಭಿನ್ನವಾಗಿದೆ. ರಾಜಕಾರಣ, ಆರ್ಥಿಕತೆ, ಮಾರುಕಟ್ಟೆ, ಸಮಾಜ, ಸಾಮಾಜಿಕ ಸಂಬಂಧ, ಚರಿತ್ರೆಯು ಸಂಸ್ಕೃತಿಯನ್ನು ಬದಲಿಸುತ್ತದೆ. ಸಮೂಹ ಕೇಂದ್ರಿತ ರಾಜಕಾರಣವು ಸಂಸ್ಕೃತಿಯನ್ನು ಬದಲಿಸುತ್ತದೆ. ಗ್ರಾಹಕ ಕೇಂದ್ರಿತ ಸಂಸ್ಕೃತಿಯು ಭಿನ್ನವಾದ ಚಹರೆಯನ್ನು ಹೊಂದಿದೆ. ಆಧುನಿಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅದು ಸಂಕೇತದ ಸ್ವರೂಪವನ್ನು ನಾವು ಅರ್ಥಮಾಡಿಕೊಳ್ಳಬೇಕು. ಆಧುನಿಕ ಸಾಂಸ್ಕೃತಿಕ ಚಿನ್ಹೆಗಳು ಬದಲಾಗಿವೆ. ಹೊಸ ರೀತಿಯ ಅಲೋಚನೆಗಳು ಬಂದಿವೆ. ಹೊಸ ಸಂವಹನ ಮಾಧ್ಯಮಗಳು ಬಂದಿವೆ. ನಮ್ಮ ಧ್ವನಿಯನ್ನು ನಾವು ಮತ್ತೆ ಮತ್ತೆ ಟೇಪ್ ರೆಕಾರ್ಡರ್‌ನಲ್ಲಿ ಕೇಳಬಹುದು. ನಮ್ಮ ಚಿತ್ರಗಳನ್ನು ನಾವೇ ಮುದ್ರಿಸಕೊಳ್ಳಬಹುದು. ರೆಕಾರ್ಡ ಮಾಡಿಕೊಳ್ಳುವಾಗ ನಮ್ಮ ಧ್ವನಿಯ ಕಲಬೆರೆಕೆಯನ್ನು ಮಾಡಬಹುದು. ಆದ್ದರಿಂದ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಾಗ ಎಲ್ಲವೂ ವಿಸ್ಮೃತಿಗೆ ಒಳಗಾಗಿದೆ ಎಂದು ಭಾವಿಸಬೇಕಾಗಿಲ್ಲ. ಮತ್ತು ಈಗ ಸಂಸ್ಕೃತಿಯ ಪ್ರಶ್ನೆಯು ಮೂಲಭೂತವಾಗಿ ಅನೇಕ ಪ್ರಶ್ನೆಗಳನ್ನು ಎತ್ತಿಕೊಂಡಿವೆ. ಅದರನ್ನು ನಾವು ವ್ಯಾಖ್ಯಾನಿಸುವಾಗ ಅದರ ಸ್ವರೂಪವನ್ನು ಮತ್ತು ಅದರ ಹಿಂದಿರುವ ಒತ್ತಾಯಗಳನ್ನು ನಾವು ಕಾಣಬಹುದು. ಕಲೆ, ಗಂಡು ಹೆಣ್ಣು, ಸಿನಿಮಾ, ಕಂಪ್ಯೂಟರ್, ಕುಟುಂಬ, ಅಧಿಕಾರ, ಭಾಷೆ, ಹುಚ್ಚು, ಉನ್ಮಾದ, ಜನಾಂಗ ಹೀಗೆ

ಅನೇಕ ಪ್ರಶ್ನೆಗಳನ್ನು ಸಂಸ್ಕೃತಿಯು ಎತ್ತಿಕೊಳ್ಳಬೇಕಾಗುತ್ತದೆ. ಮಾರ್ಕ್ಸವಾದಿ ಸಿದ್ಧಾಂತದಲ್ಲಿ ಬರೀ ಬುದ್ಧಿಜೀವಿಗಳು ಮಾತ್ರವೇ ಇಲ್ಲ. ಅದರ ಹಿಂದೆ ಜನಸಾಮಾನ್ಯರು ಇದ್ದಾರೆ ಎನ್ನುವುದರ ಅರಿವು ಮಾರ್ಕ್ಸ್‌ವಾದಕ್ಕೆ ಇದೆ. ಆದರೆ ಈ ಚರ್ಚೆಗಳನ್ನು ನಾವು ಯಾವ ರೀತಿಯಲ್ಲಿ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಅನೇಕರು ಇದನ್ನು ಚರ್ಚಿಸುವಾಗ ಸಂಸ್ಕೃತಿಯನ್ನು ಕೇವಲ ನಿರ್ಲಿಪ್ತವಾದುದು ಎಂದು ಭಾವಿಸಿಕೊಳ್ಳುವುದೂ ಇದೆ. ಆದರೆ ಅದು ಸಾಧ್ಯವಾಗದ ವಿಚಾರ. ಟಿ.ವಿ., ಕಂಪ್ಯೂಟರ್, ದೂರವಾಣಿಗಳು ನಮ್ಮ ಲೋಕ ಗ್ರಹಿಕೆಯನ್ನು ಮಂಡಿಸುತ್ತದೆ. ಇವುಗಳು ಆಧುನಿಕತೆಯನ್ನು ಸೂಚಿಸುತ್ತದೆ. ಆದರೆ ಯಾವುದನ್ನು ಆಧುನಿಕತೆ ಮತ್ತು ಆದರ ಪರಿಣಾಮಗಳು ಎಂದು ಕರೆಯುತ್ತೇವೆಯೋ ಅದರಲ್ಲಿ ಅನೇಕ ಸಂಗತಿಗಳು ಇವೆ. ಇದರ ಮೂಲಕ ನಾವು ಅರ್ಥ ಮಾಡಿಕೊಳ್ಳಬೇಕಾದ ಅನೇಕ ಅಂಶಗಳಿವೆ. ಸಂಸ್ಕೃತಿಯೆಂದರೆ ಅದು ಬಿಳಿಯ ಹಾಳೆಯೂ ಅಲ್ಲ. ಕಪ್ಪು ಪರದೆಯೂ ಅಲ್ಲ. ಆಧುನಿಕತೆಯ ಪ್ರಭಾವವು ಒಂದು ದೇಶದಲ್ಲಿ ಒಂದು ರೀತಿಯಲ್ಲಿ ಇದ್ದರೆ ಮತ್ತೊಂದು ದೇಶದಲ್ಲಿ ಮತ್ತೊಂದು ರೀತಿಯಲ್ಲಿ ಇರುತ್ತದೆ. ಮತ್ತು ಅದರೆ ಸಾಧ್ಯತೆಯು ಭಿನ್ನವೂ ಆಗಿತ್ತು. ಆಧುನಿಕತೆಯನ್ನು ತುಂಬಾ ಕ್ಯಾಶುವಲ್ ಅನ್ನುವ ರೀತಿಯಲ್ಲಿ ನಾವು ಬಳಸುವಂತೆ ಇಲ್ಲ. ಅದರ ಹಿನ್ನೆಲೆಯಲ್ಲಿ ಬಹುತ್ವ ಮತ್ತು ವ್ಯಕ್ತಿವಾದವು ಜೊತೆಗೆ ಸೇರಿತ್ತು. ಬಹುತ್ವ ಎನ್ನುವುದು ಅದರ ಒಂದು ದೃಷ್ಟಿಕೋನವೂ ಹೌದು. ಆದರೆ ಆಧುನಿಕ ಸಾಹಿತ್ಯದ ಸಿದ್ಧಾಂತಗಳು ಬಹುತ್ವವನ್ನು ವ್ಯಾಪಕವಾಗಿ ಚಾಲ್ತಿಗೆ ತರುತ್ತಿವೆ.

ರಾಜಕೀಯ ವಾಸ್ತವದಲ್ಲಿ ಇದು ಚರ್ಚೆಗೆ ಅತ್ಯಂತ ಅಗತ್ಯವಾದ ಒಂದು ಪದವಾಗಿದೆ. ಇದನ್ನು ನಾವು ಕಾರ್ಮಿಕ ಸಂಘಟನೆ ಮತ್ತು ಅದರ ಮುಷ್ಕರಗಳು ಎಂದು ಭಾವಿಸುವುದು ಬೇಕಾಗಿಲ್ಲ ಎನ್ನುವುದು ಗ್ರಾಂಶಿಯ ವಾದ. ಸಮಾಜವಾದಿ ದೃಷ್ಟಿಕೋನದ ಪಕ್ಷಗಳು ಬೇರೆ ವಾದಗಳನ್ನು ಮಂಡಿಸುತ್ತವೆ. ಸಮಾಜವಾದವು ನಿಜವಾದ ಅರ್ಥದಲ್ಲಿ ರಾಜಕೀಯ ಸಂಗತಿಗಳನ್ನು ಮೇಲು ರಚನೆ ಎಂದು ಕರೆಯುತ್ತವೆ. ಅದುವೇ ತನ್ನ ಪಾಡಿಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ನಾಗರಿಕ ಸಮಾಜವು ತನ್ನ ತೆಕ್ಕೆಯಲ್ಲಿ ಶಾಲೆಗಳು, ಸಂವಿಧಾನ, ಆಟದ ಗುಂಪುಗಳು , ಮಾಧ್ಯಮಗಳು, ಕುಟುಂಬ ಪದ್ಧತಿಗಳು ಮುಂತಾದವುಗಳನ್ನು ನಿರ್ದಿಷ್ಟವಾದ ರೀತಿಯಲ್ಲಿ ರಚನೆ ಮಾಡುತ್ತದೆ. ಒಂದು ಶಿಸ್ತನ್ನು ತರಲು ಯತ್ನವನ್ನು ಮಾಡುತ್ತವೆ. ಗ್ರಾಂಶಿಯು ಇದನ್ನು ಹೇಳುವಾಗ ನಾಗರಿಕತೆ ಹೇಗೆ ಇರುತ್ತದೆ ಎಂದು ವಿವರಿಸುತ್ತಾನೆ. ಪ್ರಭುತ್ವವು ಅತ್ಯಂತ ಅಚ್ಚುಕಟ್ಟಾಗಿ ಸಮಾಜ ಮತ್ತು ಆರ್ಥಿಕತೆಯನ್ನು ಸಂಯೋಜನೆ ಮಾಡಿ ಅದರ ಮೂಲಕವೇ ಒಂದು ನಾಗರಿಕವಾದ ಸಮಾಜವನ್ನು ನಿರ್ಮಿಸುತ್ತದೆ. ಅಷ್ಟೇ ಅಲ್ಲ ಅದು ಒಂದು ಹಂತದಲ್ಲಿ ಖಾಸಗಿ ಎನ್ನುವುದನ್ನು ಹೆಚ್ಚು ಚಾಲ್ತಿಗೆ ತರುತ್ತದೆ. ಗ್ರಾಂಶಿಯು ಇದನ್ನು ಅತ್ಯಂತ ವಿಸ್ತಾರವಾದ ಅರ್ಥದಲ್ಲಿ ಬಳಸಿದ್ದಾನೆ. ನಾಗರಿಕ ಸಮಾಜವು ನಾಗರಿಕವಾದ ವ್ಯಕ್ತಿಗಳಿಗೆ ಹೆಚ್ಚು ಮನ್ನಣೆಯನ್ನು ಕೊಡುತ್ತದೆ. ವ್ಯಕ್ತಿ ಮತ್ತು ಅವನ ಗುಣಗಳು, ಅವನ ನಡವಳಿಕೆಗಳು, ಅವನ ಅಭಿರುಚಿಗಳನ್ನು ತಿದ್ದಲು ಯತ್ನವನ್ನು ಮಾಡುತ್ತದೆ. ಸಾಂಸ್ಥಿಕವಾದ ಮೌಲ್ಯಗಳು ಕೂಡಾ ಬದಲಾಗುತ್ತದೆ. ನಾಗರಿಕ ಸಮಾಜವು ತನ್ನದೇ ಆದ ಒಂದು ಕಾನೂನು ಸಂಗತಿಗಳನ್ನು ಅನ್ವಯ ಮಾಡುತ್ತದೆ. ಇದರಿಂದ ಮನುಷ್ಯ ಮನುಷ್ಯರ ನಡುವೆ ಒಂದು ಕಂದರ ಶುರುವಾಗಿದೆ. ನಾಗರಿಕರು ಮತ್ತು ಅನಾಗರಿಕರು ಎನ್ನುವುದು ನಮಗೆ ಭಿನ್ನವಾದ ವರ್ಗಗಳಂತೆ ಕಾಣುವುದು ಕೂಡಾ ಇದೇ

ಕಾರಣಕ್ಕೆ. ನಾಗರಿಕ ಸಮಾಜ ಮತ್ತು ಅದರ ಸಾಧ್ಯತೆಯು ಇರುವುದು ಪ್ರಭುತ್ವ ಮತ್ತು ಅದರ ಅಧಿಕಾರದ ಸಂಬಂಧದಲ್ಲಿ. ಆಧುನಿಕ ಸಮಾಜ ಮತ್ತು ಅದರ ರೂಪವು ರಾಷ್ಟ್ರೀಯತೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಳುತ್ತದೆ. ಅದಕ್ಕೂ ಗಿರಾಕಿತನಕ್ಕೂ ಒಂದು ಸಂಬಂಧವು ಇದೆ. ನಾಗರಿಕತೆ ಮತ್ತು ಆಧುನಿಕ ಸವಾಜದೊಳಗೆ ಇರುವ ವರ್ಗಗಳು ಇಲ್ಲಿ ಗಮನಾರ್ಹ..ಹಾಗೆಂದು ಇದು ಶಾಶ್ವತವಾದ ಒಂದು ಚರ್ಚೆಯೂ ಅಲ್ಲ. ಅದರ ರೂಪಗಳು ಬದಲಾಗುತ್ತವೆ. ಅದಕ್ಕೆ ತಕ್ಕಂತೆ ವ್ಯಕ್ತಿ ಮತ್ತು ಅವರ ದೃಷ್ಟಿಕೋನಗಳು ಇಲ್ಲಿ ಬದಲಾಗುತ್ತವೆ. ಅದರ ಜೊತೆಗೆ ಇಲ್ಲಿ ಇನ್ನೊಂದು ಅಂಶವನ್ನು ನಾವು ಕಾಣಬಹುದು: ನಾಗರಿಕ ಸಾಮಾಜಿಕ ಜೀವನ ಎನ್ನುವುದು ನಮಗೆ ಇನ್ನೊಂದು ದೃಷ್ಟಿಕೋನವನ್ನು ಪ್ರಸ್ತುತ ಪಡಿಸುತ್ತದೆ. ನಾಗರಿಕ ಸಮಾಜದಲ್ಲಿ ವರ್ಗ ಎನ್ನುವುದು ಅತ್ಯಂತ ಮುಖ್ಯವಲ್ಲ. ಅದರ ಬದಲಿಗೆ ಅದರಲ್ಲಿ ಅತ್ಯಂತ ಸಂಕೀರ್ಣವಾದ ಸಾಮಾಜಿಕ ರೂಪವನ್ನು ಕಾಣುತ್ತೇವೆ.

ಇದನ್ನು ಸಂಸ್ಕೃತಿಗೆ ಅನ್ವಯಿಸಿ ಹೇಳಲಾಗಿದೆ. ಯಾವುದು ದ್ವಂದ್ವಾತ್ಮಕ ಮತ್ತು ಯಾವುದು ಪುನರುಜ್ಜೀವನ ಎನ್ನುವ ಪ್ರಶ್ನೆಯನ್ನು ಅಡರ್ನೊ ಮತ್ತು ಹೊರ್ಕೆಮಾರ್ ಕೇಳುತ್ತಾರೆ. ಮೇಲು ನೋಟಕ್ಕೆ ಇದು ಅತ್ಯಂತ ತದ್ವಿರುದ್ಧವಾದ ಪದಗಳಂತೆ ಭಾಸವಾಗುತ್ತವೆ. ಅವರ ಪ್ರಕಾರ ಇದು ಅತ್ಯಂತ ಮುಖ್ಯವಾದ್ದು. ಪುನರುಜ್ಜೀವನ ಎನ್ನುವುದು ಪ್ರಾರಂಭವಾದ್ದು ಬುದ್ಧಿಜೀವಿಗಳನ್ನು ಗಮನಿಸಿಕೊಂಡು. ಆದರೆ ಇದರಲ್ಲಿ ಮಹಿಳಾ ಪ್ರಶ್ನೆಯು ಅತ್ಯಂತ ಗೌಣವಾಗಿತ್ತು. ಆದ್ದರಿಂದ ಇದನ್ನು ಅವರಿಬ್ಬರೂ(ಅಡರ್ನೊ ಮತ್ತು ಹೊರ್ಕೆಮಾರ್) ಸಂಸ್ಕೃತಿಯ ಹಿನ್ನೆಲೆಯಲ್ಲಿ ಗಮನಿಸಿದ್ದಾರೆ ಎನ್ನುವುದು ಅತ್ಯಂತ ಮುಖ್ಯವಾದ ಅಂಶ. ಪುನರುಜ್ಜೀವನ ಮತ್ತು ಅದರ ಪರಿಣಾಮವನ್ನು ನಾವು ಒಂದು ನಿಯಮದ ಒಳಗೆ ತರಲು ಸಾಧ್ಯವಿಲ್ಲ ಆದಕ್ಕೂ ಹಿಂದೆ ಸಮಾಜ ಇನ್ನೊಂದು ಥರ ಇತ್ತು ಎಂದು ಅಡರ್ನೊ ಭಾವಿಸುತ್ತಾನೆ. ಅದಕ್ಕೂ ಹಿಂದೆ ಇದ್ದ ಸಮಾಜವು ಆದಿಭೌತಿಕವಾದ ಸಂಗತಿಯನ್ನು ನಂಬಿತ್ತು. ಇದು ಒಂದು ಅಂಶ. ಎರಡನೆಯದಾಗಿ ಅದು ವೈಚಾರಿಕವಾದ ತಳಹದಿಯನ್ನು ಹೊಂದಿರಲಿಲ್ಲ. ಹೆಚ್ಚು ಕಡಿಮೆ ಇದು ಮಧ್ಯಕಾಲದ ತನಕ ಮುಂದುವರಿದಿತ್ತು ಹದಿನೆಂಟನೆಯ ಶತಮಾನದ ವರೆಗೆ ಇದೇ ಕಲ್ಪನೆಯು ಇದ್ದುದು ಸತ್ಯ.

ವರ್ಗ, ಜಾತಿ, ಮತ, ಲಿಂಗ, ದೇಶ, ವಿಚಾರ, ಸಂಸ್ಕೃತಿ, ಭಾಷೆ ಹೀಗೆ ಇಂಥಾ ಅನೇಕ ಭಿನ್ನಭಿನ್ನ ನೆಲೆಗಳಲ್ಲಿ ಯಾವುದು ಶೋಷಣೆಗೆ ಗುರಿಯಾಗಿರುತ್ತದೊ ಅಥವಾ ಅಲಕ್ಷ್ಯಕ್ಕೆ ಈಡಾಗಿರುತ್ತದೊ ಅದೆಲ್ಲವನ್ನು ಕುರಿತು ನಡೆಸಿದ ಅಧ್ಯಯನಗಳೇ 'ಸಬಾಲ್ಟ್ರನ್ ಸ್ಟಡೀಸ್' ಅಥವಾ 'ಪರ್ಯಾಯವಾದಿ ಅಧ್ಯಯನ ಕ್ರಮಗಳು' ಎಂದು ಗುರುತಿಸಲಾಗುತ್ತದೆ. ಜ್ಞಾನ ಹಾಗು ಅಧಿಕಾರದ ನೆಲೆಯಿಂದ ಯಾಜಮಾನ್ಯ ಸ್ಥಾಪಿಸಿದ ಪ್ರಬಲ ವರ್ಗ ಅಥವಾ ಗುಂಪು ರಚಿಸಿರುವ ಮಹಾ ಕಥನಗಳನ್ನು ಕೆಡವಿ ಹಾಕುವ ಉದ್ದೇಶದಿಂದ ಯಾವಾಗಲೂ ಸ್ವಯಂ ಪ್ರತಿನಿಧೀಕರಣ ಕ್ರಿಯೆಯಲ್ಲಿ ಈ ಅಧ್ಯಯನ ಕ್ರಮಗಳು ತೊಡಗಿರುತ್ತವೆ. ಗ್ರಾಮ್ಷಿ ಇದನ್ನೇ 'ಪ್ರತಿ ಯಜಮಾನಿಕೆ' ಎಂದು ಕರೆಯುತ್ತಾನೆ. ಸೈದ್ ಕೂಡಾ ಗ್ರಾಮ್ಷಿಯನ್ನೇ ಅನುಸರಿಸಿ ತನ್ನ ಓರಿಯಂಟಲಿಸಂನ್ನು ಕಟ್ಟುತ್ತಾನೆ. ಸರಳವಾದ ಮತ್ತು ಏಕಮುಖೀ ನೆಲೆಯಿಂದ ನಿರ್ಮಾಣಗೊಳ್ಳುವ ಚರಿತ್ರೆಯನ್ನು

ವಿರೋಧಿಸುತ್ತಲೇ ಅದನ್ನು ಮುರಿದು ಕಟ್ಟುವ ಕ್ರಿಯೆಯಲ್ಲಿ ತೊಡಗಬೇಕೆಂದು ಈ ಅಧ್ಯಯನ ಕ್ರಮಗಳು ಹೇಳುತ್ತವೆ. ಇದುವರೆಗೆ ಯಾವುದು ಅಲಕ್ಷ್ಯಕ್ಕೆ ಅಥವಾ ನಿರ್ಲಕ್ಷ್ಯಕ್ಕೆ ಗುರಿಯಾಗಿತ್ತೋ ಅದನ್ನು ಮುಖ್ಯವಾಹಿನಿಯಲ್ಲಿ ತಂದು ಅಲ್ಲಿನ ಅನನ್ಯತೆ ಮತ್ತು ಜ್ಞಾನ ಪರಂಪರೆಗಳನ್ನು ಆಳುವ ವರ್ಗದ ಸಂಕಥನಗಳೊಂದಿಗೆ ಮುಖಾಮುಖಿಯಾಸಬೇಕೆಂಬುದು ಈ ಅಧ್ಯಯನ ಕ್ರಮಗಳ ತಾತ್ವಿಕ ನಿಲುವು. ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವೆ ಪರಸ್ಪರ ಸಂವಾದವಿರುತ್ತದೆ. ಈ ಸಂವಾದವೆನ್ನುವುದು ತುಂಬಾ ಸಂಕೀರ್ಣವಾಗಿರುತ್ತದೆ. ಇಲ್ಲಿಂದಲೇ ಯಜಮಾನಿಕೆ ರೂಪುಗೊಳ್ಳುತ್ತದೆ. ಯಜಮಾನಿಕೆ ರೂಪುಗೊಳ್ಳುವುದೇ ಆಳಿಸಿಕೊಳ್ಳುವ ವರ್ಗವನ್ನು ಹಿಡಿತದಲ್ಲಿ ಇರಿಸಿಕೊಳ್ಳುವ ಮೂಲಕ. (ವಿವರಗಳಿಗೆ ನೋಡಿ : ಕೆ. ಫಣಿರಾಜ್. ಆಂಟೋನಿಯೋ ಗ್ರಾಮ್ಷಿ, ಪುಟ–55, 2003)

ಗ್ರಾಂಶಿಯು ನಮಗೆ ಇನ್ನೊಂದು ಬಗೆಯ ದೃಷ್ಟಿಕೋನವನ್ನು ಮೇಲ್ ರಚನೆಯ ಬಗ್ಗೆ ಕೊಡುತ್ತಾನೆ. ತಳಹದಿ ರಚನೆ ಮತ್ತು ಮೇಲ್ ಪದರಕ್ಕೆ ಒಂದು ಸಂಬಂಧವು ಇದೆ.ಮಾರ್ಕ್ಸವಾದವು ಇದನ್ನು ಹೆಚ್ಚು ಚಾಲ್ತಿಗೆ ತಂದಿತು. ಆದರೆ ಇದನ್ನು ಗ್ರಾಂಶಿಯು ಹೇಳುವಾಗ ನಾಗರಿಕ ಸಮಾಜ ಮತ್ತು ಮೇಲ್ ರಚನೆಗೆ ಯಾವ ಬಗೆಯ ಸಂಬಂಧವು ಇದೆ ಎಂದು ವಿವರಿಸುತ್ತಾನೆ. ಮೇಲು ರಚನೆ ಎನ್ನುವುದು ಬರೀ ಅರ್ಥಶಾಸ್ತ್ರವನ್ನು ಹೇಳುತ್ತಾನೆ ಎಂದು ಭಾವಿಸಲು ಸಾಧ್ಯವಿಲ್ಲ. ಅದು ಚರಿತ್ರೆಯ ಜೊತೆಗೆ ಒಂದು ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಸಾಮಾಜಿಕ ಸಂಬಂಧವನ್ನು ಅದು ಹೇಳುತ್ತದೆ. ಆದರೆ ಗ್ರಾಂಶಿಯು ನಮಗೆ ತಳಹದಿ ರಚನೆಯು ಮಾತ್ರವೇ ಮುಖ್ಯವಲ್ಲ ಎಂದು ಹೇಳುತ್ಥಾನೆ. ಅವನು ಅಸಮತೆಯು ಹೇಗೆ ಇರುತ್ತದೆ ಎಂದು ಹೇಳುತ್ತಾನೆ. ಅದನ್ನು ಬಿಟ್ಟು ಸಮಾಜ ಮತ್ತು ಸಂಸ್ಕೃತಿಯನ್ನು ನಾವು ಚರ್ಚೆ ಮಾಡಲು ಸಾಧ್ಯವಿಲ್ಲ., ಮತ್ತೊಂದು ದೃಷ್ಟಿಯಿಂದ ಯಾವುದು ಮೇಲ್ ರಚನೆಯು ಇದೆಯೋ ಅದರ ಬಗ್ಗೆ ಗ್ರಾಂಶಿಯು ಹೆಚ್ಚು ಹೇಳುತ್ತಾನೆ. ಆದ್ದರಿಂದಲೇ ಅವನನ್ನು ಮೇಲ್ ರಚನೆಗಳ ವಿದ್ವಾಂಸ ಎಂದು ಕರೆಯುತ್ತಾರೆ. ಅವನು ಹೇಗೆ ಆಧುನಿಕ ಸಂಸ್ಥೆಗಳು ರಚನೆಯಾಗುತ್ತವೆ ಮತ್ತು ಅದರ ಪರಿಣಾಮವು ಯಾವ ಬಗೆಯಲ್ಲಿ ಇರುತ್ತದೆ ಎಂದು ವಿವರಿಸುತ್ತಾನೆ. ಆರ್ಥಿಕತೆ ಎನ್ನುವುದು ಅನೇಕ ಮಾದರಿಯ ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ ಎನ್ನುವುದು ಅವನ ಗ್ರಹಿಕೆ. ಅದು ಮೂಲಭೂತವಾದ್ದು ಎನ್ನುವುದರಲ್ಲಿ ಅವನಿಗೆ ತಕರಾರು ಇಲ್ಲ. ಮನುಷ್ಯ ಅನೇಕವನ್ನು ಸೃಷ್ಟಿಮಾಡಿದ್ದಾನೆ. ಅದರಲ್ಲಿ ಧಾರ್ಮಿಕ ಸಂಕೇತಗಳು ಇವೆ. ಶಾಲೆಗಳು, ಕಾನೂನುಗಳು, ಕೋರ್ಟ್‌ಗಳು ಇವೆ., ಆದ್ದರಿಂದ ನಮ್ಮ ನಡುವೆ ಹುಟ್ಟುವ ಸಮಸ್ಯೆ ಮತ್ತು ಅದರ ಪರಿಹಾರಗಳು ನಮ್ಮ ನಡುವೆಯೇ ಇರುತ್ತದೆ. ರಾಜಕಾರಣ, ಧರ್ಮ, ಸಂಸ್ಕೃತಿ, ಸೌಂದರ್ಯ ಮೀಮಾಂಸೆಗಳು ಇರುತ್ತವೆ. ನಮ್ಮ ಪ್ರಜ್ಞೆಯು ಇವುಗಳ ನಡುವೆ ಸಹಯೋಗವನ್ನು ಇಟ್ಟುಕೊಂಡಿರುತ್ತದೆ. ಅವುಗಳ ಜೊತೆಗೆ ಸಂಘರ್ಷವನ್ನು ಇಟ್ಟುಕೊಂಡಿರುತ್ತವೆ. ಬಾಬಿಯೋ ಆರ್ಥಿಕತೆಯು ಕೆಲವು ಮಿತಿಗಳನ್ನು ಹೊಂದಿವೆ ಎಂದು ಹೇಳುತ್ತಾನೆ. ಉತ್ಪಾದನೆಗಳೂ ಕೂಡಾ ತನ್ನದೇ ಸಾಂಸ್ಕೃತಿಕ ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಅನುಮಾನವಿಲ್ಲ. ಇದನ್ನು ಹೇಳುವಾಗ ಚರಿತ್ರೆ ಮತ್ತು ಅದು ಸೃಷ್ಟಿಸುವ ಚರಿತ್ರೆಯ ಪ್ರತ್ಯೇಕ ವಿನ್ಯಾಸವನ್ನು ನೋಡಬೇಕಾಗುತ್ತದೆ. ಅದು ಚರಿತ್ರೆಯಲ್ಲಿ ದ್ವಂದ್ವಾತ್ಮಕವೂ ಆಗಿರುತ್ತದೆ.

ಆದರೆ ಆರ್ಥಿಕ ಎನ್ನುವುದು ಮೂಲಭೂತವಾದ್ದು. ಹಾಗೆಂದು ಅದುವೇ ಸಂಸ್ಕೃತಿಯ ಮೇಲೆ ಯಾವ ಪ್ರಭಾವವನ್ನು ಬೀರುತ್ತದೆ. ಒಂದು ಮಾತನ್ನು ಹೇಳಬಹುದು. ನಮಗೆ ಅನೇಕವು ಸಂವಾದಿಯಾಗಿರುತ್ತವೆ.

ಗ್ರಾಂಶಿಯು ಜಾನಪದವನ್ನು ಕುರಿತು ಹೇಳುತ್ತಾನೆ. ಅದು ಜನಪ್ರಿಯವಾದ ಒಂದು ಅಭಿವ್ಯಕ್ತಿಯ ಕ್ರಮ. ಅನೇಕ ಬುದ್ಧಿಜೀವಿಗಳು ಜಾನಪದವನ್ನು ಹಳೆಯ ಮಾದರಿಯ ಫ್ಯಾಶನ್ ಥರ ಇದೆ ಎಂದು ಭಾವಿಸುತ್ತಾರೆ. ಅದನ್ನು ಅವರು ಅಧಿಕೃತವಲ್ಲ ಎಂದೂ ತಿಳಿದಿರುವುದೂ ಸತ್ಯ. ಅದನ್ನು ಸಾಂಪ್ರದಾಯಿಕವಾದ ಸಾಹಿತ್ಯ ಎಂದೂ ಭಾವಿಸಿದವರು ತುಂಬಾ ಜನರು ಇದ್ದಾರೆ ಆದರೆ ವಿಷಯವು ಅಷ್ಟು ಸರಳವಲ್ಲ. ಅದು ಜನ ಜೀವನದ ಅತ್ಯಂತ ಮುಖ್ಯವಾದ ಒಂದು ಅಭಿವ್ಯಕ್ತಿ ಎಂದು ಗ್ರಾಂಶಿಯು ಹೇಳುತ್ತಾನೆ. ಜಾನಪದದಲ್ಲಿ ಇರುವ ಭಾವನೆಗಳು ಮತ್ತು ಅದರ ಸ್ವರೂಪಕ್ಕೆ ಒಂದು ಆಳವಾದ ಚಹರೆಯು ಇದೆ. ಅದು ಸಂಸ್ಕೃತಿಯ ಭಾಗವೂ ಹೌದು. ಆಳಿಸಿಕೊಳ್ಳುವ ಜನ ವರ್ಗವನ್ನು ಅದು ಸಾದರ ಪಡಿಸುತ್ತದೆ. ಜಾನಪದವು ರೈತರನ್ನು ಕುರಿತು ಹೇಳುತ್ತದೆ. ಆದ್ದರಿಂದ ರಾಷ್ಟ್ರೀಯ ಮತ್ತು ಜನಪ್ರಿಯ ಎನ್ನುವುದು ಅತ್ಯಂತ ಸರಳವಾದ ವರ್ಗೀಕರಣವು ಆಗಬಾರದು. ಜನಪ್ರಿಯ ಎನ್ನುವುದರ ಆಳದಲ್ಲಿ ಅಭಿರುಚಿ ಮತ್ತು ನೈತಿಕತೆ ಹಾಗೂ ಬೌದ್ಧಿಕ ವಲಯಗಳು ಕೆಲಸವನ್ನು ಮಾಡುತ್ತವೆ.

ಗ್ರಾಂಶಿಯು ರಾಷ್ಟ್ರೀಯ ಮತ್ತು ಜನಪ್ರಿಯ ಎನ್ನುವುದರ ಕುರಿತು ತನ್ನದೇ ಆದ ನಿಲುವನ್ನು ಹೊಂದಿದ್ದ.ಆದರೆ ರಾಷ್ಟ್ರೀಯ ಮತ್ತು ಜನಪ್ರಿಯ ಸಂಸ್ಕೃತಿಗಳ ಬಹಳಷ್ಟು ಚರ್ಚೆಗಳು ನಡೆದಿವೆ. ಅನೇಕರು ಇವುಗಳ ಬಗ್ಗೆ ಬಹಳ ವಿಸ್ತಾರವಾದ ಟೀಕೆಗಳನ್ನು ಮಾಡಿದ್ದಾರೆ.. ರಾಷ್ಟ್ರೀಯತೆ ಎನ್ನುವುದುಒಂದು ಪರಿಕಲ್ಪನೆಯೂ ಹೌದು. ಹಾಗೆ ನೋಡಿದರೆ ರಾಷ್ಟ್ರ ಎನ್ನುವುದು ಒಂದು ಪರಿಕಲ್ಪನೆಯೂ ಆಗಿರುತ್ತದೆ. ರಾಷ್ಟ್ರ ಎನ್ನುವುದು ಒಂದು ಭಾವನಾತ್ಮಕ ಮತ್ತು ಪರಿಕಲ್ಪನಾತ್ಮಕವಾದ ಸಂಗತಿಯೂ ಆಗಿದೆ. ಇದನ್ನು ಗ್ರಾಂಶಿಯು ಹೇಳುತ್ತಾನೆ. ರಾಷ್ಟ್ರ ಎನ್ನುವುದನ್ನು ನಾವು ಅತ್ಯಂತ ಶ್ರೇಷ್ಠವಾದ್ದು ಎನ್ನುವ ಕಲ್ಪನೆಯು ನಮಗೆ ಇರುತ್ತದೆ. ಅದು ಒಂದು ಕಲ್ಪಿತವಾದ ರೂಪವೂ ಹೌದು. ಆದರೆ ಬರೀ ರಾಷ್ಟ್ರದ ಪ್ರಶ್ನೆಯು ಮಾತ್ರವೇ ಯಶಸ್ವಿಯಾಗುವುದಿಲ್ಲ. ರಾಷ್ಟ್ರ ಎನ್ನುವುದು ತಾತ್ವಿಕ ಮತ್ತು ಭಾವನತ್ಮವಾದ ಸಂಗತಿಯು ಆಗುತ್ತದೆ ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ಅದರ ಸಾಂಸ್ಕೃತಿಕ ಮತ್ತು ಭಾವನಾತ್ಮಕವಾದ್ದರಿಂದ ಅದನ್ನು ನಾವು ವಿಮರ್ಶಾತ್ಮಕವಾಗಿಯೂ ನೋಡಬೇಕಾಗುತ್ತದೆ.

ಹೆಜಮಿನಿ ಎನ್ನುವುದು ಒಂದು ಅರ್ಥದಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯವಾದ ಆಯಾಮವನ್ನು ಹೊಂದಿರುತ್ತದೆ. ಇದನ್ನು ಗ್ರಾಂಶಿಯು ಒಂದು ಅತ್ಯಂತ ಮುಖ್ಯವಾದ ಒಂದು ನೋಟ ಎನ್ನುವ ಥರ ನೋಡುತ್ತಾನೆ. ಇದು ಆಳ್ವಿಕೆ ಎನ್ನುವುದನ್ನು ಸೂಚಿಸುತ್ತದೆ. ಆದರೆ ಯಜಮಾನಿಕೆ ಎನ್ನುವುದು ಹೇಗೆ ಬೇರೆ ಬೇರೆ ಸನ್ನಿವೇಶದಲ್ಲಿ ಬೇರೆ ಬೇರೆ ಅರ್ಥವನ್ನು ಹೊಂದಿರುತ್ತದೆ ಎನ್ನುವುದನ್ನು ಗ್ರಾಂಶಿ ನಿಲುವು ಹೇಳುತ್ತದೆ. ಒಪ್ಪಿಗೆ , ನಾಯಕತ್ವ, ವಿಸ್ತರಣೆ ಎನ್ನುವುದು ಇದು ಸೂಚಿಸುತ್ತದೆ. ಗ್ರಾಂಶಿಯ ಚಿಂತನೆಯಲ್ಲಿ ಇದು ಅತ್ಯಂತ ಮಹತ್ವದ್ದೂ

ಹೌದು. ಸಮಾಜದಲ್ಲಿ ಹೇಗೆ ಭಿನ್ನತೆಗಳು ಸೃಷ್ಟಿಯಾಗುತ್ತವೆ ಎಂದು ಹೇಳಲು ಗ್ರಾಂಶಿಯು ಇದನ್ನು ಬಳಸುತ್ತಾನೆ., ಇದು ಮಾನವಿಕ ವಿಜ್ಞಾನಗಳಲ್ಲಿ ಹೆಚ್ಚು ಮಹತ್ವದ ಪ್ರಭಾವವನ್ನು ಬೀರಿದ್ದು ಕೂಡಾ ಸತ್ಯವಾಗಿದೆ. ಇದರಲ್ಲಿ ಸಮಾಜ ಮತ್ತು ಅದರ ವರ್ಗೀಕರಣದ ಪ್ರಶ್ನೆಯೂ ಇದೆ. ಅಷ್ಟೇ ಅಲ್ಲದೆ ಇದು ಲಿಂಗ ತಾರತಮ್ಯ, ಸಮಾಜ ಮತ್ತು ಅದರ ವರ್ಗೀಕರಣ ಮುಂತಾದ ಸಂಗತಿಗಳನ್ನು ಅಧ್ಯಯನ ಮಾಡಲು ಅತ್ಯಂತ ಉಪಯುಕ್ತವಾಗಿರುವ ಪರಿಭಾಷೆಯೂ ಹೌದು.

ಇದರಲ್ಲಿ ಬೇರೆ ಬೇರೆ ಮಾದರಿಗಳು ಇರುತ್ತವೆ. ಬಲಾತ್ಕಾರ ಎಂದರೆ ಅದರ ದೃಷ್ಟಿಕೋನವು ವಿವಿಧ ರೀತಿಯಲ್ಲಿ ಇರಲು ಸಾಧ್ಯ. ಇದನ್ನು ಗ್ರಾಂಶಿಯು ಹೇಳುವಾಗ ಅನುಮತಿಗೆ ಮತ್ತು ಬಲಾತ್ಕಾರಕ್ಕೆ ಇರುವ ವ್ಯತ್ಯಾಸವನ್ನು ಅವನು ಸೂಚಿಸುತ್ತಾನೆ. ಪ್ರಭುತ್ವವು ಕೆಲವನ್ನು ಅಧಿಕಾರಯುತವಾಗಿ ಜನರ ಮೇಲೆ ಹೇರುತ್ತದೆ. ಇದರ ಜೊತೆಗೆ ಅವನು ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಪುನರುಜ್ಜೀವನ ಕಾಲದ ರಾಜಕೀಯ ನಿಲುವುಗಳನ್ನು ಪರಸ್ಪರ ತೌಲನಿಕವಾಗಿ ನೋಡುವಾಗ ಒಪ್ಪಿಗೆ ಮತ್ತು ಬಲಾತ್ಕಾರಗಳನ್ನು ಹೇಳುತ್ತಾನೆ. ಮೆಕೆವಲ್ಲಿಯು ಹೇಳಿದ ಕೆಲವು ಸಂಗತಿಗಳನ್ನು ಗ್ರಾಂಶಿಯು ಪ್ರಸ್ತಾವಿಸುತ್ತಾನೆ. ಮೆಕೆವಲ್ಲಿಯು ಹೇಳಿದ್ದ: ಅತ್ಯುತ್ತಮ ಪ್ರಭುತ್ವವು ಆಳ್ವಿಕೆಯನ್ನು ನಡೆಸುವಾಗ ಮೊದಲು ಜನರ ಮೌಲ್ಯಗಳನ್ನು ಗಮನಿಸುತ್ತಾನೆ. ಮತ್ತೆ ಅದರಲ್ಲಿ ಕೆಲವು ಮೌಲ್ಯಗಳನ್ನು ಅಂಗೀಕರಿಸುತ್ತಾನೆ. ಇದರಿಂದ ಜನರು ಕೆಲವನ್ನು ಅಂಗೀಕರಿಸದ ಹಾಗೆ ಕಾಣುತ್ತದೆ. ಮತ್ತೆ ಇದಕ್ಕೆ ಪೂರಕವಾಗಿ ಇರುವ ಆಡಳಿತವನ್ನು ಕೂಡಾ ಮೆಕೆವಲ್ಲಿಯು ಗಮನಿಸುತ್ತಾನೆ. ಮೆಕೆವಲ್ಲಿಯು ಇದನ್ನು ಹೇಳುವಾಗ ಒಂದು ಪುರಾಣವನ್ನು ಹೇಳುತ್ತಾನೆ. ಅದನ್ನು ನಾವು ರೂಪಕ ಎಂದು ಹೇಳಿದರೂ ಸರಿಯಾಗುತ್ತದೆ. ಅರ್ಧ ಮನುಷ್ಯ ಮತ್ತು ಅರ್ಧ ಕುದುರೆಯು ಹೇಗೆ ಇರುತ್ತದೆಯೋ ಅದೇ ರೀತಿಯಲ್ಲಿ ಅರ್ಧ ಜನರು ಮತ್ತು ಅವರ ಅಭಿಪ್ರಾಯವನ್ನು ತೆಗೆದು ಕೊಳ್ಳುತ್ತದೆ. ಮತ್ತೆ ಅರ್ಧ ತನ್ನ ಸಂಹಿತೆಯನ್ನು ಅನ್ವಯ ಮಾಡುತ್ತದೆ. ಅವನ ಮುಖ್ಯವಾದ ಚರ್ಚೆ ಎಂದರೆ ಮನುಷ್ಯ ಅರ್ಧ ದೆವ್ವವನ್ನು ಅನುಕರಣೆ ಮಾಡುತ್ತಾನೆ. ಅರ್ಧ ಮಾತ್ರವೇ ಅವನು ಮನುಷ್ಯನಾಗುತ್ತಾನೆ.

ಇದೇ ರೀತಿಯಲ್ಲಿ ಗ್ರಾಂಶಿಯು ದ್ವಿರೂಪದ ಮಾದರಿಗಳು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಇಲ್ಲಿ ಅತ್ಯಂತ ಮುಖ್ಯವಾಗಿರುವುದು ಅವನು ಪ್ರಸ್ತಾವಿಸಿದ ಒಪ್ಪಿಗೆ ಮತ್ತು ಬಲಾತ್ಕಾರ ಎನ್ನುವ ಪರಿಭಾಷೆಗಳು. ಯಾವುದೇ ಒಂದು ವಿಚಾರವನ್ನು ನಾವು ಒಪ್ಪಿಕೊಳ್ಳಲು ನಮಗೆ ನಮ್ಮದೇ ಆದ ಅಭಿಪ್ರಾಯವು ಸಾಕಾಗುವುದಿಲ್ಲ. ಅದರ ಜೊತೆಗೆ ಅವನು ಮತ್ತೆ ಒಂದು ವಿಚಾರವನ್ನು ಹೇಳುತ್ತಾನೆ. ಬೇರೆ ಬೇರೆ ಕಾಲಗಳು ನಮಗೆ ಬೇರೆ ಬೇರೆ ಹಾದಿಗಳನ್ನು ಹೇಳುತ್ತವೆ. ಒಂದು ಗುಂಪು ಅಥವಾ ಒಬ್ಬ ವ್ಯಕ್ತಿಯು ಇನ್ನೊಬ್ಬರ ಮೇಲೆ ತಮ್ಮ ಅಧಿಕಾರವನ್ನು ಹೇರಲು ಹೊರಡುವಾಗ ತನ್ನ ನಿಯಂತ್ರಣದ ಶಕ್ತಿಯನ್ನು ಹೆಚ್ಚು ಬಳಸುತ್ತದೆ. ಆದರೆ ಮತ್ತೊಂದು ಕಡೆಗೆ ಅದು ಅಧಿಕಾರದ ವಿರುದ್ಧ ಬರುವವರ ಮೇಲೆ ತನ್ನ ಅಭಿಪ್ರಾಯವನ್ನು ಒಪ್ಪುವ ಹಾಗೆ ಮಾಡುತ್ತದೆ. ಆದ್ದರಿಂದ ಗ್ರಾಂಶಿಯು ಇದನ್ನು ನೋಡಿ ರಾಜಕೀಯ ಸಮಾಜ ಎಂದು ಮಾತಾಡುತ್ತಾನೆ. ಇದೇ ಸನ್ನಿವೇಶದಲ್ಲಿ ಅಧಿಕಾರವನ್ನು ಚಲಾಯಿಸಲು ಕೂಡಾ ಒಂದು ಕ್ಷಣ

ಎನ್ನುವುದು ಇರುತ್ತದೆ.ಅವನು ಹೇಳುವ ರಾಜಕೀಯ ಸಮಾಜದಲ್ಲಿ ಅನೇಕ ಬಗೆಯ ಪರಿಕರಗಳೂ ಇರುತ್ತವೆ. ಗ್ರಾಂಶಿಯಲ್ಲಿ ಒಪ್ಪಿಗೆ ಎನ್ನುವುದು ರಾಜಕಾರಣದಲ್ಲಿ ಜವಾಬ್ದಾರಿಯೂ ಆಗಿದೆ. ಅದರ ಜೊತೆಗೆ ರಾಜಕಾರಣವು ಜನರ ಮೇಲೆ ತನ್ನ ಶಿಸ್ತುಗಳನ್ನು ಹೇರುತ್ತವೆ. ಅದರಲ್ಲಿ ಆರ್ಥಿಕತೆಯು ಇರುತ್ತದೆ. ಮತ್ತೊಂದು ಕಡೆಗೆ ಅದು ಅಧಿಕಾರದ ರಾಜಕೀಯ ಆಯಾಮವನ್ನು ಕೂಡಾ ಹೊಂದಿರುತ್ತದೆ. ಹತೋಟಿಗೆ ತರುವಾಗ ಅದು ಹಿಂಸೆಯನ್ನು ಕೂಡಾ ಬಳಸುತ್ತದೆ. ರಾಜಕಾರಣ ಮತ್ತು ಅದರ ಸನ್ನಿವೇಶವನ್ನು ಕೂಡಾ ನಾವು ಗಮನಿಸಬೇಕಾಗುತ್ತದೆ. ಅದರಲ್ಲಿ ಪೋಲೀಸ್ ವ್ಯವಸ್ಥೆ ಕೂಡಾ ಇರುತ್ತದೆ. ಆದ್ದರಿಂದ ಒಪ್ಪಿಗೆ ಮತ್ತು ಬಲಾತ್ಕಾರಗಳು ಜೊತೆಯಲ್ಲಿ ಇರುವುದು ನಿಜ. ಇದರ ಸಮಸ್ಯೆಗಳನ್ನು ಗ್ರಾಂಶಿಯು ಹೇಳುತ್ತಾನೆ. ಬಲಾತ್ಕಾರ ಮತ್ತು ಒಪ್ಪಗೆ ಎನ್ನುವುದು ಹೇಗೆ ಜೊತೆಯಲ್ಲಿ ಹೋಗಬಲ್ಲುದು ಎನ್ನುವ ಪ್ರಶ್ನೆಯು ಗ್ರಾಂಶಿಗೂ ಇದೆ. ಆಧುನಿಕ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳಲ್ಲಿ ಆಳ್ವಿಕೆ ಮತ್ತು ಆಳಿಸಿಕೊಳ್ಳುವಿಕೆ ಎನ್ನುವುದು ನಮಗೆ ಬೇರೆ ಬೇರೆ ಧ್ವನಿಯನ್ನು ಸೂಚಿಸುತ್ತದೆ. ಆಳುವುದು ಮತ್ತು ಆಳಿಸಿಕೊಳ್ಳುವುದು ಎನ್ನುವುದಕ್ಕೆ ವಿವಿಧ ರೂಪಗಳೂ ಇವೆ, ಆದ್ದರಿಂದ ಮೆಕೆವಲ್ಲಿಯ ವಾದವನ್ನು ಮರು ಪರಿಶೀಲನೆಯನ್ನು ಗ್ರಾಂಶಿಯು ಮಾಡಬೇಕಾಗಿ ಬಂತು. ಯುದ್ಧ ಮತ್ತು ತಂತ್ರಗಳು ನಾಗರಿಕ ಸಮಾಜದಲ್ಲಿ ನಮಗೆ ಬೇರೆ ರೀತಿಯಲ್ಲಿ ಇರುತ್ತದೆ. ಒಪ್ಪಿಗೆ ಮತ್ತು ಬಲಾತ್ಕಾರ ಎನ್ನುವುದು ಹೇಗೆ ವಿವಿಧ ಆಯಾಮನ್ನು ಪಡೆಯುತ್ತದೆ ಎನ್ನುವುದೂ ಗ್ರಾಂಶಿಗೆ ಮುಖ್ಯವಾದ್ದರಿಂದ ರಾಜಕಾರಣಿಗಳು ಮತ್ತು ಸರಕಾರದ ಅಧಿಕಾರಿ ವರ್ಗಗಳು ಕೆಲವು ರೀತಿಯಲ್ಲಿ ನಮ್ಮ ಅಧಿಕಾರವನ್ನು ಸ್ಥಾಪಿಸುತ್ತವೆ. ಆದರೆ ಹೀಗೆ ಮಾಡುವಾಗ ಅವುಗಳು ನಮಗೆ ಸೂಚನೆಗಳನ್ನು ಕೊಡುತ್ತವೆ. ಅದು ಬಲಾತ್ಕಾರವನ್ನು ಮಾಡುವುದಿಲ್ಲ. ಅದರ ಬದಲು ಸರಕಾರ ಮತ್ತು ಅಧಿಕಾರಿ ವರ್ಗವು ನಮಗೆ ಒಪ್ಪಿಗೆಯನ್ನು ಸೂಚಿಸುವಂತೆ ಮಾಡುತ್ತದೆ. ಅಧಿಕಾರಶಾಹಿಯು ನಮಗೆ ಆಧುನಿಕ ಸಮಾಜದಲ್ಲಿ ಕೆಲವು ಕಾರ್ಯ ವಿಧಾನವನ್ನು ಕೂಡಾ ನಿರ್ಧಾರ ಮಾಡುವುದು ಇದೇ ಅಧಿಕಾರಶಾಹಿ. ತಬರನ ಕತೆಯನ್ನು ನಾವು ನೆನಪು ಮಾಡಿಕೊಂಡರೆ ಇದು ತಿಳಿಯುತ್ತದೆ. ರಾಜಕೀಯ ಸಮಾಜದಲ್ಲಿ ಈ ಬಗೆಯ ಸಂಗತಿಗಳು ಅತ್ಯಂತ ಸಹಜ ಎಂದು ಒಪ್ಪಿಕೊಳ್ಳುವಂತೆ ಇದು ಮಾಡುತ್ತವೆ.. ಇದು ಮತ್ತೊಂದು ಅರ್ಥದಲ್ಲಿ ನಮ್ಮ ನಿತ್ಯದ ಸಂಗತಿಯನ್ನು ಹೇಳುತ್ತವೆ.ಪಿರ್ರೆ ಬೌರ್ದಿವ್ ಇದನ್ನು ಸಾಂಕೇತಿಕವಾದ ಹಿಂಸೆ ಎಂದು ಹೇಳುತ್ತಾನೆ. ಅದು ನಮ್ಮ ಭಾವನೆಗೆ ಬರುತ್ತದೆ. ಆದರೆ ನಾವು ಏನೂ ಮಾಡಲಾರೆವು ಎನ್ನುವ ಸ್ಥಿತಿಗೆ ಬರುತ್ತೇವೆ. ಅದುವೇ ನಮಗೆ ನಮ್ಮ ಜೀವನ ಎನ್ನುವಷ್ಟರ ಮಟ್ಟಿಗೆ ಬಂದಿರುತ್ತದೆ. ಒಬ್ಬ ವ್ಯಕ್ತಿಯಾಗಿ ನಾವು ಈವತ್ತು ಪ್ರಭುತ್ವದ ವಿರುದ್ಧ ಹೋರಾಟ ಮಾಡುವುದು ಅತ್ಯಂತ ಕಷ್ಟ.

ಒಂದು ಜನ ಸಮೂಹವು ಯಜಮಾನಿಕೆಯನ್ನು ಒಪ್ಪುವಂತೆ ಮಾಡುವುದು ಎಂದರೆ ಅಲ್ಲಿ ಅಧಿಕಾರ ಮತ್ತು ಅದರ ವಿಸ್ತರಣೆಯು ಇರುತ್ತದೆ ಎಂದು ಅರ್ಥ. ಬಲಾತ್ಕಾರ ಎನ್ನುವುದು ಅತ್ಯಂತ ಸಾಮಾನ್ಯವಾದ ಒಂದು ಚಟುವಟಿಕೆ ಅಲ್ಲ. ದಬ್ಬಾಳಿಕೆ ಎನ್ನುವುದು ನಮಗೆ ಈವತ್ತು ಒಂದು ತಾತ್ವಿಕವಾದ ಪರಿಕಲ್ಪನೆಯೂ ಹೌದು. ಆದರೆ ಅಧಿಕಾರ ಎನ್ನುವುದು ಹೇಗೆ ವಿಸ್ತಾರವಾಗುತ್ತದೆ ಮತ್ತು ಅಧಿಕಾರ ಎನ್ನುವುದಕ್ಕೆ ಹೇಗೆ ಮಿತಿಗಳು ಇರುತ್ತವೆ ಎಂದು

ನೋಡಬೇಕಾಗುತ್ತದೆ ಎನ್ನುವುದು ಗ್ರಾಂಶಿಯ ನಿಲುವು. ಯಜಮಾನಿಕೆ ಎನ್ನುವುದು ವಿಸ್ತಾರವಾಗುತ್ತವೆ, ಅದು ಸಾಧ್ಯವಾದಷ್ಟು ಹೆಚ್ಚು ಜನರನ್ನು ತನ್ನ ವ್ಯಾಪಿಗೆ ಒಳಪಡುವಂತೆ ಮಾಡುತ್ತದೆ. ಒಪ್ಪುವುದು ಮತ್ತು ಅದನ್ನು ಒಪ್ಪುವಂತೆ ಮಾಡುವುದು ಸಮಾಜದಲ್ಲಿ ಪರಿವರ್ತನೆಯನ್ನು ತರುತ್ತದೆ. ಅಷ್ಟೇ ಅಲ್ಲ ಈ ಸನ್ನಿವೇಶದಲ್ಲಿ ಆಳುವುದು ಮತ್ತು ಆಳಿಸಿಕೊಳ್ಳುವುದು ಒಂದನೆಯದಾಗಿ ರಾಜಕೀಯ ಕಾರ್ಯಕ್ರಮ. ಇಲ್ಲಿ ಇನ್ನೊಂಥು ಅಂಶವನ್ನು ನಾವು ನೋಡಬೇಕು: ಆಳುವುದು ಮತ್ತು ತನ್ನ ಅಧಿಕಾರವನ್ನು ಚಲಾಯಿಸುವುದು ಎನ್ನುವುದಕ್ಕೆ ಕೆಲವು ತಂತ್ರಗಳೂ ಇರುತ್ತವೆ. ಯಾವಾಗ ಆಳುವುಮು ಎನ್ನುವುದು ನಮಗೆ ವಿಸ್ತಾರವಾಗುವಂತೆ ಕಾಣುತ್ತದೆಯೋ ಆಗ ಆಳಿಸಿಕೊಳ್ಳುವ ವರ್ಗವು ಶಕ್ತಿ ಹೀನವಾಗುತ್ತದೆ. ಅದರ ಅನನ್ಯತೆಯು ಬೇರೆಯಾಗುತ್ತದೆ.

ಗ್ರಾಂಶಿಯಲ್ಲಿ ಇದಕ್ಕೆ ಅತ್ಯಂತ ಮಹತ್ವವಿದೆ. ಅವನು ಇದನ್ನು ಬೇರೆ ಥರ ನೋಡುತ್ತಾನೆ. ಅವನು ಬಳಸಿದ ಅತ್ಯಂತ ಮುಖ್ಯವಾದ ಪರಿಕಲ್ಪನೆ ಎಂದರೆ ಇದು. ಇದನ್ನು ಹೇಳುವಾಗ ಅವನು ಜಾನಪದ ಮತ್ತು ಅದರ ಲೋಕದ ಕಲ್ಪನೆಯು ಕೂಡಾ ಅತ್ಯಂತ ಮುಖ್ಯವಾಗಿತ್ತು. ಜಾನಪದ ಮತ್ತು ಅದರ ಜೀವನದ ದೃಷ್ಟಿಕೋನವು ಕೂಡಾ ಗ್ರಾಂಶಿಗೆ ಪ್ರಭಾವವನ್ನು ಬೀರಿರುವುದು ಸತ್ಯ. ಒಟ್ಟು ಜಗತ್ತನ್ನು ನೋಡಲು ಇದು ಮುಖ್ಯವಾಗಿದೆ . ಅದನ್ನು ಗ್ರಾಂಶಿಯು ಕೊಟ್ಟ. ಅತ್ಯಂತ ಸಾಮಾನ್ಯವಾದ ಒಂದು ತಿಳುವಳಿಕೆ ಎನ್ನುವುದು ಬಹಳ ದೊಡ್ಡದಾದ ತತ್ವಜ್ಞಾನವೂ ಹೌದು. ಅದನ್ನು ಅವನು ಒಪ್ಪುತ್ತಾನೆ. ಸಾಮಾನ್ಯವಾದ ತಿಳುವಳಿಕೆಯು ಹೇಗೆ ಇರುತ್ತದೆ ಎಂದರೆ ಗ್ರಾಂಶಿಯು ನಮಗೆ ಒಂದು ಉತ್ತರವನ್ನು ಕೊಡುತ್ತಾನೆ. ಜನಪದ ತತ್ವಜ್ಞಾನ ಎನ್ನುವುದು ಅತ್ಯಂತ ಮುಖ್ಯವಾದ್ದು. ಅದನ್ನು ಅವನು ಹೇಳಿದ್ದು ಜೀವನ ಮತ್ತು ಅದರ ಕ್ರಮಕ್ಕೂ ಅನ್ವಯವಾಗುತ್ತದೆ. ಆದರೆ ಅವನು ಹೇಳುವಂತೆ ಸಾಮಾನ್ಯವಾದ ನಮ್ಮ ಆಲೋಚನೆ ಮತ್ತು ಜೀವನದ ಕ್ರಮವು ಒಂದು ಸಾಂಪ್ರದಾಯಿಕವಾದ ನೆಲೆಯಲ್ಲಿ ಇರುವುದಿಲ್ಲ. ಅದನ್ನು ಅವನು ನಿಯಮಕ್ಕೆ ಅನುಸಾರವಾದ್ದು ಎಂದು ತಿಳಿಯಬೇಕಿಲ್ಲ. ಅದರಲ್ಲಿ ಬಹುತ್ವವು ಇರುತ್ತದೆ. ಅದರಲ್ಲಿ ಸ್ಫೂರ್ತಿ ಇರುತ್ತದೆ. ಬಹುತ್ವ, ಸಹಯೋಗ, ಇವೆಲ್ಲಾ ಅದರ ಜೊತೆಗೆ ಇರುತ್ತದೆ. ಸಮಾಜ ಮತ್ತು ಅದರ ತಿಳುವಳಿಕೆಗಳು ಸಾಮಾನ್ಯವಾದ ತಿಳುವಳಿಕೆಯ ಮೇಲೆ ಕೆಲಸವನ್ನು ಮಾಡುತ್ತದೆ. ಅಂದರೆ ಸಾಮಾನ್ಯ ಎನ್ನುವುದು ನಿಜವಾಗಿಯೂ ಸಹಜವಾದ ರೂಪದಲ್ಲಿ ಚಾಲ್ತಿಗೆ ಬರುತ್ತದೆ. ಆದರೆ ಇವುಗಳಲ್ಲಿ ಕೆಲವು ಬಹಳ ಹಿಂದಿನಿಂದ ಬಂದಿರುತ್ತವೆ. ಹಳೆಯ ಶಿಲಾಯುಗದಿಂದ ಇಲ್ಲಿಯ ವರೆಗೆ ಬೇರೆ ಬೇರೆ ಜ್ಞಾನದ ರೂಪಗಳು ಬೆಳೆದು ಬಂದಿವೆ. ಅದರಲ್ಲಿ ವಿವಿಧತೆಗಳೂ ಇವೆ. ಅದರ ಜೊತೆಯಲ್ಲಿ ಪ್ರತಿಯೊಂದು ಸಮಾಜವು ತನಗೆ ಬೇಕಾದ ಜ್ಞಾನದ ರೂಪಗಳನ್ನು ಹುಟ್ಟುಹಾಕುತ್ತದೆ. ಗುಂಪು ಜ್ಞಾನವನ್ನು ಪಡೆಯುತ್ತದೆ. ಅದರ ಜೊತೆಗೆ ಜ್ಞಾನ ಎನ್ನುವುದು ವಿವಿಧ ರೀತಿಯಲ್ಲಿ ಚಾಲ್ತಿಗೆ ಬರುತ್ತದೆ. ಗ್ರಾಂಶಿಯು ಬದಲಾಗುವ ಸಮಾಜ ಮತ್ತು ಅದರ ಜೊತೆಗೆ ಇರುವ ತಿಳುವಳಿಕೆಗಳು ಹಾಗೂ ಅದರ ಸಂಪನ್ಮೂಲಗಳು ವೈಜ್ಞಾನಿಕವಾಗಿಯೂ ಇರಬಹುದು. ಸಾಮಾನ್ಯವಾದ ತಿಳುವಳಿಕೆ ಎನ್ನುವುದು ಕೆಲಸವನ್ನು ಮಾಡುವುದು ನಿರ್ದಿಷ್ಟವಾದ ನೆಲೆಯಲ್ಲಿ ಎನ್ನುವುದು ಸ್ಪಷ್ಟ. ವ್ಯಕ್ತಿಯಲ್ಲಿ ಪ್ರಜ್ಞೆ ಇದೆ. ಅವನ ಪ್ರಜ್ಞೆಯನ್ನು ಅನೇಕ ಸನ್ನಿವೇಶದಲ್ಲಿ ಧರ್ಮವು ನಿಯಂತ್ರಣ ಮಾಡುತ್ತದೆ. ಅದು ನಮ್ಮಲ್ಲಿ ವೈರುಧ್ಯವನ್ನು

ಹುಟ್ಟುಹಾಕುತ್ತದೆ. ಹೀಗೆ ಇದ್ದರೂ ಒಳ್ಳೆಯ ಗುಣ ಎನ್ನುವುದನ್ನು ನಾವು ವಿವಿಧ ರೀತಿಯಲ್ಲಿ ಬಳಸುತ್ತೇವೆ. ಸಾಮಾನ್ಯವಾದ ಅರಿವು ಮತ್ತು ಒಳ್ಳೆಯ ಗುಣಗಳು ಬೇರೆ ಎಂದು ಗ್ರಾಂಶಿಯು ಹೇಳುತ್ತಾನೆ. ಅದನ್ನು ಜನರು ಶಿಷ್ಟ ಎಂದೂ ಹೇಳುತ್ತಾರೆ. ಸಮಾಜದಲ್ಲಿ ಇರುವ ಎಲ್ಲಾ ಗುಣಗಳೂ ಅತ್ಯಂತ ಕೆಟ್ಟದ್ದು ಎಂದು ಹೇಳುವಂತೆ ಇಲ್ಲ.. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ತನ್ನದೇ ಆದ ಕೆಲಸವನ್ನು ಮಾಡುತ್ತಾರೆ. ಅದರಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಎಂದು ಹೇಳುವುದಾದರೆ ಮತ್ತೆ ಬೇರೆ ಅಂಶಗಳೂ ಇರುತ್ತವೆ ಎಂದೂ ಅರ್ಥವಾಗುತ್ತದೆ. ಬುದ್ಧಿಜೀವಿಗಳು ಭಾವನೆ ಮತ್ತು ಒಳ್ಳೆಯತನವನ್ನು ಸಂಯೋಜನೆ ಮಾಡುತ್ತಾರೆ. ಆದರೆ ಇಲ್ಲಿ ಒಳ್ಳೆಯತನ ಎನ್ನುವುದು ಜನಪ್ರಿಯತೆಯ ನೆಲೆಯನ್ನೂ ಪಡೆಯುತ್ತದೆ.

ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ಅನೇಕ ವಿದ್ವಾಂಸರು ಚರ್ಚೆ ಮಾಡಿದ್ದಾರೆ. ಆದರೂ ಗ್ರಾಂಶಿಯಲ್ಲಿ ಇದು ಬೇರೆಯಾಗುತ್ತದೆ. ಅವನು ಅನನ್ಯತೆಯನ್ನು ವಿವರಿಸುವಾಗ ಅವನಲ್ಲಿ ಯಜಮಾನಿಕೆ ಮತ್ತು ವ್ಯಕ್ತಿ ವ್ಯಕ್ತಿಗಳ ನಡುವೆ ಉಂಟಾಗುವ ಭಿನ್ನತೆಗಳನ್ನು ಅವನು ಗಮನಿಸುತ್ತಾನೆ. ಅದರಲ್ಲಿಯೂ ಅವನಿಗೆ ವ್ಯಕ್ತಿ ಮತ್ತು ಅವನ ಅನನ್ಯತೆಗೆ ವಿಶಿಷ್ಟವಾದ ನೆಲೆಯು ಸಿಗುವುದು ಯಜಮಾನಿಕೆ ಮತ್ತು ಸಾಮಾನ್ಯ ಮನುಷ್ಯರ ಸಂಬಂಧದಲ್ಲಿ. ಯಜಮಾನಿಕೆಯು ವ್ಯಕ್ತಿಯನ್ನು ನಿರ್ಧಾರ ಮಾಡುತ್ತದೆ. ಮೊದಲನೆಯದಾಗಿ ವ್ಯಕ್ತಿಯನ್ನು ಗುರುತಿಸುವುದು ಜನಾಂಗದ ಭಾಗವಾಗಿ. ಸ್ಟುವರ್ಟ್ ಹಾಲ್ ಗ್ರಾಂಶಿಯನ್ನು ಕುರಿತು ಹೇಳುವಾಗ ಅವನ ಸಿದ್ಧಾಂತವು ಅತ್ಯಂತ ಸಂಕೀರ್ಣವಾಗಿದೆ. ಹಾಗೂ ಅವನಲ್ಲಿ ಕೆಲವು ಸಮಸ್ಯೆಗಳೂ ಇವೆ ಎಂದು ಹೇಳುತ್ತಾನೆ. ಗ್ರಾಂಶಿಯಲ್ಲಿ ಯಜಮಾನಿಕೆ ಎನ್ನುವುದಕ್ಕೆ ಸಾಂಸ್ಥಿಕವಾದ ಒಂದು ರೂಪವೂ ಇದೆ. ಸಂಸ್ಕೃತಿಯ ಸಂಗತಿಗಳೂ ಇವೆ. ವ್ಯಕ್ತಿ ಮತ್ತು ಅವನ ಅನನ್ಯತೆಗೆ ಆಧುನಿಕ ನಾಗರಿಕ ವ್ಯಾಖ್ಯೆಗಳು ಕೂಡಾ ಇರುತ್ತವೆ. ಸಾಮಾಜಿಕ ಮತ್ತು ರಾಜಕೀಯ ನಿಲುವುಗಳು ಕೂಡಾ ಇದಕ್ಕೆ ಕಾರಣವಾಗುತ್ತದೆ. ಆದರೆ ಒಂದು ಸಮಸ್ಯೆಯು ಇರುತ್ತದೆ. ವ್ಯಕ್ತಿ ಮತ್ತು ಅವನ ಅನನ್ಯತೆಗೆ ಅರಿವು ಕೂಡಾ ಅತ್ಯಂತ ಮುಖ್ಯವಾಗಿದೆ. ಅದರ ಜೊತೆಗೆ ಒಂದು ಸಂಸ್ಕೃತಿಯೂ ವ್ಯಕ್ತಿಯ ಮೇಳೆ ಪ್ರಭಾವವನ್ನು ಬೀರುತ್ತದೆ.

ಅತ್ಯುತ್ತಮ ಎಂದರೆ ಏನು ಎಂದು ಗ್ರಾಂಶಿಯು ವಿವರಿಸುತ್ತಾನೆ, ಮುಖ್ಯವಾಗಿ ಇದು ಒಂದು ಪರಿಕಲ್ಪನೆ. ಅಷ್ಟೇ ಅಲ್ಲ, ಇದು ಭಾವನೆ ಮತ್ತು ವ್ಯಕ್ತಿತ್ವವನ್ನು ಹೇಳುತ್ತದೆ. ಇದರಲ್ಲಿ ಸಬ್ ಆಲ್ಟ್ರಾನ್ ಅನನ್ಯತೆಯ ಪ್ರಶ್ನೆಯೂ ಸೇರುತ್ತದೆ. ಆಳುವ ವರ್ಗವು ತನಗೆ ಬೇಕಾದ್ದನ್ನು ಮಾತ್ರವೇ ಪ್ರತಿಪಾದಿಸುತ್ತದೆ, ಅದಕ್ಕೆ ವ್ಯಕ್ತಿ ಮತ್ತು ಅವನು ಗುಣಗಳು ಅದಕ್ಕೆ ಹೊಂದಾಣಿಕೆಯಾದರೆ ಆಗ ಅವನನ್ನು ಒಳ್ಳೆಯವನು ಎಂದು ಕರೆಯುತ್ತಾರೆ. ಇಲ್ಲಿ ಸಂಸ್ಥೆ ಮತ್ತು ಅದರ ಸ್ವರೂಪವು ಅತ್ಯಂತ ಮುಖ್ಯ. ಅಂಚಿನ ವರ್ಗದಲ್ಲಿ ಇರುವ ವರ್ಗ ಮತ್ತು ಮಧ್ಯಮ ವರ್ಗವು ಆಳುವ ಹೇಗೆ ಇದನ್ನು ಅನುಸರಿಸುತ್ತವೆ ಎಂದು ಗ್ರಾಂಶಿಯು ಹೇಳುತ್ತಾನೆ. ಇದರಲ್ಲಿ ಅನೇಕ ಬಗೆಯ ಸಂಕಥನಗಳು ಇರುತ್ತವೆ. ಇದು ಅತ್ಯಂತ ಮುಖ್ಯ. ಯಾಕೆಂದರೆ ಆಳಿಸಿಕೊಳ್ಳುವ ವರ್ಗಕ್ಕೆ ಕೆಲವನ್ನು ಸೂಚಿಸಲಾಗುತ್ತದೆ. ಅದಕ್ಕೆ ಕೆಲವು ಮಾನದಂಡವೂ ಇರುತ್ತವೆ. ಅದರ ಮೂಲಕ ಇನ್ನೊಂದು ಪ್ರಕ್ರಿಯೆಯೂ ನಡೆಯುತ್ತದೆ. ಅದನ್ನು ಗ್ರಾಂಶಿಯು ರಾಜಕೀಯ ಮತ್ತು ಸಾಂಸ್ಕೃತಿಕ

ಜೀವನದ ಕ್ರಮಕ್ಕೆ ಅನ್ವಯಿತೆ ಎಂದು ಹೇಳುತ್ತಾನೆ. ಅದು ಒಂದು ಬಗೆಯಲ್ಲಿ ಆಳಿಸಿಕೊಳ್ಳುವ ವರ್ಗಗಳ ಒಪ್ಪಿಗೆಯ ಕ್ರಮ ಎಂದೂ ಹೇಳುತ್ತೇವೆ. ಈ ಒಪ್ಪಿಗೆಯಲ್ಲಿ ಸಾಂಸ್ಕೃತಿಕ ಜೀವನದ ಕ್ರಮ ಎಂದೂ ಹೇಳಬಹುದು. ಇದನ್ನು ಹೇಳುವಾಗಲೇ ಒಪ್ಪಿಗೆ, ನಿರಾಕರಣೆ ಮತ್ತು ಸಂಧಾನ ಎನ್ನುವ ಪರಿಕಲ್ಪನೆಗಳು ಇರುತ್ತವೆ ಎಂದು ಗ್ರಾಂಶಿಯು ಹೇಳುತ್ತಾನೆ.

ಯಾವುದನ್ನು ನಾವು ಅತ್ಯುತ್ತಮ ಎಂದು ಕರೆಯಬಹುದು ಎನ್ನುವುದಕ್ಕೆ ಪೌಲ್ ದು ಗೇ (1991) ವಿವರಣೆಯು ಇಲ್ಲಿ ಉಲ್ಲೇಖನೀಯ . 1970ರ ತರುವಾಯ ಪಶ್ಚಿಮದ ದೇಶಗಳಲ್ಲಿ ಈ ಪ್ರಶ್ನೆಯು ಬಂದಿದೆ. ಇದರಲ್ಲಿ ಮುಖ್ಯವಾದ್ದು ಆರ್ಥಿಕತೆ. ಗ್ರಾಂಶಿಯು ಇದನ್ನು ಮತ್ತೊಂದು ರೀತಿಯಲ್ಲಿ ಹೇಳುತ್ತಾನೆ. ಇದರಲ್ಲಿ ಸಂಸ್ಕೃತಿಯ ಪ್ರಶ್ನೆಗಳು ಇವೆ ಎನ್ನುವುದು ಒಂದಂಶವಾದರೆ ವ್ಯಕ್ತಿ ಮತ್ತು ರಾಷ್ಟ್ರೀಯತೆ ಪ್ರಶ್ನೆಯು ಮತ್ತೊಂದು. ವ್ಯಕ್ತಿ ಮತ್ತು ಅವನ ಗುಣಗಳು ನಮಗೆ ಇಲ್ಲಿ ಮುಖ್ಯ. ಅವನಲ್ಲಿ ಇರಬಹುದಾದ ಗುಣಾತ್ಮಕ ಮೌಲ್ಯಗಳು ಮನುಷ್ಯನ ಘನತೆಯ ಪ್ರಶ್ನೆಗಳೂ ಆದವು. ವ್ಯಕ್ತಿಯನ್ನು ಆರ್ಥಿಕ ಪ್ರಶ್ನೆಯಿಂದ ಬೇರೆ ಮಾಡಬಹುದೇ ಎನ್ನುವುದು ಆಗ ಇದ್ದ ಸಮಸ್ಯೆಗಳಲ್ಲಿ ಒಂದಾಗಿತ್ತು. ಎರಡನೆಯದಾಗಿ ಒಬ್ಬ ವ್ಯಕ್ತಿಯು ಒಂದು ಸ್ಥಳದಲ್ಲಿ ಹೇಗೆ ಕೆಲಸವನ್ನು ಮಾಡುತ್ತಾನೆ ಎನ್ನುವುದರ ಆಧಾರದ ಮೇಲೆ ಅವನು ಗುಣವು ನಿರ್ಧಾರವಾಗಿತ್ತು. ಸಾಂಸ್ಕೃತಿಕ ಒಳ್ಳೆಯತನ ಎನ್ನುವುದು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗಿತ್ತು ಆದರೆ ಗ್ರಾಂಶಿಯು ಇದನ್ನು ಹೇಳುವಾಗ ಒಬ್ಬ ವ್ಯಕ್ತಿಗೆ ಇರುವ ಗುಣಗಳು ಒಂದೇ ಅಲ್ಲ ಎಂದು ಹೇಳುತ್ತಾನೆ. ಅದು ಬಹುತ್ವ ಆಗಿರುತ್ತದೆ. ನಾವು ಮಾಡುವ ಕೆಲಸ ಮತ್ತು ನಮ್ಮ ಅನನ್ಯತೆಗೆ ಈ ದೃಷ್ಟಿಯಿಂದ ಒಂದು ಅನನ್ಯತೆಯು ಇದೆ. ಕೆಥೋಲಿಕ್ ಚರ್ಚ್‌ಗಳು ವ್ಯಕ್ತಿಯ ಗುಣ ಮತ್ತು ನಡತೆಗಳನ್ನು ತಿದ್ದಲು ಪ್ರಯತ್ನ ಮಾಡಿದ್ದು ಇಲ್ಲಿ ಉಲ್ಲೇಖನೀಯ. ವೈಯಕ್ತಿಕ ವಿಕಾಸ ಎನ್ನುವುದು ಚರ್ಚ್‌ಗಳಿಗೆ ಮುಖ್ಯ. ಇದರಲ್ಲಿ ವ್ಯಕ್ತಿಯನ್ನು ನಿಯಂತ್ರಣ ಮಾಡುವ ಕ್ರಮವೂ ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಸಾಂಸ್ಕೃತಿಕ ಅತ್ಯುತ್ತಮ ನಡವಳಿಕೆ ಎಂದರೆ ಒಂದು ನೋವು. ಮತ್ತು ಅದರ ಮತ್ತೊಂದು ಬಗೆಯ ಋಣ ಎಂದು ಪೌಲ್ ಹೇಳುತ್ತಾನೆ. ತನ್ನ ಆಸೆಗಳನ್ನು ಮತ್ತು ಬಯಕೆಗಳನ್ನು ತೃಪ್ತಿ ಪಡಿಸಿಕೊಳ್ಳುವ ಕ್ರಮವೂ ಹೌದು. ಅದರಲ್ಲಿ ಆದಾಯದ ಪ್ರಶ್ನೆಯು ಇದೆ. ಆದರೆ ಇದರಲ್ಲಿ ವೈಯಕ್ತಿಕತೆಯು ಅತ್ಯಂತ ಮುಖ್ಯ. ಆದರೆ ಅತ್ಯುತ್ತಮ ಗುಣ ಮತ್ತು ನಡತೆ ಎನ್ನುವುದು ಮತ್ತೊಂದು ಬಗೆಯಲ್ಲಿ ತನ್ನ ಬುದ್ಧಿವಂತಿಕೆ ಮತ್ತು ತನ್ನದೇ ಆದ ತಂತ್ರಗಾರಿಕೆಯನ್ನು ಹೊರಜಗತ್ತಿಗೆ ತೋರ್ಪಡಿಸುವುದು. ಹಾಗಿದ್ದರೆ ನಾವು ಅತ್ಯುತ್ತಮವಾದ್ದನ್ನು ಸಾಧಿಸುವುದು ಅಂದರೆ ಏನು? ಇದಕ್ಕೆ ಅತ್ಯಂತ ಸಂಕ್ಷಿಪ್ತವಾದ ಉತ್ತರವೆಂದರೆ ತನ್ನ ನಡವಳಿಕೆಯನ್ನು ಆಳುವ ವರ್ಗಕ್ಕೆ ಬೇಕಾದಂತೆ ಸರಿಪಡಿಸಿಕೊಳ್ಳುವುದು. ಕಾರ್ಪೋರೇಟ್ ಜಗತ್ತಿನಲ್ಲಿ ವ್ಯಕ್ತಿಯನ್ನು ಹೇಗೆ ನೋಡಲಾಗುತ್ತದೆ ಎಂದು ಅಲೈನ್ ಕೆನಡಿ ಹೀಗೆ ಹೇಳುತ್ತಾರೆ. 'ಒಂದು ಕಂಪೆನಿಯಲ್ಲಿ ಕೆಲಸವನ್ನು ಮಾಡುವವರು ಅದರ ಬೆಳವಣಿಗೆಗೆ ದುಡಿಯುತ್ತಾರೆ. ಅದರ ಮೂಲಕ ಅವರ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ.' ಆಳುವ ವರ್ಗಕ್ಕೆ ಬೇಕಾದಂತೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಎಂದು ಗ್ರಾಂಶಿಯು ಹೇಳುತ್ತಾನೆ. ಇದರಿಂದ ಮನುಷ್ಯರಿಗೆ ಒಂದು ವ್ಯಕ್ತಿತ್ವವನ್ನು ರಚನೆ ಮಾಡಲು ಹೇಳಲಾಗುತ್ತದೆ. ಅದರಲ್ಲಿ ಸಂಸ್ಥೆ ಮತ್ತು ಅದರ ನಿಯಮಗಳೂ ಸೇರುತ್ತವೆ. ಮನುಷ್ಯನನ್ನು ಸಂಸ್ಥೆಗೆ ಬೇಕಾದ ರೀತಿಯಲ್ಲಿ ಸಜ್ಜು ಮಾಡುವಾಗ ಅದರಲ್ಲಿ

ತರಬೇತಿಯು ಸೇರುತ್ತದೆ. ಆರೋಗ್ಯ ಕರವಾದ ಜೀವನದ ಕ್ರಮ ಎಂದರೆ ಏನು ಎನ್ನುವುದನ್ನು ವಿವರಣೆ ಮಾಡುವಾಗ ಇಂಥ ಪ್ರಶ್ನೆಗಳು ಸಾಮಾನ್ಯವಾಗುತ್ತದೆ. ಇದನ್ನು ನಾವು ಕ್ರೀಡೆಗಳಲ್ಲಿಯೂ ಕಾಣುತ್ತೇವೆ ಎಂದು ಗ್ರಾಂಶಿಯು ಹೇಳುತ್ತಾನೆ. ಫುಟ್ ಬಾಲ್‌ಕ್ರೀಡೆಗೆ ಮತ್ತು ಆರ್ಥಿಕವಾದ ಜೀವನದ ಕ್ರಮಕ್ಕೆ ಸಂಬಂಧವು ಇದೆ ಎನ್ನುವುದು ಅವನ ಅಭಿಪ್ರಾಯ. ಯಾರಿಗೆ ಬಿಡುವಿನ ವೇಳೆಯು ಇರುತ್ತದೆಯೋ ಅವರು ಮಾತ್ರವೇ ಇದನ್ನು ಆಡಬಲ್ಲರು. ಈ ಕ್ರೀಡೆಯಲ್ಲಿ ಚಲನೆ, ಸ್ಪರ್ಧೆ, ಅಲಿಖಿತವಾದ ನಿಯಮ ಎಲ್ಲವೂ ಇರುತ್ತದೆ. ಇದರ ಮೂಲಕವೂ ದೇಹವನ್ನು ಬಗ್ಗಿಸಲಾಗುತ್ತದೆ. ದೇಹಕ್ಕೆ ಒಂದು ಚೌಕಟ್ಟಿನ ಒಳಗೆ ತರಲಾಗುತ್ತದೆ. ಒಳ್ಳೆಯತನ ಎನ್ನುವುದು ಹೇಗೆಲ್ಲಾ ಬಳಕೆಯಾಗಿದೆ ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ ಎಂದು ಗ್ರಾಂಶಿಯು ತಿಳಿಯುತ್ತಾನೆ.

ಯಜಮಾನಿಕೆ ಎನ್ನುವುದು ಹೆಚ್ಚು ಪ್ರಭಾವಶಾಲಿಯಾದಾಗ ಆಳುತನವೂ ಬೇರೆ ಥರ ಕಾಣಿಸಿಕೊಳ್ಳುತ್ತದೆ. ಯಾವುದು ಯಾವುದರ ಭಾಗವಾಗಿದೆ ಎಂದು ನೋಡಿಕೊಂಡು ನಾವು ಕೆಲವನ್ನು ತೀರ್ಮಾನ ಮಾಡಬೇಕಾಗುತ್ತದೆ. ಆದ್ದರಿಂದ ಮುಖ್ಯವಾದ ಸಂಸ್ಕೃತಿ ಮತ್ತು ಉಪ ಸಂಸ್ಕೃತಿ ಎನ್ನುವುದು ಮೌಲ್ಯ ಮತ್ತು ಅದರ ಅನುಸಂಧಾನದ ದೃಷ್ಟಿಯಿಂದ ಮಹತ್ವದ್ದು. ದುಗ್ಲಾಸ್ ಇದನ್ನು ಬೇರೆ ರೀತಿಯಲ್ಲಿ ಹೇಳುತ್ತಾನೆ. ಅವನು ಸಾಂಸ್ಕೃತಿಕವಾದ ನಿಯಮಗಳು ಮತ್ತು ಅದರ ಸ್ವರೂಪದಲ್ಲಿ ಆಳುವ ಸಂಸ್ಕೃತಿ ಮತ್ತು ಆಳಿಸಿಕೊಳ್ಳುವ ಸಂಸ್ಕೃತಿಯೆನ್ನುವುದು ಹೇಗೆ ಭಿನ್ನವಾಗುತ್ತದೆ ಎಂದು ನೋಡಬೇಕು ಎಂದು ಹೇಳುತ್ತಾನೆ. ಪ್ರಧಾನ ಮತ್ತು ಉಪ ಎನ್ನುವುದು ನಮಗೆ ಈ ಮಾದರಿಯನ್ನು ಹೇಳುತ್ತದೆ. ಅದು ಕೆಲವನ್ನು ಉಪ ಮತ್ತು ಇನ್ನು ಕೆಲಸವನ್ನು ಪ್ರಧಾನವೆಂದು ಹೇಳುತ್ತದೆ. ವರ್ಗೀಕರಣ ಮತ್ತು ಸಂಸ್ಕೃತಿಗೆ ಈ ದೃಷ್ಟಿಯಿಂದ ಅಧ್ಯಯನದ ಅನುಕೂಲವೂ ಹೌದು. ಅನೇಕ ಸನ್ನಿವೇಶದಲ್ಲಿ ಇದು ಶೈಕ್ಷಣಿಕ ವಲಯದ ಚರ್ಚೆ ಎಂದೂ ಅನಿಸುತ್ತದೆ. ಇಲ್ಲಿ ಯುವ ಎನ್ನುವುದು ನಮಗೆ ಅತ್ಯಂತ ಮುಖ್ಯ. ಈವತ್ತು ನಮ್ಮ ಯುವ ಎನ್ನುವುದು ಸಂಕೇತವೂ ಹೌದು. ಆದರೆ ಇದನ್ನು ಹೇಳುವಾಗ ಮತ್ತೆ ಮತ್ತೆ ನೆನಪು ಮಾಡುವ ವಿಷಯವೂ ಇದೆ. ಯುವಕರು ಕೆಲವನ್ನು ಅಂಗೀಕಾರ ಮಾಡುತ್ತಾರೆ. ಅದರಲ್ಲಿ ಅನ್ಯಭಾಷೆ ಮತ್ತು ಅದರ ಯಜಮಾನಿಕೆಯೂ ಇದೆ. ಅದನ್ನು ಯುವಕರು ಅನುಸರಿಸಬೇಕಾಗುತ್ತದೆ. ಅಥವಾ ಅನುಸರಿಸುತ್ತಾರೆ. ಇದರಲ್ಲಿ ವರ್ಗ ಮತ್ತು ಅದರ ಸ್ವರೂಪವು ಇರುತ್ತದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಯುವ ಕೇಂದ್ರಿತವಾದ ಸಂಸ್ಕೃತಿಯನ್ನು ನಾವು ಇನ್ನೂ ಒಂದು ರೀತಿಯಲ್ಲಿ ಅರ್ಥ ಪೂರ್ಣ. ಒಂದು ದೊಡ್ಡ ಸಂಸ್ಕೃತಿಯ ಮಧ್ಯೆ ಈ ಉಪಸಂಸ್ಕೃತಿಯು ಇರುತ್ತದೆ. ಉಪ ಸಂಸ್ಕೃತಿಯು ಯಾವುದೇ ಆಗಿರಬಹುದು, ಅದರಲ್ಲಿ ಲಿಂಗ ತಾರತಮ್ಯ ಇರುತ್ತದೆ. ಇದರ ಮೊದಲ ಚರ್ಚೆಯು ಬಂದಿರುವುದು ಸಮಾಜಶಾಸ್ತ್ರದಲ್ಲಿ ಎನ್ನುವುದನ್ನು ನಾವು ಗಮನಿಸಬೇಕು. ಮಾರ್ಕ್ಸವಾದದಲ್ಲಿ ಇದರ ಬಗ್ಗೆ ಬೇರೆ ಅರ್ಥವಿದೆ. ವರ್ಗ ಮತ್ತು ಅದರ ಉಪ ಸಂಸ್ಕೃತಿಗಳು ಇದರಲ್ಲಿ ಅತ್ಯಂತ ಮುಖ್ಯ. ಯುವ ಸಂಸ್ಕೃತಿಯು ಸಾಂಕೇತಿಕವೂ ಆಗಿರುತ್ತದೆ ಎಂದು ಸ್ಟುವರ್ಟ್ ಹಾಲ್ ಹೇಳುತ್ತಾನೆ. ಆದರೆ ಸಮಾಜ ಮತ್ತು ಅದರ ಅಧ್ಯಯನಕ್ಕೆ ಇದು ಅತ್ಯಂತ ಉಪಯುಕ್ತವಾದ ಒಂದು ಪರಿಭಾಷೆಯೂ ಹೌದು.

ಅದರ ಜೊತೆಗೆ ಈವತ್ತು ನಮ್ಮ ಎದುರು ಇರುವ ಬಂಡವಾಳವಾದವು ಒಡೆದು ಆಳು ಎನ್ನುವುದನ್ನು ಹೇಳುತ್ತದೆ. ಅದು ಬೇರೆ ಪ್ರಶ್ನೆ. ಆದರೆ ಒಂದು ಪ್ರಧಾನವಾದ ಸಂಗತಿಯು ಇದೆ. ಯುವಕರು ಅವರದೇ ಒಂದು ಸಂಸ್ಕೃತಿಯನ್ನು ಹುಟ್ಟು ಹಾಕುತ್ತಾರೆ. ಸಮಾಜ ಮತ್ತು ಕುಟುಂಬದಲ್ಲಿ ಯುವ ಸಂಸ್ಕೃತಿಯು ತನ್ನದೇ ಆದ ಒಂದು ಚಹರೆಯನ್ನು ಕಟ್ಟುತ್ತದೆ. ಅದಕ್ಕೆ ಒಂದು ರಚನೆಯು ಇರುತ್ತದೆ ಎಂದು ಮಾರ್ಕ್ಸವಾದವು ಹೇಳುತ್ತದೆ. ಆದರೆ ಬಂಡವಾಳವಾದವು ಒಂದು ಸಮಾಜದ ಯಜಮಾನಿಕೆಯನ್ನು ವಹಿಸಿದರೆ ಅದರ ಸಾಂಸ್ಕೃತಿಕವಾದ ಮೌಲ್ಯವು ಬೇರೆಯಾಗುತ್ತದೆ. ಉಪ ಸಂಸ್ಕೃತಿ ಎನ್ನುವುದು ಹೇಗೆ ನಮಗೆ ತಾತ್ವಿಕವಾದ ಒಂದು ಪ್ರಶ್ನೆಯೂ ಹೌದು ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ಯುವ ಉಪಸಂಸ್ಕೃತಿಯು ಒಂದು ಸ್ಥಿರವಾದ ನೆಲೆಯನ್ನು ಹೊಂದಿರುವುದಿಲ್ಲ ಎಂದು ಕೊಹೆನ್ ಹೇಳುತ್ತಾನೆ. ಮಧ್ಯಮ ವರ್ಗದ ಅನೇಕ ಯುವಕರು ತಮ್ಮ ಪಾಲಕರ ಯಾವುದೇ ಮೌಲ್ಯಗಳನ್ನು ಒಪ್ಪುವುದಿಲ್ಲ. ಅವರು ಕಾಲ ಮತ್ತು ಪ್ರದೇಶವನ್ನು ಅಷ್ಟಾಗಿ ಗಮನಿಸುವುದಿಲ್ಲ. ಇದು ಮೂಲಭೂತವಾಗಿ ತೊಂದರೆಯೂ ಆಗುತ್ತದೆ. ಕೊಹೆನ್ ಇದರಲ್ಲಿ ಅನೇಕ ವೈರುದ್ಧ್ಯಗಳು ಇರುತ್ತವೆ ಎನ್ನುವುದನ್ನು ಒಪ್ಪುತ್ತಾನೆ. ವಾಸ್ತವವಾಗಿ ಪಾಲಕರು ಮತ್ತು ಅವರ ಸಂಸ್ಕೃತಿಯು ಒಂದು ಥರ ಇದ್ದರೆ ಅದರ ಜೊತೆಗೆ ಬರುವ ತಾತ್ವಿಕತೆಗೆ ಇನ್ನೊಂದು ಆಯಾಮವೂ ಇರುತ್ತದೆ.

ಕೊಹೆನ್ ಹೇಳಿದ ವಿಚಾರವನ್ನು ನಾವಿಲ್ಲಿ ಮತ್ತೊಮ್ಮೆ ಚರ್ಚೆ ಮಾಡಬೇಕಾಗಿದೆ: ಅವನು ಯುವ ಉಪ ಸಂಸ್ಕೃತಿಯನ್ನು ವಾಸ್ತವ ಮತ್ತು ಇತರ ಸಂಗತಿಗಳ ಆಧಾರದ ಮೇಲೆ ನಿರ್ಧಾರ ಮಾಡಬೇಕಾಗುತ್ತದೆ. ಸಂತೋಷ, ಅನನ್ಯತೆ ಎರಡು ಯುವ ಸಂಸ್ಕೃತಿಗೆ ಹೆಚ್ಚು ಮುಖ್ಯವಾಗುತ್ತದೆ. ಇದನ್ನು ಇಷ್ಟಪಡುವುದು ಅಂದರೆ ಮುಖ್ಯ ಸಂಸ್ಕೃತಿಗಿಂತ ಭಿನ್ನವಾಗಿ ಆಲೋಚನೆ ಮಾಡುವುದೂ ಹೌದು. ಯಾರು ಯುವಕರಾಗಿರುತ್ತಾರೆಯೋ ಅವರು ಮೌಲ್ಯಗಳನ್ನು ಮೀರುವುದರಲ್ಲಿ ಸಂತೋಷವನ್ನು ಪಡೆಯುವುದೂ ನಿಜ. ಅವರು ಅಭಿವ್ಯಕ್ತಿಯನ್ನು ಬೇರೆ ಥರ ಸಾಧಿಸುತ್ತಾರೆ. ಅವರ ಧೋರಣೆಯು ಕೂಡಾ ಪ್ರತಿಯಾದ ಒಂದು ಯಜಮಾನಿಕೆಯನ್ನು ಹೇಳುತ್ತದೆ. ಅವರಲ್ಲಿ ಪ್ರತಿರೋಧವು ಇರುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗವು ಒಂದು ಥರ ಯೋಚನೆ ಮಾಡುವುದಿದ್ದರೆ ಆಳಿಸಿಕೊಳ್ಳುವ ವರ್ಗವು ಮತ್ತೊಂದು ಥರ ಇನ್ನೊಂದು ಥರ ಯೋಚನೆಯನ್ನು ಮಾಡುತ್ತದೆ. ಅದರಲ್ಲಿಯೂ ಯುವ ಸಂಸ್ಕೃತಿಯು ಸಂಗೀತ, ಫ್ಯಾಶನ್, ಮಾತುಕತೆ ಮುಂತಾದವುಗಳಲ್ಲಿ ಬೇರೆ ಥರ ದೃಷ್ಟಿಕೋನವನ್ನು ಹೊಂದಿರುವುದು ಮೇಲಿನ ವಾದಕ್ಕೆ ಒಂದು ಸಾಕ್ಷಿ. ಯುವ ಉಪ ಸಂಸ್ಕೃತಿಯು ಸ್ವಾತಂತ್ರ್ಯ ಮತ್ತು ಸಮಾನತೆಯ ಕುರಿತು ಬೇರೆ ಥರದ ಯೋಚನೆಯನ್ನು ಹೊಂದಿರುವುದೂ ಸತ್ಯ. ಅದರ ಮೂಲಕ ಪ್ರಧಾನ ಸಂಸ್ಕೃತಿಗೆ ಪ್ರತಿಕ್ರಿಯೆಯನ್ನು ನೀಡುತ್ತದೆ. ಇದರಲ್ಲಿ ತಲೆಗೂದಲನ್ನು ಯಾವ ಥರ ಇಟ್ಟುಕೊಳ್ಳಬೇಕು ಎನ್ನುವುದು ಅವರಿಗೆ ಅಗತ್ಯ. ಹಿರಿಯರು ಒಂದು ಮಾದರಿಯಲ್ಲಿ ತಲೆಗೂದಲವನ್ನು ಬೆಳೆಸಿದರೆ ಕಿರಿಯರು ಇನ್ನೊಂದು ಥರ ರೂಪಿಸಿಕೊಳ್ಳುತ್ತಾರೆ. ಕಲಿಯುವುದು ಮತ್ತು ಓದುವುದು ಕೂಡಾ ಭಿನ್ನವಾಗುತ್ತದೆ. ಅವರು ಅಂದರೆ ಯುವಕರು ಯಾವುದನ್ನು ಓದಬೇಕು ಮತ್ತು ಮುಂದೆ ಯಾವ ಮಾದರಿಯ ಉದ್ಯೋಗವನ್ನು ಪಡೆಯವುದು ಅಗತ್ಯವಿದೆ

ಎಂದು ಅವರೇ ನಿರ್ಧಾರಮಾಡಿಕೊಳ್ಳುತ್ತಾರೆ., ಮನುಷ್ಯನ ಸಾಮಾನ್ಯವಾದ ಸಂವೇದನೆಯನ್ನು ಕೂಡಾ ಈ ಸಂಗತಿಗಳು ಹೇಗೆ ನಿರ್ಧಾರ ಮಾಡುತ್ತವೆ ಎನ್ನುವುದಕ್ಕೆ ಇದೇ ನಿದರ್ಶನವಾಗಿದೆ.

ಗ್ರಾಂಶಿಗೆ ಅತ್ಯಂತ ಮುಖ್ಯವಾಗುವುದು ಲೋಕ ದೃಷ್ಟಿ. ಇದನ್ನು ಇಟ್ಟುಕೊಂಡು ಅವನು ಬೇರೆ ಬೇರೆ ವಿಚಾರಗಳನ್ನು ಮಂಡಿಸುತ್ತಾನೆ. ಆದರೂ ಅವನಿಗೆ ಒಂದು ನಿರ್ದಿಷ್ಟವಾದ ನಿಲುವು ಇದೆ. ಅದರ ಜೊತೆಗೆ ಅವನಿಗೆ ಒಂದು ನಿರ್ದಿಷ್ಟವಾದ ಒಳನೋಟವೂ ಇದೆ. ಈ ಸಂಗತಿಗಳನ್ನು ಹೇಳುವಾಗ ಗ್ರಾಂಶಿಯು ಸಾಹಿತ್ಯ, ಸಂಸ್ಕೃತಿ, ಸಿನಿಮಾ ನೃತ್ಯ ಇತ್ಯಾದಿ ಎಲ್ಲಾ ಅಂಶಗಳನ್ನು ಅವನು ಹೇಳುತ್ತಾನೆ. ಯಾವುದನ್ನು ನಾವು ಅಂಗೀಕರಿಸಬೇಕು ಮತ್ತು ಯಾವುದರ ಜೊತೆಗೆ ನಾವು ಒಂದು ಬಗೆಯ ಒಪ್ಪಂದ ಮಾಡಬೇಕು ಎನ್ನುವುದು ಅವನಿಗೆ ಅರಿವು ಇದೆ. ಅದರ ಜೊತೆಗೆ ಅನೇಕ ವಿಚಾರಗಳಿಗೆ ಕಥನದ ಕ್ರಮವೂ ಇದೆ. ಯಾವುದರ ಜೊತೆಗೆ ನಾವು ಸಂಧಾನ ಮಾಡಬೇಕು ಮತ್ತು ಯಾವುದರ ಜೊತೆಗೆ ನಾವು ಸಂಘರ್ಷವನ್ನು ಮಾಡಬೇಕು ಎನ್ನುವುದು ಅವನಿಗೆ ಹೆಚ್ಚು ಮುಖ್ಯ. ಹಾಗೆ ನೋಡಿದರೆ ಅವನಲ್ಲಿ ಸಂಧಾನ ಎನ್ನುವುದು ಕೂಡಾ ಒಂದು ಬಗೆಯ ತಂತ್ರವಾಗಿದೆ. ಯಾವುದನ್ನು ನಾವು ಉಪ ಸಂಸ್ಕೃತಿ ಮತ್ತು ಯುವ ಸಂಸ್ಕೃತಿ ಎಂದು ಹೇಳುತ್ತೇವೆಯೋ ಅದು ಕೆಲವು ವಿಷಯಗಳನ್ನು ಎದುರಿಸಲೇಬೇಕಾಗುತ್ತದೆ. ಆದ್ದರಿಂದ ಇದನ್ನು ನಾವು ತಾತ್ವಿಕವಾಗಿಯೂ ಗಮನಿಸಬೇಕಾಗುತ್ತದೆ. ಲೋಕ ದೃಷ್ಟಿಯನ್ನು ಕುರಿತು ಹೇಳುವಾಗ ಇದು ಬೇರೆಯಾಗುತ್ತದೆ. ಅದು ಸಾಂಕೇತಿಕವಾದ ಒಂದು ಚಟುಟಿಕೆಯೂ ಆಗಬಹುದು, ಯಜಮಾನಿಕೆ, ಪ್ರತಿರೋಧ ಹಾಗೂ ಪ್ರಾತಿನಿಧಿಕತೆಗೆ ಈ ದೃಷ್ಟಿಯಿಂದ ವಿಶಿಷ್ಟವಾದ ಆಯಾಮವೂ ಇದೆ. ಗ್ರಾಂಶಿಗೆ ಯಜಮಾನಿಕೆ, ಪ್ರತಿರೋಧ ಹಾಗೂ ಅದರ ಪ್ರಾತಿನಿಧಿಕತೆ ಈ ದೃಷ್ಟಿಯಿಂದ ಮುಖ್ಯವಾದ್ದು ಅನಿಸುತ್ತದೆ. ಇಲ್ಲಿ ಮತ್ತೆ ಹಿಂದೆ ಹೇಳಿದ ಮಾತನ್ನು ನೆನಪು ಮಾಡಿಕೊಳ್ಳುವುದು ಅಗತ್ಯ. ಜಾನಪದ ಮತ್ತು ಅದರ ಇತರ ಪ್ರಕಾರಗಳು ಸಾಂಸ್ಕೃತಿಕವಾಗಿ ಮಹತ್ವದ್ದು. ಇವುಗಳು ನಮಗೆ ಇನ್ನೊಂದು ಕಾರಣಕ್ಕೆ ಮುಖ್ಯ. ಯಜಮಾನಿಕೆಗೆ ಪ್ರತಿರೋಧವನ್ನು ಒಡ್ಡುವ ಜಾನಪದವು ತನ್ನದೇ ಆದ ಒಂದು ಅಭಿವ್ಯಕ್ತಿಯನ್ನು ಸ್ಥಾಪಿಸಿಕೊಳ್ಳುತ್ತದೆ. ಇದು ಪ್ರಾತಿನಿಧಿಕವೂ ಹೌದು. ಆದ್ದರಿಂದ ಯಜಮಾನಿಕೆ ಮತ್ತು ಅದರ ವಿರುದ್ಧದ ಪ್ರತಿರೋಧಕ್ಕೆ ವಿಶಿಷ್ಟವಾದ ಆಯಾಮವೂ ಇರುತ್ತದೆ, ಒಂದು ಪರಿಭಾಷೆಯನ್ನು ನಾವು ಇಲ್ಲಿ ತರುವುದು ಅತ್ಯಂತ ಅಗತ್ಯ. ಪ್ರತಿಸಂಸ್ಕೃತಿ ಮತ್ತು ಪ್ರತಿ ಯಜಮಾನಿಕೆ ಎನ್ನುವುದು ಹೇಗೆ ಸೃಷ್ಟಿಯಾಗುತ್ತದೆ ಎಂದು ರೋಸ್ ಹೇಳುತ್ತಾರೆ. ಯಾವುದು ನಿಜವಾಗಿದೆಯೋ ಅದನ್ನು ಪ್ರತಿರೋಧದ ಸಂಗತಿಯು ನಿರಾಕರಿಸುತ್ತದೆ. ನಿಯಂತ್ರಣವು ನಮಗೆ ಮತ್ತೊಂದು ಅಂಶವನ್ನು ಹೊಂದಿರುತ್ತದೆ. ಇದನ್ನು ನಾವು ಬಂಧನ ಎಂದು ಹೇಳಿದರೆ ಬಂಧನವು ಕೆಲವೊಮ್ಮೆ ಸೀಮೀತವಾಗಿರುತ್ತದೆ. ಮನೆ , ಮದುವೆ ಮತ್ತು ಕುಟುಂಬ ಎನ್ನುವುದು ಒಂದು ವಲಯವನ್ನು ಹೇಳುತ್ತದೆ. ಎಷ್ಟೋ ಸರ್ತಿ ಇದು ಬಂಧನ, ಮತ್ತೆ ಕೆಲವು ಸನ್ನಿವೇಶದಲ್ಲಿ ಬಂಧನವಲ್ಲ. ಆದರೆ ಮತ್ತೆ ಅನೇಕವು ನಮಗೆ ಬಂಧನವು ಆಗಿರುತ್ತದೆ. ಅದರಲ್ಲಿ ಹಿಂಸೆ ಮತ್ತು ನೋವು ಎರಡೂ ಇರಬಹುದು. ನಾವು ಯಾವ ಸನ್ನಿವೇಶದಲ್ಲಿ ಹೇಗೆ ಇರುತ್ತೇವೆ ಎನ್ನುವುದರ ಆಧಾರದ ಮೇಲೆ ಇದು ನಿರ್ಧಾರವಾಗುತ್ತದೆ.

ಆಧುನಿಕ ಅರ್ಥದಲ್ಲಿ ಹೇಳುವುದಿದ್ದರೆ ಸ್ವಯಂಬಲ ಎನ್ನುವುದು ನಮಗೆ ಸಾಧಿತವಾಗುವ ಒಂದು ಪ್ರಕ್ರಿಯೆ. ಅದು ಸಾಧ್ಯತೆಯೂ ಹೌದು. ಅದೇ ರೀತಿಯಲ್ಲಿ ಪ್ರತಿ ಯಜಮಾನಿಕೆ ಎನ್ನುವುದು ಕೂಡಾ ನಮ್ಮ ಶಕ್ತಿಯನ್ನು ಮತ್ತು ಸಾಮಾರ್ಥ್ಯವನ್ನು ಸೂಚಿಸುತ್ತದೆ ಮತ್ತೊಂದು ಕಡೆಯಿಂದ ಇದು ನಮಗೆ ಸಮಾಜದ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವೂ ಹೌದು. ರೇಮಾಂಡ್ ವಿಲಿಯಂಸ್ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ ಮಾತಾಡುತ್ತಾನೆ. ಅವನು ಎರಡು ವಿಷಯಗಳನ್ನು ಪ್ರಸ್ತಾವಿಸುತ್ತಾನೆ. ಅದನ್ನು ನಾವು ಪರಿಭಾಷೆ ಎಂದೂ ಹೇಳಬಹುದು, ಅವನಲ್ಲಿ ಇದು ಅತ್ಯಂತ ಮುಖ್ಯವಾದ್ದು ಕೂಡಾ . ಡಾಮಿನೆಂಟ್ ಮತ್ತು ಎಮರ್ಜೆಂಟ್. ಸಮಾಜದಲ್ಲಿ ಒಂದು ಸಮಾನತೆಯು ಇಲ್ಲದೆ ಹೋದರೆ ಆಗ ಒಂದು ವರ್ಗವು ಸಮಾಜವನ್ನು ತನ್ನ ಅಧೀನತೆಯಲ್ಲಿ ಇರುವಂತೆ ನೋಡುತ್ತದೆ ಎಷ್ಟೋ ಸರ್ತಿ ಯಜಮಾನ ಸಂಸ್ಕೃತಿಯಲ್ಲಿ ಮತ್ತೊಂದು ಸಂಸ್ಕೃತಿಯು ಸೇರುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಅದು ತನ್ನ ಅನನ್ಯತೆಯನ್ನು ಬಿಡುತ್ತದೆ. ದೊಡ್ಡ ನದಿಯಲ್ಲಿ ಉಪ ನದಿಗಳು ಸೇರುವ ಹಾಗೆ. ಆಳುವ ವರ್ಗವು ಅತ್ಯಂತ ಸಣ್ಣ ವರ್ಗವನ್ನು ನುಂಗುತ್ತದೆ. ಹಾಗೆ ನುಂಗುವುದು ಆಶ್ಚರ್ಯವೂ ಅಲ್ಲ. ಇದರಿಂದ ಒಂದು ಅಸಮತೆಯು ಬರುತ್ತದೆ. ಒಂದು ಸಂಘರ್ಷವು ಉಂಟಾಗುತ್ತದೆ., ಆದ್ದರಿಂದ ಅನನ್ಯತಗೆ ಬೇರೆ ಬೇರೆ ಆಯಾಮವೂ ಇರುತ್ತದೆ. ಆಲೋಚನೆ ಎನ್ನುವುದನ್ನು ರೂಪಿಸುವುದು ಕೂಡಾ ಇದೇ ಆಳುವ ವರ್ಗ., ಆದರೂ ಸಮಾಜದಲ್ಲಿ ರಾಜಕೀಯ ವರ್ಗ ಮತ್ತು ಸಮಾಜದ ವರ್ಗಗಳು ಒಂದಕ್ಕೆ ಒಂದು ಮುಖಾಮುಖಿಯಾಗುತ್ತವೆ. ಗ್ರಾಂಶಿಯು ನಮ್ಮನ್ನು ಹೇಗೆ ಸಾಂಸ್ಥಿಕವಾದ ರೂಪಗಳು ನಿಯಂತ್ರಣ ಮಾಡುತ್ತವೆ ಎಂದು ವಿವರವಾಗಿ ಹೇಳಿದ್ದಾನೆ. ಕೆಲವು ಸಂಸ್ಥೆಗಳಿಗೆ ಕಾನೂನು ಕೂಡಾ ಸಹಾಯವನ್ನು ಮಾಡುತ್ತವೆ. ಇಲ್ಲಿ ಮೂರು ಅಂಶಗಳು ಅತ್ಯಂತ ಮುಖ್ಯ. ಅನೇಕ ಸಂಸ್ಥೆಗಳು ಸಾಮಾಜಿಕರು ಮಾತಾಡುವ ಹಾಗೆ ಮಾತಾಡುತ್ತವೆ. ಅದರ ಅವುಗಳ ಅಂತರಾಳದಲ್ಲಿ ಒಂದು ಭಿನ್ನತೆಯು ಇರುತ್ತದೆ.

ವ್ಯಕ್ತಿಯ ವಿಶ್ವಾತ್ಮಕ ಸತ್ಯವನ್ನು ಕೂಡಾ ವರ್ಗೀಕರಣಕ್ಕೆ ಅನುಸಾರವಾಗಿ ರೂಪಿಸುವ ಅಗತ್ಯವಿದೆ ಎನ್ನುವುದು ಮುಖ್ಯ. ಬಂಡವಾಳವಾದದ ಮುಖ್ಯ ಸಂಗತಿಯೆಂದರೆ ಅದು ಬುದ್ಧಿ ಜೀವಿಗಳನ್ನು ಮತ್ತು ದೈಹಿಕ ಶಕ್ತಿಯನ್ನು ಬಳಸುವವರನ್ನು ಬೇರೆ ಬೇರೆಯಾಗಿ ನೋಡುತ್ತದೆ ಇಲ್ಲಿಯೇ ನಾವು ಮತ್ತೊಂದು ಮಾತನ್ನು ಗಮನಿಸಬೇಕು. ಅದು ವ್ಯಕ್ತಿ ಮತ್ತು ಅವನ ವ್ಯಕ್ತಿತ್ವದ ಕುರಿತು ಮಾರ್ಕ್ಸವಾದವು ತಳೆಯುವ ನಿಲುವು. ವ್ಯಕ್ತಿ ಮತ್ತು ಅವನ ಸ್ಥಾನವನ್ನು ಮಾರ್ಕ್ಸವಾದವು ಹೇಳುವ ವಿಧಾನವು ಬೇರೆ. ಉದಾರವಾದಿ ಮಾನವತಾವಾದವು ವ್ಯಕ್ತಿಯನ್ನು ಭಿನ್ನವಾಗಿ ಗ್ರಹಿಸುತ್ತದೆ. ಅದರಲ್ಲಿ ವ್ಯಕ್ತಿತ್ವದ ಚಿಂತನೆಯು ತಾತ್ವಿಕವಲ್ಲ. ಅದು ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲು ಹೋಗುವುದಿಲ್ಲ. ಆದರೆ ಮಾರ್ಕ್ಸವಾದವು ವ್ಯಕ್ತಿಯನ್ನು ನೋಡುವಾಗಲೇ ಅವನ ವ್ಯಕ್ತಿತ್ವವನ್ನು ಯಾವುದು ನಿಯಂತ್ರಿಸಿದೆ ಎನ್ನುವುದನ್ನೂ ಗಮನಿಸುತ್ತದೆ. ಉದಾರವಾದಿಗಳಿಗೆ ಸ್ವಾತಂತ್ರ್ಯವೆನ್ನುವುದು ಒಂದು ಆದರ್ಶ. ಆದರೆ ಸ್ವಾತಂತ್ರ್ಯವು ಕೇವಲ ಒಂದು ಕಲ್ಪನೆ ಮಾತ್ರ. ವ್ಯಕ್ತಿ ಮತ್ತು ಅವನ ಹಿನ್ನೆಲೆಯು ಬಹಳ ಮುಖ್ಯವಾಗಿದೆ. ವ್ಯಕ್ತಿಯನ್ನು ಒಂದು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯು ನಿಯಂತ್ರಿಸುತ್ತದೆ ಎನ್ನುವುದು ಮಾರ್ಕ್ಸವಾದದ ನಿಲುವು. ಅದು

ತತ್ವಜ್ಞಾನವೂ ಹೌದು. ಹೀಗಾಗಿಯೇ ಮಾರ್ಕ್ಸವಾದವು ಸಮಾಜವಾದಿ ದೃಷ್ಟಿಕೋನದ ಮಾನವೀಯತೆಯನ್ನು ಎತ್ತಿ ಹಿಡಿಯುತ್ತದೆ. ಮನುಷ್ಯತ್ವ ಅನ್ನುವುದು ಕೇವಲ ಮಾನವೀಯತೆಯನ್ನು ಒಳಗೊಂಡ ಸಮಸ್ಯೆ ಅಲ್ಲ. ಅದು ವೈಜ್ಞಾನಿಕವಾದ ಕಲ್ಪನೆಯೂ ಹೌದು. ವಿವರಣೆಯು ಮಾತ್ರವೇ ಸಾಕಾಗುವುದಿಲ್ಲ. ಆದರ ರಾಜಕೀಯ ಪ್ರಶ್ನೆಗಳು ಸಮಾಜದ ಹೊರಗಿನ ಪ್ರಶ್ನೆಗಳು ಅಲ್ಲವೆನ್ನುವುದನ್ನು ಗಮನಿಸಬೇಕು. ರಾಜಕೀಯವಾಗಿ ಯಾವುದನ್ನು ಎಡವೆಂದು ಹೇಳುತ್ತೇವೆಯೋ ಅದು ಕೇವಲ ಎಡ ಮಾತ್ರವೇ ಅಲ್ಲ. ಅದು ರಾಜಕೀಯ ಪ್ರಶ್ನೆಯೆಂದೂ ಭಾವಿಸಬೇಕಾಗಿಲ್ಲ. ಅದು ಸಮಾಜಿಕ ಜೀವನದ ಪ್ರಶ್ನೆಯೂ ಹೌದು. ವಾಸ್ತವವಾಗಿ ಈವತ್ತು ನಾವು ಬುದ್ಧಿಜೀವಿಗಳನ್ನು ನೋಡುವಾಗ ಅವರು ಅನೇಕವನ್ನು ಒಂದು ರೂಪಕ್ಕೆ ತರುತ್ತಾರೆ ಎನ್ನುವುದು ಒಂದು ಅಂಶವಾಗಿದೆ. ಅವರು ಕೆಲವನ್ನು ಅಭಿವ್ಯಕ್ತಿ ಮಾಡುತ್ತಾರೆ. ಅದರಲ್ಲಿ ಸಮಾಜ, ತಾತ್ವಿಕತೆ ಮತ್ತು ವಿಜ್ಞಾನದ ಸಂಗತಿಗಳೂ ಇರುತ್ತವೆ. ಅವರೂ ಅನೇಕವನ್ನು ನಿರ್ಧಾರ ಮಾಡುತ್ತಾರೆ. ಎಷ್ಟೋ ಸರ್ತಿ ಅವರು ಯಜಮಾನಿಕೆಯ ಮಧ್ಯವರ್ತಿಗಳಂತೆ ಕೆಲಸವನ್ನು ಮಾಡುತ್ತಾರೆ ಎನ್ನುವುದು ಸತ್ಯ. ಆದರೆ ಗ್ರಾಂಶಿಯ ಅತ್ಯಂತ ಮಹತ್ವದ ವಾಕ್ಯವೆಂದರೆ ಎಲ್ಲಾ ಮನುಷ್ಯರು ಮೂಲತಃ ಬುದ್ಧಿಜೀವಿಗಳೇ ಆಗಿರುತ್ತಾರೆ. ಆದರೆ ಈವತ್ತು ನಾವು ಯಾರನ್ನು ಬುದ್ಧಿಜೀವಿಗಳು ಎಂದು ಕರೆಯುತ್ತೇವೆಯೋ ಅವರು ಕೂಡಾ ಅನೇಕ ಮಿತಿಗಳನ್ನು ಹೊಂದಿರುತ್ತಾರೆ. ಹಾಗೆಂದು ಅವರಿಗೆ ಯಾವುದೇ ಚಟುವಟಿಕೆ ಇಲ್ಲ ಎಂದು ಅರ್ಥವಲ್ಲ. ಅವರದೂ ಒಂದು ಬಗೆಯ ಜೀವನದ ಕ್ರಮವೂ ಹೌದು. ಮತ್ತೊಂದು ದೃಷ್ಟಿಯಿಂದ ಹೇಳುವುದಾದರೆ ಸಮಾಜದ ಜೊತೆಗೆ ಅವರ ಸಂಬಂಧ ಎನ್ನುವುದು ಅತ್ಯಂತ ಸಂಕೀರ್ಣವಾಗಿರುತ್ತದೆ. ಈ ಬಗೆಯ ಸಂಬಂಧವು ಚರಿತ್ರೆಯಲ್ಲಿ ಬದಲಾಗಬಹುದು. ಅದರ ಜೊತೆಗೆ ಈವತ್ತು ನಾವು ಕರೆಯುತ್ತಿರುವ ವಿದ್ವಾಂಸರು ಅವರದೇ ಆದ ಸ್ಥಾನಮಾನವನ್ನು ಹೊಂದಿರುತ್ತಾರೆ. ನಾವು ಇಪ್ಪತ್ತನೆಯ ಶತಮಾನದ ಬುದ್ಧಿಜೀವಿಗಳನ್ನು ಹನ್ನೆರಡನೆಯ ಶತಮಾನದ ಬುದ್ಧಿಜೀವಿಗಳ ಜೊತೆಗೆ ಹೋಲಿಸುವುದು ಅತ್ಯಂತ ಕಷ್ಟ. ಈಗ ಇರುವ ಕೆಲವು ಬುದ್ಧಿಜೀವಗಳನ್ನು ನಾವು ಮತ್ತೊಮ್ಮೆ ನಮ್ಮ ಗಮನಕ್ಕೆ ತಂದುಕೊಳ್ಳಬೇಕು. ಈಗ ಮಾಧ್ಯಮಾದಲ್ಲಿ ಕೆಲಸವನ್ನು ಮಾಡುವವರು ಇದ್ದಾರೆ. ಹೋಟೇಲಿನಲ್ಲಿ ಮೇನೇಜರ್ ಆಗಿ ಕೆಲಸವನ್ನು ಮಾಡುವವರೂ ಇದ್ದಾರೆ. ಇವರೆಲ್ಲರಿಗೆ ಅವರದಾದ ಒಂದು ಚಿಂತನೆಯ ಕ್ರಮವು ಇರುತ್ತದೆ. ಅವರಿಗೆ ಇರುವ ಜ್ಞಾನವು ಒಂದು ಬಗೆಯದು. ಅಡುಗೆ ಮತ್ತು ಅದರ ರುಚಿಯನ್ನು ನೋಡಿ ತೀರ್ಮಾನ ಮಾಡುವವನಿಗೆ ಬೇಕಾಗಿರುವುದು ಪ್ರಯೋಗದ ಪ್ರಶ್ನೆ ಮಾತ್ರ. ಇವರಿಗೆ ಸಾರ್ವಜನಿಕರ ಜೊತೆಗೆ ಒಂದು ಸಂಬಂಧವಂತೂ ಇದ್ದೇ ಇದೆ. ಹೀಗೆ ಇದ್ದರೂ ವೈಯಕ್ತಿಕ ಅಭಿರುಚಿಯು ಮಾತ್ರವೇ ಕೆಲಸವನ್ನು ಮಾಡುತ್ತವೆ.

ಈಗ ಇದರ ಮತ್ತೊಂದು ರೂಪವನ್ನು ನಾವು ಗಮನಿಸಬೇಕು. ಆಧುನಿಕ ಉತ್ಪಾದನೆಗಳು ಬದಲಾಗುತ್ತಿವೆ. ಬಂಡವಾಳವಾದವು ತನ್ನ ಸಂಪನ್ಮೂಲವನ್ನು ಬೇರೆ ಬೇರೆ ಚಟುವಟಿಕೆಗಳಲ್ಲಿ ಪ್ರಯೋಗವನ್ನು ಮಾಡುತ್ತವೆ. ಉದ್ಯಮ ಎನ್ನುವುದು ಮಾತ್ರವೇ ಈವತ್ತು ನಮ್ಮ ಮುಂದೆ ಇದೆ. ಆದರೆ ಉದ್ಯಮ ಎನ್ನುವುದು ಈವತ್ತು ಅತ್ಯಂತ ಸಾಮಾನ್ಯವಾದ ಕಾರ್ಮಿಕರು ಇಷ್ಟ ಪಡುವುದಿಲ್ಲ. ಅದಕ್ಕೆ ಹೆಚ್ಚು ತರಬೇತಿ ಹೊಂದಿರುವ ಜನರು ಬೇಕಾಗುತ್ತಾರೆ. ಅವರನ್ನು ಕಂಪೆನಿಯ

ಉದ್ಯೋಗಕ್ಕೆ ಒಗ್ಗಿಸುವುದು ಮುಖ್ಯ. ಅವರೂ ನಿರ್ದಿಷ್ಟವಾದ ಜ್ಞಾನವನ್ನು ಮಾತ್ರವೇ ಹೊಂದಿರುತ್ತಾರೆ. ಅದಕ್ಕಾಗಿಯೇ ಅನೇಕ ತರಬೇತಿ ಕಾರ್ಯಕ್ರಮವೂ ನಡೆಯುತ್ತದೆ. ಹೀಗಾಗಿ ಬಂಡವಾಳವಾದವು ತನ್ನದೇ ಒಂದು ಜ್ಞಾನವನ್ನು ಸೃಷ್ಟಿ ಮಾಡುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಉತ್ಪಾದನೆಯು ಹೇಗೆ ನಮ್ಮನ್ನು ಒಂದು ಸಿದ್ಧವಾದ ಚೌಕಟ್ಟಿಗೆ ತರುತ್ತದೆ ಎನ್ನುವುದಕ್ಕೆ ಇದು ನಿದರ್ಶನ. ಜನರು ಹೇಗೆ ಬಂಡವಾಳವಾದಕ್ಕೆ ಪೂರಕವಾದ ಕೆಲಸವನ್ನು ಮಾಡುತ್ತಾರೆ ಎನ್ನುವುದಕ್ಕೆ ಗ್ರಾಂಶಿಯು ಸಮೂಹ ಮಾಧ್ಯಮದ ಉದಾಹರಣೆಯನ್ನು ಕೊಡುತ್ತಾನೆ. ಮಾಧ್ಯಮಗಳಲ್ಲಿ ಕೆಲಸವನ್ನು ಮಾಡುವವರು ಬಂಡವಾಳವಾದದ ಮಧ್ಯವರ್ತಿಯಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಇದೇ ರೀತಿಯಲ್ಲಿ ಅನೇಕ ಸಂಸ್ಥೆಗಳು ಇರುತ್ತವೆ. ಅವು ಮನುಷ್ಯನ ದೇಹದ ಶ್ರಮ , ಮನಸ್ಸಿನ ಶ್ರಮವನ್ನು ಬಳಸುತ್ತವೆ.

ಪುನರುಜ್ಜೀವನದ ಅನಂತರ ಮನುಷ್ಯನ ಸಂವೇದನೆ ಮತ್ತು ಮನಸ್ಸಿನ ಕುರಿತು ಅನೇಕ ಚರ್ಚೆಗಳಾದವು ಎನ್ನವುದನ್ನು ಮರೆಯಬಾರದು. ಆ ಕಾಲದ ಬುದ್ಧಿಜೀವಿ ವರ್ಗದ ವಿಚಾರಧಾರೆಗಳು ಒಂದು ಬಗೆಯಲ್ಲಿದ್ದವು. ಇದನ್ನು ಅನಂತರ ವೈಚಾರಿಕ ಸಂಘರ್ಷವೆಂದು ಕರೆಯಲಾಯಿತು. ಆದರೆ ಆಗಿನ ವಿಚಾರ ಧಾರೆಗಳನ್ನು ಮತ್ತೆ ಬೇರೆ ವಿಧದಲ್ಲಿ ನಿರೂಪಿಸಲಾಯಿತು. ಜ್ಞಾನದ ಚರ್ಚೆಯು ರಾಜಕೀಯ ಸಂಗತಿಗಳನ್ನು ಸೂಚಿಸಿತು. ಹಾಗಯೇ ಆಗಿನ ವಿಚಾರಗಳು ನೈತಿಕ, ರಾಜಕೀಯ, ಸಾಮಾಜಿಕ ಅರಿವನ್ನು ಸೂಚಿಸಿತು. ಆಗಿನ ರಾಜಕೀಯ ಎಚ್ಚರವು ಭಿನ್ನವಾಗಿತ್ತು. ಮತ್ತು ಅದಕ್ಕೆ ಅನುಗುಣವಾಗಿ ಸಂವಹನ ಪ್ರಕ್ರಿಯೆಗಳು ಬದಲಾದವು. ಈ ಸಂದರ್ಭದಲ್ಲಿ ಮಾತು ಎನ್ನವುದು ಕೂಡಾ ಆಗ ಭಿನ್ನವಾದ ಚಹರೆಗಳನ್ನು ಸೂಚಿಸಿತು. ರಾಜಕೀಯ ಮತ್ತು ಚಾರಿತ್ರಿಕ ಸಂಗತಿಗಳು ಆಗುತ್ತಿರುತ್ತವೆ. ಅವುಗಳ ಸ್ವರೂಪವು ಅಸ್ಪಷ್ಟವೆಂದು ಹೇಳಬೇಕಾಗಿಲ್ಲ. ಚರಿತ್ರೆಯಲ್ಲಿ ಬೇಕಾದ್ದು ಯಾವುದು ಬೇಡವಾದ್ದು ಎಂದು ಅನೇಕ ಸಂದರ್ಭದಲ್ಲಿ ವರ್ಗೀಕರಿಸಲು ಬರುವುದಿಲ್ಲ. ಅದು ಸತ್ಯವೂ ಹೌದು. ಚರಿತ್ರೆಯನ್ನು ನಾವು ಹಗುರವಾದ ವಿಷಯವೆಂದು ಪರಿಗಣಿಸಬೇಕಾಗಿಲ್ಲ. ಚರಿತ್ರೆಯ ಅನಿರ್ದಿಷ್ಟವಾದುದು ಅಲ್ಲ. ಅಸ್ಪಷ್ಟವೂ ಅಲ್ಲ. ಅದಕ್ಕೆ ವಿಶಿಷ್ಟವಾದ ಅಸ್ತಿತ್ವವಿದೆ. ಅದು ಗಾಳಿಯಲ್ಲಿ ನಾವು ತೇಲಿಬಿಡಬಹುದಾದ ಸಂಗತಿಯೂ ಅಲ್ಲ. ಕಳೆದು ಹೋದುದಕ್ಕೆ ಮತ್ತು ನಮ್ಮ ವರ್ತಮಾನಕ್ಕೆ ಒಂದು ನಿಕಟವಾದ ಸಂಬಂಧವಿದೆ. ಅದು ಅನೇಕ ಸಂದರ್ಭದಲ್ಲಿ ಅವ್ಯಕ್ತವೂ ಹೌದು. ಆದರೆ ಭೂತ ಮತ್ತು ವರ್ತಮಾನಕ್ಕೆ ಒಂದು ಅವ್ಯಕ್ತವಾದ ನಂಟು ಇದೆ. ಚರಿತ್ರೆಯು ಮರುಕಳಿಸುತ್ತದೆ ಎಂದು ಹೇಳುವಂತಿಲ್ಲ. ಚರಿತ್ರೆಯು ಅಸ್ತಿತ್ವದಲ್ಲಿತ್ತು ಮತ್ತು ಇದೆ. ಅದಕ್ಕೂ ನಮ್ಮ ಜೀವನಕ್ಕೂ ಒಂದು ನಂಟು ಇದೆ. ಅದೆ ನಮ್ಮ ಅಸ್ತಿತ್ವವನ್ನು ರೂಪಿಸಿದೆ. ಚಾರಿತ್ರಿಕ ಭೌತವಾದವು ಅದನ್ನು ಸೂಚಿಸುತ್ತದೆ. ನಾವು ಇದ್ದಕ್ಕಿಂತ ಸೃಷ್ಟಿಯಾದವರಲ್ಲ. ನಮ್ಮ ಅಸ್ತಿತ್ವವು ಪಾಪವಲ್ಲ. ಚರಿತ್ರೆಯು ಬರೀ ಕಥನವೂ ಅಲ್ಲ. ನಮ್ಮ ಅನೀರಿಕ್ಷಿತವಲ್ಲವೆಂದು ಬೆಂಜಮಿನ್ ಹೇಳುತ್ತಾನೆ. ಅದು ಕಲ್ಪಿತವಲ್ಲ. ಅದು ಸತ್ಯವೂ ಹೌದು. ಆದರೆ ನಾವು ಏನು ಮಾಡುತ್ತೇವೆಂದರೆ ಚರಿತ್ರೆಯನ್ನು ವರ್ಗೀಕರಿಸುತ್ತೇವೆ. ಚರಿತ್ರೆಯ ವರ್ಗೀಕರಣವೆಂದರೆ ಮೇಜರ್ ಮತ್ತು ಮೈನರ್. ಚರಿತ್ರೆಯನ್ನು ನಾವು ಸತ್ಯವೆಂದು ಗ್ರಹಿಸಲು ಹೋದರೆ ಅದರಲ್ಲಿ ಈ ವರ್ಗೀಕರಣವು ಬರುವುದಿಲ್ಲ. ಸತ್ಯದಲ್ಲಿ ಮೇಜರ್ ಮತ್ತು ಮೈನರ್

ಎಂಬ ವ್ಯತ್ಯಾಸವಿದೆಯೇ ಎನ್ನುವುದು ಮಾರ್ಕ್ಸವಾದದ ನಿಲುವು. ಚರಿತ್ರೆಯು ಆಗಿರುವುದು. ಅದನ್ನು ಒರಸಿ ಹಾಕಲು ಬರುವುದಿಲ್ಲ. ಯಾವುದು ನಡೆದಿದೆಯೋ ಅದು ನಿಜವಾಗಿ ಆಗಿ ಹೋಗಿದೆ. ಮತ್ತು ಅದನ್ನು ಬೇರೆ ಬೇರೆ ಹಿನ್ನೆಲೆಯಲ್ಲಿಯೂ ಅರ್ಥ ಮಾಡಿಕೊಳ್ಳಬೇಕು. ಸತ್ಯವು ನಮ್ಮಿಂದ ಓಡಿಹೋಗಿ ಎಲ್ಲೋ ಅಡಗಿ ಕೂತುಕೊಳ್ಳುವುದಿಲ್ಲ. ಚರಿತ್ರೆಯನ್ನು ಅನೇಕರು ಅಲೌಕಿಕವೆಂದು ಅನೇಕರು ಭಾವಿಸುತ್ತಾರೆ. ಆದರೆ ಮಾರ್ಕ್ಸವಾದದ ಪ್ರಕಾರ ಅದು ಅಲೌಕಿಕವಲ್ಲ. ಅದು ಮನುಷ್ಯರಿಗೆ ಸಂಬಂಧ ಪಟ್ಟದ್ದೂ ಹೌದು. ಆದರೆ ನಾವು ನಮ್ಮ ವರ್ತಮಾನದಿಂದಲೇ ಭೂತವನ್ನು ಕಟ್ಟಿಕೊಳ್ಳುತ್ತೇವೆ. ಅದು ನಿಜವಾಗಿಯೂ ಏನಾಗಿತ್ತು ಎನ್ನುವುದೇ ಮುಖ್ಯವಾದ ಪ್ರಶ್ನೆ. ಅದು ನಮ್ಮ ನೆನಪೂ ಹೌದು. ನೆನಪು ಎನ್ನುವುದು ವಾಸ್ತವವಾಗಿ ಏಕ ಕೇಂದ್ರಿತವಾಗಿ ಇರಬೇಕಾಗಿಲ್ಲ. ಅದು ಆಳುವವರ ಕಥನವೂ ಹೌದು. ಮತ್ತು ಆಳಿಸಿಕೊಂಡವರ ಕತೆಗಳು ಕೂಡಾ ಹೌದು. ಚರಿತ್ರೆಯೆಂದರೆ ಅದು ಹೋರಾಟಗಳ ಕಥನವೂ ಅಲ್ಲ. ಅನೇಕ ಹೋರಾಟಗಳು ನಮ್ಮನ್ನು ನಿಯಂತ್ರಿಸಿದ್ದೂ ಹೌದು. ಪರಂಪರೆಯಲ್ಲಿ ಅವುಗಳು ನಡೆದು ಹೋಗಿವೆ. ಆದ್ದರಿಂದ ಅದನ್ನು ನಾವು ಅರ್ಥ ಮಾಡಿಕೊಳ್ಳುವಾಗ ಎಚ್ಚರದಲ್ಲಿ ಇರಬೇಕು. ಚರಿತ್ರೆಯ ಯಾವಾಗಲೂ ನಮ್ಮಲ್ಲಿ ಕೆಲವು ಸೂಚನೆಗಳನ್ನು ಕೊಡುತ್ತವೆ. ಯಾವುದೇ ಯುದ್ಧ ನಡೆದಿದ್ದರೂ ಕೂಡಾ ಚರಿತ್ರೆಯನ್ನು ನಿಯಂತ್ರಿಸಲು ಆಗಲಿಲ್ಲ. ಹಾಗೆ ನೋಡುವುದಿದ್ದರೆ ಯಾವುದೇ ಯುದ್ಧಗಳು ನಮ್ಮಲ್ಲಿ ಕೇವಲ ದುಃಖವನ್ನು ಮಾತ್ರವೇ ಬಿಟ್ಟು ಹೋಗಿವೆ. ಯುದ್ಧಗಳನ್ನು ನೀತಿಶಾಸ್ತ್ರಗಳು ಕೂಡಾ ನಿಯಂತ್ರಿಸಲು ಶಕ್ತವಾಗಲಿಲ್ಲ. ಇಲ್ಲಿ ಮತ್ತೊಂದು ಅಂಶವನ್ನು ನಾವು ನೆನಪಿನಲ್ಲಿಡಬೇಕು: ಚರಿತ್ರೆಯನ್ನು ಸಂಸ್ಕೃತಿಗಿಂತ ಭಿನ್ನವಾಗಿ ನೋಡಲು ಬರುವುದೂ ಇಲ್ಲ. ಇಸವಿಗಳೇ ಚರಿತ್ರೆಯಲ್ಲ ಯಾರನ್ನು ನಾವು ಸಾಂಪ್ರದಾಯಿಕ ಬುದ್ಧಿಜೀವಿಗಳು ಎಂದು ಹೇಳುತ್ತೇವೆಯೋ ಅವರು ಉತ್ಪಾದನೆಯಲ್ಲಿ ನೇರವಾದ ಪಾತ್ರವನ್ನು ವಹಿಸುತ್ತಾರೆ. ಅವರ ವರ್ಗವು ಹೆಚ್ಚು ಸ್ಪಷ್ಟವಾಗಿ ನಮಗೆ ಕಾಣಿಸುತ್ತದೆ. ಬೂರ್ಜ್ವಾ ಬುದ್ಧಿಜೀವಿಗಳು ವಹಿಸುವ ಪಾತ್ರಕ್ಕೂ ಇವರಿಗೂ ತುಂಬಾ ವ್ಯತ್ಯಾಸವಿದೆ. ಇದರ ಇನ್ನೊಂದು ಪ್ರಶ್ನೆಯನ್ನು ನಾವು ನೋಡಬೇಕಾಗುತ್ತದೆ. ನಾವು ಯಾವುದನ್ನು ಆಲೋಚನೆ ಮಾಡುತ್ತೇವೆಯೋ ಅದರ ರೂಪವು ನಮಗೆ ನಿರ್ಧಾರವಾಗುವುದು ನಮ್ಮ ಪ್ರಜ್ಞೆಯಲ್ಲಿ. ಆಲೋಚನೆ ಎನ್ನುವುದು ನಮಗೆ ಪ್ರಾತಿನಿಧಿಕವೂ ಆಗಿರುತ್ತದೆ. ನಮ್ಮ ಆಲೋಚನೆ ಎನ್ನುವುದು ಯಾವಾಗಲೂ ಈ ದೃಷ್ಟಿಯಿಂದ ಬೇರೆಯಾಗುತ್ತವೆ. ಇದರ ಜೊತೆಗೆ ನಾವು ನಮ್ಮ ಆವಶ್ಯಕತೆಗೆ ಹೇಗೆ ಬೇರೆ ಬೇರೆ ಆಯಾಮವು ಇರುತ್ತದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ನಮ್ಮ ಪ್ರಜ್ಞೆಯು ನಮ್ಮ ಜೀವನದ ಕ್ರಮವನ್ನು ನಿರ್ಧಾರ ಮಾಡುತ್ತದೆ. ಎಂದು ಮಾರ್ಕ್ಸವಾದವು ಹೇಳುತ್ತದೆ. ಇಲ್ಲಿ ಇನ್ನೊಂದು ಸಂಗತಿಯನ್ನು ನಾವು ಹೇಳಬೇಕು: ನಮ್ಮ ಅನೇಕ ಆಲೋಚನೆ ಮತ್ತು ಅನೇಕ ಸಂಗತಿಗಳು ಚರಿತ್ರೆ ಮತ್ತು ಸಾಮಾಜಿಕ ಕಾರಣದಿಂದ ಬರುತ್ತವೆ. ಯಾವುದು ನಮ್ಮ ಆಲೋಚನೆಯು ಆಗುತ್ತದೆಯೋ ಅದು ಬೇರೆ ಬೇರೆ ಉತ್ಪಾದನೆಗಳನ್ನು ಮಾಡುತ್ತದೆ..

ಒಂದು ಸಮಾಜದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಾಗ ನಾವು ಬುದ್ಧಿಜೀವಿಗಳು ಮತ್ತು ಅವರ ಪಾತ್ರವನ್ನೂ ಗಮನಿಸಬೇಕಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಚರಿತ್ರೆಯಲ್ಲಿ ಅವರದೂ ಒಂದು ಪಾತ್ರವಿದೆ. ಇಲ್ಲಿ ಎರಡು ಸಂಗತಿಗಳನ್ನು ನಾವು ಗಮನಿಸಬೇಕು:

ಮೊದಲನೆಯದಾಗಿ ಈ ಗುಂಪು ಅತ್ಯಂತ ಸಹಜವಾಗಿ ರೂಪುಗೊಳ್ಳುತ್ತದೆ. ಅವರದೂ ಒಂದು ಪಾತ್ರವಿದೆ. ಅವರಿಗೂ ಒಂದು ಸಮಾಜದಲ್ಲಿ ಪಾತ್ರವಿದೆ. ಒಂದು ಸಾಮಾಜಿಕ ಗುಂಪು ಎಂದು ಹೇಳುವಾಗ ಅವನು ಉತ್ಪಾದನೆ ಮತ್ತು ಅದರ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಗುಂಪು ಎಂದು ಹೇಳುತ್ತಾನೆ. ಹಾಗೆ ನೋಡಿದರೆ ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಬುದ್ಧಿಜೀವಿಗಳು ಮತ್ತು ಅವರ ಕ್ರಿಯಾಶೀಲತೆಯು ಅತ್ಯಂತ ಮುಖ್ಯವಾಗಿದೆ. ಬುದ್ಧಿಜೀವಿಗಳು ಮತ್ತು ಅವರ ತಜ್ಞತೆಯು ಒಂದು ಥರ ಇರುತ್ತದೆ. ಆದರೆ ತಳಮಟ್ಟದಲ್ಲಿ ಇರುವ ಜನರು ಬೇರೆ ಬಗೆಯ ಅನುಭವವನ್ನು ಹೊಂದಿರುತ್ತಾರೆ. ಯಾರು ವಿಶೇಷವಾದ ಒಂದು ತಜ್ಞತೆಯನ್ನು ಹೊಂದಿರುತ್ತಾರೆಯೋ ಅವರು ಬರೀ ತಾಂತ್ರಿಕವಾದ ಕುಶಲ ಕರ್ಮಿಗಳು ಆಗಿರುವುದಿಲ್ಲ..ಅವರು ಮತ್ತೊಂದು ಬಗೆಯ ಸಾಮಾಜಿಕ ಸಂಬಂಧವನ್ನು ಹೊಂದಿರುತ್ತಾರೆ. ಇದರಿಂದ ಯಾರು ಬಂಡವಾಳವನ್ನು ಹೂಡಿರುತ್ತಾರೆಯೋ ಅವರ ಪರವಾಗಿ ಈ ಬಗೆಯ ಬುದ್ಧಿಜೀವಿಗಳು ಕೆಲಸವನ್ನು ಮಾಡುತ್ತಾರೆ.,ಯಜಮಾನ ಮತ್ತು ಅವನ ನಂಬಿಕೆಗೆ ಸರಿಯಾಗಿ ಈ ಗುಂಪು ಕೆಲಸವನ್ನು ಮಾಡುವುದು ಸತ್ಯವಾಗಿದೆ. ಒಂದು ಹಂತದಲ್ಲಿ ಇವರು ಪ್ರಭುತ್ವದ ಪರವಾದ ಕೆಲಸವನ್ನೂ ಮಾಡುತ್ತಾರೆ. ಆದರೆ ಇದು ಅವರಿಗೆ ಅರ್ಥವಾಗದೆ ಹೋಗಬಹುದು. ಯಾರು ಈ ಕೆಲಸಗಳನ್ನು ಮಾಡುತ್ತಾರೆಯೋ ಅವರು ಒಂದು ಹಂತದಲ್ಲಿ ಕೆಲವು ವಿಷಯಗಳಲ್ಲಿ ಮಾತ್ರವೇ ಪರಿಣಿತಿಯನ್ನು ಹೊಂದಿರುತ್ತಾರೆ. ಆಗ ಅವರು ನಿರ್ದಿಷ್ಟವಾದ ಸಂಗತಿಗಳಿಗೆ ಮಾತ್ರವೇ ಬದ್ಧರಾಗಿರುತ್ತಾರೆ. ಬುದ್ಧಿಜೀವಿಗಳು ಒಂದು ಸಮಾಜದಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಗ್ರಾಂಶಿಯಲ್ಲಿ ಇದು ವಿಶಿಷ್ಟವಾದ ಚರ್ಚೆಯಾಗಿದೆ ಎಂದು ಈ ಮೊದಲು ಹೇಳಲಾಗಿದೆ. ಅವರ ಅರಿವು ಅತ್ಯಂತ ಮುಖ್ಯ. ಅವರಿಗೆ ರಾಜಕೀಯವಾದ ಒಂದು ನಿಲುವು ಇರುತ್ತದೆ. ಅವರ ತಿಳುವಳಿಕೆಯು ಒಂದು ಸಿದ್ಧಾಂತವನ್ನು ಕಟ್ಟುತ್ತದೆ. ಅದು ಸಮಾಜ ಮತ್ತು ರಾಜಕೀಯವಾದ ಅರಿವೂ ಹೌದು. ಆಧುನಿಕ ಸಮಾಜದಲ್ಲಿ ತಾಂತ್ರಿಕ ಶಿಕ್ಷಣವು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮವು ಏನು ಎಂದು ಅವನು ವಿವರಿಸುತ್ತಾನೆ. ಆದರೆ ಇವರು ಆಧುನಿಕ ಶಿಕ್ಷಣವನ್ನು ಪಡೆಯುವ ಮೂಲಕ ಆಧುನಿಕ ಬಂಡವಾಳವಾದಕ್ಕೆ , ಕೈಗಾರಿಕೆಗಳಿಗೆ ಬೇಕಾದ ಆವಶ್ಯಕತೆಯನ್ನು ಪೂರೈಸುತ್ತಾರೆ. ತಾಂತ್ರಿಕವಾದ ಜ್ಞಾನವು ಒಂದು ಬಗೆಯಲ್ಲಿ ಇದ್ದರೆ ವೈದ್ಯಕೀಯ ಜ್ಞಾನವು ಮತ್ತೊಂದು ಬಗೆಯಲ್ಲಿ ಇರುತ್ತದೆ. ಇದು ನೇರವಾಗಿ ಇರುವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಯತ್ನವನ್ನು ಮಾಡುತ್ತದೆ. ಬೌದ್ಧಿಕವಾದ ಜಗತ್ತು ಬದಲಾಗುತ್ತದೆ. ಅದನ್ನು ಹೊಸ ರೂಪದ ಜ್ಞಾನ ಮಾದರಿಗಳು ಎಂದು ಹೇಳಬೇಕಾಗುತ್ತದೆ. ಇದು ಅರ್ಥಶಾಸ್ತ್ರದ ಹೊಸದಾದ ಪರಿಭಾಷೆಯೂ ಹೌದು.

ಸಂಪ್ರದಾಯವು ಕೆಲವು ಮಾದರಿಗಳನ್ನು ಸೃಷ್ಟಿಸುತ್ತದೆ. ಅದರಲ್ಲಿ ಜ್ಞಾನವೂ ಒಂದು. ಆಧುನಿಕ ಜ್ಞಾನದ ಮಾದರಿಯಲ್ಲಿ ಅದು ಇರುವುದಿಲ್ಲ. ಆಧುನಿಕ ಮತ್ತು ಸಾಂಪ್ರದಾಯಿಕ ಜ್ಞಾನಗಳ ರೂಪಕ್ಕೆ ಭಿನ್ನತೆಗಳು ಇವೆ. ಈಗ ಜ್ಞಾನಕ್ಕೆ ಮತ್ತು ಉದ್ಯೋಗಕ್ಕೆ ಒಂದು ಸಂಬಂಧವು ಇದೆ. ವಿದ್ಯಾಭ್ಯಾಸ ಮತ್ತು ಉದ್ಯೋಗ ಎನ್ನುವುದರ ಸಂಬಂಧ ಈವತ್ತು ಬೇರೆ ಬೇರೆ ವಲಯವನ್ನು ಸೃಷ್ಟಿ ಮಾಡಿದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ಆಧುನಿಕ ಶಿಕ್ಷಣವು ಹಳೆಯ ಜ್ಞಾನವನ್ನು ನಿರಾಕರಿಸುತ್ತದೆ ಎನ್ನುವುದು ಅವನ ನಿಲುವು. ಸಂಪ್ರದಾಯ ಮತ್ತು

ಆಧುನಿಕ ಎನ್ನುವುದಕ್ಕೆ ಅತ್ಯಂತ ವಿಶಾಲವಾದ ವ್ಯಾಪ್ತಿಯೂ ಇದೆ. ಇದು ಸಾಂಸ್ಕೃತಿಕ ಉತ್ಪಾದನೆಯ ಮೇಲೆಯು ಪರಿಣಾಮವನ್ನು ಬೀರುತ್ತದೆ. ಹಾಗೆ ನೋಡಿದರೆ ಜ್ಞಾನವು ಒಂದು ಬಗೆಯದೇ ಆಗಿರುವುದು ಇಲ್ಲ. ಜ್ಞಾನ ಎನ್ನುವುದು ನಮಗೆ ಮತ್ತೆ ಇನ್ನೊಂದು ಸಂಗತಿಯನ್ನು ಹೇಳುತ್ತದೆ. ಪರಂಪರೆಯಲ್ಲಿ ಬರುವ ಜ್ಞಾನವನ್ನು ಲಿಖಿತವಾದ ರೂಪದಲ್ಲಿ ಕಾಣುವುದು ಸಾಧ್ಯವಿಲ್ಲ. ಸೊರೆ ಕಾಯಿಯನ್ನು ಬೆಳೆಯುವುದು ಹೇಗೆ ಎನ್ನುವುದನ್ನು ಹಿಂದಿನವರು ಮಾತಿನಲ್ಲಿ ಹೇಳುತ್ತಿದ್ದರು ಆದರೆ ಇವು ಬರಹದಲ್ಲಿ ಇಲ್ಲ. ಹಾಗೆಂದು ಅದು ಜ್ಞಾನವೇ ಅಲ್ಲ ಎಂದು ಹೇಳುವಂತೆ ಇಲ್ಲ. ಆದ್ದರಿಂದ ನಾವು ಇದಕ್ಕೆ ಹೆಚ್ಚು ಮಹತ್ವವವನ್ನು ಕೊಡಬೇಕಾಗುತ್ತದೆ. ಒಂದು ಸಮಾಜದಲ್ಲಿ ಪಾರಂಪರಿಕವಾದ ಜ್ಞಾನ ಮತ್ತು ಆಧುನಿಕ ಜ್ಞಾನಗಳು ಹೇಗೆ ಬರುತ್ತವೆ ಎನ್ನುವುದು ಗ್ರಾಂಶಿಗೆ ಅತ್ಯಂತ ಮುಖ್ಯ.

ಇದನ್ನು ಗ್ರಾಂಶಿಯು ಹೇಳುವಾಗ ಅವನ ಮನಸ್ಸಿನಲ್ಲಿ ಕ್ರಾಂತಿ ಮತ್ತು ಅದರ ಅಪಕಲ್ಪನೆಯು ಸೇರಿಕೊಂಡಂತೆ ಭಾಸವಾಗುತ್ತದೆ. ಆಧುನಿಕ ಬಂಡವಾಳವು ಈವತ್ತು ಕ್ರಾಂತಿಯಾಗದ ಹಾಗೆ ನೋಡುತ್ತದೆ. ಆದರೆ ಇದು ಸಮಾಜ ಮತ್ತು ಅದರ ರೂಪೀಕರಣವನ್ನು ಹೇಳುತ್ತದೆ. ಅಂತರಾಷ್ಟ್ರೀಯ ಸಾಮಾಜಿಕ ಸಿದ್ಧಾಂತ ಮತ್ತು ಅದರ ಸ್ವರೂಪವನ್ನು ಹೇಳುವಾಗ ಗ್ರಾಂಶಿಯು ನಿಷ್ಕ್ರಿಯವಾದ ಕ್ರಾಂತಿಯನ್ನು ಹೇಳುತ್ತಾನೆ. ಇದರಲ್ಲಿ ರಾಜಕೀಯ ಒತ್ತಡವೂ ಇದೆ ಎನ್ನುವುದು ಅವನ ಅಭಿಪ್ರಾಯ.

ಗ್ರಾಂಶಿಯು ಅತ್ಯಂತ ಮಹತ್ವದ ಚಿಂತಕರಲ್ಲಿ ಒಬ್ಬ ಅವನ ಬರಹಗಳು ನಮ್ಮ ಮೇಲೆ ವಿವಿಧ ರೀತಿಯಲ್ಲಿ ಪ್ರಭಾವ ಬೀರಿದೆ. ಸ್ವತಃ ಹೋರಾಟಗಾರನಾಗಿದ್ದ ಗ್ರಾಂಶಿಯು ಅನೇಕ ರೀತಿಯ ಟಿಪ್ಪಣಿಗಳನ್ನು ತನ್ನ ನೋಟ್ ಬುಕ್‌ನಲ್ಲಿ ಹೇಳಿದ್ದಾನೆ. ಅವನು ಅತ್ಯಂತ ಮುಖ್ಯವಾಗಿ ತಾತ್ವಿಕತೆಯನ್ನು ತನ್ನ ಎಲ್ಲಾ ಬರಹಗಳಲ್ಲಿ ಮತ್ತೆ ಮತ್ತೆ ಹೇಳಿದ್ದಾನೆ. ಸಮಾಜ ಮತ್ತು ಅದರ ಅಧ್ಯಯನಕ್ಕೆ ನಮಗೆ ಅವನ ನಿಲುವುಗಳು ಉಪಯುಕ್ತವಾಗುತ್ತದೆ. ಸಮಾಜ ಮತ್ತು ಅದರ ಕುರಿತಾದ ಚಿಂತನೆಗೆ ನಮಗೆ ಹೆಚ್ಚು ಅನುಕೂಲವನ್ನು ಒದಗಿಸುವುದು ತಾತ್ವಿಕತೆಯೇ. ಯಾವುದು ನಮ್ಮ ಸಾಮಾಜಿಕ ಜ್ಞಾನವು ಆಗಿದೆಯೋ ಅದರ ಮೂಲವು ಇರುವುದು ತಾತ್ವಿಕ ಗ್ರಹಿಕೆಯಲ್ಲಿ ಎನ್ನುವುದು ಸ್ಪಷ್ಟ. ತತ್ವಜ್ಞಾನದಲ್ಲಿಯೂ ಅತ್ಯಂತ ಮುಖ್ಯವಾಗಿರುವುದು ತಾತ್ವಿಕತೆ. ತಾತ್ವಿಕತೆಯೆನ್ನುವುದು ನಮಗೆ ಸಮಾಜದ ಜೊತೆಗೆ ಸಂಬಂಧವನ್ನು ಬೆಳೆಸಲು ಅವಕಾಶವನ್ನು ಮಾಡಿಕೊಡುತ್ತವೆ. ಅದನ್ನು ನಾವು ವಸ್ತುನಿಷ್ಟವಾಗಿಯೂ ನೋಡಬೇಕಾಗುತ್ತದೆ. ತಾತ್ವಿಕತೆ ಎನ್ನುವುದು ನಮಗೆ ಅತ್ಯಂತ ಮಹತ್ವದ್ದು. ಅದನ್ನು ಒಂದು ಪರಿಕರವಾಗಿಯೂ ಬಳಸಬೇಕಾಗುತ್ತದೆ. ತಾತ್ವಿಕತೆಯ ರೂಪಗಳು ಮತ್ತು ಸಾಮಾಜಿಕ ರಚನೆಗಳು ಹಾಗೂ ಆರ್ಥಿಕತೆಗಳ ನಡುವೆ ಸಂಬಂಧವನ್ನು ಬೆಸೆಯುವುದು ತಾತ್ವಿಕತೆ. ಆದ್ದರಿಂದ ತಾತ್ವಿಕತೆ ಎನ್ನುವುದು ನಮಗೆ ಒಂದು ಅರ್ಥದಲ್ಲಿ ಒಂದು ಸೇತುವೆಯಂತೆ ಕೆಲಸವನ್ನು ಮಾಡುತ್ತದೆ. ಆದರಲ್ಲಿಯೂ ನಮಗೆ ಮಾರ್ಕ್ಸವಾದಿ ಅಧ್ಯಯನ ಕ್ರಮವು ನಮಗೆ ತಾತ್ವಿಕತೆಯು ಕುರಿತು ಮುಖ್ಯವಾದ ನಿಲುವನ್ನು ವ್ಯಕ್ತ ಮಾಡಿದೆ. ಅಲ್ತೂಸರ್ ತಾತ್ವಿಕತೆಯನ್ನು ಸಮಾಜ ಮತ್ತು ಅದರ ಸಮಗ್ರತೆಯ ಭಾಗವಾಗಿ ಇರುತ್ತದೆ. ಅದು ವಿಷಯ ನಿಷ್ಟವಲ್ಲ ಎಂದು ಹೇಳುತ್ತಾನೆ. ಆದರೆ ಗ್ರಾಂಶಿಯು ತಾತ್ವಿಕತೆ ಮತ್ತು ಅದರ

ಸ್ವರೂಪವನ್ನು ವಿವರಿಸುವಾಗ ಅದನ್ನು ಸಮಾಜದ ಭಾಗವಾಗಿಯೂ ನೋಡುತ್ತಾನೆ. ಸಮಾಜ ಮತ್ತು ಅದರ ಸಮಗ್ರತೆಯು ಹೇಗೆ ಒಂದು ತಾತ್ವಿಕತೆಯನ್ನು ರೂಪಿಸುತ್ತದೆ ಎನ್ನುವುದು ಅವನ ಚರ್ಚೆಯ ಕೇಂದ್ರವೂ ಆಗಿದೆ. ಗ್ರಾಂಶಿಯು ಚರಿತ್ರೆ ಮತ್ತು ಅದರ ಬ್ಲಾಕ್ ಹೇಗೆ ತಾತ್ವಿಕತೆಯನ್ನು ನಿರ್ವಹಿಸುತ್ತದೆ ಎಂದೂ ವಿವರಿಸುತ್ತಾನೆ. ಚರಿತ್ರೆಯು ಅನೇಕವನ್ನು ರೂಪಿಸುತ್ತದೆ. ಚರಿತ್ರೆಯು ರೂಪವಾಗುತ್ತದೆ. ಆದರೆ ಅದರ ಸ್ವರೂಪವು ಆಗಾಗ ತನ್ನ ಚಹರೆಯನ್ನು ಬದಲಿಸುತ್ತದೆ. ಆದರೆ ತಾತ್ವಿಕತೆಯನ್ನು ಕುರಿತು ವಿವರಿಸುವಾಗ ಸಾಮಾನ್ಯ ಜ್ಞಾನ ಮತ್ತು ಅದರ ಸ್ವರೂಪವನ್ನು ಒಂದು ಹರಡಿಕೊಂಡ ಕ್ರಮವಾಗಿ ನೋಡುತ್ತಾನೆ. ಚರಿತ್ರೆಯು ಯಾವುದನ್ನು ರೂಪಿಸುತ್ತದೆ ಅದನ್ನು ಗ್ರಾಂಶಿಯು ಅತ್ಯಂತ ಮುಖ್ಯವಾದ್ದು ಎಂದು ಭಾವಿಸುತ್ತಾನೆ. ನಮಗೆ ಇರುವ ಜ್ಞಾನ ಮತ್ತು ಅದರ ರೂಪಗಳು ಹೇಗೆ ನಮಗೆ ಸಮಾಜವನ್ನು ನೋಡಲು ಸಹಾಯವನ್ನು ಮಾಡುತ್ತದೆ ಎಂದು ಹೇಳುತ್ತಾನೆ. ಒಂದು ಸಮಾಜ ಮತ್ತು ಅದರ ರಚನೆಗಳು ಯಾವ ರೀತಿಯಲ್ಲಿ ಇರುತ್ತದೆಯೋ ಅದರ ಸ್ವರೂಪಕ್ಕೆ ಅನುಸಾರವಾಗಿ ಭಿನ್ನವಾದ ಜ್ಞಾನಗಳು ರೂಪಿಸಲ್ಪಡುತ್ತವೆ. ಜ್ಞಾನ ಎನ್ನವುದು ಈ ಅರ್ಥದಲ್ಲಿ ನಮಗೆ ಒಂದು ನಿರ್ದಿಷ್ಟವಾದ ಚೌಕಟ್ಟು ಕೂಡಾ ಆಗಿದೆ. 1930ರಲ್ಲಿ ಗ್ರಾಂಶಿಯು ಬರೆದುದು ಅನಂತರ ಬೇರೆ ಬೇರೆ ತಾತ್ವಿಕ ನೆಲೆಯನ್ನು ಪಡೆದುಕೊಂಡಿರುವುದು ನಿಜ.

ತಾತ್ವಿಕತೆಯನ್ನು ಗ್ರಾಂಶಿಯು ಅತ್ಯಂತ ವಿಶಿಷ್ಟವಾಗಿ ಹೇಳಿದ್ದಾನೆ. ಸಂವೇದನೆ ಮತ್ತು ತಾತ್ವಿಕತೆಗೆ ಸಂಬಂಧವು ಇದೆ ಎನ್ನುವುದು ಅವನ ಮೊದಲ ವಾದ. ಹಾಗೆ ನೋಡಿದರೆ ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಾದ ಲೇಖಕರಲ್ಲಿ ಗ್ರಾಂಶಿಯು ಒಬ್ಬ. ಅವನು ತನ್ನ ನೋಟ್ ಬುಕ್‌ನಲ್ಲಿ ತಾನು ಹೇಗೆ ಫ್ರೆಂಚ್‌ನ ಹದಿನೆಂಟನೆಯ ಶತಮಾನದ ಭೌತಿಕವಾದದ ಪ್ರಭಾವವನ್ನು ಅವನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದ್ದಾನೆ. ಫ್ರೆಂಚ್ ಭೌತಿಕವಾದಿ ನಿಲುವು ಬರೀ ಭೌತಿಕವಾದಿ ನಿಲುವು ಮಾತ್ರವೇ ಅಲ್ಲ. ಅದರಲ್ಲಿ ಮುಖ್ಯವಾಗಿ ವಿಜ್ಞಾನದ ಪ್ರಭಾವವನ್ನು ನಾವು ಕಾಣುತ್ತೇವೆ. ಅದರ ವಿಶ್ಲೇಷಣೆಯ ಕ್ರಮವು ಆನ್ವಯಿಕ ವಿಜ್ಞಾನವೂ ಆಗಿದೆ. ಅಂದರೆ ಅದು ಆಲೋಚನೆ ಮತ್ತು ಅದರ ಹಿಂದೆ ಇರುವ ತರ್ಕವನ್ನು ಯೋಚಿಸಿಕೊಳ್ಳುತ್ತದೆ. ಗ್ರಾಂಶಿಯು ನಮಗೆ ಆಲೋಚನೆಯ ವಿಶ್ಲೇಷಣೆ ಎಂದು ತಿಳಿಸುತ್ತಾನೆ. ಮೂಲ ಆಲೋಚನೆ ಮತ್ತು ಅದರ ಹುಡುಕಾಟವನ್ನು ಅವನು ಮುಖ್ಯವೆಂದು ಪರಿಗಣಿಸುತ್ತಾನೆ. ಆಲೋಚನೆ ಮತ್ತು ಅದರ ಅಂಶಗಳು ನಮ್ಮ ಸಂವೇದನೆಯನ್ನು ಬಿಟ್ಟು ಇರುವುದೂ ಇಲ್ಲ. ಅಂದರೆ ಅವನು ಹೇಳುವುದು ಸಂವೇದನೆಗೂ ಆಲೋಚನೆಗೂ ತಾತ್ವಿಕತೆಗೂ ಒಂದು ಸಂಬಂಧವು ಇದೆ. ವಾಸ್ತವವಾಗಿ ಟ್ರೆಸಿಯು ಹೇಳುವ ಮಾತನ್ನು ಇಲ್ಲಿ ಉಲ್ಲೇಖಿಸಬೇಕು: ರಾಜಕೀಯವಾಗಿ ನಮಗೆ ತಾತ್ವಿಕತೆ ಎನ್ನುವುದು ಅತ್ಯಂತ ಮುಖ್ಯವಾಗಿದೆ. ರಾಜಕೀಯ ಮತ್ತು ಸಾಮಾಜಿಕವಾದ ಕಾರಣದಿಂದ ತಾತ್ವಿಕ ದೃಷ್ಟಿಯನ್ನು ಹೊಂದುತ್ತೇವೆ. ಅದರ ಹೊರತು ನಾವು ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆಯನ್ನು ಮಾಡಲಾರೆವು. ವಿಜ್ಞಾನವು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಪಲ್ಲಟಕ್ಕೆ ಕಾರಣವೂ ಆಯಿತು. ವಿಜ್ಞಾನವು ನಮಗೆ ಹೊಸದಾದ ಅವಕಾಶವನ್ನು ಕಲ್ಪಿಸಿತು. ಅದರಿಂದ ನಾವು ಹೊಸದಾದ ಪ್ರಶ್ನೆಗಳನ್ನು ಕೇಳಿದೆವು. ಮನುಷ್ಯನು ಸ್ವತಂತ್ರನೇ?ಹೌದು

ಎಂದಾದರೆ ಎಷ್ಟರಮಟ್ಟಿಗೆ ಅವನು ಸ್ವತಂತ್ರನಾಗಿದ್ದಾನೆ? ಮನುಷ್ಯನು ಹೇಗೆ ಆಲೋಚನೆಯನ್ನು ಮಾಡುತ್ತಾನೆ ಮತ್ತು ಅದರ ಕಾರಣವು ಏನು ಎನ್ನುವುದನ್ನು ವಿಜ್ಞಾನವು ನಮಗೆ ತಿಳಿಸಿಕೊಟ್ಟಿತು. ವಿಜ್ಞಾನವು ನಮಗೆ ಹೊಸದಾದ ಸನ್ನಿವೇಶವನ್ನು ಸೃಷ್ಟಿಸಿಕೊಟ್ಟಿತು. ಸಮಾಜದಲ್ಲಿ ಸಾಂಪ್ರದಾಯಿಕ ಜನರಿಗೆ ಇದ್ದ ಅವಕಾಶಕ್ಕಿಂತ ಹೆಚ್ಚಿನ ಅವಕಾಶವನ್ನು ನಮಗೆ ಅದು ಕೊಟ್ಟಿತು. ಅವರಿಗೆ ಇದ್ದ ಶಕ್ತಿಯು ಒಂದು ಬಗೆಯದು. ಆದರೆ ನವೀನ ಮನುಷ್ಯರಿಗೆ ಹೆಚ್ಚು ಅವಕಾಶವು ಸಿಕ್ಕಿತು. ತಂತ್ರಜ್ಞಾನವು ಸಿಕ್ಕಿತು. ವಿಜ್ಞಾನದಿಂದ ನಮಗೆ ಹೊಸದಾದ ಆಲೋಚನೆಯು ದೊರೆಯಿತು. ವಿಜ್ಞಾನವನ್ನು ಜನರು ಹೇಗೆ ಬಳಸಿಕೊಳ್ಳುತ್ತಾರೆ ಎನ್ನುವುದು ಬೇರೆ ಪ್ರಶ್ನೆ. ವಿಜ್ಞಾನವನ್ನು ಮತ್ತುಅದರ ಪರಿಣಾಮವನ್ನು ಮೊದಲೇ ಊಹಿಸುವುದು ಅಶಕ್ಯವಾಗಿತ್ತು. ಗ್ರಾಂಶಿಯು ಈ ಪಲ್ಲಟವನ್ನು ಗಮನಿಸಿದ್ದ. ಚರಿತ್ರೆಯು ಹೇಗೆ ಬದಲಾಗುತ್ತದೆ ಎನ್ನುವುದು ಅವನಿಗೆ ಗೊತ್ತಾಗಿತ್ತು. ವಿಜ್ಞಾನವು ಹೇಗೆ ನಮ್ಮ ಆಲೋಚನೆಯನ್ನು ಬದಲಿಸುತ್ತದೆ ಮತ್ತು ಅದರ ಮೂಲಕ ಹೇಗೆ ಒಂದು ತಾತ್ವಿಕತೆಯನ್ನು ಹುಟ್ಟು ಹಾಕುತ್ತದೆ ಎಂದು ಗ್ರಾಂಶಿಯು ಗ್ರಹಿಸಿದ್ದರಿಂದಲೇ ಅವನು ತಾತ್ವಿಕತೆಯನ್ನು ಒಂದು ಸ್ಥಳ ಮತ್ತು ಕಾಲದ ಆಧಾರದ ಮೂಲಕವೇ ಗ್ರಹಿಸುತ್ತಾನೆ. ಚರಿತ್ರೆ ಮತ್ತು ತಾತ್ವಿಕತೆಯು ಹೇಗೆ ಜೊತೆಯಲ್ಲಿ ಹೋಗುತ್ತವೆ ಎನ್ನುವುದು ಅವನಿಗೆ ಮುಖ್ಯವಾಗುತ್ತದೆ. ಚರಿತ್ರೆಯಲ್ಲಿ ತಾತ್ವಿಕತೆಯು ತರ್ಕ ರಹಿತವಾದ್ದು ಎಂದು ಹೇಳಲು ಬರುವುದಿಲ್ಲ. ಅದರ ರೂಪವು ಆಗುತ್ತದೆ. ಅಂದರೆ ಅದು ಏಕಾ ಏಕಿ ನಿರ್ಧಾರವಾಗುವ ಸಂದರ್ಭವಲ್ಲ. ಅದು ಚಲನೆ. ಅದಕ್ಕೆ ಒಂದು ಪ್ರತ್ಯೇಕವಾದ ಒಂದು ನಿರ್ದಿಷ್ಟವಾದ ಗುಣವು ಇರುತ್ತದೆ ಎಂದು ಹೇಳುವುದು ಅಸಾಧ್ಯ. ಅದಕ್ಕೆ ಅದರದೇ ಆದ ಒಂದು ಸಾಮಾಜಿಕ ಮತ್ತು ರಾಜಕೀಯವಾದ ಸಂಬಂಧವೂ ಇರುತ್ತದೆ. ಈ ದೃಷ್ಟಿಯಿಂದ ಭೌತವಾದಿ ಚಿಂತನೆಯು ತಾತ್ವಿಕತೆಗೆ ಅತ್ಯಂತ ಮಹತ್ವದ ಕೊಡುಗೆಯನ್ನು ಕೊಟ್ಟಿದೆ. ಅದನ್ನು ರಾಜಕಾರಣವೆಂಬ ಮೇಲುರಚನೆಯ ಜೊತೆಗೆ ನಾವು ನೋಡಬೇಕಾಗುತ್ತದೆ. ಪ್ರಿಸನ್ ನೋಟ್ಬುಕ್ ಕೃತಿಯಲ್ಲಿ ಗ್ರಾಂಶಿಯು ನಮಗೆ ಈ ದೃಷ್ಟಿಯಿಂದ ಕೆಲವು ಒಳನೋಟವನ್ನು ಕೊಡುತ್ತಾನೆ. ರಾಜಕಾರಣ ಮತ್ತು ಚರಿತ್ರೆ ಎರಡೂ ಅವನಿಗೆ ಅತ್ಯಂತ ಅಗತ್ಯ. ಆದರೆ ಅದಕ್ಕೆ ಒಂದು ನಿಯಮವು ಇರುತ್ತದೆ. ವಿಜ್ಞಾನದಲ್ಲಿ ಆಲೋಚನೆ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ. ವಿಜ್ಞಾನದ ಪ್ರಕಾರ ಆಲೋಚನೆ ಮತ್ತು ಅದರ ಚಹರೆಗಳು ಒಂದು ಬಗೆಯವು. ಆದರೆ ಅದನ್ನೇ ನಾವು ಮಾನವಿಕಗಳಲ್ಲಿ ಆಲೋಚನೆ ಎಂದು ಹೇಳುವಾಗ ಬೇರೆ ಥರ ಹೇಳುತ್ತೇವೆ. ಇದನ್ನು ಹೀಗೆಯೂ ಹೇಳಬಹುದು: ಒಬ್ಬ ವ್ಯಕ್ತಿಯು ಹೇಗೆ ತನ್ನ ಆಲೋಚನೆಯನ್ನು ವ್ಯಕ್ತಮಾಡುತ್ತಾನೆಯೋ ಅದು ತಾತ್ವಿಕ ರೂಪವನ್ನು ಪಡೆಯುತ್ತದೆ. ಮೊದಲು ಚರಿತ್ರೆಯಲ್ಲಿ ತಾತ್ವಿಕತೆಯು ಹೇಗೆ ಭೌತಿಕವಾದ ರೂಪವನ್ನು ಹೊಂದಿದ್ದವೋ ಅದು ಅನಂತರ ರಾಜಕೀಯ ಮತ್ತು ಸಾಂಸ್ಕೃತಿಕವಾದ ಅರ್ಥವನ್ನು ಪಡೆದುಕೊಂಡಿತು. ತಾತ್ವಿಕತೆ ಎನ್ನುವುದು ಒಂದು ಪರಿಕಲ್ಪನೆಯು ಆಗಿದೆ. ಅದೇ ಹೊತ್ತಿಗೆ ಅದು ಸೈದ್ಧಾಂತಿಕವೂ ಆಗಿದೆ. ಆದ್ದರಿಂದ ಗ್ರಾಂಶಿಯಲ್ಲಿ ತಾತ್ವಿಕತೆಯೆ ಭಿನ್ನವಾದ ಚರ್ಚೆಯನ್ನು ಒಳಗೊಳ್ಳುತ್ತದೆ. ತಾತ್ವಿಕತೆಗೆ ಒಂದು ನಿಜವಾದ ಪದವೆಂದರೆ ನಿಯಮಬದ್ಧವಾದ ನಿರೂಪಣೆ. ಅದನ್ನು ಅಶಾಸ್ತ್ರ ಮಾಡಬೇಕಾದ ಅಗತ್ಯವು ಇಲ್ಲ. ಅದಕ್ಕೆ ಒಂದು ಕ್ರಯಾತ್ಮಕವಾದ ರೂಪವೂ ಇದೆ ಎಂದು ಗ್ರಾಂಶಿಯು ನಂಬುತ್ತಾನೆ. ಸಮಾಜ ಮತ್ತು ಅದರ ಅತ್ಯಂತ ಸಂಕೀರ್ಣವಾದ

ರೂಪವು ತಾತ್ವಿಕತೆಯು ಆಗುತ್ತದೆ ಎಂದು ಅವನು ಹೇಳುತ್ತಾನೆ. ಹಾಗೆಂದು ತಾತ್ವಿಕರ್ತೆಯು ಯಾವತ್ತೂ ಕ್ರಿಯಾರಹಿತವಾಗಿರುವುದೂ ಇಲ್ಲ. ಅದು ನಮ್ಮ ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯು ತಾನು ಯಾವುದನ್ನು ಮಾಡುತ್ತಿದ್ದೇನೆ ಎಂದು ತಿಳಿದಿರುತ್ತಾನೆ. ಆದರೆ ಅವನಿಗೆ ಸೈದ್ಧಾಂತಿಕವಾದ ಅರಿವಿರಬೇಕು ಎಂದೇನೂ ಇಲ್ಲ. ಅವನು ಕೆಲಸವನ್ನು ಮಾಡುತ್ತಾನೆ. ಅವನು ತನ್ನ ಕೆಲಸವನ್ನು ಮಾಡುವ ಅರಿವನ್ನು ಹೊಂದುತ್ತಾನೆ ಎನ್ನುವುದು ಒಂದು ಅಂಶವಾದರೆ ಮತ್ತೊಂದು ಕಡೆಯಿಂದ ಅವನು ತಾನು ಮಾಡುವ ಕೆಲಸ ಮತ್ತು ಅದರ ಮೂಲಕ ಪರಿವರ್ತನೆ ಮಾಡುವುದನ್ನು ಅರ್ಥಮಾಡಿಕೊಳ್ಳುತ್ತಾನೆ. ಗ್ರಾಂಶಿಯು ಒಂದು ಕಡೆಗೆ ತತ್ವಜ್ಞಾನದ ಜಾನಪದ ಎಂದು ಹೇಳುತ್ತಾನೆ. ಅದು ಸಾಮಾಜಿಕವಾಗಿ ಅತ್ಯಂತ ಮಹತ್ವದ್ದೂ ಆಗಿದೆ. ನೈತಿಕತೆ, ಧರ್ಮ, ಆಧ್ಯಾತ್ಮ ಎಲ್ಲವೂ ನಮ್ಮ ಪ್ರಜ್ಞೆಯನ್ನು ರೂಪಿಸುತ್ತವೆ ಎಂದು ಮಾರ್ಕ್ಸ್ ಹೇಳುತ್ತಾನೆ. ಇದನ್ನು ಇಲ್ಲಿ ಯಾಕೆ ಹೇಳಲಾಯಿತು ಎಂದರೆ ನಮ್ಮ ಆಧುನಿಕತೆಯ ಪರಿಸ್ಥಿತಿಯನ್ನು ನಾವು ನಮ್ಮದೇ ತಾತ್ವಿಕತೆ ಮೂಲಕವೇ ಅರ್ಥಮಾಡಿಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಗ್ರಾಂಶಿಯಲ್ಲಿ ಯಜಮಾನಿಕೆ ಮತ್ತು ತಾತ್ವಿಕತೆಗೆ ಒಂದು ಸಂಬಂಧವು ಇದೆ. ಆಧುನಿಕ ಸಂದರ್ಭದಲ್ಲಿ ನಾವು ವಿಮರ್ಶೆಯ ಬಗ್ಗೆ ಹೆಚ್ಚು ಮಾತಾಡುತ್ತಿದ್ದೇವೆ. ನಾವು ಏನೇ ಮಾತಾಡಿದರೂ ಇವತ್ತು ನಮ್ಮ ಸಾಹಿತ್ಯ ಮತ್ತು ಅದರ ಸಿದ್ಧಾಂತಗಳು ಸಾಹಿತ್ಯವನ್ನು ಒಂದು ವಲಯದಲ್ಲಿ ತರುತ್ತದೆ. ಲುಕಾಕ್ಸ್ ತನ್ನ ಸಾಹಿತ್ಯ ಮತ್ತು ಸಿದ್ದಾಂತದ ಚರ್ಚೆಯ ಸಂದರ್ಭದಲ್ಲಿ ಅಭಿವ್ಯಕ್ತಿ ಸಿದ್ಧಾಂತ ಮತ್ತು ಅದರ ಬೆಳವಣಿಗೆ ಹಾಗೂ ಅದರ ಪಲ್ಲಟವನ್ನು ಕುರಿತು ಹೇಳುತ್ತಾನೆ. ಆಧುನಿಕ ವಿಮರ್ಶೆಯು ಹೇಗೆ ಪ್ಯಾಸಿಸಂ ಎನ್ನುವುದನ್ನು ವಿರೋಧಿಸಿತು ಎಂದು ಅವನು ವಿವರಿಸುತ್ತಾನೆ. ಆದರೆ ಈವತ್ತು ನಾವು ಈವತ್ತು ಯಾವುದನ್ನು ಕಾಣುತ್ತಿದ್ದೇವೆ ಎಂದು ನೋಡಬೇಕಾಗಿದೆ. ನಮ್ಮ ಈವತ್ತಿನ ಪರಿಸ್ಥಿತಿ ಮತ್ತು ಅದರ ನಿರೂಪಣೆಗಳನ್ನು ನೋಡಿದರೆ ಗ್ರಾಂಶಿಯು ಹೇಗೆ ಅಗತ್ಯವಾಗಿದ್ದಾನೆ ಎಂದು ತಿಳಿಯುತ್ತದೆ. ಆದರೆ ನಾವು ಯಾವುದನ್ನು ತಾತ್ವಿಕತೆ ಎಂದು ಕರೆಯುತ್ತೇವೆಯೋ ಅದರ ಸ್ವರೂಪವನ್ನು ನಾವು ಬರೀ ಒಂದು ಭಾಷೆಯ ವ್ಯವಹಾರ ಎಂದು ಕರೆಯಲು ಬರುವುದಿಲ್ಲ. ಅದರ ರೂಪವು ಅತ್ಯಂತ ಸಂಕೀರ್ಣವಾಗಿರುತ್ತದೆ. ತಾತ್ವಿಕತೆಯನ್ನು ಹೇಳಲು ಭಾಷೆಯು ಒಂದು ವಾಹಕವು ಮಾತ್ರವೇ ಆಗಿದೆ. ಹಾಗೆ ನೋಡಿದರೆ ನಮ್ಮ ಅನೇಕ ಸಂಗತಿಗಳು ಭಾಷೆಯಲ್ಲಿ ವ್ಯಕ್ತವಾಗುತ್ತವೆ. ಅದು ತಾತ್ವಿಕತೆಯನ್ನು ಹೊಂದಿರುತ್ತವೆ. ಹಾಗೆಂದು ಯಾವುದು ಭಾಷೆಯಲ್ಲಿ ವ್ಯಕ್ತವಾಗಿದೆ ಅದು ಮಾತ್ರವೇ ತಾತ್ವಿಕವೂ ಅಲ್ಲ. ನಮಗೆ ತಾತ್ವಿಕ ಮತ್ತು ಅತಾತ್ವಿಕತೆ ನಮ್ಮ ದೃಷ್ಟಿಕೋನಗಳನ್ನು ಹೇಳುತ್ತವೆ. ಗಂಡು ಹೆಣ್ಣಿಗಿಂತ ಹೆಚ್ಚು ಶ್ರೇಷ್ಠ ಎಂದರೆ ಅದು ತಾತ್ವಿಕವಲ್ಲ. ಆದರೆ ಅದನ್ನು ನಾವು ಲಿಂಗ ರಾಜಕಾರಣದ ಮೂಲಕ ನೋಡಿದರೆ ಅದು ಹೆಚ್ಚು ತಾತ್ವಿಕವಾಗುತ್ತದೆ. ಅದನ್ನು ನಾವು ರಾಜಕಾರಣವಾಗಿ ನೋಡಲು ಬರುತ್ತದೆ. ಯಾವಾಗ ಸಮಾಜದಲ್ಲಿ ಅತ್ಯಂತ ಸಂಕೀರ್ಣತೆಯು ಇರುತ್ತದೆಯೋ ಆಗ ತಾತ್ವಿಕವಾದ ದೃಷ್ಟಿಕೋನವೂ ಹೆಚ್ಚು ಸಂಕೀರ್ಣವಾಗಿರುತ್ತದೆ. ಗ್ರಾಂಶಿಯ ಪ್ರಕಾರ ತಾತ್ವಿಕತೆಯೆಂದರೆ ಅದು ಒಂದು ಸರಳವಾದ ರೂಪವು ಅಲ್ಲ. ಅದನ್ನು ಒಂದು ಸರಳ ರೇಖಾತ್ಮಕವಾಗಿ ಹೇಳುವುದು ಸಾಧ್ಯವೇ ಇಲ್ಲ. ಇಡೀ ಜಗತ್ತು ಮತ್ತು ಅದರ ಉತ್ಪಾದನೆಯ ಕ್ರಮವನ್ನು ನೋಡಿಕೊಂಡು ನಾವು ತಾತ್ವಿಕತೆಯನ್ನು

ನಿರ್ಧಾರ ಮಾಡಬೇಕಾಗುತ್ತದೆ. ಯಾವಾಗ ತಾತ್ವಿಕತೆಯು ಹೆಚ್ಚು ಸಂಕೀರ್ಣವಾಗುತ್ತದೆ ಎನ್ನುವುದನ್ನು ವಿವರಿಸುವಾಗ ಗ್ರಾಂಶಿಯು ಸಮಾಜವು ಸಂಕೀರ್ಣವಾಗಿದ್ದಾಗ ಮಾತ್ರವೇ ಅದು ಹೆಚ್ಚು ಸಂಕೀರ್ಣವಾಗಿರುತ್ತದೆ ಎಂದು ಹೇಳುತ್ತಾನೆ. ಈ ಅರ್ಥದಲ್ಲಿ ಸಮಾಜ ಮತ್ತು ತಾತ್ವಿಕತೆಗೆ ಒಂದು ದ್ವಂದ್ವಾತ್ಮಕವಾದ ಸಂಬಂಧವು ಇದ್ದೇ ಇರುತ್ತದೆ. ಆದರೆ ನಮ್ಮ ಸಾಮಾನ್ಯವಾದ ಜ್ಞಾನ ಮತ್ತು ನಮ್ಮ ಸಾಮಾನ್ಯವಾದ ಸಂವೇದನೆಗೆ ಹಾಗೂ ತಾತ್ವಿಕತೆಗೂ ಒಂದು ಸಂಬಂಧವು ಇರುತ್ತದೆ. ಹಾಗೆ ನೋಡಿದರೆ ಗ್ರಾಂಶಿಗೆ ಮುಸಲೋನಿಯ ವಿರುದ್ಧ ಹೋರಾಟವನ್ನು ಮಾಡುವಾಗ ನಿರ್ದಿಷ್ಟವಾದ ಒಂದು ಗುರಿಯು ಇತ್ತು. ಕಮ್ಯುನಿಸ್ಟ್ ಪಾರ್ಟಿಯ ಸದಸ್ಯನಾಗಿ ಅವನು ನಿಜವಾದ ಪ್ರಯೋಗನಿಷ್ಟನೂ ಆಗಿದ್ದ, ಆದ್ದರಿಂದಲೇ ಅವನು ತನ್ನ ಸಾಮಾಜಿಕ ಜ್ಞಾನ ಮತ್ತು ಅದರ ಅಭ್ಯಾಸಗಳಿಂದ ತಾತ್ವಿಕತೆಯನ್ನು ರೂಪಿಸಿದ್ದಾನೆ. ತಾತ್ವಿಕತೆ ಎಂದರೆ ಅವನ ಪ್ರಕಾರ ಅದು ಒಂದು ಬಗೆಯಲ್ಲಿ ನಮ್ಮ ಅಭ್ಯಾಸವೂ ಆಗಿರುತ್ತದೆ. ಪ್ರಾಯೋಗಿಕವಾದ ಅಭ್ಯಾಸಗಳಿಂದ ಹೊರತು ಮಾಡಿದ ಸೈದ್ಧಾಂತಿಕತೆಯು ಇಲ್ಲವೆನ್ನುವುದು ಅವನ ನಿಲುವು.

* **(ಗ್ರಾಂಶಿ ರೀಡರ್)**

೬

ಚಾರಿತ್ರಿಕ ಒಪ್ಪಿಗೆ ಮತ್ತು ನಿರಾಕರಣೆಗಳು

ನಮ್ಮ ಪ್ರಾಯೋಗಿಕವಾದ ಪ್ರಜ್ಞೆ ಎನ್ನುವುದು ಮೂಲತಃ ಚಾರಿತ್ರಿಕ ಒಪ್ಪಿಗೆ ಮತ್ತು ನಿರಾಕರಣೆಗಳ ಮಧ್ಯೆ ರೂಪುಗೊಳ್ಳುತ್ತದೆ ಎಂದು ಅವನು ಹೇಳುತ್ತಾನೆ. ರಾಜಕೀಯವಾದ ಯಜಮಾನಿಕೆಯು ಕೂಡಾ ಪ್ರಯೋಗ ಮತ್ತು ಸಿದ್ಧಾಂತಗಳನ್ನು ಇಟ್ಟುಕೊಂಡಿರುತ್ತವೆ. ವರ್ಗಗಳು ಮತ್ತು ಅವುಗಳ ಪ್ರಜ್ಞೆಗೂ ಒಂದು ನಿರ್ದಿಷ್ಟವಾದ ನೆಲೆಯು ಇರುತ್ತದೆ ಎಂದು ಅವನು ಹೇಳುತ್ತಾನೆ. ನಮ್ಮ ಸೈದ್ಧಾಂತಿಕವಾದ ಪ್ರಜ್ಞೆ ಮತ್ತು ಅದರ ಸ್ವರೂಪವು ಕೆಲವು ಒತ್ತಡಗಳಿಂದ ಶುರುವಾಗುತ್ತದೆ. ರಾಜಕೀಯದ ಸರಿ ಮತ್ತು ರಾಜಕೀಯವಾದ ತಪ್ಪು ಎನ್ನುವುದು ಇದರಿಂದ ರೂಪಿತವಾಗುತ್ತದೆ. ತಾತ್ವಿಕತೆ ಎನ್ನುವುದು ಒಂದು ಅರ್ಥದಲ್ಲಿ ಸಂಘರ್ಷವನ್ನು ಹೇಳುತ್ತದೆ. ಸಾಮಾನ್ಯವಾದ ರಚನೆ ಮತ್ತು ಮೇಲು ರಚನೆಗಳ ಸಂಘರ್ಷವು ಅತ್ಯಂತ ಅನಿವಾರ್ಯವೂ ಆಗಿರುತ್ತದೆ. ಯಾರು ಚರಿತೆಯನ್ನು ನಿರ್ಮಾಣ ಮಾಡುತ್ತಾರೆಯೋ ಅವರು ಸಮಾಜದ ಜೊತೆಗೆ ಒಂದು ನಿರ್ದಿಷ್ಟವಾದ ಸಂಬಂಧವನ್ನು ಹೊಂದಿರುತ್ತಾರೆ. ಈ ಮೊದಲು ಯಾವುದು ಇದೆಯೋ ಅದರ ಸರಿ ಮತ್ತು ತಪ್ಪುಗಳ ನಿರ್ಣಯವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಯಾವುದೂ ಸುಮ್ಮನೆ ಉಂಟಾಗುವುದಿಲ್ಲ. ಅದು ಆಂತರಿಕವಾದ ಸಂಬಂಧವನ್ನು ಹೇಳುತ್ತದೆ. ಆದ್ದರಿಂದ ನಾವು ರಾಜಕಾರಣವನ್ನು ವಿವರಿಸಿಕೊಳ್ಳುವಾಗ ಸಾಧ್ಯವಾದಷ್ಟು ಯಾವುದೇ ಪಕ್ಷಪಾತಿಯಾದ ಧೋರಣೆಯನ್ನು ಬಿಡವುದು ಅತ್ಯಂತ ಅಗತ್ಯವಾಗಿರುತ್ತದೆ., ಆದರೆ ತಾತ್ವಿಕತೆ ಎನ್ನುವುದು ಒಂದು ಹಾದಿಯೂ ಹೌದು. ಅದು ಒಂದು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಆದರೆ ತಾತ್ವಿಕತೆ ಎನ್ನುವುದು ಹೇಗೆ ಅನ್ವಯವನ್ನು ಹೊಂದಿರುತ್ತದೆ ಎಂದು ವಿವೇಚನೆ ಮಾಡುತ್ತಾನೆ. ಒಂದು ತತ್ವವು ನಮಗೆ ಲೋಕದೃಷ್ಟಿಯನ್ನು ಕೊಡುತ್ತದೆ. ಅದು ನಮಗೆ ಅನೇಕವನ್ನು ಹೇಳಿಕೊಡುತ್ತದೆ. ಮನುಷ್ಯನಿಗೆ ತಾತ್ವಿಕತೆ ಎನ್ನುವುದು ಒಂದು ಶಕ್ತಿಯೂ ಆಗಿದೆ. ನಾವು ಈಗ ಯಾವುದು ಅತ್ಯಂತ ಉದಾರವಾದ ಒಂದು ನಿಲುವು ಎಂದು ಹೇಳುತ್ತೇವೆಯೋ

ಅದು ಕೂಡಾ ಒಂದು ನಿರ್ದಿಷ್ಟವಾದ ಚರಿತ್ರೆಯ ಉತ್ಪನ್ನವಾಗಿದೆ ಎಂದು ಅವನು ನಿರೂಪಿಸುತ್ತಾನೆ. ಒಂದು ಬೂರ್ಜ್ವಾ ವರ್ಗವು ಮುಂದೆ ಬಂದಾಗ ಅದಕ್ಕೆ ಬೇಕಾದ ತಾತ್ವಿಕತೆಯನ್ನು ಹೇಳುತ್ತದೆ. ಆದರೆ ನಮಗೆ ನಮ್ಮನ್ನು ರೂಪಿಸಿಕೊಳ್ಳುವ ಒಂದು ಶಕ್ತಿಯು ಇದೆ. ನಾವು ಅದನ್ನು ರೂಪಿಸಿಕೊಳ್ಳಬಲ್ಲೆವು. ಹಾಗೆಂದು ಬಂಡವಾಳವಾದವು ಒಂದು ನಿರ್ದಿಷ್ಟವಾದ ತಾತ್ವಿಕತೆಯನ್ನು ಹೊಂದಿರುವುದಿಲ್ಲ. ಅದು ಅದರ ಸಮಸ್ಯೆಯೂ ಹೌದು. ಬಂಡವಾಳವಾದವು ತನ್ನ ಯಜಮಾನಿಕೆಯನ್ನು ಸ್ಥಾಪಿಸಿಕೊಳ್ಳಲು ಅನ್ಯವನ್ನು ಮಟ್ಟಹಾಕಲು ಯತ್ನವನ್ನು ಮಾಡುತ್ತದೆ. ಧರ್ಮ, ನೈತಿಕತೆ, ಆಧ್ಯಾತ್ಮ ಮತ್ತು ಇತರ ಸಮಸ್ಯೆಗಳು ನಮ್ಮ ಪ್ರಜ್ಞೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಆದರೆ ನಮ್ಮ ಅಸ್ತಿತ್ವವನ್ನು ಹೇಗೆ ರೂಪಿಸುತ್ತದೆ ಎನ್ನುವುದು ಅತ್ಯಂತ ಮುಖ್ಯ. ತಾತ್ವಿಕತೆಯೆನ್ನುವುದು ಒಂದು ಬಗೆಯ ಸಂಕಥನವೂ ಆಗಿದೆ. ಆದರೆ ತಾತ್ವಿಕತೆಯನ್ನು ನಾವು ವ್ಯಕ್ತಮಾಡುವುದು ಭಾಷೆಯಲ್ಲಿ. ಅದನ್ನು ಸಹಜವಾಗಿ ಹೇಳುತ್ತೇವೆ. ತಾತ್ವಿಕತೆಗೆ ಬೇಕಾದ ಸಾಮಾಗ್ರಿಯನ್ನು ನಾವು ಪಡೆಯುತ್ತೇವೆ.

ಗ್ರಾಂಶಿಯು ಒಂದು ಅರ್ಥದಲ್ಲಿ ಚರಿತ್ರೆಯನ್ನು ತನ್ನ ಚರ್ಚೆಯ ಪ್ರಧಾನವಾದ ಭೂಮಿಕೆಯಾಗಿ ಮಾಡುತ್ತಾನೆ. ಅವನು ಸಂಸ್ಕೃತಿಯನ್ನು ವಿವರಿಸುವಾಗಲೂ ಸಾವಯವ ಎನ್ನುವ ಪರಿಕಲ್ಪನೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಬಳಸುತ್ತಾನೆ. ಆದರೆ ವಿದ್ವಾಂಸರ ಪ್ರಕಾರ ಅದನ್ನು ಅಂದರೆ ಸಾವಯವ ಎನ್ನುವುದನ್ನು ಆಗಸ್ಟಸ್ ಕಾಮ್ಟೆಯು ತನ್ನ ಧನಾತ್ಮಕವಾದ ದೃಷ್ಟಿಕೋನವನ್ನು ಹೇಳುವಾಗ ವಿವರಿಸಿದ್ದಾನೆ. ಹಾಗೆ ನೋಡಿದರೆ ಸಾವಯವ ಎನ್ನುವುದು ಅತ್ಯಂತ ವಿಶಿಷ್ಟವಾದ ಒಂದು ಪರಿಕಲ್ಪನೆಯು ಆಗಿದೆ. ಕಾಮ್ಟೆಯದ್ದು ಒಂದು ದೃಷ್ಟಿಯಿಂದ ಭವಿಷ್ಯದ ಕುರಿತ ಚಿಂತನೆಯೂ ಆಗಿದೆ. ಫ್ರೆಂಚಿನ ಅತ್ಯಂತ ಮಹತ್ವದ ಸಮಾಜಶಾಸ್ತ್ರಜ್ಞ ಆಗಿರುವ ಕೆಲವು ಅತ್ಯಂತ ಮಹತ್ವದ ಚರ್ಚೆಯನ್ನು ಮಾಡುತ್ತಾನೆ. ಅದರಲ್ಲಿಯೂ ಅವನು ತನ್ನ ದಿ ಪಾಸಿಟಿವ್ ಫಿಲಾಸಫಿಯನ್ನು ಹೇಳುವಾಗ ಈ ಕೆಲವು ವಿಚಾರಗಳನ್ನು ಚರ್ಚೆ ಮಾಡುತ್ತಾನೆ.: (ಹಾರಿಟ್ ಮಾರ್ಟಿನ್ ವಾಲ್ಯುಮ್ 2 ಬಟೋಚೆ ಬುಕ್ಸ್ 2000) ಅವನು ಬಾಹ್ಯವನ್ನು ಗಮನಿಸಿಕೊಂಡು ಕೆಲವು ವಿಚಾರವನ್ನು ಹೇಳುತ್ತಾನೆ. ದೇಹವೂ ಒಂದು ಸಾವಯವ ಎಂದು ಅವನು ಭಾವಿಸುತ್ತಾನೆ. ಅದರಲ್ಲಿ ಅನೇಕ ಅಂಶಗಳ ಮಿಶ್ರಣವು ಇರುತ್ತದೆ ಎಂದು ಅವನು ತಿಳಿಯುತ್ತಾನೆ. ಇದನ್ನು ವಿವರಿಸುವಾಗ ನಮಗೆ ಆಕ್ಸಿಜನ್ ಹೇಗೆ ಅಗತ್ಯವಾಗಿದೆ ಮತ್ತು ಅದನ್ನು ನಾವು ಹೇಗೆ ಗಾಳಿಯಿಂದ ತೆಗೆದುಕೊಳ್ಳುತ್ತೇವೆ ಎಂದೂ ವಿವರಿಸುತ್ತಾನೆ. ದೇಹ ಮತ್ತು ಅದರ ಶಾಸ್ತ್ರವನ್ನು ನಾವು ಹೇಗೆ ಗ್ರಹಿಸುತ್ತೇವೆ ಎಂದು ಸವಿವರವಾಗಿ ಅವನು ಮಂಡಿಸಿದ್ದಾನೆ. ದೇಹಕ್ಕೆ ಅಥವಾ ದೇಹದ ಸಾವಯವ ರೂಪಕ್ಕೆ ಯಾವುದು ವಿಷವಾಗುತ್ತದೆ ಮತ್ತು ಯಾವುದು ಸಹಯೋಗವನ್ನು ಕೊಡುತ್ತದೆ ಎಂದು ಅವನು ಹೇಳುತ್ತಾನೆ. ದೇಹ ಮತ್ತು ಅದರ ಸಾವಯವತೆಗೂ ಹೊರಗಿನ ಸಂಬಂಧಕ್ಕೂ ಇರುವ ಸಾಮ್ಯ ಮತ್ತು ವೈಷಮ್ಯವನ್ನು ಅವನು ಹೇಳುತ್ತಾನೆ. (ಪುಟ.64 – 74) ಈ ದೃಷ್ಟಿಯಿಂದ ನಮಗೆ ಅಂದರೆ ನಮ್ಮ ದೇಹಕ್ಕೆ ಒಂದು ಸಾವಯವ ಸಂಬಂಧವು ಇರುತ್ತದೆ. ಆದರೆ ಇದರ ನಡುವೆ ಅವನು ಮತ್ತೊಂದು ಮಾತನ್ನು ಹೇಳುತ್ತಾನೆ: ಎಲ್ಲಾ ವಿಜ್ಞಾನವೂ ಕೂಡಾ ತಮ್ಮದೇ ಆದ ನಿಯಮವನ್ನು ಕಂಡುಕೊಂಡಿವೆ. (ಅದೇ; 75) ನಾವು ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಅದು ದೇಹವನ್ನು ಕೇಂದ್ರವಾಗಿರಿಸಿಕೊಂಡ

ತತ್ವಜ್ಞಾನ. ಅದು ಕೂಡಾ ಸಾವಯವವನ್ನು ಹೆಚ್ಚು ಚರ್ಚೆ ಮಾಡುತ್ತದೆ. ದೇಹ ಮತ್ತು ಮನಸ್ಸುಗಳ ಸಾವಯವ ರೂಪವನ್ನು ಅದು ಗ್ರಹಿಸುತ್ತದೆ. ಅದರ ಜೊತೆಗೆ ಅವನು ಕೆಮಿಕಲ್ ಕೇಂದ್ರವೆಂದು ಹೇಳುತ್ತಾನೆ. ಸಾವಯವ ಸಂಬಂಧ ಮತ್ತು ಸಾವಯವ ಬೆಳವಣಿಗೆ ಎನ್ನುವುದು ಅತ್ಯಂತ ಮಹತ್ವದ್ದು. ಅದನ್ನು ಅವನು ಹೇಳುತ್ತಾನೆ ಸಾವಯವ ಸಂಬಂಧವೇ ಇಲ್ಲದ ತತ್ವಜ್ಞಾನ ಮತ್ತು ಸಾವಯವ ಸಂಬಂಧವು ಇರುವ ದೇಹದ ಶಾಸ್ತ್ರಗಳ ನಡುವೆ ಇರುವ ಸಂಘರ್ಷವೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಆದ್ದರಿಂದಲೇ ಕಾಮ್ಟೆಯು ಧನಾತ್ಮಕವಾದ ನಿಲುವು ಅತ್ಯಂತ ಅಗತ್ಯವೆಂದು ಹೇಳುತ್ತಾನೆ. (ಪುಟ; 82) ಹಾಗೆ ನೋಡಿದರೆ ಅವನು ರಾಜಕಾರಣ ಮತ್ತು ಸಾಮಾಜಿಕ ವಿವರಣೆಯಲ್ಲಿಯೂ ಧನಾತ್ಮಕವಾದ ಅಂಶದ ಅಗತ್ಯವನ್ನು ಪ್ರತಿಪಾದಿಸುತ್ತಾನೆ. ಸಮಾಜ ಮತ್ತು ಅದರ ಪುನರ್ ನಿರ್ಮಾಣವನ್ನು ಪ್ರತಿಪಾದಿಸುತ್ತಾನೆ. (ಕಾಮ್ಟೆ – 1875 ಸಿಸ್ಟಮ್ ಆಫ್‌ಪೊಸಿಟಿವ್ ಪಾಲಿಟಿ ಲಾಂಗ ಮನ್, ಗ್ರೀನ್ ಅಂಡ್ ಕೊ) ಅವನು ಸಾಮಾಜಿಕವಾದ ಭೌತಶಾಸ್ತ್ರವನ್ನು ಹೇಳುತ್ತಾನೆ. ಸಾಮಾಜಿಕ ಭೌತಶಾಸ್ತ್ರ ಮತ್ತು ವ್ಯಕ್ತಿಗೆ ಇರುವ ಸಂಬಂಧವನ್ನು ಅವನು ವಿವೇಚನೆ ಮಾಡುತ್ತಾನೆ. ಅದೇ ರೀತಿಯಲ್ಲಿ ಸಾಮಾಜಿಕ ಭೌತಶಾಸ್ತ್ರ ಮತ್ತು ನಾಗರಿಕತೆಗೆ ಯಾವ ಸಂಬಂಧವು ಇದೆ ಎಂದೂ ಹೇಳುತ್ತಾನೆ ಬೌದ್ಧಿಕ ಮತ್ತು ನೈತಿಕವಾದ ನೆಲೆಗಳು ಸಹಜವಾದ ಚರಿತ್ರೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಆದ್ದರಿಂದ ಅದನ್ನು ಪ್ರತ್ಯೇಕ ಮಾಡಲು ಆಗುವುದೂ ಇಲ್ಲವೆಂದು ಅವನು ಪ್ರತಿಪಾದಿಸುತ್ತಾನೆ. ಯಾವುದನ್ನು ನೈಜವಾದ ತತ್ವಜ್ಞಾನವೆಂದು ಹೇಳುತ್ತೇವೆಯೋ ಅದು ದೇಹ ಮತ್ತು ಅದರ ಶಾಸ್ತ್ರವನ್ನು ಹೇಳುತ್ತದೆ. ಸುಮ್ಮನೆ ಆಧ್ಯಾತ್ಮಿಕವನ್ನು ಹೇಳುವುದು ಬೇರೆ ಪ್ರಶ್ನೆ. ಆದರೆ ದೇಹ ಮತ್ತು ಮನಸ್ಸನ್ನು ಕೇಂದ್ರಮಾಡಿಕೊಂಡು ಅದರ ನೆಲೆಗಳನ್ನು ಗಮನಿಸುವುದು ಬೇರೆ ಕ್ರಮ. ಗ್ರಾಂಶಿಯ ನಿಲುವು ಶುದ್ಧವಾದ ಆಧ್ಯಾತ್ಮವನ್ನು ಹೇಳುವುದಿಲ್ಲ. ಅದರ ಸ್ವರೂಪವು ಬೇರೆಯಾಗಿದೆ. ಗ್ರಾಂಶಿಗೆ ಸಮಾಜ ಮತ್ತು ಅದರ ಚಿಂತನೆಗೆ ಮತ್ತೊಂದು ಕಾರಣವೆಂದರೆ ಕಾಮ್ಟೆ ಮೊದಲಾದವರ ನಿಲುವು. ಅದನ್ನು ಎಮಿಲಿ ಡರ್ಖೇಮ್ ಕೂಡಾ ನೈತಿಕತೆ ಮತ್ತು ಸಾವಯವ ಸಂಬಂಧವನ್ನು ಬೇರೆ ರೀತಿಯಲ್ಲಿ ನಿರೂಪಿಸುತ್ತಾನೆ. ಅವನಲ್ಲಿ ಕೆಲಸ ಮತ್ತು ಅದರ ವರ್ಗೀಕರಣಗಳು ಬಹಳ ಮಹತ್ವವನ್ನು ಪಡೆದುಕೊಂಡಿವೆ. ಅವನು ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ವಿಭಿನ್ನವಾಗಿ ಹೇಳುತ್ತಾನೆ. ವ್ಯಕ್ತಿಯನ್ನು ರೂಪಿಸುವಲ್ಲಿ ಒಂದು ಸಮಾಜವು ಯಾವ ಪ್ರಭಾವವನ್ನು ಬೀರುತ್ತದೆ ಎನ್ನುವುದು ಅವನ ಆಸಕ್ತಿಯಲ್ಲಿ ಒಂದು. ವ್ಯಕ್ತಿತ್ವ ಮತ್ತು ಸಮಾಜ ಎನ್ನುವುದು ಬೇರೆ ಬೇರೆ ಪಾತಳಿಗಳಲ್ಲಿ ರೂಪುಗೊಳ್ಳುವ ಪ್ರಕ್ರಿಯೆಗಳು ಅಲ್ಲವೆನ್ನುವುದು ಅವನ ವಾದವಾಗಿದೆ. ಕೆಲಸದ ವರ್ಗೀಕರಣ ಮತ್ತು ಜೀವನ ಕ್ರಮಗಳು ಎನ್ನುವುದು ಹೇಗೆ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ ಎಂದು ಅವನು ಪ್ರತಿಪಾದಿಸುತ್ತಾನೆ. ಅನೇಕ ವಿಚಾರಗಳು ನಮ್ಮ ಸಾಮಾಜಿಕ ಜೀವನ ಮತ್ತು ಅದರ ಆವಶ್ಯಕತೆಯು ಆಗಿರುತ್ತದೆ. ಆದ್ದರಿಂದ ಅವನ ಸಾಮಾಜಿಕ ಚಿಂತನೆಯು ಭಿನ್ನವಾಗಿದೆ. ಪರಂಪರೆ ಮತ್ತು ಸಂಪ್ರದಾಯಗಳು ಹೇಗೆ ವ್ಯಕ್ತಿಯನ್ನು ರೂಪಿಸುತ್ತದೆ ಎಂದು ಅವನು ವಿವರಿಸುತ್ತಾನೆ. ವ್ಯಕ್ತಿ ಮತ್ತು ಅವನ ಉದ್ದೇಶಗಳನ್ನು ನಾವು ಬೇರೆ ಮಾಡಿಕೊಂಡು ನೋಡಲು ಬರುವುದೂ ಇಲ್ಲ. (ಎಮಿಲಿ ಡರ್ಕೆಮ್ ದ ಡಿವಿಸಿನ್ ಆಫ್ ಲೇಬರ್ ಇನ್ ಸೊಸೈಟಿ

1960 ಪುಟ 236 ಮೆಕ್ಮಿಲನ್ ಕಂಪೆನಿ. ಇದು ಪ್ರಕಟವಾದ್ದು 1893) ಆದರೆ ನಮ್ಮ ಸಂಬಂಧಗಳಲ್ಲಿ ಬೇರೆ ಬೇರೆ ವಿಧದ ಸಂಹಿತೆಗಳು ಕೆಲಸವನ್ನು ಮಾಡುತ್ತವೆ. ಅನೇಕವು ನಮ್ಮ ನಂಬಿಕೆಯಿಂದ ಬರುತ್ತವೆ. ಮತ್ತೆ ಕೆಲವು ಸಹಕಾರದ ಮೂಲಕವೂ ಬರುತ್ತದೆ. ಅದರ ಜೊತೆಗೆ ಮತ್ತೆ ಕೆಲವು ಮನೆಯಲ್ಲಿ ರೂಪುಗೊಳ್ಳುತ್ತವೆ. ಹಾಗೆಂದು ಕೆಲವು ನಿಯಮವು ನಮಗೆ ಅಗತ್ಯವೂ ಆಗಿರುತ್ತವೆ. ಒಂದು ಹಂತದಲ್ಲಿ ನಮಗೆ ಒಂದು ಜನಾಂಗವು ಬೇರೆ ಬೇರೆ ನಿಯಮವನ್ನು ರೂಪಿಸುವುದೂ ಅಷ್ಟೇ ನಿಜ. ಕೆಲವು ಸಂಪ್ರದಾಯಗಳು ನಮಗೆ ಒಂದು ಅಭಿಪ್ರಾಯವನ್ನು ರೂಪಿಸಿಕೊಡುತ್ತದೆ ಎನ್ನವುದು ಅಷ್ಟೇ ನಿಜ. ಅವನು ಯಾವುದನ್ನು ಆರ್ಗ್ಯಾನಿಕ್ ಏಕತೆ ಎಂದು ಹೇಳುತ್ತಾನೆಯೋ ಅದರ ರೂಪಕ್ಕೂ ಅದರ ಸನ್ನಿವೇಶಕ್ಕೂ ಒಂದು ಸಂಬಂಧವಿದೆ ಎನ್ನುವುದು ಖಚಿತ. ಕೆಲಸ ಮತ್ತು ಅದರ ವರ್ಗೀಕರಣವನ್ನು ಅವನು ವಿಶ್ವಾತ್ಮಕ ಎಂದು ಕರೆಯುತ್ತಾನೆ. ಯಾವುದನ್ನು ನಾವು ನೀತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಹೆಚ್ಚಾಗಿ ಅನ್ವಯವಾಗುವುದು ನಮಗೆ ಸಮಾಜದಲ್ಲಿಯೇ. ನೀತಿಗೆ ಸಾಮಾಜಿಕವಾದ ಒಂದು ಕೆಲಸವೂ ಇದೆ. ಅದು ಬರೀ ರಾಜಕೀಯ ಅರ್ಥಶಾಸ್ತ್ರವನ್ನು ಮಾತ್ರವೇ ಹೇಳುವುದಿಲ್ಲ. ಈ ದೃಷ್ಟಿಯಿಂದ ಅವನ ನೀತಿಯ ವೈಜ್ಞಾನಿಕ ಅಧ್ಯಯನವು ಅತ್ಯಂತ ಮಹತ್ವದ್ದೂ ಆಗಿದೆ ಎಂದು ಅವನು ಭಾವಿಸುತ್ತಾನೆ. (ದಿ ಸೈನ್ಸ್ ಆಫ್ ಮೊರಾಲಿಟಿ) ಹಾಗೆ ನೋಡಿದರೆ ಸಹಕಾರ ಮತ್ತು ಅದರ ಮೌಲ್ಯವೂ ಅತ್ಯಂತ ದೊಡ್ಡದು. ಹಸಿವೆಯನ್ನು ನಾವು ಹೊಟ್ಟೆ ತುಂಬಿಸುವುದರ ಮೂಲಕ ಈಡೇರಿಸಿಕೊಳ್ಳಬಹುದು. ಆದರೆ ಕಾರಣವನ್ನು ಮತ್ತು ಅದರ ಬಯಕೆಯನ್ನು ತುಂಬಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಯು ಇದೆ. ದೈಹಿಕವಾದ ತೃಪ್ತಿ ಮತ್ತು ಮನಸ್ಸಿನ ತೃಪ್ತಿಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಜ್ಞಾನವನ್ನು ಅತ್ಯಂತ ಸುಲಭವಾಗಿ ಈಡೇರಿಸಿಕೊಳ್ಳಲು ಬರುವುದೂ ಇಲ್ಲ. ಹಾಗೆ ನೋಡಿದರೆ ಎಲ್ಲ ಕರ್ತವ್ಯವೂ ಅತ್ಯಂತ ಸೀಮಿತವಾದದ್ದು. ಕಾಲ ಮತ್ತು ಸ್ಥಳವನ್ನು ನಾವು ಬಿಡಲು ಆಗುವುದೂ ಇಲ್ಲ. ಸ್ಪೆನ್ಸರ್ ಸಂಬಂಧವನ್ನು ಕುರಿತು ಹೇಳುವಾಗ ಅದನ್ನು ಬರೀ ಸಾಂಪ್ರದಾಯಿಕವಾದ ಎಂದು ಹೇಳುವಂತೆ ಇಲ್ಲವೆಂದು ಹೇಳುತ್ತಾನೆ. ಸ್ಪೆನ್ಸರ್ ಮತ್ತೊಂದು ಅಂಶವನ್ನು ಹೇಳುತ್ತಾನೆ: ಸಾಮಾಜಿಕ ಏಕತೆಯು ಸಾಧ್ಯವಾಗುವುದೇ ಕೆಲಸ ಮತ್ತು ಅದರ ವರ್ಗೀಕರಣದಿಂದ. (ಅದೇ; ಪುಟ 201) ನಾವು ಹೇಗೆ ಇರಬೇಕು ಮತ್ತು ಯಾವ ಸಂದರ್ಭದಲ್ಲಿ ಹೇಗೆ ವರ್ತನೆಯನ್ನು ಮಾಡಬೇಕು ಎನ್ನುವುದನ್ನು ನಮ್ಮ ಸಂಪ್ರದಾಯಗಳು ಹೇಳುತ್ತವೆ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ ಯಾವುದೇ ವ್ಯಕ್ತಿಗೆ ಮತ್ತು ಸಮಾಜಕ್ಕೆ ಇರುವ ಸಂಬಂಧವು ಅತ್ಯಂತ ಸಂಕೀರ್ಣವಾಗಿರುತ್ತದೆ. ಹಾಗೆ ನೋಡಿದರೆ ಮನುಷ್ಯ ಸಂಬಂಧಗಳಲ್ಲಿ ನಿರ್ದಿಷ್ಟವಾದ ಸ್ವರೂಪವಿರುವುದು ಆಯಾ ಅಗತ್ಯಕ್ಕೆ ಅನುಸಾರವಾಗಿ ಎನ್ನುವುದು ಖಚಿತ. ವ್ಯಕ್ತಿ ಮತ್ತು ಅವನ ಸಂಬಂಧಕ್ಕೆ ವಿಭಿನ್ನವಾದ ಆಯಾಮವೂ ಇರುತ್ತದೆ. ಇದರ ಜೊತೆಗೆ ಮನುಷ್ಯನು ತನ್ನ ಸಮೂಹವನ್ನು ಬಿಟ್ಟು ಇರಲಾರ. ಅವನಿಗೆ ಸಮೂಹದ ಪ್ರಜ್ಞೆಯು ಇರುತ್ತದೆ. ಸಮೂಹದ ಜೊತೆಗೆ ನಾವು ಹೇಗೆ ವ್ಯವಹಾರವನ್ನು ಮಾಡಬೇಕು ಎನ್ನುವುದು ಮುಖ್ಯ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನಾವು ಗಮನಿಸಬೇಕು: ಸಮೂಹ ಎನ್ನುವುದು ಒಂದು ಸಾಕ್ಷಿಯು ಹೌದು. ಅದಕ್ಕೊಂದು ಚೈತನ್ಯವೂ ಇದೆ.

ಯಾವುದನ್ನು ನಮ್ಮ ಮನಸ್ಸಿನ ಆಕಾಂಕ್ಷೆ ಎಂದು ಹೇಳುತ್ತಿದ್ದೇವೆಯೋ ಅದರ ರೂಪವನ್ನು ನೋಡುವಾಗ ಅದರ ಆಂತರಿಕ ಕಾರಣವನ್ನು ನಾವು ಗಮನಿಸಬೇಕಾಗುತ್ತದೆ. ಯಾವುದನ್ನು ನಾವು ನಮ್ಮ ಸಾಮಾಜಿಕ ಜೀವನದ ಒಂದು ಸಂವೇದನೆ ಎಂದು ಕರೆಯುತ್ತೇವೆಯೋ ಅದನ್ನೇ ಗ್ರಾಂಶಿಯು ಕಾಮನ್ ಸೆನ್ಸ್ ಎಂದು ಕರೆಯುತ್ತಾನೆ. ವ್ಯಕ್ತಿಯು ಅದನ್ನು ಬೇರೆ ಬೇರೆ ಥರ ಗ್ರಹಿಸುತ್ತಾನೆ. ಯಾವುದನ್ನು ನಾವು ನಮ್ಮ ಸಂವೇದನೆಯ ಭಾಗ ಎಂದು ಕರೆಯುತ್ತೇವೆಯೋ ಅದು ನಮಗೆ ಒಂದು ನಿರ್ದಿಷ್ಟವಾದ ಮಾನದಂಡವನ್ನು ರೂಪಿಸುತ್ತದೆ. ಸಂವೇದನೆ ಮತ್ತು ಅದರ ತರ್ಕವೆಂದು ಹೇಳುವಾಗ ಕೆಲವನ್ನು ನಮ್ಮ ಸಂವೇದನೆಗಿಂತ ಹೊರತಾದದ್ದು ಎಂದು ತಿಳಿಯುತ್ತವೆ. ನಿಜವಾದ ಅರ್ಥದಲ್ಲಿ ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ನಮಗೆ ಇಂಗ್ಲೀಷಿನ ಪದವನ್ನು ಬಳಸಬೇಕಾಗುತ್ತದೆ: ಸೆನ್ಸ್ ಮತ್ತು ನಾನ್ ಸೆನ್ಸ್. ಹೇಗೆ ಇವುಗಳು ನಿರ್ದಿಷ್ಟವಾದ ವರ್ಗೀಕರಣವನ್ನು ಮಾಡುತ್ತವೆ ಎಂದು ನೋಡಬೇಕಾಗುತ್ತದೆ. ಯಾವುದನ್ನು ನಾವು ಸೆನ್ಸ್ ಮತ್ತು ನಾನ್‌ಸೆನ್ಸ್ ಎಂದು ಹೇಳಿಕೊಳ್ಳುತ್ತೇವೆಯೋ ಅದು ನಮ್ಮ ನಿಲುವಿಗೆ ಮಾತ್ರವೇ ಸಂಬಂಧಪಟ್ಟಿದೆ. ಕೆಲವು ಸಾಮಾನ್ಯವಾದ ನಿಯಮವನ್ನು ಅಂಗೀಕರಿಸಿದ ಸಂದರ್ಭದಲ್ಲಿ ನಾವು ಸಹಜವಾದ ಒಂದು ಸಂವೇದನೆ ಎಂದು ಹೇಳುತ್ತೇವೆ. ಮತ್ತೊಂದು ಅದಕ್ಕೆ ಹೊರತಾದನ್ನು ಅಸಹಜವಾದ ಸಂವೇದನೆ ಎಂದು ಕರೆಯುತ್ತಾರೆ. ಇವುಗಳ ನಡುವೆ ಅನೇಕ ಸಮಸ್ಯೆಗಳು ಇರುತ್ತವೆ. ಡೆಲ್ಯೂಷೆಯು ಮತ್ತೊಂದು ವಿಚಾರವನ್ನು ಹೇಳುತ್ತಾನೆ– ಅದು ನಮ್ಮ ಆಲೋಚನೆ ಮತ್ತು ಅದರ ಕುರಿತಾದ ವ್ಯಾಮೋಹಗಳು. (ಅದನ್ನು ಅವನು ಒಂದು ಬಗೆಯ ಫ್ಯಾಶನ್ ಎಂದು ಕರೆಯುತ್ತಾನೆ. ಅವನದೇ ಆದ ಮಾತನ್ನು ಹೇಳುವುದಿದ್ದರೆ ಫ್ಯಾಶನ್ ಆಫ್ ಥಾಟ್) (ಅದೇ; 74) ನಾನು ಉಸಿರಾಡುತ್ತೇನೆ, ನಾನು ನಿದ್ದೆ ಮಾಡುತ್ತೇನೆ, ನಾನು ಊಟ ಮಾಡುತ್ತೇನೆ ಎನ್ನುವುದು ನಮ್ಮ ನಮ್ಮ ವೈಯಕ್ತಿಕವಾದ ಸಂವೇದನೆಯನ್ನು ಹೇಳುತ್ತದೆ. ಅದರ ಜೊತೆಗೆ ಇದು ವ್ಯಕ್ತಿಗತವಾದ ಜಗತ್ತನ್ನು ಹೇಳುತ್ತದೆ. ಆದರೆ ಅದರ ಜೊತೆಗೆ ನಮ್ಮ ಕಲ್ಪನೆಯು ಇರುತ್ತದೆ. ಆದ್ದರಿಂದ ಭಾಷೆಯು ಸಮೇತ ನಮಗೆ ಒಂದು ಬಾಹ್ಯದ ಸಂಗತಿಯು ಆಗುವುದಿಲ್ಲ. (ಅದೇ; ಪುಟ 78) ಆದರೆ ಅವನು ಯಾವುದನ್ನು ಒಂದು ತರ್ಕವೆಂದು ಹೇಳುತ್ತಾನೆಯೋ ಅದರಲ್ಲಿ ನಾವು ಹೇಗೆ ಆಗುತ್ತೇವೆ ಎನ್ನುವುದು ಅತ್ಯಂತ ಮುಖ್ಯವಾಗಿದೆ. ನಾವು ನಮ್ಮ ಸಂವೇದನೆಯ ಮೂಲಕವೇ ಆಗುತ್ತೇವೆ. ನಮಗೆ ಯಾವುದೇ ಸಂವೇದನೆಯು ಇಲ್ಲವಾದರೆ ನಾವು ಏನೂ ಆಗುವುದಿಲ್ಲ. ಅದರ ಜೊತೆಗೆ ನಮಗೆ ಬೇರೆ ಬೇರೆ ಅಂಗಾಂಗಗಳಿವೆ. ಆದರೆ ನಮಗೆ ದೇಹ ಮತ್ತು ಮನಸ್ಸುಗಳ ನಡುವೆ ಸಂಬಂಧವಿದೆ ಅಷ್ಟೇ ಅಲ್ಲ ಅದರ ಜೊತೆಗೆ ನಮಗೆ ದೇಹ ಮತ್ತು ಮನಸ್ಸುಗಳ ನಡುವೆ ಸಂಘರ್ಷವಿದೆ. ಆದ್ದರಿಂದ ಇದನ್ನು ನಾವು ಬೇರೆ ಮಾಡಿ ನೋಡಿದರೆ ನಮಗೆ ದ್ವಂದ್ವವು ಶುರುವಾಗುತ್ತದೆ. ಇದನ್ನು ಡೆಲ್ಯೂಷೆ ಮತ್ತು ಗುಟ್ಟಾರಿ ಇಬ್ಬರೂ ಹೇಳುತ್ತಾರೆ. ಇಚ್ಛಿತ್ತವಾದ ಒಂದು ಸ್ಥಿತಿಯು ಅತ್ಯಂತ ಕಷ್ಟವಾದ ಸಮಸ್ಯೆಯೂ ಆಗಿದೆ ಎನ್ನುವುದು ಅವರಿಗೂ ಗೊತ್ತು. ಹಾಗೆಂದು ಇವೆರಡೂ ಅಂದರೆ ದೇಹ ಮತ್ತು ಮನಸ್ಸುಗಳ ಸಂಬಂಧವು ದ್ವಂದ್ವ ಎಂದರೂ ಅದರ ಸ್ವರೂಪವನ್ನು ಅವರು ಬೇರೆ ಎಂದು ಗಣಿಸುವುದಿಲ್ಲ. ಯಾವುದನ್ನು ಆಳುತ್ತದೆ ಎನ್ನುವುದನ್ನು ವಿವರಿಸುವಾಗ ಅವರು ಸ್ಕಿಜೋ ಎನ್ನುವುದನ್ನು ಮಾರ್ಕ್ಸ್‌ವಾದದ ಪರಿಭಾಷೆಯಲ್ಲಿ ವಿವರಿಸಿದ್ದಾರೆ. ಅದನ್ನು ಮೇಲು ರಚನೆ ಮತ್ತು ಒಳರಚನೆ ಎನ್ನುವ ಹಿನ್ನೆಲೆಯಲ್ಲಿ ನೋಡುತ್ತಾರೆ. ಮೇಲು ರಚನೆ ಮತ್ತು ಕೆಳರಚನೆಯಲ್ಲಿ

ಇರುವ ದ್ವಂದ್ವಗಳು ಇಲ್ಲಿಗೂ ಅನ್ವಯವಾಗುತ್ತದೆ. ಆಧುನಿಕ ಚರಿತ್ರೆಯಲ್ಲಿ ಮನುಷ್ಯ ಮತ್ತು ಅವನ ವ್ಯಕ್ತಿತ್ವವನ್ನು ಅನೇಕ ಸಂದರ್ಭದಲ್ಲಿ ಬಂಡವಾಳವಾದವು ನಿರೂಪಿಸಿದೆ. ಅದು ನಮಗೆ ಮತ್ತೊಂದು ರೀತಿಯ ಕನಸನ್ನು ಹುಟ್ಟುಹಾಕುತ್ತದೆ. ಅದು ನಿರ್ದಿಷ್ಟವಾದ ಅಧಿಕಾರವನ್ನು ನಿರೂಪಿಸುತ್ತದೆ. ಅದರಲ್ಲಿ ವಾಸ್ತವ ಮತ್ತು ಭ್ರಮೆಗಳ ನಡುವೆ ಒಂದು ಅಂತರವೂ ಇದೆ. ಮಧ್ಯೆ ನೆರಳು ಕೂಡಾ ಇದೆ. ಮನುಷ್ಯತ್ವ ಎನ್ನುವುದು ಈವತ್ತು ನಮಗೆ ಈ ನೆರಳುಗಳ ನಡುವೆ ಇರುತ್ತದೆ. ಜಾನ್ ಹಾಲ್‌ವೇಯ ನಿಲುವು ಇಲ್ಲಿ ಉಲ್ಲೇಖನೀಯ: ಅವನು ಯಾವುದೇ ಅಧಿಕಾರವು ಇಲ್ಲದೆ ನಾವು ಸಾಮಾಜಿಕ ಸ್ವರೂಪವನ್ನು ಹೇಗೆ ಬದಲಾವಣೆ ಮಾಡಬಹುದು ಎಂದು ಹೇಳುತ್ತಾನೆ. ಈವತ್ತು ಬಂಡವಾಳವದಕ್ಕೆ ಒಂದು ಅಹಂಕಾರವು ಇದೆ ಎಂದು ಅವನು ಭಾವಿಸುತ್ತಾನೆ. ಅದಕ್ಕೆ ಮನುಷ್ಯತ್ವವೇ ಇಲ್ಲ. ಎರಡು ಅಧಿಕಾರವನ್ನು ನಾವು ಇವತ್ತು ನೋಡಬಹುದು: ಒಂದು ಮಿಲಿಟರಿ ಅಧಿಕಾರ ಮತ್ತೊಂದು ಬಂಡವಾಳವಾದದ ಅಧಿಕಾರ, ಇದರಲ್ಲಿ ಬಂಡವಾಳವಾದವು ತನ್ನ ಮಾಧ್ಯಮದ ಮೂಲಕ ಜನರನ್ನು ಒಂದು ಒಪ್ಪಿಗೆಗೆ ಬರುವಂತೆ ಮಾಡುತ್ತದೆ. ಅವನು ಕೊಡುವ ಅನೇಕ ಮಾಹಿತಿಗಳು ನಮಗೆ ಭಯವನ್ನು ಹುಟ್ಟಿಸುತ್ತದೆ.

ವಸಾಹತು ದೇಶಗಳಲ್ಲಿ ಯಾವುದನ್ನು ಉನ್ನತ ಸಾಂಸ್ಕೃತಿಕ ಅಧ್ಯಯನವೆಂದು ಹೇಳುತ್ತಾ ಬಂದೆವೋ ಅದು ಈವತ್ತು ಅನೇಕ ಸಂಶಯಕ್ಕೆ ಕಾರಣವೂ ಆಗಿದೆ. ವಸಾಹತು ದೇಶಗಳು ಬ್ರಿಟೀಶ್ ಸಾಂಸ್ಕೃತಿಕ ಅಧ್ಯಯನವೆಂದು ಹೇಳಲಾಯಿತೋ ಅವುಗಳೇ ಈಗ ಮತ್ತೆ ಚರ್ಚೆಗೆ ಒಳಗಾಗಿದೆ. ಇಲ್ಲಿನ ಒಂದು ಅಪಾಯವೆಂದರೆ ಪಶ್ಚಿಮವನ್ನು ಸಾರಾಸಗಟಾಗಿ ತಿರಸ್ಕರಿಸುವುದು ಸಮರ್ಥನೀಯವೇ ಎಂದರೆ ಅದೂ ಅಲ್ಲ. ಯಾಕೆಂದರೆ ಪಶ್ಚಿಮವೆಂದು ಯಾವುದನ್ನು ನಾವು ಹೇಳಿದೆವೋ ಅದು ಅಷ್ಟೇ ಅಲ್ಲ. ಅನೇಕ ಸಂದರ್ಭದಲ್ಲಿ ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳನ್ನು ಒಳಗೊಳ್ಳುವುದು ಅಗತ್ಯ. ಯುರೋಪಿನ ಅನೇಕ ಸಿದ್ಧಾಂತಗಳಿಗೆ ಅವುಗಳದೇ ಬೇರುಗಳಿವೆ. ಅಷ್ಟೇ ಅಲ್ಲ ಫೋರ್ಡ್ ಪೌಂಡೇಶನ್ ಸಂಸ್ಕೃತಿಯ ಅಧ್ಯಯನಕ್ಕೆ ಕೊಟ್ಟ ವಿಶೇಷ ಪ್ರಾಶಸ್ತ್ಯವೂ ಅಷ್ಟೇ ಮಹತ್ವವನ್ನು ಪಡೆದುದು ಯಾಕೆಂದರೆ ಅವು ಸಂಸ್ಕೃತಿಯ ಅಧ್ಯಯನವನ್ನು ಹಿಂದಿನ ಬಾಗಿಲಿನಿಂದಲೇ ಪ್ರವೇಶಿಸಿದವು. ಹಾಗೆಯೇ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಅವುಗಳು ಕೆಲವನ್ನು ಮಾತ್ರವೇ ಪ್ರಚೋದಿಸಿದವು. ಅವುಗಳು ತೆರೆಮರೆಯ ಸಿದ್ಧಾಂತಗಳೂ ಹೌದು. ಇದನ್ನು ಮತ್ತೆ ಯಾಕೆ ಹೇಳಲಾಗಿದೆ ಎಂದರೆ ಯಾವುದನ್ನೋ ಒಂದನ್ನು ಮಾನದಂಡವಾಗಿ ಇರಿಸಿಕೊಂಡು ಅದನ್ನು ಉನ್ನತ ಸಂಸ್ಕೃತಿಯೆಂದೂ ಉಳಿದವುಗಳನ್ನು ಕನಿಷ್ಠವೆಂದೂ ಹೇಳಿರುವುದು ಬ್ರಿಟೀಶ್ ಮಾದರಿಯ ಸಂಸ್ಕೃತಿಯ ಅಧ್ಯಯನ ಕ್ರಮಗಳೇ ಆಗಿವೆ. ಜನಪ್ರಿಯ ಸಂಸ್ಕೃತಿ, ಉನ್ನತ ಸಂಸ್ಕೃತಿ, ಲಘು ಸಂಸ್ಕೃತಿ ಮುಂತಾದ ವರ್ಗೀಕರಣಗಳಿಂದ ಅಲ್ಲಿಯ ಅಧ್ಯಯನ ಕ್ರಮಗಳು ಸೊರಗಿದವು. ಅಲ್ಲಿ ಸಂಸ್ಕೃತಿಯ ಅಧ್ಯಯನದಲ್ಲಿ ಕೆಲವು ಮಾದರಿಯ ವರ್ಗೀಕರಣಗಳು ಇದ್ದವು. ಅದನ್ನೇ ಒಂದು ಹಂತದಲ್ಲಿ ವಸಾಹತು ದೇಶಗಳ ಬುದ್ಧಿಜೀವಿ ವರ್ಗಗಳು ಅನುಸರಿಸಿದವು. ಸಾಹಿತ್ಯಕ್ಕೆ ಅನ್ವಯಿಸಿ ಹೇಳುವುದಿದ್ದರೆ ಇವುಗಳೇ ಮತ್ತೆ ಯುರೋಪಿನಲ್ಲಿ ವಾಸ್ತವ ಮತ್ತು ಆಧುನಿಕತೆಯ ಚರ್ಚೆಯಾಗಿ ಪರಿಣಮಿಸಿತು. ಬ್ರಿಟೀಶ್ ಮಾದರಿಯ ಅಧ್ಯಯನ ಕ್ರಮದ ಒಂದು ಸೂಚನೆ ಮಾತ್ರವೇ ಇದು.

* (**ಗ್ರಾಂಶಿ ರೀಡರ್**)

೧೦

ಫ್ರಾಂಕ್ ಫರ್ಟ್ ಸ್ಕೂಲ್

ಸಾಂಸ್ಕೃತಿಕ ಅಧ್ಯಯನಕ್ಕೆ ಫ್ರಾಂಕ್‌ಫರ್ಟನ ಕೊಡುಗೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಫ್ರಾಂಕ್‌ಫರ್ಟ್ ಸ್ಕೂಲ್ ಅನ್ಯ ಶಿಸ್ತಿನ ಅಧ್ಯಯನವನ್ನು ಒಳಗೊಂಡದ್ದು ಕೂಡಾ ಮಹತ್ವವೇ ಆಗಿದೆ. ಯಾಕೆಂದರೆ ಅವುಗಳ ಮೂಲಕವೇ ಹೊಸತೊಂದು ಸಾಧ್ಯತೆಯು ಮೂಡಿ ಬಂತು. ಸಂಸ್ಕೃತಿಯನ್ನು ನೋಡುವ ಮತ್ತೊಂದು ಕ್ರಮದ ಕುರಿತು ಅಡರ್ನೋ ಮತ್ತೆ ಕೆಲವು ಅಂಶಳನ್ನು ಹೇಳಿದ್ದಾನೆ. ಅವನನ್ನು ಕೆಲವರು ಇಲೈಟಿಸ್ಟ್ ಎಂದು ಕರೆದಿರುವುದು ನಿಜ. ಅವನ ವಾದಗಳನ್ನು ಕೆಲವರು ಆಧುನಿಕೋತ್ತರವಾದಿ ಎಂದೂ ಹೇಳಿದ್ದಾರೆ.ಕಲಾತ್ಮಕ ಆಧುನಿಕತೆ ಮತ್ತು ಅದರ ಪರಿಣಾಮಗಳನ್ನು ಅವನು ಚರ್ಚಿಸಿದ ಕ್ರಮಗಳು ಭಿನ್ನ. ಕಲೆಯು ಒಂದು ಹಂತದಲ್ಲಿ ಸಂಸ್ಕೃತಿ ಕೈಗಾರಿಕೆಯಾಗಿಯೂ ಬದಲಾಗಿದೆ. ಆಧುನಿಕ ಯಗದಲ್ಲಿ ಕಲೆಯು ಗಿರಾಕಿಯನ್ನು ಆಧರಿಸಿಕೊಂಡು ರೂಪುಗೊಂಡಿದೆ ಎನ್ನುವುದು ಬಹಳ ಮುಖ್ಯವಾಗಿ ಗಮನಿಸಬೇಕು. ಕಲಾತ್ಮಕ ಆಧುನಿಕತೆಯು ಸುಮ್ಮನೆ ಹುಟ್ಟಿಕೊಂಡಿಲ್ಲ. ಅದನ್ನು ನೋಡುವಾಗ ನಾವು ಮರೆಯುವುದು ಯಾವುದನ್ನು ಎಂದರೆ ಅದಕ್ಕೂ ಆಧುನಿಕ ಬಂಡವಾಳವಾದಕ್ಕೂ ಇರುವ ಅಂತರ್ಗತ ಸಂಬಂಧವನ್ನು. ಅಂದರೆ ಬಂಡವಾಳವಾದಿ ಚರಿತ್ರೆಗೂ ಅದರ ಪರಿಣಾಮಗಳಿಗೂ ಕೆಲವು ಮಾದರಿಯ ಸಂಬಂಧಗಳಿವೆ. ಆಧುನಿಕಯುಗದ ಜ್ಞಾನದ ವರ್ಗೀಕರಣವು ನಮಗೆ ಬೇರೆ ಬೇರೆ ರೀತಿಯ ಪಾಠಗಳನ್ನು ಹೇಳಿವೆ. ಇದಕ್ಕೆ ಒಂದು ಉದಾಹರಣೆಯನ್ನು ನಾವು ಕೊಡಬಹುದು–ಒಂದು ಸಿನಿಮಾವನ್ನು ನಾವು ನೋಡುವಾಗ ಅದನ್ನು ಸಮಗ್ರವಾಗಿ ನೋಡುತ್ತೇವೆ. ಆದರೆ ಅದರ ಹಿಂದೆ ನಡೆಯುತ್ತಿರುವ ಅನೇಕ ಕೆಲಸವು ನಮ್ಮ ಗಮನಕ್ಕೆ ಬಾರದೇ ಹೋಗುತ್ತದೆ. ಅದರಲ್ಲಿ ಅನೇಕರು ಕೆಲಸವನ್ನು ಮಾಡಿದ್ದಾರೆ ಎನ್ನುವುದೇ ನಮಗೆ ಮರೆತು ಹೋಗಿರುತ್ತದೆ. ಆದರಲ್ಲಿ ಛಾಯಗ್ರಹಣವಿರುತ್ತದೆ. ನಿರ್ದೇಶನವಿರುತ್ತದೆ. ಕತೆಯಿರುತ್ತದೆ. ಅದರ ಹಿಂದೆ ಅನೇಕರು ಕೆಲಸವನ್ನು ಮಾಡಿದ್ದಾರೆ. ಎನ್ನುವುದೇ ನಮಗೆ ಮರೆತು ಹೋಗಿರುತ್ತದೆ.

ಯಾವುದನ್ನು ಸಂಕಲನ ಮಾಡಬೇಕು ಯಾವುದನ್ನು ಬಿಡಬೇಕು ಅನ್ನುವುದು ನಮಗೆ ಗೊತ್ತಿಲ್ಲ. ಯಾವುದನ್ನು ಬಿಟ್ಟಿದ್ದಾರೆ ಎನ್ನುವುದು ಅನೇಕ ಸಂದರ್ಭದಲ್ಲಿ ನಮಗೂ ಗೊತ್ತಾಗುವುದಿಲ್ಲ. ಪುನರುಜ್ಜೀವನ ಕಾಲದ ಅನಂತರ ನಡೆದ ಅನೇಕ ಸಂಗತಿಗಳಲ್ಲಿ ಒಂದು ಅಂಶವನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು–ಕೈಗಾರಿಕೆ ಸಂಸ್ಕೃತಿಯು ಬಂದ ಮೇಲೆ ಮನುಷ್ಯನ ಆಲೋಚನೆಯ ಕ್ರಮದಲ್ಲಿ ಬದಲಾವಣೆಯು ಉಂಟಾಯಿತು. ವ್ಯಕ್ತಿಯನ್ನು ಭಿನ್ನವೆಂದು ಪರಿಗಣಿಸುವ ಕ್ರಮವು ಚಾಲ್ತಿಗೆ ಬಂತು. ಪುನರುಜ್ಜೀವನದ ಅನಂತರ ನಡೆದ ಅನೇಕ ಸಂಗತಿಗಳಲ್ಲಿ ಮುಖ್ಯವಾದ ಅಂಶವೆಂದರೆ ಯಾವುದೋ ಒಂದು ಮಿಥಿಕಲ್ ಅನ್ನಬಹುದಾದ ಶಕ್ತಿಯು ಮನುಷ್ಯನನ್ನು ಆಳುವುದಿಲ್ಲ. ಅದರ ಬದಲಿಗೆ ಮನುಷ್ಯನು ಆಗಿದ್ದಾನೆ. ತತ್ವಜ್ಞಾನದಲ್ಲಿ ಬಂದ ಬಹಳ ಮುಖ್ಯವಾದ ಅಂಶವೆಂದರೆ ಕಾರಣವೇ ಮುಖ್ಯವಾಗಿದೆ. ಇದನ್ನು ನಾವೀಗ ಕಾರ್ಯ ಕಾರಣಗಳ ಸಂಬಂಧವೆಂದು ಹೇಳುತ್ತೇವೆ. ಮತ್ತು ಆಗಿನ ರಾಶನಾಲಿಟಿಯು ಹೇಗಿತ್ತು ಎಂದರೆ ಕಾರಣ ಮತ್ತು ಅದರಿಂದ ಹೊಳೆಯುವ ಬರುವ ಅನೇಕ ವಿಚಾರಗಳು ಹಾಗೂ ವಿಶ್ವಾತ್ಮಕತೆಗೂ ಒಂದು ಸಂಬಂಧವಿದೆ. ಯಂತ್ರದ ಪರಿಕರಗಳು ಮೂಡಿಸಿದ ಜಾಗೃತಿಯು ಯಾವ ವಿಧವೆಂದರೆ ಯಂತ್ರಕ್ಕೆ ಯಾವುದೇ ರೀತಿಯಲ್ಲಿ ಮನಸ್ಸು ಎನ್ನುವುದು ಬೇಕಾಗಿಲ್ಲ. ಅದು ಯಾವ ಜಾಗಕ್ಕೆ ಹೋದರೂ ಒಂದೇ ರೀತಿಯಲ್ಲಿ ಕೆಲಸವನ್ನು ಮಾಡುತ್ತದೆ. ಪುನರುಜ್ಜೀವನ ಅನಂತರ ಬಂದ ಬಹಳ ಮುಖ್ಯವಾದ ಪ್ರಶ್ನೆಯೆಂದರೆ ವ್ಯಕ್ತಿಯ ಸುಖ.

ಸಂಸ್ಕೃತಿಯ ಅಧ್ಯಯನವು ಒಂದು ಗುಂಪಿನ ಪ್ರಾತಿನಿಧಿಕ ಮಾದರಿಯೆನ್ನುವಂತೆ ನಡೆದ ಅಧ್ಯಯನಗಳಿಗೆ ಸೀಮಿತವಾದ ಗಡಿರೇಖೆಗಳಿವೆ. ಯಾವಾಗ ಪೋಸ್ಟ್ ಫೋರ್ಡಿಸಂ ಮತ್ತು ಪೋಸ್ಟ್ ಮೊರ್ಡನಿಸಂ ಬಂತೋ ಅಗ ಅದರ ಚರ್ಚೆಗಳ ಸ್ವರೂಪವೂ ಬದಲಾಯಿತು. ಉದಾಹರಣೆಗೆ ನಾವು ಬಳಸುವ ಆಧುನಿಕೋತ್ತರವೆಂದು ಯಾವುದನ್ನು ಹೇಳುತ್ತಿದ್ದೇವೆಯೋ ಅದು ಯಾರಿಗೆ ಮತ್ತು ಹೇಗೆ ಅನ್ವಯವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಪ್ರೆಡ್ರಿಕ್ ಜೇಮ್ಸನ್ ಹೇಳುವುದು ಏನೆಂದರೆ ಆಧುನಿಕ ಜಾಗತಿಕ ಮಾರುಕಟ್ಟೆಯ ಕಲ್ಪನೆಯೂ ಅಷ್ಟೇ ಮುಖ್ಯವಾದ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದೆ. ಅದು ರಾಷ್ಟ್ರೀಯತೆಯ ಗಡಿಯನ್ನು ಮೀರಿ ಜಾಗತಿಕ ಮಾರುಕಟ್ಟೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಆದರೆ ಅದರ ಸಮಸ್ಯೆಯೂ ಅಷ್ಟು ಬೇಗನೆ ನಮ್ಮ ಗಮನಕ್ಕೆ ಬರುವುದೂ ಇಲ್ಲ. ಬೆಳೆಯುತ್ತಿರುವ ತಾಂತ್ರಿಕತೆಯು ಮನುಷ್ಯರನ್ನು ಹತ್ತಿರ ತರುತ್ತಿದೆ.ಇದರಿಂದ ಸಾಂಸ್ಕೃತಿಕ ಅಧ್ಯಯನವು ಮತ್ತೆ ಬೇರೆ ರೀತಿಯಲ್ಲಿಯೂ ಬೆಳೆಯಿತು. ಆಧುನಿಕ ಬಂಡವಾಳವಾದವು ಮಾಹಿತಿ, ತಾಂತ್ರಿಕತೆ, ಮನೋರಂಜನೆ, ಮಾರುಕಟ್ಟೆಯ ವಿಸ್ತರಣೆಯನ್ನು ಒಳಗೊಂಡಿದೆ. ಏಕಕೇಂದ್ರಿತ ಬಂಡವಾಳವಾದವು ತನಗೆ ಬೇಕಾದಂತೆ ಮನುಷ್ಯರನ್ನು ವ್ಯಾಖ್ಯಾನಿಸುತ್ತದೆ. ಮನುಷ್ಯನು ಈಗ ಕೇವಲ ಗ್ರಾಹಕನಾಗಿದ್ದಾನೆ. ವ್ಯಕ್ತಿಯ ಅನನ್ಯತೆಯು ಈ ದೃಷ್ಟಿಯಿಂದ ಭಿನ್ನವಾಗಿದೆ. ಅನೇಕ ಸಾಂಸ್ಕೃತಿಕ ಅಧ್ಯಯನವು ವ್ಯಕ್ತಿಯನ್ನು ಒಂದು ಬಿಡಿಯಾದ ಭಾಗವಾಗಿ ನೋಡುತ್ತಿರುವುದರಿಂದ ಹೀಗೆ ಆಗುತ್ತಿದೆ. "ನಿರ್ಧಾರಾತ್ಮಕವಾದ ಏಕಕೇಂದ್ರಿತ ಆರ್ಥಿಕ ಚಟುವಟಿಕೆಯಿದು." ಎನ್ನುವ ಗ್ರಾಂಶಿಯ ಮಾತು ಇಲ್ಲಿಗೆ ಸರಿಯಾಗಿ ಹೊಂದಾಣಿಕೆಯಾಗುತ್ತಿದೆ. ಜಾಗತಿಕ ಮಾರುಕಟ್ಟೆಯ ಸಂದರ್ಭವನ್ನು ನಾವು ಸರಳವಾಗಿ

ಪರಿಗಣಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ಈಗ ನಡೆಯುತ್ತಿರುವ ಚರ್ಚೆಯನ್ನು ನಾವು ಹೀಗೂ ವಿಶ್ಲೇಷಿಸಬಹುದು–ನಾವೀಗ ಮಾಡಬೇಕಾದುದು ಏನೆಂದರೆ ಜಾಗತಿಕ ಬಂಡವಾಳವಾದವು ಸಂಸ್ಕೃತಿಯೊಂದಿಗೆ ಯಾವ ರೀತಿಯ ಒಡನಾಟವನ್ನು ಇಟ್ಟುಕೊಂಡಿದೆ ಎಂದು ನೋಡುವುದು. ಹಾಗೂ ಈ ಸಂದರ್ಭದಲ್ಲಿ ಮನುಷ್ಯನು ಹೇಗಿದ್ದಾನೆ. ಜಾಗತಿಕ ಬಂಡವಾಳವಾದವು ವ್ಯಕ್ತಿಯನ್ನು ನಿರೂಪಿಸುವ ಕ್ರಮಗಳು ಭಿನ್ನ. ಸ್ಥಳೀಯತೆಯು ನಾಶ ಹೊಂದಿ ಅದರ ಬದಲಿಗೆ ಹೊಸ ನಿರ್ವಚನಗಳು ಪ್ರಾರಂಭವಾಗಿದೆ. ಜಾಗತಿಕ ಸಮೂಹ ಮಾಧ್ಯಮಗಳು ತನಗೆ ಬೇಕಾದಂತೆ ಜನರನ್ನು ರೂಪಿಸುತ್ತಿದೆ. ತಮಗೆ ಬೇಕಾದಂತೆ ಸಂಸ್ಕೃತಿಯನ್ನು ಹಿಡಿತಕ್ಕೆ ತಂದು ನಿರ್ವಹಿಸುತ್ತಿದೆ.

ಗ್ರಾಂಶಿಯು ಹೇಳಿದ ಸಂಗತಿಯಿದು. ಅವನು ಕಾರ್ಮಿಕರನ್ನು ಯಜಮಾನಿಕೆಯ ವಿರುದ್ಧ ತಯಾರು ಮಾಡಬೇಕಾದ ಅಗತ್ಯವನ್ನು ಹೇಳುತ್ತಾನೆ. ಅವನ ಪ್ರಕಾರ ಯಜಮಾನಿಕೆಯ ವಿರುದ್ಧ ಕಾರ್ಮಿಕರನ್ನು ಸಿದ್ಧ ಮಾಡಬೇಕು ಎಂದು ಹೇಳುತ್ತಾನೆ. ಅವನ ಪ್ರಕಾರ ಅದು ಆಲೋಚನೆ, ಮೌಲ್ಯ, ಸಂಸ್ಕೃತಿ, ಭೌತಿಕತೆ, ಸಂಸ್ಥೆಗಳನ್ನು ಸಿದ್ಧ ಮಾಡಬೇಕಾದ ಪ್ರಕ್ರಿಯೆ ಕೂಡಾ ಆಗಿದೆ. ಹಾಗೆ ನೋಡುವುದಿದ್ದರೆ ನಮ್ಮ ಹಳೆಯ ವಾಣಿಜ್ಯ ಮತ್ತು ಆಧುನಿಕ ವಾಣಿಜ್ಯ ಪದ್ಧತಿಗೆ ವ್ಯತ್ಯಾಸವೂ ಇದೆ. ಹಳೆಯ ಪದ್ಧತಿಯು ಈಗ ಇಲ್ಲವಾಗಿದೆ. ಮತ್ತು ಈಗ ಬಂದಿರುವ ಹೊಸ ಪದ್ಧತಿಯನ್ನು ನಾವು ಮತ್ತೆ ವಿಭಿನ್ನವಾಗಿಯೂ ಗ್ರಹಿಸಬೇಕಾದ ಅಗತ್ಯವೂ ಇದೆ. ಅಂದರೆ ಈಗ ಬಂದಿರುವ ವಾಣಿಜ್ಯ ನೀತಿಯು ಕೂಡಾ ಒಂದು ಸಿದ್ಧಾಂತವೇ ಆಗಿದೆ. ಅಂದರೆ ಇದರಲ್ಲಿ ಬರುವ ನೀತಿಯೂ ಕೂಡಾ ಭಿನ್ನವಾಗಿದೆ. ಮತ್ತು ನೀತಿಯೇ ಇಲ್ಲದೆ ಇದು ರಚಿತವಾಗಿಲ್ಲ. ಸಮಾಜ ಮತ್ತು ಅದರ ನೀತಿಯನ್ನು ನೋಡುವುದು ಎಂದರೆ ಈ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದೂ ಹೌದು. ವಾಸ್ತವವಾಗಿ ಯಾವುದನ್ನು ಈಗ ಪ್ರಜಾಪ್ರಭುತ್ವ ಎಂದು ಹೇಳುತ್ತಿದ್ದೆವೆಯೋ ಅದು ಪಶ್ಚಿಮದ ಅನೇಕ ಸಂಗತಿಗಳನ್ನು ತೆಗೆದುಕೊಂಡಿದೆ. ಮತ್ತು ದೇಶಕ್ಕೆ ಬೇಕಾದಂತೆ ಪರಿವರ್ತನೆಯನ್ನು ಮಾಡಿದೆ. ಕ್ರಿಶ್ಚಿಯನ್ ಪ್ರಜಾ ಪ್ರಭುತ್ವ ಮತ್ತು ಅದರರ ಚಹರೆಗಳು ಒಂದು ರೀತಿಯಲ್ಲಿದೆ. ಮತ್ತು ವಸಾಹತೀಕರಣಕ್ಕೆ ಗುರಿಯಾದ ದೇಶಗಳ ಪ್ರಜಾಪ್ರಭುತ್ವವು ಬೇರೆಯಾಗಿದೆ. ರಾಜಕಾರಣ ಮತ್ತು ಅದರ ಸ್ವರೂಪವೂ ಭಿನ್ನವಾಗಿದೆ. ಮತ್ತು ಈ ಸಂಗತಿಗಳನ್ನು ಅಳವಡಿಸಿಕೊಂಡರೆ ಇದರ ಸ್ವರೂಪವನ್ನು ನೋಡಬಹುದಾದ ಸಂಗತಿಯೂ ಬೇರೆ ಇರಲು ಸಾಧ್ಯವೆಂದು ಹೋರಾಟಕಾರರು ಹೇಳಿದರು. ಚರಿತ್ರೆ ಮತ್ತು ಅದರ ಸಂಹಿತೆಗಳು ಭಿನ್ನವಾಗಿದೆ. ಅದಕ್ಕೆ ಕೆಲವು ನಿಯಮಗಳು ಇವೆ. ಮತ್ತು ಅವೇ ನಮಗೆ ಅನೇಕವನ್ನು ಕಟ್ಟಿಕೊಡುತ್ತವೆ. ಸಂಸ್ಕೃತಿಯೆನ್ನುವ ಸಂಗತಿಯನ್ನು ಚರಿತ್ರೆಯ ಜೊತೆಗೆ ಬೆಸೆಯಬೇಕಾದ ಅಗತ್ಯವನ್ನು ಮಾರ್ಕ್ಸವಾದವು ಹೇಳುತ್ತದೆ. ಭಾಷೆ ಮತ್ತು ಅದರ ಅನೇಕ ಸಂಗತಿಗಳನ್ನು ನೋಡಿದರೆ ಇದರ ಅರಿವು ನಮಗಾಗುತ್ತದೆ. ರಚನಾವಾದದಲ್ಲಿ ಭಾಷೆ ಮತ್ತು ಅದರ ಸಂವಹನವು ಮಾತ್ರವೇ ಬಹಳ ಮುಖ್ಯವಾಗಿದೆ. ಸಂವಹನವನ್ನು ರಚನೆಯು ಅರ್ಥ ಮಾಡಿಕೊಳ್ಳುವ ಕ್ರಮಗಳೂ ಬೇರೆ. ಆದರೆ ರಚನೆಯಲ್ಲಿ ಹೇಳಿದ್ದು ಏನು ಎನ್ನುವುದೂ ಬಹಳ ಮುಖ್ಯವಾಗಿದೆ. ಅದು ಬಯಕೆಯನ್ನೂ ಹೇಳುತ್ತದೆ. ಉದ್ವೇಗ ಮತ್ತು ಸ್ವಾತಂತ್ರ್ಯ ಎರಡನ್ನು ಹೆಚ್ಚು ವಿಸ್ತರಿಸಿದ್ದು ಸಾಂಪ್ರದಾಯಿಕವಾದ ಅಸ್ತಿತ್ವವಾದ. ಅದರ ಲಕ್ಷಣವೇ ಯಾವುದೆಂಬುದನ್ನು ಹೇಳುತ್ತದೆ. ಯೂಂಗನ

ಸಿದ್ಧಾಂತವು ಮತ್ತೆ ಕೆಲವು ವಿಷಯವನ್ನು ಹೇಳುತ್ತದೆ. ಯೂಂಗ್ ಹೇಳುವ ಪ್ರಾಗ್ರೂಪ ವಿಮರ್ಶೆಯು ಈ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಮತ್ತು ಇಲ್ಲಿ ಮತ್ತೊಂದು ವಿಷಯವನ್ನು ಯೋಚಿಸಬೇಕಾಗುತ್ತದೆ. ಇಲ್ಲಿ ಮತ್ತೆ ನಾವು ನೋಡಬೇಕಾದ ಸಂಗತಿಯೆಂದರೆ ಯಾವುದು ಅತ್ಯಂತ ಮಹತ್ವದ ತಾತ್ವಿಕತೆಯನ್ನು ಹೊಂದಿರುತ್ತದೆಯೋ ಅದನ್ನು ಉಳಿದ ಮೈನರ್ ತಾತ್ವಿಕತೆಗಳು ಅನುಕರಿಸುತ್ತವೆ. ಸಮಾಜ ಮತ್ತು ಅದರ ಅರಿವುಗಳು ಬದಲಾಗುವುದು ಬೇರೆ ಬೇರೆ ಅಂಶಗಳಿಂದ. ಅವುಗಳಲ್ಲಿ ವಿವಿಧತೆಯು ಇದೆ ಎನ್ನುವುದು ನಿಜವಾದರೂ ಅದನ್ನು ಹೆಚ್ಚಾಗಿ ಆರ್ಥಿಕತೆಯೇ ನಿರ್ಧರಿಸುತ್ತದೆ. ಸಮಾಜವನ್ನು ನಾವು ಒಂದು ನಿರ್ದಿಷ್ಟವಾದ ತಳಹದಿಯ ಮೇಲೆ ರಚಿತವಾಗಿರುತ್ತದೆ. ಅದನ್ನು ಚರಿತ್ರೆ ಮತ್ತು ಆರ್ಥಿಕತೆಯಿಂದ ಹೊರತು ಮಾಡಿಕೊಳ್ಳುವುದು ಅಸಾಧ್ಯ

ಸಬಾಲ್ಟ್ರನ್ ಅಧ್ಯಯನ ಚರಿತ್ರೆಯನ್ನು ನೋಡಲು ನಮಗೆ ಅವಕಾಶವನ್ನು ಕೊಟ್ಟವರಲ್ಲಿ ಗ್ರಾಂಶಿಯೂ ಒಬ್ಬ. ಸಮಾಜದಲ್ಲಿ ಅಸಮತೆಗಳು ಇವೆ ಎನ್ನುವಲ್ಲಿಂದ ಗ್ರಾಂಶಿಯು ಶುರುಮಾಡುತ್ತಾನೆ, ಅಸಮತೆ ಎನ್ನುವುದು ಒಂದು ಮಟ್ಟದಲ್ಲಿ ಮಾತ್ರವೇ ಇದೆ ಎಂದು ಹೇಳಲು ಸಾಧ್ಯವಾಗುತ್ತದೆ. ಸತ್ಯವನ್ನು ಹೇಳುವವರು ಇದನ್ನು ಗಮನಿಸಬೇಕು ಎನ್ನುವುದು ಅವನ ವಾದ. ಅಷ್ಟೇ ಅಲ್ಲ ಅದು ನಮ್ಮ ನಿಜವಾದ ಒಂದು ಸಂವೇದನೆಯನ್ನು ಹೇಳುತ್ತದೆ. (ಸೆನಸೊ ಕಮ್ಯೂನ್) ಗ್ರಾಂಶಿಯು ಇದನ್ನು ಸೈದ್ಧಾಂತಿಕ ಮಾಡುತ್ತಾನೆ. ಆದ್ದರಿಂದ ಅವನಲ್ಲಿ ಇದು ಬೇರೆಯಾಗುತ್ತದೆ. ಸ್ಥಳ ಮತ್ತು ಅವಕಾಶಗಳು ಬೇರೆಯಾಗುವಂತೆ ಆಳುವುದು ಮತ್ತು ಆಳಿಸಿಕೊಳ್ಳುವುದು ಬೇರೆಯಾಗುತ್ತದೆ. ಇದು ಸಬಾಲ್ಟ್ರನ್ ಅಧ್ಯಯನಕ್ಕೆ ಅವಕಾಶವನ್ನು ಕೊಡುತ್ತದೆ.

೧೧

ತತ್ವಜ್ಞಾನ ಮತ್ತು ನಂಬಿಕೆಗಳ ಪ್ರಶ್ನೆಗಳು

ಇದನ್ನು ಸ್ಥೂಲವಾಗಿ ಸಿದ್ಧಾಂತ ಮತ್ತು ಅದರ ಮುಂದುವರಿಕೆ ಎಂದು ಅನಿಸುತ್ತದೆ. ಒಂದು ಸಿದ್ಧಾಂತವು ಇರುತ್ತದೆ. ಅದನ್ನು ಹೆಚ್ಚು ಕ್ರಿಯೆಗೆ ತಂದಾಗ ಅದರಲ್ಲಿ ಭಿನ್ನವಾದ ಒಂದು ಕ್ರಿಯಾಶೀಲತೆಯು ಕಾಣಿಸುತ್ತದೆ. ಇದನ್ನು ಒಂದು ಪ್ರಕ್ರಿಯೆ ಎಂದು ಹೇಳಬಹುದು.ಸಿದ್ಧಾಂತ ಮತ್ತು ಅದನ್ನು ಅನ್ವಯ ಮಾಡುವಾಗ ನಾವು ತೋರಿಸುವ ಕೌಶಲಗಳ ಅಗತ್ಯವನ್ನು ಗ್ರಾಂಶಿಯು ಹೇಳುತ್ತಾನೆ. ಅರಿಸ್ಟಾಟಲ್ ಮೂರು ಸಂಗತಿಗಳನ್ನು ಹೇಳುತ್ತಾನೆ. ಒಂದು ಥಿಯಾರಿಯಾ (ಚಿಂತನೆ) ಪೊಯಸಿಸ್ ಮತ್ತೊಂದು. ಅದನ್ನು ತಯಾರಿಕೆ ಎಂದು ಹೇಳುತ್ತಾರೆ. ಕೊನೆಯದು ಪ್ರಾಕ್ಸಿಸ್. ಇದನ್ನು ಕ್ರಿಯೆ ಅಥವಾ ಚಟುವಟಿಕೆ ಎಂದು ಹೇಳಬಹುದು. ಅರಿಸ್ಟಾಟಲ್ ಮತ್ತೂ ಮುಂದುವರಿದು ಪ್ರಾಕ್ಸಿಸ್‌ನ ಮೂಲಕ ನಾವು ಪಡೆಯುಬಹುದಾದ ಜ್ಞಾನವನ್ನು ನೀತಿಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜಕೀಯ ಎಂದು ವಿಂಗಡಣೆ ಮಾಡುತ್ತಾನೆ. ಅದನ್ನು ಇಲ್ಲಿ ಗ್ರಾಂಶಿಯು ಹೇಳುತ್ತಾನೆ. ಮಾರ್ಕ್ಸವಾದ ಎಂದರೆ ಅದು ಬರೀ ಒಂದು ಸಿದ್ಧಾಂತವಲ್ಲ. ಅದರಲ್ಲಿ ಸಿದ್ಧಾಂತ ಮತ್ತು ಆಚರಣೆಗಳು ಜೊತೆಗೆ ಹೋಗುತ್ತವೆ. ಅದು ಅತ್ಯಂತ ಅಗತ್ಯ ಎನ್ನುವುದು ಅವನ ಭಾವನೆಯು ಆಗಿದೆ. ಮಾರ್ಕ್ಸವಾದದಲ್ಲಿ ಪ್ರಾಕ್ಸಿಸ್ ಎನ್ನುವುದು ಸ್ವತಂತ್ರ, ಸಾರ್ವತ್ರಿಕವೇ ಸೃಜನಶೀಲ ಹಾಗೂ ಸ್ವಯಂ ಕ್ರಿಯೆಯನ್ನು ಹೊಂದುವುದೂ ಹೌದು. ಗ್ರಾಂಶಿಯ ಪ್ರಕಾರ ಪ್ರಾಕ್ಸಿಸ್ ಎನ್ನುವುದು ಸಾಮಾನ್ಯವಾದ ಒಂದು ಜ್ಞಾನ ಎನ್ನುವುದು ಅವನ ಮೊದಲ ಪ್ರಮೇಯ. ಎರಡನೆಯದಾಗಿ ಅದು ಜೀವನದ ಅತ್ಯಂತ ಉನ್ನತವಾದ ಒಂದು ಮಜಲನ್ನು ಹೇಳುತ್ತದೆ. ಆದ್ದರಿಂದಲೇ ಮಾರ್ಕ್ಸವಾದವನ್ನು ಅಭ್ಯಾಸ ಆಧಾರಿತವಾದ ಒಂದು ತತ್ವಜ್ಞಾನ ಎಂದು ನಿರೂಪಿಸುತ್ತಾನೆ. ಕ್ರಿಯೆಯನ್ನು ಹೊರತು ಮಾಡಿದ ಮಾರ್ಕ್ಸವಾದಿ ಸಿದ್ಧಾತ ಎನ್ನುವುದು ಇಲ್ಲ. ಇದ್ದರೆ ಅದು ಮಾರ್ಕ್ಸವಾದಕ್ಕೆ ವಿರುದ್ಧವಾದ್ದು. ಅವನ ನಿಲುವು ಹೆಚ್ಚು ಕ್ರಿಯಾಶೀಲವಾದ್ದು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇದನ್ನು ಹೇಳುವಾಗಲೇ ಗ್ರಾಂಶಿಯು ನಮಗೆ ಜಗತ್ತು ಮತ್ತು ಮನುಷ್ಯರ ಸಂಬಂಧವನ್ನು ಹೇಳುತ್ತಾನೆ. ಅದನ್ನು ನಾವು ಶುದ್ಧವಾದ

ಒಂದು ಕ್ರಿಯಾಶೀಲತೆ ಎಂದೂ ಹೇಳಬಹುದು. ಅದನ್ನು ನಾವು ಆಗಿನ ಸನ್ನಿವೇಶದ ಪ್ರತಿರೋಧ ಎಂದೂ ಹೇಳಬಹುದು. ಅದು ಗ್ರಾಂಶಿಗೆ ಹೆಚ್ಚು ಅಗತ್ಯವಿತ್ತು. ಗ್ರಾಂಶಿಯಲ್ಲಿ ಇದು ಅತ್ಯಂತ ಮುಖ್ಯವಾದ ಒಂದು ಸಿದ್ಧಾಂತವಿದು. ಇದನ್ನು ಹೇಳುವಾಗ ಅವನಿಗೆ ಒಂದು ತತ್ವದ ನಿಲವು ಇತ್ತು. ಮತ್ತೊಂದು ಕಡೆಯಿಂದ ಅವನಿಗೆ ಸ್ವತಂತ್ರವಾದ ದೃಷ್ಟಿಕೋನವೂ ಇತ್ತು. ಅವನಿಗೆ ಕೆಲವು ವಿಷಯಗಳಲ್ಲಿ ಅವನಿಗೆ ಕ್ರೋಸೆಯ ಪ್ರಭಾವವೂ ಇತ್ತು. ಇದನ್ನು ಅವನು ಹೇಳಿಕೊಂಡಿದ್ದಾನೆ. ಅದು ಬೇರೆ ಪ್ರಶ್ನೆ.

ಮಾತು ಮತ್ತು ಬರಹದ ಭಾಷೆಗೆ ಇರುವ ವ್ಯತ್ಯಾಸವನ್ನು ಕ್ರೋಸೆಯು ಹೇಳಿದ್ದಾನೆ. ಅದರಲ್ಲಿ ಅಂತರವು ಇದೆ ಎನ್ನುವುದು ಅವನ ವಾದ. ಅವನ ವಾದವನ್ನು ಗ್ರಾಂಶಿಯು ಗಮನಿಸಿದ್ದಾನೆ.

ಕ್ರೋಸೆಯನ್ನು ಗ್ರಾಂಶಿಯು ಗಮನಿಸಿದ್ದಾನೆ ಎನ್ನುವುದು ಸತ್ಯ. ಕ್ರೋಸೆಯು ತತ್ವಜ್ಞಾನವನ್ನು ಕ್ರೋಸೆಯು ತುಂಬಾ ವಿಶಿಷ್ಟವಾಗಿ ಮಂಡಿಸಿದ್ದಾನೆ. ಅದರಲ್ಲಿ ಜ್ಞಾನ ಮತ್ತು ಅದರ ಏಕತೆಯೂ ಒಂದು. ಮತ್ತೊಂದು ಅಂಶವನ್ನು ಅವನು ಹೇಳುತ್ತಾನೆ. ಚರಿತ್ರೆಯು ನಮ್ಮ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಚರಿತ್ರೆಗೆ ಮತ್ತು ವರ್ಗ ಸಂಘಟನೆಗಳಿಗೆ ಒಂದು ಸಂಬಂಧವು ಇದೆ. ಅವನಲ್ಲಿ ಮತ್ತೆ ಅನೇಕ ಅಂಶಗಳು ಸೇರುತ್ತವೆ. ಅದರಲ್ಲಿ ಸೌಂದರ್ಯಶಾಸ್ತ್ರವೂ ಸೇರಿಕೊಂಡಿದೆ. ಅವನು ನಾಲ್ಕು ರೀತಿಯ ವಿಜ್ಞಾನಗಳನ್ನು ಹೇಳುತ್ತಾನೆ.. ಅದರಲ್ಲಿ ನಾಲ್ಕು ಬಗೆಯು ಇದೆ, ಒಂದು ಸೌಂದರ್ಯ ಶಾಸ್ತ್ರ, ಅರ್ಥಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರಗಳು ಸೇರಿವೆ.

ಗ್ರಾಂಶಿಯು ಉತ್ಪಾದನೆ ಪ್ರಭುತ್ವವನ್ನು ಮೊದಲು ಗ್ರಹಿಸಬೇಕಾದ ಅಗತ್ಯವು ಇರುತ್ತದೆ ಎಂದು ಹೇಳುತ್ತಾನೆ. ಪ್ರಭುತ್ವವು ಉತ್ಪಾದನೆಯನ್ನು ನಿಯಂತ್ರಿಸಿದರೆ ಆಗ ಶೋಷಣೆಯು ಹೆಚ್ಚು ನಡೆಯುತ್ತದೆ. ವಾಸ್ತವವಾಗಿ ಈವತ್ತು ನಾವು ಸಾಮಾನ್ಯರು ಮತ್ತು ಅವರ ಅಸ್ತಿತ್ವವನ್ನು ಒಂದು ಅರ್ಥದಲ್ಲಿ ಮಾತ್ರವೇ ಗಮನಿಸುತ್ತೇವೆ. ಆದರೆ ಅವರೂ ಚರಿತ್ರೆಯ ಉತ್ಪನ್ನಗಳೇ ಆಗಿರುತ್ತಾರೆ. ಹೇಗೆ ಬುದ್ಧಿಜೀವಿಗಳು ಎನ್ನುವುದು ಒಂದು ಗುಂಪಾಗಿದೆಯೋ ಅದೇ ರೀತಿಯಲ್ಲಿ ಸಾಮಾನ್ಯರು, ರೈತರೂ ಒಂದು ಮಾದರಿಯಲ್ಲಿ ಗುಂಪಾಗಿದ್ದಾರೆ. ಗ್ರಾಂಶಿಯು ಚರಿತ್ರೆ ಮತ್ತು ಅದರ ಕಾರಣಗಳು ಹೇಗೆ ಮನುಷ್ಯರನ್ನು ರೂಪಿಸುತ್ತವೆ ಎಂದು ಹೇಳುತ್ತಾನೆ. ಈ ಮೊದಲು ಹೇಳಿರುವಂತೆ ಮಾರ್ಕ್ಸವಾದದಲ್ಲಿ ಗುಂಪು ಎನ್ನುವ ಬದಲು ವರ್ಗ ಎಂದು ಗುರುತಿಸುತ್ತಾರೆ. ಯಾವ ಅಗತ್ಯಗಳು ಮತ್ತು ಯಾವ ಸನ್ನಿವೇಶಗಳು ಮನುಷ್ಯರನ್ನು ರೂಪಿಸುತ್ತವೆ ಎನ್ನುವುದು ಮುಖ್ಯ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಚರಿತ್ರೆ ಮತ್ತು ಅದರ ಸಂಚಲನೆಗಳು ವ್ಯಕ್ತಿಯನ್ನು ರೂಪಿಸುತ್ತವೆ. ಆದರೆ ಅದರಲ್ಲಿಯೂ ವಿವಿಧ ವರ್ಗೀಕರಣಗಳು ಇರುತ್ತವೆ. ಬೂರ್ಜ್ವಾ ವರ್ಗ ಮತ್ತು ರೈತರ ವರ್ಗ ಎನ್ನುವುದು ಒಂದು ವಿಧಾನ. ಅವನು ಬರೆದ ಸನ್ನಿವೇಶದಲ್ಲಿ ಈ ಗುಂಪು ಎನ್ನುವುದು ಉದ್ಯೋಗಕ್ಕೂ ಅನ್ವಯವಾಗುತ್ತದೆ. ಗುಂಪು ಎನ್ನುವುದಕ್ಕೆ ಸಮಾಜದಲ್ಲಿ ಒಂದು ಪಾತ್ರವೇ ಇರುವುದಿಲ್ಲ. ಅದರಲ್ಲಿ ವಿವಿಧ ಪ್ರಕ್ರಿಯೆಗಳು ಇರುತ್ತವೆ.

೧೨

ಶಿಕ್ಷಣ ಮತ್ತು ಸಂಸ್ಕೃತಿಗಳ ಸಂಘಟನೆಗಳು

ಗ್ರಾಂಶಿಯು ಔಪಚಾರಿಕವಾದ ಒಂದು ಶಿಕ್ಷಣವನ್ನು ಹೇಳುವುದಿಲ್ಲ. ಅವನಲ್ಲಿ ಅದು ಬದಲಾಗುತ್ತದೆ. ಒಂದು ಹಂತದಲ್ಲಿ ಬೂರ್ಜ್ವಾ ಶಿಕ್ಷಣವು ಕೆಲವನ್ನು ಮಾತ್ರವೇ ಪ್ರತಿನಿಧಿಸುತ್ತದೆ. ಇದು ಕೆಲವು ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಅದನ್ನು ಅವನು ಹೇಳುತ್ತಾನೆ. ಶಿಕ್ಷಣ ಎನ್ನುವುದು ಹೇಗೆ ಹೊಸದಾದ ಒಂದು ವರ್ಗ ಅಥವಾ ಒಂದು ಗುಂಪು ಹೇಗೆ ಮಹತ್ವದ್ದು ಎನ್ನುವುದು ಅವನಿಗೆ ತಿಳಿದಿದೆ. ಶಾಲೆಯು ಕೆಲವು ಮೌಲ್ಯಗಳನ್ನು ನಮ್ಮ ಮೇಲೆ ಹೇರುತ್ತವೆ. ಅನೇಕ ಸನ್ನಿವೇಶದಲ್ಲಿ ಹೇಗೆ ಕಡ್ಡಾಯ ಶಿಕ್ಷಣ ಎನ್ನುವುದನ್ನು ಹೇಳುವಾಗಲೂ ಅದರ ಜೊತೆಗೆ ಬೇರೆ ಪ್ರಣಾಳಿಕೆಗಳು ಇರುತ್ತವೆ. ಅದರಲ್ಲಿ ರಾಷ್ಟ್ರ ಮತ್ತು ಅದರ ಮಾನದಂಡಗಳು ಅತ್ಯಂತ ಮುಖ್ಯವಾಗುತ್ತವೆ. ನಮಗೆ ಗೊತ್ತಿರಬೇಕಾದ ಅತ್ಯಂತ ಮುಖ್ಯವಾದ ಒಂದು ಅಂಶವೆಂದರೆ ಬಂಡವಾಳವಾದ ಮತ್ತು ಸರಕಾರಗಳು ಜೊತೆಗೆ ಸೇರಿದರೆ ಆಗ ಅದರ ಸ್ವರೂಪವು ಬೇರೆಯಾಗುತ್ತದೆ. ಅಲ್ಲಿ ಒಂದು ಬಂಧವೂ ಇರುತ್ತದೆ. ಅದನ್ನು ನೋಡಿಯೇ ಗ್ರಾಂಶಿಯು ಪ್ರತಿಪ್ರಾಬಲ್ಯವನ್ನು ಹೇಳುತ್ತಾನೆ.. ಅದು ತಾತ್ವಿಕವೂ ಆಗಿರುತ್ತದೆ. ಜನರು ತಮ್ಮ ತಿಳುವಳಿಕೆಯನ್ನು ಹೆಚ್ಚು ಹೊಂದಿದ್ದರೆ ಆಗ ಅನೇಕ ಸಮಸ್ಯೆಯು ಬಗೆ ಹರಿಯುತ್ತದೆ. ಇದನ್ನು ಹೇಳುವಾಗ ನಾಗರಿಕ ಹೋರಾಟಗಳನ್ನು ನೋಡುವಾಗ ನಾವು ಅದರ ಹಿಂದೆ ಯಾವುದು ಇದೆ ಎಂದು ನೋಡುವುದು ಅತ್ಯಂತ ಅಗತ್ಯ ಎಂದು ಭಾವಿಸುವ ಗ್ರಾಂಶಿಯು ಒಂದು ಅನೌಪಚಾರಿಕವಾದ ಶಿಕ್ಷಣ ಮತ್ತು ಅದರ ಸಾಧ್ಯತೆಯನ್ನು ಹೇಳುತ್ತಾನೆ. ವಾಸ್ತವವಾಗಿ ಬುದ್ಧಿಜೀವಿಗಳ ನಡುವೆ ಒಂದು ಒಮ್ಮತವೂ ಇರಬೇಕಾಗುತ್ತದೆ. ಅದನ್ನು ರೂಪಿಸುವುದು ಅತ್ಯಂತ ಸುಲಭವಾದ ಒಂದು ಕೆಲಸವಲ್ಲ. ಅದನ್ನು ಹೇಳುವಾಗ ಜನರಿಗೆ ಒಂದು ಸಾಮಾನ್ಯವಾದ ಒಂದು ಅರಿವು ಇರಬೇಕಾಗುತ್ತದೆ. ಒಂದು ಸೈದ್ಧಾಂತಿಕವಾದ ಪ್ರಾಬಲ್ಯದಲ್ಲಿ ಇದು ಸಾಧ್ಯವಾಗುತ್ತದೆ. ಜನರಿಗೆ ಒಂದು ಅರಿವು ಬೇಕಾಗುತ್ತದೆ. ಅದು ಅವರಿಗೆ ಒಂದು ಸಾಧನವೂ ಹೌದು. ತಮ್ಮ ಯಜಮಾನರನ್ನು

ಪ್ರಶ್ನೆ ಮಾಡುವುದು ಅಂದರೆ ಅದು ಪ್ರಜ್ಞೆಗೆ ಸಂಬಂಧ ಪಟ್ಟ ಒಂದು ಪ್ರಕ್ರಿಯೆ. ಅದನ್ನು ಪಡೆಯಲು ಜನರಿಗೆ ಒಂದು ಬಗೆಯ ಶಿಕ್ಷಣ ಅತ್ಯಂತ ಅಗತ್ಯ. ಒಂದು ತಾತ್ವಿಕವಾದ ಸಿದ್ಧತೆಯು ಯಾಕೆ ಮುಖ್ಯ ಎನ್ನುವುದನ್ನು ; ಈ ದೃಷ್ಟಿಯಿಂದ ನೋಡಬೇಕಾದ ಅಗತ್ಯವನ್ನು ಗ್ರಾಶಿಯು ಹೇಳುತ್ತಾನೆ. ಅವನಲ್ಲಿ ತಾತ್ವಿಕ ಎನ್ನುವುದು ಅತ್ಯಂತ ಮುಖ್ಯವಾದ ನಿಲುವೂ ಹೌದು. ಅವನಲ್ಲಿ ತಾತ್ವಿಕತೆ ಮತ್ತು ಅಲೋಚನೆ ಮತ್ತು ನಂಬಿಕೆಗಳ ಪ್ರಶ್ನೆಯೂ ಹೌದು. ಒಂದು ಸೈದ್ಧಾಂತಿಕವಾದ ನಿಯಂತ್ರಣ ಮತ್ತು ಇನ್ನೊಂದು ಪ್ರಾಬಲ್ಯದ ಕಲ್ಪನೆಯಲ್ಲಿ ಗ್ರಾಂಶಿಯು ಇದನ್ನು ಹೇಳುತ್ತಾನೆ. ಅವನಲ್ಲಿ ಸಂಘಟಿಸುವ ತತ್ವ ಕೂಡಾ ಅತ್ಯಂತ ಮಹತ್ವದ್ದು. ನಮ್ಮ ನಿತ್ಯದ ಜೀವನ ಎನ್ನುವುದು ಬೇರೆ ವೇರೆ ರೀತಿಯಲ್ಲಿ ಸಮಾಜದ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ನಿಜ. ಹೀಗೆ ನಾವು ಭಾಗವಹಿಸುವಾಗ ಅದರಲ್ಲಿ ಕೆಲವು ಸಾಮಾನ್ಯವಾದ ಜ್ಞಾನ ಎನ್ನುವುದೂ ಇರುತ್ತದೆ. ಸಮಾಜದಲ್ಲಿ ಬಹಳಷ್ಟು ಜನರು ಯಾವುದನ್ನು ಅರ್ಥ ಮಾಡಿಕೊಂಡಿದ್ದಾರೆಯೋ ಅದನ್ನು ನಾವು ಸಾಮಾನ್ಯವಾದ ಜ್ಞಾನ ಎಂದು ಕರೆಯಬಹುದು. ಮತ್ತೊಂದು ಬಗೆಯ ಜ್ಞಾನವನ್ನು ನಾವು ಇನ್ನೊಂದು ರೀತಿಯಲ್ಲಿ ಹೇಳಬಹುದು. ಆದ್ದರಿಂದಲೇ ಗ್ರಾಂಶಿಯು ಬುದ್ಧಿಜೀವಿಗಳು ಅಂದರೆ ಅವರು ಯಾವದೋ ಒಂದು ದಂತ ಗೋಪುರದಲ್ಲಿ ಕುಳಿತುಕೊಳ್ಳುವವರು ಅಲ್ಲ ಎಂದು ಭಾವಿಸುತ್ತಾನೆ. ಅವನು ಸಾಮಾನ್ಯವಾಗಿ ಬುದ್ಧಿಜೀವಿಗಳು ಎಲ್ಲರಿಗೂ ಅನ್ವಯವಾಗುವ ಹಾಗೆ ಹೇಳುತ್ತಾನೆ. ಅವನಲ್ಲಿ ಪ್ರತಿಯೊಬ್ಬ ಮನುಷ್ಯನೂ ಬುದ್ಧಿಯನ್ನು ಹೊಂದಿರುತ್ತಾನೆ. ಆದ್ದರಿಂದ ವಿಶಿಷ್ಟವಾದ ಒಂದು ಸಾಮಾಜಿಕ ವರ್ಗ ಎನ್ನುವುದನ್ನು ಅತ್ಯಂತ ವಿಶಾಲವಾದ ನೆಲೆಯಲ್ಲಿ ಹೇಳುತ್ತಾನೆ. ಸಾಂಪ್ರದಾಯಿಕವಾದ ಬುದ್ಧಿಜೀವಿಗಳು ಸ್ವಾಯತ್ತ ಮತ್ತು ಸ್ವತಂತ್ರ ಎಂದು ತಿಳಿಯುತ್ತಾರೆ. ಆದರೆ ಅದು ಅಷ್ಟು ಸರಳವಾದ್ದು ಅಲ್ಲ ಎನ್ನುವುದು ಗ್ರಾಂಶಿಯ ನಿಲುವು. ಅವರು ಪ್ರಭುತ್ವದ ಜೊತೆಗೆ ಒಂದು ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಆಢಳಿತಕ್ಕೆ ಸಹಾಯವನ್ನು ಮಾಡುತ್ತಾರೆ. ಬೌದ್ಧಿಕ ಎನ್ನುವುದು ಹೇಗೆ ಸಮಾಜದಲ್ಲಿ ಅತ್ಯಂತ ಮುಖ್ಯವಾಗುತ್ತದೆ ಎಂದು ಅವನು ಹೇಳುತ್ತಾನೆ. ಒಂದು ವಿಮರ್ಶಾತ್ಮಕವಾದ ಎಚ್ಚರ ಎನ್ನುವುದನ್ನು ಈ ದೃಷ್ಟಿಯಿಂದ ಗ್ರಾಂಶಿಯು ಪರಿಶೀಲನೆ ಮಾಡುತ್ತಾನೆ. ಕಲಿಯುವವರು ಬರೀ ಸ್ವೀಕಾರಕ್ಕೆ ಮಾತ್ರವೇ ಸೀಮಿತವಾಗಿ ಇರುವುದಿಲ್ಲ.

ಸಾಂಪ್ರದಾಯಿಕವಾದ ಶಿಕ್ಷಣವು ತನ್ನ ಗುರಿಯನ್ನು ಎಷ್ಟು ಸಾಧಿಸಿದೆ ಎನ್ನುವುದು ಗ್ರಾಂಶಿಯಲ್ಲಿ ಒಂದು ಪ್ರಶ್ನೆ. ಆದು ಯಾವ ಗುರಿಯನ್ನು ಹೊಂದಿದೆಯೋ ಅಷ್ಟನ್ನು ಅದು ಸಾಧಿಸಿಲ್ಲ. ಆದರೆ ಯಾವಾಗ ಶಿಕ್ಷಣದಲ್ಲಿ ಹೊಸದಾದ ಮಾನದಂಡವು ಬಂದ ಮೇಲೆ ಶಾಲೆ ಮಕ್ಕಳು ಮತ್ತು ಅವರ ಸ್ವಭಾವದಲ್ಲಿ ಉಂಟಾದ ವ್ಯತ್ಯಾಸವನ್ನು ನಾವು ಇಲ್ಲಿ ಗಮನಿಸಬೇಕು. ಇದು ಈವತ್ತು ಭಾರತದಲ್ಲಿಯೂ ಕಾಣಿಸುತ್ತದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಮನೆಗೂ ತೆಗೆದುಕೊಂಡು ಹೋಗುತ್ತಾರೆ. ಅದನ್ನು ನಾವು ಈವತ್ತು ಹೋಂವರ್ಕ್ ಎಂದು ಹೇಳುತ್ತೇವೆ. ಶಾಲೆ ಮತ್ತು ಮನೆ ಎನ್ನುವುದಕ್ಕೆ ಹೆಚ್ಚು ವ್ಯತ್ಯಾಸ ಉಳಿಯುವುದಿಲ್ಲ. ಮಕ್ಕಳ ಸಣ್ಣ ಅವಕಾಶಗಳನ್ನೂ ಆಧುನಿಕ ಶಿಕ್ಷಣವು ತಿಂದು ಹಾಕಿದೆ. ಇದರ ಜೊತೆಗೆ ಆಧುನಿಕ ಶಿಕ್ಷಣವು ಜ್ಞಾನ ಮತ್ತು ಅಭಿವ್ಯಕ್ತಿಯನ್ನು ಮಾತ್ರವೇ ಹೇಳುತ್ತದೆ. ತಾಂತ್ರಿಕವಾಗಿ ಇದನ್ನು ಶ್ರೇಷ್ಠ ಎಂದು ಭಾವಿಸಲಾಗಿದೆ.

ಶಾಲೆಯಲ್ಲಿ ನಾವು ಯಾರನ್ನು ಬುದ್ಧಿವಂತ ವಿದ್ಯಾರ್ಥಿ ಎಂದು ಹೇಳುತ್ತೇವೆ? ಪಟ್ಟಣದಲ್ಲಿ ಓದುವ ವಿದ್ಯಾರ್ಥಿಗೆ ಮತ್ತು ಸಾಮಾನ್ಯವಾದ ಒಂದು ಹಳ್ಳಿಯಲ್ಲಿ ಓದುವ ಮಗುವಿಗೆ ವ್ಯತ್ಯಾಸವಿದೆ. ಬುದ್ಧಿವಂತಿಕೆಯೂ ಬೇರೆಯಾಗಬಹುದು. ಅದರ ಜೊತೆಗೆ ನಾವು ಮತ್ತೊಂದು ಯೋಚನೆಯನ್ನು ಮಾಡಬಹುದು: ಶಾಲೆಯಲ್ಲಿ ಕಲಿಸುವುದು ಅಂದರೆ ಅದರಲ್ಲಿ ಶಿಸ್ತು ಕೂಡಾ ಇರುತ್ತದೆ. ಬೌದ್ಧಿಕವಾದ ಸಂಗತಿಗಳೂ ಇರುತ್ತವೆ. ಶಿಕ್ಷಣದಲ್ಲಿ ಮಾನವೀಯತೆ ಮತ್ತು ನೈತಿಕತೆ ಎನ್ನುವುದು ಕೂಡಾ ಈ ಮಾದರಿಯಲ್ಲಿ ಜಾರಿಗೆ ಬಂದುದು ನಿಜ. ಉನ್ನತ ಶಿಕ್ಷಣವು ದೊರೆತ ಮೇಲೆ ವಿದ್ಯಾರ್ಥಿಯು ಸಾಕಷ್ಟು ತಿಳುವಳಿಕೆಯನ್ನು ಪಡೆದಿರುತ್ತಾನೆ. ಆದ್ದರಿಂದ ಅನಂತರ ಅವನು ಸಮಾಜದಲ್ಲಿ ಮಾನ್ಯತೆಯನ್ನು ಪಡೆಯುತ್ತಾನೆ. ಅದರ ಜೊತೆಗೆ ಅವನು ಉತ್ಪಾದನೆಯನ್ನು ಪಡೆಯಲು ಬೇಕಾದ ಶಕ್ತಿಯನ್ನು ಹೊಂದಿರುತ್ತಾನೆ. ಒಂದು ಪ್ರಾಯೋಗಿಕವಾದ ಶಕ್ತಿಯಾಗಿ ಮಾರ್ಪಾಡುತ್ತಾನೆ., ಆದರೆ ಗ್ರಾಂಶಿಯು ಒಂದು ವ್ಯತ್ಯಾಸವನ್ನು ಮಾಡುತ್ತಾನೆ. ಸೃಜನಶೀಲವಾದ ಶಾಲೆ ಮತ್ತು ಕ್ರಿಯಾಶೀಲವಾದ ಶಾಲೆಗಳು ಎಂದು ನಾವು ಬೇರೆ ಮಾಡುವುದು ಅಗತ್ಯ ಎನ್ನುವುದು ಅವನ ನಿಲುವು.ಇದರಲ್ಲಿ ಉದಾರವಾದ ನಿಲವು ಇರುವುದು ಕ್ರಿಯಾಶೀಲವಾದ ಶಾಲೆಯಲ್ಲಿ. ವಿದ್ಯಾರ್ಥಿಗೆ ಯಾವುದು ಅಗತ್ಯ ಎಂದು ಅನಿಸುತ್ತದೆಯೋ ಅದಕ್ಕೆ ಹೋಗಲು ಅವಕಾಶ ಇರುವುದು ಇದರಲ್ಲಿ. ಸೃಜನಶೀಲವಾದ ಶಾಲೆ ಮತ್ತು ಅದರ ಸ್ವರೂಪವನ್ನು ನಾವು ಬೇರೆ ಥರ ನೋಡಲು ಸಾಧ್ಯ ಎನ್ನುವುದು ಅವನ ನಿಲುವು. ಸೃಜನಶೀಲವಾದ ಶಾಲೆಯಲ್ಲಿ ವಿದ್ಯಾರ್ಥಿ ಇದರಲ್ಲಿ ಪ್ರಯೋಗ ಎನ್ನುವುದು ಅತ್ಯಂತ ಮುಖ್ಯ. ಅದರ ಜೊತೆಗೆ ಇದು ಇದು ಇನ್ನೊಂದು ಸಂಗತಿಯನ್ನು ನಮ್ಮ ಮುಂದೆ ಇಡುತ್ತದೆ. ಹೊಸದಾದ ಆವಿಷ್ಕಾರಕ್ಕೆ ಇದರಲ್ಲಿ ಒಂದು ಮನ್ನಣೆಯು ಇರುತ್ತದೆ. ಸಮೂಹದ ಜೊತೆಗೆ ಇದರಲ್ಲಿ ಸಂಬಂಧವೂ ಇರುತ್ತದೆ.

ಯಾವುದನ್ನು ನಾವು ಸಾಮಾನ್ಯವಾದ ಶಾಲೆ ಎಂದು ಹೇಳುತ್ತೇವೆಯೋ ಅದರಲ್ಲಿ ಸಮಾಜವೂ ಅತ್ಯಂತ ಮುಖ್ಯವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ವಿದ್ಯಾರ್ಥಿಯು ಇದರಲ್ಲಿ ಮುಖ್ಯವಾದ ಒಂದು ಪಾತ್ರವನ್ನು ವಹಿಸುತ್ತಾನೆ ಎನ್ನುವುದು ಇಲ್ಲಿ ಉಲ್ಲೇಖನೀಯ.

ರಾಜಕಾರಣ ಮತ್ತು ಸಂಸ್ಕೃತಿಯು ಹೇಗೆ ಸಂಬಂಧವನ್ನು ಇಟ್ಟುಕೊಳ್ಳುತ್ತದೆ ಎನ್ನುವುದು ಎಲ್ಲರ ಅನುಭವಕ್ಕೆ ಬರುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಜನರಿಗೆ ಕೆಲವು ಮಾದರಿಯ ತರಬೇತಿಯನ್ನು ಕೊಡುವುದು ಈವತ್ತು ಎಲ್ಲಾ ಕಡೆಗೆ ನಾವು ಕಾಣುತ್ತೇವೆ. ತರಬೇತಿ ಎನ್ನುವುದು ವ್ಯಕ್ತಿಯನ್ನು ಒಂದು ನಿಯಮಕ್ಕೆ ಒಗ್ಗಿಸುವುದೂ ಹೌದು. ಇದು ರಾಜಕೀಯ ತಂತ್ರಗಾರಿಕೆಗೆ ಬೇಕಾಗುತ್ತದೆ. ಇದರ ಮೂಲಕವೇ ಒಂದು ತಾಂತ್ರಿಕವಾದ ಸಂಸ್ಕೃತಿಯು ಬೆಳೆಯುತ್ತದೆ. ಸಾಂಸ್ಕೃತಿಕ ಗುಂಪುಗಳು ಬೆಳೆಯುವುದು ಹೀಗೆ. ಆದರೆ ವ್ಯಕ್ತಿ ಮತ್ತು ಅವನ ಸಂಸ್ಕೃತಿಗೆ ಒಂದು ಮಹತ್ವವು ಬರುತ್ತದೆ. ನಾವು ಈವತ್ತು ಬಳಸುತ್ತಿರುವ ಅನೇಕ ಪದಗಳು ಇದನ್ನು ಸೂಚಿಸುತ್ತವೆ. ಸಂಸ್ಕೃತಿ ತಜ್ಞರು, ಜಾನಪದ ತಜ್ಞರು. ಕಾನೂನು ತಜ್ಞರು ಇತ್ಯಾದಿ. ಆದರೆ ಒಂದು ಪ್ರಶ್ನೆಯು ಇರುತ್ತದೆ: ಯಾವ ಸಮಾಜದಲ್ಲಿ ಯಾವುದು ಅಗತ್ಯವು ಇದೆಯೋ ಅದನ್ನು ಮಾತ್ರವೇ ರೂಪಿಸಲಾಗುತ್ತದೆ. ಅದರಲ್ಲಿಯೂ ಇದೆಲ್ಲಾ ಕೆಲಸ ಮತ್ತು ಅದರ ವರ್ಗೀಕರಣವು ಇದ್ದೇ ಇರುತ್ತದೆ. ಚರ್ಚೆಗಳು ಇರುತ್ತವೆ. ಪ್ರತಿಕ್ರಿಯೆಗಳು

ಇರುತ್ತವೆ. ವ್ಯಕ್ತಿಯ ಕೌಶಲ, ಅವನಿಗೆ ದೊರೆಯುವ ತರಬೇತಿ, ಅವನ ಆಯ್ಕೆಗಳು, ಅವನು ತನ್ನ ಕೆಲಸಗಳಲ್ಲಿ ತೋರಿಸುವ ಕಾರ್ಯಕ್ಷಮತೆ ಮುಂತಾದವು ಮಾನದಂಡಗಳೂ ಹೌದು. ಇದಕ್ಕೆ ಪೂರಕವಾಗಿ ಗ್ರಾಂಶಿಯು ಒಂದು ಉದಾಹರಣೆಯನ್ನು ಕೊಡುತ್ತಾನೆ – ಬರಹ ಎನ್ನುವುದು ಸಂಸ್ಕೃತಿಯಲ್ಲಿ ತನ್ನದೇ ಆದ ಒಂದು ಅಸ್ತಿತ್ವವನ್ನು ಹೊಂದಿರುತ್ತದೆ ಆದರೆ ಬರೆಯುವುದು ಎನ್ನುವುದೂ ಒಂದು ಬೌದ್ಧಿಕವಾದ ಚಟುವಟಿಕೆಯು ಆಗಿದೆ. ಅದು ನಮ್ಮ ಆಲೋಚನೆಯನ್ನು ಹೇಳುತ್ತದೆ. ಇನ್ನೊಂದು ಕಡೆಯಿಂದ ಅದು ನಮ್ಮ ಗ್ರಹಿಕೆ ಮತ್ತು ಜ್ಞಾನವನ್ನು ಹೇಳುತ್ತದೆ. ಮುಖ್ಯವಾಗಿ ಗ್ರಾಂಶಿಯು ಶಿಕ್ಷಣ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅದರಲ್ಲಿ ಒಂದು ವಿಮರ್ಶಾತ್ಮಕವಾದ ಎಚ್ಚರವು ಇರಬೇಕಾಗುತ್ತದೆ ಎಂದು ಭಾವಿಸುತ್ತಾನೆ. ನಿತ್ಯದಲ್ಲಿ ನಾವು ಬುದ್ಧಿಜೀವಿಗಳನ್ನು ಕಾಣುತ್ತೇವೆ. ಅವರು ಅನೇಕವನ್ನು ರೂಪಿಸುತ್ತಾರೆ. ಶಿಕ್ಷಣವನ್ನು ಹೇಳುವಾಗ ಅವನು ಒಂದು ಮಾತನ್ನು ಹೇಳುತ್ತಾನೆ ಯಜಮಾನಿಕೆಯು ಯಾವ ಸನ್ನಿವೇಶದಲ್ಲಿ ಯಾವುದಕ್ಕೆ ಒಂದು ಬಗೆಯ ಶಿಕ್ಷಣವನ್ನು ಹೇರುತ್ತದೆ ಎನ್ನುವುದನ್ನು ಗ್ರಾಂಶಿಯು ಹೇಳುತ್ತಾನೆ. ವಿಶ್ವ ವಿದ್ಯಾಲಯವು ಒಂದು ಹಂತದಲ್ಲಿ ಪ್ರಭುತ್ವದ ಪರಿಕರವೂ ಆಗುತ್ತದೆ. ಅದು ಬೇರೆ ಪ್ರಶ್ನೆ. ಗ್ರಾಂಶಿಯು ಸಾರ್ವಜನಿಕವಾಗಿ ನಾವು ಏನು ಮಾತಾಡುತ್ತೇವೆಯೋ ಅದನ್ನು ನಿರಾಕರಿಸುವುದಿಲ್ಲ. ನಮ್ಮ ಬೌದ್ಧಿಕವಾದ ಚಟುವಟಿಕೆ ಎನ್ನುವುದು ಶೂನ್ಯವಾದ್ದು ಅಲ್ಲ. ನಮಗೆ ಶಾಲೆ ಎನ್ನುವುದು ಕಲಿಸಲು ಇರುವ ಸ್ಥಳವೂ ಹೌದು. ಅದು ಒಂದು ಬಗೆಯಲ್ಲಿ ಸಾಂಸ್ಥಿಕವಾದ ರೂಪವೂ ಹೌದು..ಅದರಲ್ಲಿ ನಾವು ಸಾಮಾಜಿಕ ಚಟುವಟಿಕೆಯನ್ನು ಕಾಣಬಹುದು. ಬುದ್ಧಿಜೀವಿಗಳು ಮತ್ತು ಅವರ ಕ್ರಿಯಾಶೀಲತೆಯು ರೂಪುಗೊಳ್ಳುವುದು ಇಲ್ಲಿಯೇ. ಶಾಲೆ ಮತ್ತು ಅದರ ಸ್ವರೂಪವನ್ನು ನಾವು ಒಂದು ರೀತಿಯಲ್ಲಿ ಗ್ರಹಿಸಬಹುದು. ಶಾಲೆಯಲ್ಲಿ ಕಲಿಸುವವರು ಮತ್ತು ಕಲಿಯುವವರು ಇರುತ್ತಾರೆ ಎನ್ನುವುದು ನಿಜ. ಆದರೆ ಕಲಿಯುವವರು ಮತ್ತು ಕಲಿಸುವವರ ಮಧ್ಯೆ ಒಂದು ಶೇಕಡಾವಾರು ಸಂಖ್ಯೆ ಇರುತ್ತದೆ. ಎಲ್ಲರಿಗೂ ಒಬ್ಬ ಶಾಲೆಯ ಮಾಸ್ತರನು ಕಲಿಸಲಾರ. ನಮಗೆ ಗೊತ್ತಿರುವಂತೆ ಶಾಲೆಗಳಿಗೆ ವ್ಯತ್ಯಾಸವಿದೆ. ಅಷ್ಟೇ ಅಲ್ಲ ಪಠ್ಯಕ್ರಮಗಳಲ್ಲಿ ಭಿನ್ನತೆಯು ಇರುತ್ತದೆ. ಪ್ರಾಥಮಿಕ ಶಾಲೆ, ಹೈಸ್ಕೂಲ್, ಕಾಲೇಜು ಮತ್ತು ಮಾಸ್ಟರ್ ಪದವಿಗಳು. ಇವುಗಳಲ್ಲಿ ಕಲಿಸುವ ವಿಧಾನಗಳು ಬೇರೆ. ಬೇರೆ ಬೇರೆ ಪರಿಕರಗಳು ಇರುತ್ತವೆ. ಯಾವ ಜ್ಞಾನವನ್ನು ಕೊಡಬೇಕು ಎನ್ನುವುದು ನಿರ್ಧಾರಿತವಾಗಿದೆ. ಓದುವುದು , ಬರೆಯುವುದು, ಚರಿತ್ರೆಯನ್ನು ಕಲಿಯುವುದು ಮುಖ್ಯ. ಇದನ್ನು ಒಂದು ಸರ್ವೇ ಸಾಧಾರಣವಾದ ಕ್ರಮವೂ ಹೌದು. ಹಕ್ಕುಗಳು ಮತ್ತು ಕರ್ತವ್ಯಗಳು ಶಾಲೆಯಲ್ಲಿ ಕಲಿಸುವ ವಿಷಯಗಳೂ ಹೌದು. ಶಾಲೆಯಲ್ಲಿ ವಿವಿಧ ಸಂಗತಿಗಳನ್ನು ಒಂದು ಸಂಯೋಜನೆ ಮಾಡಲಾಗುತ್ತದೆ. ಅದರಲ್ಲಿ ಗ್ರಂಥಾಲಯವಿರುತ್ತದೆ. ಪ್ರಯೋಗಕ್ಕೆ ಪ್ರಯೋಗ ಶಾಲೆಗಳು ಇರುತ್ತವೆ. ತರಗತಿಯನ್ನು ಮಾಡುವುದಕ್ಕೆ ಬೇಕಾದ ಕೊಠಡಿಗಳು ಇರುತ್ತವೆ., ಇವುಗಳು ಶಾಲೆ ಮತ್ತು ಅದರ ಕ್ರಿಯಾಶೀಲತೆಗೆ ಬೇಕಾಗುತ್ತದೆ.

ರಾಜಕಾರಣ ಮತ್ತು ಅದರ ಸ್ವರೂಪವನ್ನು ಆಧ್ಯಯನ ಮಾಡಲು ನಮಗೆ ಈವತ್ತು ರಾಜ್ಯಶಾಸ್ತ್ರ ಎನ್ನುವುದು ಇದೆ. ಅದನ್ನು ನಾವು ಒಂದು ಸ್ವತಂತ್ರ ಶಾಸ್ತ್ರ ಎನ್ನುವಂತೆ ಕಲಿಯುತ್ತಿದ್ದೇವೆ. ಅದೂ ಒಂದು ಶಾಸ್ತ್ರವಾಗಿರುವಂತೆ ಅದಕ್ಕೂ ಕೆಲವು ನಿಯಮಗಳೂ ಇವೆ. ಮೆಕೆವಲ್ಲಿ ಬರೆಯುವಾಗ

ಈ ಪ್ರಶ್ನೆಗಳು ಬಂದಿದ್ದವು. ಈ ಪ್ರಶ್ನೆಯನ್ನು ಮೆಕೆವೆಲ್ಲಿಯೂ ಕೇಳಿದ್ದ. ರಾಜ್ಯಶಾಸ್ತ್ರ ಎನ್ನುವುದು ಒಂದು ಪ್ರತ್ಯೇಕವಾದ ಒಂದು ವಿಜ್ಞಾನದ ಥರ ನೋಡಬೇಕೇ ಅಥವಾ ಅದು ಒಂದು ಸೃಜನಶೀಲವಾದ ಕರ್ಮವೇ ಎನ್ನುವುದು ಆಗ ಇದ್ದ ವಾಗ್ವಾದ. ಈವತ್ತು ಅದನ್ನು ಒಂದು ಶಾಸ್ತ್ರವಾಗಿ ನೋಡುವುದರಿಂದ ಅನೇಕ ಸಮಸ್ಯೆಗಳು ನಮ್ಮ ಮುಂದೆ ಇದೆ. ಒಂದು ಮುಖ್ಯವಾದ ಪ್ರಶ್ನೆ ಎಂದರೆ ರಾಜಕಾರಣವನ್ನು ನಾವು ಹೇಗೆ ಸಂಯೋಜನೆ ಮಾಡಬೇಕು ಎನ್ನುವುದು ಒಂದಾದರೆ ಮತ್ತೊಂದು ಅದನ್ನು ನಾವು ತಾರ್ಕಿಕವಾಗಿ ಗ್ರಹಿಸುವುದು ಹೇಗೆ? ಕ್ರೊಸೆಯು ಇದಕ್ಕೆ ಸಂಬಂಧಪಟ್ಟಂತೆ ಒಂದು ಅನ್ವಯ ಮಾಡುತ್ತಾನೆ. ಮೆಕೆವೆಲ್ಲಿ ಅತ್ಯಂತ ಮಹತ್ವದ ಸಮಸ್ಯೆ ಎಂದರೆ ನೈತಿಕತೆಯನ್ನು ತೀರ್ಮಾನ ಮಾಡುವಾಗ ಸಮಾಜ ಮತ್ತು ಅದರ ಸಮಸ್ಯೆಯನ್ನು ಅಷ್ಟಾಗಿ ಗಮನವನ್ನು ಇಟ್ಟಿದ್ದಾನೆ ಎಂದು ಅನಿಸುವುದಿಲ್ಲ. ಆದ್ದರಿಂದ ಕ್ರೋಸೆಯು ಇದು ಅವನ ಸಮಸ್ಯೆ ಎಂದು ಹೇಳುತ್ತಾನೆ. ಕ್ರೋಸೆಯು ಒಂದು ವಿಚಾರವನ್ನು ಹೆಚ್ಚು ಹೇಳುತ್ತಾನೆ: ಅದರಲ್ಲಿ ಪ್ರಾಯೋಗಿಕವಾದ ಅಭ್ಯಾಸಗಳು ಮತ್ತು ಯಾವುದನ್ನು ನಾವು ಪವಿತ್ರವಾದ ಅಭ್ಯಾಸಗಳು ಬೇರೆ ಎನ್ನುವುದು ಅವನ ಭಾವನೆ. ಮನುಷ್ಯ ಮತ್ತು ಅವನ ಶಕ್ತಿಗೆ ಅವನಲ್ಲಿ ಒಂದು ಖಚಿತತೆಯು ಇದೆ. ಆದರೆ ಮತ್ತೊಂದು ಕಡೆಯಿಂದ ಅವನು ಆಧ್ಯಾತ್ಮವಾದ ಒಂದು ರೂಪ ಮತ್ತು ಅದರ ಚರ್ಚೆಯನ್ನು ಮಾಡುತ್ತಾನೆ. ಆಧ್ಯಾತ್ಮ ಮತ್ತು ಅದರ ಶಕ್ತಿಯನ್ನು ಜನರು ನಂಬುತ್ತಾರೆ. ಇವುಗಳ ನಡುವೆ ಒಂದು ರಾಜಕಾರಣ ಎನ್ನುವುದು ಇರುತ್ತದೆ. ಅದಕ್ಕೆ ಅದರದ್ದೇ ಆದ ಒಂದು ನಿಲುವು ಇರುತ್ತದೆ. ಒಂದು ಹಂತದ ವರೆಗೆ ಅದು ಮೇಲ್ರಚನೆಯನ್ನು ಹೇಳುತ್ತದೆ. ರಾಜಕಾರಣ ಎನ್ನುವುದು ಈ ದೃಷ್ಟಿಯಿಂದ ಜನರಿಗೆ ಒಂದು ಮಾರ್ಗವನ್ನು ಹೇಳುತ್ತದೆ. ಅದು ಜನರನ್ನು ನಿಯಂತ್ರಣ ಮಾಡುತ್ತದೆ. ಪ್ರಭುತ್ವ ಎನ್ನುವುದು ರಾಜಕೀಯ ಚಟುವಟಿಕೆಯೂ ಹೌದು. ಕ್ರೋಸೆಯು ಇದನ್ನು ಹೇಳುವಾಗ ರಾಜಕಾರಣ ಮತ್ತು ಅದರ ಕ್ರಿಯೆಗಳು ಸಮಾಜದಲ್ಲಿ ಒಂದು ಬುನಾದಿಯೂ ಹೌದು. ಆದರೆ ಇದನ್ನು ಮಾತ್ರವೇ ನಾವು ಗಣನೆಗೆ ತೆಗೆದುಕೊಂಡರೆ ಸ್ವಲ್ಪ ಸಮಸ್ಯೆಯನ್ನು ಮತ್ತು ಗೊಂದಲವನ್ನು ಉಂಟು ಮಾಡುತ್ತದೆ.

ರಾಜಕಾರಣ ಮತ್ತು ಅದರ ಅನನ್ಯತೆಗೂ ಅದು ನಮಗೆ ಉಂಟು ಮಾಡುವ ಸಂವೇದನೆಗೂ ಅಂತರ್ಗತವಾದ ಸಂಬಂಧವು ಇರುತ್ತದೆ. ಅದರ ಜೊತೆಗೆ ಇನ್ನೊಂದು ಅಂಶವನ್ನು ನೋಡಬೇಕಾಗುತ್ತದೆ. ರಾಜಕಾರಣ ಎನ್ನುವುದು ಯಾವತ್ತೂ ಒಂದೇ ರೂಪದಲ್ಲಿ ಇರುವುದಿಲ್ಲ. .ಅದರ ಭಿನ್ನತೆಗಳನ್ನು ನಾವು ಗಮನಿಸಬೇಕಾಗುತ್ತದೆ. ಅದನ್ನು ನಾವು ದ್ವಂದ್ವಾತ್ಮಕ ಎಂದೂ ಹೇಳಬಹುದು. ಯಾವುದೇ ಸಮಾಜದಲ್ಲಿ ರಾಜಕೀಯ ಕ್ರಿಯಾಶೀಲತೆ ಎನ್ನುವುದು ಇದ್ದೇ ಇರುತ್ತದೆ. ಅದು ನಿಯಮ ಬದ್ಧವೂ ಆಗಿರುತ್ತದೆ. ಆದರೆ ರಾಜಕೀಯ ರಚನೆ ಎನ್ನುವುದು ಬದಲಾಗುತ್ತಾ ಹೋಗುತ್ತದೆ. ಅದರಲ್ಲಿ ರಾಜಕೀಯ ರಚನೆಯು ಸಮಾಜದ ರಚನೆಯ ಜೊತೆಗೆ ಇರುತ್ತದೆ. ಅದರಲ್ಲಿ ನಿರ್ದಿಷ್ಟವಾದ ಚರಿತ್ರೆಯು ಇರುತ್ತದೆ. ಇಲ್ಲಿಯೂ ಫಿಲಾಸಫಿ ಆಫ್ ಪ್ರಾಕ್ಸಿಸ್‌ನ ತತ್ವವು ಅನ್ವಯವಾಗುತ್ತದೆ. ವರ್ಗಗಳು, ಕಾರ್ಯವಿಧಾನ ಮತ್ತು ತಂತ್ರಗಳು ಇರುತ್ತವೆ. ಕ್ರೋಚೆಯು ಈ ಸನ್ನಿವೇಶದಲ್ಲಿ ಒಂದು ಅಂತಸ್ಥ ದೇವತೆಗಳು ಮತ್ತು ಅವುಗಳ ಹಾಜರಾತಿಗಳು ಇರುತ್ತವೆ ಎಂದು ಹೇಳುತ್ತಾನೆ. ಮನುಷ್ಯನು ಸಮಾಜದಲ್ಲಿ ತನ್ನದೇ ಆದ

ಒಂದು ಪಾತ್ರವನ್ನು ವಹಿಸುತ್ತಾನೆ. ಅದಕ್ಕೆ ಒಂದು ಚಾರಿತ್ರಿಕವಾದ ಒಂದು ಮೌಲ್ಯವೂ ಇರುತ್ತದೆ. ಸಮಾಜದೊಂದಿಗೆ ಮನುಷ್ಯನು ಪ್ರಜ್ಞಾಪೂರ್ವಕವಾದ ಒಂದು ಸಂಬಂಧವನ್ನು ಹೊಂದಿರುತ್ತಾನೆ. ಎಂದು ಮಾರ್ಕ್ಸವಾದವು ಹೇಳಿದ್ದನ್ನು ನಾವು ಇಲ್ಲಿ ನೆನಪುಮಾಡಿಕೊಳ್ಳಬೇಕು. (ಕ್ರಿಟಿಕ್ ಆಫ್ ಪೊಲಿಟಿಕಲ್ ಎಕಾನಮಿ) ಆದರೆ ಕ್ರೋಸೆಯಲ್ಲಿ ಮತ್ತೊಂದು ಮಾತು ಬರುತ್ತದೆ. ಅವನ ಪ್ರಕಾರ ಒಂದು ಆದರ್ಶ ಎನ್ನುವುದು ಇದೆ. ಅದನ್ನು ಅತ್ಯಂತ ಮುಖ್ಯವಾಗಿ ನಾವು ಪರಿಪೂರ್ಣವಾದ ಒಂದು ಚರಿತ್ರೆ ಎಂದೂ ಹೇಳಬಹುದು. ಆಗ ವಿಶ್ವ ಮತ್ತು ಅದರ ಬಗಗೆ ಇದ್ದ ದೃಷ್ಟಿಕೋನವನ್ನು ಅವನು ಮಂಡಿಸುತ್ತಾನೆ. ಅವನು ಉದಾರವಾದ ನಿಲುವನ್ನು ತಳೆಯುತ್ತಾನೆ. ರಾಜಕೀಯವಾದ ನಿಲುವು ಮತ್ತು ಅದರ ಕ್ರಿಯೆ ಹೇಗೆ ಇರುತ್ತದೆ ಎಂದು ಹೇಳುವಾಗ ಅದರ ಅನ್ವಯವನ್ನು ಹೇಳುತ್ತಾನೆ. ಇದನ್ನು ಹೇಳುವಾಗ ಅವನು ವರ್ಗೀಕರಣಗಳು, ಪರಿಕಲ್ಪನೆಗಳು, ವಿಶ್ವಾತ್ಮಕತೆಯನ್ನು ಹೇಳುತ್ತಾನೆ. ರಾಜಕಾರಣ ಮತ್ತು ಅದರ ನೈತಿಕತೆಯನ್ನು ಹೇಳುವ ಅವನು ಮತ್ತೊಂದು ದೃಷ್ಟಿಕೋನದಲ್ಲಿ ರಾಜಕೀಯ ಪಕ್ಷಗಳು ಯಾವತ್ತೂ ರಚನೆಯಾಗಿರುತ್ತದೆ. ಅದರ ಜೊತೆಗೆ ಅವುಗಳು ಸ್ವಲ್ಪ ಮಟ್ಟಿಗೆ ಖಾಯಂ ಅಗಿರುತ್ತದೆ.ಅವುಗಳ ಪರಿಣಾಮವೂ ಅತ್ಯಂತ ದೊಡ್ಡದು. ಇದಕ್ಕೂ ಮೆಕೆವಲ್ಲಿಯ ನಿಲುವಿಗೂ ಒಂದು ಸಂಬಂಧವು ಇದೆ. ಜನರು ಮತ್ತು ಅವರ ರಾಜಕೀಯ ನಿಲುವುಗಳು ಹೇಗೆ ಇರುತ್ತವೆ ಎಂದು ಅವನು ವಿವರಿಸುತ್ತಾನೆ. ಮೆಕೆವಲ್ಲಿಯು ಅಧಿಕಾರ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುತ್ತಾನೆ. ಮೆಕೆವಲ್ಲಿಗೂ ರಾಜಕಾರಣ ಮತ್ತು ಅದರ ವಿಧಾನಗಳು ಮುಖ್ಯ, ಅವನು ಅದನ್ನು ಕಲಾತ್ಮಕವಾದ ಯುದ್ಧವಿಧಾನ ಎಂದು ಹೇಳುತ್ತಾನೆ. ಈ ದೃಷ್ಟಿಯಿಂದ ಅವನಿಗೆ ಒಂದು ನಿಲುವು ಇದೆ. ನಾಗರಿಕ ಹಕ್ಕುಗಳು ಮತ್ತು ಅವುಗಳ ಹೋರಾಟದ ಅಗತ್ಯ ಮೆಕೆವಲ್ಲಿಗೆ ಮುಖ್ಯವಾಗುತ್ತದೆ. ಅವನು ಅರ್ಥಶಾಸ್ತ್ರವನ್ನು ಹೇಳುತ್ತಾನೆ ಆದ್ದರಿಂದ ಅವನ ಬರಹಕ್ಕೆ ಬೇರೆ ಆಯಾಮವೂ ದೊರೆಯುತ್ತದೆ.

ಆಳುವವರು ಮತ್ತು ಆಳಿಸಿಕೊಳ್ಳುವವರು ರಾಜಕಾರಣದಲ್ಲಿ ಅತ್ಯಂತ ಮುಖ್ಯವಾದ ಅಂಶಗಳಾಗಿವೆ. ಹಾಗೆಂದು ಅತ್ಯಂತ ಅನಿವಾರ್ಯವಾದ ಅಂಶಗಳು ಆಗಿವೆಯೇ ಎಂದು ಅದೂ ಅಲ್ಲ. ಮಾನವ ಜನಾಂಗದಲ್ಲಿ ಇದು ಬೆಳೆದು ಬಂದಿದೆ. ಅದಕ್ಕೆ ಒಂದು ಚರಿತ್ರೆಯು ಇದೆ. ಅದೇ ಸಮಾಜದಲ್ಲಿ ಕೆಲವು ಗುಂಪುಗಳನ್ನು ಸೃಷ್ಟಿ ಮಾಡುತ್ತದೆ. ಇದರಲ್ಲಿಯು ನಾವು ಕೆಲಸ ಮತ್ತು ಅದರ ವರ್ಗೀಕರಣವನ್ನು ನಾವು ಕಾಣಬಹುದು. ಕೆಲಸ ಮತ್ತು ಅದರ ವರ್ಗೀಕರಣಗಳು ತಾಂತ್ರಿಕ ಆವಶ್ಯಕತೆಯೂ ಹೌದು. ಆಳುವವರು ಆಳಿಸಿಕೊಳ್ಳುವವರಿಂದ ವಿಧೇಯತೆಯನ್ನು ನಿರೀಕ್ಷೆ ಮಾಡುತ್ತಾರೆ ಅಂದರೆ ಆಳಿಸಿಕೊಳ್ಳುವವರು ಆಳುವವರಿಗೆ ಯಾವುದೇ ಪ್ರಶ್ನೆಯನ್ನು ಕೇಳಬಾರದು.

ಗ್ರಾಂಶಿಯ ನಿಲುವುಗಳನ್ನು ಅನೇಕರು ರಾಜಕೀಯ ಮಾನವ ಶಾಸ್ತ್ರ ಎಂದು ಹೇಳುತ್ತಾರೆ. ವ್ಯಕ್ತಿಯಿಂದ ಪ್ರಾರಂಭ ಮಾಡಿ ಅವನು ಸಮೂಹದ ಚರ್ಚೆಯನ್ನು ಮಾಡುವಾಗಲೂ ಅದಕ್ಕೆ ಸಮೂಹದ ಅರ್ಥವನ್ನು ಕೊಡುತ್ತಾನೆ. ಮನುಷ್ಯ ಮತ್ತು ಅವನ ವಿವರಣೆಗಳನ್ನು ಕೊಡುವಾಗ ಇದರ ಪರಿಕರವನ್ನು ಬಳಸುತ್ತಾನೆ. ವ್ಯಕ್ತಿ ಮತ್ತು ಅವನ ಸಾಮಾಜಿಕ ಸಂಬಂಧಗಳಿಗೆ ವಿವಿಧ ಆಯಾಮಗಳೂ ಇರುತ್ತವೆ ಎನ್ನುವುದು ಅವನ ನಿಲುವು. ವ್ಯಕ್ತಿ ಮತ್ತು ಸಮಾಜದ ಸಂಬಂಧಗಳನ್ನು

ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ ಎನ್ನುವುದು ಮಾತ್ರವೇ ಅವನ ನಿಲುವು ಅಲ್ಲ. ಆದ್ದರಿಂದ ಮನುಷ್ಯರು ಮತ್ತು ಅವರ ನಿಲುವನ್ನು ನಾವು ಸಮೂಹದ ಜೊತೆಗೆ ಹೇಳಬೇಕಾಗುತ್ತದೆ.

ಗ್ರಾಂಶಿಯು ರೈತರು ಸರಕಾರವು ಏರ್ಪಡಿಸುವ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಅಷ್ಟು ಉಪಯುಕ್ತವಲ್ಲ ಎಂದು ಹೇಳುತ್ತಾನೆ.ಸರಕಾರ ಏರ್ಪಡಿಸುವ ಸ್ಪರ್ಧೆಗಳಿಗೆ ಹೆಚ್ಚು ಮೌಲ್ಯವೂ ಇರುವುದಿಲ್ಲ. ಬೂರ್ಜ್ವಾ ವರ್ಗವು ಪಾರ್ಲಿಮೆಂಟರಿಯಲ್ಲಿ ಏನು ನಿರ್ಧಾರವನ್ನು ತೆಗೆದು ಕೊಳ್ಳುತ್ತಾರೆಯೋ ಅದೆಲ್ಲವೂ ರೈತರ ಪರವಾಗಿ ಇರುತ್ತದೆ ಎಂದು ಭಾವಿಸುವುದು ಸಾಧ್ಯವೂ ಇಲ್ಲ. ಕೆಲವನ್ನು ಪ್ರಭುತ್ವವು ತನಗೆ ಅನುಕೂಲವಾದ ರೀತಿಯಲ್ಲಿ ಕಾನೂನು ಮಾಡಿಬಿಡುತ್ತದೆ. ಅನೇಕ ಕಾರ್ಯಗಳನ್ನು ಅದು ತಪ್ಪಾಗಿ ಅನ್ವಯ ಮಾಡುವುದು ಸತ್ಯ. ರೈತರು ಎಲ್ಲಾ ವಿಷಯಗಳಲ್ಲಿ ಸರಕಾರದ ಜೊತೆಗೆ ಒಪ್ಪಂದ ಮಾಡಿಕೊಳ್ಳುವುದು ಕಷ್ಟ ರೈತರು ಯಾವ ನಿಲುವನ್ನು ತಾಳುತ್ತಾರೆ ಎನ್ನುವುದು ಅತ್ಯಂತ ಅಗತ್ಯ. ರೈತರು ಅಗತ್ಯವಾದ ಸನ್ನಿವೇಶದಲ್ಲಿ ಪ್ರಭುತ್ವದ ವಿರುದ್ಧ ನಿಲ್ಲಬೇಕಾಗುತ್ತದೆ. ಅದು ಒಂದು ಕಾರ್ಯವೂ ಹೌದು. ಸಮಾಜವಾದಿ ಪಕ್ಷಗಳು ರೈತರನ್ನು ಗಮನಿಸಿದರೆ ಬೂರ್ಜ್ವಾ ಪಕ್ಷಗಳು ಅನೇಕ ಅಧಿಕಾರಗಳನ್ನು ಪಡೆದುಕೊಂಡು ಅವರನ್ನು ನಿಯಂತ್ರಣ ಮಾಡಲು ಯತ್ನ ಮಾಡುತ್ತವೆ. ಸರಕಾರ ಯಾವುದನ್ನು ಹೇಳುತ್ತದೆಯೋ ಅದನ್ನು ಮಾತ್ರವೇ ಒಪ್ಪಿ ನಡೆಯುವುದು ರೈತರ ಗುರಿಯಾಗಬಾರದು. ಸರಕಾರದ ಕೆಲವು ನೀತಿಗಳನ್ನು ಕಟುವಾಗಿ ಟೀಕಿಸುವ ಮತ್ತು ಪ್ರತಿರೋಧವನ್ನು ಒಡ್ಡುವುದು ಅತ್ಯಂತ ಮುಖ್ಯ ಎಂದು ಗ್ರಾಂಶಿಯು ಭಾವಿಸುತ್ತಾನೆ. ಹಾಗೆ ನೋಡಿದರೆ ಬಂಡವಾಳವಾದಿ ಸಮಾಜವು ಒಂದು ಮುಕ್ತವಾದ ಸ್ಪರ್ಧೆಯನ್ನು ಏರ್ಪಡಿಸುತ್ತದೆ. ಅದರ ಆಶಯದಲ್ಲಿ ಮಾರುಕಟ್ಟೆ ಮತ್ತು ಅದರ ಮುಕ್ತತೆಯು ಅತ್ಯಂತ ಮುಖ್ಯ. ಅದರ ಅಂತಿಮವಾದ ಕಾನೂನು ಕೂಡಾ ಅದುವೇ., ಆದ್ದರಿಂದ ಅದು ವರ್ತಕರನ್ನು ಹೆಚ್ಚು ಪ್ರೋತ್ಸಾಹಿಸುತ್ತದೆ. ವರ್ತಕರಿಗೆ ಬೇಕಾದ ಕಾನೂನು ಕೂಡಾ ಸಹಕಾರವನ್ನು ನೀಡುತ್ತದೆ. ಆದರೆ ನಮಗೆ ಅತ್ಯಂತ ಅಗತ್ಯವಾಗಿ ಗೊತ್ತಿರಬೇಕಾದ ಒಂದು ಸಂಗತಿಯನ್ನು ಗ್ರಾಂಶಿಯು ಹೇಳುತ್ತಾನೆ. ಪ್ರತಿಭಟನೆ ಎಂದರೆ ಅದು ಬರೀ ದೈಹಿಕವಾದ ಒಂದು ಚಳುವಳಿಯಾಗಬೇಕಾಗಿಲ್ಲ. ಬುದ್ಧಿಜೀವಿಗಳೂ ಪ್ರತಿಭಟಿಸಬೇಕಾದ ಅಗತ್ಯ. ವರ್ಗ ಸಂಘರ್ಷ ಎನ್ನುವುದು ಬರೀ ಕನಸು ಮಾತ್ರವೇ ಅಲ್ಲ ಎಂದು ಗ್ರಾಂಶಿಯು ಭಾವಿಸುತ್ತಾನೆ.

೧೩

ಆದರ್ಶಗಳು

ರಾಜಕಾರಣ ಮತ್ತು ಅದರ ಪ್ರಕ್ರಿಯೆಗಳು ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ರಾಜಕೀಯ ಪಕ್ಷಗಳು ಮತ್ತು ಒಂದು ದೇಶದ ಸಂವಿಧಾನಗಳು ಆಯಾ ದೇಶದ ಆಗು ಹೋಗುಗಳನ್ನು ನಿರೂಪಿಸುತ್ತವೆ. ಅದರಲ್ಲಿ ಆರ್ಥಿಕವಾದ ರಚನೆಯು ಇರುತ್ತದೆ. ಉತ್ಪಾದನೆ ಮತ್ತು ವಿನಿಮಯಗಳೂ ಇರುತ್ತವೆ. ಅನೇಕರು ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಜನರು ಅನೇಕ ವೇಳೆಯಲ್ಲಿ ಮಾಡುವ ತಪ್ಪು ಎಂದರೆ ನಮಗೂ ರಾಜಕಾರಣಕ್ಕೂ ಯಾವುದೇ ಸಂಬಂಧವು ಇಲ್ಲ ಎಂದು ಭಾವಿಸುವುದು. ಎಡವಾದರೆ ಏನು ಅಥವಾ ಬಲವಾದರೆ ಏನು ಎಂದು ಅವರು ಅತ್ಯಂತ ನಿರ್ಲಿಪ್ತವಾದ ಧೋರಣೆಯನ್ನು ತಳೆಯುತ್ತಾರೆ. ಎಡಪಂಥೀಯ ರಾಜಕಾರಣ ಮತ್ತು ಬಲಪಂಥದ ರಾಜಕಾರಣ ಬೇರೆ ಬೇರೆ ಮಾದರಿಯ ಆರ್ಥಿಕವಾದ ಚಟುವಟಿಕೆಯನ್ನು ಹೊಂದಿರುತ್ತದೆ. ಅದನ್ನು ನಾವು ಬರೀ ಆದರ್ಶ ಅಥವಾ ಬರೀ ಕನಸು ಎಂದು ತಿಳಿಯಬೇಕಾಗಿಲ್ಲ. ಆದ್ದರಿಂದ ಇದರ ಬಗ್ಗೆ ನಾವು ನಿರ್ದಿಷ್ಟವಾದ ನಿಲುವನ್ನು ಹೊಂದಬೇಕಾಗುತ್ತದೆ. ಇಲ್ಲಿ ನಾವು ಇನ್ನೊಂದು ಸತ್ಯವನ್ನು ಗಮನಿಸಬೇಕಾಗುತ್ತದೆ. ಅದರ ಜೊತೆಗೆ ಆರ್ಥಿಕವಾದ ರಚನೆ ಮತ್ತು ರಾಜಕೀಯವಾದ ಸಂವಿಧಾನಗಳು ಸಂಬಂಧವನ್ನು ಹೊಂದಿರುತ್ತವೆ. ಅದು ನೇರವಾಗಿ ಇರಬಹುದು. ಅದು ಅತ್ಯಂತ ಸರಳವಾದ ಒಂದು ಚಟುವಟಿಕೆಯೂ ಆಗಬಹುದು. ಯಾವುದೇ ರಾಜಕೀಯ ಸಂವಿಧಾನ ಎನ್ನುವುದು ನಿರಂತರವಾಗಿ ಒಂದು ಥರವೇ ಇರುತ್ತದೆ ಎಂದು ಹೇಳಲು ಆಗುವುದೂ ಇಲ್ಲ.ಆದ್ದರಿಂದ ಇವುಗಳ ನಡುವೆ ಒಂದು ಹೊಂದಾಣಿಕೆ ಕೂಡಾ ಇರಬಹುದು, ವಸ್ತು ಮತ್ತು ಅದರ ಮೌಲ್ಯವನ್ನು ಹೇಳುವಾಗ ನಮಗೆ ಆರ್ಥಿಕತೆಯು ಬೇಕಾಗುತ್ತದೆ. ಮೌಲ್ಯ ರಹಿತವಾದ ಒಂದು ವಸ್ತು ಎನ್ನುವುದು ಇರಲಾರದು. ಕೆಲವು ವಸ್ತುವು ಹಳೆಯದು. ಅದಕ್ಕೆ ಒಂದು ಚಾರಿತ್ರಿಕವಾದ ಮೌಲ್ಯವೂ ಇರಬಹುದು. ಆದರೆ ಕೆಲವಕ್ಕೆ ಅದು ಇರದೇ ಹೋಗಬಹುದು

ಇದನ್ನು ಹೇಳುವಾಗ ಗ್ರಾಂಶಿಯು ಚರಿತ್ರೆ ಎಂದರೆ ಅದು ಗಣಿತಶಾಸ್ತ್ರವಲ್ಲ ಎಂದು ಹೇಳುತ್ತಾನೆ. ವಸ್ತು ಮತ್ತು ಅದರ ಮೌಲ್ಯವನ್ನು ಹೇಳುವಾಗ ನಮ್ಮ ಎದುರು ಮೊದಲು ಬರುವುದು ವಸ್ತು ಮತ್ತು ಅದರ ಗುಣ ಹಾಗೂ ಸ್ವಭಾವಗಳು. ಅದರ ಪ್ರಮಾಣಗಳು. ಮತ್ತೊಂದು ಅದರ ಮತ್ತೊಂದು ಅಂಶವು ಗುಣ ಮಟ್ಟವನ್ನು ಹೇಳುತ್ತವೆ. ಇದು ವಸ್ತು ಮತ್ತು ಅದರ ನಿಜವಾದ ಬೇರನ್ನು ಸೂಚಿಸುತ್ತದೆ. ಇದರಲ್ಲಿ ಅರ್ಥಶಾಸ್ತ್ರವು ಕೆಲಸವನ್ನು ಮಾಡುತ್ತದೆ. ಇದನ್ನು ನಿರ್ಧಾರ ಮಾಡುವುದು ಮನಸ್ಸೇ ಹೊರತು ನಮ್ಮ ದೇಹವಲ್ಲ. ಅದರ ಜೊತೆಗೆ ಮನೋಗತವಾದ ಅಭಿಪ್ರಾಯ ಮನುಷ್ಯನ ಬಯಕೆ, ಹಸಿವು ಮುಂತಾದವುಗಳು ಕೆಲಸವನ್ನು ಮಾಡುತ್ತವೆ. ಆದರೆ ಮನುಷ್ಯ ಮತ್ತು ಅವನ ಸಾಮರ್ಥ್ಯವೇ ಚರಿತ್ರೆಯಲ್ಲಿ ನಿರ್ಣಾಯಕವಾಗುತ್ತದೆ. ಇದನ್ನು ಎಲ್ಲಾ ಮಾರ್ಕ್ಸ್‌ವಾದಿಗಳು ಒಪ್ಪುತ್ತಾರೆ. ಆದರೆ ಯಾರಿಗೆ ತಾಳ್ಮೆಯು ಇಲ್ಲವೋ ಅವರು ಅತ್ಯಂತ ತಪ್ಪಾದ ಒಂದು ನಿರ್ಧಾರಕ್ಕೆ ಬರುತ್ತಾರೆ. ನಾವು ರಾಜಕೀಯವಾಗಿ ಯಾವ ನಿರ್ಧಾರಕ್ಕೆ ಬರುತ್ತೇವೆಯೋ ಅದು ಜನರ ಮೂಲಕವೇ ಬರಬೇಕಾಗುತ್ತದೆ. ಇಲ್ಲಿ ನಾವು ಮತ್ತೆ ಲೆನಿನ್ ಮಾಡಿದ ಕೆಲಸವನ್ನು ನೆನಪು ಮಾಡಿಕೊಳ್ಳಬೇಕು. ಲೆನಿನ್ ನಿಜವಾದ ಅರ್ಥದಲ್ಲಿ ಕಾರ್ಯಶೀಲನಾದ ಒಬ್ಬ ವ್ಯಕ್ತಿ. ಅವನಿಗೆ ಜನರನ್ನು ಸಂಘಟನೆ ಮಾಡಲು ಗೊತ್ತಿತ್ತು. ಹಾಗೆಂದು ಅವನು ಬರೀ ಆದರ್ಶವನ್ನು ಮಾತ್ರವೇ ಹೇಳಿಕೊಂಡು ಇರಲಿಲ್ಲ. ಅವನಲ್ಲಿ ನಾವು ಕಾರ್ಯ ತತ್ಪರತೆಯನ್ನು ಕಾಣುತ್ತೇವೆ. ಆದರ್ಶ ಮತ್ತು ಹೇಳಿಕೆ ಮತ್ತು ಪ್ರಯೋಗ ಎನ್ನುವುದು ಈ ಅರ್ಥದಲ್ಲಿ ಅತ್ಯಂತ ಭಿನ್ನವಾದ ಪ್ರಕ್ರಿಯೆಗಳು ಅಲ್ಲ. ಅದಕ್ಕೆ ಒಂದು ನಿರ್ದಿಷ್ಟವಾದ ಮನೋಸ್ಥಿತಿಯು ಬೇಕು. ಅದರ ಜೊತೆಗೆ ಅದನ್ನು ಕ್ರಿಯೆಗೆ ತರುವ ಅಗತ್ಯಗಳು ಕೂಡಾ ನಮ್ಮ ಅರಿವಿಗೆ ಬರಬೇಕು. ನಮ್ಮ ಜೀವನ ಎನ್ನುವುದು ಯಾವತ್ತೂ ಒಂದು ಸನ್ನಿವೇಶವನ್ನು ಅನುಸರಿಸಿಕೊಂಡು ಇರುತ್ತದೆ. ಸನ್ನಿವೇಶವನ್ನು ಬಿಟ್ಟ ಜೀವನವು ಇರುವುದಿಲ್ಲ. ಹಾಗೆಯೇ ಜೀವನ ಮತ್ತು ಅದರ ಸ್ವರೂಪವೂ ಒಂದು ಉದ್ದೇಶವನ್ನು ಹೊಂದಿರುತ್ತದೆ. ನಮ್ಮ ಅನೇಕ ಸಂಗತಿಗಳು ಜೀವನದ ಬೇರೆ ಬೇರೆ ಅರ್ಥಗಳನ್ನು ಸೂಚಿಸುತ್ತದೆ. ಜೀವನದಲ್ಲಿ ಸರಿ ಮತ್ತು ತಪ್ಪು ಎನ್ನುವುದೂ ಈ ಅರ್ಥದಲ್ಲಿ ಸನ್ನಿವೇಶವನ್ನು ಹೇಳುತ್ತದೆ. ಗ್ರಾಂಶಿಯು ಇದನ್ನು ಹೇಳುವಾಗ ಮತ್ತೊಂದು ಮಾತನ್ನು ಅದಕ್ಕೆ ಸೇರಿಸುತ್ತಾನೆ. ಅವನು ಯಾವುದೇ ಘಟನೆಗಳು ಅಥವಾ ಯಾವುದೇ ಅತ್ಯಂತ ವಿಶಿಷ್ಟವಾದ ಸಂಗತಿಗಳು ಇಲ್ಲವೇ ಜನರ ಮೇಲೆ ಪ್ರಭಾವವನ್ನು ಬೀರುವ ಸಂಗತಿಗಳು ನಡೆಯುವುದು ವಾಸ್ತವವಾಗಿ ಯಾರೋ ಒಬ್ಬನಿಂದ ಅಲ್ಲ. ಅದರ ಹಿಂದೆ ಮತ್ತೆ ಬೇರೆ ಸಂಗತಿಗಳೂ ಇರಬಹುದು ಎನ್ನುವುದು ನಿಜ. ಯಾವುದೇ ಆರ್ಥಿಕವಾದ ಸಂಗತಿಗಳು ನೇರವಾಗಿ ಒಂದು ರಾಜಕೀಯವಾದ ಸ್ಥಿತಿಯ ಮೇಲೆ ಪ್ರಭಾವವನ್ನು ಬೀರುತ್ತದೆ ಎಂದು ಹೇಳಲು ಬರುವುದೂ ಇಲ್ಲ.

ಯಾಕೆ ಜನರು ಕೆಲವನ್ನು ಸಾಮೂಹಿಕವಾಗಿ ಒಪ್ಪುತ್ತಾರೆ? ಈ ಪ್ರಶ್ನೆಗೆ ಅವನು ಹೀಗೆ ಉತ್ತರವನ್ನು ಕೊಡುತ್ತಾನೆ. ಅದರ ಪ್ರಕಾರ ಅವನು ಹೇಳುವುದು ಇದು: ಅವರಿಗೆ ಯಾವುದು ಅರಿವಿಗೆ ಬರುತ್ತದೆಯೋ ಅದನ್ನು ಮಾತ್ರವೇ ಅವರು ಸ್ವೀಕಾರ ಮಾಡುತ್ತಾರೆ. ಕೆಲವು ಅವರಿಗೆ ತಿಳಿಯುವುದೇ ಇಲ್ಲ. ಕೆಲವು ಚಟುವಟಿಕೆಗಳು ಅವರಿಗೆ ತುಂಬಾ ನೈತಿಕವಾಗಿ ಕಾಣುತ್ತದೆ, ಮತ್ತೆ ಅವರ ದೃಷ್ಟಿಗೆ ಗೋಚರವಾಗುವುದೂ ಇಲ್ಲ. ಆದರ್ಶ ಎನ್ನುವುದು ನಮಗೆ ಕೇವಲ

ಒಂದು ಸ್ಫೂರ್ತಿ ಎಂದು ಭಾವಿಸಬೇಕಾದ ಅಗತ್ಯವಲ್ಲ. ಅದು ಬಾಹ್ಯಕ್ಕೆ ಸಂಬಂಧಪಟ್ಟಿದೆ. ಅದರ ಜೊತೆಗೆ ಅದು ವಾಸ್ತವದ ಕುರಿತಾದ ನಮ್ಮ ನಿಲುವು ಆಗಬಹುದು. ಸತತ ಹೋರಾಟದಿಂದ ನಾವು ಪಡೆಯುವ ಸ್ವಾತಂತ್ರ್ಯವನ್ನು ಆದರ್ಶ ಎಂದು ಭಾವಿಸಬೇಕಾದ ಅಗತ್ಯವಿಲ್ಲ.ಅದು ನಮ್ಮ ಜೀವನದ ಒಂದು ಭಾಗವೂ ಆಗಬಹುದು. ಅದು ಮನುಷ್ಯರಿಗೆ ಇರಬಹುದು ಒಂದು ಪರಿಪೂರ್ಣವಾದ ಸಂಗತಿಯೂ ಇರಬಹುದು, ಅನೇಕ ಜನರು ಸೇರಿಕೊಂಡು ಚಳುವಳಿ ಮಾಡಿಕೊಂಡು ರಷ್ಯಾವನ್ನು ಕಟ್ಟಿದ್ದಾರೆ. ಅದು ರಷ್ಯಾದ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು.. ರೈತರೂ ಅಲ್ಲಿ ಅತ್ಯಂತ ಮುಖ್ಯವಾಗಿದ್ದರು. ಅವರಿಗೆ ಒಂದು ಸಾಮಾಜಿಕವಾದ ನೆಲೆಗಟ್ಟು ಇತ್ತು ಎನ್ನುವುದು ರಷ್ಯಾ ಚರಿತ್ರೆಯನ್ನು ಓದಿದವರಿಗೆ ಹೆಚ್ಚು ಖಚಿತವಾಗುತ್ತದೆ. ಆದ್ದರಿಂದ ಸಮಾಜವಾದ ಎನ್ನುವುದು ಒಂದು ದಿನಕ್ಕೆ ಮಾತ್ರವೇ ಸಂಬಂಧಪಟ್ಟ ಪ್ರಕ್ರಿಯೆ ಅಲ್ಲ, ಅದು ನಿತ್ಯದ ಅನುಭವವೂ ಆಗುತ್ತದೆ. ಸ್ವಾತಂತ್ರ್ಯ ಎನ್ನುವುದು ಮನುಷ್ಯರ ಚಲನಶೀಲತೆಯ ದ್ಯೋತಕವೂ ಆಗಿರುತ್ತದೆ.

ಸಾಮಾಜಿಕ ಜೀವನದಲ್ಲಿ ಬುದ್ಧಿಜೀವಿಗಳು ಎಷ್ಟು ಪಾತ್ರವನ್ನು ವಹಿಸುತ್ತಾರೆಯೋ ಅಷ್ಟೇ ಪಾತ್ರವನ್ನು ಸಾಮಾನ್ಯರು ವಹಿಸುತ್ತಾರೆ. ಆದ್ದರಿಂದ ಇದರಲ್ಲಿ ನಾವು ತಾರತಮ್ಯವನ್ನು ಮಾಡಬೇಕಾದ ಯಾವುದೇ ಅಗತ್ಯವಿಲ್ಲ ಎನ್ನುವುದು ಗ್ರಾಂಶಿಯ ನಿಲುವು. ಇದಕ್ಕೆ ಅನುಗುಣವಾಗಿ ಅವನು ಮತ್ತೆ ಕೆಲವು ವಿಚಾರಗಳನ್ನು ಪ್ರಸ್ತಾವಿಸುತ್ತಾನೆ. ರೈತರು, ಕಾರ್ಮಿಕರು ಮತ್ತು ಬುದ್ಧಿಜೀವಿಗಳು ಸಂಧಿಸಬಹುದಾದ ಜಾಗವೆಂದರೆ ಅದು ಸಂಸ್ಕೃತಿ. ಇದು ಮತ್ತೊಂದು ಆಯಾಮವನ್ನು ಸೂಚಿಸುತ್ತದೆ ಎನ್ನುವುದು ಗ್ರಾಂಶಿಯ ನಿಲವು. ಇದನ್ನು ಹೇಳುವಾಗ ಅವನು ಸಾಕ್ರೆಟಿಸ್ ಹೇಳಿದ ಮಾತನ್ನು ಉಲ್ಲೇಖಿಸುತ್ತಾನೆ: “ನೀನು ನಿನ್ನನ್ನು ತಿಳಿದುಕೊ” ಗ್ರಾಂಶಿಯು ಜ್ಞಾನ ಮತ್ತು ಸಂಸ್ಕೃತಿಗೆ ಇರುವ ಸಂಬಂಧವನ್ನು ಹೇಳುತ್ತಾನೆ. ಲೇಖಕರು ಸಂಸ್ಕೃತಿಯನ್ನು ವಿವರಿಸುವಾಗ ತಮ್ಮ ಅನನ್ಯತೆಯನ್ನು ಗುರುತಿಸಲು ಇರುವ ಪದ ಎಂದು ಭಾವಿಸುತ್ತಾರೆ.ಸಂಸ್ಕೃತಿಯನ್ನು ಮತ್ತು ವ್ಯಕ್ತಿತ್ವವನ್ನು ರೊಮಾಂಟಿಕರು ಜೊತೆಗೆ ಇರಿಸಿಕೊಂಡು ನೋಡಿಕೊಂಡು ಚರ್ಚೆ ಮಾಡಿದರು. ಆದರೆ ಸಂಸ್ಕೃತಿಯು ಮನುಷ್ಯನ ಮೇಲೆ ಪ್ರಭಾವವನ್ನು ಬೀರುತ್ತದೆ. ಅದರ ಜೊತೆಗೆ ನಾಗರಿಕತೆಯು ಸಂಸ್ಕೃತಿಯನ್ನು ಭಿನ್ನವಾದ ರೀತಿಯಲ್ಲಿ ವ್ಯಾಖ್ಯಾನವನ್ನು ಮಾಡಿತು. ನಾಗರಿಕತೆ ಮತ್ತು ಜ್ಞಾನ ಹಾಗೂ ಸಂಸ್ಕೃತಿಗೆ ಒಂದು ಸಂಬಂಧವು ರೂಪುಗೊಂಡಿತು ಆದರೆ ಸಂಸ್ಕೃತಿಯು ನಮ್ಮ ಮಲೆ ಪ್ರಭಾವವನ್ನು ಬೀರುತ್ತದೆ. ಅದು ನಮ್ಮ ಮನೋಸ್ಥಿತಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ಅದಕ್ಕೆ ಒಂದ ಚಾರಿತ್ರಿಕವಾದ ಮೌಲ್ಯವೂ ಇರುತ್ತದೆ. ಮನುಷ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಋಣಗಳ ಪ್ರಶ್ನೆಯು ಇದರ ಜೊತೆಗೆ ಇರುತ್ತದೆ. ಚರಿತ್ರೆ ಮತ್ತು ಅದರ ಪರಿಣಾಮವನ್ನು ನಾವು ಕಾಣುವುದು ಇದರ ಮೂಲಕ ಎನ್ನುವುದು ಇಲ್ಲಿ ಗಮನಾರ್ಹ. ಅದಕ್ಕೂ ಒಂದು ಮೌಲ್ಯವು ಇದೆ. ಸಮಾಜ ಮತ್ತು ಅದರ ವಿಕಾಸವನ್ನು ಇದರಲ್ಲಿ ನಾವು ಕಾಣಬಹುದು. ಪುನರುಜ್ಜೀವನದ ಅನಂತರ ಸಂಸ್ಕೃತಿ ಮತ್ತು ಅದರ ಪ್ರಶ್ನೆಗಳು ಬೇರೆಯಾದವು ಎಂದು ಗ್ರಾಂಶಿಯು ಹೇಳುತ್ತಾನೆ. ಬಂಡವಾಳವಾದ ಮತ್ತು ಅದರ ನಾಗರಿಕತೆಯ ವ್ಯಾಖ್ಯಾನವು ಬೇರೆಯಾಗುತ್ತದೆ.ಲೋಕ ಮತ್ತು ಅದರ ದೃಷ್ಟಿಕೋನಕ್ಕೆ ಹಾಗೂ ಸಮಾಜಕ್ಕೂ ಒಂದು ಸಂಬಂಧವು ಇದ್ದೇ ಇರುತ್ತದೆ.

೧೪

ಕಾರ್ಮಿಕರ ಶಾಲೆ

ಒಂದು ಅರ್ಥದಲ್ಲಿ ಇದನ್ನು ಅತ್ಯಂತ ಗಂಭೀರವಾಗಿ ಚರ್ಚೆ ಮಾಡಿದ್ದು ಗ್ರಾಂಶಿ. ಬಹುಶಃ ಇದು ಮೊದಲ ಪರಿಕಲ್ಪನೆಯೂ ಹೌದು. ಅಷ್ಟೇ ಅಲ್ಲ ಇದು ಸಮಾಜಕ್ಕೆ ಅತ್ಯಂತ ಅಗತ್ಯವಾಗಿ ಬೇಕಾದ ಸಂಗತಿಯೂ ಹೌದು. ಇದರ ಬಗ್ಗೆ ಹೆಚ್ಚು ವಾಗ್ವಾದ ಆಗಿರುವುದು ಕಾಣಿಸುವುದಿಲ್ಲ. ಮೊದಲನೆಯದಾಗಿ ಇದು ಶಿಕ್ಷಣವನ್ನು ಕುರಿತು ಹೇಳುತ್ತದೆ. ಎರಡನೆಯದಾಗಿ ಇದು ಚಾರಿತ್ರಿಕವಾಗಿ ಅತ್ಯಂತ ಮಹತ್ವದ್ದೂ ಹೌದು. ಶಿಕ್ಷಣದ ಕುರಿತು ಬೂರ್ಜ್ವಾವರ್ಗ ಒಂದು ಬಗೆಯಲ್ಲಿ ಋಣಾತ್ಮಕವಾದ ಧೋರಣೆಯನ್ನು ತಳೆಯುತ್ತದೆ. ಅದರ ಜೊತೆಗೆ ಇದು ಬಾಷೆಯನ್ನು ವರ್ಗೀಕರಣ ಮಾಡುತ್ತದೆ. ಇಟಲಿಯ ಅನೇಕರು ಲ್ಯಾಟಿನ್ ಭಾಷೆಯ ಪರವಾಗಿ ಇದ್ದರು. ಅವರಿಗೆ ಇಟಾಲಿಯನ್ ಭಾಷೆಯು ಹಿಡಿಸಲಿಲ್ಲ. ಅಥವಾ ಇಟಾಲಿಯನ್ ಭಾಷೆಗೆ ಅವರು ಮಾನ್ಯತೆಯನ್ನು ಕೊಡಲು ಸಿದ್ಧರಿಲಿಲ್ಲ. ಇದನ್ನು ಅವನು ನೇರವಾಗಿ ಹೇಳದೇ ಇದ್ದರೂ ಅವನಲ್ಲಿ ಒಂದು ಸೂಕ್ಷ್ಮವಾದ ವಿಚಾರವು ಇದೆ: ಅವನು ಹೇಳುವುದು ವೈದ್ಯರಿಗೆ, ವಕೀಲರಿಗೆ ಅಥವಾ ಅದೇ ಮಾದರಿಯ ಕೆಲಸವನ್ನು ಮಾಡುವವರಿಗೆ ಸರಕಾರವು ಪ್ರಮಾಣ ಪತ್ರವನ್ನು ಕೊಡುತ್ತದೆ. ಆದರೆ ಬೇರೆ ಮಾದರಿಯ ಕೆಲಸವನ್ನು ಮಾಡುವವರಿಗೆ ಪ್ರಮಾಣ ಪತ್ರವನ್ನು ಕೊಡುವುದಿಲ್ಲ. ಬೂರ್ಜ್ವಾ ವರ್ಗದವರು ಇದರ ಬಗ್ಗೆ ಹೆಚ್ಚು ಯೋಚನೆ ಮಾಡಿದಂತೆ ಕಾಣುವುದೂ ಇಲ್ಲ. ಕಾರ್ಮಿಕರು ತಮ್ಮ ಅಗತ್ಯಕ್ಕೆ ತಕ್ಕಂತೆ ಕೌಶಲವನ್ನು ಕಲಿಯಬೇಕಾದ ಅಗತ್ಯವಿದೆ. ಅದನ್ನು ಗ್ರಾಂಶಿಯು ಹೇಳುತ್ತಾನೆ. ಕಾರ್ಮಿಕರೂ ಆಧುನಿಕ ಜಗತ್ತಿನಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಾರೆ.

ಯಂತ್ರಗಳು ಮತ್ತು ಮನುಷ್ಯರ ಸಂಬಂಧವು ಅತ್ಯಂತ ಸಂಕೀರ್ಣವಾಗಿದೆ ಎಂದು ಗ್ರಾಂಶಿಯು ಭಾವಿಸುತ್ತಾನೆ. ನಮಗೆ ತಿಳಿಯಬೇಕಾದ ಅತ್ಯಂತ ಮುಖ್ಯವಾದ ಸಂಗತಿ ಎಂದರೆ ನಾವು

ಈವತ್ತು ಯಂತ್ರಗಳಿಂದ ತಪ್ಪಿಸಿಕೊಳ್ಳಲಾರೆವು. ನಾವು ಕಾರ್ಮಿಕರಿಗೆ ಕೊಡುವ ಪಾಠವು ಒಂದು ಸಂಪ್ರದಾಯದಿಂದ ಬರುವುದಿಲ್ಲ. ಅದರ ಧೋರಣೆಯು ಬೇರೆಯಾಗುರುತ್ತದೆ. ಅದು ಸಾಂಸ್ಕೃತಿಕವಾಗಿಯೂ ಅತ್ಯಂತ ಮಹತ್ವದ್ದು. ಆದರೆ ಕಾರ್ಮಿಕರು ಶಾಲೆಯಲ್ಲಿ ಕಲಿಯಬೇಕಾಗುತ್ತದೆ.ಕೊನೆಯ ಪಕ್ಷ ಅವರು ಹೈಸ್ಕೂಲ್ ತನಕ ವಿದ್ಯೆಯನ್ನು ಕಲಿಯುವುದು ಅನಿವಾರ್ಯ. ಅದರ ಜೊತೆಗೆ ಅವರು ಕೆಲವು ಕೌಶಲವನ್ನು ಕಲಿಯುವುದು ಅನಿವಾರ್ಯ. ಅದು ಬರೀ ಬುದ್ಧಿವಂತಿಕೆಯ ಪ್ರಶ್ನೆಯು ಅಲ್ಲ. ಅದರಲ್ಲಿ ಸಂಸ್ಕೃತಿಯ ಪ್ರಶ್ನೆಯೂ ಇರುತ್ತದೆ. ರೈತನು ವಾಸ್ತವವಾಗಿ ಬುದ್ಧಿವಂತನೇ ಅಥವಾ ಅವನು ಎಷ್ಟು ಕಲಿತಿದ್ದಾನೆ ಎನ್ನುವುದು ಪ್ರಶ್ನೆಯಲ್ಲ. ಮನುಷ್ಯನಾಗಿ ಅವನಿಗೆ ಅವನದೇ ಆದ ಸಮಸ್ಯೆಗಳೂ ಇರಬಹುದು, ಆದರೆ ಮನುಷ್ಯ ಮತ್ತು ಅವನ ಸ್ಥಿತಿಗಳು ಅತ್ಯಂತ ಮುಖ್ಯ.. ಅವನ ಸಾಮಾಜಿಕವಾದ ಒಂದು ನಿಲುವೂ ಇರುತ್ತದೆ. ಆದರೆ ಸಮಾಜದಲ್ಲಿ ಯಾವುದು ಕೆಲಸದ ವರ್ಗೀಕರಣ ಎಂದು ಹೇಳಿದ್ದೇವೆಯೋ ಅದು ಚರಿತ್ರೆಯಲ್ಲಿ ಬೆಳೆದು ಬಂದಿದೆ. ಆದ್ದರಿಂದ ಕೆಲವರು ಮಾತ್ರವೇ ಕಲಿಯಬೇಕು, ಉಳಿದವರು ಕಲಿಯಬಾರದು ಎನ್ನುವ ನೀತಿಯೇ ಒಂದು ಅಸಂಗತ ನಾಟಕದ ಹಾಗೆ ಕಾಣಿಸುತ್ತದೆ. ಕಾರ್ಮಿಕರು ಕೂಡಾ ಅನೇಕವನ್ನು ಕಲಿಯಬೇಕಾಗುತ್ತದೆ, ಅವರಿಗೆ ಅವರದೇ ಆದ ಒಂದು ವಲಯವೂ ಇರುತ್ತದೆ. ತಾನು ಯಾವುದನ್ನು ಮಾಡುತ್ತಿದ್ದೇನೆ ಮತ್ತು ಅದರ ಅಗತ್ಯ ಏನು ಎನ್ನುವುದು ಮುಖ್ಯ. ಕೆಲಸದ ಅಗತ್ಯಕ್ಕೆ ಅನುಸಾರವಾಗಿ ಕಲಿಯಬಹುದು. ಇದನ್ನು ಗ್ರಾಂಶಿಯು ತಾಂತ್ರಿಕವಾದ ತಂತ್ರಜ್ಞಾನವು ಹೇಗೆ ಉಪಯುಕ್ತವಾಗುತ್ತದೆ ಎನ್ನುವುದನ್ನು ಹೇಳುತ್ತಾನೆ. ಆದ್ದರಿಂದ ಮನುಷ್ಯನು ತಂತ್ರಜ್ಞಾನದ ಆಚೆಗೆ ನಿಂತು ಮಾತಾಡುವುದು ಅತ್ಯಂತ ಕಷ್ಟ. ಆದರೆ ಒಂದು ಮಾತನ್ನು ನಾವು ಗಮನಿಸಲೇಬೇಕು ಎನ್ನುವುದು ಗ್ರಾಂಶಿಯ ನಿಲುವು. ಬೂರ್ಜ್ವಾಗಳು ಲಾಭ ಮತ್ತು ನಷ್ಟವನ್ನು ಮಾತ್ರವೇ ಹೇಳುತ್ತಾರೆ. ಅವರಿಗೆ ಬೇರೆ ವಿಷಯಗಳ ಬಗ್ಗೆ ಆಸಕ್ತಿಯಿಲ್ಲ. ಒಬ್ಬ ಅತ್ಯುತ್ತಮನಾದ ವ್ಯಕ್ತಿಯು ಮಾತ್ರ ಇದರ ಮೂಲಕ ಬರುವ ಲಾಭವನ್ನು ಸಮೂಹಕ್ಕೆ ಬಿಡುತ್ತಾನೆ. ಇದು ಅತ್ಯಂತ ಮುಖ್ಯ,

ಬಂಡವಾಳವಾದವು ತನ್ನ ಉತ್ಪಾದನೆಯ ಕಡೆಗೆ ಮಾತ್ರವೇ ಗಮನವನ್ನು ಕೊಡುತ್ತದೆ. ಅದಕ್ಕೆ ಬೇರೆ ಸಂಗತಿಗಳು ಅಷ್ಟು ಮುಖ್ಯವಲ್ಲ. ಕೈಗಾರಿಕೆಗಳು ಕಾರ್ಮಿಕರನ್ನು ರೂಪಿಸುತ್ತದೆ. ಆದರೆ ಅವರ ಸಂಘಟನೆಯನ್ನು ಅಷ್ಟು ಬೆಂಬಲಿಸುವುದಿಲ್ಲ. ಬೂರ್ಜ್ವಾಗಳು ಮತ್ತೊಂದು ಥರ ಯೋಚನೆಯನ್ನು ಮಾಡುವುದು ಸತ್ಯ. ಆಧುನಿಕ ಸನ್ನಿವೇಶದಲ್ಲಿ ರೈತರು, ಕಾರ್ಮಿಕರು ತಮ್ಮದೇ ಆದ ಒಂದು ಪಾತ್ರವನ್ನು ವಹಿಸುತ್ತಾರೆ . ಆಧುನಿಕ ಸನ್ನಿವೇಶದಲ್ಲಿ ವ್ಯಕ್ತಿ ಅಂದರೆ ಅವನದೇ ಆದ ಒಂದು ವ್ಯಕ್ತಿತ್ವವನ್ನು ಹೊಂದುವುದು. ಇದು ಸಮೂಹವನ್ನು ಹೇಳುವುದಿಲ್ಲ. ಬಂಡವಾಳವಾದದದಲ್ಲಿ ಒಂದು ಸ್ಪರ್ಧೆಯು ಇರುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ಜೀವನದ ಒಂದು ಹೋರಾಟವೂ ಇರುತ್ತದೆ. ಕಾರ್ಮಿಕರು ಕೂಡಾ ಉತ್ಪಾದನೆಗಳು ಮತ್ತು ಮಾರಾಟದಲ್ಲಿ ಒಂದು ಸ್ಪರ್ಧೆಯನ್ನು ಹೊಂದಿರುತ್ತಾರೆ. ಕಾರ್ಮಿಕ ಮತ್ತು ಅವನ ಕುಟುಂಬವೂ ನಿಜವಾದ ಅರ್ಥದಲ್ಲಿ ಈ ಸ್ಪರ್ಧೆಯಲ್ಲಿ ಭಾಗವಹಿಸುವುದು ಅತ್ಯಂತ ಅನಿವಾರ್ಯ. ಆದರೂ ರೈತರು ಮತ್ತು ಕಾರ್ಮಿಕರು ಜೊತೆಗೆ ಸೇರಿಕೊಂಡು ಹೋರಾಟವನ್ನು ಮಾಡಿದರೆ ಆಗ ಪ್ರಭುತ್ವವೂ ನಾಶವಾಗುತ್ತದೆ.

ಕಾರ್ಮಿಕರ ಸಂಘಟನೆಗೆ ಯಾವುದೇ ಪೂರ್ವ ನಿರ್ಧಾರಿತವಾದ ಯಾವುದೇ ಲಕ್ಷಣಗಳು ಇಲ್ಲ. ಅದು ರಚಿತವಾಗುತ್ತದೆ. ಆದರೆ ಇಲ್ಲಿ ಇನ್ನೊಂದು ಸಮಸ್ಯೆಯು ಇದೆ. ಯಾವಾಗ ಕೈಗಾರಿಕೆಗಳು ಇರುತ್ತವೆಯೋ ಆಗ ಕಾರ್ಮಿಕ ಸಂಘಟನೆಗಳು ಅನಿವಾರ್ಯವಾಗುತ್ತವೆ. ಇಲ್ಲಿ ಗ್ರಾಂಶಿಯು ಹೇಳುವುದು ಕಾರ್ಮಿಕರು ಮತ್ತು ಅವರ ಸಂಘಟನೆಗೆ ಅದರದೇ ಆದ ಒಂದು ಔಚಿತ್ಯವಿದೆ. ಅಷ್ಟೇ ಅಲ್ಲ ಅದು ಕಾರ್ಮಿಕರು ಇದರ ಅಡಿಯಲ್ಲಿ ಕೆಲವು ಕೆಲಸಗಳನ್ನು ಮಾಡುತ್ತವೆ. ಅದಕ್ಕೂ ಒಂದು ಉದ್ದೇಶವು ಇರುತ್ತದೆ. ಅದರ ಬೆಳವಣಿಗೆಯು ಕೂಡಾ ವಿವಿಧ ಲಕ್ಷಣಗಳನ್ನು ಹೊಂದಿರುತ್ತವೆ. ನಿಜವಾದ ಅರ್ಥದಲ್ಲಿ ಕಾರ್ಮಿಕರು ಬಂಡವಾಳವಾದ ಮತ್ತು ಕೈಗಾರಿಕೆಗಳ ಕೈಯಲ್ಲಿ ವಸ್ತುವಿನ ಥರ ಆಗಿಬಿಡುತ್ತಾರೆ. ಆದ್ದರಿಂದ ಇದನ್ನು ಅದೇ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಆದರೆ ಯಾವಾಗ ಕಾರ್ಮಿಕರು ಸಂಘಟನೆ ಶುರುಮಾಡುತ್ತಾರೆಯೋ ಅಗ ಅವರು ಬಂಡವಾಳವಾದದ ಕೈ ಕೂಸುಗಳು ಆಗುವುದಿಲ್ಲ ಎನ್ನುವುದು ಗ್ರಾಂಶಿಯ ಮಾತು, ಯಾವುದೇ ಕೈಗಾರಿಕೆಗಳನ್ನು ನೋಡಿದರೆ ನಮಗೆ ಇದು ಅರ್ಥವಾಗುತ್ತದೆ. ಕಾರ್ಮಿಕರು ಮತ್ತು ಅವರ ಸಂಘಟನೆಯಲ್ಲಿ ನಾವು ಕೆಲವು ಅಂಶಗಳನ್ನು ಗುರುತಿಸಲು ಸಾಧ್ಯವಿದೆ. ಸಂಘಟನೆಯಲ್ಲಿ ಎಷ್ಟು ಜನ ಕಾರ್ಮಿಕರು ಭಾಗವಹಿಸುತ್ತಾರೆ ಎನ್ನುವುದು ಮೊದಲ ಅಂಶ. ಸಂಘಟನೆಗಳಿಗೆ ಯಾವ ಅಗತ್ಯವಿದೆ ಎನ್ನುವುದು ಇನ್ನೊಂದು ಅಂಶ. ಕೈಗಾರಿಕೆ ಮತ್ತು ಅದರ ಕಾನೂನುಗಳು ಅತ್ಯಂತ ಅವಶ್ಯ. ಆದರೆ ಅದು ಯಾರ ಪರವಿದೆ ಎಂದೂ ನೋಡಬೇಕಾದ ಅಗತ್ಯ. ಕೈಗಾರಿಕೆ ಮತ್ತು ಅದರ ಶಕ್ತಿಗಳನ್ನು ಪಡೆಯುವುದು ಕಾರ್ಮಿಕ ಸಂಘಟನೆಗಳ ಮುಖ್ಯವಾದ ಗುರಿಯೂ ಹೌದು. ಆದರೆ ಕೌನ್ಸಿಲ್‌ಗಳು ಮತ್ತು ಸಂಘಟನೆಗೆ ವ್ಯತ್ಯಾಸವಿದೆ. ಕೌನ್ಸಿಲ್ ಎನ್ನುವುದು ಕಾರ್ಮಿಕರು ಮತ್ತು ಪ್ರಭುತ್ವದ ನಡುವೆ ಬರುತ್ತವೆ. ಸಂಘಟನೆಗಳು ಇದನ್ನು ನಿಯಂತ್ರಿಸುತ್ತದೆ. ಅದು ಕ್ರಾಂತಿಗೆ ಸಹಾಯವನ್ನು ಮಾಡಬಹುದು. ಯಾವುದೇ ರೂಪದ ಕೌನ್ಸಿಲ್‌ಗಳು ಸಂಘಟನೆಯ ಮೇಲೆ ಅಧಿಪತ್ಯವನ್ನು ಸಾಧಿಸುವುದು ಸಾಧ್ಯವಿಲ್ಲ.

ರಾಜಕೀಯ ಸಾಮರ್ಥ್ಯವನ್ನು ಟ್ರೇಡ್ ಯೂನಿಯನ್ ಹೇಗೆ ಗ್ರಹಿಸುತ್ತದೆ ಎಂದು ಗ್ರಾಂಶಿಯು ವಿವರಿಸುತ್ತಾನೆ. ರೈತರು ಮತ್ತು ಕಾರ್ಮಿಕ ವರ್ಗಗಳು ಜೊತೆಗೆ ಹೋಗಬೇಕಾಗುತ್ತದೆ. ಅದರಲ್ಲಿ ಎರಡು ಮಾತಿಲ್ಲ. ರೈತರಿಗೆ ರಾಜಕೀಯವಾದ ಒಂದು ಸಾಮರ್ಥ್ಯವು ಇರಬೇಕು ಎನ್ನುವುದು ಅವನ ನಿಲುವು. ಇದನ್ನು ಸಾಧಿಸಲು ಕ್ರಾಂತಿಯೂ ಅತ್ಯಂತ ಅಗತ್ಯವಾಗುತ್ತದೆ. ಕಾರ್ಮಿಕ ವರ್ಗ ಮತ್ತು ರೈತರ ವರ್ಗ ಎನ್ನುವುದು ಒಂದು ಹಂತದಲ್ಲಿ ರಾಜಕೀಯ ಸಾಮರ್ಥ್ಯವನ್ನು ಹೊಂದಲೇ ಬೇಕು ಎನ್ನುವುದು ಅವನ ನಿಲುವು. ಇದರಲ್ಲಿ ಇನ್ನೊಂದು ಪ್ರಸ್ತುತತೆಯು ಇದೆ ಎಂದು ಅವನು ಹೇಳುತ್ತಾನೆ: ರಾಜಕೀಯ ಸಾಮರ್ಥ್ಯವನ್ನು ಪಡೆಯುವುದು ಅಂದರೆ ಅದರಲ್ಲಿ ನಿಜವಾದ ಒಂದು ಶಕ್ತಿಯನ್ನು ಪಡೆಯುವುದು. ಅದರಿಂದ ಮಾತ್ರವೇ ಸಮಾನತೆಯು ಸಾಧ್ಯವಾಗುತ್ತದೆ.

ಈ ಪ್ರಶ್ನೆಯು ಎಲ್ಲಾ ದೇಶಗಳಲ್ಲಿ ಬಂದಿದೆ ಎಂದು ಹೇಳಲಾಗುವುದಿಲ್ಲ. ಒಂದು ದೇಶದ ಸಮಸ್ಯೆಯು ಇನ್ನೊಂದು ದೇಶಕ್ಕೆ ಅನ್ವಯ ಮಾಡಲು ಸಾಧ್ಯವೂ ಇಲ್ಲ. ಇವುಗಳು ಬಂಡವಾಳವಾದ, ಕಾರ್ಮಿಕರು, ರೈತರು, ನಗರಗಳು ಹೀಗೆ ಇರುತ್ತವೆ. ಇವು ಭಿನ್ನವಾದ ಒಂದು ಮಾದರಿಗಳೂ

ಹೌದು. ಆದರೆ ನಗರ ಮತ್ತು ಹಳ್ಳಿ ಎನ್ನುವುದು ಅತ್ಯಂತ ಭಿನ್ನವಾದ ಸಮಾಜವನ್ನು ಹೊಂದಿರುತ್ತವೆ. ಅವುಗಳನ್ನು ನಾವು ವರ್ಗೀಕರಣ ಮಾಡಬಹುದು. ನಗರಗಳು ಮತ್ತು ಹಳ್ಳಿಗಳು ಕಾರ್ಮಿಕರು ಮತ್ತು ರೈತರನ್ನು ಪ್ರತ್ಯೇಕ ಮಾಡುತ್ತವೆ. ರೈತರು ಅಂದರೆ ಎಲ್ಲರಿಗೆ ಗೊತ್ತಾದ ರೀತಿಯಲ್ಲಿ ಕೃಷಿಯನ್ನು ನಂಬಿರುತ್ತಾರೆ. .ರೈತರು ಅಂದ ಕೂಡಲೇ ನಮಗೆ ಜಮೀನ್ದಾರಿ ಸಮಾಜದ ನೆನಪು ಬರುತ್ತದೆ. ಇರುವ ನಿಜವಾದ ಸಮಸ್ಯೆ ಎಂದರೆ ರೈತರು ಮತ್ತು ಅವರ ಮನೋಸ್ಥಿತಿಯನ್ನು ಸರಕಾರವು ಅಷ್ಟಾಗಿ ಗಮನಿಸಲು ಹೋಗುವುದಿಲ್ಲ. ಸ್ವಲ್ಪ ನಿಷ್ಟುರವಾಗಿ ಹೇಳುವುದಿದ್ದರೆ ರೈತರು ಸರಕಾರಕ್ಕೆ ಬೇಡವಾದ ಮಕ್ಕಳು. ಹೀಗಾಗಿ ರೈತರು ಮತ್ತು ಅವರ ಮನೋಸ್ಥಿತಿಯು ಒಂದು ಥರ ಇರುತ್ತದೆ. ಆದರೆ ಕಾರ್ಮಿಕರು ಮತ್ತು ಅವರ ಮನೋಸ್ಥಿತಿಯು ಬೇರೆಯಾಗುತ್ತದೆ. ಇದರ ಆಳದಲ್ಲಿ ಸಮಾಜದ ಪ್ರಶ್ನೆಗಳು ಇವೆ. ಮತ್ತೊಂದು ಕಡೆಯಿಂದ ಇದರಲ್ಲಿ ರಾಜಕೀಯವೂ ಇರುತ್ತವೆ. ಅತ್ಯಂತ ದೊಡ್ಡ ರೈತ ತನ್ನದೇ ಆದ ಒಂದು ಸಮಸ್ಯೆಯನ್ನು ಎದುರಿಸಿದರೆ ಆಗ ಅವರ ಜೀವನ ಮತ್ತು ಅದರ ಮಟ್ಟವು ಬೇರೆ. ಅವರನ್ನು ನಿಜವಾದ ಅರ್ಥದಲ್ಲಿ ಬಂಡವಾಳವಾದಿಗಳಿಗೆ ಅನ್ವಯ ಮಾಡಲು ಸಾಧ್ಯವಿಲ್ಲ. ಜಮೀನ್ದಾರಿ ವ್ಯವಸ್ಥೆಯಲ್ಲಿ ಯಾವುದೇ ಸ್ಪರ್ಧೆಯು ಇರುತ್ತದೆ ಎಂದು ಹೇಳಲು ಆಗುವುದಿಲ್ಲ. ಆದರೆ ಕೈಗಾರಿಕೆಯಲ್ಲಿ ಸ್ಪರ್ಧೆ ಎನ್ನುವುದು ಇದ್ದೇ ಇರುತ್ತದೆ. ಕೈಗಾರಿಕೆಯಲ್ಲಿ ಒಬ್ಬ ಕಾರ್ಮಿಕನು ಎದುರಿಸುವ ಸಮಸ್ಯೆ ಮತ್ತು ರೈತನ ಸಮಸ್ಯೆಯು ಒಂದೇ ರೀತಿಯಲ್ಲಿ ಇಲ್ಲ. ಆದ್ದರಿಂದ ರೈತನನ್ನು ನಾವು ಬೇರೆ ಥರ ನೋಡಬೇಕಾಗುತ್ತದೆ. ಅವರ ಆರ್ಥಿಕತೆ ಮತ್ತು ಅವರ ಜೀವನದ ಕ್ರಮವು ನಮಗೆ ಬೇರೆ ವಿಚಾರಗಳನ್ನು ಹೇಳುತ್ತವೆ. ರೈತರು ಮತ್ತು ಅವರ ಮನೋಸ್ಥಿತಿಯು ಮತ್ತೊಂದು ಅರ್ಥದಲ್ಲಿ ತಿಂಗಳು ತಿಂಗಳು ಪಗಾರವನ್ನು ಎಣಿಸುವ ಮಾದರಿಯದು ಅಲ್ಲ. ಆದ್ದರಿಂದ ನಾವು ರೈತರು ಮತ್ತು ಅವರ ಹೋರಾಟ ಎನ್ನುವ ಒಂದೇ ವಾದವನ್ನು ಹೇಳಲು ಆಗುವುದಿಲ್ಲ. ಜಮೀನ್ದಾರ ಮತ್ತು ಅವರ ಕರುಣೆಯು ಅವನ ಕೂಲಿಯ ಮೇಲೆ ಇರುವುದು ಅತ್ಯಂತ ಕಡಿಮೆ. ಯಾವುದೇ ಕಾನೂನು ಬಂದರೂ ರೈತನು ಅದರ ಒಳಗೆ ಇರುತ್ತಾನೆ ಎಂದು ಹೇಳಲಾಗುವುದಿಲ್ಲ. ರೈತನ ಜೀವನದ ಕ್ರಮವು ಚೌಕಟ್ಟನ್ನು ಬಿಟ್ಟು ಬೇರೆ ಥರವೂ ಇರಬಹುದು. ರೈತನು ಅತ್ಯಂತ ಹೆಚ್ಚು ಅವಲಂಬಿಸುವುದು ನಿಸರ್ಗವನ್ನು. ಅದು ಅವನಿಗೆ ಅನಿವಾರ್ಯವೂ ಹೌದು. ರೈತನು ಹೆದರುವುದು ಪೋಲಿಸರಿಗೆ ಮತ್ತು ದೈವಗಳಿಗೆ ಮಾತ್ರ. ಹಾಗೆ ನೋಡಿದರೆ ರೈತರು ಸಾಮಾನ್ಯವಾಗಿ ಯಾವುದೇ ಸಂಘಟನೆಗಳಲ್ಲಿ ಭಾಗವಹಿಸುವುದು ಕಡಿಮೆ. ಅವನ ಅನುಭವಕ್ಕೆ ಯಾವುದೇ ಪ್ರಭುತ್ವ ಮತ್ತು ಅದರ ಕಾರ್ಯಗಳು ಬರುವುದಿಲ್ಲ. ಕಾರ್ಮಿಕ ಮತ್ತು ಅವರ ಕೆಲಸದ ವೇಳೆಯು ಬೇರೆ. ಆದರೆ ರೈತನಿಗೆ ಈ ಮಾದರಿಯು ಇರುವುದಿಲ್ಲ. ರೈತರ ಜೀವನದ ಕ್ರಮವನ್ನು ನಾವು ಕಾರ್ಮಿಕರ ಹೋರಾಟಕ್ಕೆ ಅನ್ವಯವನ್ನು ಮಾಡಲು ಬರುವುದಿಲ್ಲ. ಅದರಲ್ಲಿ ವ್ಯತ್ಯಾಸವಿದೆ. ರೈತರು ಕೆಲಸವನ್ನು ಮಾಡಿದರೆ ಮಾತ್ರವೇ ಅವರ ಜೀವನವು ಸುಗಮವಾಗಿ ಸಾಗುತ್ತದೆ. ಆದ್ದರಿಂದ ರೈತರು ಸಮಾಜದಲ್ಲಿ ಒಂದು ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಾರೆ. ಕಾರ್ಮಿಕರು ಸಮಯವನ್ನು ಆಧರಿಸಿಕೊಂಡು ಕೆಲಸವನ್ನು ಮಾಡುತ್ತಾರೆ.ಆದ್ದರಿಂದ ವರ್ಗ ಸಂಘಟನೆ ಎನ್ನುವುದು ಅತ್ಯಂತ ಕಷ್ಟದಾಯಕವಾಗುತ್ತದೆ ಈ ದೃಷ್ಟಿಯಿಂದ ಸಂಸ್ಕೃತಿಯ ಪ್ರಶ್ನೆಗಳೂ ಬೇರೆಯಾಗುತ್ತವೆ.

ಯಾವುದೋ ಒಂದು ಪ್ರಣಾಳಿಕೆಯನ್ನು ಆಧರಿಸಿಕೊಂಡು ರಾಜಕೀಯ ಪಕ್ಷಗಳು ರಾಜಕಾರಣವನ್ನು ಮಾಡುತ್ತವೆ. ಅದು ಅವರ ಅನನ್ಯತೆಯ ಪ್ರಶ್ನೆಯೂ ಹೌದು. ಅದರ ಜೊತೆಗೆ ರಾಜಕೀಯ ಪಕ್ಷಗಳು ನಿರ್ದಿಷ್ಟವಾದ ಹೋರಾಟವನ್ನು ತಮ್ಮ ಕೇಂದ್ರವಾಗಿಸಿಕೊಳ್ಳುತ್ತವೆ. ಸಮೂಹ ಮತ್ತು ಅದರ ಸ್ವರೂಪವನ್ನು ನಾವು ರಾಜಕೀಯ ಪ್ರಶ್ನೆಗಳ ಥರ ನೋಡಲು ಬರುವುದಿಲ್ಲ.ಅದರಲ್ಲಿಯೂ ಪ್ರಜಾಪ್ರಭುತ್ವದಲ್ಲಿ ಅನೇಕ ಬೂರ್ಜ್ವಾ ಪಕ್ಷಗಳು ಆಕರ್ಷಕ ಮಾತುಗಳನ್ನು ಹೇಳುತ್ತವೆ. ಆದರೆ ವಾಸ್ತವದಲ್ಲಿ ಆ ರೀತಿಯಲ್ಲಿ ವರ್ತಿಸುವುದಿಲ್ಲ. ಆದರೆ ಸಮೂಹವು ತನ್ನದೇ ಆದ ಒಂದು ಗುಂಪನ್ನು ಪ್ರತಿನಿಧಿಸುತ್ತವೆ. ಅದರಲ್ಲಿ ಸಾಮೂಹಿಕವಾದ ಆಸಕ್ತಿಯೂ ಮುಖ್ಯವಾಗಬಹುದು, ಇಲ್ಲವೇ ಸಾಮಾಜಿಕ ಆಸಕ್ತಿಯೂ ಆಗಬಹುದು. ಹಾಗೆ ನೋಡಿದರೆ ಕಮ್ಯೂನಿಸ್ಟ್ ಪಕ್ಷಗಳೂ ಒಮ್ಮೆಗೆ ಜನರನ್ನು ಒಗ್ಗೂಡಿಸಲು ಆಗಲಿಲ್ಲ. ಆದರೆ ಕಾಲಾನಂತರ ಜನರು ಕಮ್ಯುನಿಸ್ಟ್ ಪಕ್ಷಗಳು ಜನರನ್ನು ಆಕರ್ಶಿಸಿದವು. ಇದು ಮುಖ್ಯವಾದ ಪರಿಣಾಮ ಎಂದು ಗ್ರಾಂಶಿಯು ಭಾವಿಸುತ್ತಾನೆ.

೧೫

ಮಧ್ಯಮ ವರ್ಗಗಳ ಸಂಘರ್ಷಗಳು

ಇದನ್ನು ಹೇಳುವುದಕ್ಕೆ ಗ್ರಾಂಶಿಯು ಇಟಲಿಯನ್ನು ಉದಾಹರಿಸುತ್ತಾನೆ. ಕೆಲವು ಸಂಘಟನೆಗಳು ಬೂರ್ಜ್ವಾ ಮೌಲ್ಯವನ್ನು ಹೊಂದಿರುತ್ತವೆ. ಮತ್ತೆ ಕೆಲವು ಜನರು ಮೂಲಭೂತವಾಗಿ ಫ್ಯಾಸಿಸ್ಟರೂ ಆಗಿರುತ್ತಾರೆ. ಅತ್ತ ಮೇಲುವರ್ಗವೂ ಆಗದ ಇತ್ತ ಕೆಳವರ್ಗದವರೂ ಆಗದೇ ಇರುವವರು ಒಂದು ಸಮಸ್ಯೆಯನ್ನು ಎದುರಿಸುತ್ತಾರೆ. ಆದರೂ ಒಂದು ಹಂತದಲ್ಲಿ ಮಧ್ಯಮ ವರ್ಗವು ಪ್ಯಾಸಿಸಂ ಅನ್ನು ವಿರೋಧಿಸಿತ್ತು ಎಂದು ಗ್ರಾಂಶಿಯು ಹೇಳುತ್ತಾನೆ. ಫ್ಯಾಸಿಸಂ ತನ್ನ ಸಾವನ್ನು ತಾನೇ ತಂದು ಕೊಂಡಿತು ಎಂದು ಗ್ರಾಂಶಿಯು ಹೇಳುತ್ತಾನೆ. ಯಾವುದೇ ದೇಶಗಳಲ್ಲಿ ನಾವು ಬೇರೆ ಬೇರೆ ಸಂಘರ್ಷಗಳನ್ನು ಕಾಣುತ್ತೇವೆ. ಅದಕ್ಕೆ ಹೆಚ್ಚು ಶಕ್ತಿಯನ್ನು ಕೊಟ್ಟದ್ದು ಮಧ್ಯಮವರ್ಗ. ಮೊದಲನೆಯದಾಗಿ ಅದಕ್ಕೆ ಜನರನ್ನು ಪೂರ್ತಿಯಾಗಿ ಬಳಸಲು ಸಾಧ್ಯವಾಗಲಿಲ್ಲ. ಫ್ಯಾಸಿಸಂ ನಿಜವಾದ ಅರ್ಥದಲ್ಲಿ ಬೇರೆ ಯಾವುದೇ ಕಾರ್ಯಕ್ರಮವನ್ನು ಹೊಂದಿರಲಿಲ್ಲ.ಇಟಲಿಯ ರಾಜಕೀಯ ಸ್ಥಿತಿಯನ್ನು ನೋಡಿದರೆ ಅಲ್ಲಿ ಫ್ಯಾಸಿಸಂ ಬೂರ್ಜ್ವಾ ವರ್ಗದ ಜನರನ್ನು ಮಾತ್ರವೇ ತಲುಪಿತ್ತು. ಆದರೆ ಅದಕ್ಕೆ ಒಂದು ನಿರ್ದಿಷ್ಟವಾದ ತಾತ್ವಿಕ ದೃಷ್ಟಿಕೋನವೇ ಇರಲಿಲ್ಲ. ಆದರೆ ಮಧ್ಯಮವರ್ಗ ಬಿಕ್ಕಟ್ಟಿನಲ್ಲಿ ಇತ್ತು . ಆದರೆ ಕಮ್ಯುನಿಸ್ಟ್ ಪಕ್ಷವು ಎಲ್ಲಾ ವರ್ಗಗಳನ್ನು ಹೊಂದುವ ಆಸೆಯನ್ನು ಇಟ್ಟುಕೊಂಡಿತ್ತು. ಅದರಲ್ಲಿ ಮಧ್ಯಮ ವರ್ಗವೂ ಸೇರಿದೆ. ಅದು ಕೂಡಾ ಒಂದು ಬಗೆಯಲ್ಲಿ ಸಮಾಜದ ವರ್ಗ. ಆದ್ದರಿಂದ ಮಧ್ಯಮವರ್ಗವನ್ನು ಹೊರತು ಮಾಡಿ ಯಾವುದೇ ಸಮಾಜವನ್ನು ನೋಡಲು ಬರುವುದಿಲ್ಲ. ಆದರೂ ಒಂದು ಪ್ರಶ್ನೆಯು ಹೆಚ್ಚು ಮುಖ್ಯ ಮಧ್ಯಮ ವರ್ಗವು ಸದಾ ಸಂಘರ್ಷವನ್ನು ಎದುರಿಸಬೇಕಾಗುತ್ತದೆ.

ಫ್ಯಾಸಿಸಂ ಎನ್ನುವುದು ಒಂದು ರೀತಿಯಿಂದ ಪ್ರತಿಕ್ರಿಯಾತ್ಮಕವಾದ್ದು ಎನ್ನುವುದು ಸ್ಪಷ್ಟ. ಅದರ ಕೇಂದ್ರ ಇಎಲುವುದು ನಗರದಲ್ಲಿ, ಹಳ್ಳಿಯನ್ನು ಅದು ತನ್ನ ದೃಷ್ಟಿಕೋನಕ್ಕೆ ಬೇಕಾದ

ರೀತಿಯಲ್ಲಿ ಸಂಯೋಜನೆ ಮಾಡಿಲ್ಲ. ಪ್ರಭುತ್ವದ ಶಕ್ತಿಯಾಗಿ ಫ್ಯಾಸಿಸಂ ಆಡಳಿತಕ್ಕೆ ಬಂದಾಗ ಅದು ತನ್ನ ದೃಷ್ಟಿಕೋನಕ್ಕೆ ಬೇಕಾದ ನಿಯಮಗಳನ್ನು ರೂಪಿಸುತ್ತದೆ. ಅದರ ಜೊತೆಗೆ ಅದು ನವೀನವಾದ ಕೆಲವು ಸಂಗತಿಗಳನ್ನು ಜಾರಿಗೆ ತರಬಹುದು. ಅಷ್ಟೇ ಅಲ್ಲ ಅದು ಆಕರ್ಶಕವಾದ ನುಡಿಗಟ್ಟನ್ನು ಚಾಲ್ತಿಗೆ ತರಬಹುದು. ಇದು ನಮಗೆ ಚರಿತ್ರೆಯಿಂದ ತಿಳಿಯುತ್ತದೆ. ಅದು ತನ್ನ ಕಾರ್ಯ ವಿಧಾನಗಳನ್ನು ಆಗಾಗ ಬದಲಿಸುತ್ತದೆ. ಅಷ್ಟೇ ಅಲ್ಲ, ರಾಜಕಾರಣದಲ್ಲಿ ಒಂದು ಬಗೆಯ ಅಲೆಯನ್ನು ಸೃಷ್ಟಿಮಾಡುವುದೂ ಅಷ್ಟೇ ಸತ್ಯ. ಹಾಗೆ ನೋಡಿದರೆ ಅದು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಬೇರೆ ಬೇರೆ ತಂತ್ರಗಳನ್ನು ಬಳಸುತ್ತದೆ. ಅದರ ನಿಯಮವೂ ಬೇರೆ ಥರ ಇರುತ್ತದೆ. ಅಂದರೆ ಉಳಿದವರು ಮಾಡುವ ರಾಜಕಾರಣವೇ ಬೇರೆ. ಫ್ಯಾಸಿಸಂ ಮಾಡುವ ರಾಜಕಾರಣವೇ ಬೇರೆಯಾಗಿರುತ್ತದೆ. ಅದರಲ್ಲಿ ಪ್ರತಿರೋಧವೇ ಹೆಚ್ಚು ಮುಖ್ಯ. ಅದರ ರಾಜಕೀಯ ಹಿತಾಸಕ್ತಿಯೂ ಬೇರೆಯಾಗಿರುತ್ತದೆ. ಒಂದು ಹಂತದಲ್ಲಿ ಅದು ಕೈಗಾರಿಕೆ ಮತ್ತು ರೈತರ ಶಕ್ತಿಯನ್ನು ತನಗೆ ಬೇಕಾದ ರೀತಿಯಲ್ಲಿ ಬಳಸುತ್ತದೆ. ತನಗೆ ಅನ್ವಯವಾಗುವಂತೆ ಮಧ್ಯಮ ವರ್ಗವನ್ನು ಬಳಸುತ್ತದೆ. ಅದರಲ್ಲಿ ರಾಜಕೀಯ ಏಕತೆಯೂ ಒಂದು ಮಾನದಂಡವಾಗುತ್ತದೆ. ಫ್ಯಾಸಿಸಂ ತನ್ನ ಅಧಿಕಾರವನ್ನು ಬೇಕಾದ ರೀತಿಯಲ್ಲಿ ಬಳಸುವುದರಿಂದ ಅದಕ್ಕೆ ಮಾನವೀಯವಾದ ಒಂದು ಕಾಳಜಿಯು ಇರುತ್ತದೆ ಎಂದು ಹೇಳುವಂತೆ ಇಲ್ಲ. ವರ್ತಕರ ಜೊತೆಗೆ ಅದು ಮೈತ್ರಿಯನ್ನು ಸಾಧಿಸುತ್ತದೆ. ಅದಕ್ಕೆ ಸಮೂಹವು ಬೇಕಾಗುವುದೂ ಇಲ್ಲ. ತನ್ನ ವರ್ಧನೆಗಾಗಿ ಅದು ಮಿಲಿಟರಿ ಶಕ್ತಿಯನ್ನೂ ಬಳಸುತ್ತದೆ. ಇದು ಚರಿತ್ರೆಯಲ್ಲಿ ದಾಖಲಾಗಿದೆ. ಏನಿದ್ದರೂ ಅದರಲ್ಲಿ ಜನರ ಪರವಾದ ಒಂದು ನೀತಿಯು ಇರುವುದಿಲ್ಲ.

ಕಮ್ಯುನಿಸ್ಟ್ ಪಕ್ಷಗಳ ಮುಖ್ಯವಾದ ಕೆಲವು ಸಮಸ್ಯೆಗಳನ್ನು ಎದುರಿಸುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಅದರಲ್ಲಿ ಕಾರ್ಮಿಕರು ಮತ್ತು ಅವರ ಸಮಸ್ಯೆಗಳನ್ನು ನೋಡಿ ಅವರನ್ನು ಒಂದು ಸಂಘಟನೆಯ ಒಳಗೆ ತರುವುದೂ ಇದೆ. ಕಾರ್ಮಿಕರು ವಾಸ್ತವವಾಗಿ ಬೇಗನೆ ಒಂದು ಸಂಘಟನೆಯ ಒಳಗೆ ಬರುವುದಿಲ್ಲ. ಅವರು ತಮ್ಮ ಅಧಿಕಾರವನ್ನು ಪಡೆಯಲು ಒಂದು ಆವರಣವನ್ನು ಸಿದ್ಧಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಪಾರ್ಟಿಗೆ ಬೇಕಾದ ಒಂದು ಸಿದ್ಧತೆಯು ಅನಿವಾರ್ಯವಾಗಿದೆ. ಅವರು ಬಲಪಂಥವನ್ನು ನಿರಾಕರಿಸುವುದು ಅತ್ಯಂತ ಅಗತ್ಯ. ಇದು ಮುಖ್ಯವಾದ ಒಂದು ಸಮಸ್ಯೆ. ಬಲಪಂಥದ ರಾಜಕಾರಣವು ಬೇರೆ. ಅದು ಅತ್ಯಂತ ಆಕರ್ಶಕವಾದ ಮಾತುಗಳನ್ನು ಬಳಸುತ್ತದೆ. ಕಮ್ಯುನಿಸ್ಟ್ ಪಕ್ಷಗಳು ಕೆಲವು ತಂತ್ರಗಾರಿಕೆಯನ್ನು ಬಳಸಬೇಕಾಗುತ್ತದೆ. ಸಮೂಹದ ಜೊತೆಗೆ ಬೆರೆಯುವುದು ಕಷ್ಟ. ಬಲಪಂಥದ ರಾಜಕಾರಣವನ್ನು ಕಮ್ಯುನಿಸ್ಟ್ ಪಕ್ಷಗಳು ಎದುರು ಹಾಕಿಕೊಳ್ಳಬೇಕಾಗುತ್ತದೆ. ವಾಸ್ತವವಾಗಿ ಜನರನ್ನು ಒಂದು ಸಂಘಟನೆಯ ಒಳಗೆ ತರುವುದೇ ಅತ್ಯಂತ ಕಷ್ಟ. ಅಂತಿಮವಾಗಿ ಪಕ್ಷವು ಜನರ ಬಳಿಗೆ ಹೋಗಬೇಕಾಗುತ್ತದೆ. ಅದು ಅನಿವಾರ್ಯ.

೧೬

ನೈತಿಕ ಮತ್ತು ರಾಜಕೀಯ ಚರಿತ್ರೆ

ಈ ಪ್ರಶ್ನೆಯು ಒಂದು ದೃಷ್ಟಿಯಿಂದ ಸಂವಾದಿ. ಯಜಮಾನಿಕೆ, ಸಂಸ್ಕೃತಿ, ಚರಿತ್ರೆ ಹಾಗೂ ನೈತಿಕ ಸಂಗತಿಗಳನ್ನು ಇದು ಹೇಳುತ್ತದೆ ನೈತಿಕತೆಯು ಹೇಗೆ ಕೆಲಸವನ್ನು ಮಾಡುತ್ತದೆ. ಅದರ ಜೊತೆಗೆ ಅದು ಹೇಗೆ ನಮ್ಮ ರಾಜಕಾರಣವನ್ನು ಸೂಚಿಸುತ್ತದೆ, ಅದಕ್ಕೂ ತತ್ವಜ್ಞಾನಕ್ಕೂ ಯಾವ ಬಗೆಯ ಸಂಬಂಧವಿದೆ ಎಂದು ಹೇಳುವಾಗ ಇದನ್ನು ಗ್ರಾಂಶಿಯು ವಿವರಿಸುತ್ತಾನೆ.ಕೆಲವು ನಮಗೆ ಅದರ ತೋರ್ಪಡಿಸುವಿಕೆಯಿಂದ ಗೊತ್ತಾಗುತ್ತದೆ ಮತ್ತೆ ಕೆಲವು ಅಂತಸ್ಥವಾಗಿರುತ್ತದೆ. ಅದು ನಮಗೆ ತಿಳಿಯುವುದಿಲ್ಲ. ತತ್ವಜ್ಞಾನವೂ ನಮಗೆ ಒಂದು ವಾಸ್ತವ ಆಗಬಹುದು. ಅಥವಾ ಅದು ಚರಿತ್ರೆಯ ಜೊತೆಯಲ್ಲಿ ಸಂಮಿಶ್ರವಾಗಬಹುದು. ಅದ್ದರಿಂದ ತತ್ವಜ್ಞಾನವೂ ಸೇರಿದಂತೆ ಇದರ ಅಸ್ತಿತ್ವವು ನಮ್ಮ ಜೊತೆಯಲ್ಲಿ ಇರುತ್ತದೆ. ಅದು ಮಾತ್ರ ನಮಗೆ ತಿಳಿಯುತ್ತದೆ.

ಇದನ್ನು ಕ್ರೋಸೆಯು ಪ್ರಸ್ತಾವಿಸುತ್ತಾನೆ. ನೈತಿಕತೆ ಮತ್ತು ಚರಿತ್ರೆಗೆ ಸಂಬಂಧವಿದೆ ಎನ್ನುವುದು ಅವನ ನಿಲುವು. ಚರಿತ್ರೆಯು ಹೇಗೆ ಬೆಳೆದು ಬಂದಿದೆ ಎಂದರೆ ಅದರಲ್ಲಿ ನೀತಿ ಮತ್ತು ಸಮಾಜದ ಸೂಕ್ಷ್ಮತೆಗಳು ಸೇರಿಕೊಂಡಿವೆ. ಇದನ್ನು ನಾವು ಫಿಲಾಸಫಿ ಆಫ್ ಪ್ರಾಕ್ಸಿಸ್ ನಲ್ಲಿಯೂ ಕಾಣಬಹುದು. ಇದರ ಪರಿಣಾಮವಾಗಿ ರಾಜಕೀಯ ತಾತ್ವಿಕತೆಯು ಬರುತ್ತದೆ. ಚರಿತ್ರೆ ಮತ್ತು ಅದರ ಬ್ಲಾಕ್ ಎನ್ನುವುದರ ಕುರಿತು ಬಂದಿರುವುದೂ ಇದೇ ಸನ್ನಿವೇಶದಲ್ಲಿ. ಅದನ್ನು ಹಿಸ್ಟಾರಿಕಲ್ ಬ್ಲಾಕ್ ಎಂದೂ ಹೇಳುತ್ತಾರೆ. ಮೊದಲನೆಯದಾಗಿ ಇದು ರಾಜಕೀಯ ತಂತ್ರವನ್ನು ಹೇಳುತ್ತದೆ. ಇದರಲ್ಲಿ ಸಮಾಜ ಮತ್ತು ಅದರ ಒಪ್ಪಂದ ಮಾದರಿಗಳೂ ಇರುತ್ತವೆ. ಗ್ರಾಂಶಿಯಲ್ಲಿ ಇದು ಅತ್ಯಂತ ಮಹತ್ವದ ಪರಿಕಲ್ಪನೆಯೂ ಹೌದು. ಇದರಲ್ಲಿ ಪ್ರಗತಿಯ ಕಲ್ಪನೆಯು ಇರುತ್ತದೆ.ಗ್ರಾಂಶಿಯು ಈ ಚಾರಿತ್ರಿಕವಾದ ಬ್ಲಾಕನ್ನು ಹೇಳುವಾಗ ಅವನ ಮೇಲೆ ಸೊರೆಲ್‌ನ ಪ್ರಭಾವ ಕೂಡಾ ಇತ್ತು. ಕೆಲವು ಸಾಮಾಜಿಕವಾದ ಅಂಗೀಕಾರವು ಇದಕ್ಕೆ ಕಾರಣವು ಆಗುತ್ತದೆ.

ಗ್ರಾಂಶಿಯಲ್ಲಿ ಗುಂಪು ಎನ್ನುವುದು ಅತ್ಯಂತ ವಿಶಿಷ್ಟವಾದ ಕೆಲಸವನ್ನು ಮಾಡುತ್ತದೆ. ಕೆಲವು ಕಾರ್ಯಕ್ರಮಗಳು ಇನ್ನೊಬ್ಬರ ಜೊತೆಗೆ ಹಂಚಿಕೊಳ್ಳುವ ಮಾದರಿಯಲ್ಲಿ ಇರುತ್ತವೆ. ಮತ್ತೆ ಕೆಲವು ಸ್ವಗತದ ಮಾದರಿಯಲ್ಲಿಯೂ ಇರುತ್ತದೆ. ನಾವು ಯಾವುದೇ ಕಾರ್ಯಕ್ರಮವು ನಡೆಯುತ್ತಿರುವಾಗ ಅದರ ಹಿಂದೆ ಯಾವ ಸನ್ನಿವೇಶವು ಇದೆ ಎಂದು ನೋಡುವುದು ಅತ್ಯಂತ ಅಗತ್ಯ.. ಯಾವುದಾದರೂ ಕಾರ್ಯಕ್ರಮವನ್ನು ಯಾವುದೇ ಮಾಧ್ಯಮದಲ್ಲಿ ವರದಿ ಮಾಡುವಾಗ ಇದು ಅತ್ಯಂತ ಮಹತ್ವದ್ದು. ಇನ್ನೊಂದು ಅಂಶವನ್ನು ನಾವು ಇಲ್ಲಿ ಗಮನಕ್ಕೆ ತಂದು ಕೊಳ್ಳಬೇಕು: ಇದೇ ವಿಷಯವು ಯಾಕೆ ಒಂದು ಮಾಧ್ಯಮದಲ್ಲಿ ಪ್ರಸಾರವಾಗುತ್ತಿದೆ? ಯಾಕಿದು ಮೌಲಿಕವಾಗಿದೆ ಎನ್ನುವುದು ಇಲ್ಲಿ ಮಹತ್ವ. ಕಾರಣವು ಇಲ್ಲಿ ಮುಖ್ಯವಾಗುತ್ತದೆ. ನಿಲುವು ಎನ್ನುವುದು ಅತ್ಯಂತ ಅಗತ್ಯ. ಯಾವುದೇ ಚರ್ಚೆಯನ್ನು ಮಾಡುತ್ತಿರುವಾಗ ಅದರ ಹಿಂದೆ ಏನು ಮಹತ್ವವಿದೆ ಇದನ್ನು ನಾವು ಇನ್ನೊಬ್ಬರ ಹಾಜರಾತಿ ಎಂದೂ ಹೇಳುತ್ತೇವೆ. ತೀರಾ ಸರಳವಾದ ಒಂದು ಉದಾಹರಣೆಯನ್ನು ಕೊಡುವುದಿದ್ದರೆ ಮದುವೆಯಲ್ಲಿ ಬರೀ ಹುಡುಗ ಮತ್ತು ಹುಡುಗಿಯು ಇರುವುದಿಲ್ಲ. ಅವರ ಜೊತೆಗೆ ಸಾಕ್ಷ್ಯ ಎನ್ನುವಂತೆ ಬೇರೆ ಜನರೂ ಇರುತ್ತಾರೆ. ಮದುವೆ ಯಾಗುವವರನ್ನು ನಾವು ಮತ್ತೆ ಮತ್ತೆ ಪಂಥಾಹ್ವಾನ ಮಾಡುವುದು ಇಲ್ಲ. ಆದ್ದರಿಂದ ಒಂದು ವಿಷಯವನ್ನು ನಾವು ಹೇಳುವುದಿದ್ದರೆ ಅದರಲ್ಲಿ ವಿವಿಧ ಜನರು ಸೇರಿದರೆ ಅದರಲ್ಲಿ ವಿವಿಧ ಅಭಿಪ್ರಾಯಗಳೂ ಬರುತ್ತವೆ. ಅದನ್ನು ನಾವು ಬಹುತ್ವ ಎಂದು ಹೇಳುತ್ತೇವೆ. ಚರ್ಚೆಯಲ್ಲಿ ಭಾಗವಹಿಸುವುದು ಅಂದರೆ ಒಂದು ಅವಕಾಶವನ್ನು ಕಲ್ಪಿಸುವುದೂ ಹೌದು. ಅವಕಾಶ ಎನ್ನುವುದು ಅತ್ಯಂತ ಮಹತ್ವದ್ದೂ ನಿಜ. ಇದನ್ನು ಗ್ರಾಂಶಿಯು ಹೇಳಿದ್ದಾನೆ. ನಾವು ರಾಷ್ಟ್ರ ಮತ್ತು ಅದರ ರಾಜಕಾರಣವನ್ನು ಹೇಳುವಾಗ ಅದರ ಅರ್ಥವು ಭಿನ್ನವಾಗುತ್ತದೆ. ಅದನ್ನು ಅನೇಕರು ಅತ್ಯಂತ ಉತ್ಸಾಹದಿಂದ ವಿವರಿಸುವುದು. ಅದರಲ್ಲಿ ಬೇರೆ ಬೇರೆ ದೇಶಗಳಿಂದ ಬಂದವರು ಮತ್ತು ಸ್ವದೇಶಿಗರು ಎನ್ನುವುದು ಚರ್ಚೆಗೆ ಮಹತ್ವವನ್ನು ಕೊಡುತ್ತದೆ. ಇಲ್ಲಿ ಸ್ಥಳ ಎನ್ನುವುದು ಅತ್ಯಂತ ಮುಖ್ಯ. ಸೀಮಾ ರೇಖೆಗಿಂತ ಆಚೆಗೆ ಇರುವವರು ಮತ್ತೊಂದು ವಿಮರ್ಶೆಗೆ ಅವಕಾಶವನ್ನು ಕೊಡುತ್ತಾರೆ. ವಿಜ್ಞಾನವು ನಮಗೆ ಹೊಸದಾದ ಸನ್ನಿವೇಶವನ್ನು ಸೃಷ್ಟಿಸಿಕೊಟ್ಟಿತು. ಸಮಾಜದಲ್ಲಿ ಸಾಂಪ್ರದಾಯಿಕ ಜನರಿಗೆ ಇದ್ದ ಅವಕಾಶಕ್ಕಿಂತ ಹೆಚ್ಚಿನ ಅವಕಾಶವನ್ನು ನಮಗೆ ಅದು ಕೊಟ್ಟಿತು. ಅವರಿಗೆ ಇದ್ದ ಶಕ್ತಿಯು ಒಂದು ಬಗೆಯದು. ಆದರೆ ನವೀನ ಮನುಷ್ಯರಿಗೆ ಹೆಚ್ಚು ಅವಕಾಶವು ಸಿಕ್ಕಿತು. ತಂತ್ರಜ್ಞಾನವು ಸಿಕ್ಕಿತು. ವಿಜ್ಞಾನದಿಂದ ನಮಗೆ ಹೊಸದಾದ ಆಲೋಚನೆಯು ದೊರೆಯಿತು. ವಿಜ್ಞಾನವನ್ನು ಜನರು ಹೇಗೆ ಬಳಸಿಕೊಳ್ಳುತ್ತಾರೆ ಎನ್ನುವುದು ಬೇರೆ ಪ್ರಶ್ನೆ. ವಿಜ್ಞಾನವನ್ನು ಮತ್ತುಅದರ ಪರಿಣಾಮವನ್ನು ಮೊದಲೇ ಊಹಿಸುವುದು ಅಶಕ್ಯವಾಗಿತ್ತು. ಗ್ರಾಂಶಿಯು ಈ ಪಲ್ಲಟವನ್ನು ಗಮನಿಸಿದ್ದ. ಚರಿತ್ರೆಯು ಹೇಗೆ ಬದಲಾಗುತ್ತದೆ ಎನ್ನುವುದು ಅವನಿಗೆ ಗೊತ್ತಾಗಿತ್ತು. ವಿಜ್ಞಾನವು ಹೇಗೆ ನಮ್ಮ ಆಲೋಚನೆಯನ್ನು ಬದಲಿಸುತ್ತದೆ ಮತ್ತು ಅದರ ಮೂಲಕ ಹೇಗೆ ಒಂದು ತಾತ್ವಿಕತೆಯನ್ನು ಹುಟ್ಟು ಹಾಕುತ್ತದೆ ಎಂದು ಗ್ರಾಂಶಿಯು ಗ್ರಹಿಸಿದ್ದರಿಂದಲೇ ಅವನು ತಾತ್ವಿಕತೆಯನ್ನು ಒಂದು ಸ್ಥಳ ಮತ್ತು ಕಾಲದ ಆಧಾರದ ಮೂಲಕವೇ ಗ್ರಹಿಸುತ್ತಾನೆ. ಚರಿತ್ರೆ ಮತ್ತು ತಾತ್ವಿಕತೆಯು ಹೇಗೆ ಜೊತೆಯಲ್ಲಿ ಹೋಗುತ್ತವೆ ಎನ್ನುವುದು ಅವನಿಗೆ ಮುಖ್ಯವಾಗುತ್ತದೆ. ಚರಿತ್ರೆಯಲ್ಲಿ ತಾತ್ವಿಕತೆಯು ತರ್ಕ ರಹಿತವಾದ್ದು ಎಂದು ಹೇಳಲು ಬರುವುದಿಲ್ಲ. ಅದರ

ರೂಪವು ಆಗುತ್ತದೆ. ಅಂದರೆ ಅದು ಏಕಾ ಏಕಿ ನಿರ್ಧಾರವಾಗುವ ಸಂದರ್ಭವಲ್ಲ. ಅದು ಚಲನೆ. ಅದಕ್ಕೆ ಒಂದು ಪ್ರತ್ಯೇಕವಾದ ಒಂದು ನಿರ್ದಿಷ್ಟವಾದ ಗುಣವು ಇರುತ್ತದೆ ಎಂದು ಹೇಳುವುದು ಅಸಾಧ್ಯ. ಅದಕ್ಕೆ ಅದರದೇ ಆದ ಒಂದು ಸಾಮಾಜಿಕ ಮತ್ತು ರಾಜಕೀಯವಾದ ಸಂಬಂಧವೂ ಇರುತ್ತದೆ. ಈ ದೃಷ್ಟಿಯಿಂದ ಭೌತವಾದಿ ಚಿಂತನೆಯು ತಾತ್ವಿಕತೆಗೆ ಅತ್ಯಂತ ಮಹತ್ವದ ಕೊಡುಗೆಯನ್ನು ಕೊಟ್ಟಿದೆ. ಅದನ್ನು ರಾಜಕಾರಣವೆಂಬ ಮೇಲುರಚನೆಯ ಜೊತೆಗೆ ನಾವು ನೋಡಬೇಕಾಗುತ್ತದೆ. ಪ್ರಿಸನ್ ನೋಟ್ಬುಕ್ ಕೃತಿಯಲ್ಲಿ ಗ್ರಾಂಶಿಯು ನಮಗೆ ಈ ದೃಷ್ಟಿಯಿಂದ ಕೆಲವು ಒಳನೋಟವನ್ನು ಕೊಡುತ್ತಾನೆ. ರಾಜಕಾರಣ ಮತ್ತು ಚರಿತ್ರೆ ಎರಡೂ ಅವನಿಗೆ ಅತ್ಯಂತ ಅಗತ್ಯ. ಆದರೆ ಅದಕ್ಕೆ ಒಂದು ನಿಯಮವು ಇರುತ್ತದೆ. ವಿಜ್ಞಾನದಲ್ಲಿ ಆಲೋಚನೆ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ. ವಿಜ್ಞಾನದ ಪ್ರಕಾರ ಆಲೋಚನೆ ಮತ್ತು ಅದರ ಚಹರೆಗಳು ಒಂದು ಬಗೆಯವು. ಆದರೆ ಅದನ್ನೇ ನಾವು ಮಾನವಿಕಗಳಲ್ಲಿ ಆಲೋಚನೆ ಎಂದು ಹೇಳುವಾಗ ಬೇರೆ ಥರ ಹೇಳುತ್ತೇವೆ. ಇದನ್ನು ಹೀಗೆಯೂ ಹೇಳಬಹುದು: ಒಬ್ಬ ವ್ಯಕ್ತಿಯು ಹೇಗೆ ತನ್ನ ಆಲೋಚನೆಯನ್ನು ವ್ಯಕ್ತಮಾಡುತ್ತಾನೆಯೋ ಅದು ತಾತ್ವಿಕ ರೂಪವನ್ನು ಪಡೆಯುತ್ತದೆ. ಮೊದಲು ಚರಿತ್ರೆಯಲ್ಲಿ ತಾತ್ವಿಕತೆಯು ಹೇಗೆ ಭೌತಿಕವಾದ ರೂಪವನ್ನು ಹೊಂದಿದ್ದವೋ ಅದು ಅನಂತರ ರಾಜಕೀಯ ಮತ್ತು ಸಾಂಸ್ಕೃತಿಕವಾದ ಅರ್ಥವನ್ನು ಪಡೆದುಕೊಂಡಿತು. ತಾತ್ವಿಕತೆ ಎನ್ನುವುದು ಒಂದು ಪರಿಕಲ್ಪನೆಯು ಆಗಿದೆ. ಅದೇ ಹೊತ್ತಿಗೆ ಅದು ಸೈದ್ಧಾಂತಿಕವೂ ಆಗಿದೆ. ಆದ್ದರಿಂದ ಗ್ರಾಂಶಿಯಲ್ಲಿ ತಾತ್ವಿಕತೆಯೆ ಭಿನ್ನವಾದ ಚರ್ಚೆಯನ್ನು ಒಳಗೊಳ್ಳುತ್ತದೆ. ತಾತ್ವಿಕತೆಗೆ ಒಂದು ನಿಜವಾದ ಪದವೆಂದರೆ ನಿಯಮಬದ್ಧವಾದ ನಿರೂಪಣೆ. ಅದನ್ನು ಅಶಾಸ್ತ್ರ ಮಾಡಬೇಕಾದ ಅಗತ್ಯವು ಇಲ್ಲ. ಅದಕ್ಕೆ ಒಂದು ಕ್ರಿಯಾತ್ಮಕವಾದ ರೂಪವೂ ಇದೆ ಎಂದು ಗ್ರಾಂಶಿಯು ನಂಬುತ್ತಾನೆ. ಅನೇಕ ಸಂಗತಿಗಳು ಒಂದು ಸನ್ನಿವೇಶವನ್ನು ಆಧರಿಸಿಕೊಂಡು ಹುಟ್ಟುತ್ತವೆ. ಅದರ ಬಗ್ಗೆ ನಮಗೆ ಒಂದು ನಂಬಿಕೆಯು ಇರಬೇಕಾಗುತ್ತದೆ. ತಾತ್ವಿಕ ಎನ್ನುವುದೂ ನಮ್ಮ ದೃಷ್ಟಿಕೋನವನ್ನು ಹೇಳುತ್ತದೆ. ರೂಪ ಮತ್ತು ತಾತ್ವಿಕತೆಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವವು ಇದೆ.

ಸನ್ನಿವೇಶ ಮತ್ತು ಅದರ ಹಿಂದೆ ಇರುವ ಒತ್ತಡಗಳ ಸಂಬಂಧವು ಅತ್ಯಂತ ಸಂಕೀರ್ಣವಾಗಿರುತ್ತದೆ. ರಚನೆ ಮತ್ತು ಮೇಲ್ ರಚನೆ ಎನ್ನುವುದಕ್ಕೆ ಸಂಬಂಧವು ಇದೆ. ಅದು ಕೆಲವನ್ನು ಹೆಚ್ಚು ಕ್ರಿಯಾಶೀಲವಾಗಿ ಇರುವಂತೆ ನೋಡುತ್ತದೆ. ಇದಕ್ಕೆ ಮುಖ್ಯವಾದ ಕಾರಣ ಎಂದರೆ ಚರಿತ್ರೆ. ಯಾವುದು ನಮ್ಮ ಮುಂದೆ ಇದೆಯೋ ಅದು ಮಾತ್ರವೇ ನಮಗೆ ಸಾಕಾಗುವುದೂ ಇಲ್ಲ. ಆದ್ದರಿಂದ ಒಂದು ವಿಶಿಷ್ಟವಾದ ಸನ್ನಿವೇಶದಲ್ಲಿ ಅನೇಕ ಸಂಗತಿಗಳು ಅಸ್ತಿತ್ವವನ್ನು ಪಡೆಯುತ್ತವೆ. ಒಂದು ಭೌತಿಕವಾದ ಸನ್ನಿವೇಶದಲ್ಲಿ ಕೆಲವು ಮುಂದೆ ಬರುತ್ತವೆ ಮತ್ತೆ ಕೆಲವು ಹಿಂದೆ ಸರಿಯುತ್ತವೆ. ಇದನ್ನು ಇಟ್ಟುಕೊಂಡು ನಾವು ಚರಿತ್ರೆಯನ್ನು ಗ್ರಹಿಸಲು ಬೇಕಾದ ಸಿದ್ಧತೆಯನ್ನು ಮಾಡಬಹುದು ಎಂದು ಗ್ರಾಂಶಿಯು ಹೇಳುತ್ತಾನೆ. ಕೆಲವು ರಚನೆಗಳು ಆಗಿವೆ, ಮತ್ತೆ ಕೆಲವು ರಚನೆಗಳು ಮತ್ತೆ ರೂಪುಗೊಳ್ಳುತ್ತವೆ. ಕೆಲವು ಶಾಶ್ವತವಾದ ರಚನೆಗಳು. ಅವುಗಳು ಬದಲಾಗುವುದಿಲ್ಲ. ಹಾಗಿದ್ದರೆ ಅದು ಯಾಕೆ ಹಾಗೆ ಉಳಿಯುತ್ತದೆ ಎಂದು ಕೇಳಬಹುದು. ಅದರಲ್ಲಿ ಒಂದು ನಿರ್ದಿಷ್ಟವಾದ ಮೌಲ್ಯವೂ ಇರುತ್ತದೆ. ಆದ್ದರಿಂದ ಅದು ಬದಲಾಗುವುದಿಲ್ಲ.

ನಮ್ಮ ನಿತ್ಯದ ಜೀವನ ಮತ್ತು ಅದರ ಸನ್ನಿವೇಶಗಳೂ ನಮಗೆ ಕೆಲವನ್ನು ಹೇರುತ್ತದೆ. ಅದರ ಜೊತೆಗೆ ಸಮಾಜ ಮತ್ತು ಅದರ ಚರಿತ್ರೆ ಹಾಗೂ ಅದರ ಸತ್ಯಾಂಶಗಳು ನಮ್ಮ ಜೀವನವನ್ನು ಆವರಿಸುತ್ತದೆ. ಕೆಲವು ರಚನೆಗಳು ನಮ್ಮ ಮುಂದೆ ಸದಾ ಇರುತ್ತದೆ. ಆದರೆ ಮತ್ತೆ ಕೆಲವು ರಚನೆಗಳು ನಿತ್ಯದಲ್ಲಿ ಬರುವುದೂ ಇಲ್ಲ. ಕೆಲವು ರಚನೆಗಳ ಎದುರು ಚರಿತ್ರೆ ಮತ್ತು ಅದರ ಸಮಸ್ಯೆಗಳೂ ಇದ್ದವು ಎನ್ನುವುದು ಸತ್ಯ. ಯಾವುದು ನಿಜವಾಗಿ ನಮ್ಮ ಎದುರು ಇರುತ್ತದೆ ಮತ್ತು ಯಾವುದು ಗೈರುಹಾಜರಿಯಗುತ್ತದೆ ಎನ್ನುವುದನ್ನು ಒಂದು ಸನ್ನಿವೇಶವೇ ನಿರ್ಧಾರ ಮಾಡುತ್ತದೆ. ಸಾಮಾಜಿಕ ಸನ್ನಿವೇಶಕ್ಕೂ ಸಾಮಾಜಿಕವಾದ ಒತ್ತಡಕ್ಕೂ ಒಂದು ಸಂಬಂಧವಿದೆ. ಕೆಲವು ಸನ್ನಿವೇಶದಲ್ಲಿ ಸಮಾಜ ಮತ್ತು ಅದರ ಒತ್ತಡವು ನಮಗೆ ಶಕ್ತಿಯನ್ನು ಕೊಡಬಹುದು. ರಾಜಕೀಯ ಸನ್ನಿವೇಶಗಳು ಕೂಡಾ ನಮಗೆ ಪರಿಣಾಮವನ್ನು ಬೀರುತ್ತವೆ. ಎಲ್ಲಾ ದೇಶಗಳು ಈವತ್ತು ರಾಜಕೀಯವಾದ ಒಂದು ಶಕ್ತಿಯನ್ನು ಹೊಂದಿದೆ. ಅದರ ಬೆಂಬಲಕ್ಕೆ ಮಿಲಿಟರಿ ಶಕ್ತಿಗಳೂ ಕೆಲಸವನ್ನು ಮಾಡುತ್ತವೆ,

⊙

೧೭

ಅರ್ಥಶಾಸ್ತ್ರವಾದ

ವಾಸ್ತವವಾಗಿ ಈವತ್ತು ನಮ್ಮ ಎದುರು ಇರುವ ಅತ್ಯಂತ ಮಹತ್ವದ ಪ್ರಶ್ನೆ. ಇದನ್ನು ಈವತ್ತು ನಾವು ಮಾತಾಡಬೇಕಾಗಿದೆಯೇ ಬೇಡವೇ ಎನ್ನುವುದು ಅತ್ಯಂತ ಅಗತ್ಯದ ಪ್ರಶ್ನೆ. ಇದನ್ನು ಅನೇಕರು ಕೇಳಿದ್ದಾರೆ. ಆದರೆ ಅತ್ಯಂತ ಅಗತ್ಯ ಅರ್ಥಶಾಸ್ತ್ರದಲ್ಲಿ ಉದಾರವಾದವಿದೆ. ಬಂಡವಾಳವಾದವಿದೆ. ಮುಕ್ತವಾದ ಮಾರುಕಟ್ಟೆಯು ಇದೆ. ಹಾಗೆಯೇ ಅದರಲ್ಲಿ ಸಮಾಜವಾದಿ ಚಿಂತನೆಯೂ ಇದೆ. ಹಾಗೆಯೇ ನಾಗರಿಕ ಸಮಾಜಕ್ಕೂ ಅರ್ಥಶಾಸ್ತ್ರಕ್ಕೂ ಒಂದು ಸಂಬಂಧವಿದೆ. ಆದರೆ ಅರ್ಥಶಾಸ್ತ್ರ ಮತ್ತು ಅದರ ಚರ್ಚೆಯನ್ನು ನೋಡಿದರೆ ಅದನ್ನು ಬಿಟ್ಟು ನಮ್ಮ ಸಮಾಜವು ನಿಲ್ಲುವುದು ಸಾಧ್ಯವೇ ಇಲ್ಲ. ಆದರೆ ಅರ್ಥಶಾಸ್ತ್ರ ಮತ್ತು ಅದರ ನೇರವಾದ ಒಂದು ಪರಿಣಾಮವು ರಾಜಕೀಯದ ಮೇಲೆ ಅಗುತ್ತದೆ. ಅದು ಸತ್ಯ. ಆದರ ಜೊತೆಗೆ ಅದು ಸಮಾಜದಲ್ಲಿ ವರ್ಗಗಳನ್ನು ಸೃಷ್ಟಿ ಮಾಡುತ್ತದೆ. ಹೀಗೆ ಇದ್ದರೂ ರಾಜಕೀಯ ಸಮಾಜ ಮತ್ತು ನಾಗರಿಕ ಸಮಾಜವನ್ನು ನೋಡಬೇಕಾಗುತ್ತದೆ ಎನ್ನುವುದು ಗ್ರಾಂಶಿಯ ವಾದ. ಆರ್ಥಿಕತೆಗೆ ಮತ್ತು ಚರಿತ್ರೆಗೆ ಒಂದು ಸಂಬಂಧವಿದೆ. ಆದ್ದರಿಂದ ಚಾರಿತ್ರಿಕವಾದ ಅವನ ಅತ್ಯಂತ ಮುಖ್ಯವಾದ ತಿಳುವಳಿಕೆಯಲ್ಲಿ ಇದೂ ಒಂದು.

ವಾರ್ ಆಫ್ ಪೊದಿಶನ್ ಮತ್ತು ವಾರ್ ಆಫ್ ಮನೋವರ್. ಒಂದು ರೀತಿಯಿಂದ ಇದು ಮಾರ್ಕ್ಸವಾದದ ಮುಖ್ಯವಾದ ಪರಿಕಲ್ಪನೆ ಎಂದೂ ಹೇಳಬಹುದು. ಇದು ಮೊದಲು ರೋಸಾ ಲಕ್ಷೆಬರ್ಗ್‌ನಲ್ಲಿ ಬರುತ್ತದೆ. ವಾರ್ ಆಫ್ ಪೊದಿಶನ್ ಎನ್ನುವುದು ಮಿಲಿಟರಿಯಲ್ಲಿ ಬಳಸುವ ಪದವೂ ಹೌದು. ಮತ್ತೊಂದು ಕಡೆಯಿಂದ ಇದು ರಾಜಕೀಯವಾದ ಪರಿಭಾಷೆಯೂ ಹೌದು. ಇದು ಇನ್ನೊಂದು ಅರ್ಥದಲ್ಲಿ ಮಿಲಿಟರಿಯಲ್ಲಿ ನೇತೃತ್ವ ವಹಿಸುವ ಕ್ರಮವನ್ನು ಹೇಳುತ್ತದೆ. ಯುದ್ಧ ಎನ್ನುವುದು ಸತತವಾಗಿ ಬೇರೆ ಬೇರೆ ರೂಪದಲ್ಲಿ ಮುಂದುವರಿಯುತ್ತದೆ ಎನ್ನುವುದನ್ನು

ಇದು ಹೇಳುತ್ತದೆ. ಇದು ಮತ್ತೊಂದು ಕಡೆಯಿಂದ ಮಿಲಿಟರಿ ಅಭಿವ್ಯಕ್ತಿಯನ್ನು ಹೇಳುತ್ತದೆ. ಎರಡು ರಾಜಕೀಯ ಪಕ್ಷಗಳ ನಡುವೆ ನಡೆಯುವ ಸಂಘರ್ಷವನ್ನು ಈ ದೃಷ್ಟಿಯಿಂದಲೂ ನೋಡಬಹುದು. ವಾಸ್ತವವಾಗಿ ಇದು ಹದಿನಾರನೆಯ ಶತಮಾನದಲ್ಲಿಯೇ ಚಾಲ್ತಿಗೆ ಬಂದಿತ್ತು. ಆಗ ಬುದ್ಧಿಜೀವಿಗಳು ಇದನ್ನು ಬಳಸುವ ಕ್ರಮದ ಕಡೆಗೆ ತಮ್ಮ ಗಮನವನ್ನು ಹರಿಸಿದರು. ಈ ಪದಗಳು ಮತ್ತೊಂದು ರೀತಿಯಲ್ಲಿ ರೂಪಕದ ಭಾಷೆಯೂ ಹೌದು. ಆದರೆ ಅದು ರಾಜಕೀಯವಾಗಿ ಅತ್ಯಂತ ಮಹತ್ವವನ್ನು ಪಡೆಯುತ್ತದೆ. ಅವನು ಹೇಳುವುದು ಈ ರೀತಿಯಲ್ಲಿ ಇದೆ: ಯಜಮಾನಿಕೆಯು ಒಂದು ಅರ್ಥದಲ್ಲಿ ಇದೇ ಬಗೆಯ ನಿಲುವನ್ನು ತಳೆಯುತ್ತದೆ. ಯುದ್ಧದ ಕೌಶಲ್ಯ ಮತ್ತು ಸ್ಥಾನದ ಯುದ್ಧ ಎನ್ನುವುದು ಗ್ರಾಂಶಿಯಲ್ಲಿ ಅತ್ಯಂತ ಮುಖ್ಯ. ಕೌಶಲ ಎನ್ನುವುದು ಹೇಗೆ ಮುಖ್ಯವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ಇದು ಅವನ ಸಾಮಾಜಿಕ ಸಿದ್ಧಾಂತವೂ ಹೌದು ಆದರೂ ಈ ಎರಡು ಭಿನ್ನವಾದ ಪರಿಕಲ್ಪನೆಗಳು ಭಿನ್ನವಾದ ಹಾದಿಯಲ್ಲಿ ನಡೆಯುತ್ತವೆ. ಇದರಲ್ಲಿ ವರ್ಗ ಸಂಘರ್ಷ ಮತ್ತು ಅದರ ಪರಿಕಲ್ಪನೆಗಳೂ ಸೇರಿಕೊಂಡಿವೆ. ವಾರ್ ಆಫ್ ಪೊದಿಶನ್ ಎನ್ನುವುದು ಒಂದು ನಿರ್ದಿಷ್ಟವಾದ ಆಲೋಚನೆಯನ್ನು ಹೇಳುತ್ತದೆ. ಅದರಲ್ಲಿ ಒಂದು ಪ್ರಕ್ರಿಯೆ ಕೂಡಾ ಇರುತ್ತದೆ.

ಆರ್ಥಿಕತೆಗೆ ಮತ್ತು ಪ್ರಭುತ್ವಕ್ಕೆ ಒಂದು ಸಂಬಂಧವು ಇದೆ. ಇದರಲ್ಲಿ ಆರ್ಥಿಕತೆಯನ್ನು ಬಿಟ್ಟು ಸಂಸ್ಕೃತಿ ಮತ್ತು ಪ್ರಭುತ್ವವನ್ನು ನಾವು ಚರ್ಚೆ ಮಾಡಲು ಸಾಧ್ಯವಿಲ್ಲ ಎಂದು ಗ್ರಾಂಶಿಯು ಹೇಳುತ್ತಾನೆ. ರಾಜಕೀಯ ಯಜಮಾನಿಕೆ ಎನ್ನುವುದು ಆಧುನಿಕವಾದ ಒಂದು ನೆಲೆಯನ್ನು ಹೇಳುತ್ತದೆ. ಆದ್ದರಿಂದ ಈವತ್ತು ನಾವು ಮನುಷ್ಯ ಮತ್ತು ಲೋಕದ ಸಂಬಂಧವನ್ನು ಅದು ಭಿನ್ನವಾಗಿ ಹೇಳುತ್ತದೆ. ನಿರ್ದಿಷ್ಟವಾದ ಒಂದು ಪ್ರಭುತ್ವವು ವ್ಯಕ್ತಿಯನ್ನು ನಿರ್ದಿಷ್ಟವಾಗಿ ಗುರುತಿಸುವುದು ಸಾಧ್ಯವಿದೆ. ವ್ಯಕ್ತಿಗೆ ಮತ್ತು ಸಮಾಜಕ್ಕೆ ಒಂದು ಸಂಬಂಧವಿದೆ. ಇದು ಒಂದು ಸಂಸ್ಕೃತಿಯಲ್ಲಿ ರಾಜಕೀಯ ಪ್ರಭುತ್ವವನ್ನು ನಿರ್ದಿಷ್ಟವಾಗಿ ರೂಪಿಸುತ್ತದೆ. ಆಧುನಿಕ ಪ್ರಭುತ್ವವು ನಾಗರಿಕ ಎನ್ನುವುದನ್ನು ಹೆಚ್ಚು ಒತ್ತು ಕೊಡುತ್ತದೆ. ಅದರ ಜೊತೆಗೆ ಆರ್ಥಿಕತೆ ಮತ್ತು ಪ್ರಭುತ್ವವು ಜೊತೆಗೆ ಹೋಗುತ್ತವೆ. ಮಧ್ಯಕಾಲೀನ ಸಮಾಜ ಮತ್ತು ಅಲ್ಲಿನ ಪ್ರಭುತ್ವದ ಕಲ್ಪನೆಗಳು ಬೇರೆಯಾಗಿದ್ದವು.

1920ರಲ್ಲಿ ಅಮೇರಿಕನ್‌ವಾದ ಮತ್ತು ಫೋರ್ಡಿಸಂ ಎನ್ನುವುದನ್ನು ಹೆಚ್ಚು ಚಾಲ್ತಿಗೆ ತರಲಾಯಿತು. ಇದು ರಾಜಕಾರಣ, ಅರ್ಥಶಾಸ್ತ್ರ ಮತ್ತು ಸಂಸ್ಕೃತಿಯ ಅಧ್ಯಯನದ ಮೇಲೆ ಪ್ರಭಾವ ಬೀರಿದ್ದು ನಿಜ. ಈ ಮೂರು ಅಂಶಗಳು ಹೆಚ್ಚು ಚರ್ಚೆಗೆ ಗುರಿಯಾಗಿದ್ದು ಕೂಡಾ ಇದೇ ಕಾಲಕ್ಕೆ. ಫೋರ್ಡ್ ಎನ್ನುವುದು ಬೃಹತ್ ಪ್ರಮಾಣದ ಉತ್ಪಾದನೆ ಮತ್ತು ಅದರ ಸೂಚನೆಗಳನ್ನು ಕೊಡುತ್ತದೆ. ಫೋರ್ಡ್ ಎನ್ನುವುದು ಮೋಟಾರುಗಳನ್ನು ತಯಾರಿಸುವ ಕಂಪೆನಿಯೂ ಹೌದು. ಅದರಲ್ಲಿ ಉತ್ಪಾದನೆಯು ಆದ ವಸ್ತುಗಳು ಮಾರುಕಟ್ಟೆಯ ಮೇಲೆ ಅಪಾರವಾದ ಒಂದು ಪ್ರಭಾವವನ್ನು ಬೀರಿದೆ. ಅದು ಕಾರ್ಮಿಕರಿಗೆ ಹೆಚ್ಚು ಭತ್ಯೆಯನ್ನು ಕೊಟ್ಟಿತ್ತು. ಅದರ ಜೊತೆಗೆ ಅದು ಕಾರ್ಮಿಕರಿಗೆ ಬೋನಸ್ ಧನವನ್ನು ಕೊಟ್ಟಿತ್ತು.ಅದರ ಜೊತೆಗೆ ಉತ್ಪಾದನೆಯಲ್ಲಿ ಒಂದು ವೈಜ್ಞಾನಿಕವಾದ ಕ್ರಮವನ್ನು ಅಳವಡಿಸಿದ್ದು ಈಗ ನಮಗೆ

ಒಂದು ಇತಿಹಾಸದ ಥರ ಕಾಣುತ್ತದೆ. ಇದರ ಪ್ರಭಾವವು ಸಮಾಜದ ಮೇಲೆ ಆಯಿತು ಎಂದು ಗ್ರಾಂಶಿಯು ಹೇಳುತ್ತಾನೆ. ಫೋರ್ಡ್ ಕಂಪೆನಿಯು ಬಂಡವಾಳವಾದಿ ನಿಲುವನ್ನು ಹೊಂದಿದ್ದು ಮಾತ್ರವೇ ಅಲ್ಲ, ಅದರಲ್ಲಿ ಆಧುನಿಕತೆಯ ಸೆಳೆತವೂ ಇತ್ತು.

ಅಮೇರಿಕನ್ ವಾದವು ಅನೇಕವನ್ನು ಫ್ಯಾಸಿಸ್ಟ್ ಎಂದು ಹೇಳಿದ್ದು ಸತ್ಯ. ವಾಸ್ತವವಾಗಿ ಇದರ ಪರಿಣಾಮವು ಎಲ್ಲಾ ದೇಶಗಳ ಮೇಲೆ ಆಗಿತ್ತು. ಇದು ಅತ್ಯಂತ ಸಂಕೀರ್ಣವೂ ಆಗಿತ್ತು. ಹಾಗೆ ನೋಡಿದರೆ ಅಮೇರಿಕಾ ದೇಶವು ಬಹಳ ದೊಡ್ಡದಾದ ಒಂದು ಚಾರಿತ್ರಿಕತೆಯನ್ನು ಹೊಂದಿಲ್ಲ ಆದರ ಈವತ್ತು ಅತ್ಯಂತ ಪ್ರಬಲವಾದ ಒಂದು ರಾಷ್ಟ್ರವಾಗಿದೆ. ಇದರ ಪರಿಣಾಮವಾಗಿ ವ್ಯಕ್ತಿ ಮತ್ತು ಸಂಸ್ಕೃತಿಯ ಸಂಬಂಧವೂ ಭಿನ್ನವಾಯಿತು.

ಗ್ರಾಂಶಿಯು ಇಲ್ಲಿ ಅತ್ಯಂತ ಮಹತ್ವದ ಒಂದು ಪರಿಕಲ್ಪನೆಯನ್ನು ನಮ್ಮ ಮುಂದೆ ಇಡುತ್ತಾನೆ. ಕೈಗಾರಿಕೆಗಳು ನಿರಂತರವಾಗಿ ಮನುಷ್ಯ ಮತ್ತು ಅವನ ಅಸ್ತಿತ್ವವನ್ನು ಪ್ರಶ್ನೆ ಮಾಡುತ್ತಲೇ ಬಂದಿದೆ. ಅದು ಕೆಲವು ನಿಯಮಗಳನ್ನು ಹುಟ್ಟು ಹಾಕಿದೆ. ಅದರ ಜೊತೆಗೆ ಇದು ನಮಗೆ ಪಂಥಾಹ್ವಾನವನ್ನು ಒಡ್ಡಿದೆ. ಕೈಗಾರಿಕೆ ಮತ್ತು ಮನುಷ್ಯರ ಸಂಬಂಧವನ್ನು ನಾವು ಯಾವ ವಿಧದಲ್ಲಿ ನೋಡಿದರೂ ನಮಗೆ ಕಾಣುವುದು ಇದೇ ಅಂಶ. ಅದು ನಮ್ಮ ಜೀವನದ ಕ್ರಮವನ್ನು ಬೇರೆ ಥರ ನಿರೂಪಣೆ ಮಾಡಿದೆ. ಅಷ್ಟೇ ಅಲ್ಲ ಅದು ನಾಗರಿಕತೆಯನ್ನು ಮತ್ತೊಂದು ಕ್ರಮದಲ್ಲಿ ಹುಟ್ಟುಹಾಕುತ್ತದೆ. ಕೈಗಾರಿಕೆಗೆ ನೀತಿ ಮತ್ತು ಧರ್ಮ ಮುಂತಾದವುಗಳು ಯಾವುದೂ ಇಲ್ಲ. ಆದರೂ ಅದು ಬಾಹ್ಯ. ಮತ್ತು ಅಂತರಂಗ ಎನ್ನುವುದನ್ನು ಸ್ಥಾಪಿಸುತ್ತದೆ. ಮನುಷ್ಯರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪರದಾಡಬೇಕಾಗಿದೆ. ಮನುಷ್ಯನಲ್ಲಿ ತುಂಬಾ ಆಳದಲ್ಲಿ ಪ್ರಾಣಿಗೆ ಇರುವ ಗುಣವೂ ಇರುತ್ತದೆ. ಆದರೆ ಶಿಕ್ಷಣವು ಮನುಷ್ಯನನ್ನು ಬೇರೆ ಥರ ನಿರೂಪಣೆ ಮಾಡುತ್ತದೆ. ಶಿಕ್ಷಣವು ಮತ್ತೊಂದು ಅರ್ಥದಲ್ಲಿ ಮನುಷ್ಯನನ್ನು ಹೆಚ್ಚು ನಾಗರಿಕರನ್ನಾಗಿ ಮಾಡುತ್ತದೆ. ಪುನರುಜ್ಜೀವನದ ಅನಂತರ ಮನುಷ್ಯರು ತಮ್ಮ ಜೀವನದ ಕ್ರಮವನ್ನು ಬದಲಾಯಿಸಬೇಕಾಗಿ ಬಂತು. ಆಧುನಿಕ ನಾಗರಿಕತೆಯನ್ನು ನೋಡಿದರೆ ಈ ಅಂಶವು ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ನೈತಿಕತೆಯ ಮೇಲೆ ಕೂಡಾ ಇದು ತನ್ನ ಪರಿಣಾಮವನ್ನು ಬೀರಿದೆ. ಆಧುನಿಕ ಕೈಗಾರಿಕೆಗಳು ಮತ್ತು ನಮ್ಮ ಜೀವನದ ಕ್ರಮಗಳು ಒಂದಕ್ಕೊಂದು ಹೆಣೆದುಕೊಂಡಿವೆ, ಇದರ ಮತ್ತೊಂದು ಮುಖ್ಯವಾದ ಸಮಸ್ಯೆ ಎಂದರೆ ಕೈಗಾರಿಕೆ ಮತ್ತು ನಾಗರಿಕತೆಗಳು ಮನುಷ್ಯನ ಕಾಮವಂಛೆಯನ್ನು ಬದಲಿಸಿದೆ. ಲೈಂಗಿಕ ಕಾಮನೆಗಳೂ ಒಂದು ಅರ್ಥದಲ್ಲಿ ಒತ್ತಡಕ್ಕೆ ಗುರಿಯಾಗಿದೆ. ಮೃಗೀಯತೆ ಎನ್ನುವುದು ಈವತ್ತು ಹೊಸದಾದ ವ್ಯಾಖ್ಯಾನಗಳಿಂದ ಬದಲಾಗಿದೆ. ಮನುಷ್ಯ ಕೆಲವನ್ನು ದೂರ ಇಡಬೇಕಾದ ಪರಿಸ್ಥಿತಿಯು ಬಂತು. ಇದರ ಮೂಲಕ ಮನುಷ್ಯನು ಸ್ವಂತಿಕೆ ಮತ್ತು ಅದರ ಶಿಸ್ತನ್ನು ಕಾಪಾಡಬೇಕಾಗಿ ಬಂದಿತು.

೧೮

ಉತ್ಪಾದನೆ ಮತ್ತು ಅದರ ನವೀಕರಣ ಹಾಗೂ ಮನುಷ್ಯ

ಉತ್ಪಾದನೆ ಮತ್ತು ಅದರ ಚಲನೆಗಳು ಹೇಗೆ ಮನುಷ್ಯರ ಮೇಲೆ ಪ್ರಭಾವವನ್ನು ಬೀರುತ್ತದೆ ಎಂದು ಗ್ರಾಂಶಿಯು ವಿವರಿಸುತ್ತಾನೆ. ಯಾವಾಗಲೂ ಉತ್ಪಾದನೆಯ ಕ್ರಮಗಳು ನಿರಂತರ ಬದಲಾಗುತ್ತಾ ಹೋಗಿದೆ. ಅದರ ಪರಿಣಾಮವಾಗಿ ವ್ಯಕ್ತಿಗಳು, ಅವರ ಜೀವನದ ಕ್ರಮಗಳು ಬದಲಾಗುತ್ತವೆ. ಈ ಪ್ರಶ್ನೆಯನ್ನು ನಾವು ಅಮೇರಿಕಾದ ಹಿನ್ನೆಲೆಯಲ್ಲಿಯೂ ನೋಡಬಹುದು. ಅದರ ಜೊತೆಗೆ ಕೈಗಾರಿಕೆಗಳು ಕಾರ್ಮಿಕರಿಗೆ ಕೆಲವು ಹೆಚ್ಚುವರಿ ಸಂಬಳವನ್ನು ಕೊಟ್ಟಿತು. ಇದು ಒಂದು ಬಗೆಯ ಹಿಪಾಕ್ರಸಿಗೆ ಕಾರಣವಾಯಿತು. ಆಧುನಿಕ ಮನುಷ್ಯರು ನವೀನವಾದ ಒಂದು ಪ್ರಜ್ಞೆಯನ್ನು ಹೊಂದಿದ್ದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ವಾಣಿಜ್ಯೋದ್ಯಮಿಗಳಿಗೆ ಕಾರ್ಮಿಕರು ಪರಿಕರ ಮಾತ್ರ. ಅದರ ಬಗ್ಗೆ ಅವರು ಹೆಚ್ಚು ಯೋಚನೆಯನ್ನು ಮಾಡಲಿಲ್ಲ. ಹೊಸದಾದ ಉತ್ಪಾದನೆಯು ಹೇಗೆ ಮನುಷ್ಯರನ್ನು ಬಾಧಿಸುತ್ತದೆ ಎನ್ನುವುದಕ್ಕೆ ಅಮೇರಿಕಾವೇ ಸಾಕ್ಷಿಯಾಗಿದೆ. ಅದು ಕಾರ್ಮಿಕರು ಸಂಪೂರ್ಣವಾದ ಶಕ್ತಿಯನ್ನು ಬಳಸಿಕೊಂಡದ್ದು ಸತ್ಯ. ಹೊಸದಾದ ಉತ್ಪಾದನೆಯಿಂದ ಕಾರ್ಮಿಕರು ಒಂದು ಬಗೆಯಲ್ಲಿ ಸೋತರು. ಅವರ ದೇಹ ಮತ್ತು ಅವರ ಮನೋಸ್ಥಿತಿಯ ಮೇಲೆ ಕೈಗಾರಿಕೆಗಳು ಅತ್ಯಂತ ಕೆಟ್ಟ ಪರಿಣಾಮವನ್ನು ಬೀರಿದ್ದು ಸತ್ಯ. ಪ್ರಭುತ್ವಕ್ಕೆ ಜನರು ತಮ್ಮ ದುಡಿಮೆಯನ್ನು ಬಳಸಿದರು. ಆದರೆ ಇದಕ್ಕೆ ನಿಜವಾದ ಅರ್ಥವು ದೊರೆಯಲಿಲ್ಲ. ವ್ಯಕ್ತಿ ಮತ್ತು ಅವನ ದುಡಿಮೆಗೆ ಮತ್ತೊಂದು ಆಯಾಮವು ದೊರೆಯಿತು. ಇದನ್ನು ಹೇಳುವಾಗ ಗ್ರಾಂಶಿಯು ಲೈಂಗಿಕ ಪ್ರಶ್ನೆ ಮತ್ತು ಕುಡಿತಕ್ಕೆ ಒಂದು ಸಂಬಂಧವಿದೆ. ವ್ಯಕ್ತಿಯ ಮನೋಸ್ಥಿತಿಯು ತನ್ನ ಸಮತೋಲನವನ್ನು ಕಳೆಯುವಾಗ ಈ ಪ್ರಕ್ರಿಯೆ ಅತ್ಯಂತ ಸಹಜ. ಇದನ್ನು ಅತ್ಯಂತ ಸವಿವರವಾಗಿ ಗ್ರಾಂಶಿಯು ವಿವರಿಸುತ್ತಾನೆ. ಕುಡಿತ ಎನ್ನುವುದು ಅತ್ಯಂತ ದುಬಾರಿಯಾದ ಒಂದು ಹವ್ಯಾಸ, ಜನರು ಇದಕ್ಕೆ ಬಲಿಯಾದರು. ಅದರ ಜೊತೆಗೆ ರೈತರು ತಮ್ಮ ಕೆಲಸವನ್ನು ಪೂರೈಸಿ ಮನೆಗೆ ಬರುವ ದೃಶ್ಯ ಕೂಡಾ

ಬದಲಾದ ಸನ್ನಿವೇಶವನ್ನು ಹೇಳುತ್ತದೆ. ಹೀಗೆ ಮರಳಿದ ಮನುಷ್ಯ ತನ್ನ ಲೈಂಗಿಕ ಸಂಗಾತಿಯನ್ನು ಬಯಸಲೇ ಬೇಕಾದ ಮನೋಸ್ಥಿತಿಯೂ ಬಂದುದು ಸತ್ಯ. ಲೈಂಗಿಕವಾದ ಬಯಕೆಯನ್ನು ನಿಯಂತ್ರಣ ಮಾಡಲಾಗದೇ ಹೋದವನು ಕುಡಿತಕ್ಕೂ ಬಲಿಯಾಗುತ್ತಾನೆ. ಇದು ಒಂದು ಅತ್ಯಂತ ಸಾಮಾನ್ಯವಾದ ಲಕ್ಷಣವೂ ಹೌದು. ಸರಿಯಾದ ಲೈಂಗಿಕ ಸಂಬಂಧ ಇಲ್ಲದಿರುವುದು, ಕುಡಿತ, ಅತೃಪ್ತಿ ಮುಂತಾದವುಗಳು ಸೇರಿಕೊಂಡು ವಿವಾಹ ವಿಚ್ಛೇದನವೂ ಹೆಚ್ಚಾಯಿತು.

ಗ್ರಾಂಶಿಯಲ್ಲಿ ಮುಖ್ಯವಾಗಿ ಬಂದ ಒಂದು ಚರ್ಚೆಯಿದು. ಅವನು ಫೋರ್ಡ್ ಬಗ್ಗೆ ಏನು ಚರ್ಚೆ ಮಾಡಿದ್ದಾನೆಯೋ ಅದೇ ರೀತಿಯಲ್ಲಿ ಟೇಲರ್ ಬಗ್ಗೆ ಕೂಡಾ ವಿವರಿಸಿದ್ದಾನೆ. ಇದು ಅರ್ಥಶಾಸ್ತ್ರಕ್ಕೆ ಹೊಂದುವ ವಿವರಣೆಯೂ ಹೌದು, ಉತ್ಪಾದನೆ ಮತ್ತು ಮನುಷ್ಯರ ಶಕ್ತಿಯ ಬಗ್ಗೆ ಈ ವಿಷಯದಲ್ಲಿ ವಿವರಿಸಲಾಗಿದೆ. ಕೈಗಾರಿಕೆ ಮತ್ತು ಅದರ ಉತ್ಪನ್ನವನ್ನು ಮಾಡುವಾಗ ಕಾರ್ಮಿಕರ ಶಕ್ತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಇದು ಹೇಳುತ್ತದೆ. ಉದ್ಯೋಗ ಮತ್ತು ವೈಜ್ಞಾನಿಕತೆಯು ಇಲ್ಲಿ ಮುಖ್ಯ. ಉತ್ಪಾದನೆಯನ್ನು ಪ್ರತಿ ಹಂತದಲ್ಲಿಯೂ ವೈಜ್ಞಾನಿಕವಾಗಿ ಮೌಲ್ಯ ಮಾಪನ ಮಾಡುವುದು ಈ ಸಿದ್ಧಾಂತದ ಉದ್ದೇಶವಾಗಿದೆ. 1928ರಲ್ಲಿ ಇದು ಮೊದಲು ಬಳಕೆ ಆಯಿತು ಎನ್ನುವುದು ಮುಖ್ಯ, ಹತ್ತೊಂಬತ್ತನೆಯ ಶತಮಾನದಲ್ಲಿ ಇದು ಪ್ರಾರಂಭವಾಯಿತು. ಅಮೇರಿಕಾದ ಒಬ್ಬ ಇಂಜಿನಿಯರ್ ಇದನ್ನು ಪ್ರಾರಂಭ ಮಾಡಿದ. ಫ್ರೆಡ್ರಿಕ್ .ಡಬ್ಲ್ಯು ಟೇಲರ್ ಎನ್ನುವುದು ಅವನ ಹೆಸರು. ಅವನ ಅತ್ಯಂತ ಮುಖ್ಯವಾದ ಒಂದು ಕೃತಿಯ ಹೆಸರು: ದಿ ಪ್ರಿನ್ಸಿಪಲ್ ಅಫ್ ಸೈಂಟಿಪಿಕ್ ಮೆನೇಜ್ ಮೆಂಟ್. ನಾವು ಎಲ್ಲವನ್ನು ವೈಜ್ಞಾನಿಕವಾದ ದೃಷ್ಟಿಕೋನದಿಂದ ನೋಡಬೇಕು ಎನ್ನುವುದು ಅವನ ಮೊದಲವಾದ. ಯಾವುದೇ ಸಮಸ್ಯೆ ಬಂದರೆ ಆಗ ಅದನ್ನು ಕೂಡಾ ವೈಜ್ಞಾನಿಕವಾಗಿ ಪರಿಶೀಲಿಸಬೇಕಾಗುತ್ತದೆ. ಕೆಲಸವನ್ನು ಮಾಡುವವರಿಗೆ ಸರಿಯಾದ ಮಾಹಿತಿಯನ್ನು ಕೊಡಬೇಕಾಗುತ್ತದೆ.

ಫುಕೋ ಅದನ್ನು ಬೇರೆ ಅರ್ಥದಲ್ಲಿ ನೋಡುತ್ತಾನೆ. ಅವನು ನ್ಯಾಯ ಮತ್ತು ಮನುಷ್ಯತ್ವ ಎನ್ನುವುದು ಹೇಗೆ ಚಾಲ್ತಿಗೆ ಬಂತು ಎಂದು ಚರ್ಚೆ ಮಾಡುತ್ತಾನೆ. ಆಧುನಿಕ ಯುಗವು ಹೇಗೆ ಹಿಂಸೆ ಮತ್ತು ಅಧಿಕಾರ ಮತ್ತು ಅದರ ಅರ್ಥವು ಹೇಗೆ ಬೇರೆಯಾಯಿತು ಎಂದು ಹೇಳುವುದು ಮಾತ್ರವೇ ಅಲ್ಲ, ಅವನು ಆಧುನಿಕ ಯುಗದ ಶಿಕ್ಷೆಯ ರೂಪಗಳು ಹೇಗೆ ಬೇರೆಯಾದವು ಎಂದೂ ಹೇಳುತ್ತಾನೆ. ಆದರೆ ಚರಿತ್ರೆಯ ಮಹಾನ್ ನಿರೂಪಣೆಯನ್ನು ಅವನು ನಿರಾಕರಿಸುತ್ತಾನೆ. ಅವನ ಚರ್ಚೆಯಲ್ಲಿ ಶಾಶ್ವತವಲ್ಲದ ನಂಬಿಕೆಗಳು ಹೇಗೆ ಚಾಲ್ತಿಗೆ ಬಂದವು ಎನ್ನುವುದೂ ಇದೆ. ಯಾವುದನ್ನು ನಾವು ನ್ಯಾಯ ಎಂದು ಹೇಳುತ್ತೇವೆಯೋ ಅದರ ರೂಪಗಳು ಹೇಗೆ ಬದಲಾದವು ಎನ್ನುವುದೂ ಅವನಿಗೆ ಮುಖ್ಯವಾಗುತ್ತದೆ. ಅಧಿಕಾರ ಮತ್ತು ಯಂತ್ರಗಳು ಹೇಗೆ ಒಂದು ಮೈತ್ರಿಯನ್ನು ಸಾಧಿಸುತ್ತವೆ ಎಂದು ಅವನು ತನ್ನ 'ಬರ್ತ್ ಆಫ್ ಪ್ರಿಸನ್' ಕೃತಿಯಲ್ಲಿ ಹೇಳುತ್ತಾನೆ. ಕುತೂಹಲಕಾರಿಯಾದ ಒಂದು ಸಂಗತಿಯನ್ನು ಅವನು ಹೇಳುತ್ತಾನೆ: ಹೇಗೆ ನ್ಯಾಯ ಮತ್ತು ಅಧಿಕಾರವು ಹಿಂಸೆಯನ್ನು ಮತ್ತು ಅನೈತಿಕತೆಯನ್ನು ನ್ಯಾಯವಾಗಿ ಪರಿವರ್ತನೆ ಮಾಡುತ್ತದೆ ಎನ್ನುವುದು ಅವನ ಗ್ರಹಿಕೆಯ ಅತ್ಯಂತ ಮಹತ್ವದ ಸಾರವೂ ಆಗಿದೆ. ಶಿಸ್ತು ಮತ್ತು ಅಧಿಕಾರವು ಹೇಗೆ ಆಧುನಿಕ ಸಮಾಜದಲ್ಲಿ ಒಂದು ಮಾನದಂಡವೂ ಆಯಿತು ಎಂದು ಫುಕೋ ವಿವರಿಸುತ್ತಾನೆ.

ಅವನೇ ಹೇಳಿದ ಮತ್ತೊಂದು ಪರಿಕಲ್ಪನೆಯೆಂದರೆ ದಂಡನಾತ್ಮಕವಾದ ಕಾರಣಗಳು (Punishable ರೀಸನ್) ಅಧಿಕಾರವು ಒಂದು ಹಂತದಲ್ಲಿ ಹೆಚ್ಚು ಆದರ್ಶೀಕರಣಕ್ಕೆ ಗುರಿಯಾಗುತ್ತದೆ. ಅಂದರೆ ಅಧಿಕಾರವನ್ನು ಜನರು ಒಂದು ಆದರ್ಶವೆಂದು ಭಾವಿಸುತ್ತಾರೆ. (ಫುಕೋ – ಡಿಸಿಪ್ಲಿನ್ ಅಂಡ್ ಪನಿಶ್) ಅದರ ಜೊತೆಗೆ ಜ್ಞಾನ ಮತ್ತು ಶಿಸ್ತು ಎನ್ನುವುದು ಒಟ್ಟಿಗೆ ಹೋಗುತ್ತವೆ. ಅಧಿಕಾರದಲ್ಲಿ ವಸ್ತು ಮತ್ತು ಪರಿಣಾಮ ಎನ್ನುವುದು ಮಾನದಂಡ. ಆದರೆ ಒಂದು ಹಂತದಲ್ಲಿ ಫುಕೋ ಸ್ವಯಂ ವಿಮರ್ಶೆ ಅದರ ಕಾರಣಗಳನ್ನು ಒಪ್ಪುತ್ತಾನೆ. ಈ ವಿಷಯದಲ್ಲಿ ಅವನು ಕಾಂಟ್ ವಾದಕ್ಕೆ ಕೃತಜ್ಞನೂ ಆಗಿದ್ದಾನೆ. (ಬ್ಯಾಕ್ ಟು ಕಾಂಟ್) ಇದನ್ನು ಈ ಮೊದಲು ಹೇಳಿದೆ.

ಫುಕೋ ಅದನ್ನು ಅತ್ಯಂತ ಸಂಕೀರ್ಣವಾದ ಒಂದು ಮನೋಸ್ಥಿತಿಯೆಂದು ಹೇಳುವಾಗ ಅದರಲ್ಲಿ ಸಮಾಜ, ಸಂಸ್ಕೃತಿ, ಆರ್ಥಿಕತೆ, ರಾಜಕಾರಣ ಇರುತ್ತದೆ ಎಂದು ಹೇಳುತ್ತಾನೆ. ಆದರೆ ಇದರಲ್ಲಿ ಸಾಮಾಜಿಕ ವಿಘಟನೆಯೂ ಇರುತ್ತದೆ. ಆದರೆ ಅದರ ವರ್ಗೀಕರಣವು ಬೇರೆ ಥರ ಇರುತ್ತದೆ. ಅದನ್ನು ಒಂದು ನೆಲೆಯಲ್ಲಿ ಮಾತ್ರವೇ ಗ್ರಹಿಸಲು ಬರುವುದಿಲ್ಲ. ಎಲ್ಲಿ ನಿರಂಕುಶ ಪ್ರಭುತ್ವವು ಇರುತ್ತದೆಯೋ ಅಲ್ಲಿ ವರ್ಗ ಸಮರಗಳು ಇರುವುದೂ ಇಲ್ಲ. ಫುಕೋ ಸಾಮಾಜಿಕ ಪ್ರತಿಭಟನೆಯು ಇರುವುದಿಲ್ಲ ಎಂದು ಭಾವಿಸುತ್ತಾನೆ. ಅವನು ಸ್ವಂತಿಕೆ ಮತ್ತು ಅದರ ರಕ್ಷಣೆಯು ಹೇಗೆ ಇರುತ್ತದೆ ಎಂದೂ ವಿವರಿಸುತ್ತಾನೆ. (ಫುಕೋ – ಡಿಸಿಪ್ಲಿನ್ ಅಂಡ್ ಪನಿಶ್)

ಡಿಸ್ಕಾರ್ಟೆಸ್ ಹೇಳುತ್ತಾನೆ. ಗುಲಾಮರು ಯಾಕೆ ಹೀಗಿದ್ದಾರೆ ಎಂದು ನಾವು ತಾತ್ವಿಕವಾಗಿಯೇ ಗ್ರಹಿಸಬೇಕಾಗುತ್ತದೆ. ವಾಸ್ತವವು ಇದೆ ಎಂದು ನಮಗೆ ಭಾಸವು ಆಗುತ್ತದೆ ಯಾವುದು ಭ್ರಮೆ ಮತ್ತು ಯಾವುದು ವಾಸ್ತವವಾಗಿದೆ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆಯು ಆಗಿದೆ. ಇಲ್ಲಿ ಮತ್ತೊಂದು ವಿಚಾರವನ್ನು ನೋಡಬೇಕಾಗಿದೆ: ಮನುಷ್ಯ ಮತ್ತು ಅವನ ಸಹಜವಾದ ಲೈಂಗಿಕವಾದ ಆಕರ್ಷಣೆಯನ್ನು ಪಾಪ ಮತ್ತು ಪುಣ್ಯದ ಕಲ್ಪನೆಯು ಬೇರೆ ಮಾಡುತ್ತದೆ. ಸಹಜತೆಯನ್ನು ಅದು ಅಸಹಜ ಮಾಡುತ್ತದೆ, ಲೈಂಗಿಕ ಸಂಬಂಧ ಮತ್ತು ಅದರ ಖುಶಿಯನ್ನು ನಾವು ಬೇರೆ ಹೋಲಿಕೆಯನ್ನು ಮಾಡಲಾಗುವುದಿಲ್ಲ. ಅದು ಸುಖ. ಅದು ಪಾಪವೇ ಆದರೂ ಅದರಲ್ಲಿ ನಿಜವಾದ ಅರ್ಥದಲ್ಲಿ ಒಂದು ಸಂತೋಷವು ಸಿಗುತ್ತದೆ. ಹಾಗೆ ನೋಡಿದರೆ ಅನೇಕ ಅಂಶಗಳು ನಮ್ಮ ವ್ಯಕ್ತಿತ್ವದ ಭಾಗವೂ ಹೌದು, ಲೈಂಗಿಕತೆಯನ್ನು ನೀತಿವಾದಿಗಳು ನಿಯಂತ್ರಣ ಮಾಡುತ್ತಾರೆ. ನೀತಿಯನ್ನು ನಾವು ತಪ್ಪಿದೆವು ಎಂದಾದರೆ ನಾವು ನರಕಕ್ಕೆ ಹೋಗುತ್ತೇವೆ ಎಂದು ಸ್ಮೃತಿಕಾರರು ಹೇಳುತ್ತಾರೆ. ಸತ್ತ ಮೇಲೆ ಸ್ವರ್ಗವು ಸಿಗಬೇಕೆಂದಾದರೆ ನಾವು ವರ್ತಮಾನದಲ್ಲಿ ನೀತಿಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಸತ್ತ ಮೇಲಿನ ಜೀವನ ಎನ್ನುವುದು ಒಂದು ಆಮಿಶ. ಆದರೆ ಇಲ್ಲಿ ಮತ್ತೆ ಒಂದು ಪ್ರಶ್ನೆಯು ಬರುತ್ತದೆ. ಸತ್ತ ಮೇಲೆ ಜೀವನವು ಇರುವುದಾದರೆ ಅದು ಹೇಗೆ? ಭೌತಿಕವಾದಿಗಳು ಒಂದು ಪ್ರಶ್ನೆಯನ್ನು ಕೇಳುತ್ತಾರೆ. ಸಾಯುವುದಕ್ಕಿಂತ ಮೊದಲೂ ಜೀವನವು ಇದೆ. ಲೈಂಗಿಕ ಸಂಬಂಧವು ಸುಖವನ್ನು ಕೊಡುತ್ತದೆ. ಆದರೆ ಇಬ್ಬರೂ ಲೈಂಗಿಕವಾಗಿ ಸುಖವನ್ನು ಅನುಭವಿಸಿದ ಮೇಲೆ ಪಾಪ ಪ್ರಜ್ಞೆಯಿಂದ ನರಳುವಂತೆ ಯಾಕಾಗುತ್ತದೆ ಎನ್ನುವುದು ಭೌತಿಕವಾದಿಗಳ ಪ್ರಶ್ನೆಯೂ ಹೌದು. ಮಾರ್ಕೂಸ್ ಹೇಳಿದ ಮಾತು ಇಲ್ಲಿ ಉಲ್ಲೇಖನೀಯ:

ಸ್ವಾತಂತ್ರ್ಯವು ಇದೆ. ಆದರೆ ನಾವು ನಮ್ಮ ವಾಸ್ತವವನ್ನು ಬದಲಿಸದೆ ಸ್ವಾತಂತ್ರ್ಯದ ಕನಸು ಕಾಣುವುದು ಹೇಗೆ? ಆದ್ದರಿಂದ ಹುಟ್ಟು ಮತ್ತು ಸಾವು ಇವುಗಳ ನಡುವೆ ನಮ್ಮ ಜೀವನವು ಇದೆ ಎನ್ನುವುದು ಮುಖ್ಯ.

ನಮ್ಮ ಆಧುನಿಕವಾದ ಜ್ಞಾನದ ಪರಂಪರೆಯು ನಮ್ಮನ್ನು ಬೇರೆ ಬೇರೆ ಕಡೆಗೆ ಕರೆದುಕೊಂಡು ಹೋಗುತ್ತವೆ. ಆದರೆ ಇದರ ಪರಿಣಾಮವಾಗಿ ನಮ್ಮನ್ನು ವರ್ತಮಾನವು ಮಾತ್ರವೇ ನಿಯಂತ್ರಿಸುತ್ತಿದೆ ಬೇರೆ ಯಾವುದೂ ಅಲ್ಲವೆಂದು ಅವರು ವಾದಿಸುತ್ತಿದ್ದಾರೆ. ಆದರೆ ಯಾವುದು ನಮ್ಮನ್ನು ನಿಯಂತ್ರಿಸುತ್ತದೆಯೋ ಆದರ ಸ್ವರೂಪವು ಬೇರೆಯಾಗಿದೆ. ಅಂದರೆ ನಿಯಂತ್ರಣ ಮತ್ತು ಅದರ ಸ್ವರೂಪವನ್ನು ನಾವು ಕೇವಲ ವರ್ತಮಾನದಲ್ಲಿ ಮಾತ್ರವೇ ನೋಡುವುದು ಅಸಾಧ್ಯವಾಗಿದೆ. ಇಲ್ಲಿ ಮತ್ತೆ ಕೆಲವು ಸೂಕ್ಷ್ಮಗಳು ಇವೆ. ನಾವು ನಮಗೆ ಈಗ ದೊರೆಯುತ್ತಿರುವ ವರ್ತಮಾನದ ಜ್ಞಾನವನ್ನು ಅನುಸರಿಸಿಕೊಂಡು ಚರಿತ್ರೆಯನ್ನು ಗ್ರಹಿಸುತ್ತೇವೆ. ನಮಗೆ ಸರಿಯಾದ ತಾತ್ವಿಕವಾದ ಗ್ರಹಿಕೆಯು ಇಲ್ಲವಾದರೆ ಚರಿತ್ರೆಯೇ ಅಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ವ್ಯಕ್ತಿತ್ವ ಮತ್ತು ಅದರ ಹೊಂದಾಣಿಕೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ಸಮಾಜ ಮತ್ತು ನಮ್ಮ ವರ್ತನೆಗಳಿಗೆ ಕೆಲವು ಸಂಬಂಧಗಳೂ ಇವೆ. ವ್ಯಕ್ತಿ ಮತ್ತು ಅವನ ಭಾವನೆಯನ್ನು ಒಂದು ಅರ್ಥದಲ್ಲಿ ಅವನ ಸಮಾಜವೇ ರೂಪಿಸುತ್ತದೆ. ಆದರೆ ವ್ಯಕ್ತಿ ಖಿನ್ನನಾಗುವುದು ಮತ್ತು ಅದರ ಪರಿಣಾಮವನ್ನು ಎದುರಿಸಿಕೊಳ್ಳುವುದು ಕೂಡಾ ಬರೀ ಒಂದು ಕಾರಣಕ್ಕೆ ಮಾತ್ರವೇ ಎಂದು ಹೇಳುವಂತಿಲ್ಲ. ಪರಸ್ಪರ ಸಹಕಾರವಿರುತ್ತದೆ ಮತ್ತೆ ಎಷ್ಟೋ ಸಂದರ್ಭದಲ್ಲಿ ವ್ಯಕ್ತಿಯು ಸ್ಪರ್ಧಾ ಮನೋಭಾವವನ್ನು ತೋರಿಸುತ್ತಾನೆ. ಮತ್ತೆ ಕೆಲವು ಸಂದರ್ಭದಲ್ಲಿ ವ್ಯಕ್ತಿಯು ಸಿಟ್ಟುಗೊಳ್ಳುತ್ತಾನೆ. ಕೆಲವೊಮ್ಮೆ ಅನುಮಾನವು ಇರುತ್ತದೆ. ಮತ್ತೆ ಕೆಲವೊಮ್ಮೆ ಮುಗ್ಧತೆಯು ಇರುತ್ತದೆ. ವ್ಯಕ್ತಿಯು ಕೆಲವೊಮ್ಮೆ ವಿಚ್ಛಿದ್ರಕಾರಿಯೂ ಆಗುತ್ತಾನೆ. ಅಂದರೆ ವ್ಯಕ್ತಿ ಮತ್ತು ಅವನ ಭಾವನೆಗಳು ಅವನ ಸ್ವಭಾವದ ಪ್ರತಿಫಲನವೆಂದು ಹೇಳುತ್ತೇವೆ. ಆದರೆ ಇದು ಮಾತ್ರವೇ ಉತ್ತರವೂ ಅಲ್ಲ. ಅದರಲ್ಲಿ ಬೇರೆ ಕಾರಣವೂ ಇರುತ್ತದೆ. ಸಮಾಜದಲ್ಲಿಯೂ ಸ್ಪರ್ಧೆಯು ಇರುತ್ತದೆ. ಮತ್ತೆ ಕೆಲವೊಮ್ಮೆ ಸಹಕಾರವೂ ಇರುತ್ತದೆ. ಅಂದರೆ ಇದನ್ನು ಮಾರ್ಕ್ಸವಾದದಲ್ಲಿ ಸಮಾಜದ ಕೆಲವು ಗುಣ ಮತ್ತು ವರ್ಗಗಳು ಎಂದು ಹೇಳುತ್ತಾರೆ. ವ್ಯಕ್ತಿ ಮತ್ತು ಅವನ ಜೀವನದಲ್ಲಿ ಕಾಣಿಸಿಕೊಳ್ಳುವ ವೈರುಧ್ಯಗಳಿಗೆ ಬೇರೆ ಆಯಾಮವೂ ಇರುತ್ತದೆ. ಲೈಂಗಿಕ ರಾಜಕಾರಣದ ಸ್ವರೂಪವನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಯಾವುದರ ಸ್ವರೂಪವನ್ನು ವ್ಯಕ್ತಿಯ ಮನಸ್ಸು ಎಂದು ಹೇಳುತ್ತೇವೆಯೋ ಅದರಲ್ಲಿ ಈ ಸಂಗತಿಗಳು ಇರುತ್ತವೆ. ಅದರಲ್ಲಿ ಎರಡು ಮಾತೂ ಇಲ್ಲ. ನಮ್ಮ ಮೆದುಳು ಕೆಲವನ್ನು ಒಪ್ಪುತ್ತವೆ ಮತ್ತು ಕೆಲವನ್ನು ನಿರಾಕರಿಸುತ್ತವೆ. ಇದಕ್ಕೆ ಕಾರಣಗಳು ಸ್ಪಷ್ಟವೂ ಆಗುವುದಿಲ್ಲ. ಜೀವನದಲ್ಲಿ ವೈರುಧ್ಯಗಳು ಮತ್ತು ಮಿತಿಗಳು ಇರುತ್ತವೆ. ಅದನ್ನು ನಿರಾಕರಿಸಲು ಬರುವುದೇ ಇಲ್ಲ. ಕೆಲವು ಮಿತಿಗಳು ಸಮಾಜದ ವಾಸ್ತವದಿಂದ ಬಂದಿರುತ್ತದೆ. ದೇಹ ಮತ್ತು ಮನಸ್ಸು ಒಂದೇ ರೀತಿಯಲ್ಲಿ ಇರುವುದಿಲ್ಲ. ಅದರ ಸಂಬಂಧವು ದ್ವಂದ್ವಾತ್ಮಕವೂ ಆಗಿರುತ್ತದೆ. ದೇಹ ಮತ್ತು ಮನಸ್ಸು ವಾಸ್ತವವಾಗಿ ಕ್ರಿಯಾಶೀಲವಾಗಿ ಇರುತ್ತವೆ. ದೇಹವನ್ನು ಮನಸ್ಸು ನಿಯಂತ್ರಿಸುತ್ತದೆ. ದೇಹವು ಮನಸ್ಸನ್ನು ನಿಯಂತ್ರಿಸುತ್ತದೆ. ಒಬ್ಬ ವ್ಯಕ್ತಿಯನ್ನು ನೋಡಬೇಕಾದರೆ ಅಥವಾ ಅವನನ್ನು

ಅರ್ಥ ಮಾಡಿಕೊಳ್ಳಬೇಕಾದರೆ ಇದರ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದೂ ಅಗತ್ಯವಾಗಿರುತ್ತದೆ. ತತ್ವಜ್ಞಾನಿಗಳು ಈ ದ್ವಂದ್ವವನ್ನು ತತ್ವಜ್ಞಾನದ ಆಸರೆಯಲ್ಲಿ ಬಿಡಿಸಲು ಯತ್ನವನ್ನು ಮಾಡುತ್ತಾರೆ. ಆದರೆ ಸಮಸ್ಯೆಯು ಇರುವುದು ಬರೀ ದೇಹದ ವಿವೇಚನೆಯಲ್ಲಿ ಅಲ್ಲ. ಅದರಲ್ಲಿ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮನಸ್ಸು ಮತ್ತು ಅದರ ಕಾಯಿಲೆಯನ್ನು ನೋಡುವುದು ಎಂದರೆ ಅದನ್ನು ದೇಹ ಮತ್ತು ಮನಸ್ಸುಗಳ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು ಎಂದು ಮಾತ್ರವೇ ಅರ್ಥವಾಗುತ್ತದೆ. ಮಹಿಳೆಯನ್ನು ಈ ದೃಷ್ಟಿಯಲ್ಲಿ ಗ್ರಹಿಸಬೇಕಾಗುತ್ತದೆ. ಅವುಗಳನ್ನು ಪ್ರತ್ಯೇಕ ಮಾಡುವುದು ಅಲ್ಲ. ಅದರಲ್ಲಿ ಭಿನ್ನತೆಗಳು ಇವೆ. ದೇಹವು ಚಲಿಸುತ್ತದೆ. ಅದು ಅನುಭವವನ್ನು ಪಡೆಯುತ್ತದೆ. ಅದರ ಚಲನೆಯು ಅತ್ಯಂತ ಮುಖ್ಯವಾದದ್ದು. ಆದರೆ ಗಿಡಗಳು ಚಲಿಸುವುದಿಲ್ಲ. ಆದ್ದರಿಂದ ಅದರ ಅರ್ಥವು ಬೇರೆಯಾಗುತ್ತದೆ. ಗಿಡವು ಬೇರನ್ನು ಬಿಡುತ್ತದೆ. ನಾವು ನಡೆಯುವುದು ಅನುಭವನ್ನು ಪಡೆಯುವುದು ಮುಂತಾದವುಗಳಿಗೆ ಬೇರೆ ಅರ್ಥಗಳೂ ಇರುತ್ತವೆ. ಚಲನೆಯು ವಾಸ್ತವವಾಗಿ ಬಹಳ ಮುಖ್ಯವಾದದ್ದೂ ಕೂಡಾ ಹೌದು. ಅನುಭವ ಎನ್ನುವುದು ಸಂವೇದನೆಯ ಭಾಗವೂ ಆಗಿರುತ್ತದೆ. ಗ್ರಹಿಕೆಯು ಕೂಡಾ ಬಹಳ ಮುಖ್ಯವಾಗುತ್ತದೆ. ಅಂದರೆ ವ್ಯಕ್ತಿಯು ಯಾವುದನ್ನು ಪಡೆಯುತ್ತಾನೆ. ಮತ್ತು ಯಾವುದಕ್ಕೆ ಪ್ರತಿಕ್ರಿಯಿಸುತ್ತಾನೆ ಎನ್ನುವುದೂ ಇಲ್ಲ ಗಮನಾರ್ಹವಾಗುತ್ತದೆ. ಇಲ್ಲಿ ಮತ್ತೆ ಮನಸ್ಸು ಮತ್ತು ದೇಹದ ಪ್ರಶ್ನೆಗಳನ್ನು ನಾವು ನೋಡಬೇಕಾಗುತ್ತದೆ. ಮನಸ್ಸು ನಮ್ಮದೇ ಆದರೂ ಅದರ ವಿವರಗಳು ನಮಗೆ ಅರ್ಥವಾಗುವುದಿಲ್ಲ. ಅನೇಕ ಸಂದರ್ಭದಲ್ಲಿ ಮನಸ್ಸು ತಲ್ಲಣವನ್ನು ಅನುಭವಿಸುತ್ತದೆ. ಖಿನ್ನತೆಗೆ ಒಳಗಾಗುತ್ತದೆ. ವಾಸ್ತವವಾಗಿ ದೇಹ ಮತ್ತು ಮನಸ್ಸುಗಳ ನಡುವಣ ಸಂಬಂಧವು ಅತ್ಯಂತ ಸಂಕೀರ್ಣವೂ ಹೌದು. ಅದರಲ್ಲಿ ಬೇರೆ ಸಂಗತಿಗಳೂ ಇರುತ್ತವೆ. ಅದರಲ್ಲಿ ಕೆಲವು ನಿಯಮಗಳು ಇರುತ್ತವೆ. ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ಅದನ್ನು ಹೀಗೆಯೇ ಇದೆ ಎಂದು ಹೇಳುವುದು ಸಾಧ್ಯವೇ ಇಲ್ಲ. ಅದರ ನಿಯಮಗಳು ನಮಗೆ ಬೇಗ ಕಾಣಿಸುವುದೂ ಇಲ್ಲ. ನಮ್ಮ ಮನೋಸ್ಥಿತಿಗೆ ಅದರದೇ ಆದ ಕಾರಣಗಳು ಇರುತ್ತವೆ. ಮನೋಸ್ಥಿತಿ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ಅತ್ಯಂತ ಬೇರೆಯಾಗಿರುತ್ತವೆ. ಅದನ್ನು ಒಂದು ತರ್ಕವೆಂದು ಹೇಳಲು ಬರುವುದೂ ಇಲ್ಲ. ಯಾವುದು ನಿಜವಾದ ಒಂದು ವಸ್ತು ಅಥವಾ ಘಟನೆ ಎಂದು ಇರುತ್ತದೆಯೋ ಅದರ ಸ್ವರೂಪವನ್ನು ನಾವು ಗ್ರಹಿಸುವಾಗ ನಮ್ಮಲ್ಲಿ ಅದರ ಕುರಿತಾದ ಒಂದು ನಕ್ಷೆಯು ನಮಗೆ ಇರುತ್ತದೆ. ಅದನ್ನು ನಾವು ಮನಸ್ಸಿನಲ್ಲಿ ಮಾಡಿಕೊಂಡಿರುತ್ತೇವೆ.

ದೇಹ ಮತ್ತು ಅದರ ಪರಿಣಾಮವು ಮನಸ್ಸಿನ ಮೇಲೆ ಆಗುತ್ತವೆ. ಅದೇ ರೀತಿಯಲ್ಲಿ ಮನಸ್ಸು ಮತ್ತು ಅದರ ಪರಿಣಾಮವು ದೇಹದ ಮೇಲೆ ಆಗುತ್ತದೆ. ಅಲ್ಲದೆ ಚರಿತ್ರೆ ಮತ್ತು ಅದರ ಸನ್ನಿವೇಶಗಳು ನಮ್ಮ ಮನಸ್ಸನ್ನು ರೂಪಿಸುತ್ತದೆ. ಅದನ್ನು ಕನ್ನಡದ ಅನೇಕ ನಾಟಕಗಳು ನಮಗೆ ಹೇಳುತ್ತವೆ. ಹತ್ತೊಂಬತ್ತನೆಯ ಶತಮಾನದ ಅನೇಕ ಬದಲಾವಣೆಗಳು ಬರೀ ಸಮಾಜದ ಮೇಲೆ ಮಾತ್ರವೇ ಆಗಿರಲಿಲ್ಲ. ಅದರ ಪರಿಣಾಮವನ್ನು ನಾವು ಬರಹಗಳಲ್ಲಿ ಕಾಣುತ್ತೇವೆ. ವಾಸ್ತವವಾಗಿ ಹತ್ತೊಂಬತ್ತನೆಯ ಶತಮಾನವು ಮೂಲಭೂತವಾಗಿ ಅನೇಕ ಬದಲಾವಣೆಯನ್ನು

ತಂದಿತು. ಮನಸ್ಸು ಮತ್ತು ಅದರ ಬದಲಾವಣೆಯನ್ನು ಆಧುನಿಕ ಬರಹಗಳು ನಮಗೆ ಹೇಳುತ್ತವೆ.. ವಾಸ್ತವವಾಗಿ ಮನುಷ್ಯ ಮತ್ತು ಅವನ ಮನೋಸ್ಥಿತಿಯನ್ನು ಚಿತ್ತಾಲರು ಹೇಳಿದರು. ಅವರಿಗೆ ಅದು ಅತ್ಯಂತ ಮುಖ್ಯವಾಗುತ್ತದೆ. ಯಾವುದು ನಮ್ಮನ್ನು ನಿಯಂತ್ರಣ ಮಾಡುತ್ತದೆ ಮತ್ತು ಅದರ ಪರಿಣಾಮವು ಯಾವ ಬಗೆಯದು ಹೇಗೆ ಮನುಷ್ಯ ಆಧುನಿಕ ಜಗತ್ತಿನಲ್ಲಿ ಬಲಿಪಶುವಾಗುತ್ತಾನೆ ಎನ್ನುವುದು ಮುಖ್ಯವಾಗಿ ಚಿತ್ತಾಲರ ಪ್ರಶ್ನೆಯು ಆಗುತ್ತದೆ. ಅವರ ಬರಹಗಳು ನಮಗೆ ಮನೋವಿಶ್ಲೇಷಣೆಗೆ ಹೊಸದಾದ ದಾರಿಯನ್ನು ಕೊಟ್ಟಿತು. ಶಿಕಾರಿಯ ನಾಗಪ್ಪನು ಅನೇಕವನ್ನು ಹೇಳದೆ ಮನಸ್ಸಿನಲ್ಲಿಯೇ ತಡವರಿಸುತ್ತಾನೆ. ವಾಸ್ತವವಾಗಿ ಮನಸ್ಸು ಮತ್ತು ಅದರ ಸ್ಥಿತಿಗೆ ಬೇರೆ ಕಾರಣಗಳು ಇರುತ್ತವೆ. ವಾಸ್ತವಾಗಿ ಇದನ್ನು ನೋಡುವಾಗ ಮತ್ತೆ ಕೆಲವು ಕೆಲವು ಅಂಶಗಳನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಅದರಲ್ಲಿ ಜೀವನ ಮತ್ತು ಅದರ ಸಾಧ್ಯತೆಯು ಇರುತ್ತದೆ. ಆಧುನಿಕ ಜಗತ್ತು ಹೇಗೆ ಮನುಷ್ಯನನ್ನು ನೋಡುತ್ತದೆ ಮತ್ತು ಅವನನ್ನು ಹೇಗೆ ಬೇಟೆಯಾಡುತ್ತದೆ, ಅವನ ಮನೋಸ್ಥಿತಿಯಲ್ಲಿ ಏನು ಬದಲಾವಣೆಯು ಆಗುತ್ತದೆ ಎಂದು ಚಿತ್ತಾಲರು ವಿವರಿಸುತ್ತಾರೆ. ಆಧುನಿಕ ಸಮಾಜದಲ್ಲಿ ಬರಹ ಮತ್ತು ಅದರ ಕುರಿತಾದ ಬಯಕೆ, ಜನಪ್ರಿಯತೆ ಮುಂತಾದವುಗಳು ಬೇರೆ ಮಾದರಿಯಲ್ಲಿ ಕೆಲಸವನ್ನು ಮಾಡುತ್ತವೆ. ಬಯಕೆ, ಆಲೋಚನೆ, ಸಂಕಥನಗಳ ನಡುವೆ ಕೆಲವು ಸಂಬಂಧವಂತೂ ಇದ್ದೇ ಇದೆ. ಬಯಕೆ ಮತ್ತು ನಾವು ಮಾಡುವ ಕೆಲಸಗಳ ನಡುವೆ ಕೆಲವು ಮಾದರಿಯ ಸಂಬಂಧವೂ ಇದೆ. ನಮ್ಮ ಬಯಕೆಗಳು ನಮಗೆ ಹೊಸದಾದ ಕೆಲವು ಸಂಗತಿಗಳನ್ನು ಹೇಳುತ್ತವೆ. ಕ್ರಿಯೆಗಳು ನಮಗೆ ಅತ್ಯಂತ ಮುಖ್ಯವಾದ ಒಂದು ಚಟುವಟಿಕೆಯೂ ಆಗಿರುತ್ತದೆ. ಪ್ಯಾಸಿಸಂ ತಮಗೆ ಬೇಕಾದ ಮಾಧ್ಯಮವನ್ನು ಬಳಸುತ್ತದೆ. ಅದು ನಿಯಂತ್ರಣವನ್ನು ಹೇರಲು ವಿವಿಧ ಪರಿಕರವನ್ನು ಬಳಸುತ್ತದೆ. ಆದ್ದರಿಂದಲೇ ಅದು ಹೆಚ್ಚು ಮುಂಚೂಣಿಗೆ ಬರುತ್ತದೆ. ಆಲೋಚನೆ ಮತ್ತು ಬಯುಕೆ ಮತ್ತು ಸಂಕಥನಗಳು ಮೂರೂ ಒಂದೊಕ್ಕೊಂದು ಸಂಬಂಧವನ್ನು ಪಡೆದುಕೊಂಡಿರುತ್ತವೆ. ಕ್ರಿಯೆ ಮತ್ತು ಆಲೋಚನೆಗಳು ಜೊತೆಗೆ ಇರುತ್ತವೆ. ಅದನ್ನು ಬೇರೆ ಮಾಡಲು ಆಗುವುದಿಲ್ಲ. ಯಾವುದು ಜೀವನದ ಸತ್ಯವೆಂದು ಹೇಳುತ್ತೇವೆಯೋ ಅದು ಹುಟ್ಟುವುದು ಈ ಪ್ರಕ್ರಿಯೆಯಲ್ಲಿ. ಭಾವನೆ ಸತ್ಯಗಳು ಕೂಡಾ ಈ ಅಂಶಗಳಿಗೆ ಪೂರಕವೇ ಆಗಿರುತ್ತವೆ. ಲೋಕ ಸತ್ಯವನ್ನು ನೋಡಿಕೊಂಡು ನಾವು ಯೋಚನೆಯನ್ನು ಮಾಡುತ್ತೇವೆ. ವ್ಯಕ್ತಿ ಮತ್ತು ಅವನ ಸಾಧ್ಯತೆಗಳು ಯಾವತ್ತೂ ಬೇರೆಯಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಕೂಡಾ ಅವನದೇ ಅದ ಅನನ್ಯತೆಯನ್ನು ಹೊಂದಿರುತ್ತಾನೆ. ಅದು ಅವನ ಶಕ್ತಿಯೂ ಹೌದು. ವ್ಯಕ್ತಿಯು ತನಗೆ ಬೇಕಾದ ಅಗತ್ಯವನ್ನು ಪೂರೈಸಿಕೊಳ್ಳಲು ಯತ್ನವನ್ನು ಮಾಡುತ್ತಾನೆ. ಸಮಾಜವು ಕೆಲವನ್ನು ನಿಯಂತ್ರಣ ಮಾಡುತ್ತದೆ. ಅದು ಅದರ ಉದ್ದೇಶವೂ ಆಗಿರುತ್ತದೆ. ಹಣಕಾಸು ಮತ್ತು ಸಮಾಜ ಎರಡೂ ನಮಗೆ ಬೇರೆ ಬೇರೆ ನಿಯಂತ್ರಣವನ್ನು ಹೇರುವುದರಿಂದ ಅದರ ಸ್ವರೂಪವೂ ಬೇರೆಯಾಗುತ್ತದೆ. ಸಮಾಜ ಮತ್ತು ಹಣಕಾಸು ಎರಡೂ ಲಾಭ ಮತ್ತು ನಷ್ಟವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುತ್ತದೆ. ಚರಿತ್ರೆಯು ಮನುಷ್ಯನನ್ನು ಹೇಗೆ ನಿಯಂತ್ರಿಸುತ್ತದೆ ಮತ್ತು ಅದು ಹೇಗೆ ಅವನ ಜೀವನವನ್ನು ರೂಪಿಸುತ್ತದೆ ಎಂದು ಮಾರ್ಕ್ಸ ಹೇಳುತ್ತಾನೆ. ಚರಿತ್ರೆಯು ಆಗುವಿಕೆಗೆ ಸಂಬಂಧಪಟ್ಟಿದೆ. ಅದನ್ನು ಮಾರ್ಕ್ಸ್ ಹೇಳುತ್ತಾನೆ. ಹಣವು ನಮಗೆ ಬೇರೆ ಬೇರೆ

ಬಯಕೆಗಳನ್ನು ರೂಪಿಸುತ್ತವೆ. ಅದು ನಮಗೆ ಖಿನ್ನತೆಗಳನ್ನು ತರುತ್ತದೆ. ಆತಂಕವನ್ನು ಮೂಡಿಸುತ್ತವೆ. ಅದರಲ್ಲಿ ನಮಗೆ ನಮಗೆ ಭಯವನ್ನು ಉಂಟುಮಾಡುವ ಗುಣವೂ ಇದೆ. ಅದರ ಜೊತೆಗೆ ನಮಗೆ ಇರುವ ಸಂಬಂಧವನ್ನು ನಾವು ಪ್ರೀತಿ ಮತ್ತು ದ್ವೇಷದ ಸಂಬಂಧವೆಂದು ಹೇಳಿದರೂ ತಪ್ಪಾಗಲಾರದು. ಹಣವು ನಮಗೆ ಅಹಂಕಾರವನ್ನು ರೂಪಿಸುತ್ತದೆ. ನಾವು ಈವತ್ತು ಯಾವುದೇ ಕಾರಣಕ್ಕೆ ಒಂದು ಕಡೆಗೆ ಹಣವನ್ನು ಉಪಯೋಗ ಮಾಡುತ್ತೇವೆ ಎಂದರೆ ಅದರ ಕಾರಣವೂ ಹೆಚ್ಚು ಸ್ಪಷ್ಟವೂ ಇದೆ. ಹಣವನ್ನು ಹೂಡಿದರೆ ಅದಕ್ಕೆ ನಾವು ಸಮಯವನ್ನು ಬಳಸುತ್ತೇವೆ. ಅದರ ಕುರಿತು ಆಸಕ್ತಿಯನ್ನು ವಹಿಸುತ್ತೇವೆ. ಸಮಾಜ ಮತ್ತು ಹಣವು ನಮಗೆ ಕೆಲವನ್ನು ರೂಪಿಸಲು ಸಹಾಯವನ್ನು ಮಾಡುತ್ತದೆ. ಅದು ಕೆಲವು ನಿಯಮವನ್ನು ಹೇಳುತ್ತದೆ. ಎಷ್ಟು ಹಣವನ್ನು ನಾವು ಉಪಯೋಗ ಮಾಡಬೇಕು ಮತ್ತು ಅದನ್ನು ಹೇಗೆ ಉಳಿಸಬೇಕು ಎನ್ನುವುದು ನಮಗೆ ಅತ್ಯಂತ ಮುಖ್ಯವಾದ ವಿಚಾರವೂ ಆಗುತ್ತದೆ. ಹಣ ಮತ್ತು ಅದರ ಪಾತ್ರವೇ ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ ಕೆಲಸವನ್ನು ಮಾಡುತ್ತದೆ. ನಾವು ಅನೇಕ ಸಂದರ್ಭದಲ್ಲಿ ಅನುಭವಿಸುವ ಪರಕೀಯತೆ ಮತ್ತು ಅದರ ಸ್ವರೂಪಕ್ಕೂ ನಾವು ಏನಾಗಿದ್ದೇವೆ ಅದಕ್ಕೂ ನಾವು ಮುಂದೆ ಆಗುವುದಕ್ಕೂ ನೇರವಾದ ಸಂಬಂಧವಿದೆ. ಹಣ ಮತ್ತು ಸಮಾಜ ಜೊತೆಗೆ ಹೋಗುತ್ತವೆ. ಆದ್ದರಿಂದ ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ರಾಜಕಾರಣ ಮತ್ತು ಅದು ಬಳಸುವ ಅಧಿಕಾರವನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಹಣವು ನಮಗೆ ಬಯಕೆಯನ್ನು ಸೃಷ್ಟಿಸುತ್ತದೆ. ಅದರಲ್ಲಿ ಬೇರೆ ಬೇರೆ ಭಾವನೆಗಳು ಬರುವ ಸಂಗತಿಗಳೂ ಇರುತ್ತವೆ. ಆದರೆ ರಾಜಕಾರಣ ಮತ್ತು ಅದರ ಅಧಿಕಾರವನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಹಣ, ಜ್ಞಾನ ಮತ್ತು ರಾಜಕೀಯ ಅಧಿಕಾರವು ಜೊತೆಗೆ ಸೇರಿಸಿದರೆ ಅದರ ಸ್ವರೂಪವೇ ಬೇರೆಯಾಗುತ್ತದೆ. ಜ್ಞಾನವನ್ನು ಮತ್ತು ಅದರ ಪ್ರತಿಫಲನವನ್ನು ನಾವು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಶಾಸ್ತ್ರವು ಇಲ್ಲಿ ನಿರ್ದಿಷ್ಟವಾದ ಸಂಹಿತೆಯೂ ಆಗುತ್ತದೆ. ಜ್ಞಾನ ಮತ್ತು ಕಾರಣಗಳು ಇದರಲ್ಲಿ ಅತ್ಯಂತ ಮುಖ್ಯವಾಗಿವೆ. ವಾಸ್ತವವಾಗಿ ನಿಯಂತ್ರಣವು ನಮಗೆ ಒಂದಲ್ಲ ಒಂದು ರೀತಿಯ ಸಮಸ್ಯೆಯನ್ನು ತಂದು ಕೊಡುತ್ತದೆ. ಪ್ರತಿಯೊಬ್ಬ ಮನುಷ್ಯನೂ ತನ್ನನ್ನು ನಿಯಂತ್ರಣ ಮಾಡಲು ಹೊರಟರೆ ಅದರ ಪರಿಣಾಮವು ಅವನ ಮೇಲೆ ಆಗುತ್ತದೆ. ವ್ಯಕ್ತಿಗಳು ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯಾತ್ಮಕವೂ ಆಗಿರುತ್ತಾರೆ

೧೯

ಪ್ರಭುತ್ವದ ರಚನೆಗಳು

ರಚನೆಯೆಂದರೆ ಅದು ಆಗುವುದು ಅನೇಕ ಬಿಡಿಯಾದ ಅಂಶಗಳು ಸೇರಿಕೊಂಡು ರಚನೆಯಾಗುತ್ತದೆ. ನಿಯಂತ್ರಣ ಮತ್ತು ಅದರ ಸ್ವರೂಪವನ್ನು ನಾವು ಒಂದೇ ರೀತಿಯದು ಎಂದು ಹೇಳಬೇಕಾಗಿಯೂ ಇಲ್ಲ. ಅದು ನೇರ ಇರಬಹುದು ಅಥವಾ ಇಲ್ಲದೆಯೂ ಇರಬಹುದು. ರೋಗಿ ಮತ್ತು ಅವನ ದೇಹದ ಮೇಲೆ ಒಂದು ವೈದ್ಯಕೀಯ ಚೀಟಿಯು ನಿಯಂತ್ರಣವನ್ನು ಸಾಧಿಸುತ್ತದೆ ಈ ನಿಯಂತ್ರಣವನ್ನು ನೇರ ಎಂದು ಹೇಳಬೇಕಾಗಿಯೂ ಇಲ್ಲ. ಅದು ಪರೋಕ್ಷವೂ ಹೌದು. ಆದರೆ ಅರಾಜಕತಾವಾದವು ಸಂಘರ್ಷವನ್ನು ರೂಪಿಸುವುದು ಭಿನ್ನವಾದ ಕ್ರಮದಲ್ಲಿ. ವ್ಯಕ್ತಿ ಮತ್ತು ಅವನ ಧೋರಣೆಗಳ ವ್ಯತ್ಯಾಸವೂ ಬಹಳ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ಸಮುದಾಯಕ್ಕೂ ಈ ಅಧಿಕಾರ ಕೇಂದ್ರಗಳಿಗೂ ಸಂಬಂಧವಿದೆ. ಆದರೆ ಯಾವಾಗ ನಾವು ಮತ್ತೆ ಮತ್ತೆ ಇದನ್ನು ಹೇಳುತ್ತೇವೆಯೋ ಆಗ ಇದರ ಸ್ವರೂಪವೂ ಬದಲಾಗುತ್ತದೆ. ಮತ್ತು ಅದರ ಸ್ಥಿರೀಕರಣವೂ ನಡೆಯುತ್ತದೆ. ಅಧಿಕಾರ ಮತ್ತು ಅದರ ಕೇಂದ್ರಗಳು ಬೇರೆಯಾಗುತ್ತವೆ. ಮತ್ತು ಆಯಾ ಅಧಿಕಾರ ಮತ್ತು ಅದರ ಸ್ವರೂಪವೂ ಬದಲಾಗುತ್ತಾ ಹೋಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದನ್ನು ಈವತ್ತು ಜ್ಞಾನವೆಂದು ಹೇಳುತ್ತೇವೆಯೋ ಅದು ಅಧಿಕಾರವನ್ನೂ ಹೊಂದಿದೆ. ಮತ್ತು ಅದುವೇ ಕೆಲವು ನಿಯಂತ್ರಣವನ್ನೂ ಹೊಂದಿದೆ. ವಾಸ್ತವವಾಗಿ ವಿಜ್ಞಾನವು ಈಗ ಅನೇಕ ರೀತಿಯಲ್ಲಿ ನಮ್ಮ ಮೇಲೆ ಹಿಡಿತವನ್ನು ಸಾಧಿಸಿದೆ. ನಾವು ಅದರ ಅವಲಂಬಿತರೂ ಹೌದು. ಅದನ್ನು ಈವತ್ತು ಬಿಟ್ಟು ಇರಲಾರದಷ್ಟು ನಂಟನ್ನು ಹೊಂದಿದ್ದೇವೆ. ವಿಜ್ಞಾನವು ನಮಗೆ ಅನೇಕ ಕ್ರಮಗಳನ್ನು ಹೇಳಿಕೊಟ್ಟಿದೆ. ಒಂದು ಅರ್ಥದಲ್ಲಿ ಪಶ್ಚಿಮದಲ್ಲಿ ಯಾರನ್ನು ಪವಿತ್ರರು ಮತ್ತು ದೇವರ ಹತ್ತಿರ ನೇರವಾಗಿ ಮಾತಾಡುವವರು ಎಂದು ಹೇಳಿಕೊಂಡರೋ ಅವರ ಮಿಥ್ಯೆಗಳನ್ನು ಬಯಲಿಗೆ ಎಳೆದದ್ದು ವಿಜ್ಞಾನವೇ. ಅದಕ್ಕೆ ಒಂದು ಅತ್ಯಂತ ವಿಶಿಷ್ಟವಾದ ಸ್ಥಾನವು ಕಲ್ಪಿತವೂ ಆಯಿತು. ಅದಕ್ಕೆ ಸತ್ಯವೂ ಒಂದು ಪ್ರಮಾಣವಾಗಿದೆ, ಹಾಗೆ ನೋಡಿದರೆ

ಒಂದು ಹಂತದಲ್ಲಿ ಅನೇಕ ವಿಜ್ಞಾನಿಗಳು ತಮ್ಮ ಪೂರ್ವಾಗ್ರಹ ಮತ್ತು ತಮ್ಮ ವೈಯಕ್ತಿಕತೆಯನ್ನು ದಾಟಿದರು. ಆದರೆ ಮಾನವಿಕ ಅಧ್ಯಯನ ಮಾಡುವವರು ಇದನ್ನು ಅನ್ವಯಮಾಡುವಾಗ ತಮ್ಮ ತಂತ್ರಗಾರಿಕೆ ಮತ್ತು ವೈಯಕ್ತಿಕವಾದ ಗ್ರಹಿಕೆಯನ್ನು ಮಾತ್ರವೇ ಅನ್ವಯಿಸಿಕೊಂಡರು. ಸರಕಾರಗಳ ಕುರಿತು ಪುಕೋ ಬೇರೆ ಬೇರೆ ಕಡೆಗೆ ಚರ್ಚೆಯನ್ನು ಮಾಡಿದ್ದಾನೆ ಸರಕಾರ ಎನ್ನುವುದು ಸಾಂಸ್ಥಿಕವಾದ ರೂಪವನ್ನು ಹೊಂದಿರುತ್ತದೆ. ಅದಕ್ಕೆ ಕೆಲವು ನಿಯಮಗಳೂ ಇರುತ್ತವೆ. ಅದು ಪ್ರಭುತ್ವವೂ ಹೌದು. ಅದರ ಜೊತೆಗೆ ಅದು ತನಗೆ ಬೇಕಾದ ಕಾರ್ಯ ವ್ಯೂಹವನ್ನು ರಚನೆ ಮಾಡುತ್ತದೆ. ಪ್ರಭುತ್ವ ಮತ್ತು ಅದರ ರಚನೆಯಲ್ಲಿ ಸರಕಾರವೂ ಸೇರಿದೆ ಎಂದು ಫುಕೋ ಭಾವಿಸುತ್ತಾನೆ. ಅಧಿಕಾರ ಮತ್ತು ಶಿಸ್ತನ್ನು ರೂಪಿಸುವಲ್ಲಿ ಸರಕಾರದ ಪಾತ್ರವೂ ಅತ್ಯಂತ ದೊಡ್ಡದು. ಅದು ಒಂದು ಬಗೆಯ ವಿಶಿಷ್ಟವಾದ ಪ್ರಕ್ರಿಯೆಯೂ ಹೌದು.

ಅಧಿಕಾರ ಮತ್ತು ಜ್ಞಾನದ ರೂಪಗಳಿಗೆ ಸಂಬಂಧವೂ ಇದೆ. ಮತ್ತು ಜ್ಞಾನವೆನ್ನುವುದನ್ನು ನಾವು ಊಹಾಪೋಹ ಮಾಡಲು ಸಾಧ್ಯವಿಲ್ಲ. ಜ್ಞಾನದ ದೃಷ್ಟಿ ಎನ್ನುವುದು ಬಹಳ ಮುಖ್ಯವಾಗಿ ವಿಶ್ವಾತ್ಮಕ ದೃಷ್ಟಿಗೆ ಕಾರಣವಾಗುತ್ತದೆ. ಆದರೆ ಅದು ಸ್ಫೂರ್ತಿ ಅಲ್ಲವೆನ್ನುವುದು ಬಹಳ ಮುಖ್ಯವಾಗಿ ಗಮನಿಸಬೇಕು. ಅದರ ತಾತ್ವಿಕತೆಯನ್ನು ನಾವು ನಿರಾಧಾರವೆಂದು ಹೇಳಲು ಬರುವುದೂ ಇಲ್ಲ. ಈ ಅರ್ಥದಲ್ಲಿ ಯಾವುದನ್ನು ನಾವು ಜ್ಞಾನವೆಂದು ಹೇಳುತ್ತೇವೆಯೋ ಅದು ಕುರುಡಾಗಿ ಇರಲು ಸಾಧ್ಯವಿಲ್ಲ. ಜ್ಞಾನವನ್ನು ನಾವು ಸ್ಫೂರ್ತಿ ಎಂದು ಕರೆಯಲು ಬರುವುದೂ ಇಲ್ಲ. ಶುದ್ಧ ಜ್ಞಾನ ಮತ್ತು ಸ್ಫೂರ್ತಿಯ ನಡುವೆ ಅನೇಕ ವೈರುಧ್ಯಗಳಿವೆ ಎನ್ನುವುದನ್ನು ಒಪ್ಪಿಕೊಳ್ಳುವುದು ಬಹಳ ಅಗತ್ಯವೂ ಹೌದು. ಸೈದ್ಧಾಂತಿಕ ಅರಾಜಕತೆಯನ್ನು ಕೆಲವರು ಹೆಚ್ಚು ಮಾನವೀಯವೆಂದು ಹೇಳುತ್ತಾರೆ. ಮತ್ತು ಅದನ್ನು ಅವರು ವೈಭವೀಕರಿಸುತ್ತಾರೆ. ಮತ್ತೆ ಕೆಲವರು ವಿಜ್ಞಾನವನ್ನು ಕೂಡಾ ಅರಾಜಕವಾದುದು ಎಂದೂ ಹೇಳುತ್ತಾರೆ. ಅವರ ಪ್ರಕಾರ ಆಲೋಚನೆ ಮತ್ತು ಅದರ ಹಿಂದೆ ಇರುವ ಅನೇಕ ಸಂಗತಿಗಳಿಗೆ ಅನೇಕ ಆಯಾಮವೂ ಇರುತ್ತದೆ. ಅನೇಕ ಸಂದರ್ಭದಲ್ಲಿ ಪ್ರಮೇಯವೇ ಸಿದ್ಧಾಂತವಾಗುತ್ತದೆ. ಮತ್ತು ಅದು ಪ್ರಯೋಗದ ಮೇಲೆ ಪ್ರಭಾವವನ್ನು ಬೀರುತ್ತದೆ. ಪ್ರಮೇಯವು ಯಾವುದೇ ಆಧಾರವಿಲ್ಲದೆ ಹುಟ್ಟಿಕೊಂಡಿದೆ. ವಿಜ್ಞಾನವು ಮುಂದುವರಿಯುವುದು ಪ್ರಮೇಯಗಳಿಂದ. ಸಿದ್ಧಾಂತವು ಮುಂದುವರಿಯುವುದೇ ಅನೇಕ ಕಾರಣಗಳಿಂದ. ಆದರೆ ಅತಾತ್ವಿಕರು ಇದನ್ನು ವಿರೋಧಿಸುತ್ತಾರೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು: ಪ್ರಮೇಯವೂ ಅನೇಕ ಸಂದರ್ಭದಲ್ಲಿ ಹೊಸತರ ಹುಟ್ಟಿಗೆ ಕಾರಣವಾಗುತ್ತದೆ. ಒಂದು ಪ್ರಮೇಯವೇ ಗಟ್ಟಿಯಾಗುತ್ತದೆ.

ಒಬ್ಬರು ಮತ್ತೊಬ್ಬರ ಮೇಲೆ ನಿಯಂತ್ರಣವನ್ನು ಸಾಧಿಸಲು ಬೇರೆ ಬೇರೆ ವ್ಯೂಹವನ್ನು ರಚಿಸಲಾಗುತ್ತದೆ. ಮತ್ತು ಅದಕ್ಕೆ ಬೇರೆ ಬೇರೆ ರೂಪವು ಇರುತ್ತದೆ. ನಿಯಂತ್ರಣಗಳಲ್ಲಿಯೂ ತಾರತಮ್ಯಗಳು ಇರುತ್ತವೆ. ಮತ್ತು ಒಂದು ಮಾದರಿಯಲ್ಲಿ ಕ್ರಿಯೆಯೇ ಆಗಿರುತ್ತದೆ. ಅರೆ ಸಾಂಸ್ಥಿಕವಾದ ಮತ್ತು ವಿಶ್ವಾತ್ಮಕತೆಗಳ ನಡುವೆ ವ್ಯತ್ಯಾಸವು ಇರುತ್ತದೆ. ಅದರ ರೂಪವು ಕೆಲವು ಅಧಿಕಾರವನ್ನು ರೂಪಿಸುತ್ತವೆ. ಸಾಂಸ್ಥಿಕವಾದ ಅಧಿಕಾರವನ್ನು ನೋಡುವಾಗ ಅದನ್ನು ನಾವು ವ್ಯಾಖ್ಯಾನ ಮಾಡಬೇಕಾದ ಕ್ರಮಗಳು ಬೇರೆ ಇರುತ್ತವೆ. ಸರಕಾರ ಮತ್ತು ಅದರ

ಸ್ವರೂಪವನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ವಿಧಾನದಲ್ಲಿಯೂ ಹೌದು. ಆದರೆ ಅದರ ಅಧಿಕಾರ ಮತ್ತು ಅದರ ವ್ಯಾಪ್ತಿಯು ಒಂದು ಬಗೆಯಲ್ಲಿ ಇರುತ್ತದೆ. ಅದಕ್ಕೆ ಅನೇಕ ಮಿತಿಗಳೂ ಇವೆ. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ನಡುವೆ ಅನೇಕ ವ್ಯತ್ಯಾಸವೂ ಇರುತ್ತದೆ. ಅದು ಉತ್ಪಾದನೆ ಮತ್ತು ಅದರ ಸ್ವರೂಪವನ್ನು ಆಧರಿಸಿಯೂ ಇರವುದಕ್ಕೆ ಸಾಧ್ಯವೂ ಇದೆ.ಉತ್ಪಾದನೆ ಮತ್ತು ಅದರ ಹಂಚುವಿಕೆಯಲ್ಲಿ ಸರಕಾರದ ನೀತಿಗಳು ಭಿನ್ನವಾಗುತ್ತವೆ. ಆದರೆ ಯಾವುದೇ ನೀತಿ ಮತ್ತು ಅದರ ಸ್ವರೂಪವನ್ನು ಸರಕಾರವು ರೂಪಿಸಿಕೊಳ್ಳುವಾಗ ತನ್ನದೇ ಆದ ಕೆಲವು ರೂಪಗಳನ್ನು ಮತ್ತು ತಂತ್ರಗಳನ್ನು ಬಳಸುತ್ತವೆ. ಕೆಲವು ಗುಣಗಳನ್ನು ರೂಪಿಸಿಕೊಂಡು ಅದರ ಮೂಲಕ ಆಡಳಿತವನ್ನು ಮಾಡುತ್ತವೆ. ಯಾವುದೇ ಆಡಳಿತವು ತನಗೆ ಬೇಕಾದ ಪರಿಭಾಷೆಗಳನ್ನು ಕಟ್ಟುತ್ತವೆ ಎನ್ನುವುದೂ ನಿಜವಾಗಿದೆ. ಅಧಿಕಾರ ಮತ್ತು ಅದರ ಪ್ರಭುತ್ವವನ್ನು ನಿರಾಕರಿಸುವುದಕ್ಕೆ ಕೆಲವು ಪ್ರತಿವ್ಯೂಹವನ್ನು ಹೋರಾಟಗಳು ನಿರ್ಮಾಣ ಮಾಡಬೇಕಾಗುತ್ತದೆ. ಅದು ಅಗತ್ಯವೂ ಹೌದು. ಯಜಮಾನಿಕೆ ಎನ್ನುವುದು ಒಂದು ಬಗೆಯಲ್ಲಿ ಅಧಿಕಾರದ ಒಂದು ರಾಚನಿಕವಾದ ಒಂದು ರೂಪ ಮಾತ್ರವೇ ಆಗಿರುತ್ತದೆ. ಮತ್ತು ಅದು ಸಮಾಜ ಮತ್ತು ಅದರ ಪರಿಣಾಮವನ್ನು ರೂಪಿಸುವುದರಿಂದ ಅದರಲ್ಲಿ ಸಮಾಜದ ಚರಿತ್ರೆಯು ಇರುತ್ತದೆ. ಅಧಿಕಾರವು ಸಮಾಜದ ದೇಹವೂ ಹೌದು. ಅದರಲ್ಲಿ ಸಮಾಜ ಮತ್ತು ಅದರ ಸಂಬಂಧಗಳ ವ್ಯಾಖ್ಯೆಯು ಇರುತ್ತದೆ.

ಯಾವುದನ್ನು ಈವತ್ತು ದಂಡ ಸಂಹಿತೆಯೆಂದು ಹೇಳುತ್ತೇವೆಯೋ ಅದರಲ್ಲಿ ಬೇರೆ ಬೇರೆ ವಿಧಗಳು ಇರುತ್ತವೆ. ಅದಕ್ಕೂ ಕೆಲವು ಕಾನೂನು ಮತ್ತು ಅದರ ಪರಿಣಾಮಗಳು ಇರುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿ ದಂಡ ಮತ್ತು ಕಾನೂನುಗಳ ನಡುವೆ ಒಂದು ನಿರ್ಣಾಯಕವಾದ ಸಂಬಂಧವು ಏರ್ಪಾಡಾಯಿತು. ಮತ್ತು ಕಾನೂನು ಮತ್ತು ಮನೋಸ್ಥಿತಿಗೆ ಬೇರೆ ಆಯಾಮಗಳೂ ದೊರೆತವು. ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಿಂದ ಮನೋವ್ಯಾಪಾರ ಮತ್ತು ಅದರ ಅರ್ಥಕ್ಕೆ ವಿಶಿಷ್ಟತೆಯೂ ಬಂತು. ಸಮಾಜ ಮತ್ತು ಅದರ ವಿಕಾಸದ ದೃಷ್ಟಿಯಿಂದ ಇದಕ್ಕೆ ಮಹತ್ವವು ಇದೆ. ಮನೋವಿಜ್ಞಾನ ಮತ್ತು ಅದರ ಅರ್ಥವು ಭಿನ್ನವಾಯಿತು. ಅದು ಮನಸ್ಸನ್ನು ಕೇಂದ್ರೀಕರಿಸಿದ ವಿಜ್ಞಾನವೂ ಹೌದು. ಜೀವನ ಮತ್ತು ಸಮಾಜದ ನಡುವೆ ಇರುವ ಸಂಬಂಧವನ್ನು ನಿರ್ವಚಿಸಲು ಇರುವ ಮಹತ್ವದ ವಿಜ್ಞಾನವೂ ಹೌದು. ವಿಕಾಸದ ದೃಷ್ಟಿಯಲ್ಲಿ ಇದು ಮಹತ್ವದ ಜ್ಞಾನ ರೂಪವೂ ಹೌದು. ಅದು ಅನೇಕವನ್ನು ವಿವರಿಸಿತು.ಲೈಂಗಿಕತೆ ಮತ್ತು ನೀತಿಶಾಸ್ತ್ರವನ್ನು ಸರಿಯಾದ ರೀತಿಯಲ್ಲಿ ಅದು ವಿವರಿಸುವ ಪ್ರಯತ್ನವನ್ನು ಮಾಡಿತು. ಲೈಂಗಿಕ ಸಂಬಂಧ ಮತ್ತು ಅದರ ಪರಿಣಾಮ ಹಾಗೂ ಪಾಪ ನಿವೇದನೆಯ ನಡುವೆ ಕೆಲವು ಸಂಬಂಧಗಳು ಇವೆ ಎನ್ನುವುದು ಅದರ ನಿಲುವು ಆಗಿದೆ. ಜ್ಞಾನವು ಆಯಾ ಕಾಲದಲ್ಲಿ ಬದಲಾಗುತ್ತಾ ಹೋಗಿದೆ. ಅದರ ಚಹರೆಗಳಲ್ಲಿ ವ್ಯತ್ಯಾಸವೂ ಆಗಿದೆ. ಸಂಪ್ರದಾಯ ಮತ್ತು ಅದರ ಸ್ವರೂಪವೂ ಜ್ಞಾನಕ್ಕೆ ಅನುಸಾರವಾಗಿ ಬದಲಾಗಿದೆ. ಸಮಾಜ ಮತ್ತು ಅದರ ನೀತಿಯ ನಿರೂಪಣೆಯಲ್ಲಿ ತಾರತಮ್ಯವು ಇದೆ. ಮತ್ತು ಅದರಲ್ಲಿ ವಿಭಿನ್ನವಾದ ಅಧಿಕಾರವೂ ಇದೆ. ಸಂಪ್ರದಾಯ ಮತ್ತು ಅದರ ನೀತಿಯಲ್ಲಿ ಬದಲಾವಣೆಯು ಆಗಿರುವುದು ಮಾತ್ರವೇ ಅಲ್ಲ ಅದು ಜೀವನವನ್ನು ನಿಯಂತ್ರಿಸಿದೆ. ಆದರೆ ನೀತಿಯೇ ಇಡೀ ಜಗತ್ತನ್ನು ಆಳುತ್ತದೆ ಎಂದು ಹೇಳಲು ಬರುವುದಿಲ್ಲ.

ಜಗತ್ತು ಮತ್ತು ಅದರ ನಿಯಮವು ಬರೀ ನೀತಿಯನ್ನು ಮಾತ್ರವೇ ಅವಲಂಬಿಸಿಲ್ಲ. ಅದರಲ್ಲಿ ವ್ಯತ್ಯಾಸಗಳೂ ಇವೆ. ಹಾಗೆ ನೋಡುವುದಿದ್ದರೆ ಯಾವುದೇ ಜಾಗತಿಕ ಸನ್ನಿವೇಶವನ್ನು ನೀತಿಯು ಆಳುವುದಿಲ್ಲ. ಅದರ ಸ್ವರೂಪವು ಆಯಾ ಸನ್ನಿವೇಶಕ್ಕೆ ಅನುಸಾರವಾಗಿಯೂ ಬದಲಾಗಿದೆ. ಸನ್ನಿವೇಶ ಮತ್ತು ಅದರ ನಡೆ ನುಡಿಗಳು ಬೇರೆಯಾಗಿವೆ. ಆಯಾ ಸನ್ನಿವೇಶ, ಮನೋಸ್ಥಿತಿ, ಅದರ ಆಯಾಮಗಳು ಬೇರೆಯಾಗುತ್ತಾ ಹೋಗಿವೆ. ಇಡೀ ಜಗತ್ತಿನಲ್ಲಿ ಇರುವ ಅನೇಕ ಜನರ ನಡೆನುಡಿಗಳಿಗೂ ಅದರ ಹಿನ್ನೆಲೆಗೂ ಒಂದು ಸಂಬಂಧವು ಇದೆ. ಅದನ್ನು ಹೀಗೆ ಹೇಳಬಹುದು: ನೀತಿ, ಅಧಿಕಾರ, ಜ್ಞಾನ ಮತ್ತು ಮನೋಸ್ಥಿತಿಗೆ ನಿಜವಾದ ಒಂದು ಸಾಂಗತ್ಯವಿದೆ. ಆದ್ದರಿಂದ ನಾವು ಯಾವುದೇ ಕೌಶಲವನ್ನು ನಿರೂಪಿಸಿದರೂ ಅಂತಿಮವಾಗಿ ಅದರ ನೆಲೆಗಳು ವ್ಯತ್ಯಾಸವಾಗುತ್ತಾ ಹೋಗುತ್ತದೆ. ಜೀವನದ ಅನೇಕ ರೀತಿಯ ಚಟುವಟಿಕೆಗೆ ದೇಹವೇ ಮಾನದಂಡವಲ್ಲ. ಅದರ ಕೇಂದ್ರ ಮನಸ್ಸು. ಆದ್ದರಿಂದ ಮನಸ್ಸನ್ನು ಅರ್ಥಮಾಡಿಕೊಳ್ಳಲು ನಮಗೆ ಮನೋವೈಜ್ಞಾನಿಕವಾದ ಪರಿಕರವು ಬೇಕಾಗುತ್ತದೆ. ಮನೋಸ್ಥಿತಿಯು ಅನೇಕವನ್ನು ರಚಿಸಿದೆ. ಆದ್ದರಿಂದ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಅಗತ್ಯವೂ ಆಗಿದೆ. ಜಗತ್ತು ಮತ್ತು ಅದನ್ನು ಅರ್ಥಮಾಡಿಕೊಳ್ಳುವ ಬಗೆಯನ್ನು ಮನೋವಿಜ್ಞಾನವು ಹೇಳುತ್ತದೆ. ಹಾಗೆ ನೋಡುವುದಿದ್ದರೆ ಸಮಾಜದಲ್ಲಿ ಇರುವ ಬೇರೆ ಬೇರೆ ಸಂಕಥನಗಳನ್ನು ನಾವು ಅರ್ಥ ಮಾಡಿಕೊಳ್ಳುವುದು ಅತ್ಯಂತ ಅಗತ್ಯವೂ ಹೌದು.

ನಮ್ಮ ಜ್ಞಾನ ಮಾದರಿಗಳಿಗೂ ನಮ್ಮ ಸಂಕಥನಗಳಿಗೂ ಅನೇಕ ರೀತಿಯ ಸಂಬಂಧವು ಇದೆ. ನಮ್ಮ ಜೀವನ ಕ್ರಮವೂ ಅನೇಕ ರೀತಿಯ ಜ್ಞಾನವನ್ನು ರೂಪಿಸಿಕೊಡುತ್ತದೆ. ಕೆಲವು ಮಾದರಿಗಳನ್ನು ನಾವು ರಚಿಸಿಕೊಳ್ಳುತ್ತೇವೆ. ಆದ್ದರಿಂದ ನಾವು ವಿಮರ್ಶೆಯನ್ನು ಮಾಡುವಾಗ ಅದರಲ್ಲಿ ಬೇರೆ ವ್ಯತ್ಯಾಸಗಳು ಇರುತ್ತವೆ. ಹಾಗೆಂದು ಅದನ್ನು ನಿರ್ವಹಿಸುವಾಗ ಅದರಲ್ಲಿ ಎಚ್ಚರವಿರಬೇಕಾಗುತ್ತದೆ. ಯಾವುದೇ ಸ್ಥಳೀಯತೆಯೆ ಅಂತಿಮವೂ ಅಲ್ಲ. ಅದನ್ನು ನಾವು ಸ್ವಾಯತ್ತವಾದ ಒಂದು ಘಟಕವೆಂದು ಹೇಳಬೇಕಾದ ಅಗತ್ಯವಂತೂ ಇಲ್ಲವೇ ಇಲ್ಲ. ನಾವು ಅನೇಕರು ಸ್ಥಳೀಯತೆಯನ್ನು ಮಾತ್ರವೇ ನೋಡುತ್ತೇವೆ. ಅದು ನಮ್ಮ ಸಮಸ್ಯೆಯೂ ಹೌದು. ಸ್ಥಳೀಯವಾದ ಆಲೋಚನೆ ಮತ್ತು ಅದರ ಪರಿಣಾಮವೇ ನಮಗೆ ತುಂಬಾ ಮುಖ್ಯವೆಂದು ಅನಿಸುತ್ತದೆ. ಇರುವ ವಾಸ್ತವವನ್ನೇ ನಾವು ಹೆಚ್ಚು ಪ್ರಧಾನವೆಂದು ಹೇಳುವ ಸಾಧ್ಯತೆಯೂ ಇರುತ್ತದೆ. ಜ್ಞಾನವೆನ್ನುವುದು ನಮ್ಮ ಗ್ರಹಿಕೆಗೆ ಎಷ್ಟು ನಿಲುಕಿದೆಯೋ ಅಷ್ಟು ಮಾತ್ರವೇ ಅಲ್ಲ. ಅಷ್ಟು ಮಾತ್ರವೇ ಸತ್ಯವೆಂದು ಹೇಳಬೇಕಾದ ಅಗತ್ಯವಿಲ್ಲ. ನಮ್ಮ ಆಲೋಚನೆ ಮತ್ತು ಅದರ ಸ್ವರೂಪವೇ ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆ. ಅದರಲ್ಲಿ ಬೇರೆ ಬೇರೆ ನೆಲೆಗಳೂ ಇವೆ. ಯಾವುದು ನಮ್ಮ ಮೇಲು ನೋಟದ ತಿಳುವಳಿಕೆಯು ಇರುತ್ತದೆಯೋ ಅಷ್ಟು ಮಾತ್ರವೇ ಜ್ಞಾನವಲ್ಲ. ಜೀವನವನ್ನು ನಾವು ವಿಸ್ತರಿಸಿಕೊಳ್ಳಬೇಕು ಅಂದರೆ ನಾವು ಕೆಲವು ರೀತಿಯ ಜ್ಞಾನವನ್ನು ಹೊಂದಿರುವುದೂ ಅಷ್ಟೇ ಅಗತ್ಯ. ಜ್ಞಾನ ಮತ್ತು ಅದರ ನಿರ್ವಹಣೆಯು ಈ ದೃಷ್ಟಿಯಿಂದ ಬಹಳ ಮುಖ್ಯವಾದ ಸಂಗತಿಯೂ ಹೌದು. ಜ್ಞಾನ ಮತ್ತು ಅದರ ಪರಿಣಾಮವು ನಮ್ಮ ಜೀವನಕ್ಕೆ ಅತ್ಯಂತ ಅಗತ್ಯವಾದ ಸಂಗತಿಯೂ ಹೌದು. ಜ್ಞಾನಕ್ಕೆ ಕೆಲವು ರೀತಿಯ

ಚಾರಿತ್ರಿಕ ಹಿನ್ನೆಲೆಯೂ ಇರುತ್ತದೆ. ಎರಡನೆಯದಾಗಿ ಅದಕ್ಕೆ ಕ್ರಿಯಾಶೀಲತೆಯು ಇರುತ್ತದೆ. ಆದರೆ ಜ್ಞಾನ ಮತ್ತು ಅದರ ಸಮಾಜಶಾಸ್ತ್ರವು ಬರೀ ಒಂದು ಸಂಕೇತವೆಂದು ಹೇಳುವುದು ಅಗತ್ಯವಿಲ್ಲ. ಜ್ಞಾನವೂ ಒಂದು ನಿಯಮದಲ್ಲಿ ಕೆಲಸವನ್ನು ಮಾಡುತ್ತದೆ. ಅದಕ್ಕೂ ನಮ್ಮ ಉತ್ಪಾದನೆಗೂ ಒಂದು ಸಂಬಂಧವು ಇರುತ್ತದೆ. ಆದರೆ ವಿಮರ್ಶೆ ಮತ್ತು ಅದರ ಪರಿಕರವನ್ನು ನಾವು ಸೀಮಿತವಾಗಿ ನೋಡಿದರೆ ಅದರಲ್ಲಿ ಶೈಕ್ಷಣಿಕವಾದ ಪಾಂಡಿತ್ಯವೇ ಇರಲು ಸಾಧ್ಯ. ಒಂದು ಸಮಾಜದಲ್ಲಿ ಬೇರೆ ಬೇರೆ ರೀತಿಯ ಜ್ಞಾನಗಳು ಇರುತ್ತವೆ. ಮತ್ತು ಅದನ್ನು ಮನುಷ್ಯನು ರಚನೆ ಮಾಡಿಕೊಂಡಿದ್ದಾನೆ. ಜ್ಞಾನದ ಅನೇಕ ಗುಂಪುಗಳು ಒಂದು ಸಮಾಜವನ್ನು ಮುನ್ನಡೆಸುತ್ತವೆ. ನಾವು ಯಾವುದನ್ನು ಪ್ರಾದೇಶಿಕ ಜ್ಞಾನವೆಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ಕಾಲ ಮತ್ತು ಪ್ರದೇಶದ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಪ್ರದೇಶ ಮತ್ತು ಅದರ ಜ್ಞಾನ ರೂಪಗಳು ಕೆಲವನ್ನು ಶ್ರೇಣಿಕರಣ ಮಾಡುತ್ತದೆ. ಮತ್ತು ಅದು ತುಂಬಾ ವೈಜ್ಞಾನಿಕ ಎಂದು ಹೇಳಲು ಬರುವುದೂ ಇಲ್ಲ. ಯಾವಾಗ ಸ್ಥಳೀಯ ಜ್ಞಾನವನ್ನು ಮಾತ್ರವೇ ಮುಖ್ಯವೆಂದು ಹೇಳುತ್ತೇವೆಯೋ ಆಗ ಅದು ಅನೇಕವನ್ನು ಹೊರಗೆ ಇಡುತ್ತದೆ. ಉಳಿದ ಜ್ಞಾನವನ್ನು ಅದು ಮೈಲಿಗೆ ಎಂದು ಭಾವಿಸುತ್ತದೆ. ಅದು ಕೆಲವು ಜ್ಞಾನವನ್ನು ನೋಡುವುದೇ ಬೇರೆ ರೀತಿಯಲ್ಲಿ. ಅದರ ಪ್ರಕಾರ ಕೆಲವು ಜ್ಞಾನವನ್ನು ಒಪ್ಪಿಕೊಳ್ಳಬೇಕಾದ ಅಗತ್ಯವೇ ಇಲ್ಲ. ಅದರಲ್ಲಿ ಅನ್ಯ ಎನ್ನುವುದು ಬಹಳ ಸ್ಪಷ್ಟವಾಗಿಯೂ ಕಾಣಿಸಿಕೊಳ್ಳುತ್ತದೆ. ಅನ್ಯಜ್ಞಾನವು ಬೇಕಾಗಿಯೇ ಇಲ್ಲವೆಂದು ಹೇಳಿದರೆ ಅನ್ಯಜ್ಞಾನವನ್ನು ಅದು ಅವಗುಣವೆಂದು ಹೇಳಿದಂತೆ ಆಗುತ್ತದೆ. ಆದರೆ ಯಾವುದನ್ನು ನಾವು ಈವತ್ತು ಜ್ಞಾನವೆಂದು ಹೇಳುತ್ತೇವೆಯೋ ಅದು ಅಷ್ಟು ಸುಲಭವಾದ ಒಂದು ಪ್ರಕ್ರಿಯೆಯು ಅಲ್ಲ. ಅದರ ಸ್ವರೂಪವು ಚರಿತ್ರೆಯ ಮೂಲಕವೇ ಬಂದಿದೆ. ಚರಿತ್ರೆ ಮತ್ತು ಅದರಿಂದ ನಿರ್ಧಾರವಾದ ಜ್ಞಾನವು ಅಸ್ಪಷ್ಟವಾಗಿಯೂ ಇಲ್ಲ. ಅದರಲ್ಲಿ ಖಚಿತತೆಯು ಇದೆ. ಆದ್ದರಿಂದ ಸ್ಥಳೀಯ ಜ್ಞಾನವನ್ನು ಮಾತ್ರವೇ ಅತ್ಯಂತ ವೈಜ್ಞಾನಿಕ ಎಂದು ಹೇಳುವುದು ಸರಿಯಾದ ಕ್ರಮವಲ್ಲ. ಅನೇಕ ಜ್ಞಾನದ ಮಾದರಿಗಳು ಮತ್ತೆ ಮತ್ತೆ ಮರು ಪರಿಶೀಲನೆಗೆ ಗುರಿಯಾಗುತ್ತವೆ.

ಯಾವುದೇ ಒಂದು ಸಮಾಜಕ್ಕೆ ಒಂದು ರೀತಿಯ ಜ್ಞಾನವು ಮಾತ್ರವೇ ಸಾಕು ಎಂದು ಹೇಳಲಾಗುವುದೂ ಇಲ್ಲ. ಅದರಲ್ಲಿಯೂ ಬೇರೆ ಬೇರೆ ಬದಲಾವಣೆಯು ಇದೆ. ಜ್ಞಾನವೆನ್ನುವುದು ಅಭಿವ್ಯಕ್ತಗೊಳ್ಳುತ್ತದೆ. ಅದರಲ್ಲಿ ವ್ಯಕ್ತ ಮತ್ತು ಅವ್ಯಕ್ತ ಎನ್ನುವುದು ಇದ್ದರೂ ಅದು ಅನಿಯಂತ್ರಿತವಲ್ಲ. ಆದ್ದರಿಂದ ಸ್ಥಳೀಯತೆಯನ್ನು ನೋಡುವಾಗ ಅದನ್ನು ಹೆಚ್ಚು ಖಚಿತ ಮಾಡಬೇಕಾದ ಅಗತ್ಯವೂ ಇರುತ್ತದೆ. ಸ್ಥಳೀಯ ಜ್ಞಾನ ಮತ್ತು ಅದರ ಪರಂಪರೆಯು ಹೇಗೆ ಬಂದಿದೆ ಮತ್ತು ಅದರ ಹಿನ್ನೆಲೆಯು ಏನು ಎನ್ನುವುದೂ ಅಷ್ಟೇ ಮುಖ್ಯ. ಸ್ಥಳೀಯ ಜ್ಞಾನಗಳು ಅಗತ್ಯಕ್ಕೆ ಅನುಸಾರವಾಗಿ ಮಾತ್ರವೇ ರೂಪುಗೊಳ್ಳುತ್ತವೆ. ಅದಕ್ಕೆ ಕೆಲವು ಸಾಮಾನ್ಯ ಎನ್ನಬಹುದಾದ ಸಂಗತಿಗಳು ಇರುತ್ತವೆ. ಅದಕ್ಕೆ ಅನುಗುಣವಾದ ಸಂಕಥನವನ್ನು ಅದು ರೂಪಿಸುತ್ತದೆ. ಯಾವುದನ್ನು ನಾವು ಸಾಮಾನ್ಯವಾದ ಜ್ಞಾನವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಬದಲಾಗುತ್ತದೆ. ಮತ್ತು ಆಯಾ ಸ್ಥಳೀಯತೆಯು ತನಗೆ ಅಗತ್ಯವಾದ ನೆನಪುಗಳನ್ನು ಉಳಿಸಿಕೊಳ್ಳುತ್ತದೆ. ಆದರೆ ಯಾವುದನ್ನು ಜ್ಞಾನವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಭಿನ್ನವಾಗುತ್ತದೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನಗಳು ನಮ್ಮ ಅರಿವನ್ನು ವಿಸ್ತರಿಸಿಕೊಳ್ಳುತ್ತವೆ. ವಿಜ್ಞಾನವೆಂದರೆ ಅದು

ವಿಶಿಷ್ಟವಾದ ಜ್ಞಾನ. ಆದರೆ ನಮ್ಮ ಸಾಮಾನ್ಯವಾದ ತಿಳುವಳಿಕೆಯೂ ಕೂಡಾ ಜ್ಞಾನವೇ ಆಗಿರುತ್ತದೆ. ಯಾವ ಜ್ಞಾನವನ್ನು ನಾವು ಹೊರಗೆ ಇಡುತ್ತೇವೆ ಮತ್ತು ಯಾಕೆ ಇಡುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ನಮ್ಮ ಸಾಮಾನ್ಯವಾದ ತಿಳುವಳಿಕೆಯೂ ಕೂಡಾ ನಮ್ಮ ಸಂವೇದನೆಯನ್ನು ಹೇಳುತ್ತದೆ. ವಾಸ್ತವವಾಗಿ ಯಾವುದು ಸ್ಥಳೀಯ ಮತ್ತು ಯಾವುದು ಪರಜ್ಞಾನ ಎನ್ನುವುದೇ ಭಿನ್ನವಾದ ಪ್ರಶ್ನೆಯೂ ಆಗಿರುತ್ತದೆ. ಲೋಕ ಜ್ಞಾನ ಮತ್ತು ಅದರ ಪರಿಕರವೂ ಭಿನ್ನವಾಗ ಬಹುದು. ಆದರೆ ಅದು ಇರುವುದು ಸುಳ್ಳಲ್ಲ. ಇಲ್ಲಿ ನಾವು ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಯಾವುದು ವಿಜ್ಞಾನ? ಯಾವುದು ಲೋಕ ಜ್ಞಾನ? ಯಾವುದು ನಮ್ಮ ನಿಜವಾದ ಅರಿವು? ಯಾವುದು ನಮ್ಮ ಅಗತ್ಯ? ಸಮಾಜಕ್ಕೆ ಯಾವುದೇ ವಿಜ್ಞಾನವು ಬೇಡವೇ? ಯಾವುದನ್ನು ನಾವು ಅಜ್ಞಾನವೆಂದು ಹೇಳುತ್ತೇವೆ? ಯಾವ ಜ್ಞಾನವನ್ನು ನಾವು ನಿರಾಕರಿಸುತ್ತಿದ್ದೇವೆ? ಜ್ಞಾನವು ವಿನಿಮಯವಾಗದೇ ಹೋದರೆ ಅದರಲ್ಲಿ ಒಂದು ಭೇದವು ಕಾಣಿಸಿಕೊಳ್ಳುತ್ತದೆ. ಭಾವುಕ ಮತ್ತು ಅಸ್ಪಷ್ಟವಾದ ಜ್ಞಾನವು ಉಪಯೋಗಕ್ಕೆ ಬರುವುದಿಲ್ಲ. ಅದರಲ್ಲಿ ಖಚಿತತೆಯು ಇರುವುದೂ ಇಲ್ಲ. ಧರ್ಮಗಳು ಕೂಡಾ ಒಂದು ನಿರ್ದಿಷ್ಟವಾದ ಜ್ಞಾನವನ್ನು ಹೇಳುತ್ತವೆ. ಆದರೆ ಆ ಜ್ಞಾನವು ಅಸ್ಪಷ್ಟ. ಮತ್ತು ಅವುಗಳು ತರ್ಕವನ್ನು ಒಳಗೊಂಡಿರುವುದೂ ಇಲ್ಲ ಈ ಕಾರಣಕ್ಕೆ ಚರ್ಚ್ ಹೇಳಿದ ಜ್ಞಾನವನ್ನು ಮಾರ್ಕ್ಸವಾದವು ನಿರಾಕರಿಸಿತು. ಅದು ಹೇಳಿದ ಜ್ಞಾನವನ್ನು ನಿರಾಕರಿಸಲು ಮಾರ್ಕ್ಸವಾದವು ಪ್ರಗತಿಪರತೆಯನ್ನು ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಬಳಸಿಕೊಂಡಿತು. ವಾಸ್ತವವಾಗಿ ವೈಜ್ಞಾನಿಕತೆ ಮತ್ತು ಅದರ ಸ್ವರೂಪವನ್ನು ಮಾರ್ಕ್ಸವಾದವು ಅತ್ಯಂತ ಅರ್ಥ ಪೂರ್ಣವಾಗಿಯೂ ಬಳಸಿಕೊಂಡಿತು. ಈ ದೃಷ್ಟಿಯಿಂದ ಮಾರ್ಕ್ಸವಾದವು ಒಂದು ವೈಜ್ಞಾನಿಕ ದೃಷ್ಟಿಕೋನವನ್ನು ಒಳಗೊಂಡಿದ್ದು ಮಾತ್ರವೇ ಅಲ್ಲ, ಅದು ವಿಜ್ಞಾನ ಮತ್ತು ಅದರ ಶಕ್ತಿಯನ್ನು ಸರಿಯಾದ ರೀತಿಯಲ್ಲಿಯೇ ರೂಢಿಸಿಕೊಂಡಿತು. ವೈಜ್ಞಾನಿಕ ದೃಷ್ಟಿಕೋನವನ್ನು ಬಳಸುವಾಗ ಅದರ ಎದುರು ನಾವು ಬರೀ ಶೂನ್ಯವಾದ ಸಂಗತಿಯನ್ನು ತರುವ ಹಾಗೆ ಇಲ್ಲ. ಸ್ಥಳೀಯವಾದ ಜ್ಞಾನ ಮತ್ತು ಅದರ ಚಹರೆಗಳನ್ನು ನೋಡುವಾಗ ನಾವು ಅದಕ್ಕೆ ಅವೈಜ್ಞಾನಿಕವಾದ ಪರಿಕರವನ್ನು ಬಳಸಿಕೊಂಡರೆ ಉಪಯೋಗವೂ ಇಲ್ಲ. ನಾವು ಸ್ಥಳೀಯವಾದ ಜ್ಞಾನ ಮಾದರಿಯನ್ನು ಮಾತ್ರವೇ ಕಟ್ಟುತ್ತೇವೆ ಎಂದರೆ ಅದರಲ್ಲಿ ನಿಜವಾದ ಹುರುಳು ಎಷ್ಟು ಎನ್ನುವುದೂ ಮುಖ್ಯವಾಗುತ್ತದೆ. ಸ್ಥಳೀಯವಾದ ಜ್ಞಾನದ ನಿಜವಾದ ಪ್ರಾಕ್ತನಶಾಸ್ತ್ರವು ಯಾವುದು ಎನ್ನುವುದೇ ಮುಖ್ಯವಾದ ಪ್ರಶ್ನೆ. ಹಾಗೆ ನೋಡುವುದಿದ್ದರೆ ಯಾವುದೇ ಚರಿತ್ರೆಯಲ್ಲಿ ಅನೇಕ ಒತ್ತಡಗಳು ಇರುತ್ತವೆ. ಅದನ್ನು ನಾವು ನೋಡಬೇಕಾಗುತ್ತದೆ. ಚರಿತ್ರೆಯಲ್ಲಿ ಯಾವುದು ಸಂವಾದಿಯಾದ ಒತ್ತಡ ಮತ್ತು ನಿಜವಾದ ಪ್ರಕ್ರಿಯೆ ಎಂದು ಗುರುತಿಸುವುದು ಅತ್ಯಂತ ಅನಿವಾರ್ಯ. ಎಷ್ಟೋ ಸರ್ತಿ ಚರಿತ್ರೆಯಲ್ಲಿ ಒಂದು ಮೌನವೂ ಇರುತ್ತದೆ. ಯಾವುದು ಅಧಿಕಾರವನ್ನು ನಿಜವಾಗಿಯೂ ನಡೆಸಿದೆ ಯಾವುದು ನಡೆಸಿಲ್ಲವೆಂದು ನೋಡಬೇಕಾದ ಅಗತ್ಯವೂ ಇದೆ. ಯಾವುದು ರಾಜಕಾರಣ ಮತ್ತು ಯಾವುದು ನಿಜವಾದ ಅಧಿಕಾರ ಯಾವ ಅರ್ಥಶಾಸ್ತ್ರವು ನಮ್ಮನ್ನು ಇಲ್ಲಿಯ ವರೆಗೆ ಕರೆದುಕೊಂಡು ಬಂದಿದೆ ಎಂದೂ ನೋಡಬೇಕಾಗುತ್ತದೆ. ಅರ್ಥಶಾಸ್ತ್ರವೂ ಒಂದು ರೀತಿಯಿಂದ ಅಧಿಕಾರದ ಸ್ವರೂಪವನ್ನು ನಿರ್ಧರಿಸುತ್ತದೆ.

ಸಮಾಜವನ್ನು, ವ್ಯಕ್ತಿಯನ್ನು ನಿಯಂತ್ರಿಸಲು ಪ್ರಭುತ್ವವು ತಂತ್ರಗಾರಿಕೆಯನ್ನು ರೂಪಿಸುತ್ತದೆ. ಈ ತಂತ್ರಗಾರಿಕೆಯೇ ವ್ಯೂಹವಾಗಿದೆ.

ಸಂಸ್ಕೃತಿಯನ್ನು ಈವತ್ತು ನಾವು ವಿವರಿಸುವಾಗ ಅದನ್ನು ಒಂದು ಅವಕಾಶದಲ್ಲಿ ಇಡಲಾಗಿತ್ತು. ನಮಗೆ ಗೊತ್ತಿರಬೇಕಾದ ಅಂಶವೆಂದರೆ ಎಲ್ಲವನ್ನು ನಾವು ಸಾಂಸ್ಕೃತಿಕ ಚೌಕಟ್ಟಿನೊಳಗೆ ತರುವಂತೆ ಇಲ್ಲ. (ದಿ ಆರ್ಡರ್ ಆಫ್ ಥಿಂಗ್ಸ್) ಅವಕಾಶ ಎನ್ನುವುದು ಭೌತಶಾಸ್ತ್ರದ ಪರಿಕಲ್ಪನೆ. ಅದು ಖಾಲಿಯಾದ ಜಾಗವಲ್ಲ. ಆದರೂ ಸ್ಥಳ ಎನ್ನುವುದಕ್ಕೆ ಅರ್ಥವಿದೆ.

ಸಂಸ್ಕೃತಿಯಲ್ಲಿ ಕೆಲವು ಅಂಶಗಳು ನಮಗೆ ವ್ಯಕ್ತವಾಗದ ಹಾಗೆ ಮಾಡುತ್ತದೆ. ಅದೇ ರೀತಿಯಲ್ಲಿ ಕೆಲವು ಸಂಗತಿಗಳು ಮೌನವಾಗಿರುವಂತೆ ಒಂದು ಸಂಸ್ಕೃತಿಯು ಸೂಚಿಸುತ್ತದೆ. ಫುಕೋ ಅದನ್ನು ಹೇರುವಿಕೆ ಎಂದು ಭಾವಿಸುತ್ತಾನೆ. (ದಿ ಆರ್ಡರ್ ಆಫ್ ಥಿಂಗ್ಸ್)

ಹದಿನಾರು ಮತ್ತು ಹದಿನೇಳನೆಯ ಶತಮಾನದ ಅನಂತರ ಪಶ್ಚಿಮದ ಸಮಾಜವು ಹೇಗೆ ಬೆಳೆದು ಬಂದಿತು ಮತ್ತು ಅದರ ಸ್ವರೂಪವನ್ನು ನಾವು ಹೇಗೆ ಪರಿಗಣಿಸಬೇಕು ಎಂದು ಫುಕೋ ಅತ್ಯಂತ ಸಮರ್ಥವಾಗಿ ಹೇಳುತ್ತಾನೆ. ಅವನ ಆರ್ಡರ್ ಆಫ್ ಥಿಂಗ್ಸ್ ಕೃತಿಯು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಅವನ ಆರ್ಡರ್ ಆಫ್ ಥಿಂಗ್ಸ್ ಎನ್ನುವುದನ್ನು ನೋಡಿದರೆ ಅವನು ಯಾವ ತಾತ್ವಿಕತೆಯನ್ನು ಹೇಳುತ್ತಾನೆ ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ. ವಸ್ತುಗಳು ಮತ್ತು ಅದರ ವಿನಿಮಯ ಎನ್ನುವುದು ಹೇಗೆ ಇರುತ್ತದೆ ಮತ್ತು ಅದರಲ್ಲಿ ಯಾವುದು ಮಧ್ಯೆ ಪ್ರವೇಶ ಮಾಡುತ್ತದೆ ಎಂದು ಅವನು ನಿರೂಪಣೆ ಮಾಡುತ್ತಾನೆ. ಆದರೆ ಅದರಲ್ಲಿಯೂ ಅವನು ಸೂಚನೆ ಮತ್ತು ಸೂಚಿತ ಹಾಗೂ ಸಂಕಥನಗಳನ್ನು ಅನ್ವಯ ಮಾಡುವುದು ತುಂಬಾ ಮುಖ್ಯವಾಗಿದೆ. ವಾಸ್ತವವಾಗಿ ಭಾಷೆ ಮತ್ತು ಅದರ ರಚನೆಗಳನ್ನು ಫುಕೋ ವಿರೋಧಿಸುವುದಿಲ್ಲ. ಅದರ ಸೂಚನೆಗಳು ನಮಗೆ ಅವನ ಮೊದಮೊದಲಿನ ಬರಹಗಳಲ್ಲಿ ಕಾಣುತ್ತವೆ. ವಸ್ತು ಮತ್ತು ಅದರ ರಚನೆಗಳು ಹಾಗೂ ಅದನ್ನು ನಾವು ಗುರುತಿಸುವ ಕ್ರಮವು ಅವನಿಗೆ ಹೆಚ್ಚು ಮುಖ್ಯ, ಆದ್ದರಿಂದ ಅವನು ಅದನ್ನು ಅವನು ಒಂದು ಮೌಲ್ಯ ಎಂದು ಹೇಳುತ್ತಾನೆ. ಅದರ ಜೊತೆಗೆ ಫುಕೋ ರಚನೆಯನ್ನು ಮತ್ತು ಮಾನವಿಕ ವಿಜ್ಞಾನವನ್ನು ಜೊತೆಗೆ ಗುರುತಿಸುತ್ತಾನೆ. ಮನುಷ್ಯ ಮತ್ತು ಅವನ ಚರಿತ್ರೆ ಹಾಗೂ ಸಮಾಜ ಮತ್ತು ಮನುಷ್ಯನ ಜೀವನದ ಕ್ರಮದಲ್ಲಿ ಭಾಷೆಯು ಹೇಗೆ ಹಾಸುಹೊಕ್ಕಾಗಿದೆ ಎಂದು ಅವನು ಗುರುತಿಸುತ್ತಾನೆ. ಮಾನವಿಕ ವಿಜ್ಞಾನ ಮತ್ತು ಭಾಷೆಯ ನಡುವಣ ಹೊಂದಾಣಿಕೆಯು ಹೇಗೆ ಇದೆ ಎನ್ನುವುದು ಫುಕೋ ಅತ್ಯಂತ ಮುಖ್ಯ. ಭಾಷೆಯು ಮಾನವಿಕಗಳಲ್ಲಿ ಒಂದು ಪರಿಕಲ್ಪನೆಯನ್ನು ಕಟ್ಟಲು ನಮಗೆ ಸಹಾಯವನ್ನು ಮಾಡುತ್ತದೆ. ಫುಕೋ ವಾಸ್ತವವಾಗಿ ಒಂದು ಸಂಗತಿಯನ್ನು ನಮ್ಮ ಗಮನಕ್ಕೆ ತರುತ್ತಾನೆ: ಸಮಾಜ ವಿಜ್ಞಾನಗಳಲ್ಲಿ ಸಿದ್ಧಾಂತಗಳು ಹೇಗೆ ಸಮಾಜ ವಿಜ್ಞಾನಗಳಲ್ಲಿ ಒಂದು ಪ್ರಮೇಯವನ್ನು ರಚನೆ ಮಾಡುತ್ತದೆ ಮತ್ತು ಅದರ ಮೂಲಕ ಹೇಗೆ ನಿರ್ಧಾರವನ್ನು ತರುತ್ತದೆ ಎಂದು ಅವನು ಆಧಾರ ಸಹಿತವಾಗಿ ವಿವರಿಸುತ್ತಾನೆ. ನಮಗೆ ಹೇಗೆ ಸಿದ್ಧಾಂತಗಳು ಕೂಡಾ ಒಂದು ರಚನೆಯು ಆಗುತ್ತದೆ ಮತ್ತು ಅದರ ರೂಪವು ಹೇಗೆ ಪರಿಕಲ್ಪನೆಗಳನ್ನು ರಚನೆ ಮಾಡುತ್ತವೆ

ಎಂದು ನಮಗೆ ಗೊತ್ತಿರುವುದು ಅಗತ್ಯವಾಗಿದೆ. ಹಾಗೆಂದು ಅದು ನಿಯಮವನ್ನು ಬಿಟ್ಟು ಭಿನ್ನವಾಗಿ ಇರಲು ಸಾಧ್ಯವೇ ಇಲ್ಲ.

ಫುಕೋ ಒಬ್ಬ ಇತಿಹಾಸವನ್ನು ಮಾತ್ರವೇ ಹೇಳುವ ವಿದ್ವಾಂಸನಲ್ಲ. ಅವನು ವಿವಿಧ ದೃಷ್ಟಿಕೋನವನ್ನು ಹೊಂದಿದ್ದಾನೆ. ಅವನಲ್ಲಿ ಚರಿತ್ರೆ ಮತ್ತು ತತ್ವಜ್ಞಾನವು ಜೊತೆಗೆ ಹೋಗುತ್ತವೆ. ಆದ್ದರಿಂದ ಅವನು ತತ್ವಜ್ಞಾನದ ಚರಿತ್ರೆಯನ್ನು ಮತ್ತು ಚರಿತ್ರೆಯ ತತ್ವಜಜ್ಞಾನವನ್ನು ಹೇಳುತ್ತಾನೆ. ಹೀಗೆ ಇದ್ದರೂ ಅವನ ಅತ್ಯಂತ ಮುಖ್ಯವಾದ ಒಂದು ದೃಷ್ಟಿಕೋನವೆಂದರೆ ಅವನು ಮನುಷ್ಯ ಮತ್ತು ಅವನ ಪ್ರಜ್ಞೆ, ಅದು ಅತ್ಯಂತ ಮಹತ್ವದ್ದು ಎಂದು ಅವನು ಭಾವಿಸುತ್ತಾನೆ. ಮನುಷ್ಯನ ಪ್ರಜ್ಞೆಯು ಜಗತ್ತನ್ನು ಅರ್ಥ ಮಾಡಿಕೊಳ್ಳಲು ಅಗತ್ಯ. ಅದು ನಿಯಮಬದ್ಧವಾಗಿದೆ ಅಥವಾ ಅದು ನಿಯಮಬದ್ಧವಾಗಿಲ್ಲ ಎಂದು ಹೇಳುವಂತೆ ಇಲ್ಲ. ಆದ್ದರಿಂದ ಭಾಷೆ ಎನ್ನುವುದು ನಮ್ಮ ಪ್ರಜ್ಞೆ ಮತ್ತು ಜಗತ್ತಿಗೆ ಸಂಬಂಧವನ್ನು ಕಲ್ಪಿಸುವ ಒಂದು ಕೊಂಡಿಯಾಗಿದೆ. ಒಂದು ಕಡೆಯಿಂದ ಭಾಷೆಗೆ ಒಂದು ಪ್ರದರ್ಶಾತ್ಮಕವಾದ ಗುಣವು ಇದೆ. ನೀಶೆಯು ಹೇಳಿದ ವಿಚಾರವನ್ನು ನಾವು ಇಲ್ಲಿ ಗಮನಿಸಬೇಕು. ಭಾಷೆಯು ನಮಗೆ ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಪರಿಕರವನ್ನು ಕೊಡುತ್ತದೆ. ಭಾಷೆಗೆ ಮತ್ತು ನಮ್ಮ ಆಲೋಚನೆಗೆ ಸಂಬಂಧವು ಇದೆ. ಜಗತ್ತನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದು ಸಂಪೂರ್ಣವಾದ ಸತ್ಯವನ್ನು ಸೆರೆ ಹಿಡಿಯುತ್ತದೆ ಎಂದು ಹೇಳಲು ಬರುವುದಿಲ್ಲ. ಅವನ ಮತ್ತೊಂದು ವಾದವನ್ನು ನಾವು ಇಲ್ಲಿ ಗಮನಿಸಬೇಕು. ಸ್ವಯಂಸಂಪೂರ್ಣವಾದ ಒಂದು ಸತ್ಯ ಎನ್ನುವುದು ಇಲ್ಲ. ಭಾಷೆಯು ನಮ್ಮ ಆಲೋಚನೆಗೆ ಒಂದು ರೂಪವನ್ನು ಕೊಡುತ್ತದೆ. ನಮ್ಮ ಆಲೋಚನೆ ಮತ್ತು ನಮ್ಮ ಅನುಭವದ ರೂಪದ ಮೂಲಕ ಭಾಷೆಗೆ ಒಂದು ಶಕ್ತಿಯನ್ನು ಕೊಡುತ್ತದೆ. ಭಾಷೆಯ ಮೂಲಕ ನಾವು ಜಗತ್ತನ್ನು ನೋಡುತ್ತೇವೆ ಎನ್ನುವುದು ಒಂದು ಸಂಗತಿಯಾದರೆ ವಾಸ್ತವ ಎನ್ನುವುದು ಸಂವಾದಿಯಾಗಿದೆ. ಪ್ರತಿಯೊಂದು ಭಾಷೆಯು ತನ್ನದೇ ಆದ ಒಂದು ಲೋಕದ ಗ್ರಹಿಕೆಯನ್ನು ಮಂಡಿಸುತ್ತದೆ. ಅದು ಒಂದು ವಿವರಣೆಯು ಆಗಿರುತ್ತದೆ. ಸರಿಯಾದ ಒಂದು ಸತ್ಯ ಎನ್ನುವುದು ಇಲ್ಲ. ನಾವು ಜಗತ್ತನ್ನು ಸೃಷ್ಟಿ ಮಾಡಿದ್ದೇವೆ, ಜಗತ್ತು ಭಾಷೆಯನ್ನು ಸೃಷ್ಟಿ ಮಾಡಿದೆ ಎನ್ನುವುದು ನೀಶೆಯ ನಿಲುವು. ಹಾಗೆ ನೋಡಿದರೆ ಜಗತ್ತು ಮತ್ತು ಅದರ ಸತ್ಯ ಎನ್ನುವುದು ಇದೆಯೇ ಎನ್ನುವುದು ಒಂದು ಪ್ರಶ್ನೆ. ಸತ್ಯ ಎನ್ನುವುದೇ ಒಂದು ರೂಪಕವಾಗಿದೆ ಎನ್ನುವುದು ನೀಶೆಯ ಮಾತು. ಸತ್ಯ ಎನ್ನುವುದು ಒಂದು ಭ್ರಮೆ. ಆದರೆ ಅದು ಭ್ರಮೆ ಆದರೆ ಅದು ಭ್ರಮೆ ಎನ್ನುವುದು ನಮಗೆ ಗೊತ್ತಿಲ್ಲ ಅಷ್ಟೆ. ಆದ್ದರಿಂದ ಸತ್ಯವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದನ್ನು ನಾವು ನಮಗೆ ಗೊತ್ತಿರುವ ಭಾಷೆಯ ಮೂಲಕ ಅರ್ಥ ಮಾಡಿಕೊಳ್ಳುವುದು. ಇದು ಅವನ ಅತ್ಯಂತ ಪ್ರಮುಖವಾದ ಒಂದು ನಿಲುವು. ನಮ್ಮ ದೈನಂದಿನ ಮಾತಿಗಿಂತ ಬೇರೆಯಾದ ಸ್ವರೂಪವನ್ನು ಕಾವ್ಯದ ಭಾಷೆಯು ಹೇಳುತ್ತದೆ ಎಂದು ಮಲ್ಲರೆಮೆ ಹೇಳುತ್ತಾನೆ. ಇದನ್ನು ನೋಡಿದರೆ ನಮಗೆ ಫುಕೋ ಭಾಷೆಯ ಕುರಿತು ಯಾವ ನಿಲುವನ್ನು ತಳೆಯುತ್ತಾನೆ ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ.

ಫುಕೋ ಚರಿತ್ರೆಯು ನಮಗೆ ಒಂದು ನಿರಂತರವಾದ ಒಂದು ಸ್ವರೂಪವನ್ನು ಹೇಳುತ್ತದೆ ಎಂದು ಭಾವಿಸುವುದಿಲ್ಲ. ಅವನು ಅದನ್ನು ಚರಿತ್ರೆ ಮತ್ತು ಅದರ ಬಿರುಕು ಎಂದು ಗ್ರಹಿಸುತ್ತಾನೆ.

ನಮಗೆ ಅತ್ಯಂತ ಮುಖ್ಯವಾಗಿ ಒಂದು ಆತಂಕವು ಇರುತ್ತದೆ. ಅದನ್ನು ನಾವು ಚರಿತ್ರೆಯಲ್ಲಿಯೂ ಕಾಣುತ್ತೇವೆ. ಚರಿತ್ರೆಯನ್ನು ನೋಡುವಾಗ ಒಂದು ಅವಕಾಶವು ಇರುತ್ತದೆ. ಅದನ್ನು ನಾವು ಮೊದಲು ಸರಿಯಾಗಿ ಗುರುತಿಸಬೇಕು. ಚರಿತ್ರೆ ಮತ್ತು ಅದರ ಸಂಕಥನಗಳು ಅತ್ಯಂತ ಖಾಲಿಯಾದ ಒಂದು ಅವಕಾಶಗಳನ್ನು ತುಂಬುತ್ತದೆ. ಜೀವನ, ಕಾರ್ಮಿಕರು ಮತ್ತು ಭಾಷೆ ಎನ್ನುವುದು ನಮಗೆ ಮಾನವಿಕ ವಿಜ್ಞಾನಗಳಲ್ಲಿ ಬೇರೆ ಥರ ಆಗುತ್ತದೆ. ಎಕ್ಸ್‌ರೆಯನ್ನು ನೋಡುವ ಒಬ್ಬ ತಜ್ಞನಂತೆ ಪಠ್ಯಗಳನ್ನು ನೋಡಬೇಕಾಗುತ್ತದೆ ಎನ್ನುವುದು ಫುಕೋನ ನಿಲುವೂ ಹೌದು. ಹಾಗಿದ್ದರೂ ಫುಕೋ ತೌಲನಿಕ ಅಧ್ಯಯನವನ್ನು ನಿರಾಕರಿಸುತ್ತಾನೆ. ಅದರ ಬದಲು ಅವನದು ವಿಶ್ಲೇಷಣೆಯ ಕ್ರಮ. ಅವನಿಗೆ ಮಾದರಿಗಳು ಮತ್ತು ಅದರ ಅಧ್ಯಯನವು ಕೂಡಾ ಅಷ್ಟು ಮುಖ್ಯವಾಗಿಲ್ಲ. ಮತ್ತೂ ಒಂದು ಅಂಶವನ್ನು ಫುಕೋ ವಿವರಿಸುತ್ತಾನೆ: ಅದರಲ್ಲಿ ಅವನು ಚರಿತ್ರೆಯನ್ನು ಅಧ್ಯಯನ ಮಾಡುವುದು ಅಂದರೆ ಅದನ್ನು ಬೇರೆ ಥರ ನೋಡುವುದೂ ಹೌದು. ನಮ್ಮ ಆಲೋಚನೆ ಎನ್ನುವುದು ಹೇಗೆ ಮುಂದುವರಿಯುತ್ತದೆ ಎಂದು ಫುಕೋ ಸಾಕಷ್ಟು ವಿವರವಾಗಿ ಚರ್ಚೆ ಮಾಡಿದ್ದು ಸತ್ಯ. ಮನುಷ್ಯ ಮತ್ತು ವಿಜ್ಞಾನ ಎನ್ನುವುದು ಅವನಲ್ಲಿ ಭಿನ್ನವಾದ ಒಂದು ಚರ್ಚೆಗೆ ಕಾರಣವಾಗಿದೆ. ಭಾಷೆ ಎನ್ನುವುದು ಕೂಡಾ ಅತ್ಯಂತ ಪವಿತ್ರವೆಂದು ಭಾವಿಸಬೇಕಾಗಿಲ್ಲ. ಅದು ಕೂಡಾ ಇತರ ವಸ್ತುಗಳ ಥರ ಇರುತ್ತದೆ. ಎಲ್ಲಿ ನಮಗೆ ಮಾತು ಮತ್ತು ಅದರ ಅವಕಾಶವು ಇಲ್ಲವೋ ಆಗ ನಾವು ಮೌನವನ್ನು ಅನುಸರಿಸಲೇ ಬೇಕಾಗುತ್ತದೆ. ಅದರ ಜೊತೆಗೆ ಭಾಷೆ ಎನ್ನುವುದು ಒಂದು ಪ್ರಾತಿನಿಧಿಕವಾದ ರೂಪವು ಮಾತ್ರವೇ. ಕೆಲವನ್ನು ಸಮಾಜವು ಮಾತಾಡಬಾರದು ಎಂದು ಹೇಳುತ್ತದೆ. ಆದ್ದರಿಂದ ನಮ್ಮ ಮಾತು ಒಂದು ಒತ್ತಡಕ್ಕೆ ಸಿಗುತ್ತದೆ.

ಫುಕೋ ಹೇಳುವ ಅತ್ಯಂತ ಮುಖ್ಯವಾದ ಒಂದು ನಿಲುವನ್ನು ಇಲ್ಲಿ ಪ್ರಸ್ತುತಪಡಿಸಬಹುದು. ಹತ್ತೊಂಬ್ಬತ್ತನೆಯ ಶತಮಾನದಲ್ಲಿ ಸಂಕೇತಶಾಸ್ತ್ರ, ಜೀವ ವಿಜ್ಞಾನ ಮತ್ತು ಸಂಪತ್ತುಗಳ ಪ್ರಶ್ನೆಗಳು ಬಂದವು. ಇದಕ್ಕೆ ಬೇಕಾದ ಜ್ಞಾನವನ್ನು ರೂಪಿಸಿದ್ದು ನಿಜ. ಇನ್ನೊಂದು ಅತ್ಯಂತ ಕುತೂಹಲಕ ಉಂಟು ಮಾಡುವ ಸಂಗತಿಯನ್ನು ನಾವು ನೆನಪಿನಲ್ಲಿ ಇಡಬೇಕಾಗುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಅತ್ಯಂತ ಹೆಚ್ಚು ಚಾಲ್ತಿಯಲ್ಲಿ ಇದ್ದುದು ಸಾಮಾನ್ಯ ಭಾಷಾವಿಜ್ಞಾನ. ಹತ್ತೊಬ್ಬತ್ತನೆಯ ಶತಮಾನದಲ್ಲಿ ಜೀವ ವಿಜ್ಞಾನ ಮತ್ತು ಸಂಕೇತ ಶಾಸ್ತ್ರಗಳು ಹಾಗೂ ಜನಾಂಗ ಮತ್ತು ಇತಿಹಾಸಗಳ ಸಂಬಂಧವು ಅತ್ಯಂತ ಹೆಚ್ಚು ಚರ್ಚೆಗೆ ಒಳಗಾಯಿತು. ಹತ್ತೊಂಬ್ಬತ್ತನೆಯ ಶತಮಾನದಲ್ಲಿ ರಾಜಕೀಯ ಅರ್ಥಶಾಸ್ತ್ರಜ್ಞರು ಸಂಪನ್ಮೂಲವನ್ನು ಕುರಿತು ಹೆಚ್ಚು ಚರ್ಚೆಯನ್ನು ಮಾಡದೆ ಅದರ ಬದಲಿಗೆ ಅವರು ಉತ್ಪಾದನೆ ಮತ್ತು ಅದರ ಸ್ವರೂಪವನ್ನು ವಿವರಿಸಿದರು. ಅದೇ ವೇಳೆಗೆ ಜೀವ ವಿಜ್ಞಾನಿಗಳು ಜೀವ ವಿಕಾಸವನ್ನು ಹೆಚ್ಚು ವಿಶ್ಲೇಷಣೆ ಮಾಡಿದರು. ಯಾವುದನ್ನು ನಮ್ಮ ಶೈಕ್ಷಣಿಕ ಇತಿಹಾಸಕಾರರು ವಿವರಿಸುತ್ತಾರೆಯೋ ಅದರ ಆಚೆಗೆ ಇರುವ ಇತಿಹಾಸವು ಅತ್ಯಂತ ಮುಖ್ಯವೆಂದು ಫುಕೋ ಭಾವಿಸುತ್ತಾನೆ. ಇತಿಹಾಸವು ಈವತ್ತು ಬರೀ ವಿವರಣಾತ್ಮಕವಾದಿಗಳ ಜೊತೆಗೆ ಇದೆ ಎಂದು ಅವನು ಭಾವಿಸುತ್ತಾನೆ.

ಫುಕೋನಲ್ಲಿ ಭ್ರಾಂತಿ ಮತ್ತು ಅದರ ವಿಷಯಗಳು ಅತ್ಯಂತ ಮುಖ್ಯವಾಗಿವೆ. ಯಾರಿಗೆ ಭ್ರಾಂತಿಗಳು ಇವೆ? ಅದನ್ನು ಗುರುತಿಸುವುದು ಹೇಗೆ? ಅದಕ್ಕೆ ಏನು ಮಾನದಂಡವು ಇದೆ

ಎಂದು ಅವನು ವಿವರಿಸುತ್ತಾನೆ. ಅವನಲ್ಲಿ ಅದು ಒಂದು ಪ್ರಮುಖವಾದ ಪ್ರಶ್ನೆಯೂ ಹೌದು. ಅದನ್ನು ಅವನು ಸೈದ್ಧಾಂತಿಕವಾಗಿ ಇದನ್ನು ಗ್ರಹಿಸುತ್ತಾನೆ. ಯಾವುದು ಕಾರಣ ರಹಿತವಾದ್ದು ಇದೆಯೋ ಅದನ್ನು ಕೂಡಾ ಅನೇಕರು ಭ್ರಾಂತಿ ಎಂದು ತಿಳಿದರು. ಯಾವುದು ವಿಷಯವೆಂದು ಹೇಳುತ್ತೇವೆಯೋ ಅದು ಅನೇಕ ಸನ್ನಿವೇಶದಲ್ಲಿ ವಸ್ತು ಮತ್ತು ಅದರ ಗ್ರಹಿಕೆಯಾಗಿ ಬದಲಾಗುತ್ತದೆ. ಈ ಬದಲಾವಣೆಯು ಸಾಂದರ್ಭಿಕವೂ ಆಗುತ್ತದೆ. ಪಶ್ಚಿಮದ ಮನುಷ್ಯರು ಕಾರಣ ಮತ್ತು ಅಕಾರಣವನ್ನು ಹೆಚ್ಚು ಅಂಗೀಕರಿಸುತ್ತಾರೆ. ಆದ್ದರಿಂದ ಅವರಲ್ಲಿ ಇದರ ಸಮಸ್ಯೆಯು ಇರುತ್ತದೆ.

ಫುಕೋ ಸಹಜವಾದ್ದನ್ನು ನೋಡುವಾಗ ಅದರ ಜೊತೆಗೆ ಇರುವ ಮೃಗೀಯತೆಯನ್ನು ಬಿಡುವುದಿಲ್ಲ. ಅದನ್ನೂ ಅವನು ಹೇಳುತ್ತಾನೆ. ಅಪರಾಧ ಮತ್ತು ಪಾಪ ಎರಡೂ ಕೂಡಾ ಒಂದು ಹಂತದಲ್ಲಿ ನಾಗರಿಕತೆಗೆ ಅಪಾಯ ಎಂದು ಅವನು ತಿಳಿಯುತ್ತಾನೆ. ಬಡವರು ಕೂಡಾ ಪಾಪದಿಂದ ಇರುತ್ತಾರೆ ಎಂದು ಫುಕೋ ಹೇಳುತ್ತಾನೆ.ಕಾರಣ ಎನ್ನುವುದು ಆಧುನಿಕ ಸಮಾಜದಲ್ಲಿ ಹೇಗೆ ಒಂದು ಮಹತ್ವದ ಪರಿಣಾಮವನ್ನು ಉಂಟು ಮಾಡಿದೆ ಎನ್ನುವುದೂ ಅವನಿಗೆ ತಿಳಿದಿದೆ. ವೈದ್ಯ ವಿಜ್ಞಾನ ಎನ್ನುವುದು ಒಂದು ಮುಗಿದ ಅಧ್ಯಾಯ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ವೈದ್ಯಕೀಯ ಎನ್ನುವುದು ಯಾವತ್ತೂ ಬೆಳೆಯುತ್ತದೆ. ವೈದ್ಯ ಶಾಸ್ತ್ರ ಎನ್ನುವುದು ಕೂಡಾ ರಾಜಕೀಯವಾಗಿದೆ. ಅದನ್ನು ನಾವು ಬರೀ ಒಂದು ವೈದ್ಯಕೀಯವಾದ ವಿಜ್ಞಾನ ಎಂದು ತಿಳಿಯಬೇಕಾಗಿಲ್ಲ. ಔಷಧ ಎನ್ನುವುದು ಮನುಷ್ಯರನ್ನು ಒಂದು ವಸ್ತು ಎನ್ನುವಂತೆ ನೋಡುತ್ತದೆ. ಅದು ಮನುಷ್ಯರನ್ನು ಮತ್ತು ಮೃಗಗಳನ್ನು ಬೇರೆ ಮಾಡುವುದಿಲ್ಲ.

*** (ಫುಕೋ – ಕೀ ಕಾನ್ಸೆಪ್ಟ್ಸ್)**

೨೦

ಪ್ರಾಕ್ತನ ಶಾಸ್ತ್ರ ಮತ್ತು ಲಕ್ಷಣ ಶಾಸ್ತ್ರ

ಇತಿಹಾಸಕ್ಕೆ ಸಾಂಪ್ರದಾಯಿಕ ಹೆಸರು ಪ್ರಾಕ್ತನ ಶಾಸ್ತ್ರ. (ದಿ ಆರ್ಡರ್ ಆಫ್ ಥಿಂಗ್ಸ್) ಇದನ್ನು ಹೇಳುವಾಗ ಫುಕೋ ಅತ್ಯಂತ ಮಹತ್ವದ ವಿಚಾರವನ್ನು ನಮ್ಮ ಮುಂದೆ ಇಡುತ್ತಾನೆ. ಪ್ರಾಕ್ತನ ಎನ್ನುವುದು ಅವನಲ್ಲಿ ಬರೀ ವಿಶೇಷಣವು ಮಾತ್ರವೇ ಅಲ್ಲ ಎನ್ನುವುದನ್ನು ನಾವು ಅವನ ಬರಹಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗೆಂದು ಅದು ಒಂದು ಹಂತದಲ್ಲಿ ರೂಪಕವೂ ಆಗುತ್ತದೆ. ಅವನು ಜ್ಞಾನಕ್ಕೆ ಮತ್ತು ಪ್ರಾಕ್ತನ ಶಾಸ್ತ್ರಕ್ಕೆ ಒಂದು ಸಂಬಂಧವು ಇದೆ ಎಂದು ಹೇಳುತ್ತಾನೆ. ಹಸ್ರೆಲ್ ಹೇಳುವ ಕೆಲವು ವಿವರವನ್ನು ತನ್ನ ಚರ್ಚೆಗೆ ತಂದಿದ್ದಾನೆ. ಹಸ್ರೆಲ್ ಅತ್ಯಂತ ಸುಪ್ರಸಿದ್ಧವಾದ ಒಂದು ಸಿದ್ಧಾಂತವನ್ನು ಚಾಲ್ತಿಗೆ ತಂದ. ಅದನ್ನು ತೀರಾ ಸರಳೀಕರಣ ಮಾಡಿ ಹೇಳುವುದಿದ್ದರೆ – ಮೆನಾಲಜಿ. ಇದು ನನ್ನ ಅನುಭವ ಮತ್ತು ನನ್ನ ಪ್ರಜ್ಞೆ ಎನ್ನುವುದನ್ನು ಸೂಚಿಸುತ್ತದೆ. ಇದರಲ್ಲಿ ವ್ಯಕ್ತಿ ಮತ್ತು ಅವನ ಅನುಭವ ಎನ್ನುವುದು ಅತ್ಯಂತ ಮುಖ್ಯವಾಗಿದೆ. ಹಸ್ರೆಲ್ ಇದನ್ನು ಒಂದು ತಾತ್ವಿಕವಾದ ಸೂತ್ರದಂತೆ ಮಂಡಿಸಿದ್ದಾನೆ. ಸಾಹಿತ್ಯದಲ್ಲಿ ಇದನ್ನು ಲಕ್ಷಣಶಾಸ್ತ್ರ ಎನ್ನುವ ಅರ್ಥದಲ್ಲಿ ಬಳಸುತ್ತಾರೆ. ಒಂದು ವಸ್ತುವನ್ನು ನಾವು ನಮ್ಮ ಭಾಷೆಗೆ ದಕ್ಕಿದ ಥರ ಹೇಳುತ್ತೇವೆ. ವಸ್ತು ಮತ್ತು ಅದರ ಅನುಭವ ಎನ್ನುವುದು ಇಲ್ಲಿ ಮುಖ್ಯ. ಮೆನಾಲಜಿಯು ವಸ್ತು ಮತ್ತು ಅದರ ಆಗುವಿಕೆಯನ್ನು ಹೇಳುತ್ತದೆ. (ಬೀಯಿಂಗ್) ಎರಡನೆಯದಾಗಿ ಅದು ಜ್ಞಾನವನ್ನು ಕುರಿತ ಅಧ್ಯಯನದ ವಿಧಾನವನ್ನು ಸೂಚಿಸುತ್ತದೆ. ತರ್ಕ ಮತ್ತು ನೀತಿ ಶಾಸ್ತ್ರವನ್ನು ಕೂಡಾ ಅದು ನಿರೂಪಿಸುತ್ತವೆ. ಅದನ್ನು ಮನಸ್ಸಿನ ತತ್ವಜ್ಞಾನ ಎಂದೂ ಅನೇಕರು ಹೇಳಿದ್ದಾರೆ. ಅನುಭವ ಮತ್ತು ಅದರ ವಿವಿಧ ಸಾಧ್ಯತೆಯನ್ನು ವಿಶ್ಲೇಷಣೆ ಮಾಡುತ್ತದೆ. ಆಲೋಚನೆ, ನೆನಪು, ಕಲ್ಪನೆ, ಬಯಕೆ, ಕ್ರಿಯೆ, ಮುಂತಾದವು ಬರುತ್ತವೆ. ಹಸ್ರೆಲ್ ಇದನ್ನು ಹೇಳುವಾಗ ಉದ್ದೇಶಿತ ಎಂದು ಗುರುತಿಸುತ್ತಾನೆ. ಪ್ರಜ್ಞೆ ಮತ್ತು ಅನುಭವದ ವಿವರಣೆಯಲ್ಲಿ ಹಸ್ರೆಲ್ ಚರವಾದ ಅರಿವು, ಅವಕಾಶ ಮತ್ತು ಅದರ ಅರಿವು, ಗಮನಕ್ಕೆ ಬರುವ ಸಂಗತಿಗಳು

ಮುಂತಾದವುಗಳನ್ನು ಹೇಳುತ್ತಾನೆ. ಇದನ್ನು ನೋಡಿದರೆ ನಮಗೆ ಫುಕೋ ನೇರವಾಗಿ ಅರ್ಥವಾಗುತ್ತಾನೆ. ಅವನು ಸತ್ಯ ಎನ್ನುವುದು ನಮಗೆ ಒಂದು ಜೀವಂತವಾದ ಅನುಭವ ಎಂದು ಕರೆಯುತ್ತಾನೆ. ಫುಕೋ ಆಲೋಚನೆ ಮತ್ತು ನಮ್ಮ ಅರಿವು ಎನ್ನುವುದು ವಾಸ್ತವವಾಗಿ ಅಚಾರಿತ್ರಿಕವಾದ್ದು ಅಲ್ಲ ಎನ್ನುತ್ತಾನೆ. ಪ್ರಾಕ್ತನ ಎನ್ನುವುದು ಒಂದು ಬಗೆಯಲ್ಲಿ ಜಗತ್ತಿನ ಕುರಿತಾದ ಅರಿವೂ ಹೌದು. ಪ್ರಾಕ್ತನ ಎನ್ನುವುದು ಒಂದು ದೃಷ್ಟಿಯಲ್ಲಿ ಜ್ಞಾನ ಮತ್ತು ಅದರ ವಿವಿಧ ಸ್ವರೂಪಗಳನ್ನು ಒಂದು ಸನ್ನಿವೇಶದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಕ್ರಮವೂ ಆಗಿರುತ್ತದೆ.. ಪ್ರಾಕ್ತನ ಎನ್ನುವುದು ಬರೀ ಒಂದು ಚಟುವಟಿಕೆಯು ಅಲ್ಲ. ಅದರ ಬದಲಿಗೆ ಒಂದು ಅದು ಒಂದು ನಿರ್ದಿಷ್ಟವಾದ ಘಟನೆ ಅಥವಾ ಒಂದು ನಿರ್ದಿಷ್ಟವಾದ ಸಂಗತಿಗಳ ಜ್ಞಾನ ಪೂರಿತವಾದ ವಿವರಣೆ. ಒಂದು ಸನ್ನಿವೇಶವನ್ನು ನಾವು ಜ್ಞಾನದ ಮೂಲಕ ಗ್ರಹಿಸಿಕೊಳ್ಳುವುದು ಅತ್ಯಂತ ಅಗತ್ಯ. ಪ್ರಾಕ್ತನ ಎನ್ನುವುದು ಹಿಂದೆ ನಡೆದು ಹೋದ ಸಂಗತಿಗಳ ನಿಜವಾದ ವಿವರಣೆಯೂ ಹೌದು. ಹಾಗೆ ನೋಡಿದರೆ ಪ್ರಾಕ್ತನ ಎನ್ನುವುದು ತುಂಬಾ ಹಿಂದಿನದು ಎನ್ನುವುದನ್ನು ಧ್ವನಿಸುತ್ತದೆ. ಅದು ಒಂದು ವಿಧಾನವು ಮಾತ್ರ. ಪ್ರಾಕ್ತನ ಎನ್ನುವುದು ನಿರ್ದಿಷ್ಟವಾದ ಸಂಕಥನವೂ ಹೌದು. ಜ್ಞಾನ ಎನ್ನುವುದಕ್ಕೆ ಒಂದು ಪ್ರಾಕ್ತನವಾದ ರೂಪವು ಇದೆ ಎನ್ನುವುದು ಅವನ ಅಭಿಪ್ರಾಯ. ಇದನ್ನು ಭಾಷೆ ಮತ್ತು ಅದರ ಬೆಳವಣಿಗೆಯಲ್ಲಿ ಗುರುತಿಸಬಹುದು. ಅವನು ಇದನ್ನು ಹೇಳುವಾಗ ಒಂದು ತತ್ವಜ್ಞಾನ ಎನ್ನುವಂತೆ ವಿವರಿಸುವುದಿಲ್ಲ. ಇದರ ಬಗ್ಗೆ ನಮಗೆ ಹೆಚ್ಚು ಜ್ಞಾನವು ಬೇಕಾಗುತ್ತದೆ ಎಂದು ಫುಕೋ ಭಾವಿಸಿಕೊಳ್ಳುತ್ತಾನೆ. ಮಾನವಿಕ ಅಧ್ಯಯನದಲ್ಲಿ ಇದು ಅತ್ಯಂತ ಮಹತ್ವದ್ದೂ ಹೌದು. ಹಾಗೆಂದು ಇದನ್ನು ಅಧ್ಯಯನ ಮಾಡಲು ನಮಗೆ ಒಂದು ವಿಧಾನವೂ ಬೇಕಾಗುತ್ತದೆ. ದ್ವಂದ್ವಾತ್ಮಕವಾದ ಒಂದು ವಿಧಾನದಿಂದ ಮಾತ್ರವೇ ಜ್ಞಾನ ಮತ್ತು ಅದರ ಪ್ರಾಕ್ತನ ರೂಪವನ್ನು ಗ್ರಹಿಸಲು ಸಾಧ್ಯವಿದೆ. ಅಷ್ಟೇ ಅಲ್ಲ, ಪುಕೋ ಇದನ್ನು ಹೇಳುವಾಗಲೂ ಚರಿತ್ರೆಯನ್ನು ಮರೆಯುವುದಿಲ್ಲ.

ಫುಕೋ ಚರಿತ್ರೆಯನ್ನು ಸಾಂಪ್ರದಾಯಿಕ ವಿದ್ವಾಂಸರಂತೆ ನೋಡುವುದಿಲ್ಲ. ಅವನು ಚರಿತ್ರೆಯ ಯಾವುದೇ ಪ್ರಶ್ನೆಗೆ ಒಂದು ಸೈದ್ಧಾಂತಿಕವಾದ ನೆಲೆಯು ಇದೆ ಎಂದು ಹೇಳುತ್ತಾನೆ. ಅದಕ್ಕೆ ಕೆಲವು ಮಿತಿಗಳೂ ಇವೆ ಎನ್ನುವುದು ಅವನ ಅಭಿಪ್ರಾಯ. ಚರಿತ್ರೆಯು ಒಂದೇ ರೀತಿಯಲ್ಲಿ ಬೆಳೆದು ಬಂದಿಲ್ಲ. ಅದರ ಮಧ್ಯೆ ಕೆಲವು ಮೌನಗಳೂ ಇರುತ್ತವೆ ಚರಿತ್ರೆಯಲ್ಲಿ ಮಧ್ಯೆ ಒಂದು ಛಿದ್ರೀಕರಣವೂ ಇರುತ್ತವೆ.

ಚರಿತ್ರೆಯನ್ನು ಈವತ್ತು ನಾವು ಹೇಗೆ ಅರ್ಥ ಮಾಡಿಕೊಳ್ಳಬೇಕೆನ್ನುವುದೂ ಒಂದು ಸಮಸ್ಯೆ. ಚರಿತ್ರೆಗೆ ಮತ್ತು ಅದರ ಅಧ್ಯಯನಕ್ಕೆ ಒಂದು ನಿಯಮವೂ ಇರುತ್ತದೆ. ಆದ್ದರಿಂದ ಈವತ್ತು ನಾವು ಯಾವ ನಿಯಮದ ಮೂಲಕ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವುದು ಎನ್ನುವುದೇ ಪ್ರಶ್ನೆ. ಅದನ್ನು ಫುಕೋ ಕೇಳುತ್ತಾನೆ.

ಚರಿತ್ರೆಯನ್ನು ನಾವು ಕಟ್ಟುತ್ತೇವೆ. ಆದ್ದರಿಂದ ನಮ್ಮ ಕ್ರಿಯಾಶೀಲತೆ ಮತ್ತು ಚರಿತ್ರೆಗೆ ಒಂದು ಸಂಬಂಧವು ಇದೆ. ಚರಿತ್ರೆಯನ್ನು ನಮ್ಮ ಆಲೋಚನೆ ಮತ್ತು ನಮ್ಮ ಕ್ರಿಯಾಶೀಲತೆಯ ಮೂಲಕವೇ

ವ್ಯಕ್ತವಾಗುತ್ತವೆ. ಅದರ ಹಿಂದೆ ನಮ್ಮ ಜ್ಞಾನವೂ ಇರುತ್ತದೆ. ಆದ್ದರಿಂದ ನಾವು ಚರಿತ್ರೆಯನ್ನು ನೋಡುವುದು ಅಂದರೆ ನಮಗೆ ದತ್ತವಾಗಿ ಬಂದ ಜ್ಞಾನದ ರೂಪಗಳನ್ನು ಗ್ರಹಿಸುವುದೂ ಹೌದು. ಆದರೆ ಯಾವುದೇ ಚರಿತ್ರೆಯನ್ನು ನಾವು ಕ್ರಿಯಾಶೀಲತೆಯಿಂದ ಹೊರತಾದ್ದು ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅದರಲ್ಲಿ ಅನೇಕವು ಹೆಚ್ಚು ನಿರ್ಧಾರಾತ್ಮಕವೂ ಆಗಿರುತ್ತದೆ. ಅನೇಕ ವ್ಯಕ್ತಿಗಳ ಪರಸ್ಪರ ಸಂಬಂಧ, ಅವರ ಚಲನಶೀಲತೆಯು ಚರಿತ್ರೆಯನ್ನು ಕಟ್ಟಲು ಸಹಾಯವನ್ನು ಮಾಡುತ್ತದೆ.

ಚರಿತ್ರೆ ಮತ್ತು ಅದರ ಬೆಳವಣಿಗೆಯಲ್ಲಿ ಒಂದು ಚಲನೆ ಎನ್ನುವುದು ಇರುತ್ತದೆ. ಮನುಷ್ಯನ ಜ್ಞಾನ ಮತ್ತು ಅವನ ಹುಡುಕುವಿಕೆಯಿಂದ ಚರಿತ್ರೆಯು ನಿರ್ಮಾಣವಾಗುತ್ತದೆ. ಚರಿತ್ರೆಯ ಮೇಲುಭಾಗದಿಂದ ನೋಡಿಕೊಂಡು ಇದು ಚರಿತ್ರೆಯ ಎಂದು ಹೇಳಲು ಬರುವುದೂ ಇಲ್ಲ. ಅದುದರಲ್ಲಿ ಕೆಲವು ಸಂಕೇತಗಳೂ ಹೌದು. ಆದ್ದರಿಂದ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದರ ಹಿಂದೆ ಇರುವ ತತ್ವಜ್ಞಾನ, ಕಲ್ಪನೆ, ಸಾಹಿತ್ಯ ಮುಂತಾದವುಗಳನ್ನು ಗ್ರಹಿಸುವುದು. ಈವತ್ತು ಚರಿತ್ರೆ, ಸೌಂದರ್ಯಶಾಸ್ತ್ರ, ತತ್ವಜ್ಞಾನಗಳು ಮಹಾನ್ ಸಂಕಥನಗಳೂ ಆಗಿವೆ. ಫುಕೋ ಇದನ್ನು ಮೊದಲು 1974ರಲ್ಲಿ ಬಳಸಿದ್ದಾನೆ. ಅವನಲ್ಲಿ ಇದು ದೈಹಿಕ ಚರಿತ್ರೆ ಮತ್ತು ಅದರ ಭಾಗವಾಗಿದೆ. ಔಷಧಿಗಳು ಮತ್ತು ಅದರ ಪರಿಣಾಮಗಳನ್ನು ಕುರಿತು ಹೇಳುವಾಗ ಅವನಿಗೆ ಈ ಸಮಸ್ಯೆಯು ಬಂದಿತ್ತು. ಜನಾಂಗ ಮತ್ತು ಅದರ ಚರಿತ್ರೆಗೆ ಒಂದು ನಿರ್ದಿಷ್ಟವಾದ ಆಯಾಮವು ಇದೆ ಎನ್ನುವುದು ಅವನ ನಿಲುವು. ಔಷಧಿಗಳು, ದೇಹ, ಜನಾಂಗ ಮತ್ತು ಚರಿತ್ರೆಗೆ ಒಂದು ನಿರ್ಣಾಯಕವಾದ ಸಂಬಂಧವಿದೆ ಎಂದು ಅವನು ಹೇಳುತ್ತಾನೆ. ದೈಹಿಕ ಚರಿತ್ರೆಗೆ ಮತ್ತು ಜನಾಂಗ ವಾದಕ್ಕೆ ಒಂದು ಸಂಬಂಧವು ಇದೆ. ಜೀವ ವಿಜ್ಞಾನಿಗಳು ಇದನ್ನು ವಿವರಿಸುವಾಗ ಕೇವಲ ಅಂಕಿ ಅಂಶಗಳನ್ನು ಗಣನೆಗೆ ತಂದುಕೊಳ್ಳುತ್ತಾರೆ. ವಂಶ ಮತ್ತು ಅದರ ಪಾವಿತ್ರ್ಯ ಎನ್ನುವುದು ಅಷ್ಟು ಸರಳವಾದ ಸಂಗತಿಯು ಅಲ್ಲ ಎಂದು ಅವನು ವಾದಿಸುತ್ತಾನೆ. ಯಾವುದನ್ನು ದೈಹಿಕ ಚರಿತ್ರೆ ಎಂದು ಹೇಳುತ್ತೇವೆಯೋ ಅದಕ್ಕೆ ಒಂದು ಲಕ್ಷಣವೂ ಇರುತ್ತದೆ. ದೇಹ ಅಥವಾ ಜೈವಿಕ ಚರಿತ್ರೆ ಎನ್ನುವುದು ನಮಗೆ ತಿಳಿಯುವ ಹಾಗೆ ಅದು ಅನೇಕತೆಯನ್ನು ಸೂಚಿಸುತ್ತದೆ. ಜನಾಂಗವಾದ ಎಂದು ಹೇಳುವಾಗ ನಾವು ಅದನ್ನು ಅಂಕೆ ಸಂಖ್ಯೆಗಳನ್ನು ಹೇಳುವುದು ಸರಿಯಲ್ಲ. ಮಾನವೀಯತೆಯನ್ನು ಕುರಿತು ಮಾತಾಡುವಾಗ ಅದನ್ನು ದೇಹದ ಅತ್ಯಂತ ವಿಶಿಷ್ಟವಾದ ಸಂಕಥನ ಎಂದು ಭಾವಿಸಬೇಕು ಎಂದು ಪುಕೋ ಭಾವಿಸುತ್ತಾನೆ. ಅವನು ಇದನ್ನು ಹೇಳುವಾಗ ಆಧುನಿಕ ಜೀವನದ ಕ್ರಮವು ಹೇಗೆ ಬದಲಾಗಿದೆ ಎಂದೂ ಹೇಳುತ್ತಾನೆ. ಸಹಜವಾದ ಚರಿತ್ರೆಗಳು, ಜೀವನ ಕ್ರಮ, ಜೀವಶಾಸ್ತ್ರಗಳನ್ನು ಗಣನೆಗೆ ತಂದಿದ್ದಾನೆ. ಜೈವಿಕವಾದ ಚರಿತ್ರೆ ಅಥವಾ ದೈಹಿಕವಾದ ಚರಿತ್ರೆ ಎನ್ನುವುದು ಒಂದು ಅರ್ಥದಲ್ಲಿ ಅತ್ಯಂತ ಮುಖ್ಯವಾದ ಪರಿಕಲ್ಪನೆಯೂ ಹೌದು. ಆಧುನಿಕ ಅಧಿಕಾರ ಕೇಂದ್ರಗಳು ಮನುಷ್ಯ ಮತ್ತು ಅವನ ಸ್ವಭಾವವನ್ನು ಬದಲಿಸಿದೆ. ಆದ್ದರಿಂದ ಮನುಷ್ಯನ ಜೀವನದ ಬಗ್ಗೆ ಇರುವ ದೃಷ್ಟಿಕೋನವೂ ಬೇರೆಯಾಗಿದೆ. ಕಾಂಟ್ ಮೂರು ಪ್ರಶ್ನೆಗಳನ್ನು ಕೇಳಿದ್ದ: ನನಗೆ ಯಾವುದು ತಿಳಿದಿದೆ? ನಾನು ಏನು ಮಾಡಬೇಕು? ನಾನು ಯಾವುದನ್ನು ನಿರೀಕ್ಷಿಸಬಹುದು? ಇದು ತತ್ವಜ್ಞಾನಗಳ ಪ್ರಶ್ನೆಯೂ

ಹೌದು. ಆದರೆ ಇದು ನಮಗೆ ಈವತ್ತಿಗೂ ಹೆಚ್ಚು ಅನ್ವಯವಾಗುತ್ತದೆ. ದೇಹ ಮತ್ತು ನಮ್ಮ ಮನಸ್ಸುಗಳ ಹಿನ್ನೆಲೆಯು ಒಂದು ಚರಿತ್ರೆಯ ಜೊತೆಗೆ ಅನುಸಂಧಾನವನ್ನು ಸ್ಥಾಪಿಸುತ್ತದೆ. ಮನುಷ್ಯನ ದೇಹವು ಒಂದು ಕಡೆಯಿಂದ ವೈದ್ಯಕೀಯವಾದ ಹಿನ್ನೆಲೆಯನ್ನು ಸೂಚಿಸುತ್ತದೆ. ತನಗೆ ಆಗುವ ನೋವು ಮತ್ತು ನಲಿವುಗಳನ್ನು ಅವನು ವ್ಯಕ್ತ ಮಾಡಬಲ್ಲ. ಇನ್ನೊಂದು ಕಡೆಯಿಂದ ಅದು ಸಹಜವಾದ ಒಂದು ಚರಿತ್ರೆಯನ್ನು ಅವಲಂಬಿಸುತ್ತದೆ. ಈ ದೃಷ್ಟಿಯಿಂದ ಡಾರ್ವಿನ್ ಸಿದ್ಧಾಂತವು ಹೆಚ್ಚು ಮುಖ್ಯವಾಗುತ್ತದೆ, ಆದರೂ ಅದರ ಹಿಂದೆ ಬಹಳ ದೊಡ್ಡ ಇತಿಹಾಸವು ಇದೆ ಎಂದು ಫುಕೋ ಹೇಳುತ್ತಾನೆ.

ಈವತ್ತು ನಾವು ಸಾಹಿತ್ಯ ಮತ್ತು ಚರಿತ್ರೆಯನ್ನು ಬೇರೆ ಬೇರೆ ವರ್ಗಗಳು ಎಂದು ಹೇಳುತ್ತೇವೆ. ಆದರೆ ಅವುಗಳು ಪ್ರತ್ಯೇಕವಾಗುವುದಿಲ್ಲ. ಚರಿತ್ರೆಯನ್ನು ಆಧುನಿಕ ಯುಗವು ಯೋಚನೆ ಮಾಡುತ್ತಿರುವ ಕ್ರಮಕ್ಕೂ ಚರಿತ್ರೆಗೂ ನೇರ ಸಂಬಂಧವು ಇದೆ. ಆದರೆ ಮಧ್ಯಕಾಲೀನ ಸಮಾಜದಲ್ಲಿ ಕಾಲ ಮತ್ತು ಚರಿತ್ರೆಯ ಕಲ್ಪನೆಯು ಬೇರೆ ಇತ್ತು.. ಅದು ಕಾಲಕ್ರಮವೂ ಹೌದು. ಆಗ ಸಂಸ್ಕೃತಿ ಮತ್ತು ವ್ಯಕ್ತಿಗೆ ಒಂದು ಸಂಬಂಧವು ಕಲ್ಪಿತವಾಗಿತ್ತು ಎಂದು ಫುಕೋ ಭಾವಿಸುತ್ತಾನೆ. ಚರಿತ್ರೆ ಮತ್ತು ವ್ಯಕ್ತಿಗೆ ಯಾವ ಸಂಬಂಧವು ಇದೆ ಎಂದು ಅವನು ಪರಿಶೀಲಿಸುತ್ತಾನೆ.ಹಾಗೆ ನೋಡಿದರೆ ಹತ್ತೊಂಬತ್ತನೆಯ ಶತಮಾನದಲ್ಲಿ ಕಥನಗಳು, ತತ್ವಜ್ಞಾನ, ಚರಿತ್ರೆಯ ಬರಹಗಳು ಅತ್ಯಂತ ಮುಖ್ಯವಾದ ಸಂಕಥನಗಳೂ ಆಗಿದ್ದವು. ಅದರ ಜೊತೆಗೆ ಅದೇ ಕಾಲಕ್ಕೆ ಚರಿತ್ರೆ ಮತ್ತು ಕಥನಗಳು ಹೇಗೆ ಭಿನ್ನವಾಗುತ್ತವೆ ಎಂದು ಚರ್ಚೆಯೂ ಪ್ರಾರಂಭವಾಯಿತು. ಚರಿತ್ರೆಯನ್ನು, ತತ್ವಜ್ಞಾನವನ್ನು ಮತ್ತು ಕಥನಗಳ ಕುರಿತು ಹೇಳಲು ಕೆಲವು ಮುಖ್ಯವಾದ ಗುಣಗಳೂ ಬೇಕಾದವು. ಆದರೆ ಇವು ಸುಮ್ಮನೆ ಕೃತಕವಾದ ಸಂಗತಿಗಳೂ ಆಗಿದ್ದವು.

ಫುಕೋ ಬೇರೆ ಥರ ಅರ್ಥಮಾಡಿಕೊಂಡಿದ್ದಾನೆ. ನಾವು ಯಾವುದನ್ನು ಹುಚ್ಚುತನವೆಂದು ಹೇಳುತ್ತೇವೆಯೋ ಅದರ ರೂಪವನ್ನು ಚರಿತ್ರೆಯು ನಿರ್ಧಾರ ಮಾಡಿದೆ ಎಂದು ಫುಕೋ ಭಾವಿಸುತ್ತಾನೆ. ಆದರೆ ಇದಕ್ಕೆ ಅತ್ಯಂತ ಮಹತ್ವದ ಪ್ರತಿಕ್ರಿಯೆಯನ್ನು ಡೆರಿಡಾ ನೀಡಿದ್ದಾನೆ. ವಾಸ್ತವವಾಗಿ ಇದು ನಮಗೆ ಅತ್ಯಂತ ತಾತ್ವಿಕವಾದ ಒಂದು ಸಮಸ್ಯೆಯೂ ಆಗಿದೆ. ನಾವು ಯಾರನ್ನು ನೋಡುವುದು ಮತ್ತು ಯಾರನ್ನು ಗ್ರಹಿಸುವುದು ಎನ್ನುವುದು ಅತ್ಯಂತ ಮೂಲಭೂತವಾದ ಒಂದು ಸಮಸ್ಯೆಯೂ ಹೌದು. ನಾವು ವಾಸ್ತವವನ್ನು ನೋಡಿಕೊಳ್ಳುವೂ ಒಂದು ತಾತ್ವಿಕ ಪ್ರಶ್ನೆಯು ಆಗುತ್ತದೆ ಎಂದು ಮಾರ್ಕ್ಸವಾದಿಗಳು ಹೇಳುತ್ತಾರೆ. ನಾವು ಈವತ್ತು ತಾತ್ವಿಕತೆಯನ್ನು ಬಿಟ್ಟು ಉಳಿದ ವಿಚಾರಗಳನ್ನು ಅತ್ಯಂತ ಚೆನ್ನಾಗಿ ವಿವರಿಸುತ್ತಿದ್ದೇವೆ. ನಾವು ಈವತ್ತು ಜಗತ್ತಿನಲ್ಲಿ ಏನು ನೋಡುತ್ತಿದ್ದೇವೆಯೋ ಅದರ ವಿವಿಧ ರೂಪಗಳನ್ನು ಪ್ರತ್ಯೇಕವಾದ ಅಸ್ತಿತ್ವವು ಇರುವ ಸಂಗತಿ ಎಂದು ಭಾವಿಸುತ್ತೇವೆ. ಆದರೆ ವಿಷಯವು ಅಷ್ಟು ಸುಲಭವಲ್ಲ. ಈವತ್ತು ಚರಿತ್ರೆಯಲ್ಲಿ ಅನೇಕ ವಿದ್ಯಮಾನಗಳು ನಡೆಯುತ್ತವೆ. ಅವುಗಳು ಚರಿತ್ರೆಯನ್ನು ಬಿಟ್ಟು ಇಲ್ಲವೆಂದು ನಾವು ಗ್ರಹಿಸಬೇಕು.

ಹೆಗೆಲ್‌ನ ನಿರೂಪಣೆಯಲ್ಲಿ 'ಸತ್ಯದ ಚರಿತ್ರೆ' ಚರಿತ್ರೆಯ ಸತ್ಯ'ದ ನಡುವೆ ದ್ವಂದ್ವಾತ್ಮಕವಾದ ಸಂಬಂಧವು ಏರ್ಪಟ್ಟಿದೆ. ಮತ್ತು ಹೆಗೆಲ್ ನಿರೂಪಣೆಯೆನ್ನುವುದು ಒಂದು ಮಹಾಗಾಥೆಯಂತೆ ಕಾಣಿಸುತ್ತದೆ. ಇದರಲ್ಲಿ 'ಅಂತಿಮ ಸತ್ಯ' ಮತ್ತು ಸ್ಥಳ ಮತ್ತು ಸಮಯದ ಪರಿಭಾಷೆಯು ಮುಖ್ಯವಾದ ಪಾತ್ರವನ್ನು ವಹಿಸಿದೆ

ಮಾತಿನ ಭಾಷೆ ಮತ್ತು ಬರಹದ ಭಾಷೆಯ ನಡುವೆ ಇರುವ ಅಂತರವು ಹೆಗಲ್‌ನಲ್ಲಿ ವ್ಯಕ್ತವಾಗುತ್ತದೆಯಾದರೂ ಅದರಲ್ಲಿ ನಿರೂಪಣೆ ಮಾತ್ರವೇ ಇದೆ. ಆದರೆ ಡೆರಿಡಾನ ಪ್ರಕಾರ ಬರಹವೆನ್ನುವುದು ಧ್ವನಿಮಾಧ್ಯಮಗಳನ್ನು ಅವಲಂಬಿಸಿಕೊಂಡಿಲ್ಲ. ಯಾವುದೇ ಅಕ್ಷರವನ್ನು ಬರೆಯುವಾಗಲೂ ಅಲ್ಲೊಂದು ಮೌನವಿರುತ್ತದೆ. ಆದರೆ ಮಾತಿನ ಭಾಷೆಯು ಹಾಗಲ್ಲ. ಮಾತಿನ ಭಾಷೆಯು ವಿವರಣಾತ್ಮಕ ಹಾಗೂ ಒಂದು ಆದರ್ಶ ಕಲ್ಪನೆಯನ್ನು ಇಟ್ಟುಕೊಂಡಿರುವ ಅಂಶವೂ ಹೌದು. ಹೀಗಾಗಿ ಬರಹ ಭಾಷೆಯನ್ನು ಒಂದು ಪ್ರತ್ಯೇಕ ವರ್ಗವಾಗಿ ಹೆಗಲ್ ಪರಿಗಣಿಸಿದ್ದನ್ನು ಡೆರಿಡಾ ಗಂಭೀರವಾಗಿ ಪರಿಗಣಿಸುತ್ತಾನೆ. ಹೆಗಲ್ ಹೇಳಿರುವ ಮತ್ತೊಂದು ಅಂಶವೆಂದರೆ ಬರಹದ ಭಾಷೆಯು ತರ್ಕಬದ್ಧವಾದ ಅರ್ಥ; ಅನನ್ಯತೆ; ಸತ್ಯಗಳನ್ನು ಬೇರೆ ರೀತಿಯಲ್ಲಿ ನಿರೂಪಿಸುತ್ತದೆ. ಈ ವಾದಕ್ಕೆ ಬಹು ಕಾರಣಗಳು ಕಾಣಿಸುವುದಿಲ್ಲ. ಬರಹದ ಭಾಷೆಯು ಅನೇಕ ರೂಪಗಳನ್ನು ಹೊಂದಿರುತ್ತದೋ ಅದು ಸಂಸ್ಕೃತಿಯ ಕಾರಣಕ್ಕೆ ಅಲ್ಲ. ಅದರ ಬದಲು ಅದರಲ್ಲಿ ಬಳಸುವ ಭಾಷಿಕ ಚಿಹ್ನೆಯ ಕಾರಣಕ್ಕೆ ಹಾಗೆಯೇ ಬೇರೆ ಬೇರೆ ಅಧ್ಯಯನ ಶಿಸ್ತುಗಳು ಬರಹದ ಬೇರೆ ಬೇರೆ ಚಿಹ್ನೆಗಳನ್ನು ಬಳಸಿಕೊಂಡು ಅವಕ್ಕೆ ಬೇರೆ ಅರ್ಥಗಳನ್ನು ಕೊಡುತ್ತದೆ. ಈ ದೃಷ್ಟಿಯಿಂದ ಪ್ಲೇಟೋ; ಅರಿಸ್ಟಾಟಲ್, ಹೆಗಲ್ ಮುಂತಾದವರು ಮಾತಿನ ಭಾಷೆಗೆ ಹೆಚ್ಚಿನ ಪ್ರಾಶಸ್ಯವನ್ನು ಕೊಟ್ಟರು. ಆದರೆ ಬರಹದ ಭಾಷೆಗೆ ಅಲ್ಲ. ಇದು ಡೆರಿಡಾನ ವಾದ. ಡೆರಿಡಾನ ಎರಡನೆಯ ವಾದವೆಂದರೆ ಬರಹದ ಭಾಷೆಯಲ್ಲಿ ಧ್ವನಿಯ ಯಥಾ ರೂಪ ಸಾಧ್ಯವಿಲ್ಲ. ಬರಹದ ಭಾಷೆಯು ಚಿತ್ರಸ್ವರೂಪ ಅಥವಾ ಲಿಖಿತರೂಪ ಬರೆಯುವಾಗ ಧ್ವನಿಯನ್ನು ಹಾಗೆಯೇ ಬರೆಯುವುದು ಅಸಾಧ್ಯ. ಸಂವೇದನೆಗೆ ಹಾಗೆಯೇ ಮಾತು ಎನ್ನುವುದು ಧ್ವನಿ ಉಚ್ಚಾರಣೆಗೆ ಸಂಬಂಧಿಸಿದ ಕ್ರಿಯೆ. ಯಾವುದು ನಮ್ಮ ಸಂವೇದನೆಗೆ ತಲುಪಿದೆಯೋ ಅದನ್ನು ನಾವು ಅಭಿವ್ಯಕ್ತಿಗೊಳಿಸಲು ಪ್ರಯತ್ನಿಸುತ್ತೇವೆ. ಈ ದೃಷ್ಟಿಯಿಂದ ಮಾತು ಎನ್ನುವುದು ಸಂವೇದನೆಯ ಅಭಿವ್ಯಕ್ತಿಯ ಒಂದು ಭಾಗ.ನವ ಪ್ಲೇಟೋ ತತ್ತ್ವಜ್ಞಾನಿಗಳು ಕೇಳುವಿಕೆಯ ಹಿಂದಿರುವ ಅನುಭವವನ್ನು ಕುರಿತು ಬಹಳ ಚರ್ಚಿಸಿದ್ದಾರೆ. ಬ್ಲೇಕ್ ಕೂಡಾ ಸತ್ಯವೊಂದನ್ನು ಕಲ್ಪಿಸುವುದು ಎಂದು ಹೇಳಿರುವುದು ಗಮನಾರ್ಹ ಆದರೆ ಸಂವೇದನೆಯೊಂದರ ಮೂಲಕ ಪ್ರಾಪ್ತವಾಗುವ ಜ್ಞಾನರೂಪಗಳ ಕುರಿತು; ಅದರ ಅನುಭವಗಳ ಕುರಿತು ಹೆಗಲ್ ಮತ್ತು ಪ್ಲೇಟೋ ಸರಿಯಾಗಿ ಚರ್ಚಿಸುವುದಿಲ್ಲ. ಬರವಣಿಗೆಯೆನ್ನುವುದು ಮನಸ್ಸಿನ ಲಕ್ಷಣಗಳ ಚರಿತ್ರೆಯೆನ್ನುವುದು ಮನಸ್ಸಿನ ಲಕ್ಷಣಗಳ ಚರಿತ್ರೆಯೆನ್ನುವುದು ಸಂವೇದನೆಯ ಒಂದು ಪ್ರತಿಫಲನವೆಂದು ಭಾವಿಸುವುದರಲ್ಲಿ ಸರಿಯಲ್ಲವೆಂದು ಆತ ಹೇಳುತ್ತಾನೆ. ಬರವಣಿಗೆಯೆನ್ನುವುದು ಸಂಕೀರ್ಣವಾದ ಆಲೋಚನೆಯೊಂದರ ಸಂಕೀರ್ಣ ರೂಪ. ಈ ದೃಷ್ಟಿಯಿಂದಲೇ ಹೆಗೆಲ್‌ನ ವಾದವು ದ್ವಂದ್ವಾತ್ಮಕ ಕೇಳುವಿಕೆಯೆನ್ನುವುದು ಒಂದು ದೃಷ್ಟಿ ಅದಕ್ಕೆ ಸೈದ್ಧಾಂತಿಕ ಹಿನ್ನೆಲೆಯನ್ನು

ಒಳಗೊಂಡಿರುತ್ತದೆ. ಅದಕ್ಕೆ ಪ್ರಾಯೋಗಿಕವಾದ ಅರ್ಥಗಳಿಲ್ಲ. ಇಲ್ಲಿ ಭಾಷೆ ಮತ್ತು ಅದರ ಸಂವಹನವನ್ನು ಅದು ನೋಡುವುದೇ ಬೇರೆ ರೀತಿಯಲ್ಲಿ. ಬರಹ ಮತ್ತು ಅದರ ಮಾನ್ಯತೆಯು ಬೇರೆ ಬಗೆಯದು. ಮತ್ತು ಅದರ ಸ್ವರೂಪವನ್ನು ನಾವು ಹೀಗೆ ಎಂದು ಹೇಳಲು ಬರುವುದೂ ಇಲ್ಲ. ಯಾಕೆಂದರೆ ಯಾವುದನ್ನು ಯಾರು ಹೇಗೆ ಬರೆಯುತ್ತಾರೆ ಮತ್ತು ಅದನ್ನು ಅವರು ಯಾವ ಅರ್ಥದಲ್ಲಿ ಬಳಸುತ್ತಾರೆ ಎನ್ನುವುದು ಅವರಿಗೆ ಬಿಟ್ಟದ್ದೂ ಹೌದು. ಬರಹವು ಅವರ ನಿಲುವನ್ನು ವ್ಯಕ್ತಪಡಿಸುತ್ತದೆ. ಅದು ಅವರ ಅಗತ್ಯವೂ ಆಗಬಹುದು. ಆದರೆ ಯಾವಾಗ ಅವರು ಅದನ್ನು ವ್ಯಕ್ತಪಡಿಸುತ್ತಾರೆ ಎನ್ನುವುದು ಅವರ ಮನೋವ್ಯಾಪಾರವನ್ನೂ ಸೂಚಿಸುತ್ತದೆ. ಬರಹದ ಅಗತ್ಯ ಮತ್ತು ಮಾತಿನ ಅಗತ್ಯಗಳ ಸ್ವರೂಪವನ್ನು ನಾವು ಹೀಗೆ ಸಂದರ್ಭದ ಹಿನ್ನೆಲೆಯಲ್ಲಿ ಗ್ರಹಿಸುವ ಅಗತ್ಯವೂ ಇರುತ್ತದೆ. ಬರಹ ಮತ್ತು ಅದರ ಹಿಂದೆ ಇರುವ ತತ್ವಜ್ಞಾನವು ಒಂದು ಬಗೆಯದು. ಮತ್ತು ಅದರ ಸಾಧ್ಯತೆಯೂ ಬೇರೆ. ಮಾತಿನ ಹಿಂದೆ ಇರುವ ತತ್ವಜ್ಞಾನವೂ ಮತ್ತೊಂದು ಬಗೆಯದು. ಬರಹದ ಅಸ್ತಿತ್ವವು ನಮಗೆ ನಮ್ಮ ಕಣ್ಣಿನ ಮೂಲಕ ಗಮನಕ್ಕೆ ಬರುತ್ತದೆ.

*** ಪುಕೊ– ಕೀಕಾನ್ಸೆಪ್ಟ್ಸ್**

೨೧

ಹಣ ಮತ್ತು ವಿನಿಮಯ

ಹಣವು ನಮಗೆ ಬಯಕೆಯನ್ನು ಉತ್ಪಾದಿಸುತ್ತದೆ. ಅದು ಕೆಲವು ಸೂಚನೆಗಳನ್ನು ಕೊಡುತ್ತದೆ. ನಮ್ಮ ಭಾವನೆಗಳಿಗೂ ನಮ್ಮ ಹಣದ ವಿನಿಮಯದ ಪ್ರಶ್ನೆಗೂ ಬೇರೆ ಬೇರೆ ಸಂಬಂಧವು ಇದೆ. ಇಲ್ಲಿ ಹಣವು ಸೂಚನೆಯನ್ನು ಕೊಡುತ್ತದೆ ಎನ್ನುವುದಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಫುಕೋ ಹಣ ಮತ್ತು ವಿನಿಮಯದ ಕುರಿತು ವಿಶಿಷ್ಟ ಚರ್ಚೆ ಮಾಡಿರುವುದು ಗಮನಾರ್ಹ. ಹಣ ಮತ್ತು ಅದರ ಉದ್ದೇಶವನ್ನು ಈವತ್ತು ನಾವು ಹೇಗೆ ನೋಡುತ್ತೇವೆ ಎನ್ನುವುದು ಮಾತ್ರವೇ ಪ್ರಶ್ನೆ. ಭಾವನೆ ಮತ್ತು ಹಣಕ್ಕೆ ಸಂಬಂಧವು ಇದೆ ಎಂದು ಫ್ರಾಯ್ಡ್ ಹೇಳುತ್ತಾನೆ. ಈ ಮಾತನ್ನು ಮಾರ್ಕ್ಸ್ ಹೇಳಿದ್ದಾನೆ. ಆದರೆ ಆಧುನಿಕೋತ್ತರವಾದಿಗಳು ಹಣವನ್ನು ಸೂಚನೆಯೆಂದು ಮಾತ್ರವೇ ನೋಡಿದರೆ ಆ ಸೂಚನೆಯನ್ನು ಯಾರು ಕೊಡುತ್ತಾರೆ ಮತ್ತು ಯಾರಿಗೆ ಕೊಡುತ್ತಾರೆ ಎಂದು ಹೇಳಲು ಹೋಗುವುದೂ ಇಲ್ಲ. ಹಣವನ್ನು ಒಂದು ಮಾಧ್ಯಮ ಎಂದು ಹೇಳಿದರೆ ಅದರ ಅರ್ಥವು ಬೇರೆಯಾಗುತ್ತದೆ. ಆದರೆ ನಮಗೆ ಹಣವು ಸೂಚನೆಯು ಮಾತ್ರವೇ ಅಲ್ಲ, ಅದು ವಸ್ತು ಮತ್ತು ಅದರ ಮೌಲ್ಯವನ್ನು ಹೇಳುತ್ತದೆ. ಅದರಲ್ಲಿ ಬೇರೆ ವಿಷಯಗಳು ಸೇರಿಕೊಂಡಿರುತ್ತವೆ. ಸೂಚನೆಯಾಗಿ ಅದರ ಸ್ವರೂಪವು ಸನ್ನಿವೇಶವನ್ನು ಹೇಳುತ್ತದೆ. ಅದರ ಅಗತ್ಯವಿರುತ್ತದೆ. ಅದರಲ್ಲಿ ಬರೀ ನೀತಿಯ ಪ್ರಶ್ನೆಯು ಆಗಿಲ್ಲ. ಅದರಲ್ಲಿ ಪರಿವರ್ತನೆಯ ಗುಣವೂ ಇದೆ ಎಂದು ಮಾರ್ಕ್ಸ್ ಹೇಳುತ್ತಾನೆ. ವಸ್ತು ಮತ್ತು ಅದರ ಮೌಲ್ಯಗಳು ಯಾವತ್ತೂ ಸಂವಾದಿಯೇ ಆಗಿರುತ್ತದೆ. ಸಮಾಜ ಮತ್ತು ಅದರ ಅಗತ್ಯಗಳು ಯಾವತ್ತೂ ನಮಗೆ ಬೇರೆ ಬೇರೆ ಆವಶ್ಯಕತೆಯನ್ನು ಹುಟ್ಟುಹಾಕುತ್ತದೆ. ನಮ್ಮ ಸಮಾಜ ಮತ್ತು ಅದರ ಅಗತ್ಯಗಳು ಹೇಗೆ ಇರುತ್ತವೆಯೋ ಅದಕ್ಕೆ ಅನುಸಾರವಾಗಿಯೇ ನಮಗೆ ಹಣವು ಬೇಕಾಗುತ್ತದೆ. ನಮಗೆ ಯಾವುದು ಅಗತ್ಯವಿದೆ ಎನ್ನುವುದನ್ನು ಒಬ್ಬ ಬಂಡವಾಳವಾದಿಯು ತಿಳಿದುಕೊಂಡಿರುತ್ತಾನೆ. ಆದ್ದರಿಂದ ಬಂಡವಾಳವಾದಿಯು ನಮಗೆ ಮಧ್ಯವರ್ತಿಯೂ ಆಗಿರುತ್ತಾನೆ. ಉತ್ಪಾದನೆ ಮತ್ತು ನಮ್ಮ ಅಗತ್ಯಗಳು ನಮಗೆ ಬೇರೆ ನಮ್ಮ

ಸಂವೇದನೆಯ ಭಾಗವೂ ಆಗಿದೆ. ಹಣವು ಸಾಮಾಜಿಕ ಅಧಿಕಾರದ ರೂಪವೂ ಆಗಿದೆ. ಅದಕ್ಕೆ ವಿವಿಧ ಅರ್ಥಗಳೂ ಇರುತ್ತವೆ. ಹಣ ಮತ್ತು ಅದರ ಹಿಂದೆ ಇರುವ ರಾಜಕಾರಣವು ನಮಗೆ ಒಮ್ಮೊಮ್ಮೆ ತಿಳಿಯುವುದೂ ಇಲ್ಲ. ಹಣ ಮತ್ತು ರಾಜಕೀಯ ಅರ್ಥಶಾಸ್ತ್ರದ ಸಂಬಂಧವನ್ನು ಈ ದೃಷ್ಟಿಯಲ್ಲಿ ನಾವು ನೋಡಬೇಕಾಗುತ್ತದೆ. ಹಣ ಮತ್ತು ಅದರ ವಿನಿಮಯ ಎನ್ನುವುದು ಈ ದೃಷ್ಟಿಯಿಂದ ಸಂಕೀರ್ಣ. ಅದಕ್ಕೆ ಒಂದು ಅನನ್ಯತೆಯು ಇರುತ್ತದೆ. ಹಾಗೆಯೇ ಹಣವು ರಾಜಕೀಯವಾದ ನಿರ್ಧಾರವನ್ನು ಹೇಳುತ್ತದೆ. ಅದಕ್ಕೂ ಸಾಮಾಜಿಕವಾದ ಬಂಧನವು ಇರುತ್ತದೆ. ಹಣ ಎನ್ನುವುದು ನಮಗೆ ಆಮಿಶವನ್ನು ಒಡ್ಡುತ್ತದೆ. ಅದು ಆಟವೂ ಆಗುತ್ತದೆ. ಅದರ ಸಂಬಂಧವನ್ನು ಹೀಗೆ ಇದೆ ಎಂದು ಮೊದಲೇ ಹೇಳುವಂತೆ ಇಲ್ಲ. ಹಣವು ಎಲ್ಲವನ್ನೂ ಮಾಡುತ್ತದೆ. ಅದರ ಅಗತ್ಯಗಳು ನಮಗೆ ಸುಳ್ಳು ಹೇಳುವಂತೆ ಮಾಡುತ್ತದೆ. ಕೊಲೆ ಮಾಡುವಂತೆ ಮಾಡುತ್ತದೆ. ವ್ಯವಹಾರದಲ್ಲಿ ನಮಗೆ ದಿಕ್ಕು ತಪ್ಪಿಸುವಂತೆ ಮಾಡುತ್ತದೆ. ಹಣವೂ ಒಂದು ಸಾಮಾಜಿಕವಾದ ಸಂಬಂಧದ ಸ್ವರೂಪವೂ ಆಗಿದೆ. ಅದು ಆಟವೂ ಆಗಿದೆ. ಒಂದು ದೃಷ್ಟಿಯಿಂದ ಹಣವು ನಮಗೆ ಅನಿವಾರ್ಯವಾದ ಅಂಶವೂ ಹೌದು. ಹಣ ಮತ್ತು ಆಧುನಿಕತೆಗೆ ಒಂದು ಸಂಬಂಧವು ಇದೆ. ಅದರ ಮೂಲಕವೇ ಅನೇಕ ವಿನಿಮಯಗಳು ನಡೆಯುತ್ತವೆ. ಆದ್ದರಿಂದ ಅದರ ಸ್ವರೂಪಕ್ಕೂ ಆಧುನಿಕ ವಸ್ತು ಮತ್ತು ಅದರ ವಿನಿಮಯಕ್ಕೂ ನೇರ ಸಂಬಂಧವಂತೂ ಇದ್ದೇ ಇದೆ. ಹಣ ಮತ್ತು ಅದರ ಪರಿಣಾಮವು ಆಧುನಿಕತೆಯನ್ನು ಅನೇಕ ವಿಷಯಗಳಲ್ಲಿ ನಿಯಂತ್ರಿಸಿದೆ. ಅದರ ಅರ್ಥವೂ ಭಿನ್ನವಾಗಿದೆ.

ಹಣಕ್ಕೆ ಒಳ್ಳೆಯ ಮತ್ತು ಕೆಟ್ಟ ಗುಣ ಎರಡೂ ಇವೆ. ಅದು ಕಾಲವನ್ನು ಮತ್ತು ಅವಕಾಶವನ್ನು ನಿರೂಪಿಸುತ್ತದೆ. ಸಮಾಜ ಮತ್ತು ಅದರ ಮೂಲಭೂತವಾದ ಬದಲಾವಣೆಗೆ ಅದು ಕಾರಣವಾಗುವುದರಿಂದ ಅದನ್ನು ಖಾಲಿಯಾಗಿರುವ ಒಂದು ಜಾಗವೆಂದು ನಾವು ಭಾವಿಸುವುದು ಅಗತ್ಯವೂ ಇಲ್ಲ. ಆಧುನಿಕ ಅಥವಾ ಆಧುನಿಕೋತ್ತರವೆಂದು ಯಾವುದನ್ನು ಹೇಳಿದರೂ ಅಂತಿಮವಾಗಿ ನಾವು ಬಂದು ನಿಂತಿರುವುದು ಹಣ ಮತ್ತು ಅದರ ವಿನಿಮಯದ ಪ್ರಶ್ನೆಯಲ್ಲಿ. ವ್ಯಕ್ತಿಯು ತನ್ನ ಶಕ್ತಿಯಿಂದ ನಿಸರ್ಗವನ್ನು ಬದಲಿಸಿದ್ದಾನೆ. ಜ್ಞಾನ ಅದನ್ನು ಬದಲಿಸಿದೆ. ಅರಿವು ಹೇಗೆ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸಿದೆ ಎನ್ನುವುದು ಅತ್ಯಂತ ಮುಖ್ಯ. ಜ್ಞಾನ ಮತ್ತು ಬದಲಾವಣೆಯು ಹೇಗೆ ಜಗತ್ತನ್ನು ಬದಲಿಸುತ್ತದೆ ಎಂದೂ ನಮಗೆ ತಿಳಿಯುತ್ತದೆ. ವಾಸ್ತವವಾಗಿ ಜಗತ್ತು ಬದಲಾಗುವುದು ನಮ್ಮ ಅರಿವು ಮತ್ತು ಅಧಿಕಾರದಿಂದ ಎನ್ನುವುದು ಹೆಚ್ಚು ಸ್ಪಷ್ಟ. ಕಾರ್ಮಿಕರು ಮತ್ತು ಅವರ ಶಕ್ತಿಯು ಜಗತ್ತನ್ನು ಸುಮ್ಮನೆ ಬದಲಾವಣೆ ಮಾಡಿಲ್ಲ. ಆಧುನಿಕ ಉತ್ಪಾದನೆ ಮತ್ತು ಅದರ ಅವಕಾಶಗಳು ಹೇಗೆ ಪಲ್ಲಟವನ್ನು ತರುತ್ತದೆ ಎಂದು ಫುಕೋ ವಿವರಿಸುತ್ತಾನೆ. ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಕಾರ್ಮಿಕರು ಬದಲಾವಣೆಯ ಜೊತೆಗೆ ಸ್ಪಂದಿಸುತ್ತಾರೆ. ಹಾಗೆ ನೋಡಿದರೆ ಒಂದು ವಸ್ತುವನ್ನು ನಾವು ಮಾರುತ್ತೇವೆ ಎಂದರೆ ಅದರಲ್ಲಿ ಕಾರ್ಮಿಕರ ಶಕ್ತಿಯು ಸೇರ್ಪಡೆಯಾಗಿದೆ ಎಂದೂ ತಿಳಿದುಕೊಳ್ಳಬೇಕಾಗುತ್ತದೆ. ಒಂದು ವಸ್ತುವು ಮಾರುಕಟ್ಟೆಗೆ ಬರುತ್ತದೆ ಎಂದಾದರೆ ಅದಕ್ಕೆ ಒಂದು ಸ್ವರೂಪವು ಇದೆ ಎಂದೂ ಅರ್ಥ. ಅದರಲ್ಲಿ ಶಕ್ತಿಯು ಇದೆ. ವ್ಯಕ್ತಿ ಮತ್ತು ಅವನ ಶಕ್ತಿಯನ್ನು ನಾವು ಅಲ್ಲಗಳೆಯಲು ಬರುವುದೂ ಇಲ್ಲ (ಫುಕೋ– ಆರ್ಡರ್ ಆಫ್ ಥಿಂಗ್ಸ್)

ಸಂಸ್ಕೃತಿಯಲ್ಲಿ ಅನೇಕ ಸಂಕೇತಗಳು ಸೇರಿಕೊಂಡಿವೆ. ಆದ್ದರಿಂದ ನಾವು ಯಾವುದನ್ನು ಅನ್ವಯಮಾಡುತ್ತೇವೆಯೋ ಅದರಲ್ಲಿ ಅನೇಕವು ನಮಗೆ ನಮ್ಮ ಮನೋಭಾವವನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ನಮಗೆ ಯಾವುದು ನಿಜವಾದ ನೈತಿಕವಾಗಿದೆ ಮತ್ತು ಯಾವುದನ್ನು ಸ್ವೀಕರಿಸುತ್ತೇವೆ ಎನ್ನುವುದು ನಮಗೆ ಈ ಚರ್ಚೆಯಲ್ಲಿ ಅತ್ಯಂತ ಮುಖ್ಯವಾಗುತ್ತದೆ. ತಾತ್ವಿಕವಾಗಿ ನಮಗೆ ಯಾವುದು ಅತ್ಯಂತ ಮುಖ್ಯವಾಗುತ್ತದೆಯೋ ಅದನ್ನು ನಾವು ಅನೇಕ ಸಂದರ್ಭದಲ್ಲಿ ನಮ್ಮ ಗಮನಕ್ಕೆ ತಂದು ಕೊಳ್ಳುವುದೂ ಇಲ್ಲ. ಹಾಗೆ ನೋಡಿದರೆ ಸಂಸ್ಕೃತಿಯಲ್ಲಿ ಅನೇಕವನ್ನು ರಚನೆ ಮಾಡಲಾಗಿದೆ ಎನ್ನುವುದೂ ಸತ್ಯ. ಅದನ್ನು ಒಂದು ಹಂತದಲ್ಲಿ ಫುಕೋ (ರಚನೋತ್ತರದ ಸನ್ನಿವೇಶದಲ್ಲಿ) ಆಲೋಚನೆ ಮತ್ತು ಅದರ ರಚನೆ ಎಂದು ಹೇಳುತ್ತಾನೆ. ಆದರ ಜೊತೆಗೆ ಡೆರಿಡಾ ಒಂದು ಅನ್ವಯ ಮತ್ತು ಅದರ ಕ್ರಮವನ್ನು ಹೇಳುತ್ತಾನೆ. ಆದ್ದರಿಂದ ಈವತ್ತು ನಾವು ಸಮಾಜದಲ್ಲಿ ಯಾವ ಸಿದ್ಧಾಂತದ ಆಧಾರದ ಮೇಲೆ ಸಂಸ್ಕೃತಿಯನ್ನು ವಿವರಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ನಮ್ಮ ಆಲೋಚನೆಯಲ್ಲಿ ಅತ್ಯಂತ ಪ್ರಧಾನವಾಗಿದೆ ಮತ್ತು ಯಾವುದು ಹೆಚ್ಚು ಆಧ್ಯತೆಯನ್ನು ನೀಡುತ್ತೇವೆ ಎನ್ನುವುದು ನಮ್ಮ ಬದ್ಧತೆಯ ಪ್ರಶ್ನೆಯೂ ಆಗುತ್ತದೆ.

ಫುಕೋ ಹೇಳಿರುವ ಸಂಗತಿಗಳು ಇಲ್ಲಿ ಮುಖ್ಯ. ಹದಿನಾರನೆಯ ಶತಮಾನದ ತರುವಾಯ ಜ್ಞಾನ ಮತ್ತು ಅದರ ರೂಪಗಳು ಬದಲಾದವು. ಅದರ ಸ್ವರೂಪಕ್ಕೆ ಅನುಸಾರವಾಗಿ ಪಠ್ಯಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾದವು. ಸಾಹಿತ್ಯ ಮತ್ತು ಅದರ ಅನ್ವಯದ ದೃಷ್ಟಿಕೋನವೂ ಭಿನ್ನಬವಾದವು. ಯಾವುದು ನಮಗೆ ಹಿತವಾಗುತ್ತದೆಯೋ ಅದನ್ನು ನಾವು ಹೇಳಿದೆವು. ಅದರಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ನಾವು ರೂಪಿಸುವ ಸಂಕಥನಗಳು ನಮಗೆ ಅನುಕೂಲವನ್ನು ಉಂಟು ಮಾಡಬೇಕು. ಇದನ್ನು ಮಾತಿನ ಅನುಕೂಲ ಎಂದು ಗಣಿಸಿದರೆ ಅದರಲ್ಲಿ ನಾವು ಬಳಸುವ ಸಂಕೇತಗಳು ಕೂಡಾ ಆತ್ಯಂತ ಮುಖ್ಯವಾಗುತ್ತದೆ. ಅದನ್ನು ನಾವು ನಮ್ಮ ಅನುಕೂಲದ ಸೂಚನೆ ಎಂದೂ ಭಾವಿಸಬಹುದು. ಗದ್ಯ ಮತ್ತು ಕತೆಗಳಿಗೆ ಒಂದು ಸಂಬಂಧವು ಇದೆ. ನಾವು ಯಾವ ರೀತಿಯಲ್ಲಿ ನಿರೂಪಣೆ ಮಾಡುತ್ತೇವೆ ಎನ್ನುವುದು ಅತ್ಯಂತ ಮುಖ್ಯ ಕತೆಗಳು ನಮಗೆ ಅತ್ಯಂತ ಮುಖ್ಯವಾಗಿವೆ. ಅವುಗಳು ನಮ್ಮ ಸಂಸ್ಕೃತಿಯ ಒಂದು ಭಾಗವೂ ಹೌದು ಹಾಗೆ ನೋಡಿದರೆ ನಮಗೆ ಯಾವುದೇ ಕಥನಗಳು ನಮಗೆ ನಮ್ಮ ಸಾಧ್ಯತೆಯನ್ನು ಹೇಳುತ್ತವೆ. ಮನುಷ್ಯರಿಗೆ ಅತ್ಯಂತ ಸಹಜವಾಗಿ ಬಂದಿರುವ ಒಂದು ಮಾದರಿ ಎಂದರೆ ಮಾತಾಡುವುದು. ಅದು ಇರುವುದು ನಿಜವಾಗಿಯೂ ಒಂದು ನಿರೂಪಣೆಯಲ್ಲಿ. ಕತೆಯನ್ನು ಹೇಳುವುದಕ್ಕೆ ಒಂದು ಪರಂಪರೆಯು ಇದೆ. ಅದು ಅರ್ಧ ಚಾರಿತ್ರಿಕ ಮತ್ತು ಅರ್ಧ ಸಾಂಸ್ಕೃತಿಕ ಎಂದು ಬಾರ್ತ್ ಹೇಳುತ್ತಾನೆ. ಎರಡು ಪ್ರಕ್ರಿಯೆಗಳು ಇರುತ್ತವೆ: ತಿಳಿಯುವುದು ಮತ್ತು ಹೇಳುವುದು. ನಮಗೆ ಕತೆಯನ್ನು ಹೇಳುವುದು ಯಾವಾಗ ಮುಖ್ಯವಾಗುತ್ತದೆ ಎಂದರೆ ನಾವು ಸರಿಯಾಗಿ ಅದನ್ನು ಅರ್ಥ ಮಾಡಿಕೊಂಡರೆ ಮಾತ್ರವೇ. ನಮಗೆ ಯಾವುದೇ ವಿಷಯಗಳು ಸರಿಯಾಗಿ ಅರ್ಥವಾದರೆ ಆಗ ಅದನ್ನು ಹೇಳುತ್ತೇವೆ. ಹೇಳುವುದು ಅಂದರೆ ಅದಕ್ಕೆ ಒಂದು ಮೌಲ್ಯವು ಇದೆ ಎಂದು ಅರ್ಥ. ಪಂಪ ವ್ಯಾಸನನ್ನು ಅರ್ಥಮಾಡಿಕೊಂಡು ಅನಂತರ ನಮ್ಮ ಅಗತ್ಯಕ್ಕೆ ಅನುಸಾರವಾಗಿ ನಿರೂಪಣೆಯನ್ನು ಮಾಡಿದ.

ಆದರೆ ಕತೆಗಳಿಗೆ ಇನ್ನೊಂದು ಆಯಾಮವೂ ಇದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕತೆಯು ಬರುವಾಗ ಅದರ ನಿರೂಪಣೆಯು ಹೆಚ್ಚು ಭೇದವು ಉಂಟಾಗದಂತೆ ನೋಡುತ್ತೇವೆ. ಆದರೆ ಯಾವುದೇ ಕತೆಗಳಿಗೆ ಇರುವ ಸಾಂಸ್ಕೃತಿಕವಾದ ಒಂದು ಆಯಾಮವನ್ನು ನಾವು ಮರೆಯುವಂತೆ ಇಲ್ಲ. ನಿರೂಪಣೆಗಳಿಗೆ ನಿರ್ದಿಷ್ಟವಾದ ಸಂಹಿತೆಗಳು ಇರುತ್ತವೆ. ಅನುಭವ ಮತ್ತು ನಿರೂಪಣೆಗೆ ಯಾವ ಮಾದರಿಯ ಸಂಬಂಧವು ಇದೆ ಎಂದು ಹೇಳುವಾಗ ಬಾರ್ತ್ ಒಂದು ಮಾತನ್ನು ಹೇಳುತ್ತಾನೆ. ನಿರೂಪಣೆಗಳು ವಿವಿಧ ರೀತಿಯಲ್ಲಿ ಇರುತ್ತವೆ. ಅದರಲ್ಲಿ ಕಲ್ಪನೆ, ವಾಸ್ತವ ಮುಂತಾದ ಸಂಗತಿಗಳೂ ಇರುತ್ತವೆ. ನಾವು ಯಾವುದನ್ನು ಕತೆಯಲ್ಲಿ ನಿಜ ಎಂದು ಹೇಳುತ್ತೇವೆಯೋ ಅದನ್ನು ನಾವು ವಾಸ್ತವವಾದ ಎಂದು ಕರೆಯುತ್ತೇವೆ. ನಿರೂಪಣೆಗೆ ಮತ್ತು ಅದರ ಸ್ವರೂಪಕ್ಕೆ ಹಾಗೂ ಅದರ ಕಾಲಕ್ಕೆ ಒಂದು ಸಂಬಂಧವು ಇದೆ. ಯಾವುದು ನಿಜವಾದ ಕಥನವು ಆಗಿದೆಯೋ ಅದರ ಹಿಂದೆ ಒಂದು ನಿರ್ದಿಷ್ಟವಾದ ಚರಿತ್ರೆಯು ಇರುತ್ತದೆ.

ಹದಿನೆಂಟನೆಯ ಶತಮಾನದಲ್ಲಿ ನಮಗೆ ವಿನಯ ಎನ್ನುವುದು ಒಂದು ವಿಶಿಷ್ಟವಾದ ಪರಿಕಲ್ಪನೆಯೂ ಆಯಿತು..ವಿನಯ ಎಂದರೆ ಅದು ದೇಹದ ಪರಿಭಾಷೆಯೂ ಹೌದು. ಅಧಿಕಾರವು ತನ್ನ ಕೆಳಗಿನ ವರ್ಗವು ಅತ್ಯಂತ ವಿನಯದಲ್ಲಿ ಇರುವಂತೆ ನೋಡುತ್ತದೆ. ಅದು ಯಾವುದನ್ನು ಒಪ್ಪಬೇಕು ಮತ್ತು ಯಾವುದನ್ನು ತಿರಸ್ಕರಿಸಬೇಕು ಎನ್ನುವ ಒಂದು ಮಾನದಂಡವನ್ನು ಬಳಸುತ್ತದೆ. ಇದರ ಇನ್ನೊಂದು ಮಾನದಂಡವು ಇರುವುದು ಸಮಾಜದಲ್ಲಿ. ಅದು ಕೆಲವು ಸಂಪ್ರದಾಯಗಳನ್ನು ಹೇರುತ್ತದೆ. ಅದರ ಮೂಲಕ ವ್ಯಕ್ತಿಯನ್ನು ಮತ್ತು ಅವನ ನಡವಳಿಕೆಯನ್ನು ನಿರ್ಧರಿಸುತ್ತದೆ. ಅಧಿಕಾರವು ಇನ್ನೊಂದು ಅಂಶವನ್ನು ಪ್ರತಿಪಾದಿಸುತ್ತದೆ. ಅದು ಋಣಕ್ಕೆ ಸಂಬಂಧಿಸಿದ್ದೂ ಹೌದು. ವ್ಯಕ್ತಿಯು ಋಣದಲ್ಲಿ ಇದ್ದರೆ ಮತ್ತೆ ಅವನು ತನ್ನ ಗಡಿಯನ್ನು ದಾಟುವುದಿಲ್ಲ ಎನ್ನುವುದು ಅದರ ನಿಲುವು. ಹಾಗೆ ನೋಡಿದರೆ ನಮಗೆ ಹದಿನೆಂಟನೆಯ ಶತಮಾವು ಅತ್ಯಂತ ಸಾಮಾನ್ಯವಾದ ಒಂದು ಸಂಗತಿಯಾಗಿರಲಿಲ್ಲ. ಅದು ಅನೇಕ ಬದಲಾವಣೆಯನ್ನು ತಂದಿತ್ತು. ಅಧಿಕಾರವು ಈ ಕಾಲದಲ್ಲಿ ಕೆಲವು ತಂತ್ರಗಳನ್ನು ಬಳಸಿಕೊಂಡದ್ದು ಸತ್ಯವೂ ಹೌದು. ದೇಹ ಮತ್ತು ಅದರ ಸ್ವಯಂಸಂಪೂರ್ಣತೆಯನ್ನು ಎಷ್ಟು ಬಳಸಬೇಕು ಎನ್ನುವುದೂ ಒಂದು ಸಮಸ್ಯೆಯಾಗಿತ್ತು. ಆದ್ದರಿಂದ ಆಗ ದೇಹದ ಕೆಲವು ಭಾಗಗಳ ಉಪಯೋಗ ಎನ್ನುವುದಕ್ಕೆ ಒಂದು ಮಹತ್ವವು ಬಂದಿತು. ಬೇರೆ ಬೇರೆ ಕೆಲಸಗಳಿಂದ ದೇಹ ಮತ್ತು ಅದರ ಸ್ವರೂಪವನ್ನು ಬಳಸುವ ಕ್ರಮವು ಬೇರೆಯಾಯಿತು. ಇದನ್ನು ಕಾಲ ಮತ್ತು ದೇಶ ಹಾಗೂ ಅವಕಾಶಗಳ ಮಧ್ಯೆ ಇರುವ ದೇಹದ ಕಾರ್ಯಗಳು ಎಂದೂ ಹೇಳಬಹುದು. ದೇಹ ಮತ್ತು ಅದರ ಉಪಯೋಗ ಎನ್ನುವುದಕ್ಕೆ ಭಿನ್ನವಾದ ಅರ್ಥವನ್ನು ಈ ಕಾಲದಲ್ಲಿ ನಾವು ಕಾಣುತ್ತೇವೆ. ಯಾವುದನ್ನು ನಾವು ಋಣ ಎಂದು ಹೇಳುತ್ತೇವೆಯೋ ಅದನ್ನು ಕೂಡಾ ಶಿಸ್ತಿಗೆ ಬಳಸಿದ್ದರಿಂದ ಒಂದು ಬದಲಾವಣೆಯು ಕಾಣಿಸಿಕೊಂಡಿತು. ಋಣ ಮತ್ತು ವಿನಯ ಎನ್ನುವುದು ಹೇಗೆ ಒಂದು ನಿಯಂತ್ರಣದ ಭಾಷೆಯಾಯಿತು ಎಂದು ಫುಕೋ ವಿವರಿಸುತ್ತಾನೆ.ಮೊದಲು ಜನರಿಗೆ ವಿನಯವು ಉಂಟಾಗಬೇಕು. ಅದರ ಅನಂತರ ಅವರು ಹೇಗೆ ಬೇಕೋ ಹಾಗೆ ಬಾಗುತ್ತಾರೆ ಎನ್ನುವುದು ಒಂದು ಅತ್ಯಂತ ಮುಖ್ಯವಾದ ಪರಿಕಲ್ಪನೆಯೂ ಹೌದು.ಶಿಸ್ತು ಎನ್ನುವುದನ್ನು ಜಾರಿಗೆ ತರುವಾಗ

ಅನುಸರಿಸುವ ಅತ್ಯಂತ ಮುಖ್ಯವಾದ ಒಂದು ತಂತ್ರವೆಂದರೆ ಅದಕ್ಕಾಗಿ ಕಮ್ಮಟಗಳನ್ನು ಮತ್ತು ಸೈನ್ಯದ ಶಕ್ತಿಯನ್ನು, ಪೋಲಿಸ್ ವ್ಯವಸ್ಥೆಯನ್ನು ಬಳಸುವುದು. ಇದೆ ಜೊತೆಗೆ ಅನೇಕ ಕಾನೂನುಗಳು ಬರುತ್ತವೆ. ಹಾಗೆಂದು ಯಾರು ಈ ವಿನಯವನ್ನು ಹೊಂದಿರುತ್ತಾರೆಯೋ ಅವರು ಜೀತದವರು ಎಂದು ಭಾವಿಸಬೇಕಾದ ಅಗತ್ಯವಿಲ್ಲ. ವಿನಯ ಮತ್ತು ಋಣ ಎನ್ನುವುದಕ್ಕೆ ದೇಹವು ಒಂದು ಮಾನದಂಡವಲ್ಲ. ಆದರೆ ಯಾರು ಗುಲಾಮರು ಇರುತ್ತಾರೆಯೋ ಅವರ ದೇಹವು ದುಡಿಮೆಯನ್ನು ಅವಲಂಬಿಸುತ್ತದೆ. ಅತ್ಯಂತ ದೊಡ್ಡ ಜಾತಿ, ಜನಾಂಗ, ದೊಡ್ಡದಾದ ದೇಶದ ಪ್ರಜೆಗಳು ಕೂಡಾ ಪ್ರಭುತ್ವಕ್ಕೆ ಕೆಲವು ಋಣಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಅವರು ಋಣವನ್ನು ಮತ್ತು ವಿನಯವನ್ನು ಹೊಂದಿರಲೇ ಬೇಕಾಗುತ್ತದೆ. ಯಜಮಾನ್ಯದ ಸೇವೆಯು ಅತ್ಯಂತ ಅಗತ್ಯ. ಯಜಮಾನಿಕೆಯು ಹೇಗೆ ಇರುತ್ತದೆ ಎಂದರೆ ಅದು ವಿನಯವನ್ನು ನಿರೀಕ್ಷೆ ಮಾಡುತ್ತದೆ. ಸಾಮಾನ್ಯರು ಇದನ್ನು ವಿಮರ್ಶೆ ಮಾಡಲು ಹೋಗುವುದೂ ಇಲ್ಲ. ಹಾಗೆ ನೋಡಿದರೆ ರಾಜಕಾರಣದ ಅತ್ಯಂತ ಪ್ರಮುಖವಾದ ಅಂಗವೆಂದರೆ ಅದು ಅಧಿಕಾರವನ್ನು ಹೆಚ್ಚು ಚಾಲ್ತಿಗೆ ತರುವುದು. ಅದು ಅಧಿಕಾರವನ್ನು ಮಾನ್ಯ ಮಾಡುತ್ತದೆ. ಮನುಷ್ಯ ಮತ್ತು ಅವನ ದೇಹವನ್ನು ಹೇಗೆ ತನ್ನ ಶಕ್ತಿಗೆ ಬಳಸಬಹುದು ಎಂದು ಮಾತ್ರವೇ ಪ್ರಭುತ್ವವು ಯೋಚನೆ ಮಾಡುತ್ತದೆ. ಮನುಷ್ಯನ ದೇಹದಿಂದ ಉತ್ಪಾದನೆಯಾಗುವ ವಸ್ತುವನ್ನು ಕೂಡಾ ಒಂದು ಪ್ರಭುತ್ವವು ತನ್ನ ಇಚ್ಛೆಗೆ ಅನುಸಾರವಾಗಿ ಬಳಸುತ್ತದೆ. ಯಾವುದೇ ಸಂಶೋಧನೆಗಳು ಇದ್ದಕ್ಕಿಂದಂತೆ ಹುಟ್ಟಿಲ್ಲ. ಅವುಗಳು ಬೇರೆ ಬೇರೆ ಮೂಲದಿಂದ ಹುಟ್ಟಿರುತ್ತವೆ. ಅದರ ಜೊತೆಗೆ ಅವುಗಳು ವಿವಿಧ ಸ್ಥಳ ಮತ್ತು ಕಾಲದಿಂದ ಬಂದಿರುತ್ತವೆ. ಒಂದು ಸಂಶೋಧನೆಯನ್ನು ಮತ್ತೊಂದು ಸಂಶೋಧನೆಯು ಬೆಳೆಸುತ್ತದೆ.

ಅಭಿಜಾತ ಪರಂಪರೆಯು ಜೀವನ ಮತ್ತು ಅದರ ಮೌಲ್ಯಕ್ಕೆ ಸಂಬಂಧಪಟ್ಟಂತೆ ವೈಜ್ಞಾನಿಕವಾದ ದೃಷ್ಟಿಕೋನವನ್ನು ಹೊಂದಿರಲಿಲ್ಲ. ಆಗ ಸಂಕೇತಶಾಸ್ತ್ರವೂ ಮುಖ್ಯವಾಗಿರಲಿಲ್ಲ. ಒಂದು ಸಾಮಾನ್ಯವಾದ ತಿಳುವಳಿಕೆಯು ಮಾತ್ರವೇ ಇತ್ತು. ಸಹಜ ಚರಿತ್ರೆ ಎಂದು ಫುಕೋ ಹೇಳುತ್ತಾನೆ. ಹಾಗೆಯೇ ಆಗ ರಾಜಕೀಯ ಅರ್ಥಶಾಸ್ತ್ರ ಎನ್ನುವುದೂ ಅಸ್ತಿತ್ವದಲ್ಲಿ ಇರಲಿಲ್ಲ. ಜ್ಞಾನ ಮತ್ತು ಅದರ ಉತ್ಪಾದನೆಗೆ ವಿಶಿಷ್ಟವಾದ ಅರ್ಥವೂ ಇರಲಿಲ್ಲ. ಆದರೆ ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಇದು ಚಾಲ್ತಿಗೆ ಬಂದಿತು. ಅಭಿಜಾತ ಪರಂಪರೆಯಲ್ಲಿ ಎಕಾನಮಿ ಎಂದರೆ ಸಂಪತ್ತು ಎನ್ನುವ ಅರ್ಥವು ಬಂದಿತು.

ಅಭಿಜಾತ ಪರಂಪರೆಯಲ್ಲಿ ಹಣ ಮತ್ತು ಸಂಪತ್ತು, ಮೌಲ್ಯ ಮತ್ತು ಮಾರುಕಟ್ಟೆಯ ಬಗ್ಗೆ ಒಂದು ಸಂದೇಹವು ಇದ್ದುದು ನಿಜ. ಆದರೆ ಹದಿನೆಂಟನೆಯ ಶತಮಾನದಲ್ಲಿ ಅರ್ಥಶಾಸ್ತ್ರದಲ್ಲಿ ಒಂದು ಧನಾತ್ಮಕವಾದ ದೃಷ್ಟಿಕೋನವು ಬಂದಿತು. ಹಣ ಎನ್ನುವುದು ಒಂದು ಸಂವಾದಿಯಾದ ರೂಪವು ಅಲ್ಲ ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾದ ಚಾರಿತ್ರಿಕವಾದ ತಿರುವನ್ನು ಹೇಳುತ್ತದೆ. ಹಣ ಎನ್ನುವುದಕ್ಕೆ ಗುಣವು ಇದೆ. ಅದರ ಜೊತೆಗೆ ಹದಿನೆಂಟನೆಯ ಶತಮಾನದಲ್ಲಿ ಮಾರುಕಟ್ಟೆ ಮತ್ತು ಅದರ ಮೌಲ್ಯ, ಮೌಲ್ಯ ಮತ್ತು ಅದರ ವೈರುಧ್ಯಗಳು ಕಾಣಿಸಿಕೊಂಡವು. ಅದೇ ವೇಳೆಗೆ ಉತ್ಪಾದನೆ ಮತ್ತು ರಾಜಕೀಯ ಅರ್ಥಶಾಸ್ತ್ರ ಸಾಧ್ಯವಾಗಿದ್ದು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಬೆಳವಣಿಗೆ ಕೂಡಾ ಹೌದು. ಕೆಲಸ ಮತ್ತು ಅದರ ವರ್ಗೀಕರಣವು ಪ್ರಾರಂಭವಾದ್ದು

ಕೂಡಾ ಇದೇ ಕಾಲದಲ್ಲಿ. ಇಷ್ಟು ಆಗುವಾಗ ಸಹಜವಾಗಿಯೇ ಸಂಪತ್ತು ಮತ್ತು ಅದರ ವಿಶ್ಲೇಷಣೆಯು ನಡೆಯುತ್ತದೆ. ಹಣವು ವ್ಯಾಪಾರ ಮತ್ತು ಉದ್ದಿಮೆಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ವ್ಯಾಪಾರ ಮತ್ತು ವಹಿವಾಟು ಎನ್ನುವುದು ಸಾಂಸ್ಥಿಕವಾಗಿದ್ದು ಕೂಡಾ ಗಮನಾರ್ಹ.ಇದರ ಮೂಲಕ ಜ್ಞಾನ ಮತ್ತು ಅದರ ಕ್ಷೇತ್ರಗಳ ಕಲ್ಪನೆಯಲ್ಲಿ ಬದಲಾವಣೆಯು ಕಾಣಿಸಿದೆ. ಮೇಲು ನೋಟಕ್ಕೆ ನಮ್ಮ ಗಮನಕ್ಕೆ ಬಾರದೇ ಇರುವ ಕೆಲವು ಸಂಗತಿಗಳನ್ನು ಫುಕೋ ವಿವರಿಸುತ್ತಾನೆ. ಈ ಬಗೆಯ ವ್ಯಾಪಾರ ಮತ್ತು ಉದ್ದಿಮೆಯ ಕಲ್ಪನೆಯು ಭಾಷೆ ಮತ್ತು ಅದರ ವ್ಯಾಕರಣದ ಮೇಲೆ ಪ್ರಭಾವವನ್ನು ಬೀರಿದೆ. ಆದ್ದರಿಂದಲೇ ಫುಕೋ ಯಾವುದೇ ಬಗೆಯ ಜ್ಞಾನಕ್ಕೆ ಒಂದು ಶಾಸ್ತ್ರವು ಇದ್ದೇ ಇರುತ್ತದೆ ಎಂದು ಹೇಳುತ್ತಾನೆ. ಹದಿನಾರನೆಯ ಶತಮಾನದಲ್ಲಿ ಆರ್ಥಿಕ ಸಂಬಂಧಿಯಾದ ಆಲೋಚನೆಗೆ ಕೆಲವು ಮಿತಿಗಳು ಇದ್ದವು. ಅದರಲ್ಲಿ ಒಂದು ಯಾವ ವಸ್ತುವಿಗೆ ಯಾವ ಬೆಲೆಯನ್ನು ನಿಗದಿ ಮಾಡಬೇಕು ಎನ್ನುವುದೂ ಇದೆ.

ಹಣ ಮತ್ತು ಅದರ ಕೆಲಸವನ್ನು ಹೇಳುವಾಗ ಪುಕೋ ವಸ್ತು ಮತ್ತು ಅದರ ಸಾಮಾನ್ಯ ಎನ್ನಬಹುದಾದ ಮಾಪನವೂ ಅತ್ಯಂತ ಮುಖ್ಯ. ಅದಕ್ಕೆ ಒಂದು ಭೌತಿಕವಾದ ಸ್ವರೂಪವೂ ಇರುತ್ತದೆ.

ವಸಾಹತು ಪೂರ್ವದಲ್ಲಿಯೂ ಹಣದ ವಿನಿಮಯವಿತ್ತು. ಆದರೆ ಬ್ರಿಟೀಷ್ ರಾಜಸತ್ತೆಯು ಹಣದ ವಿನಿಮಯ ಮತ್ತು ಮೌಲ್ಯ ನಿಷ್ಕರ್ಷೆಗೆ ಇಂಗ್ಲೆಂಡಿನ ಅಂಕಿತವನ್ನು ಹಾಕಿತು. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಹಣವೆಂದರೆ ಅದು ಸಂವಾದಿಯಾದ ರೂಪವಲ್ಲ : ಅದಕ್ಕೊಂದು ಗುಣಾತ್ಮಕ ಅಂಶವಿದೆಯೆಂಬುದನ್ನು ಆಗಿನ ಮಾರುಕಟ್ಟೆಯ ಅರ್ಥಶಾಸ್ತ್ರವು ನಿರೂಪಿಸಿತು. ಹಣ ಏನು ಮಾಡುತ್ತದೆಯೆಂದರೆ, ವಸ್ತುವಿನ ನಿಜವಾದ ಮೌಲ್ಯವನ್ನು ನಿರ್ಧರಿಸುತ್ತದೆ. ಆದುದರಿಂದ ಮೌಲ್ಯದ ನಿರ್ಧಾರವು ಪರ್ಯಾಯವಲ್ಲ. ಎರಡನೆಯದಾಗಿ ವಸ್ತುವಿನ ವಿನಿಮಯದಲ್ಲಿ ಆಯಾ ವಸ್ತುವಿನ ನಿಜವಾದ ಮೌಲ್ಯವೇನು ಮತ್ತು ಅದರ ಉಪಯೋಗವೇನು ಎಂಬುದನ್ನು ಅದು ನಿರ್ಧರಿಸುತ್ತದೆ.

ಕ್ಲಾಸಿಕಲ್ ಯುಗದಲ್ಲಿ ಯುರೋಪಿನಲ್ಲಿ ಸಂಪತ್ತು ಎಂಬುದಕ್ಕೆ ಬೇರೆ ಬೇರೆ ಅರ್ಥಗಳು ಬಂದಿದ್ದವು. ಆದರೆ ಅದರ ಮೌಲ್ಯ ಮತ್ತು ಮಾರುಕಟ್ಟೆಯ ಬೆಲೆಯ ನಡುವೆ ಈ ರೀತಿಯ ಸಣ್ಣ ಸಂದೇಹಗಳಿದ್ದವು (ಪುಕೋ, 1970, ಪು. 160). ಹದಿನೆಂಟನೆಯ ಶತಮಾನದಲ್ಲಿ ಅರ್ಥಶಾಸ್ತ್ರಕ್ಕೆ ಧನಾತ್ಮಕ ಅರ್ಥ ಕೂಡಾ ಬಂತು. ಈ ಶತಮಾನದಲ್ಲಿ ಹಣವೆಂದರೆ ಸಂವಾದಿ ಅಲ್ಲ. ಅದಕ್ಕೊಂದು ನಿರ್ದಿಷ್ಟ ಗುಣವಿದೆ ಎಂಬ ನಿಲುವು ಸ್ಥಾಪಿತವಾಯಿತು (ಅದೇ, ಪು. 167). ಮಾರುಕಟ್ಟೆಯ ಮೌಲ್ಯ ಮತ್ತು ಹಣಕ್ಕೆ ಅತ್ಯಂತ ತುರಿಯಾವಸ್ಥೆ ಎನ್ನಬಹುದಾದ ಮೌಲ್ಯ ಬಂದಿತು (ಅದೇ, ಪು. 167). ಆದರೆ ದೇಹ ಮತ್ತು ದುಡಿಮೆ, ಹಣದ ವಿನಿಯೋಗ ಮತ್ತು ಸಂಸ್ಕೃತಿ ಹಾಗೂ ಲಾಭದ ಪ್ರಶ್ನೆಯು ಸಂಕೀರ್ಣವಾಗಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ ಹಣ, ದುಡಿಮೆ, ಶ್ರಮ, ಸಂಸ್ಕೃತಿಯ ನಡುವಣ ಸಂಬಂಧವನ್ನು ನಾವು ಸಂವಾದಿಯಾದ ಪದಗಳನ್ನು ಮಾತ್ರವೇ ಬಳಸುತ್ತೇವೆ. ಯಾವ ದುಡಿಮೆಗೆ ಯಾವ ಕೂಲಿ ಎನ್ನುವುದು ಅಸ್ಪಷ್ಟವಾಗಿದೆ. ಆದ್ದರಿಂದ ಬರೀ ದುಡ್ಡು ಮತ್ತು ಕೂಲಿಯನ್ನು ಕುರಿತು

ಹೇಳುವಾಗ ಅದನ್ನು ಹೇಗೆ ವಿವರಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ವಾಸ್ತವವಾಗಿ ನಾವು ಯಾವುದನ್ನು ಲಾಭ ಎಂದು ಹೇಳುತ್ತೇವೆಯೋ ಅದು ಉಳಿತಾಯ ಅಥವಾ ಮಿಗುತಾಯವೇ ಆಗಿರುತ್ತದೆ. ಲಾಭ ಮತ್ತು ಅದರ ವ್ಯವಹಾರವನ್ನು ಈಗ ಸುಳ್ಳು ಕೇಂದ್ರಿತ ಎಂದೂ ಹೇಳಬಹುದು. ವಾಸ್ತವವಾಗಿ ಈಗ ನಮ್ಮ ಆಸ್ತಿಯ ಪ್ರಶ್ನೆಯು ಬದಲಾಗಿದೆ. ನೀತಿ, ಕಾನೂನು, ಪ್ರಭುತ್ವ ಮುಂತಾದವುಗಳು ಬದಲಾಗಿವೆ.

ಈವತ್ತು ನಮಗೆ ಹಣವೂ ಒಂದು ಭೌತಿಕವಾದ ಸಂಪತ್ತು. ಅದು ಮನುಷ್ಯರ ಸಂಬಂಧವನ್ನು ನಿರೂಪಿಸುತ್ತದೆ. ಅದು ಸಮಾಜ ಮತ್ತು ಅದರ ವಿನಿಮಯವನ್ನು ಹೇಳುತ್ತದೆ. ಅದಕ್ಕೂ ಸಮಾಜದ ಚಟುವಟಿಕೆಗೂ ಒಂದು ಸಂಬಂಧವು ಇದೆ. ಹಣಕ್ಕೂ ವ್ಯಕ್ತಿಗೂ ಒಂದು ಸಂಬಂಧವಿದೆ. ಆದರೆ ಅದು ಪವಾಡವಲ್ಲ. ಹಣದ ಪ್ರಶ್ನೆಯ ವಿಶ್ವಾತ್ಮಕ ಮತ್ತು ಸ್ಥಳೀಯವೂ ಆಗಿದೆ. ಯಾವುದೇ ವಸ್ತುವನ್ನು ನಾವು ಖರೀದಿ ಮಾಡುವಾಗ ಅದು ನಿರ್ದಿಷ್ಟ. ಆದರೆ ಬರೀ ವಿನಿಮಯಕ್ಕೆ ಬಂದರೆ ಅದು ವಿಶ್ವಾತ್ಮಕ. ವಸ್ತುವನ್ನು ಖರೀದಿ ಮಾಡುವಾಗ ನಾವು ಹಣವನ್ನು ಬಳಸಿದರೆ ಅದರಲ್ಲಿ ನಿರ್ದಿಷ್ಟವಾಗುತ್ತದೆ. ಯಾವ ವಸ್ತುವನ್ನು ನಾವು ಖರೀದಿ ಮಾಡುತ್ತೇವೆ ಮತ್ತು ಅದರ ಬೆಲೆಯೇನು ಎನ್ನುವುದರ ಆಧಾರದ ಮೇಲೆ ಹಣದ ಪ್ರಶ್ನೆಯು ಇರುತ್ತದೆ. ಅದು ನಮ್ಮ ವರ್ತನೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಹಣಕ್ಕೂ ನಮ್ಮ ಜೀವನದ ವಿಧಾನಕ್ಕೂ ನೇರವಾದ ಸಂಬಂಧವು ಇದೆ. ಹಣವೂ ನಮ್ಮ ಸಾಮಾಜಿಕ ವಾಸ್ತವವಾಗಿದೆ. ಅದು ಅಂತರ್ರಾಷ್ಟ್ರೀಯವಾದ ಸಂಬಂಧಗಳು ಬದಲಾಗುತ್ತಾ ಹೋದಂತೆ ವ್ಯತ್ಯಾಸವಾಗುತ್ತಾ ಹೋಗುತ್ತದೆ. ನಮಗೆ ಗೊತ್ತಿರಬೇಕಾದ ಅಂಶವೆಂದರೆ ಹಣವಾಗಲೀ ಯಾವುದೇ ಕಾನೂನೇ ಆಗಲಿ ಅದು ಅದರ ಪಾಡಿಗೆ ಸ್ವಯಂಸಂಪೂರ್ಣವಲ್ಲ. ಹಾಗೆ ನೋಡುವುದಿದ್ದರೆ ಸ್ವಾತಂತ್ರ್ಯ ಮತ್ತು ಅದರ ಅರ್ಥಗಳು ಯಾವತ್ತೂ ಸಂವಾದಿಯೇ ಆಗಿರುತ್ತದೆ. ಅದೇ ರೀತಿಯಲ್ಲಿ ಮಾರುಕಟ್ಟೆ ಮತ್ತು ಅದರ ಮೌಲ್ಯಗಳು ನಿಗದಿಯಾಗುತ್ತವೆ. ವಸ್ತು ಮತ್ತು ವಸ್ತುಗಳ ಸಂಬಂಧವು ಒಂದು ರೀತಿಯಲ್ಲಿ ಇರುತ್ತದೆ. ವಸ್ತು ಮತ್ತು ವ್ಯಕ್ತಿಗಳ ಸಂಬಂಧವು ಮತ್ತೊಂದು ರೀತಿಯಲ್ಲಿ ಇರುತ್ತದೆ. ಈ ಸಂಬಂಧಗಳು ಅತ್ಯಂತ ಸಂಕೀರ್ಣವೂ ಆಗಿದೆ.

ವ್ಯಕ್ತಿ ಮತ್ತು ವ್ಯಕ್ತಿಗಳ ನಡುವೆ ಇರುವ ಸಂಬಂಧವನ್ನು ಉಪಯೋಗದ ಪ್ರಶ್ನೆಯೊಂದಿಗೆ ನೋಡಬೇಕಾಗುತ್ತದೆ. ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ತನ್ನ ಹಿತಕ್ಕೆ ಬಳಸುತ್ತಾನೆ. ಅವನ ಅಗತ್ಯಗಳು ಬೇರೆಯಿರುತ್ತವೆ. ಉಪಯೋಗ ಮತ್ತು ಅದರ ಆಧಾರವೇ ವ್ಯಕ್ತಿ ಸಂಬಂಧಗಳ ಗುಟ್ಟು ಕೂಡಾ ಆಗಿದೆ. ಯಜಮಾನ ಮತ್ತು ಆಳು, ಗಂಡ ಮತ್ತು ಹೆಂಡತಿ ಮುಂತಾದ ಸಂಬಂಧಗಳು ಇದರ ಜೊತೆಗೆ ತಳಕನ್ನು ಪಡೆದಿರುತ್ತವೆ. ಸ್ವಾರ್ಥ ಮತ್ತು ಅದರ ಪರಿಣಾಮಗಳು ಒಂದು ಥರ ಇರುತ್ತವೆ. ಸಂಬಂಧಗಳು ದೂರವಾದಂತೆ ಅದರ ಅರ್ಥಗಳೂ ವ್ಯತ್ಯಾಸವಾಗುತ್ತವೆ. ಜನರು ಪರಸ್ಪರ ಅಪರಿಚಿತರೂ ಆಗುತ್ತಾರೆ. ಕಾಫ್ಕಾನ ರೂಪಾಂತರವು ಹೇಳುವುದು ಇದನ್ನು. ಒಂದು ಪರಕೀಯತೆ ಮತ್ತು ಅಪರಿಚಿತವಾದ ನೆಲೆ. ಗುರುತಿಸುವುದು ಮತ್ತು ಗುರುತಿಸದೇ ಇರುವುದೂ ಎರಡೂ ಇದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಆದರೆ ಹಿಂಸೆಯು ಒಂದು ರೂಪವನ್ನು ಮಾತ್ರವೇ ಹೊಂದಿರುತ್ತದೆ ಎಂದು ಹೇಳಲು ಬರುವುದೂ ಇಲ್ಲ. ಲಕಾನ್

ಬಾಹ್ಯವು ಹೇಗೆ ನಮಗೆ ಕಿರಿಕಿರಿಯನ್ನು ಉಂಟು ಮಾಡುತ್ತದೆ ಎಂದು ಹೇಳುತ್ತಾನೆ. ನಮ್ಮ ಬಯಕೆ ಮತ್ತು ಅದು ಆಗದೇ ಹೋಗುವುದೂ ಕೂಡಾ ವಾಸ್ತವವಾಗಿ ಒಂದು ಕಿರಿಕಿರಿಯೂ ಹೌದು. ಬಯಕೆಯು ರಚನೆಗಳನ್ನು ಮಾಡುತ್ತವೆ. ಮತ್ತೆ ಹೊಸ ರಚನೆಗಳನ್ನು ರೂಪಿಸುತ್ತವೆ. ರಚನೆಯಿಂದ ರಚನೆಗೆ ಸಾಗುತ್ತವೆ. ವ್ಯಕ್ತಿ ಮತ್ತು ಉತ್ಪಾದನೆಗಳೂ ಇದೇ ರೀತಿಯಲ್ಲಿ ಇರುತ್ತವೆ. ಆದರೆ ಯಾವುದನ್ನು ನಾವು ಬಯಸುತ್ತೇವೆ ಮತ್ತು ರಚಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯವಾದ ಸಂಗತಿಯು ಆಗಿದೆ. ಮನಸು ಮತ್ತು ಅದರ ಬಯಕೆಗಳು ಉತ್ಪಾದನೆಯಲ್ಲಿ ಅತ್ಯಂತ ಮುಖ್ಯವಾದ ಪ್ರಕ್ರಿಯೆ. ಈ ದೃಷ್ಟಿಯಿಂದ ಚಾರಿತ್ರಿಕ ಪರಂಪರೆಯ ನಮಗೆ ಮಹತ್ವದ್ದೂ ಆಗುತ್ತದೆ. ಚರಿತ್ರೆಯೇ ಒಂದು ಸಂಕೇತ. ಕಳೆದುದನ್ನು ಅದು ಹೇಳುತ್ತದೆ.

ಚರಿತ್ರೆ ಮತ್ತು ಅದರ ಅಗತ್ಯಕ್ಕೆ ಅನುಸಾರವಾಗಿಯೂ ನಾವು ವರ್ತಿಸುತ್ತೇವೆ. ಸಮಾಜ ಮತ್ತು ಅದರ ವಾಸ್ತವಗಳು ಈ ದೃಷ್ಟಿಯಿಂದ ಅತ್ಯಂತ ಮುಖ್ಯವಾಗಿದೆ. ಆದರೆ ಫ್ಯಾಸಿಸಂ ನಂಬುವುದು ಬೇರೆಯ ವಿಚಾರಗಳನ್ನು ಎನ್ನುವುದನ್ನು ಇಲ್ಲಿ ಗ್ರಹಿಸಬೇಕಾದ ಅಗತ್ಯವಿದೆ. ಅದು ವ್ಯಕ್ತಿಯನ್ನು ಮತ್ತು ಅವನ ಅನನ್ಯತೆಯನ್ನು ನಾಶಮಾಡುತ್ತದೆ. ಆದರೆ ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ಸಮಾಜವಾದವು ಕೈಗೆ ತೆಗೆದುಕೊಳ್ಳುವುದಿಲ್ಲವೆನ್ನುವುದು ಕೆಲವರ ದೂರು ಮಾತ್ರವೇ ಆಗಿದೆ. ತಾತ್ವಿಕತೆ ಮತ್ತು ವ್ಯಕ್ತಿಯ ಅನನ್ಯತೆಯ ಪ್ರಶ್ನೆಯು ಅತ್ಯಂತ ಸಂಕೀರ್ಣವೂ ಆಗಿದೆ. ಸಿದ್ಧಾಂತವನ್ನು ಮತ್ತು ಯಜಮಾನಿಕೆಯ ಪ್ರಶ್ನೆಯನ್ನು ಹಾಗೂ ವ್ಯಕ್ತಿಯ ಅನನ್ಯತೆಯನ್ನು ಸಮಾಜವಾದವು ನೋಡಿದ ಕ್ರಮಗಳು ಭಿನ್ನವಾಗಿವೆ. ತಾತ್ವಿಕತೆಯನ್ನು ಪ್ರಸ್ತುತ ಪಡಿಸುವುದು ಅಂದರೆ ಅದರ ಅರ್ಥವನ್ನು ನಾವು ಸರಳೀಕರಿಸಬೇಕಾದ ಯಾವ ಅಗತ್ಯವೂ ಇಲ್ಲ. ಯಾವತ್ತೂ ತಾತ್ವಿಕತೆಯು ಅತ್ಯಂತ ವಿಸ್ತಾರವೂ ಆಗಿದೆ. ಅದು ಖಾಲಿಯಾದ ಒಂದು ಅವಕಾಶ ಮಾತ್ರವಲ್ಲ. ಅದನ್ನು ಯಾವುದೋ ಒಂದು ನಿಯಮದಲ್ಲಿ ಮಾತ್ರ ಬಂಧಿಸಬೇಕಾದ ಅಗತ್ಯವಿಲ್ಲ. ಅದು ಚಲನಶೀಲವೂ ಆಗಿದೆ. ತಾತ್ವಿಕ ಅನನ್ಯತೆಯೆಂದರೆ ಅದು ಮುಕ್ತವಾಗಿರುತ್ತದೆ. ಅದನ್ನು ಪೂರ್ವದ ಒಂದು ನಿರ್ಧಾರ ಎಂದು ಭಾವಿಸಬೇಕಾದ ಅಗತ್ಯವಲ್ಲ. ಸ್ತ್ರೀವಾದಿ ಆಗುವುದು ಎಂದರೆ ಅದರಲ್ಲಿ ಅರಾಜಕತೆಯು ಇರಬಹುದು ಅಥವಾ ಅದರಲ್ಲಿ ಮಾರ್ಕ್ಸ್‌ವಾದಿ ದೃಷ್ಟಿಕೋನದ ಸ್ತ್ರೀವಾದಿಗಳೂ ಇರಬಹುದು. ಪರಿಸರವಾದದಲ್ಲಿ ಸಮಾಜವಾದಿಯು ಇರಬಲ್ಲ, ಅಥವಾ ಪ್ರಭುತ್ವದ ಪ್ರತಿನಿಧಿಯೂ ಇರಬಲ್ಲ. ತಾತ್ವಿಕತೆಯು ಒಂದು ರಚನೆಯೂ ಆಗಿದ್ದು ಅದರಲ್ಲಿ ಬೇರೆ ಬೇರೆ ಅರ್ಥಗಳೂ ಇರುತ್ತವೆ. ತಾತ್ವಿಕತೆ ಮತ್ತು ಅದರ ಸೂಚಕನು ಬದಲು ಆದಾಗ ಮಾತ್ರವೇ ವ್ಯತ್ಯಾಸಗಳು ಉಂಟಾಗುತ್ತವೆ. ಕಮ್ಯೂನಿಸಂ ಒಂದು ಅರ್ಥದಲ್ಲಿ ವರ್ಗ ಸಮರವನ್ನು ಹೇಳುತ್ತದೆ. ಪ್ರಜಾಪ್ರಭುತ್ವವು ಮತ್ತೊಂದು ಅಭಿಪ್ರಾಯವನ್ನು ಇಡುತ್ತಾನೆ. ಆದರೆ ಇದರಲ್ಲಿ ವ್ಯತ್ಯಾಸವಿದೆ. ನಿಜವಾದ ಪ್ರಜಾಪ್ರಭುತ್ವವು ಕಾನೂನು ಮೂಲಕ ಶೋಷಣೆಯನ್ನು ಮಾಡುವುದನ್ನು ವಿರೋಧಿಸಬೇಕಾಗುತ್ತದೆ. ಆದ್ದರಿಂದ ತಾತ್ವಿಕತೆಯು ಮೂಲಭೂತವಾಗಿ ನಿರ್ದಿಷ್ಟವಾದ ಪ್ರಶ್ನೆಗಳೂ ಆಗಿವೆ. ನವ ಸಂಪ್ರದಾಯವಾದಿಗಳು ಈವತ್ತು ಹೇಳುವುದು ಬೇರೆ. ಅವರೂ ಕೂಡಾ ಪ್ರಜಾಪ್ರಭುತ್ವವನ್ನು ಹೇಳುತ್ತಾರೆ. ಆದರೆ ಲಾಭ ಗಳಿಕೆಯ ಕಡಗೆ ಗಮನವನ್ನು ಹರಿಸುವುದರಲ್ಲಿ ಮಾತ್ರವೇ ಅವರು ಬೇರೆಯಾಗುತ್ತಾರೆ. ಸ್ವಾತಂತ್ರ್ಯವನ್ನು ಹೇಳುತ್ತಾರೆ. ಆದರೆ

ಅದರ ಜೊತೆಗೆ ಅವರು ಅಭಿವೃದ್ಧಿ ಮತ್ತು ಇತರ ಪ್ರಶ್ನೆಗಳು ಬಂದಾಗ ಮಾತ್ರವೇ ತಮ್ಮ ನಿಲುವು ಭಿನ್ನವೆಂದು ಪ್ರತಿಪಾದಿಸುತ್ತಾರೆ. ಪ್ರಜಾಪ್ರಭುತ್ವವು ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಹೇಳುತ್ತದೆ. ಆದರೆ ವಾಸ್ತವದಲ್ಲಿ ಮಾತ್ರವೇ ಅದರ ಆಚರಣೆಗಳು ಬೇರೆಯಾಗುತ್ತವೆ. ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಗಳನ್ನು ಪ್ರಜಾಪ್ರಭುತ್ವವು ಹೆಚ್ಚು ಒತ್ತುಕೊಟ್ಟು ನೋಡುತ್ತದೆ. ಆದರೆ ಆರ್ಥಿಕ ಪ್ರಶ್ನೆಗಳನ್ನು ಅದು ನಿಭಾಯಿಸುವ ಕ್ರಮಗಳು ಬೇರೆಯಾಗುತ್ತವೆ. ಎಲ್ಲರಿಗೂ ಆರ್ಥಿಕವಾಗಿ ಸಮಾನ ಅವಕಾಶಗಳು ಎಂದು ಅದು ಹೇಳಿದರೂ ವಾಸ್ತವವಾಗಿ ಅದು ಹೇಗೆ ಸಾಧ್ಯವಾಗಿದೆಯೇ ಎಂದು ನೋಡಬೇಕಾಗುತ್ತದೆ. ಹೀಗಾಗಿ ತಾತ್ವಿಕತೆಗಳು ಬೇರೆ ಬೇರೆ ಅಂಶಗಳನ್ನು ಜೊತೆಗೆ ಇಟ್ಟುಕೊಂಡು ಇರುತ್ತವೆ. ಸಮಾಜವಾದದಲ್ಲಿ ಶಾಂತಿ ಅಂದರೆ ಬಂಡವಾಳವಾದವನ್ನು ಸಮರ್ಥಿಸುವುದು ಅಲ್ಲವೆನ್ನುವುದನ್ನು ಇಲ್ಲಿ ಮನಗಾಣಬೇಕು. ಸೂಚಕಗಳು ಬದಲಾಗುತ್ತವೆ ಮತ್ತು ತಾತ್ವಿಕತೆಯು ಕೂಡಾ ಅನನ್ಯತೆಯನ್ನು ಭಿನ್ನವಾಗಿಯೂ ರೂಪಿಸಿಕೊಳ್ಳುತ್ತವೆ. ಶಾಂತಿಗಾಗಿ ಹೋರಾಟ, ಸಮಾನತೆಗಾಗಿ ಹೋರಾಟ, ಮನುಷ್ಯರ ಹಕ್ಕುಗಳಿಗಾಗಿ ಹೋರಾಟ ಎನ್ನುವುದು ಅವುಗಳ ಅರ್ಥ ಮತ್ತು ಅದರ ಸೂಚಕರು ಯಾರು ಎನ್ನುವುದರ ಹಿನ್ನೆಲೆಯಲ್ಲಿ ಎನ್ನುವುದನ್ನು ಇಲ್ಲಿ ಮನಗಾಣಬೇಕು. ಈ ಎಲ್ಲದರಲ್ಲಿಯೂ ಸತ್ಯಗಳು ಇವೆ. ಈ ಹೋರಾಟಗಳು ನಿರ್ದಿಷ್ಟವಾದ ಸಂಘರ್ಷವನ್ನು ಹೇಳುತ್ತವೆ. ಕೆಲವು ಸೈದ್ಧಾಂತಿಕ ಹೋರಾಟಗಳು ನಿಜವಾಗಿಯೂ ಹೆಚ್ಚು ಅರ್ಥವನ್ನು ಒಳಗೊಂಡಿರುತ್ತವೆ. ಹೊಸದಾಗಿ ಸ್ಥಾಪನೆಯು ಆಗಬೇಕಾದ ಅಗತ್ಯವನ್ನು ಹೇಳುತ್ತವೆ. ಯಾವುದೇ ಹೋರಾಟಗಳು ಮೂಲತಃ ಕೆಲವು ವೈರುದ್ಧ್ಯಗಳನ್ನು ಎದುರಿಸುತ್ತವೆ. ಕೆಲವು ಸಂಗತಿಗಳು ಅಡಗುವ ಹಾಗೆ ಮಾಡುತ್ತವೆ. ಆದರೆ ಕೆಲವು ವಾದಗಳು ರಾಜಕೀಯವಾದ ಉದ್ದೇಶವನ್ನು ಹೊಂದಿರುತ್ತವೆ. ಸ್ತ್ರೀವಾದವು ಈ ದೃಷ್ಟಿಯಿಂದ ಒಂದು ಮಟ್ಟಿನ ಸಮಾನತೆಯನ್ನು ಹೇಳುತ್ತದೆ. ಅದು ರಾಜಕೀಯವಾದ ಒಂದು ಹೋರಾಟವೂ ಆಗಿದೆ. ಆದರೆ ವಿಶ್ವಾತ್ಮಕವಾದ ಕೆಲವು ಹೋರಾಟಗಳು ನಿಜವಾದ ಸಮಸ್ಯೆಯನ್ನು ಹೇಳುತ್ತವೆ. ಯಾವುದು ನಿಜವಾಗಿಯೂ ಯಜಮಾನಿಕೆಯನ್ನು ವಹಿಸುತ್ತವೆ ಮತ್ತು ಅದರ ಕಾರಣಗಳು ಏನು ಎನ್ನುವುದನ್ನು ಶೋಧಿಸುತ್ತವೆ.

ಮಾರ್ಕ್ಸ್‌ವಾದವು ಈ ದೃಷ್ಟಿಯಿಂದ ಯಜಮಾನಿಕೆಯು ಯಾವುದು ಎಂದು ಶೋಧಿಸುತ್ತದೆ ಮತ್ತು ಅದರಲ್ಲಿ ವಿಶ್ವಾತ್ಮಕವಾದ ನೆಲೆಯೂ ಇದೆ. ಮಹಿಳಾ ಪ್ರಶ್ನೆಯನ್ನು, ಪರಿಸರದ ಪ್ರಶ್ನೆಯನ್ನು ಮತ್ತು ಬೇರೆ ಪ್ರಶ್ನೆಗಳು ಅದರ ದೃಷ್ಟಿಯಲ್ಲಿ ಭಿನ್ನವಾಗಿವೆ. ಅಣ್ವಸ್ತ್ರವನ್ನು, ಮಹಿಳಾ ಪ್ರಶ್ನೆಯನ್ನು, ಶೋಷಣೆಯ ಪ್ರಶ್ನೆಯನ್ನು ಅದು ಒಂದು ಬಿಡಿಯಾದ ಭಾಗವಾಗಿ ಮಾತ್ರವೇ ಗ್ರಹಿಸುವುದೂ ಇಲ್ಲ. ಈ ಚರ್ಚೆಗೆ ರೂಪವಿದೆ ಎನ್ನುವುದೂ ಅದರ ನಿಲುವಾಗಿದೆ. ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳನ್ನು ನೋಡಬೇಕು. ಯಾವುದನ್ನು ವಿವರಣಾತ್ಮಕವಾದಿಗಳು ಹೇಳಿದರೋ ಅದರ ಸ್ವರೂಪವನ್ನು ಉಳಿದವರು ಅಲ್ಲಗಳೆದರು. ಆದರೆ ಅವರಿಬ್ಬರೂ ಯಾವುದನ್ನು ಆದ್ಯತೆಯನ್ನಾಗಿ ಮಾಡಿದರು ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ನಾಲ್ಕು ಕಾಲುಗಳು ಮತ್ತು ಬರೆಯಲು ಬೇಕಾದ ಹಲಿಗೆ ಜೋಡಣೆ ಹಾಗೂ ಅದರ ಉದ್ದೇಶಗಳೇ ಮೇಜು ಎಂದರೇನು ಎಂಬುದನ್ನು ಹೇಳುತ್ತವೆ ಎಂದು ವಿವರಣಾತ್ಮಕವಾದಿಗಳು ಹೇಳುತ್ತಾರೆ. ಅವರ ಪ್ರಕಾರ ಹಲಿಗೆ ಮತ್ತು ಅದರ ಜೋಡಣೆ ಹಾಗೂ ಅದರ ಉದ್ಧೇಶಗಳೇ ಹೆಚ್ಚು ಮಹತ್ವದ್ದು. ಆದರೆ ವಿವರಣಾತ್ಮಕವಾದಿಗಳು

ಹೇಳುವುದನ್ನು ನಿರಾಕರಿಸುವವರು ಅದರ ಸ್ವರೂಪವನ್ನು ಮತ್ತು ಅದರ ಹಿಂದಣ ಸಂಗತಿಗಳನ್ನು ಗ್ರಹಿಸಲು ಯತ್ನವನ್ನು ಮಾಡುತ್ತಾರೆ. ಬರೀ ವಿವರಣೆಯಲ್ಲಿ ಮಾತ್ರವೇ ಎಲ್ಲವನ್ನು ಹೇಳಲು ಆಗುವುದಿಲ್ಲವೆನ್ನುವುದು ಅವರ ನಿಲುವಾಗಿದೆ. ಎಷ್ಟೋ ಸರ್ತಿ ಈ ದಾರಿಯಲ್ಲಿ ಸಾಗಿದರೆ ಅರ್ಥವನ್ನು ತಪ್ಪಾಗಿಯೂ ಗ್ರಹಿಸಬಹುದು. ಪದವನ್ನು ಅರ್ಥ ಮಾಡಿಕೊಳ್ಳುವಾಗಲೇ ಅದು ಅನರ್ಥವನ್ನೂ ಉಂಟುಮಾಡಬಹುದು. ಆದರೆ ಲೇಖಕ ಮತ್ತು ಅವನ ಕುರಿತಾದ ಅನಗತ್ಯವಾದ ಕುತೂಹಲವೂ ಒಮ್ಮೊಮ್ಮೆ ಹಾದಿಯನ್ನು ತಪ್ಪಿಸಬಹುದು. ಉದ್ದೇಶಿತವಾದ ಅರ್ಥವು ಯಾವುದು ಮತ್ತು ಅನುದ್ದೇಶಿತವಾದ ಅರ್ಥವು ಯಾವುದು ಎನ್ನುವುದೂ ಅತ್ಯಂತ ಮುಖ್ಯವಾದ ಪ್ರಶ್ನೆಯು ಆಗಿದೆ. ಕೃತಿ ಮತ್ತು ಅದರ ಅರ್ಥವನ್ನು ನೋಡುವುದು ಅಂದರೆ ಅನೇಕರು ವರ್ಗೀಕರಣ ಮಾಡುವುದೂ ಅಂತಲೂ ತಿಳಿದುಕೊಳ್ಳುತ್ತಾರೆ.

ಸಾಹಿತ್ಯದ ಕೃತಿಯಲ್ಲಿ ನಾವು ಯಾವ ಕ್ರಿಯೆಯನ್ನು ಹೆಚ್ಚು ನೋಡುತ್ತೇವೆ ಎನ್ನುವುದೂ ಅತ್ಯಂತ ಮುಖ್ಯ. ವಿವರಣೆಗಳು ಕೃತಿಯನ್ನು ಅತ್ಯಂತ ಸಾಂಗವಾಗಿಯೇ ವಿವರಿಸುತ್ತವೆ. ಆದರೆ ಅಷ್ಟು ಮಾತ್ರವೇ ಕೃತಿಯು ಅಲ್ಲ. ಲೇಖಕ ಮತ್ತು ಅವನ ಕ್ರಿಯೆ, ಸಾಹಿತ್ಯ ಮತ್ತು ಅದರ ಕ್ರಿಯೆ ಹಾಗೂ ಓದುಗ ಮತ್ತು ಅವನ ಕ್ರಿಯೆಗಳು ಒಂದಕ್ಕೊಂದು ಸಂಧಿಸುತ್ತವೆ. ಮನುಷ್ಯನ ಜ್ಞಾನವೂ ಇದೇ ರೀತಿಯಲ್ಲಿ ಬೆಳೆದು ಬಂದಿದೆ. ವಿವರಣಾತ್ಮಕವಾದಿಗಳು ಮತ್ತು ಅವರನ್ನು ಟೀಕಿಸುವವರ ಮಧ್ಯೆಯೇ ಒಂದು ಸತ್ಯವೂ ಇದೆ ಎಂದು ಲಕಾನ್ ಹೇಳುತ್ತಾನೆ. ಅವನ ವಾದವೆಂದರೆ ಯಾವುದಕ್ಕೂ ಬರೀ ಒಂದೇ ಉಪಯೋಗವು ಇದೆ ಎಂದು ಹೇಳುವುದು ಅತ್ಯಂತ ಕಷ್ಟ. ಸಂವಹನದಲ್ಲಿ ಇದು ಅತ್ಯಂತ ಮುಖ್ಯವಾಗಿದೆ. ಮಗುವೊಂದು ಸಂತೆಯಲ್ಲೋ ಜಾತ್ರೆಯಲ್ಲೋ ಕಳೆದು ಹೋದರೆ ನಾವು ಹೇಗೆ ಹೇಳುತ್ತೇವೆ? ಆ ಮಗುವುದು ಗೋಧಿ ಬಣ್ಣ, ಸಾಧಾರಣ ಎತ್ತರ, ಕುತ್ತಿಗೆಯಲ್ಲಿ ಮಚ್ಚೆಯು ಇದೆ ಎಂದು ಹೇಳುತ್ತೇವೆ. ಅಂದರೆ ಇವುಗಳು ವಿವರಣೆಗಳೂ ಹೌದು. ಆದರೆ ಮತ್ತೆ ಒಂದು ಪ್ರಸಂಗವನ್ನು ನೋಡಬಹುದು : ಹೆಣವನ್ನು ಸುಡುವಾಗ ಅವನ ಕುತ್ತಿಗೆಯಲ್ಲಿ ಮಚ್ಚೆಯು ಇದೆಯೇ ಎಂದು ನೋಡಲು ಹೋಗುವುದಿಲ್ಲ. ವಿವರಣೆಗಳನ್ನು ಎಲ್ಲಿ ಅಗತ್ಯವಿದೆಯೋ ಅಲ್ಲಿ ಮಾತ್ರವೇ ಬಳಸುತ್ತೇವೆ. ಅದು ಸಂವಹನಕ್ಕೆ ಅತ್ಯಂತ ಅಗತ್ಯವಾಗುತ್ತದೆ. ಕೆಲವನ್ನು ಗುರುತಿಸುವಾಗ ನಮಗೆ ಹೆಸರು ಬೇಕು ಅಷ್ಟೆ. ಸಂವಹನಕ್ಕೆ ಒಂದು ಹೆಸರು ಬೇಕಾಗುತ್ತದೆ. ಅದುವೇ ಸತ್ಯವೆಂದೋ ಅದುವೇ ಮುಖ್ಯವೆಂದೋ ಹೇಳಬೇಕಾಗಿಲ್ಲ. ಮೇಜು ಎನ್ನುವುದು ಅದರ ಒಂದು ಗುರುತು ಮಾತ್ರವೇ ಆಗಿರುತ್ತದೆ. ಹೀಗಾಗಿ ಲಕಾನ್ ವಾಸ್ತವ ಮತ್ತು ವಾಸ್ತವತೆಯನ್ನು ಬೇರೆ ಮಾಡುತ್ತಾನೆ. ಕೆಲವು ವಿಷಯಗಳಿಗೆ ಭೌತಿಕವಾದ ಸ್ವರೂಪವೂ ಇರುತ್ತದೆ. ಮತ್ತು ಅವನ್ನು ಹಾಗೆ ವಿವರಿಸುತ್ತೇವೆ. ವಸ್ತು ಮತ್ತು ಅದರ ಭೌತಿಕವಾದ ಅಸ್ತಿತ್ವವೂ ಅತ್ಯಂತ ಮುಖ್ಯವಾಗುತ್ತದೆ. ಆದರೆ ಯಾರು ವಿವರಣೆಯನ್ನು ಒಪ್ಪುವುದಿಲ್ಲವೋ ಅವರು ಪರಿಣಾಮವನ್ನು ಕುರಿತು ಹೇಳಲಾರರು. ಈ ದೃಷ್ಟಿಯಿಂದ ಉದ್ದೇಶಿತ ವಸ್ತು ಮತ್ತು ಅದರ ವಿವರಣೆಗೆ ಅತ್ಯಂತ ಮಹತ್ವ ಇದೆ. ವಸ್ತು ಮತ್ತು ಅದು ಕೊಡುವ ಸೂಚನೆಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವವೂ ಇದೆ. ವ್ಯತ್ಯಾಸವು ಇರುವುದು ನಿಜ ಮತ್ತು ಅದನ್ನು ಸಂಕೇತದ ಮೂಲಕವೇ ಹೇಳಿಕೊಳ್ಳುವುದರಲ್ಲಿ ಎನ್ನುವುದನ್ನು

ಮರೆಯಬಾರದು. ವಾಸ್ತವತೆಯ ಭಾಷೆ ಎಂದರೆ ಅದು ಹೇಗೆ ಹೇಳುತ್ತದೆ ಎಂದು ಮಾತ್ರವೇ ಮುಖ್ಯ. ಅದರಲ್ಲಿ ನೇರ ಸಂಕೇತಗಳು ಇರುತ್ತವೆ. ಈ ಮಾದರಿಯಲ್ಲಿ ಶುದ್ಧ ಸೂಚಕನು ಇರುತ್ತಾನೆ. ಚಾರಿತ್ರಿಕ ಅನುಭವನ್ನು ಅವನು ನೇರವಾಗಿಯೇ ಹೇಳುತ್ತಾನೆ. ಏಕತೆ, ಅನನ್ಯತೆ ಮತ್ತು ಚಾರಿತ್ರಿಕವಾದ ಸತ್ಯಗಳು ಮುಖ್ಯವಾಗುತ್ತವೆ. ಆದ್ದರಿಂದ ಸೂಚಕನನ್ನು ಹೊರತುಪಡಿಸಿದ ಸೂಚನೆ ಎನ್ನುವುದೂ ಅರ್ಥ ಹೀನವಾಗುತ್ತದೆ. ಎಲ್ಲಕ್ಕಿಂತ ಅರ್ಥದ ತಾತ್ವಿಕತೆಯನ್ನು ನಾವು ಓದುವ ಸಂದರ್ಭದಲ್ಲಿ ಗ್ರಹಿಸಬೇಕಾಗುತ್ತದೆ. ಅರ್ಥದ ಅನುಭವ ನಮಗೆ ಬೇಕಾಗುತ್ತದೆ. ಯಾರು ನಿಜವಾಗಿಯೂ ಈ ರೀತಿಯ ಬರಹವನ್ನು ರೂಪಿಸುತ್ತಾರೆಯೋ ಅವರು ಬರವಣಿಗೆಯಲ್ಲಿ ತಮ್ಮ ಅನುಭವ ಮತ್ತು ಅದರ ಗ್ರಹಿಕೆಯನ್ನು ಒಂದು ರೀತಿಯಲ್ಲಿ ಮಂಡಿಸುತ್ತಾರೆ. ಅವರ ಬರಹದಲ್ಲಿ ವಸ್ತುವು ಎದ್ದುಕಾಣಿಸುತ್ತದೆ. ವಸ್ತು ಮತ್ತು ಅದರ ವಿವರಣೆಯು ಅವರಲ್ಲಿ ಹೆಚ್ಚು ಮುಖ್ಯವಾಗುತ್ತದೆ. ವಾಸ್ತವತೆಯಲ್ಲಿ ವ್ಯಕ್ತಿಯು ಮಾಡುವ ನಿರೂಪಣೆಯು ವಸ್ತು ಮತ್ತು ಅದರ ಸಾರವನ್ನು ಹೇಳುತ್ತದೆ. ಯಾರು ವಿವರಣೆಯನ್ನು ಮಾಡುತ್ತಾರೆಯೋ ಅವರು ತಮ್ಮ ಜನಾಂಗ ಮತ್ತು ದೇಶವನ್ನು ನೋಡುವ ವಿಧಾನವೂ ಬೇರೆಯಾಗುತ್ತದೆ. ಅವು ನಿರ್ದಿಷ್ಟವಾದ ಅರ್ಥವನ್ನು ಹೇಳುತ್ತವೆ. ಅರ್ಥಗಳನ್ನು ಅವರು ಕಟ್ಟಿ ಕೊಡುತ್ತಾರೆ. ಇದರಲ್ಲಿ ವಸ್ತು ಮತ್ತು ಅದರ ಅನನ್ಯತೆಯು ಹೆಚ್ಚು ಮುಖ್ಯವಾಗುತ್ತವೆ. ತಾತ್ವಿಕ ಅರ್ಥಕ್ಕೂ ಇದರಲ್ಲಿ ಹೆಚ್ಚು ನಿರ್ದಿಷ್ಟತೆಯು ಇದೆ. ಸೂಚಕನು ಇಲ್ಲಿ ತನ್ನ ಅನನ್ಯತೆಯನ್ನು ಮತ್ತು ನಿಲುವನ್ನು ಹೆಚ್ಚು ಖಚಿತವಾಗಿಯೂ ಹೇಳುತ್ತಾನೆ. ಸೂಚಕ ಮತ್ತು ಸೂಚಿತರು ಹಾಗೂ ಸೂಚನೆಗಳು ಹೆಚ್ಚು ಸ್ಪಷ್ಟವೂ ಆಗಿರುತ್ತದೆ ಪರಸ್ಪರ ಸಂಬಂಧವು ಇಲ್ಲಿ ಹೆಚ್ಚು ನಿಖರವೂ ಆಗಿರುತ್ತದೆ. ಹಾಗೆ ನೋಡುವುದಿದ್ದರೆ ಬಲಪಂಥೀಯರು ಇರುವುದುನ್ನು ಇರುವ ಹಾಗೆ ಹೇಳುವುದೂ ಇಲ್ಲ. ಅವರು ಸಾರ್ವಜನಿಕ ಅಸ್ತಿತ್ವವನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತವೆ. ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಬರೆಯುವವರು ಹೇಳುವುದು ಬೇರೆ ಸಂಗತಿಗಳನ್ನು. ಅವರು ಕಲ್ಪನೆಗೆ ಹೆಚ್ಚು ಒತ್ತನ್ನು ಕೊಡುತ್ತಾರೆ. ಕಲ್ಪನೆಗಳು ಮತ್ತು ಅದರ ಸ್ವರೂಪಗಳೇ ಬೇರೆಯಾಗಿರುತ್ತವೆ. ಅನ್ಯವನ್ನು ಅದು ಗುರುತಿಸುವುದು ಭಿನ್ನವಾದ ಮಟ್ಟದಲ್ಲಿ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಯಾವುದನ್ನು ಕಲ್ಪನೆ ಎಂದು ಹೇಳುತ್ತೇವೆಯೋ ಅದು ಕೂಡಾ ಸಾಮಾನ್ಯವಾದ ಜನರನ್ನು ಹೆಚ್ಚು ವಿವರಿಸುವ ಕಡೆಗೆ ಗಮನವನ್ನು ಕೊಡುವುದೂ ಇಲ್ಲ. ಕಲ್ಪನೆಯಲ್ಲಿ ಸಮಾಜದ ಎಲ್ಲ ವರ್ಗಗಳು ಬರುವುದೂ ಇಲ್ಲ. ಸಾಮಾನ್ಯರು ಮತ್ತು ಅವರ ಘನತೆಯ ಪ್ರಶ್ನೆಯೂ ಇಲ್ಲಿ ಮುಖ್ಯವಾಗುವುದು ಇಲ್ಲ. ನಾನು ಇದನ್ನು ಕಲ್ಪಿಸಿಕೊಂಡಿದ್ದೇನೆ ಮತ್ತು ಇದನ್ನು ನಾನು ಬರೆಯುತ್ತೇನೆ ಎನ್ನುವುದೂ ಮಾತ್ರವೇ ಇಲ್ಲಿ ಮುಂದೆ ಬರುತ್ತದೆ

ಸಾಂಸ್ಕೃತಿಕವಾದ ಸಂಗತಿಗಳು ಹೇಗೆ ಇರುತ್ತವೆ ಎನ್ನುವುದನ್ನು ಇಬ್ಬರೂ ಹೇಳುತ್ತಾರೆ ಎನ್ನುವುದು ಇಲ್ಲಿ ಮುಖ್ಯ. ಇಬ್ಬರೂ ಸಾಂಸ್ಕೃತಿಕ ಅರ್ಥ ಶಾಸ್ತ್ರವನ್ನು ಹೇಳುತ್ತಾರೆ. ಫುಕೋ ಅರ್ಥಶಾಸ್ತ್ರ ಎನ್ನುವುದು ಯಾರ ಕೈಯಲ್ಲಿ ಇರುತ್ತದೆ ಎಂದು ನಿರೂಪಿಸುತ್ತಾನೆ.

ಫುಕೋ ಆಲೋಚನೆ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುತ್ತಾನೆ. ಅವನು ಜ್ಞಾನ ಮತ್ತು ಅದರ ರೂಪವನ್ನು ಹೇಳುವಾಗ ಅದರ ಪ್ರಾಕ್ತನ ರೂಪವನ್ನು ಹೇಳುತ್ತಾನೆ. ಜ್ಞಾನವೂ

ಹೀಗೆ ಬೇರೆ ಬೇರೆ ವಿಧದಲ್ಲಿ ಕಟ್ಟಲಾಗಿದೆ. ಲೇಖಕ ಮತ್ತು ಅವನ ಪ್ರಜ್ಞೆಯನ್ನು ಅನೇಕವು ನಿರ್ಧರಿಸುತ್ತವೆ. ಮತ್ತು ಅದಕ್ಕೆ ಅತ್ಯಂತ ಮಹತ್ವದ ಜಾಗವೂ ಇದೆ. ನಮ್ಮ ಸಾಮಾಜಿಕ ಜ್ಞಾನ ಮತ್ತು ಅದರ ರೂಪಗಳು ತುಂಬಾ ಮಹತ್ವದ್ದೂ ಆಗಿದೆ. ಈ ದೃಷ್ಟಿಯಿಂದ ವ್ಯಕ್ತಿ ಮತ್ತು ಅವನ ಬರಹ ಹಾಗೂ ಅದನ್ನು ಗ್ರಹಿಸುವ ವಿಮರ್ಶಕನು ಒಂದು ಸಮಾನವಾದ ಪಾತಳಿಯಲ್ಲಿ ನಡೆಯಬೇಕಾಗುತ್ತದೆ. ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆಯು ಒಂದು ಕಡೆಗೆ ಸಂಧಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಅರ್ಥಶಾಸ್ತ್ರ, ರಾಜಕಾರಣ, ಸಮಾಜಶಾಸ್ತ್ರ ಮುಂತಾದವುಗಳು ಹೆಚ್ಚು ಸ್ಪಷ್ಟವಾಗಿರುತ್ತವೆ. ಪ್ರತಿಯೊಂದು ಆಲೋಚನೆಯ ಕ್ರಮವೂ ಕೂಡಾ ಚರಿತ್ರೆಯ ಬೇರನ್ನು ಹೊಂದಿರುತ್ತವೆ. ಫುಕೋ ಆಲೋಚನೆ ಮತ್ತು ಅದರ ಗ್ರಹಿಕೆಗೆ ಒಂದು ದೊಡ್ಡ ಇತಿಹಾಸವೂ ಇದೆ. ಯಾವುದೇ ಆಲೋಚನೆಯು ಸುಮ್ಮನೆ ಉಂಟಾಗಿರುವುದೂ ಇಲ್ಲ ಎಂದು ಹೇಳುತ್ತಾನೆ. ತತ್ವಜ್ಞಾನಕ್ಕೂ ಒಂದು ಪ್ರಾಕ್ತನ ರೂಪವಿರುತ್ತದೆ. ಆದರೆ ಸಾಹಿತ್ಯಕ್ಕೆ ಬಂದರೆ ಸ್ವಂತಿಕೆಯ ಪ್ರಶ್ನೆಯು ಹೆಚ್ಚು ಸೂಕ್ಷ್ಮವಾಗುತ್ತದೆ. ಮತ್ತು ಸ್ವಂತಿಕೆಯ ಪ್ರಶ್ನೆಯು ಸ್ವಲ್ಪ ಮಟ್ಟಿಗೆ ಅನುಮಾನವನ್ನು ಉಂಟು ಮಾಡುತ್ತದೆ. ಸಾಹಿತ್ಯವು ಒಂದು ನಿಯಮವನ್ನು ಒಳಗೊಂಡಿರುವುದರಿಂದ ಅದರ ಸ್ವರೂಪವನ್ನು ಅದು ಯಾವಾಗ ರಚಿತವಾಗಿದೆ ಎಂದೂ ಗ್ರಹಿಸಬೇಕಾಗುತ್ತದೆ. ಓದಿನ ಬಹುತ್ವ ಮತ್ತು ಅದರ ಚಾರಿತ್ರಿಕತೆಯು ಈ ಕಾರಣದಿಂದ ಒಂದು ನಿಲುವನ್ನು ಹೊಂದುವುದೂ ಅಗತ್ಯವಾಗುತ್ತದೆ.

ಫುಕೋ ಹೇಳುವ ಅಧಿಕಾರ ಸಿದ್ಧಾಂತವು ಭಿನ್ನವಾದ ನಿಲುವನ್ನು ಹೇಳುತ್ತದೆ. ಮತ್ತೆ ಒಂದು ಅಂಶವನ್ನು ಇಲ್ಲಿ ಗುರುತಿಸಬೇಕಾಗುತ್ತದೆ. ಹತ್ತೊಂಬತ್ತನೆಯ ಶತಮಾನದ ಅನಂತರ ನಿಸರ್ಗ ಮತ್ತು ಅದರ ಚರ್ಚೆಯು ಬೇರೆಯಾಯಿತು. ಕಾನೂನು ಮತ್ತು ಅದರ ವ್ಯಾಪ್ತಿಯೂ ಬೇರೆಯಾಯಿತು. ಕಾಫ್ಕನ ದಿ ಟ್ರಯಲ್ ಕಾದಂಬರಿಯಲ್ಲಿ ಬರುವ ಮುಖ್ಯವಾದ ಮಾತು ಎಂದರೆ ಯಾವುದು ನಮಗೆ ಅಗತ್ಯವಿದೆಯೋ ಅದನ್ನು ಮಾತ್ರವೇ ನಂಬಿದರೆ ಸಾಕು. ನಂಬಿಕೆ ಮತ್ತು ಅದೃಷ್ಟವು ಜೊತೆಗೆ ಹೋಗುತ್ತದೆ ಎಂದು ಇದರ ಅರ್ಥವಲ್ಲ. ನಂಬಿಕೆಯೂ ಕೆಲವೊಮ್ಮೆ ಕುಸಿಯುತ್ತದೆ.

೨೨

ಸಾಂಸ್ಕೃತಿಕ ಸಂಕರಗಳು ಮತ್ತು ಸ್ವಾತಂತ್ರ್ಯ

ನೀತಿಯು ನಮ್ಮನ್ನು ರೂಪಿಸುತ್ತದೆ ಎನ್ನುವುದನ್ನು ಈಗಾಗಲೆ ನೋಡಿದ್ದೇವೆ.,ಅದು ಅನೇಕ ಆಚರಣೆಗಳನ್ನು ಹುಟ್ಟುಹಾಕುತ್ತದೆ. ಆದರೆ ಪಶ್ಚಿಮವು ಧರ್ಮವನ್ನು ನೋಡುವ ಕ್ರಮಕ್ಕೂ ಪೂರ್ವ ದೇಶಗಳು ಧರ್ಮವನ್ನು ನೋಡುವ ಕ್ರಮಕ್ಕೂ ವ್ಯತ್ಯಾಸವಿದೆ. ಅದನ್ನು ಪರಿಶೀಲನೆ ಮಾಡುವಾಗ ಅನೇಕರು ಅದನ್ನು ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದರೆ ಫುಕೋ ಅದನ್ನು ಬಿಟ್ಟು ಮತ್ತೊಂದು ದೃಷ್ಟಿಕೋನದಿಂದ ಸಂಸ್ಕೃತಿ ಮತ್ತು ಧರ್ಮವನ್ನು ನೋಡಲು ಯತ್ನ ಮಾಡುತ್ತಾನೆ. ಈ ಕಾರಣದಿಂದ ಅವನು ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಗಳು ಬೇರೆ ಎಂದು ತಿಳಿಯುತ್ತಾನೆ. ಪಶ್ಚಿಮದ ಜನರು ಮತ್ತು ಅವರ ಸಾಂಸ್ಕೃತಿಕವಾದ ಅಭಿವ್ಯಕ್ತಿಗಳು ತುಂಬಾ ಅಂತಸ್ಥವಾಗಿರುತ್ತದೆ. ಇವುಗಳಲ್ಲಿ ನಿಜವಾದ ಸತ್ಯವು ಹೇಗೆ ಇದೆ ಎಂದು ನೋಡಬೇಕಾಗುತ್ತದೆ. ಇದರ ಚರ್ಚೆಯಲ್ಲಿ ಫುಕೋ ಪ್ರತಿ ಸಂಕಥನವನ್ನು ಹುಟ್ಟು ಹಾಕುತ್ತಾನೆ. ಪಶ್ಚಿಮ ಮತ್ತು ಅದರ ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ಅವನು ಒಬ್ಬ ಅಧ್ಯಾಪಕ ಅಥವಾ ಒಬ್ಬ ನೀತಿವಾದಿಯಂತೆ ನೋಡುತ್ತಾನೆ ಎನ್ನುವ ಆರೋಪವೂ ಇದೆ.ಆದರೆ ಯಾವುದೇ ಸಂದೇಹವು ಇಲ್ಲದೆ ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಯು ತನ್ನದೇ ತತ್ವಜ್ಞಾನಗಳನ್ನು ಹೊಂದಿವೆ, ಅದರಲ್ಲಿ ನೀತಿ,ಜೀವನ ಮತ್ತು ಅದರ ಬಗೆಗೆ ಇರುವ ದೃಷ್ಟಿಕೋನಗಳು ಬೇರೆಯಾಗಿವೆ. ಜೆನ್ ಬೌದ್ಧವಾದ ಮತ್ತು ಕ್ರಿಶ್ಚಿಯನ್ ತತ್ವಜ್ಞಾನವನ್ನು ಅವನು ತೌಲನಿಕವಾಗಿ ಗ್ರಹಿಸಿದ್ದಾನೆ. ಆದರೆ ಸಾಂಸ್ಕೃತಿಕವಾದ ಸಂಕರವು ನಡೆಯುತ್ತದೆ.

ಪಶ್ಚಿಮದ ಸಂಪ್ರದಾಯದಲ್ಲಿ ಸ್ವಾತಂತ್ರ್ಯ ಮತ್ತು ಅದರ ಚರ್ಚೆಯು ಬಹಳ ಹಿಂದಿನಿಂದಲೂ ಇದೆ. ಅದಕ್ಕೆ ಒಂದು ಪರಂಪರೆಯು ಇದೆ. ಸ್ವತಂತ್ರನಾಗುವುದು ಅಂದರೆ ಎಲ್ಲಾ ರೀತಿಯ ಬಂಧನದಿಂದ ಬಿಡುಗಡೆ ಹೊಂದುವುದೂ ಹೌದು. ಆದ್ದರಿಂದ ಪಶ್ಚಿಮದ ಧರ್ಮ ಮತ್ತು ನೀತಿ

ಶಾಸ್ತ್ರವು ಇದರ ಬಗ್ಗೆ ಹೆಚ್ಚು ಚರ್ಚೆಯನ್ನು ಮಾಡಿವೆ. ಪ್ರಾಚೀನವಾದ ಗ್ರೀಕ್ ಪರಂಪರೆಯು ಈ ಪ್ರಶ್ನೆಯನ್ನು ಎತ್ತಿಕೊಂಡಿದೆ. ನೀತಿಶಾಸ್ತ್ರದ ಚರಿತ್ರೆಗೆ ಮತ್ತು ಸ್ವಾತಂತ್ರ್ಯದ ಕಲ್ಪನೆಗೆ ಒಂದು ಸಂಬಂಧವು ಇದೆ. ಮಾನವೀಯತೆ, ಮನುಷ್ಯತ್ವ ಮತ್ತು ಸ್ವಾತಂತ್ರ್ಯ ಎನ್ನುವುದು ಗ್ರೀಕ್ ಪರಂಪರೆಯಲ್ಲಿ ಅತ್ಯಂತ ಮಹತ್ವದ ವಾಗ್ವಾದವೂ ಹೌದು. ಮನುಷ್ಯ ಎನ್ನುವ ಪ್ರಾಣಿಯು ಹೆಚ್ಚು ಸ್ವತಂತ್ರ ಮತ್ತು ಪ್ರಾಣಿಗಳು ಸ್ವತಂತ್ರ ವಲ್ಲ ಎನ್ನುವುದು ಅಲ್ಲಿ ಮುಖ್ಯವಾದ ಚರ್ಚೆಯನ್ನು ಹುಟ್ಟುಹಾಕಿತ್ತು. ಆದರೆ ಯಾವುದು ನಿಜವಾದ ಒಂದು ಸ್ವಾತಂತ್ರ್ಯ ಎನ್ನುವುದು ಇಲ್ಲಿ ಮುಖ್ಯ. ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇರುವ ನಿಜವಾದ ರೇಖೆಯು ಯಾವುದು ಎಂದು ಹೇಳುವುದು ಕಷ್ಟ. ನಮ್ಮ ಭಾವನೆಗಳು ಮತ್ತು ಸ್ವಾತಂತ್ರ್ಯಕ್ಕೆ ಯಾವ ಸಂಬಂಧವಿದೆ? ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇಷ್ಟೊಂದು ವ್ಯತ್ಯಾಸವು ಬರಲು ಕಾರಣವೇನು? ನಾವು ಸ್ವತಂತ್ರರಾಗಿದ್ದರೆ ನಮ್ಮನ್ನು ಯಾವುದು ನಿಯಂತ್ರಣ ಮಾಡುತ್ತದೆ? ಸ್ವಾತಂತ್ರ್ಯ ಮತ್ತು ದೇವರಿಗೆ ಯಾವ ಸಂಬಂಧವು ಇದೆ ಮುಂತಾದ ಪ್ರಶ್ನೆಗಳು ಆಗ ಇದ್ದು ಸತ್ಯ. ಈ ಪ್ರಶ್ನೆಗಳಿಗೆ ಒಂದು ಚಾರಿತ್ರಿಕವಾದ ಮಹತ್ವವು ಇದೆ. ಬೇರೆ ಬೇರೆ ಚಾರಿತ್ರಿಕ ಸನ್ನಿವೇಶದಲ್ಲಿ ಈ ಪ್ರಶ್ನೆಗಳು ಮತ್ತೆ ಮತ್ತೆ ಪುನರಾವರ್ತನೆಯಾಗಿರುವುದೂ ಈ ಪ್ರಶ್ನೆಗಳ ಮಹತ್ವವವನ್ನು ಹೇಳುತ್ತವೆ. ಈ ಪ್ರಶ್ನೆಗಳ ಮತ್ತೊಂದು ರೂಪವನ್ನು ನಾವು ನೋಡಬೇಕು. ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಎನ್ನುವುದು ಇದ್ದರೆ ಕಪ್ಪು ಮನುಷ್ಯ ಮತ್ತು ಬಿಳಿಯ ಮನುಷ್ಯ ಎನ್ನುವ ಪ್ರಶ್ನೆಯು ಯಾಕೆ ಬಂತು ಎಂದು ಕೇಳಬೇಕಾಗುತ್ತದೆ. ಈ ತಾರತಮ್ಯವನ್ನು ದೇವರು ಸೃಷ್ಟಿಮಾಡಿಲ್ಲ. ಇದರ ಜೊತೆಗೆ ಯಾವ ನೀತಿ ಶಾಸ್ತ್ರವು ಕೆಲಸವನ್ನು ಮಾಡಿದೆ ಎಂದರೆ ಉತ್ತರವು ಅಷ್ಟು ಸುಲಭವಲ್ಲ. ಫುಕೋ ಈ ದೃಷ್ಟಿಯಿಂದಲೇ ಕೆಲವು ಪರಿಕಲ್ಪನೆಗಳನ್ನು ಚಾಲ್ತಿಗೆ ತಂದಿದ್ದಾನೆ. ಅವನು ಯಜಮಾನಿಕೆ, ಅಪರಾಧ, ಸ್ವಾತಂತ್ರ್ಯ, ಹಕ್ಕುಗಳ ಕುರಿತು ತನ್ನದೇ ಆದ ವಾದವನ್ನು ಮಂಡಿಸಿದ್ದಾನೆ. ಅವನ ಪ್ರಕಾರ ಸ್ವಾತಂತ್ರ್ಯ ಎನ್ನುವುದನ್ನು ಯಾರೂ ನಮಗೆ ಕೊಡುವುದಿಲ್ಲ. ಅದು ದಾನವೂ ಅಲ್ಲ. ಸ್ವಾತಂತ್ರ್ಯ ಎನ್ನುವುದು ನಮ್ಮ ಆಗುವ ಪ್ರಕ್ರಿಯೆಯಲ್ಲಿ ಒಂದು ಭಾಗ. ನಾವು ಜಗತ್ತಿನ ಜೊತೆಗೆ ಯಾವ ಸಂಬಂಧವನ್ನು ಇಟ್ಟುಕೊಳ್ಳುತ್ತೇವೆ ಅದರಂತೆ ಸ್ವಾತಂತ್ರ್ಯವು ಇರುತ್ತದೆ. ಅದು ಸ್ವಂತಿಕೆ ಮತ್ತು ಅದರ ಚಟುವಟಿಕೆಯನ್ನು ಹೇಳುತ್ತದೆ. ಅದು ಹಿಂದಿನಿಂದ ಬಂದ ಒಂದು ಕ್ರಿಯೆ. ನಿಜವಾದ ಸ್ವಾತಂತ್ರ್ಯವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದರ ವಂಶಾವಳಿ ಚಿಹ್ನೆಗಳನ್ನು ಅರ್ಥ ಮಾಡಿಕೊಳ್ಳುವುದು. ನಮ್ಮ ವರ್ತಮಾನವನ್ನು ಈ ದೃಷ್ಟಿಯಲ್ಲಿ ನೋಡಬೇಕಾಗುತ್ತದೆ. ಅವನಲ್ಲಿ ಅದು ವಂಶಾವಳಿಯ ಪ್ರಶ್ನೆಯೂ ಹೌದು ಸ್ವಾತಂತ್ರ್ಯ ಮತ್ತು ಅದರ ಹಿಂದೆ ಇರುವ ಚರಿತ್ರೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕೆಂದು ಅವನು ಹೇಳುತ್ತಾನೆ. ವಾಸ್ತವವಾಗಿ ಸ್ವಾತಂತ್ರ್ಯ ಎನ್ನುವುದು ಪಶ್ಚಿಮದ ತತ್ವಜ್ಞಾನವನ್ನು ಗ್ರಹಿಸಲು ಬೇಕಾದ ಕೀಲಿ ಕೈ ಕೂಡಾ ಹೌದು.

ಇದನ್ನು ಹೇಳುವಾಗ ಮೊದಲ ಚರ್ಚೆಯನ್ನು ಪ್ರಾರಂಭ ಮಾಡಿದವರಲ್ಲಿ ಸಾಕ್ರೆಟಿಸ್ ಕೂಡಾ ಒಬ್ಬ. ಅದನ್ನು ಪುಕೋ ಗಮನಿಸಿದ್ದಾನೆ ಅವನ ಅಭಿಪ್ರಾಯವು ಈ ದೃಷ್ಟಿಯಿಂದ ಬೇರೆಯಾಗಿದೆ. ಅವನು ಸಾಕ್ರೆಟಿಸ್ ತನ್ನ ಬರಹಗಳಲ್ಲಿ ತತ್ವಜ್ಞಾನ ಮತ್ತು ಜೀವನ ಕ್ರಮವು ಒಂದಾಗಿದೆ ಎಂದು ಹೇಳುತ್ತಾನೆ. ನಾವು ಯಾವುದನ್ನೂ ಪರಿಶೀಲನೆ ಮಾಡದೆ ಒಪ್ಪಿಕೊಳ್ಳುವುದು ಸರಿಯಲ್ಲ ಎನ್ನುವುದು ಅವನ ನಿಲುವು. ಸಾಕ್ರೆಟಿಸ್ ಯುವ ಜನರನ್ನು ಹಾದಿ ತಪ್ಪಿಸುತ್ತಾನೆ

ಎನ್ನುವ ಅಪಾದನೆಯು ಇತ್ತು. ಆದರೂ ವ್ಯಕ್ತಿ ಮತ್ತು ಅವನ ಘನತೆ ಹಾಗೂ ಅವನ ಜ್ಞಾನ ಮತ್ತು ಧೈರ್ಯವನ್ನು ಕುರಿತು ಅವನು ಹೇಳುತ್ತಾನೆ. ಜ್ಞಾನ ಮತ್ತು ವ್ಯಕ್ತಿಯ ಘನತೆ ಎನ್ನುವುದಕ್ಕೆ ವಿವಿಧ ಆಯಾಮಗಳೂ ಇರುತ್ತವೆ. ಅವನಿಗೆ ಜ್ಞಾನ ಮತ್ತು ಸಮಾಜ ಎನ್ನುವುದು ಬೇರೆ ಸೂಚನೆಗಳನ್ನು ಕೊಡುತ್ತವೆ. ಸ್ವಂತಿಕೆ ಮತ್ತು ಅದರ ಯಜಮಾನಿಕೆಯನ್ನು ಅವನು ಒಪ್ಪುತ್ತಾನೆ. ಅವನಲ್ಲಿ ಒಂದು ನೈತಿಕವಾದ ನಿಲುವು ಇದೆ. ಅದರ ಚೌಕಟ್ಟಿನಲ್ಲಿ ನಿಂತು ಕೊಂಡು ಜ್ಞಾನವನ್ನು ವಿಶ್ಲೇಷಣೆ ಮಾಡುತ್ತಾನೆ. ಪ್ಲೆಟೋನಿಗಿಂತ ಭಿನ್ನವಾದ ಒಂದು ನಿಲುವನ್ನು ಅವನು ಹೊಂದಿದ್ದಾನೆ. ಸಾಕ್ರೇಟಿಸ್ ಪ್ರಶ್ನೆಗಳನ್ನು ಎತ್ತುತ್ತಾನೆ. ಆದರೆ ಅನೇಕ ವಿಷಯಗಳ ಕುರಿತು ಒಂದು ಮೌನವನ್ನು ಹೊಂದುತ್ತಾನೆ. ವ್ಯಕ್ತಿ ಮತ್ತು ಅವನ ಘನತೆ ಎನ್ನುವುದು ಯಾವತ್ತೂ ಜ್ಞಾನ ಎನ್ನುವುದು ಅವನ ನಿಲುವು. ನನಗೆ ಏನೂ ಗೊತ್ತಿಲ್ಲ ಎನ್ನುವುದು ನನಗೆ ಗೊತ್ತಿದೆ ಎಂದು ಅವನು ಹೇಳುತ್ತಾನೆ. ವ್ಯಕ್ತಿ ಮತ್ತು ಅವನ ಘನತೆಯು ಹೇಗೆ ಇರುತ್ತದೆ ಎನ್ನುವುದನ್ನು ಅವನು ವಿವರಿಸುತ್ತಾನೆ. ಆಲೋಚನೆ, ಸಂವೇದನೆ, ತೀರ್ಪು ಅತ್ಯಂತ ಮುಖ್ಯ ಆದರೆ ಇನ್ನೊಂದು ವಿಚಾರದಲ್ಲಿ ಅವನು ಅತ್ಯಂತ ಮುಖ್ಯನಾಗಿದ್ದಾನೆ. ಅವನು ದ್ವಂದ್ವಾತ್ಮಕತೆ ಎನ್ನುವುದನ್ನು ಚಾಲ್ತಿಗೆ ತರುತ್ತಾನೆ. ಆತ್ಮ ಮತ್ತು ಅದರ ಶಕ್ತಿಯನ್ನು ಅವನು ಅವಲಂಬಿಸುತ್ತಾನೆ. ನಿಜವಾದ ವಿವೇಕಿಯಾದ ಮನುಷ್ಯನು ಈ ಜಗತ್ತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲ ಎನ್ನುವುದು ಅವನ ಮತ್ತೊಂದು ವಾದ. ಪ್ರಜಾಪ್ರಭುತ್ವ ಎನ್ನುವುದು ಕಾರ್ಯ ಸಾಧುವೇ ಎನ್ನುವುದು ಅವನ ಪ್ರಶ್ನೆ. ಆದ್ದರಿಂದ ಆತ್ಮದ ವಿಮರ್ಶೆ ಎನ್ನುವುದನ್ನು ಅವನು ವಿಶಿಷ್ಟವಾದ ಅರ್ಥದಲ್ಲಿ ಬಳಸಿದ್ದಾನೆ. ಪ್ರಜಾಪ್ರಭುತ್ವ ಎನ್ನುವುದನ್ನು ನಾವು ಇಂಗ್ಲೀಶಿನಲ್ಲಿ ಡೆಮಾಕ್ರಸಿ ಎಂದು ಕರೆಯುತ್ತಾರೆ. ಡೆಮೋಸ್ ಅಂದರೆ ಜನರು ಎಂದು ಅರ್ಥ. ಅಗೊಗಸ್ ಅಂದರೆ ನೇತೃತ್ವವನ್ನು ವಹಿಸಿಕೊಳ್ಳುವುದು. ಇದು ಗ್ರೀಕ್ ಭಾಷೆಯಲ್ಲಿ ಚಾಲ್ತಿಯಲ್ಲಿ ಇತ್ತು. ಆದರೆ ಅದು ಅಥೆನ್ಸ್ ನಗರದಲ್ಲಿ ಕೆಟ್ಟ ಅನುಭವವನ್ನು ಕೊಟ್ಟಿತ್ತು. ಆದ್ದರಿಂದ ಸಾಕ್ರೇಟಿಸ್ ಪ್ರಜಾಪ್ರಭುತ್ವವನ್ನು ವಿರೋಧಿಸಿದ್ದ. ಆದರೆ ಸಾಕ್ರೆಟಿಸ್ ನೈತಿಕತೆ ಮತ್ತು ಜ್ಞಾನವನ್ನು ಸಮೀಕರಿಸಿದ್ದು ಘುಕೋನ ಗಮನದಲ್ಲಿ ಇದೆ. ಯಾವುದು ಸರಿಯೆಂದು ನಾವು ತಿಳಿದುಕೊಂಡರೆ ಆಗ ಅಪಾಯವಿಲ್ಲ. ಆದರೆ ಯಾವಾಗ ನಾವು ತಪ್ಪು ನಂಬಿಕೆ ತಪ್ಪು ಫಲಿತಾಂಶಕ್ಕೆ ಕಾರಣವಾಗುತ್ತದೆ. ಗ್ರೀಕ್‌ನಲ್ಲಿ ಎಡುಯ್ಯೆಮೊನಿಯಾ ಎಂದು ಹೇಳುತ್ತಾರೆ. ಯಾರಿಗೆ ನಿಜವಾದ ಅರಿವು ಇದೆಯೋ ಅವರು ತಪ್ಪು ಆಯ್ಕೆಯನ್ನು ಮಾಡಲಾರರು. ಅಜ್ಞಾನ ಎನ್ನುವುದು ನಿಜವಾದ ಅರ್ಥದಲ್ಲಿ ಒಂದು ನೈತಿಕ ಅದಃಪತನ. ಇದನ್ನು ಫುಕೋ ತನ್ನ ವಾದದದಲ್ಲಿ ಮುಂದುವರಿಸುತ್ತಾನೆ. ಅವನ ಹಿಸ್ಟ್ರಿ ಆಫ್ ಸೆಕ್ಸುವಲಿಟಿಯಲ್ಲಿ ಇದರ ಚರ್ಚೆಯನ್ನು ನಾವು ಕಾಣುತ್ತೇವೆ. ಸಾಕ್ರೆಟಿಸ್ ಬಾಳುವ ತಂತ್ರಗಾರಿಕೆಯನ್ನು ಹೇಳುತ್ತಾನೆ.. (ತೆಕ್ನೆ ತೌಬಿವೌ) ಇದು ಮುಂದುವರಿದು ಸ್ವಂತಿಕೆ ಮತ್ತು ಅದರ ರಕ್ಷಣೆಯ ಕಡೆಗೆ ಹೋಗುತ್ತದೆ. ಸಾಕ್ರೆಟಿಸ್ ಜೀವನ ಮತ್ತು ಅದರ ಕಲೆ ಎನ್ನುವುದು ಮತ್ತೊಂದು ಅರ್ಥದಲ್ಲಿ ಆತ್ಮವನ್ನು ರಕ್ಷಿಸುವ ಒಂದು ವಿಧಾನವೂ ಹೌದು. ಅವನಲ್ಲಿ ಆತ್ಮ ರಕ್ಷಣೆ ಎನ್ನುವುದು ಕೂಡಾ ಒಂದು ಬಗೆಯ ಜ್ಞಾನ,.ಮತ್ತೊಂದು ಕಡೆಯಿಂದ ಅದು ತನ್ನನ್ನು ತಾನು ನಿಯಂತ್ರಿಸಿಕೊಳ್ಳುವ ವಿಧಾನ. ತನ್ನ ಅರಿವು ಮತ್ತು ತನ್ನ ತಿಳುವಳಿಕೆ ಎನ್ನುವುದಕ್ಕೆ ಸಾಕ್ರೆಟಿಸ್‌ನಲ್ಲಿ ವಿಶೇಷವಾದ ಅರ್ಥವಿದೆ. ಆತ್ಮ ರಕ್ಷಣೆ ಎನ್ನುವುದು ಕೂಡಾ ಆತ್ಮರತಿಯನ್ನು ಹೇಳಬಹುದು. ಅದನ್ನು ಫುಕೋ ವಿವರಿಸುತ್ತಾನೆ. ಆತ್ಮ ರಕ್ಷಣೆ ಅಥವಾ ಆತ್ಮರತಿಯು ಹೆಚ್ಚು ಮುಂದುವರಿದರೆ ಅದು ಇನ್ನೊಬ್ಬರನ್ನು ಆಳುವುದಕ್ಕೆ ಅವಕಾಶವನ್ನು ಕಲ್ಪಿಸಬಹುದು.

ಫುಕೋ ಸತ್ಯ ಮತ್ತು ಸ್ವಯಂ ಅಸ್ತಿತ್ವಗಳ ನಡುವೆ ಒಂದು ಸಂಬಂಧವನ್ನು ಕಲ್ಪಿಸುತ್ತಾನೆ. ಸತ್ಯವನ್ನು ಹೇಳುವುದು ಅಂದರೆ ಅದು ತನಗೂ ಹೌದು, ಅನ್ಯರಿಗೂ ಹೌದು. ತನ್ನ ಅಸ್ತಿತ್ವದಲ್ಲಿ ಹೇಗೆ ಸತ್ಯವು ಮುಖ್ಯವಾಗುತ್ತದೆಯೋ ಅದೇ ರೀತಿಯಲ್ಲಿ ಅದೇ ಅನ್ಯರಿಗೂ ಮುಖ್ಯವಾಗುತ್ತದೆ. ಸಾಕ್ರೆಟಿಸ್ ಹೇಳಿದ ವಿಚಾರಗಳನ್ನು ಫುಕೋ ಇಲ್ಲಿಗೆ ಅನ್ವಯವನ್ನು ಮಾಡುತ್ತಾನೆ. ಸಾಕ್ರೆಟಿಸ್ ಕೊನೆಯ ದಿನಗಳಲ್ಲಿ ಪ್ರಸ್ತಾವಿಸಿದ ಸಂಗತಿಗಳು ಇಲ್ಲಿ ಮುಖ್ಯವಾಗುತ್ತದೆ ಎಂದು ಫುಕೋ ಭಾವಿಸುತ್ತಾನೆ. ಸತ್ಯ ಮತ್ತು ಅದರ ನಿರೂಪಣೆಯಲ್ಲಿ ನಮಗೆ ಬೇಕಾಗಿರುವುದು ಮೊದಲನೆಯದಾಗಿ ಒಂದು ಧೈರ್ಯ. ಫುಕೋ ಎಪೆಕ್ಟಿಸ್‌ನ ಚರ್ಚೆಯನ್ನು ಬಳಸುತ್ತಾನೆ. ಯಾವುದೇ ಒಂದು ವಸ್ತುವು ತನ್ನಿಂದ ತಾನೇ ನಮ್ಮನ್ನು ಕಾಡುವುದಿಲ್ಲ. ನಮ್ಮ ನೋಟವು ಯಾವುದು ಇದೆಯೋ ಅದು ನಮ್ಮನ್ನು ಕಾಡುತ್ತದೆ ಎನ್ನುವುದು ಅವನ ವಾದ. ಫುಕೋ ಇದನ್ನು ಗಮನಿಸಿಕೊಂಡು ಹಾಗೆ ನೋಡಿದರೆ ತನ್ನ ಸ್ವಂತಿಕೆಯನ್ನು ರಕ್ಷಿಸಿಕೊಳ್ಳುವುದು ಅತ್ಯಂತ ಕಷ್ಟ. ಇದನ್ನೇ ಫುಕೋ ಹೇಳುತ್ತಾನೆ. ಆತ್ಮ ಮತ್ತು ಅದರ ರಕ್ಷಣೆ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಅವನು ಹೇಳುತ್ತಾನೆ.

ಮೊದಲ ಕ್ರಿಶ್ಚಿಯನ್ ತತ್ವಶಾಸ್ತ್ರಜ್ಞನ ಎನ್ನುವ ಹೆಸರಿಗೆ ಪಾತ್ರನಾಗಿದ್ದಾನೆ. ಅವನ ಅತ್ಯಂತ ಮಹತ್ವದ ಕೃತಿಗಳೆಂದರೆ ದ ಸಿಟಿ ಆಫ್ ಗಾಡ್, ಓನ್ ಫ್ರೀ ಚಾಯಿಸ್ ಆಫ್ ದ ವಿಲ್, ಕನ್ಸರಿಂಗ್ ದ ನೇಚರ್ ಆಫ್ ಗಾಡ್. ಅವನ ಅತ್ಯಂತ ಮುಖ್ಯವಾದ ನಿಲುವು ಹೀಗೆ ಇದೆ: ದೇವರೇ ಕೆಲವು ವಿಷಯಗಳಲ್ಲಿ ನಮಗೆ ನ್ಯಾಯವನ್ನು ಕೊಡುತ್ತಾನೆ.ಅವನಲ್ಲಿ ಥಿಯೋ ಅಂದರೆ ದೇವರು. ಡೈಕೆ ಅಂದರೆ ನ್ಯಾಯ ಇದು ಅವನ ಅತ್ಯಂತ ಮುಖ್ಯವಾದ ಪರಿಕಲ್ಪನೆ. ಅದರ ಮೂಲಕ ಅವನು ಒಂದು ಪ್ರಮೇಯವನ್ನು ರೂಪಿಸುತ್ತಾನೆ. ಅವನು ಮತ್ತೊಂದು ಮಹತ್ವದ ವಿಚಾರವನ್ನು ನಮ್ಮ ಮುಂದೆ ಇಡುತ್ತಾನೆ. ಕೇಡು ಮತ್ತು ಒಳ್ಳೆಯತನ ಎನ್ನುವುದು ಮನುಷ್ಯರಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಜಗತ್ತಿನಲ್ಲಿ ನಾವು ಕೇಡು ಎನ್ನುವುದು ಇಲ್ಲವೇ ಇಲ್ಲ ಎಂದು ವಾದಿಸಲು ಬರುವುದಿಲ್ಲ. ಕೇಡು ಎನ್ನುವುದು ಯಾವತ್ತೂ ನಮಗೆ ಕಣ್ಣಿಗೆ ಕಾಣಿಸುವ ಸಂಗತಿಯು ಅಲ್ಲ. ಅದರಲ್ಲಿ ಬೇರೆ ಬೇರೆ ಅಂಶಗಳೂ ಇರುತ್ತವೆ. ಕೇಡು ಎನ್ನುವುದು ಹುಟ್ಟುವುದೇ ಮನುಷ್ಯ ಮತ್ತು ಅವನ ಅಸ್ತಿತ್ವದಲ್ಲಿ ಎನ್ನುವುದನ್ನು ಗಮನಿಸಬೇಕು ಎಂದು ಅವನು ಹೇಳುತ್ತಾನೆ. ನಮಗೆ ನಮ್ಮ ಬಯಕೆಯನ್ನು ಗೆಲ್ಲಲು ಸಾಧ್ಯವಾದರೆ ಆಗ ಅಲ್ಲಿ ಕೇಡು ಇರುವುದೂ ಇಲ್ಲ. ಇದನ್ನು ಹೇಳುವಾಗಲೇ ಅವನು ನಮಗೆ ಶ್ರೇಷ್ಠ ಎಂದು ಅನಿಸುತ್ತದೆ ಹಾಗೂ ಯಾವುದು ಕೇಡು ಎನ್ನುವುದು ಸೃಷ್ಟಿಯಾಗುವುದು ನಮ್ಮ ಮನಸ್ಸಿನಲ್ಲಿ ಎಂದು ಭಾವಿಸುತ್ತಾನೆ. ಆದರೂ ಅಗಸ್ಟಿನ್ ದೇಹ ಮತ್ತು ಮನಸ್ಸುಗಳ ದ್ವಂದ್ವವನ್ನು ಹೇಳುತ್ತಾನೆ. ಇದರ ಆಧಾರದ ಮೇಲೆ ಫುಕೋ ತನ್ನ ವಾದವನ್ನು ಮಂಡಿಸುತ್ತಾನೆ. ಕ್ರಿಶ್ಚಿಯಾನಿಟಿಯು ಒಮ್ಮೆ ಭೋಗ ಮತ್ತು ಬಯಕೆಗಳನ್ನು ದೂರವಿಟ್ಟಿತ್ತು. ದೇಹ ಮತ್ತು ಅದರ ಬಯಕೆಗಳನ್ನು ನಿಯಂತ್ರಣ ಮಾಡುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆಯೂ ಆಗಿತ್ತು. ದೇಹ ಅಥವಾ ಇಂದ್ರಿಯಗಳ ಆಸಕ್ತಿಯು ನಮ್ಮ ಜೀವನದ ಜೊತೆಗೆ ಇದೆ. ಅದನ್ನು ನಿಯಂತ್ರಣ ಮಾಡುವುದು ಅತ್ಯಂತ ಮುಖ್ಯವೆಂದು ಆಗ ಕ್ರಿಶ್ಚಿಯಾನಿಟಿಯು ನಂಬಿತ್ತು. ಬಯಕೆಗಳು, ಲೈಂಗಿಕ ಸಂಬಂಧಗಳು ಹಾಗೂ ಮದುವೆಗಳನ್ನು ಜೊತೆಗೆ ಸಮೀಕರಿಸಲಾಗಿದೆ. ಆದರೆ ವಿಷಯವು ಅಷ್ಟು ಸುಲಭ ಇಲ್ಲ ಎನ್ನುವುದನ್ನು ಫುಕೋ ತಿಳಿದುಕೊಂಡಿದ್ದಾನೆ. ಆದ್ದರಿಂದ

ಅವನು ಕಾಮ ಎನ್ನುವುದು ಒಂದು ಅಪರಾಧವೇ ಎಂದು ಕೇಳುತ್ತಾನೆ. ಒಂದು ರೀತಿಯಿಂದ ಮದುವೆ ಮತ್ತು ಗಂಡು ಹೆಣ್ಣಿನ ಸಂಯೋಗವು ಬಯಕೆಯನ್ನು ಹೇಳುತ್ತದೆ. ಆಗಸ್ಟಿನ್ ಹೇಳಿದ ಮತ್ತೊಂದು ಪ್ರಮುಖವಾದ ಸಂಗತಿಯನ್ನು ಫುಕೋ ಎತ್ತಿಕೊಂಡಿದ್ದಾನೆ. ದೇವರಿಗೆ ಮತ್ತು ಮನುಷ್ಯರ ಬಯಕೆಗಳಿಗೆ ಒಂದು ಸಂಬಂಧವು ಇದೆ. ನಾವು ಅತ್ಯಂತ ಸಾಧಾರಣವಾದ ಅರ್ಥದಲ್ಲಿ ಹೇಳುವ ಇಂದ್ರಿಯದ ಬಯಕೆಯನ್ನು ಅಗಸ್ಟಿನ್ ದೇವರು ಮತ್ತು ಮನುಷ್ಯರ ಬಯಕೆಗಳ ನಡುವೆ ಇರುವ ಸಂಬಂಧ ಎನ್ನುವ ಅರ್ಥದಲ್ಲಿ ಬಳಸುತ್ತಾನೆ. ಆದರೆ ಸ್ವಂತ ಮತ್ತು ಅದರ ಸ್ವರೂಪವನ್ನು ಹೇಳುವಾಗ ಫುಕೋ ಅದನ್ನು ಸ್ವಂತಿಕೆ ಮತ್ತು ಅದರ ತಂತ್ರಗಾರಿಕೆ ಎಂದು ಹೇಳುತ್ತಾನೆ. ಇದೇ ಸ್ವಂತಿಕೆ ಎನ್ನುವುದು ನಮ್ಮ ಬರಹಗಳಲ್ಲಿ ಕಂಡು ಬರುತ್ತದೆ. ಸಾಹಿತ್ಯದಲ್ಲಿ ಅನೇಕ ಪುನರುತ್ಥಾನವಾದಿಗಳು ಮತ್ತು ರೊಮಾಂಟಿಕ್‌ವಾದಿಗಳು ಸ್ವಂತಿಕೆ ಮತ್ತು ಅದರ ಅಭಿವ್ಯಕ್ತಿಯನ್ನು ಹೇಳಿದರು. ಅವರ ವಾದಗಳಿಗೆ ಅತ್ಯಂತ ದೊಡ್ಡ ಇತಿಹಾಸವಿದೆ ಎಂದು ಫುಕೋ ಭಾವಿಸುತ್ತಾನೆ. ಪಶ್ಚಿಮದ ಪರಂಪರೆಯಲ್ಲಿ ಅದು ಬಂದಿದೆ ಎನ್ನುವುದು ಅವನ ವಾದ. ಇದರ ಒಂದು ಮೂಲವನ್ನು ನಾವು ಅಗಸ್ಟಿನ್ ತತ್ವಜ್ಞಾನದಲ್ಲಿ ಕಾಣಬಹುದು. ಗ್ರೀಕ್ ಪರಂಪರೆಯಲ್ಲಿ ದಿನಚರಿಯನ್ನು ಬರೆಯುವುದು ಹೇಗೆ ಪ್ರಾರಂಭವಾಯಿತು ಮತ್ತು ಅದರ ಪರಿಣಾಮವು ಏನು ಎಂದು ಫುಕೋ ಪರಿಶೀಲನೆ ಮಾಡುತ್ತಾನೆ. ನಾವು ಹೇಳುವುದಕ್ಕೆ ಬರಹವೂ ಒಂದು ಪರಿಕರವಾಗಿದೆ. ಬರಹ ಎನ್ನುವುದು ನಮಗೆ ಒಂದು ಬಗೆಯಲ್ಲಿ ಸಂಶೋಧನೆಯು ಕೂಡಾ ಹೌದು. ಜ್ಞಾನ ಮತ್ತು ಅದರ ಪರಿವರ್ತನೆ ಹಾಗೂ ಅದರ ಮೂಲಕ ನಾವು ನಡೆಸುವ ಸಂಕಥನಗಳನ್ನು ಸೂಚಿಸಲು ನಮಗೆ ಬರಹ ಅಗತ್ಯವಿದೆ. ದಿನಚರಿ ಎನ್ನುವುದು ನಮ್ಮ ವೈಯಕ್ತಿಕವಾದ ಸಂಗತಿಯೂ ಹೌದು. ಆದರೆ ಅದರಲ್ಲಿಯೂ ನಮ್ಮ ಜ್ಞಾನವು ಅಸ್ತಿತ್ವವನ್ನು ಪಡೆದಿರುತ್ತದೆ.ಖಾಸಗಿಯಾದ ಬರಹಗಳು ನಮಗೆ ಜ್ಞಾನವನ್ನು ಸೂಚಿಸಲು ಇರುವ ಸಾಧ್ಯತೆಯೂ ಹೌದು. ಜ್ಞಾನವನ್ನು ನಾವು ನಮ್ಮ ಬರಹಗಳನ್ನು ರೂಪಿಸಲು ನಮ್ಮ ಜ್ಞಾನವೇ ಆಧಾರವಾಗಿರುತ್ತದೆ. ನಾವು ನಮ್ಮ ಜ್ಞಾನವನ್ನು ಇನ್ನೊಬ್ಬರಿಗೆ ವರ್ಗಾಯಿಸಬಹುದು. ಗ್ರೀಕ್ ಭಾಷೆಯಲ್ಲಿ ಒಂದು ಪದವು ಚಾಲ್ತಿಯಲ್ಲಿ ಇತ್ತು. ಅದನ್ನು ಎಥ್ನೋಪೊಯಿಸ ಎಂದು ಹೇಳುತ್ತಿದ್ದರು. ಅದರ ಅರ್ಥವು ಸ್ಪಷ್ಟ. ಜ್ಞಾನ ಎನ್ನುವುದು ನಮಗೆ ನಿರ್ಣಾಯಕ. ಅದು ಪರಿವರ್ತನಶೀಲವೂ ಹೌದು. ಆದ್ದರಿಂದ ಜ್ಞಾನವನ್ನು ನಾವು ಉತ್ಪಾದಿಸುತ್ತೇವೆ. ಅದನ್ನು ನಾವು ಬೇರೆಯವರಿಗೆ ಕೊಡುತ್ತೇವೆ. ಹಾಗಿದ್ದಾಗ ಅದನ್ನು ಇನ್ನೊಬ್ಬರಿಗೆ ಹೇಳಿಕೊಳ್ಳುವುದು ಹೇಗೆ ? ಅದಕ್ಕಿರುವ ದಾರಿ ಎಂದರೆ ಅದು ಬರಹ. ಯಾವುದನ್ನು ನಾವು ಖಾಸಗಿಯಾದ ಬರಹ ಎಂದು ಹೇಳುತ್ತೇವೆಯೋ ಈ ಎಥ್ನೋ ಪೊಯೆಟಿಕ್ ಜ್ಞಾನವನ್ನು ಹೇಳುತ್ತದೆ. ಬರಹದಲ್ಲಿ ಅದು ಇನ್ನೊಬ್ಬರಿಗೆ ತಲುಪುತ್ತದೆ. ಬರೆಯುವುದು ಅಂದರೆ ಅದು ನಮ್ಮ ಸ್ವಾತಂತ್ರ್ಯವೂ ಹೌದು.

ಒಂದು ಅರ್ಥದಲ್ಲಿ ಆಧುನಿಕ ತತ್ವಜ್ಞಾನವು ಕಾಂಟ್‌ನಿಂದ ಪ್ರಾರಂಭವಾಗುತ್ತದೆ. ಅವನ ಕಾರಣವಾದವು ಅತ್ಯಂತ ಪ್ರಮುಖವಾದ ಪ್ರಶ್ನೆಗಳನ್ನು ಎತ್ತಿಕೊಂಡಿತ್ತು. ಅದರ ಜೊತೆಗೆ ಅವನು ನೈತಿಕತೆ ಮತ್ತು ಅದರ ಪರಿಣಾಮಗಳನ್ನು ಹೇಳುತ್ತಾನೆ. ವಾಸ್ತವವಾಗಿ ನಾವು ಅನೇಕರು ನೈತಿಕತೆ ಮತ್ತು ಅದರ ಸ್ವರೂಪವನ್ನು ಅವಲಂಬಿಸಿಕೊಂಡು ನೈತಿಕತೆಯನ್ನು ತೀರ್ಮಾನ ಮಾಡುತ್ತೇವೆ.

ಎಲ್ಲವೂ ಈ ಜಗತ್ತಿನಲ್ಲಿ ಇದೆ. ಈ ಜಗತ್ತಿನಿಂದ ಹೊರತಾಗಿ ಯಾವುದೂ ಇರುವುದಿಲ್ಲ. ನಮಗೆ ಅತ್ಯಂತ ಒಳ್ಳೆಯ ಗುಣವು ಇದ್ದಾರೆ ನಾವು ಒಳ್ಳೆಯದನ್ನು ಸಾಧಿಸುತ್ತೇವೆ. ನಮಗೆ ಬೇಕಾದ್ದು ಒಳ್ಳೆಯ ಉದ್ದೇಶವೆಂದು ಕಾಂಟ್ ಹೇಳುತ್ತಾನೆ. ನಮಗೆ ಯಾವ ಬಗೆಯ ನೈತಿಕತೆಯು ಇರುತ್ತದೆಯೋ ಅದಕ್ಕೆ ಅನುಸಾರವಾಗಿ ನಾವು ಜೀವಿಸಿಕೊಳ್ಳುತ್ತೇವೆ. ಯಾವುದು ನಿಜವಾದ ಒಂದು ಒಳ್ಳೆಯತನ ಎಂದು ಹೇಳುತ್ತೇವೆಯೋ ಯಾವತ್ತೂ ಕೆಡುಕು ಆಗಿರುವುದಿಲ್ಲ. ಅದರ ಜೊತೆಗೆ ಅದು ನಮಗೆ ವಿಶ್ವಾತ್ಮಕವಾಗಿರುತ್ತದೆ. ಅಷ್ಟೇ ಅಲ್ಲ ಅದು ನೈತಿಕವೂ ಆಗಿರುತ್ತದೆ. ಅದರ ಜೊತೆಗೆ ಕಾಂಟ್ ಇನ್ನೊಂದು ಮುಖ್ಯವಾದ ಅಂಶವನ್ನು ನಮ್ಮ ಮುಂದೆ ಇಡುತ್ತಾನೆ. ಯಾವುದು ಪುನರುಜ್ಜೀವನ ಎನ್ನುವುದು ಅವನ ಪ್ರಶ್ನೆಯೂ ಹೌದು. ಕಾರಣಗಳು, ಪುನರುಜ್ಜೀವನ ಮತ್ತು ವಿಶ್ವಾತ್ಮಕತೆಗೆ ಒಂದು ಸಂಬಂಧವು ಇದೆ. ಅದರ ಜೊತೆಗೆ ಕಾರಣಗಳು ಮತ್ತು ಸ್ವಾತಂತ್ರ್ಯದ ಸಂಬಂಧವನ್ನು ಕಾಂಟ್ ಹೇಳುತ್ತಾನೆ. ಸ್ವಾತಂತ್ರ್ಯ ಎನ್ನುವುದು ಹೇಗೆ ಹಿಂದಿನಿಂದಲೂ ಬಂದಿದೆ ಮತ್ತು ಅದಕ್ಕೂ ಒಂದು ಇತಿಹಾಸವು ಇದೆ ಎಂದು ಕಾಂಟ್ ಚರ್ಚೆಯನ್ನು ಮಾಡುತ್ತಾನೆ. ಆದರೆ ಫುಕೋ ಸ್ವಾತಂತ್ರ್ಯ ಎನ್ನುವುದು ನಮಗೆ ಅಭ್ಯಾಸವಾಗಿ ಬಂದಿಲ್ಲ ಎಂದು ಹೇಳುತ್ತಾನೆ. ಹಾಗೆ ನೋಡಿದರೆ ನಮಗೆ ಸ್ವಾತಂತ್ರ್ಯ ಎನ್ನುವುದು ಬಂದರೂ ಅದರ ಸ್ವರೂಪವನ್ನು ಅಧಿಕಾರದ ಕೇಂದ್ರಗಳು ಯಾವ ರೀತಿಯಲ್ಲಿ ನಿರೂಪಣೆ ಮಾಡುತ್ತವೆ ಎಂದು ಫುಕೋ ಕೇಳುತ್ತಾನೆ. ಸ್ವಾತಂತ್ರ್ಯ ಎನ್ನುವುದು ಒಂದು ಅಲ್ಲ. ಅದರಲ್ಲಿ ಏಕತೆಯು ಇಲ್ಲ. ಅದರ ಜೊತೆಗೆ ಅದು ಸ್ಥಿರವಾದ ಒಂದು ರೂಪವನ್ನು ಹೊಂದಿರುವುದೂ ಇಲ್ಲ. ಎಲ್ಲಾ ಅಧಿಕಾರ ಕೇಂದ್ರಗಳು ಕೂಡಾ ತನಗೆ ಬೇಕಾದಂತೆ ಸ್ವಾತಂತ್ರ್ಯವನ್ನು ಬದಲಿಸುತ್ತವೆ. ಹೀಗೆ ಇರುವುದರಿಂದಲೇ ಸ್ವಾತಂತ್ರ್ಯ ಮತ್ತು ಸತ್ಯಗಳು ಸಂವಾದಿಯಾಗುತ್ತವೆ.

ಆಧುನಿಕ ರಾಷ್ಟ್ರ ಮತ್ತು ಅದರ ನಂಬಿಕೆಗಳು ಅತ್ಯಂತ ವಿಚಿತ್ರವಾಗಿದೆ. ರಾಷ್ಟ್ರಗಳು ಅತ್ಯಂತ ಹೆಚ್ಚು ಕುಪಿತರನ್ನು ನಿರ್ಮಾಣ ಮಾಡುತ್ತವೆ. ಅದ್ದರಿಂದ ಅದಕ್ಕೆ ಬೇಕಾದ ತರಬೇತಿಗಳನ್ನು ಕೂಡಾ ಕೊಡುತ್ತವೆ. ಮುಂದೆ ಒಂದು ದಿನ ಅನ್ಯ ರಾಷ್ಟ್ರದ ಅತಿಕ್ರಮಣವು ಆಗಬಹುದು ಅಥವಾ ಮುಂದೆ ಒಂದು ದಿನ ಮೂರನೆಯ ಮಹಾಯುದ್ಧವು ಆಗಬಹುದು ಎಂದು ಈವತ್ತು ಅತ್ಯಂತ ಹೆಚ್ಚು ಮಿಲಿಟರಿಗಾಗಿ ದೇಶಗಳು ಹಣವನ್ನು ಸುರಿಯುತ್ತವೆ. ರಾಷ್ಟ್ರ ಮತ್ತು ಅದರ ಪ್ರಕಟಣೆಯು ಜರೂರು ಎಂದು ಬಿಂಬಿಸಲಾಗುತ್ತವೆ. ಮಿಲಿಟರಿ ಎನ್ನುವುದು ಒಂದು ದೇಶವನ್ನು ಉಳಿಸಿಕೊಳ್ಳುವ ಶಕ್ತಿ ಎಂದು ಭಾವಿಸಿಕೊಂಡದ್ದರ ಫಲವೂ ಅನೇಕವಾಗಿದೆ.

ಫುಕೋ ಇದನ್ನು ಇನ್ನೊಂದು ಅರ್ಥದಲ್ಲಿ ಬಳಸಿದ್ದಾನೆ ತತ್ವಶಾಸ್ತ್ರ ಮತ್ತು ಅದರ ಬಳಕೆಯನ್ನು ಹೇಳುವಾಗ ಅವನು ರಾಜಕೀಯ ಆಧ್ಯಾತ್ಮವನ್ನು ಹೇಳುತ್ತಾನೆ. ಇದು ನಮಗೆ ಒಂದು ಪರ್ಯಾಯವಾದ ದೃಷ್ಟಿಕೋನವನ್ನು ಕೊಡುತ್ತದೆ. ಫುಕೋ ಇದನ್ನು ಹೇಳುವಾಗ ಯಾವದು ಸಹಜ ಮತ್ತು ಯಾವುದನ್ನು ನಾವು ಅಸಹಜ ಎಂದು ಕರೆಯುತ್ತೇವೆ ಎಂದು ನೋಡುತ್ತೇವೆ ಎಂದೂ ಹೇಳುತ್ತಾನೆ. ರಾಜಕೀಯ ತತ್ವಶಾಸ್ತ್ರವು ನಮ್ಮನ್ನು ಮತ್ತೆ ಮತ್ತೆ ರೂಪಿಸುತ್ತದೆ, ಹೇಗೆ ರೂಪಿಸಲು ಅದು ತನಗೆ ಬೇಕಾದ ಪರಿಕರವನ್ನು ಬಳಸುತ್ತದೆ. ಸರಕಾರಗಳು ತಮಗೆ ಬೇಕಾದ್ದನ್ನು ಸತ್ಯ ಎಂದೂ ಉಳಿದುದನ್ನು ಮಿಥ್ಯೆ ಎಂದು ಸಾಬೀತು ಮಾಡಲು ಪ್ರಯತ್ನ ಮಾಡುತ್ತದೆ, ಯಾವುದು ನಮ್ಮನ್ನು ಆಳುತ್ತದೆಯೋ ಅದು ಸತ್ಯ ಮತ್ತು ಸುಳ್ಳು ಎಂದು

ಹೇಳುವಾಗ ಅದರದೇ ಆದ ಒಂದು ಮಾನದಂಡವನ್ನು ಇಟ್ಟುಕೊಂಡು ಜನರನ್ನು ರೂಪಿಸುತ್ತದೆ. ಪುನರುಜ್ಜೀವನದ ಅನಂತರ ಕ್ರಿಶ್ಚಿಯಾನಿಟಿಯು ಕೂಡಾ ತನ್ನದೇ ಆದ ರೀತಿಯಲ್ಲಿ ರಾಜಕೀಯ ತತ್ವಜ್ಞಾನವನ್ನು ರೂಪಿಸಲು ಯತ್ನ ಮಾಡಿತ್ತು. ಆಧ್ಯಾತ್ಮಕತೆ ಎನ್ನುವುದು ರಾಜಕೀಯ ಸನ್ನಿವೇಶದಲ್ಲಿ ಸಂಕೇತಗಳನ್ನು ರೂಪಿಸುತ್ತವೆ. ಹಾಗೆಯೇ ಜನರು ಅದಕ್ಕೆ ವಿನಯರಾಗಿ ಇರುವಂತೆ ನೋಡಿಕೊಳ್ಳುತ್ತದೆ. ಆದರೆ ಇಲ್ಲಿ ಫುಕೋ ಇನ್ನೊಂದು ಮಾತನ್ನು ಹೇಳುತ್ತಾನೆ. ಇದು ಧಾರ್ಮಿಕವಾದ ನವೀಕರಣವೂ ಹೌದು.

ಫುಕೋಯಾಮ ಒಂದು ಮಾತನ್ನು ಹೇಳಿದ್ದಾನೆ: ಪ್ರಜಾಪ್ರಭುತ್ವ ಎನ್ನುವುದು ಈವತ್ತು ರಾಜಕೀಯ ಸಮಾನತೆಯನ್ನು ಹೇಳುತ್ತದೆ. ಅಷ್ಟೇ ಅಲ್ಲ ಅದರ ಜೊತೆಗೆ ಕ್ರಿಶ್ಚಿಯನ್ ತಾತ್ವಿಕತೆಯು ಜಗತ್ತಿನ ಎಲ್ಲಾ ಮನುಷ್ಯರಿಗೆ ಒಂದು ಘನತೆಯು ಇದೆ ಎಂದು ಹೇಳುತ್ತದೆ ಘನತೆ ಎನ್ನುವುದನ್ನು ಇಂಗ್ಲಿಷ್ ಲ್ಯಾಟಿನ್ ಭಾಷೆಯಿಂದ ತೆಗೆದುಕೊಂಡಿತು. ಮಧ್ಯಕಾಲೀನ ಲ್ಯಾಟೀನ್ ಭಾಷೆಯಲ್ಲಿ ಯಾರು ಕಛೇರಿಯಲ್ಲಿ ಹೆಚ್ಚು ವ್ಯವಸ್ಥಿತವಾಗಿ ಬದುಕುತ್ತಾರೆಯೋ ಅವರಿಗೆ ಡಿಗ್ನಿನಿಟಸ್ ಎಂದು ಕರೆಯುತ್ತಿದ್ದರು. ಅದು ವಿಶೇಷವಾದ ಸ್ಥಾನಮಾನವನ್ನು ಹೇಳುತ್ತದೆ. ಆದರೆ ಅದರಲ್ಲಿ ಸಮಾನತೆ ಎನ್ನುವ ಧ್ವನಿಯು ಇಲ್ಲ. ಆಧುನಿಕ ಪ್ರಜಾಸತ್ತಾತ್ಮಕವಾದ ಪರಿಕಲ್ಪನೆಯು ಕ್ರಿಸ್ತಪೂರ್ವ ಗ್ರೀಸ್ ದೇಶದಲ್ಲಿ ಇತ್ತು ಎನ್ನುವುದೂ ಇಲ್ಲಿ ಗಮನಾರ್ಹವಾಗಿದೆ. ಇದು ಪಲ್ಲಟವಾಗಿ ಈವತ್ತು ನಮಗೆ ಉದಾರವಾದ ಒಂದು ತಳಹದಿಯು ದೊರಕಿದ್ದು ನಿಜ. ಆದ್ದರಿಂದ ಈವತ್ತು ನಾವು ಮಾತಾಡುವ ಜಾತ್ಯಾತೀತ ಎನ್ನುವುದು ನಮಗೆ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಚರಿತ್ರೆಯಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮೂಲಗಳು ಬೇರೆ ಬೇರೆ ಆಗಿವೆ. ಅದರ ಜೊತೆಗೆ ಭಾರತದಲ್ಲಿ ಎಲ್ಲರೂ ವೈದಿಕರು ಅಲ್ಲ. ಆಧುನಿಕವಾದ ಉದಾರವಾದ ಮತ್ತು ಪ್ರಜಾಪ್ರಭುತ್ವದ ನೆಲೆಯು ಈ ದೃಷ್ಟಿಯಲ್ಲಿ ಬೇರೆ ಅನುಸರಣೆಯನ್ನು ಹೊಂದಿದೆ.

ಲೈಂಗಿಕ ಪರಿಜ್ಞಾನವೂ ಅತ್ಯಂತ ಮಹತ್ವದ್ದೂ ಹೌದು. ಉಳಿದ ಅನೇಕ ಸಂಗತಿಗಳಂತೆ ಗಂಡು ಮತ್ತು ಹೆಣ್ಣಿನ ಮಿಲನವೂ ಜೀವಿಯ ಹುಟ್ಟಿಗೆ ಕಾರಣವಾಗುತ್ತದೆ. ಜೀವಿಗಳ ಹುಟ್ಟು ಮತ್ತು ಅದರ ಪರಿಣಾಮವೇ ಚರಿತ್ರೆಯನ್ನು ಅತ್ಯಂತ ಮಹತ್ವದ್ದೂ ಹೌದು. ಆದರೆ ಇಲ್ಲಿ ಮಾತಾಡಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ಗಂಡು ಮತ್ತು ಹೆಣ್ಣಿನ ಮಿಲನವು ಒಂದು ಅರ್ಥದಲ್ಲಿ ಅತ್ಯಂತ ಮಹತ್ವದ್ದೂ ಆಗಿದೆ. ಮಕ್ಕಳಾಗುವುದು ಪವಾಡವೂ ಅಲ್ಲ. ಮಕ್ಕಳನ್ನು ಅಶ್ವತ್ಥ ಮರವು ಸೃಷ್ಟಿ ಮಾಡಿಲ್ಲ. ಹೆಣ್ಣು ಗರ್ಭವನ್ನು ಧರಿಸುವುದು ಅಂದರೆ ಅದರ ಸ್ವರೂಪವೇ ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜನಸಂಖ್ಯೆ ಮತ್ತು ಅದರ ನಿಯಂತ್ರಣವನ್ನು ಪ್ರಭುತ್ವವು ಬೇರೆ ಬೇರೆ ರೀತಿಯಲ್ಲಿ ಮಾಡುತ್ತದೆ. ಜನನ ನಿಯಂತ್ರಣ ಮತ್ತು ದೇಶದ ಅಭಿವೃದ್ಧಿಗೆ ಒಂದು ಸಂಬಂಧವಿದೆ. ಮತ್ತು ಜನರು ಅವರ ಆರೋಗ್ಯವನ್ನು ಕಾಪಾಡುವುದು ಸರಕಾರ ಹೊಣೆಯೆಂದು ಭಾವಿಸಲಾಗುತ್ತದೆ. ಅದಕ್ಕೆ ಸರಕಾರವು ಮದುವೆಯ ವಯಸ್ಸನ್ನು ಕೂಡಾ ನಿಗದಿ ಮಾಡುತ್ತದೆ. ಹೀಗೆ ನಿಗದಿ ಮಾಡುವುದರಲ್ಲಿ ಹೆಣ್ಣು ಮತ್ತು ಅವಳ ಆರೋಗ್ಯದ ಪ್ರಶ್ನೆಯೂ ಇದೆ. ಸಣ್ಣ ವಯಸ್ಸಿನ ಹೆಣ್ಣು ಗರ್ಭವನ್ನು ಧರಿಸಿದರೆ ಅವಳಿಗೆ ಆಗುವ ತೊಂದರೆ ಮತ್ತು ಅವಳ ಅನಾರೋಗ್ಯದ ಪ್ರಶ್ನೆಯೂ ಅತ್ಯಂತ ಮಹತ್ವದ್ದು ಎಂದು ಸರಕಾರವು ಹೇಳುತ್ತದೆ. ಲೈಂಗಿಕ ಸಂಬಂಧ ಮತ್ತು ಅದರ ನಡತೆಗಳು ಭಿನ್ನವಾಗಿದೆ. ಇದರಲ್ಲಿ

ಅನೇಕ ಪ್ರಶ್ನೆಗಳು ಗುಟ್ಟಾಗಿ ಉಳಿಯಬೇಕಾದ ಸಂಗತಿಗಳು ಎಂದು ಭಾವಿಸುತ್ತೇವೆ. ಮದುವೆಯೆನ್ನುವ ಸಂಸ್ಥೆ ಮತ್ತು ಅದರ ನಿಯಮಗಳು ಹಾಗೂ ಕುಟುಂಬದ ರಚನೆಗೆ ನಿಕಟವಾದ ಸಂಬಂಧವೂ ಇದೆ. ಮದುವೆ ಮತ್ತು ಅದರ ಸಂಬಂಧವು ಲೈಂಗಿಕತೆಯ ಉಪಯೋಗವನ್ನು ಭಿನ್ನವಾಗಿಯೂ ನಿರೂಪಿಸುತ್ತದೆ. ಗಂಡು ಮತ್ತು ಹೆಣ್ಣಿನ ಮಿಲನವನ್ನು ರೂಪಿಸುವುದೂ ಮದುವೆಯೇ ಆಗಿದೆ. ಅಧಿಕೃತವಾಗಿ ಲೈಂಗಿಕತೆಯ ಸುಖವನ್ನು ಅನುಭವಿಸುವುದು ಸಾಧ್ಯವಾಗುವುದು ಮದುವೆಯಿಂದ. ಆದ್ದರಿಂದ ಇದಕ್ಕೆ ಸಮಾಜದಲ್ಲಿ ಹೆಚ್ಚಿನ ಮಹತ್ವವೂ ಇದೆ. ಜನಸಂಖ್ಯೆ ಮತ್ತು ಅದರ ರಾಜಕೀಯ ಅರ್ಥಶಾಸ್ತ್ರವು ಈ ದೃಷ್ಟಿಯಲ್ಲಿ ಮಹತ್ವದ ಚರ್ಚೆಯನ್ನು ಮಾಡುತ್ತದೆ. ಜನಸಂಖ್ಯೆ ಮತ್ತು ಅದರ ಸ್ಫೋಟವು ನಿಯಂತ್ರಣ ಮಾಡದೇ ಹೋದಲ್ಲಿ ಹಸಿವು, ಬಡತನ ಮತ್ತು ನಿರುದ್ಯೋಗದ ಪ್ರಶ್ನೆಯು ಹೆಚ್ಚಾಗುತ್ತದೆ. ಮತ್ತು ಅದರ ಮೂಲಕ ಅನೇಕ ಸಮಸ್ಯೆಗಳೂ ಬರುತ್ತವೆ ಎನ್ನುವುದೂ ಅಷ್ಟೇ ಸತ್ಯವಾದ ಸಂಗತಿ. ಈ ದೃಷ್ಟಿಯಿಂದ ದಾಂಪತ್ಯವನ್ನು ಅನೇಕವು ಹಿಡಿತದಲ್ಲಿ ಇರಿಸುತ್ತದೆ. ಪ್ರಭುತ್ವವು ಕೂಡಾ ದಾಂಪತ್ಯದ ನಿಯಮವನ್ನು ರೂಪಿಸುತ್ತದೆ. ಮತ್ತು ಅದರ ಮೂಲಕ ಅದು ಕೆಲವು ಮೌಲ್ಯಗಳನ್ನು ಹೇರುತ್ತದೆ. ವ್ಯಕ್ತಿ ಮತ್ತು ಅವನ ಲೈಂಗಿಕ ಸಂಗಾತಿಯ ನಡುವೆ ಪ್ರಭುತ್ವ ಮತ್ತು ಅದರ ಅಧಿಕಾರದ ರಚನೆಯೂ ಇದೆ. ಆದ್ದರಿಂದ ಪ್ರಭುತ್ವಕ್ಕೆ ಲೈಂಗಿಕ ಚಟುವಟಿಕೆಯೂ ಕೂಡಾ ಪ್ರಶ್ನೆಯೇ ಆಗಿದೆ. ಗಂಡು ಮತ್ತು ಹೆಣ್ಣಿನ ಸಂಬಂಧವು ಈ ದೃಷ್ಟಿಯಿಂದ ರಾಜಕೀಯವಾದ ಚಟುವಟಿಕೆಯೂ ಹೌದು. ಇದರ ಜೊತೆಗೆ ಇದರಲ್ಲಿ ಬರುವ ಭಾಷಿಕ ಸಂಹಿತೆಗಳು ಕೂಡಾ ಬೇರೆಯಾಗಿದೆ. ತಂದೆ ಮತ್ತು ಮಗನ ಸಂಬಂಧ, ತಾಯಿ ಮತ್ತು ಮಗನ ಸಂಬಂಧ, ತಂದೆ ಮತ್ತು ಮಗಳ ಸಂಬಂಧ, ವಿದ್ಯಾರ್ಥಿ ಮತ್ತು ಮೇಷ್ಟ್ರ ಸಂಬಂಧಗಳು ಅವರ ನಡುವೆ ಇರುವ ಭಾಷಿಕ ವ್ಯವಹಾರಕ್ಕೂ ಭಾಷೆಗೂ ನಡುವೆ ವಿಧಿನಿಷೇಧಗಳೂ ಇರುತ್ತವೆ. ಉಳಿದೆಲ್ಲಾ ಚಟುವಟಿಕೆಯಂತೆ ಗಂಡು ಮತ್ತು ಹೆಣ್ಣುಗಳ ಸಂಬಂಧವೂ ಇದೆ. ಅದು ದೇಹ ಮತ್ತು ಮನಸ್ಸಿನ ಅಗತ್ಯವೂ ಆಗಿದೆ. ಶಿಸ್ತಿನ ಕಾರಣದಿಂದ ನಾವು ಅದರ ಕುರಿತು ಮಾತಾಡುವುದೂ ಇಲ್ಲ. ಅದರ ಕುರಿತಾಗಿ ಕೆಲವು ಪೂರ್ವಾಗ್ರಹವೂ ಇರುತ್ತದೆ. ಮತ್ತು ಯಾವುದೇ ಲೈಂಗಿಕವಾದ ಅನೈತಿಕತೆಗೆ ಕೆಲವು ಶಿಕ್ಷೆಗಳೂ ಇರುತ್ತವೆ.

ಪ್ರತಿಯೊಂದು ತಾತ್ವಿಕತೆಯು ಆಗಿರುತ್ತದೆ ಅಥವಾ ಪ್ರತಿಯೊಂದೂ ರಾಜಕಾರಣವು ಆಗಿರುತ್ತದೆ. ಅದನ್ನು ನಾವು ಮರೆಯುವಂತೆ ಇಲ್ಲ. ಆದ್ದರಿಂದ ನಾವು ಜೀವನವನ್ನು ರಾಜಕೀಯವಲ್ಲದ ಒಂದು ಸ್ಥಿತಿಯೆಂದು ಭಾವಿಸುವುದು ಅತ್ಯಂತ ಕಷ್ಟ. ನಾವು ಈವತ್ತು ಏನು ಅನುಭವಿಸುತ್ತಿದ್ದೇವೆ ಎಂದು ನೋಡಿದರೆ ಇದರ ಅರ್ಥವು ತಿಳಿಯುತ್ತದೆ. ಈವತ್ತು ನಮ್ಮ ನಂಬಿಕೆಗಳು ಹೇಗೆ ಬದಲಾಗುತ್ತಿದೆಯೋ ಅದೇ ರೀತಿಯಲ್ಲಿ ನಮ್ಮ ರಾಜಕೀಯ ಬದ್ಧತೆಗಳು ಬೇರೆ ಆಗುತ್ತವೆ. ಇದು ಕೇವಲ ಒಂದು ವಿಚಾರಕ್ಕೆ ಮಾತ್ರವೇ ಸಂಬಂಧ ಪಟ್ಟದ್ದು ಅಲ್ಲ. ನೀಶೆ ಮತ್ತು ಫುಕೋ ಇಬ್ಬರೂ ಅಧಿಕಾರವು ಎಲ್ಲಾ ಕಡೆಯಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ಆದರೆ ವಿಷಯವು ಅಷ್ಟು ಸಹಜ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅಧಿಕಾರವನ್ನು ನಾವು ಒಂದು ಸಾಮಾಜಿಕ ಮತ್ತು ರಾಜಕೀಯವಾದ ಸ್ಥಿತಿ ಎಂದು ಭಾವಿಸಿಕೊಳ್ಳುವುದು ಉತ್ತಮ. ಯಾವುದು ಇದರಲ್ಲಿ ನಿಜವಾದ ಅಧಿಕಾರ ಮತ್ತು ಯಾವುದು ನಿಜವಾದ ಅಧಿಕಾರವು ಅಲ್ಲ ಎಂದು ಯೋಚನೆಯನ್ನು ಮಾಡಬೇಕು..ನಾವು ಮಾಡುವ ಅನೇಕ ಸಂಕಥನಗಳಲ್ಲಿ ಅನೇಕವು ಒಮದು

ನಿರ್ದಿಷ್ಟವಾದ ರಾಜಕಾರಣವನ್ನು ಹೇಳುತ್ತದೆ ಎಂದು ನಮಗೆ ಗೊತ್ತಿರಬೇಕು. ಹಾಗೆ ನೋಡಿದರೆ ನಮ್ಮಲ್ಲಿ ಅನೇಕ ಸಂಗತಿಗಳು ಮೌನದಲ್ಲಿ ಇರುತ್ತವೆ. ಆದರೆ ಅದರಲ್ಲಿ ಯಾವುದೇ ತಾತ್ವಿಕತೆಯು ಇಲ್ಲವೆಂದು ಅರ್ಥವಲ್ಲ. ಮೌನದಲ್ಲಿ ಇರುವ ಸಂಗತಿಗಳು ನಿಜವಾದ ಕೆಲವು ಸಂವಹನವನ್ನು ಹೇಳುತ್ತವೆ. ಅದರ ರೂಪವು ಮಾತ್ರವು ಬೇರೆ. ಯಾವುದು ಇಲ್ಲವೋ ಆಗ ಮಾತ್ರವೇ ಅಲ್ಲಿ ನಮಗೆ ಒಂದು ತಾತ್ವಿಕತೆಯು ಇದೆ ಎಂದು ಹೇಳಲು ಬರುವುದೂ ಇಲ್ಲ. ಹಾಗೆ ನೋಡಿದರೆ ನಮಗೆ ಈವತ್ತು ಸಂಕಥನ ಎನ್ನುವುದು ಹೆಚ್ಚು ಪ್ರಚಲಿತಾವಗಿದೆ. ಆದರೆ ಸಂಕಥನ ಎನ್ನುವುದು ಒಂದು ಅರ್ಥವನ್ನು ಹೇಳುತ್ತದೆ. ಆದರೆ ಅದು ಬರೀ ಒಂದು ಪದವು ಅಲ್ಲ ಅಷ್ಟೇ ಅಲ್ಲ ಅದು ಒಂದು ಭಾಷೆಯನ್ನು ಹೇಳುವುದು ಇಲ್ಲ. ಸಂಕಥನ ಎನ್ನುವುದು ಭಾಷೆಯನ್ನು ಮೀರಿ ನಡೆಯುತ್ತದೆ. ಸಂಕಥನವು ಅತ್ಯಂತ ಮಹತ್ವದ ಪರಿಕಲ್ಪನೆಯೂ ಹೌದು. ಅದು ಅತಾತ್ವಿಕವೂ ಆಗಿರುತ್ತದೆ ಎಂದು ಭಾವಿಸಬೇಕಾಗಿಲ್ಲ. ಅದಕ್ಕೆ ಅರ್ಥವಿದೆ. ಅದು ನಿರ್ದಿಷ್ಟವಾಗಿದೆ. ಅದು ಬಾಷಿಕವಾದ ಒಂದು ಸಂಗತಿಯನ್ನು ಮಾತ್ರವೇ ಹೇಳುವುದಿಲ್ಲ. ತಾತ್ವಿಕತೆ ಎನ್ನುವುದು ಒಂದು ನಿರ್ದಿಷ್ಟವಾದ ಪದವಾಗಿದ್ದು ಅದನ್ನು ಸಮಾಜದ ಸಂಬಂಧದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು ಎಂದು ರೇಮಾಂಡ್ ವಿಲಿಯಂಸ್ ಹೇಳುತ್ತಾನೆ.

ನಿಸರ್ಗವನ್ನು ಹೇಗೆ ನೋಡುತ್ತೇವೆ ಎನ್ನುವುದರ ಆಧಾರದ ಮೇಲೆ ನಮ್ಮ ನಿಲುವು ವ್ಯಕ್ತವಾಗುತ್ತದೆ. ಅದನ್ನು ನಾವು ಒಂದು ತತ್ವಜ್ಞಾನದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನೋಡಬಹುದು, ಇಲ್ಲವೇ ಅದನ್ನು ನಮ್ಮ ಉಪಯೋಗಕ್ಕೆ ಅನುಗುಣವಾಗಿಯೂ ನೋಡಬಹುದು. ಇದನ್ನು ಅತಾತ್ವಿಕವಾಗಿ ನೋಡುವವರು ಇದ್ದಾರೆ. ನಮ್ಮ ಜೀವನಕ್ಕೆ ಯಾವುದೇ ಮೂಲಭೂತವಾದ ಒಂದು ನಂಬಿಕೆಯು ಇರಬೇಕಾಗಿಲ್ಲ. ಅಷ್ಟೇ ಅಲ್ಲ ನಾವು ನಂಬಿಕೆಯನ್ನು ಆಧರಿಸಿಕೊಂಡು ಬದುಕುವುದಿಲ್ಲವಾದ್ದರಿಂದ ನಮಗೆ ನಂಬಿಕೆಗಳು ಅಗತ್ಯವಿಲ್ಲ ಕೆಲವರು ಹೇಳುತ್ತಾರೆ. ನೀಶೆ ಮತ್ತು ಫುಕೋ ಒಮ್ಮೆ ಇದನ್ನು ಹೇಳಿದ್ದರು. ನೈತಿಕತೆಗೆ ಹೇಗೆ ಒಂದು ಸಾಪೇಕ್ಷವಾಗಿದೆಎಂದು ಅವರು ಭಾವಿಸುತ್ತಾರೆ. ಮನುಷ್ಯ ಮತ್ತು ಅವನ ಜೀವನದ ಕ್ರಮಕ್ಕೆ ಒಂದು ನಿರ್ದಿಷ್ಟವಾದ ನೈತಿಕತೆಯು ಇರುತ್ತದೆ. ಆದ್ದರಿಂದ ಈವತ್ತು ನಾವು ಅನೇಕವನ್ನು ಮುಂದುವರಿಸುತ್ತೇವೆ ಹಾಗೂ ಅದು ನಮಗೆ ಒಂದು ಅತ್ಯಂತ ಮುಖ್ಯವಾದ ಪ್ರಶ್ನೆಯು ಆಗಿದೆ ಎನ್ನುವುದು ಫುಕೋನ ವಾದ. ಆದ್ದರಿಂದ ನಮ್ಮ ಅನೇಕ ಅಭ್ಯಾಸಗಳು ಬೇರೆ ಬೇರೆ ಥರ ಮುಂದುವರಿಯುತ್ತವೆ. ಅಷ್ಟೇ ಅಲ್ಲ ಕೆಲವನ್ನು ನ್ಯಾಯ ಸಮ್ಮತ ಮಾಡಲಾಗುತ್ತದೆ. ಅದರ ಜೊತೆಗೆ ನಾವು ಸಮಾಜ ಮತ್ತು ಅದರ ವಿಶ್ಲೇಷಣೆಗೆ ಗಂಡು ಮತ್ತು ಹೆಣ್ಣು, ಮೇಲು ಕೆಳಗು ಎಂದು ವರ್ಗೀಕರಣ ಮಾಡುತ್ತೇವೆ. ಇದು ಒಂದು ಹಂತದಲ್ಲಿ ಸಾಮಾಜಿಕ ರಚನೆಗಳಾಗಿ ಬಂದಿವೆ. ಈವತ್ತು ನಮಗೆ ಒಂದು ಭಯವು ಆವರಿಸಿದೆ ಎನ್ನುವುದು ಸತ್ಯ. ಅದನ್ನು ಸಾಂಸ್ಕೃತಿಕವಾದ ಒಂದು ಸಂಮಿಶ್ರಣ ಎಂದು ಕರೆಯಬಹುದು. ಮತ್ತೊಂದು ಅಂಶವು ಇಲ್ಲಿ ಅತ್ಯಂತ ಮುಖ್ಯ. ಅನೇಕ ಸಂದರ್ಭದಲ್ಲಿ ಇದು ಸಾಂದರ್ಭಿಕವಾದ ನಿಲುವನ್ನು ಹೊಂದಿರುತ್ತದೆ. ಸಾಪೇಕ್ಷ ಎನ್ನುವುದು ಯಾವತ್ತೂ ಒಂದು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳುವುದಿಲ್ಲ ಎಂದು ಸೈದ್ ಭಾವಿಸಿದ್ದು ಇಲ್ಲಿ ಉಲ್ಲೇಖನೀಯ. ಮನುಷ್ಯ ಮತ್ತು ಅವನ ಗುಣಗಳು ಬೇರೆಯಾಗಿರುತ್ತದೆ. ಅದನ್ನೇ

ನಾವು ಮನುಷ್ಯನ ಸ್ವಭಾವ ಎಂದು ಹೇಳುತ್ತೇವೆ. ಸ್ವಭಾವವು ಭಿನ್ನ ಮಾತ್ರವೇ ಅಲ್ಲ, ಅದು ಸ್ವಯಂ ಅಸ್ತಿತ್ವನ್ನು ಪಡೆದಿರುತ್ತದೆ. ನಮ್ಮ ಅಸ್ತಿತ್ವ ಎಂದರೆ ಅದು ರಾಜಕಾರಣವೂ ಆಗಿರುತ್ತದೆ ಎಂದು ಸಾರ್ತ್ರೆಯು ಹೇಳುತ್ತಾನೆ. ಆದ್ದರಿಂದ ಅದಕ್ಕೆ ಒಂದು ನಿಲುವು ಇರುತ್ತದೆ. ಅವನ ಅಸ್ತಿತ್ವದ ಪ್ರಶ್ನೆಯು ಈ ದೃಷ್ಟಿಯಲ್ಲಿ ಮಹತ್ವದ್ದೂ ಹೌದು. ಮನುಷ್ಯನು ತನ್ನ ಸ್ವಭಾವವನ್ನು ಒಂದು ಅರ್ಥದಲ್ಲಿ ಕಟ್ಟಿಕೊಳ್ಳುತ್ತಾನೆ. ಒಂದು ವಿಚಾರವನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕು: ನಾವು ಮನುಷ್ಯರಾಗಿಯೇ ಹುಟ್ಟುತ್ತೇವೆ. ಅನಂತರ ಆಗುತ್ತೇವೆ. ಈ ಜಗತ್ತಿನಲ್ಲಿ ಅನೇಕವು ಆಗುತ್ತವೆ. ಆಗುವುದು ಮನಸ್ಸಿಗೆ ಸಂಬಂಧ ಪಟ್ಟ ಕ್ರಿಯೆಯೂ ಹೌದು. ಯಾವಾಗ ನಾವು ಆಗುತ್ತೇವೆಯೋ ಅದನ್ನು ನಾವು ನಮ್ಮ ಗುಣ ಎಂದು ಗುರುತಿಸುತ್ತೇವೆ. ಆದರೆ ಇಲ್ಲಿ ಗುಣ ಎನ್ನುವುದು ನಮಗೆ ನಮ್ಮ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಮನಸ್ಸು ಮತ್ತು ವ್ಯಕ್ತಿತ್ವ ಎನ್ನುವುದು ಹೇಗೆ ಜೊತೆಗೆ ಹೋಗುತ್ತದೆ ಎಂದು ಸಾರ್ತ್ರೆಯು ಹೇಳುತ್ತಾನೆ. ಆದರೆ ವ್ಯಕ್ತಿತ್ವವವು ಸ್ವಯಂಸಂಪೂರ್ಣವೂ ಅಲ್ಲ. ಸ್ವಂತಿಕೆ ಮತ್ತು ಬೇರೆಯವರು ಎನ್ನುವುದು ಅರ್ಥಪೂರ್ಣವೂ ಆಗಿರುತ್ತದೆ. ಸ್ವ ಮತ್ತು ಅನ್ಯ ಎನ್ನುವುದು ಹೇಗೆ ಒಂದು ತಾತ್ವಿಕ ಮೀಮಾಂಸೆಯು ಆಯಿತು ಎನ್ನುವುದನ್ನು ನಾವು ಸೈಮನ್ ಡಿ ಬುವಾ ಮತ್ತು ಪ್ರಾಂಜ್ ಪ್ಯಾನನ್ ಬರಹಗಳಲ್ಲಿ ನೋಡಬಹುದು. ಸೈಮನ್ ಡಿ ಬುವಾ ಗಂಡು ಮತ್ತು ಹೆಣ್ಣು ಎನ್ನುವ ಸಂಬಂಧವನ್ನು ಹೇಳಲು ಹೊರಡುವಾಗ ಇದನ್ನು ಹೇಳುತ್ತಾಳೆ. ಆದರೆ ಫುಕೋ ಇದನ್ನು ಮತ್ತೆ ಬೇರೆ ಥರ ಹೇಳುತ್ತಾನೆ,. ಅವನಲ್ಲಿ ಇದು ಬರೀ ಒಂದು ದ್ವಂದ್ವ ಮಾತ್ರವೇ ಅಲ್ಲ ಅದರ ಆಚೆಗೆ ಹೋಗುವ ಅತ್ಯಂತ ಮುಖ್ಯವಾದ ಪ್ರಕ್ರಿಯೆಯೂ ಆಗುತ್ತದೆ. ಅವನು ಇದನ್ನು ಮತ್ತೆ ವಿವರಿಸುವಾಗ ಹೇಗೆ ಇದು ಒಂದು ವೈರುದ್ಧ್ಯವಾಗಿದೆ ಎಂದೂ ಹೇಳುತ್ತಾನೆ. ಫುಕೋನಲ್ಲಿ ದೃಶ್ಯಾತ್ಮಕ ಭ್ರಮೆಯ ಪ್ರಶ್ನೆಯು ಅತ್ಯಂತ ಮುಖ್ಯವಾಗುತ್ತದೆ. ಯಾವುದು ನಮಗೆ ಕಾಣುತ್ತದೆಯೋ ಅದನ್ನು ಮಾತ್ರವೇ ನಾವು ಒಪ್ಪುವುದು ಸರಿಯಾದ ಒಂದು ಕ್ರಮವು ಅಲ್ಲ ಎಂದು ಅರ್ಥಮಾಡಿಕೊಳ್ಳಬೇಕು.ಎಲ್ಲವೂ ಅತ್ಯಂತ ಸಹಜವಾಗಿ ನಡೆಯುತ್ತದೆ, ಅದು ಸಮಾನವಾಗಿರುತ್ತದೆ ಎಂದು ಹೇಳಲು ಸಾಧ್ಯವೂ ಇಲ್ಲ. ನಾವು ಅನೇಕರು ಒಂದು ವಸ್ತು ಮತ್ತು ಒಂದು ಘಟನೆಯ ಸಾರವು ಇದು ಎಂದು ಹೇಳುತ್ತೇವೆ. ಅದು ನಮ್ಮನ್ನು ಒಂದು ಮಿತಿಗೆ ಒಳಪಡಿಸುತ್ತದೆ. ನಮ್ಮ ಕೆಲವು ನಂಬಿಕೆಗಳು ಹೇಗೆ ಇರುತ್ತವೆ ಎಂದರೆ ಅದನ್ನು ನಾವು ಪ್ರಶ್ನೆಯೇ ಮಾಡುವುದಿಲ್ಲ. ಒಂದು ವೇಳೆ ನಾವು ಪ್ರಶ್ನೆಯನ್ನು ಮಾಡಿದರೆ ಅದನ್ನು ನಮ್ಮ ಅಧಿಕ ಪ್ರಸಂಗ ಎಂದು ಜನರು ತಿಳಿಯುತ್ತಾರೆ. ಮನುಷ್ಯನು ತನ್ನ ಅಸ್ತಿತ್ವದಲ್ಲಿ ಇದನ್ನು ಅತ್ಯಂತ ಮುಖ್ಯವಾದ್ದು ಎಂದು ಭಾವಿಸುವುದೂ ನಿಜ. ಅದು ತಾತ್ವಿಕವಾದ ಪ್ರಶ್ನೆಯು ಹೌದು. ಅದನ್ನು ತತ್ವಜ್ಞಾನವು ಇದನ್ನು ನೋಡುವ ಕ್ರಮವು ಬೇರೆ. ತತ್ವಜ್ಞಾನಗಳ ನಿರೂಪಣೆಯಲ್ಲಿ ಭಿನ್ನವಾಗುತ್ತವೆ. ಸಾಂಪ್ರಾದಾಯಿಕವಾದ ತತ್ವಜ್ಞಾನವು ನಂಬಿಕೆಯನ್ನು ಪ್ರಶ್ನೆ ಮಾಡಬೇಡಿ ಎಂದು ಹೇಳುತ್ತದೆ. ಅದರಲ್ಲಿ ತರ್ಕ ಮತ್ತು ಪ್ರಮಾಣವು ಒಂದು ಥರ ಇರುತ್ತದೆ. ಆದರೆ ಈವತ್ತು ನಮ್ಮ ನವೀನ ತತ್ವಜಾನದ ರೂಪವು ಭಿನ್ನ. ಅದು ನಮಗೆ ಚರಿತ್ರೆಯ ಆಗುಹೋಗುಗಳನ್ನು ಹೇಳುತ್ತದೆ. ಚರಿತ್ರೆಯಲ್ಲಿ ಅದು ಅತ್ಯಂತ ಮಹತ್ವದ ಸೂಚನೆಗಳನ್ನು ಕೊಡುತ್ತದೆ. ನಮ್ಮ ಆಯ್ಕೆಯು ಯಾವುದು ಆಗಿರುತ್ತದೆ ಎನ್ನುವ ಪ್ರಶ್ನೆಯನ್ನು ಲೈಟಾರ್ಡ್ ಕೇಳುತ್ತಾನೆ. ಬಯಕೆಯೇ ಅಥವಾ ತತ್ವಜ್ಞಾನವೆ ಎನ್ನುವುದು ಅವನ ಅವನಲ್ಲಿ

ಮುಖ್ಯವಾಗುತ್ತದೆ. ಜ್ಞಾನ ಮತ್ತು ಅದರ ಮಾದರಿಗಳು ವಿವಿಧ ರೀತಿಗಳಲ್ಲಿ ಇರುತ್ತವೆ. ಅದನ್ನು ನಿರೂಪಣಾ ಮಾದರಿಯ ಜ್ಞಾನ ಮತ್ತು ವೈಜ್ಞಾನಿಕ ರೂಪವಾದ ಜ್ಞಾನ ಎಂದು ಹೇಳುತ್ತಾರೆ. ಈಗ ಇದರ ಜೊತೆಗೆ ಮತ್ತೆ ಬೇರೆ ಪದಗಳೂ ಸೇರಿಕೊಂಡಿದೆ. ಅದನ್ನು ಜ್ಞಾನದ ಅರ್ಥಶಾಸ್ತ್ರ ಮತ್ತು ಸಾಮಾಜಿಕ ಜೀವನದ ಅರಿವು ಎಂದು ಕರೆಯುತ್ತಾರೆ. ಜ್ಞಾನವೇ ಅಧಿಕಾರ ಎಂದು ಹೇಳುವಾಗ ಅದರ ಸಾಧ್ಯತೆಯನ್ನು ಮತ್ತು ಅದರ ಸಂಕೀರ್ಣತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಜ್ಞಾನ ಮತ್ತು ಅಧಿಕಾರವನ್ನು ಕುರಿತು ಹೆಚ್ಚು ಚರ್ಚೆಗಳು ನಡೆದವು .ಆಧುನಿಕವಾದ ಜ್ಞಾನವು ಹೇಗೆ ಸಮಾಜವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವನ್ನು ಮಾಡುತ್ತದೆ ಎಂದು ಲಿಯೋಟಾರ್ಡ್ ಹೇಳುತ್ತಾನೆ. ಚಲನೆ, ಪ್ರತಿಚಲನೆ ಮತ್ತು ಸ್ಥಳಾಂತರಗಳು ಹೇಗೆ ಆಧುನಿಕವಾದ ಪರಿಭಾಷೆಗಳು ಆಗಿವೆ ಎಂದು ಅವನು ಹೇಳುತ್ತಾನೆ.

ಪುನರುಜ್ಜೀವನದ ಚಿಂತನೆಗಳು ಅನಂತರ ಅನೇಕ ಚಿಂತನೆಗೆ ಕಾರಣವೂ ಆಯಿತು ಎನ್ನುವುದನ್ನು ಅಡರ್ನೊ ಮತ್ತು ಹೊರ್ಕೆಮಾರ್ ಹೇಳುತ್ತಾರೆ. ಅದು ವಿಶ್ವಾತ್ಮಕತೆಯನ್ನು ಒಂದು ಬಗೆಯಲ್ಲಿ ಹುಟ್ಟುಹಾಕಿತು. ಕೈಗಾರಿಕೆಗಳೂ ವ್ಯಕ್ತಿಗಳನ್ನು ಬೇರೆ ಥರ ವ್ಯಾಖ್ಯಾನ ಮಾಡಿತು. ಮನುಷ್ಯ ಮತ್ತು ಅವನ ಅರ್ಥಗಳು ಬೇರೆಯಾದವು. ಅವನು ಹೆಚ್ಚು ಸುರಕ್ಷಿತನು ಅಲ್ಲವೆನ್ನುವುದೂ ಅವನ ಮನಸ್ಸಿನಲ್ಲಿ ಹುಟ್ಟಿತು. (ಮಾಕ್ಸ್ ಹೊರ್ಕೆಮಾರ್ ಅಂಡ್ ಥಿಯೊಡರ್ ಡಬ್ಲ್ಯು ಅಡರ್ನೊ 1972 ಡಯಲಿಕ್ಟಲ್ ಎನ್ ಲೈಟನ್ ಮೆಂಟ್ ಸೀಬರಿ ಪ್ರೆಸ್ ಪು23) ಯಾವುದು ಅಂತಿಮವಾದ ಮತ್ತು ಸರ್ವೋಚ್ಚವಾದ ನಿಲುವು ಮತ್ತು ಯಾವುದು ಸಮಾವಾದಿ ನಿಲುವು ಎನ್ನುವುದರ ಕುರಿತು ಚರ್ಚೆಗಳು ನಡೆದವು. ಎಲ್ಲಾ ಸೈದ್ಧಾಂತಿವಾದ ನಿಲುವುಗಳು ಕೊನೆಗೆ ತೀರ್ಮಾನವನ್ನು ತಲುಪುತ್ತವೆ. ಯಾವುದು ಸತ್ಯ ಮತ್ತು ಯಾವುದು ಅಸತ್ಯವೆನ್ನುವುದನ್ನು ಹೇಳಲು ಹೊರಡುತ್ತವೆ. ಯಾವುವು ನಮ್ಮ ಮುಂದೆ ಹಾಜರಾಗುತ್ತವೆ ಮತ್ತು ಯಾವುದು ನಮ್ಮ ಮುಂದೆ ಹಾಜರಾಗುವುದಿಲ್ಲವೆನ್ನುವುದೂ ಸಮಸ್ಯೆ. ಯಾವುದನ್ನು ನಾವು ಕೇಡು ಮತ್ತು ಯಾವುದನ್ನು ಕೇಡು ಅಲ್ಲವೆಂದು ಹೇಳುವುದು ಕಷ್ಟ. ಆಧುನಿಕ ಪ್ರಜಾಪ್ರಭುತ್ವವವೂ ನಮಗೆ ಕೆಲವು ನೀತಿಯನ್ನು ಹೇಳುತ್ತವೆ. ಅದರ ಪ್ರಕಾರ ಕಾನೂನು ಅತ್ಯಂತ ಮುಖ್ಯ. ಅದು ನಾಗರಿಕರ ಸತ್ಯವನ್ನು ನಿಜವಾದ ಸತ್ಯವೆಂದು ಹೇಳುತ್ತದೆ. ಅದರ ಅಭಿವೃದ್ಧಿಯ ಕಲ್ಪನೆಯು ಬೇರೆಯಾಗಿದೆ. ಇದು ಒಂದು ಥರವಾದರೆ ಕಿರ್ಕೆಗಾರ್ಡ್‌ನಂತಹವರು ಸತ್ಯವನ್ನು ಬೇರೆ ಥರ ಹೇಳಿದರು. ಅವನಿಗೆ ಧರ್ಮದ ಕುರಿತಾಗಿ ಅನುಮಾನಗಳೂ ಇದ್ದವು. ಧಾರ್ಮಿಕವಾದ ನಂಬಿಕೆಯೇ ಶ್ರೇಷ್ಠ ಎನ್ನುವುದನ್ನು ಅವನು ಒಪ್ಪಲಿಲ್ಲ. ಕಾಂಟ್ ಕಾರಣವನ್ನು ತನ್ನ ವಾದದ ಮುಖ್ಯವಾದ ಅಂಶವನ್ನಾಗಿಸಿದ. ಇವುಗಳು ಸತ್ಯವನ್ನು ಮತ್ತು ವಾಸ್ತವವನ್ನು ಅರ್ಥಮಾಡಿಕೊಳ್ಳುವಾಗ ಯಾವ ದಾರಿಯಲ್ಲಿ ನಡೆದವು ಎಂದು ಹೇಳಲು ಮಾತ್ರವೇ ಉದಾಹರಿಸಿದೆ. ಕಾರಣವು ಇಲ್ಲದೆ ಜಗತ್ತು ನಡೆಯುವುದೇ ಇಲ್ಲವೆನ್ನುವುದು ಕಾಂಟ್‌ನ ವಾದ. ಇದೇ ಪ್ರಶ್ನೆಯು ವಾಸ್ತವ ಮತ್ತು ವಿಶ್ವಾತ್ಮಕತೆಯ ಬಗ್ಗೆಯೂ ಬರುತ್ತದೆ. ಕಾರಣವು ಯಾವುದು ಮತ್ತು ಯಾವ ಕಾರಣವು ಒಂದು ವಾಸ್ತವವನ್ನು ರೂಪಿಸಿದೆ ಎನ್ನುವುದು ಅತ್ಯಂತ ಮುಖ್ಯ.

೨೩

ರಾಜಕೀಯೋತ್ತರ

ಫುಕೋ ಬಯೋಪೊಲಿಟಿಕ್ಸ್ ಎಂದು ಹೇಳುತ್ತಾನೆಯೋ ಅದು ಅಂತಿಮವಾಗಿ ಪೋಸ್ಟ್ ಪೊಲಿಟಿಕ್ಸ್ ಕಡೆಗೆ ಹೋಗುತ್ತದೆ ಎಂದು ಜಿಜೆಕ್ ಹೇಳುತ್ತಾನೆ. ಯಾಕೆಂದರೆ ಅದರಲ್ಲಿ ಸರಕಾರ ಮತ್ತು ಪ್ರಜೆಗಳ ಪ್ರಶ್ನೆಯು ಬೇರೆ ಥರ ಇರುತ್ತದೆ. ವಾಸ್ತವವಾಗಿ ನಾಗರಿಕತೆ ಮತ್ತು ಪ್ರಭುತ್ವ ಹಾಗೂ ನಿಯಂತ್ರಣದ ಸ್ವರೂಪವು ಬೇರೆಯಿರುತ್ತದೆ. ಅದನ್ನು ನಾವು ಬೇರೆ ಥರ ನೋಡಬೇಕಾಗುತ್ತದೆ ಎನ್ನುವುದು ಅವನ ನಿಲುವು. ಹಾಗೆ ನೋಡಿದರೆ ಕ್ರಿಶ್ಚಿಯಾನಿಟಿಯು ತನ್ನದೇ ಆದ ವಿಶ್ವಾತ್ಮಕತೆಯನ್ನು ಹೇಳುತ್ತದೆ. ಅದರಲ್ಲಿ ಒಳಗೊಳ್ಳುವಿಕೆ ಮತ್ತ ಹೊರಗೆ ಇಡುವುದು ಎನ್ನುವುದಕ್ಕೆ ಬೇರೆ ಅರ್ಥವೂ ಇದೆ. ಅಮೂರ್ತವಾದ ವಿಶ್ವಾತ್ಮಕತೆ ಮತ್ತು ಮೂರ್ತ ರೂಪದ ವಿಶ್ವಾತ್ಮಕತೆ ಎನ್ನುವುದು ಬೇರೆಯಾಗುತ್ತದೆ. ಅಮೂರ್ತವಾದ ವಿಶ್ವಾತ್ಮತೆಯು ಸಮಾನತೆಯನ್ನು ಹೇಳುತ್ತದೆ. ಆದರೆ ಇದು ಅಮೂರ್ತವಾಗಿದೆ. ಯಾಕೆಂದರೆ ಇದರಲ್ಲಿ ನೋಟವು ಮುಖ್ಯವಲ್ಲ ಆದರೆ ಅಮೂರ್ತವಾದ ವಿಶ್ವಾತ್ಮಕತೆಯು ಮೂರ್ತ ರೂಪಕ್ಕೆ ಇಳಿದಾಗ ಅರ್ಥವು ಬೇರೆಯಾಗುತ್ತದೆ. ಅಮೂರ್ತವಾದ್ದು ಮೂರ್ತ ರೂಪಕ್ಕೆ ಬಂದಾಗ ಅದರ ಅರ್ಥವು ಹೆಚ್ಚು ಖಚಿತವೂ ಆಗುತ್ತದೆ.

ಫುಕೋ ಸಂಸ್ಕೃತಿಯನ್ನು ಚರ್ಚೆ ಮಾಡುವಾಗ ಅದು ತನ್ನ ಪಾಡಿಗೆ ತಾನೇ ಸಮಗ್ರವಲ್ಲ. ಅದು ಪರಿಪೂರ್ಣವೂ ಅಲ್ಲ. ಜ್ಞಾನ ಎನ್ನುವುದು ಸಂಸ್ಕೃತಿಯನ್ನು ಉತ್ಪಾದಿಸುತ್ತದೆ. ಅದರ ನಿರ್ಮಾಣದಲ್ಲಿ ಸಮಾಜ ಮತ್ತು ಅದರ ಆವಶ್ಯಕತೆಯು ಕೂಡಾ ಇರುತ್ತದೆ. ಅದರಲ್ಲಿ ವಿವಿಧ ಸಂಬಂಧಗಳೂ ಇರುತ್ತವೆ. ಸಂಸ್ಕೃತಿಗೆ ಮತ್ತು ನಮ್ಮ ಆಲೋಚನೆಯ ಕ್ರಮಕ್ಕೆ ಒಂದು ಸಂಬಂಧವಿದೆ. ಅದು ಭಾಷೆಯಲ್ಲಿ ಪ್ರತಿಫಲಿಸುತ್ತದೆ. ಸಾಂಸ್ಕೃತಿಕ ಸಂಕಥನಗಳಲ್ಲಿ ಸಂಪ್ರದಾಯಗಳೂ ಇರುತ್ತವೆ ಎನ್ನುವುದು ಅವನ ವಾದ. ಚರಿತ್ರೆಗೆ ಮತ್ತು ಸಂಸ್ಕೃತಿಗೆ ವಿವಿಧ ಆಯಾಮಗಳು ಇರುತ್ತವೆ. ಯಾವುದು ಏನೇ ಆದರೂ ಯಾವುದೇ ಬದಲಾವಣೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ

ಭಾಷೆಯೇ ಕೇಂದ್ರ ಎಂದು ಅವನು ಹೇಳುತ್ತಾನೆ. ಯಾವುದೇ ಹುಡುಕಾಟಕ್ಕೆ ನಮಗೆ ಅನುಕೂಲವನ್ನು ಕಲ್ಪಿಸುವುದು ಭಾಷೆಯೇ. ಇದನ್ನು ಹೇಳುವಾಗಲೇ ಅವನು ಎಪಿಸ್ಟೀಮ್ ಪರಿಕಲ್ಪನೆಯನ್ನು ಬಳಸುತ್ತಾನೆ. ಇದು ಜ್ಞಾನ ಮೀಮಾಂಸೆಯನ್ನು ಹೇಳುತ್ತದೆ. ಜ್ಞಾನ ಮತ್ತು ಅದರ ಲಕ್ಷಣವನ್ನು ಹೇಳುವಾಗ ಈ ಪದವನ್ನು ಫುಕೋ ಬಳಸುತ್ತಾನೆ.ಹೆಗೆಲ್ ಕೂಡಾ ವಿದ್ಯಮಾನ ಮತ್ತು ಜ್ಞಾನದ ಮೀಮಾಂಸೆಯನ್ನು ಕಟ್ಟಲು ಯತ್ನವನ್ನು ಮಾಡಿದ್ದ. ಯಾವುದೇ ಕೃತಿಯಾಗಲೀ, ಯಾವುದೇ ಬರಹಗಳಾಗಲೀ ಅವು ಬರೀ ವಿಷಯನಿಷ್ಠವಾದ ಸಂಗತಿಯು ಆಗಿರುವುದಿಲ್ಲ. ಅವಕ್ಕೆ ತರ್ಕವೂ ಇರುತ್ತವೆ. ಅವುಗಳು ನಿರ್ದಿಷ್ಟವಾದ ಸಂಕಥನವನ್ನು ಹೇಳುತ್ತವೆ. ಜ್ಞಾನದ ಮೂರು ಅಂಗಗಳು ಅವನಿಗೆ ಹೆಚ್ಚು ಮುಖ್ಯವಾಗಿದೆ. ಆದ್ದರಿಂದ ಅವನು ಜ್ಞಾನ ಮತ್ತು ಅದರ ಮೀಮಾಂಸೆಯಲ್ಲಿ ಗಣಿತಶಾಸ್ತ್ರ, ಭೌತಶಾಸ್ತ್ರ ಮತ್ತು ಭಾಷಾವಿಜ್ಞಾನವನ್ನು ಅತ್ಯಂತ ಮಹತ್ವದ್ದು ಎಂದು ಅನಿಸುತ್ತದೆ. ಅದನ್ನು ಅವನು ಅನೇಕ ಬರಹಗಳಲ್ಲಿ ಹೇಳಿದ್ದಾನೆ, ಚರಿತ್ರೆಯನ್ನು ಕುರಿತು ಬರೆಯುವಾಗಲೂ ಅವನು ಇದೇ ಮಾನದಂಡವನ್ನು ಬಳಸುತ್ತಾನೆ. ಭಾಷೆಯು ಇಲ್ಲವಾದರೆ ನಾವು ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವುದು ಅವನ ನಿಲುವು. ಸಾಮಾಜಿಕ ವಿಕಾಸಕ್ಕೂ ಭಾಷೆಗೂ ಒಂದು ಸಂಬಂಧವು ಇದೆ. ಹಾಗೆ ನೋಡಿದರೆ ಈವತ್ತು ನಾವು ನೋಡುತ್ತಿರುವ ಸಮಾಜದಲ್ಲಿ ವಕೀಲರು ಇದ್ದಾರೆ. ನ್ಯಾಯಾಧೀಶರು ಇದ್ದಾರೆ. ವೈದ್ಯರು ಇದ್ದಾರೆ. ಪೋಲಿಸರು ಇದ್ದಾರೆ. ಸಾರ್ವಜನಿಕರೂ ಇದ್ದಾರೆ. ಪ್ರಭುತ್ವಕ್ಕೆ ಮತ್ತು ಇವರಿಗೆ ಒಂದು ಸಂಬಂಧವು ಇದೆ. ಪ್ರಭುತ್ವವು ಇವುಗಳನ್ನು ಬಳಸುತ್ತದೆ. ಅಧಿಕಾರವು ಯಾವುದೇ ಮುಲಾಜುಗಳಿಲ್ಲದೆ ಸಮಾಜವನ್ನು ತನ್ನ ನಿಯಮಕ್ಕೆ ಅಡಿಯಾಳಾಗಿ ಇರುವಂತೆ ನೋಡುತ್ತದೆ. ಇದರಿಂದ ಹೊಸ ಕೈದಿಗಳು ಮತ್ತು ಕ್ರಿಮಿನಲ್ ಅಪರಾಧಿಗಳು ಸೃಷ್ಟಿಯಾಗುತ್ತಾರೆ. ಜ್ಞಾನವೂ ಹೀಗೆ ಕೆಲವು ಪಾಪ ಪ್ರಜ್ಞೆಗಳನ್ನು ಸೃಷ್ಟಿಸುತ್ತದೆ. ಈಗ ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡುವ ಕ್ರಮವೂ ಬೇರೆಯಾಗಿದೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದು ಕೊಳ್ಳಬೇಕೆಂದು ಫುಕೋ ಹೇಳುತ್ತಾನೆ. ಕಾಮ ಮತ್ತು ವೈಯಕ್ತಿಕ ಜೀವನಕ್ಕೆ ಒಂದು ಸಂಬಂಧವು ಇದೆ ಎಂದು ಫುಕೋ ಭಾವಿಸುತ್ತಾನೆ. ಅದರ ಜೊತೆಗೆ ಕಾಮ ಮತ್ತು ಅದರ ನಿಯಂತ್ರಣವನ್ನು ನೀತಿಯು ಹೇಗೆ ನೋಡಿದೆ ಎಂದೂ ಚರ್ಚೆಯನ್ನು ಮಾಡುತ್ತಾನೆ. ನೀತಿಯು ನಮ್ಮನ್ನು ಗ್ರಹಿಸುವ ಕ್ರಮವು ಬೇರೆ ಎನ್ನುವುದು ಅವನ ನಿಲುವು. ಲೈಂಗಿಕ ಸಂಬಂಧ ಮತ್ತು ಪ್ರಭುತ್ವದ ನಡುವೆ ವಿವಿಧ ಕೊಂಡಿಗಳೂ ಇವೆ.

ಮಾರ್ಕ್ಸವಾದದ ಪ್ರಕಾರ ಎಲ್ಲಿ ಸಂಪನ್ಮೂಲದ ಕೊರತೆಯು ಆಗುತ್ತದೆಯೋ ಅಗ ಅದರ ಪರಿಣಾಮವು ಜನರ ಮೇಲೆ ಆಗುತ್ತದೆ. ಅದರಲ್ಲಿಯೂ ಅದು ಹೆಚ್ಚು ಪರಿಣಾಮವನ್ನು ಬೀರುವುದು ಕಾರ್ಮಿಕರ ಮೇಲೆ. ಯಾರೋ ಒಂದಿಬ್ಬರ ಖಾಸಗಿ ಆಸಕ್ತಿ ಮತ್ತು ಅವರು ಹಣವನ್ನು ಚಲಾಯಿಸುವ ರೀತಿಯನ್ನು ನೋಡಿ ನಾವು ಇಡಿಯ ಸಮಾಜವೇ ಅಭಿವೃದ್ಧಿಯಾಯಿತು ಎಂದು ಹೇಳುವುದು ಕಷ್ಟ. ಹಣವೆನ್ನುವುದನ್ನು ನಾವು ವಿವರಿಸುವುದು ಕಷ್ಟ. ಖಾಸಗಿಯಾದ ಅಭಿವೃದ್ಧಿಯೇ ಸಾಮಾಜಿಕ ಅಭಿವೃದ್ಧಿ ಎಂದು ಹೇಳಲು ಬರುವುದೂ ಇಲ್ಲ. ಒಂದು ಸಮಾಜವು ಜನರ ಪರವಾಗಿ ಇಲ್ಲದೆ ಹೋದರೆ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಹೇಳುವುದು

ಅಸಾಧ್ಯ. ಬಂಡವಾಳವಾದಿ ವ್ಯವಸ್ಥೆಯಲ್ಲಿ ಕಾರ್ಮಿಕರು ಉತ್ಪನ್ನದ ಹೆಚ್ಚಿನ ಭಾಗವನ್ನು ಪಡೆಯುವುದಿಲ್ಲವೆನ್ನುವುದೂ ಅಷ್ಟೇ ಸತ್ಯ. ಹಾಗೆ ನೋಡುವುದಿದ್ದರೆ ಕಾರ್ಮಿಕರು ಪಡೆಯುವ ವೇತನವು ಉತ್ಪನ್ನದ ಅರ್ಧ ಭಾಗದಷ್ಟೂ ಆಗುವುದಿಲ್ಲ. ಲಾಭದ ನಾಲ್ಕನೆಯ ಒಂದು ಭಾಗವೂ ಕಾರ್ಮಿಕರಿಗೆ ತಲುಪುವುದೂ ಇಲ್ಲ. ರಾಜಕೀಯ ಆರ್ಥಿಕ ತಜ್ಞರ ಪ್ರಕಾರ ಕಾರ್ಮಿಕರ ಒಟ್ಟು ಶ್ರಮವನ್ನು ಲೆಕ್ಕ ಹಾಕದೇ ಬಂಡವಾಳ,ಅದರ ಹೂಡಿಕೆ,ಅದರ ಲಾಭ,ಹಾಗೂ ಅದರ ಒಟ್ಟು ಉತ್ಪಾದನೆಯನ್ನು ಲೆಕ್ಕ ಹಾಕಬೇಕು. ಆದರೆ ಅದು ಆಗುವುದೂ ಇಲ್ಲ. ಬಂಡವಾಳವು ಒಂದು ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸುವಾಗಅದರ ಬೆಲೆ ಅದರ ಹಿಂದಿನ ಶಕ್ತಿ ಎರಡೂ ನಮ್ಮ ಗಮನಕ್ಕೇ ಬರಬೇಕು. ಹಣವು ಒಂದು ಸಂದರ್ಭದಲ್ಲಿ ಮನುಷ್ಯರನ್ನು ಸುಖದ ಕಡೆಗೆ ತಳ್ಳಿತು. ಕಾರ್ಮಿಕರ ಶಕ್ತಿಯನ್ನು ನಾವು ಮನಗಾಣುವುದೇ ಇಲ್ಲ. ಅವರು ತಮ್ಮ ಜೀವನವನ್ನು ಉತ್ಪಾದನೆಗೆ ಬಲಿ ನೀಡುತ್ತಾರೆ. ಮನುಷ್ಯರಾಗಿ ಅವರು ತಮ್ಮ ಜೀವನವನ್ನು ವ್ಯವಸ್ಥೆಗೆ ಬಲಿ ನೀಡುತ್ತಾರೆ. ರಾಜಕೀಯ ಅರ್ಥ ಶಾಸ್ತ್ರಜ್ಞರ ಪ್ರಕಾರ ಕಾರ್ಮಿಕರ ದುಡಿಮೆಗೆ ಕೇವಲ ನಿಗದಿತ ಬೆಲೆಯಿದೆ. ಆದರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ನಾವು ಅನೇಕ ವಿಷಯಗಳನ್ನು ನೋಡುವುದೇ ಇಲ್ಲ. ಬಂಡವಾಳವಾದವು ತನ್ನ ಲಾಭಕ್ಕೆ ತನ್ನ ಕಾರ್ಮಿಕರನ್ನೇ ಬಲಿ ತೆಗೆಯುತ್ತದೆ. ಅಷ್ಟೇ ಅಲ್ಲ ಅದು ಏನು ಮಾಡುತ್ತದೆ ಎಂದರೆ ಕಾರ್ಮಿಕರಿಗಾಗಿ ಕಾನೂನನ್ನು ರೂಪಿಸುತ್ತದೆ. ಕಾರ್ಮಿಕರು ಎಷ್ಟು ಹೊತ್ತು ಕೆಲಸವನ್ನು ಮಾಡಬೇಕು ಎನ್ನುವುದನ್ನು ನಿರ್ಧರಿಸುವುದು ಬಂಡವಾಳವಾದವೇ. ಅದರೊಂದಿಗೆ ಅವರು ಕಾರ್ಮಿಕರನ್ನು ಆಶ್ರಯಿಸುವುದು ಕೂಡಾ ಸ್ವ ಲಾಭಕ್ಕಾಗಿ. ಆದರೆ ಕಾರ್ಮಿಕರು ಬಂಡವಾಳಿಗನನ್ನು ಆಶ್ರಯಿಸುವುದು ತಮ್ಮ ಹಸಿವೆಯನ್ನು ನೀಗಿಸುವುದಕ್ಕಾಗಿ ಮಾತ್ರ. ತಮಾಶೆಯ ವಿಷಯವೆಂದರೆ ಬಂಡವಾಳಿಗರು ತಾವೇ ಕಾರ್ಮಿಕರಿಗಿಂತ ಶ್ರೇಷ್ಟವೆಂದು ಭಾವಿಸಿಕೊಳ್ಳುವುದು. ಹಾಗೂ ಅವರು ತಮ್ಮ ಶಕ್ತಿಯನ್ನು ಪ್ರದರ್ಶಿಸುವುದು ತಮ್ಮ ಸ್ಪರ್ಧೆಗಾಗಿ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಕಾರ್ಮಿಕನು ತನ್ನ ಎಲ್ಲಾ ಶಕ್ತಿಯನ್ನು ಬಳಸಿಕೊಳ್ಳುವುದು ಹಾಗೂ ತನ್ನ ಸಮಯವನ್ನು ಮೀಸಲಿಡುವುದು ಬಂಡವಾಳಿಗರನ್ನು ಉದ್ಧಾರ ಮಾಡುವುದಕ್ಕೆ. ಆದರೆ ಬಂಡವಾಳಿಗರು ತಮ್ಮ ಸಮಯವನ್ನು ಮೀಸಲಿಡುವುದು ಲಾಭ ಮತ್ತು ಮೋಜಿಗಾಗಿ. ವ್ಯಕ್ತಿಗಳಾಗಿ ಅವರಿಗೆ ಉತ್ಪಾದನೆಯ ಜೊತೆಗೆ ನೇರ ಸಂಪರ್ಕವಿಲ್ಲ. ಆದರೆ ಕಾರ್ಮಿಕರಿಗೆ ಅದು ಇದೆ. ಬಂಡವಾಳಿಗರು ಆದಾಯ ಹಾಗೂ ಲಾಭವನ್ನು ಮಾತ್ರವೇ ಲೆಕ್ಕ ಹಾಕುತ್ತಾರೆ. ಹಾಗಾಗಿ ಅವರದು ಕೇವಲ ವರ್ತಮಾನದ ದೃಷ್ಟಿ. ಆದರೆ ಅವರು ಅದನ್ನು ಪಡೆಯುವುದು ಕಾರ್ಮಿಕರ ಶಕ್ತಿಯಿಂದ ಎಂಬುದನ್ನು ಮರೆಯುತ್ತಾರೆ.ಇಲ್ಲಿ ಒಂದು ಅಂಶವನ್ನು ಗಮನಿಸಬೇಕು– ಅದು ಕಾರ್ಮಿಕರು ಅಂದರೆ ಕೇವಲ ಬಿಡಿಯಾದ ವ್ಯಕ್ತಿಗಳು ಅಲ್ಲ. ಅವರೆಂದರೆ ಉತ್ಪಾದಕ ಶಕ್ತಿಗಳು ಮಾತ್ರ. ನಾವೀಗ ಮತ್ತೊಂದು ಅಂಶವನ್ನು ಗಮನಿಸಬೇಕು ಕಾರ್ಮಿಕರು ಯಾಕೆ ದುಡಿಯುತ್ತಾರೆ ಎಂದು ಕೇಳಿದರೆ ಅದರ ಸ್ವರೂಪವನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯ. ಅವರು ದುಡಿಯುವುದು ತಮ್ಮ ಹಸಿವೆಯನ್ನು ನೀಗುವುದಕ್ಕಾಗಿ. ಬಂಡವಾಳವೆಂದರೆ ಉತ್ಪಾದನೆಗೆ ಹಾಕುವ ಮೊತ್ತ. ಆದರೆ ಅದರಲ್ಲಿ ಕಾರ್ಮಿಕರನ್ನೂ ಒಂದು ಬಂಡವಾಳವೆಂದು ಹೇಳುವುದಿಲ್ಲ. ಅದು ನಮ್ಮ ಮುಂದೆ ಇರುವ ಸಮಸ್ಯೆಯೂ ಹೌದು. ಬಂಡವಾಳಿಗರು ತಾವು ಕೂಲಿಯನ್ನು ಎಷ್ಟು ಕೊಟ್ಟಿದ್ದೇವೆ ಎಂದು ಮಾತ್ರವೇ ಲೆಕ್ಕ ಹಾಕಿ ಅದರ ಲಾಭವನ್ನು ಮಾತ್ರವೇ

ಗಮನಕ್ಕೆ ಇಟ್ಟುಕೊಂಡು ಉಳಿದದ್ದೂ ತಮ್ಮ ಪಾಲು ಎಂದು ಮಾತ್ರವೇ ಗಮನಿಸುತ್ತಾರೆ. ಆದರೆ ಕಾರ್ಮಿಕರ ದೇಹ ಮತ್ತು ಅವರ ಮನಸ್ಸು ಉತ್ಪಾದನೆಯಲ್ಲಿ ಎಷ್ಟು ಬಳಕೆಯಾಗಿದೆ? ಅದರಲ್ಲಿ ಅವರ ನೋವು ಎಷ್ಟು ? ಅದಕ್ಕೆ ಯಾವುದನ್ನು ನೀಡಬೇಕು ಎನ್ನುವುದನ್ನು ಬಂಡವಾಳಿಗರು ಮರೆಯುತ್ತಾರೆ. ಇದನ್ನು ನಾವು ಹೀಗೂ ಗಮನಿಸಬೇಕು-ವಾಸ್ತವವಾಗಿ ಕಾರ್ಮಿಕರಿಗೆ ತಾವು ಯಾವ ಸನ್ನಿವೇಶದಲ್ಲಿ ಬದುಕುತ್ತಿದ್ದೇವೆ ಎನ್ನುವುದರ ಅರಿವೇ ಇರುವುದಿಲ್ಲ. ಅವರು ದುಡಿಯುತ್ತಾರೆ ಆದರೆ ಅದರ ಪರಿಣಾಮವು ಅವರ ತಿಳುವಳಿಕೆಯ ಒಳಗೆ ಬರುವುದಿಲ್ಲ. ಈ ವಿಷಯದಲ್ಲಿ ಬಂಡವಾಳಿಗರಿಗೆ ಉದಾರವಾದ ಮನಸ್ಸೂ ಇಲ್ಲ. ಕಾರ್ಮಿಕರಿಗೆ ಸರಿಯಾದ ವೇತನವನ್ನು ಕೊಟ್ಟು ಉಳಿದ ಲಾಭದಲ್ಲಿ ಕಂದಾಯ ಮತ್ತು ಆದಾಯವನ್ನು ಲೆಕ್ಕ ಹಾಕಬೇಕು. ಆದರೆ ಆಗುವುದು ಇದಕ್ಕಿಂತ ವ್ಯತಿರಿಕ್ತವಾಗಿ. ಜನರ ಗಮನವಿರುವುದು ಯಾವಾಗಲೂ ಲಾಭದ ಕಡೆಗೆ ಮಾತ್ರವೇ. ಒಂದು ಚಾರಿತ್ರಿಕ ವ್ಯಂಗ್ಯವೆಂದರೆ ಕಾರ್ಮಿಕರನ್ನು ಗಮನದಲ್ಲಿ ಇಟ್ಟುಕೊಂಡು ಯಾರೂ ರಾಜ್ಯವನ್ನು ಕಟ್ಟುವುದಿಲ್ಲ. ಬಂಡವಾಳವಾದ ವಿರಲಿ ಅಥವಾ ಜಮೀನುದಾರಿ ಪದ್ಧತಿಯಿರಲಿ ಕಾರ್ಮಿಕರ ಜೀವನದ ಪರಿಸ್ಥಿತಿಯು ಬದಲಾಗುವುದಿಲ್ಲ. ಕಾರ್ಮಿಕನು ಯಾಕೆ ಹೆಚ್ಚು ಕ್ರಿಯಾಶೀಲನಾಗುತ್ತಾನೆಂದರೆ ಅವನಿಗೆ ದುಡಿಯದೆ ಬೇರೆ ಗತ್ಯಂತರವಿಲ್ಲ. ರಾಜಕೀಯ ಅರ್ಥಶಾಸ್ತ್ರದಲ್ಲಿ ಕಾರ್ಮಿಕನು ಉದ್ದಿಮೆಗೆ ಲಾಭವನ್ನು ತರುವವನು ಮಾತ್ರ. ಆದರೆ ಅದನ್ನು ನಾವು ಮನಗಾಣುವುದಿಲ್ಲ. ಕಾರ್ಮಿಕನದು ಕೂಲಿಯನ್ನು ಪಡೆಯುವ ಒಂದು ಘಟಕ ಮಾತ್ರವೆಂದು ಹೇಳುವುದೇ ಸಮಂಜಸವಲ್ಲ. ಕಾರ್ಮಿಕರ ಶೋಷಣೆಗೆ ಒಂದು ಇತಿಮಿತಿ ಅನ್ನುವುದೇ ಇಲ್ಲ. ಅದಕ್ಕೆ ಒಂದು ಬೌಂಡರಿ ಅನ್ನುವುದೇ ಇಲ್ಲ. ಕಾರ್ಮಿಕರನ್ನು ಯಾವಾಗಲೂ ಒಂದು ಉತ್ಪಾದನೆಯ ಭಾಗವಾಗಿ ಮಾತ್ರವೆ ನೋಡುವುದರಿಂದ ಕಾರ್ಮಿಕರ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗಿ ಯಾವುದೇ ಒಂದು ಉತ್ಪಾದನೆಯಲ್ಲಿ ಕಾರ್ಮಿಕರಿಗೆ ಕೊಡುವ ತರಬೇತಿಯು ಒಂದು ಭಾಗ ಮಾತ್ರವೇ ಆಗಿರುತ್ತದೆ.

ಬಂಡವಾಳವಾದವು ಕಾರ್ಮಿಕರ ನಡುವೆ ತನಗೆ ಬೇಕಾದ ರೀತಿಯಲ್ಲಿ ಸಂಘರ್ಷವನ್ನು ಉಂಟುಮಾಡುತ್ತದೆ. ಅದರಿಂದ ಅದಕ್ಕೆ ಅನುಕೂಲವಿದೆ.ಮಾಸಿಕ ವೇತನ ಮತ್ತು ದಿನಕೂಲಿಗಳ ನಡುವೆ ಬಹಳ ವ್ಯತ್ಯಾಸವಿದೆ. ಮಕ್ಕಳ ಮಾರಾಟ,ಹೆಂಗಸರ ಮಾರಾಟ, ಹಾಗೂ ಜೀತದಾಳುಗಳ ಮಾರಾಟವು ಒಂದು ಸಾಮಾಜದಲ್ಲಿ ಯಾಕೆ ನಡೆಯುತ್ತದೆ ಎಂದರೆ ಕೆಲಸದಾಳುಗಳು ಕಡಿಮೆ ಬೆಲೆಗೆ ಸಿಗುತ್ತಾರೆ. ವಾಸ್ತವವಾಗಿ ಕೆಲಸಗಾರರು ಎಂದು ಯಾರನ್ನು ಕರೆಯುತ್ತಾರೋ ಅವರು ಸರಕುಗಳಲ್ಲ. ಆದರೆ ಅವರನ್ನು ಹಾಗೆ ಭಾವಿಸಲಾಗುತ್ತದೆ. ಆಳುಗಳಿಗೆ ಅವರದೇ ಆದ ಜೀವನ ಕ್ರಮವಿದೆ. ಆದರೆ ನಾವು ಅದನ್ನು ಯೋಚಿಸಲು ಹೋಗುವುದೇ ಇಲ್ಲ. ಕೆಲಸಗಾರರು ದುಡಿಯುವುದು ಅವರ ದೈನಂದಿನ ಆಹಾರಕ್ಕಾಗಿ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಇದನ್ನು ಮತ್ತೆ ಹೇಳಿದ್ದು ಯಾಕೆಂದರೆ ದುಡಿಮೆ ಮತ್ತು ಉಪವಾಸ ಎರಡೂ ಕಾರ್ಮಿಕರಿಗೆ ಗೊತ್ತು. ಮತ್ತು ಅದನ್ನು ಅವರ ದೇಹವು ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತದೆ. ದುಡಿಮೆ ಅಂದರೆ ದೇಹ ಹಾಗೂ ಹಸಿವೆಯ ಪ್ರಶ್ನೆ. ಆಹಾರಕ್ಕಾಗಿ ಅವರು ಕಷ್ಟವನ್ನು ಪಡುತ್ತಾರೆ. ಇರುವ ಪ್ರಶ್ನೆ ಎಂದರೆ ಅವರು ಜೀವನವನ್ನು ವಸ್ತುವಾಗಿಯೋ ಸರಕಾಗಿಯೋ ನೋಡುತ್ತಾರೆ. ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಒಂದು ಆಟವಾಗಿಯೂ ಪರಿವರ್ತಿಸುತ್ತಾರೆ. ಅವರಿಗೆ

ಅದು ಒಂದು ಯುದ್ಧ. ಈ ಆಟಕ್ಕೆ ದಾಳವಾಗುವುದು ಆಳುಗಳು. ಆಳುಗಳಿಗೆ ತಾವು ಬಂಡವಾಳದ ಕೂಸುಗಳು ಎಂದು ತಿಳಿದಿರುವುದಿಲ್ಲ. ಕೈಗಾರಿಕಾ ಸಂಸ್ಕೃತಿಯಲ್ಲಿ ಹಣವೆನ್ನುವುದು ವಿಶಿಷ್ಟವಾದ ಸಂವೇದನೆಯನ್ನು ಹುಟ್ಟು ಹಾಕಿತು. ಹಾಗೆ ನೋಡಿದರೆ ನಮಗೆ ಹಣವನ್ನ ಬಳಸಲು ಬೇರೆ ಬೇರೆ ಮಾರ್ಗವಿದೆ. ಕೈಗಾರಿಕಾ ಸಂಸ್ಕೃತಿಯಲ್ಲಿ ಸಂಪನ್ಮೂಲವನ್ನು ಗುರುತಿಸುವ ಕ್ರಮ ಬೇರೆ.

ರಾಜಕೀಯ ಅರ್ಥಶಾಸ್ತ್ರದಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆಯು ಬಂದಿದೆ. ಅದರೆ, ಕಾರ್ಮಿಕರು ಮತ್ತು ಅವರ ಶಕ್ತಿಗೆ ಇರುವ ಬೆಲೆಯ ಪ್ರಶ್ನೆ. ಕಾರ್ಮಿಕರು ಮತ್ತು ಅದರ ಶಕ್ತಿಯು ಹೇಗೆ ಒಂದು ಮೌಲ್ಯವಾಗಿ ಪರಿವರ್ತನೆಯು ಆಗುತ್ತದೆ ಎಂದು ಮಾರ್ಕ್ಸ್ ಅದರಲ್ಲಿ ಹೇಳುತ್ತಾನೆ. ಅವರ ಶಕ್ತಿಯು ಹೇಗೆ ವ್ಯಕ್ತವಾಗುತ್ತದೆ ಮತ್ತು ಅದರಲ್ಲಿ ಮೌಲ್ಯವು ಹೇಗೆ ಇರುತ್ತದೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ಆಧುನಿಕ ಬಂಡವಾಳವಾದವು ಕಾರ್ಮಿಕರನ್ನು ಬಳಸುತ್ತದೆ. ಹಾಗೆ ನೋಡಿದರೆ ವ್ಯಕ್ತಿ ಮತ್ತು ಅವನ ಶಕ್ತಿಯು ಅನೇಕವನ್ನು ಸೃಷ್ಟಿ ಮಾಡುತ್ತದೆ. ಅದು ಮೌಲ್ಯವಾಗಿ ರೂಪುಗೊಳ್ಳುತ್ತದೆ. ಕಾರ್ಮಿಕರು ಎರಡು ಥರ ಇರುತ್ತಾರೆ: ಒಂದು ಮೂರ್ತ ರೂಪದ ಕಾರ್ಮಿಕರು ಮತ್ತೊಂದು ಅಮೂರ್ತ ರೂಪದ ಕಾರ್ಮಿಕರು. ಮಾರ್ಕ್ಸ್ ಕಾರ್ಮಿಕರು ಮತ್ತು ಅವರ ಸ್ವರೂಪವನ್ನು ಹೇಳುವಾಗ ಅವರು ಮಾಧ್ಯಮವೂ ಆಗಿರುತ್ತಾರೆ ಎಂದು ಹೇಳುತ್ತಾನೆ. ಆವರು ಮಾಧ್ಯಮವು ಮಾತ್ರವೇ ಆಗಿರುವಾಗ ಅವರ ಅರ್ಥವು ಬೇರೆಯಾಗುತ್ತದೆ. ಮತ್ತೊಂದು ರೀತಿಯಲ್ಲಿ ಕಾರ್ಮಿಕರು ನೇರವಾಗಿ ಭಾಗವಹಿಸುತ್ತಾರೆ. ಒಂದು ಉತ್ಪಾದನೆಯನ್ನು ಅವರ ಮಾಡುತ್ತಾರೆ ಅದನ್ನೇ ಅವರು ಮಾರಾಟವನ್ನು ಮಾಡುತ್ತಾರೆ. ಕಾರ್ಮಿಕರು ಒಂದು ಮಾಧ್ಯಮವಾಗಿ ಕೆಲಸವನ್ನು ನಿರ್ವಹಿಸುವಾಗ ಒಂದು ವ್ಯವಸ್ಥೆಗೆ ಮಾಧ್ಯಮವಾಗುತ್ತಾರೆ. ಆದರೆ ನೇರವಾಗಿ ಇರುವಾಗ ಅವರ ಕಾರ್ಯವನ್ನು ನಾವು ನೇರವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಒಂದು ಯಜಮಾನಿಕೆಗೆ ಪೂರಕವಾಗಿ ಅವರು ಕೆಲಸವನ್ನು ಮಾಡುವಾಗ ಅವರ ಶಕ್ತಿಗೆ ತಕ್ಕ ಬೆಲೆಯು ಸಿಗುತ್ತದೆ ಎಂದು ಹೇಳಲು ಬರುವುದಿಲ್ಲ. ಬಂಡವಾಳವಾದಿ ರಚನೆಯು ಹಾಗೆ ಇರುತ್ತದೆ. ಅದನ್ನು ನಾವು ಮರೆಯುವಂತೆ ಇಲ್ಲ. ಆದ್ದರಿಂದ ನಾವು ಮೊದಲ ನೋಟಕ್ಕೆ ಎಲ್ಲವನ್ನು ತೀರ್ಮಾನ ಮಾಡಲು ಆಗುವುದಿಲ್ಲವೆಂದು ಮಾರ್ಕ್ಸ್ ಹೇಳುತ್ತಾನೆ. ವಸ್ತು ಮತ್ತು ಅದರ ವಿನಿಮಯದ ಮೌಲ್ಯವು ನಮಗೆ ಅನೇಕವನ್ನು ಸೂಚಿಸುತ್ತವೆ ಎನ್ನುವುದು ಅವನ ಅಭಿಪ್ರಾಯವೂ ಆಗಿದೆ. ವಿನಿಮಯ ಮತ್ತು ಅದರ ಗುಣಾತ್ಮಕವಾದ ಸ್ವರೂಪವು ವಿನಿಮಯವನ್ನು ಹೇಳುತ್ತದೆ. ಯಾವುದೇ ಉಪಯೋಗಕ್ಕೆ ಬಾರದಿರುವ ವಸ್ತುವಿಗೆ ಯಾವುದೇ ವಿನಿಮಯದ ಮೌಲ್ಯವು ಇರುವುದಿಲ್ಲ. ಎರಡನೆಯದಾಗಿ ವಿನಿಮಯವೂ ಕಾಲ ಮತ್ತು ಸ್ಥಳವನ್ನು ಹೊಂದಿರುತ್ತವೆ. ಆದ್ದರಿಂದಲೇ ನಮಗೆ ಇದರಲ್ಲಿ ಅನೇಕ ವೈರುದ್ಧ್ಯಗಳು ಕಾಣಿಸುತ್ತವೆ. ಯಾವುದೇ ವಸ್ತುವಿಗೆ ಒಂದು ಪರಂಪರಾಗತವಾದ ಮೌಲ್ಯ ಎನ್ನುವುದು ಇರುವುದಿಲ್ಲ ಎಂದು ಅವನು ಹೇಳುತ್ತಾನೆ. ಸಹಜವಾದುದನ್ನು ವ್ಯಕ್ತಿಯು ಪಲ್ಲಟ ಮಾಡುತ್ತಾನೆ. ಅದರ ಮೂಲಕ ವಸ್ತುವಿಗೆ ಹೊಸರೂಪವು ಬರುತ್ತದೆ. ಆದರೆ ಎಲ್ಲವೂ ಹೀಗೆ ಆಗುತ್ತವೆ ಎಂದು ಅರ್ಥವಲ್ಲ. ಅಗತ್ಯವಾದದ್ದನ್ನು ನಾವು ಪಲ್ಲಟ ಮಾಡುತ್ತೇವೆ. ಯಾವುದಕ್ಕೆ ಉಪಯೋಗ ಎನ್ನುವುದು ಇದೆಯೋ ಅದರ ಅಸ್ತಿತ್ವಕ್ಕೆ ಬೆಲೆಯು ಇರುತ್ತದೆ. ಕೆಲವನ್ನು ಅತ್ಯಂತ ಸಹಜವಾದ ಸಂಗತಿಗಳು ಎಂದು ಮಾರ್ಕ್ಸ್ ಹೇಳುತ್ತಾನೆ.

ಯಾವಾಗ ಅದಕ್ಕೆ ಮೌಲ್ಯವು ಬರುತ್ತದೆಯೋ ಆಗ ಸಾಧ್ಯತೆಯು ಬೇರೆಯಾಗುತ್ತದೆ. ವಸ್ತುವು ಹೇಗೆ ಮೌಲ್ಯವನ್ನು ಸೂಚಿಸುತ್ತದೆ ಎನ್ನುವುದು ಇಲ್ಲಿ ಮುಖ್ಯ. ಆದ್ದರಿಂದ ವಸ್ತು ಮತ್ತು ಅದರ ಮೌಲ್ಯವು ಆಯಾ ಸನ್ನಿವೇಶದಲ್ಲಿ ಬೇರೆಯಾಗುತ್ತದೆ. ಅಮೂರ್ತವಾದ ಕಾರ್ಮಿಕರ ಶಕ್ತಿ ಎನ್ನುವುದು ಹೇಗೆ ಮೌಲ್ಯವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದೂ ಮಾರ್ಕ್ಸ್‌ನ ಗಮನದಲ್ಲಿ ಇದೆ. ಸಾಮಾಜಿಕ ಅಗತ್ಯಗಳು ಮತ್ತು ಮೌಲ್ಯಗಳು ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾಗಿದೆ. ಮನುಷ್ಯ ಮತ್ತು ಅವನ ಶಕ್ತಿ, ಅವನ ಕೆಲಸ, ವಸ್ತುವು ಒಡೆದುಕೊಳ್ಳುವ ಸ್ಥಾನಮಾನ ಮೌಲ್ಯವನ್ನು ನಿರ್ಧಾರ ಮಾಡಲು ಸಹಕಾರವನ್ನು ನೀಡುತ್ತವೆ, ನಮ್ಮ ಕೆಲಸದಿಂದ ಅಮೂರ್ತವಾದುದು ಮೂರ್ತತೆಗೂ ಬರುತ್ತದೆ. ಉಪಯೋಗ ಮತ್ತು ಅದರ ಸ್ವರೂಪವು ಇಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಾರ್ಕ್ಸ್ ವಿನಿಮಯವನ್ನು ಶೂನ್ಯ ಎಂದು ಪರಿಗಣಿಸುವುದೂ ಇಲ್ಲ. ಕಾರ್ಮಿಕರು ಮತ್ತು ಅವರ ಉತ್ಪಾದನೆ ಹಾಗೂ ಬಂಡವಾಳವಾದದ ರೂಪಗಳನ್ನು ಮಾರ್ಕ್ಸ್ ದ್ವಂದ್ವಾತ್ಮಕವಾಗಿಯೇ ಗ್ರಹಿಸುತ್ತಾನೆ. ಹೆಚ್ಚು ಉತ್ಪಾದನೆ ಮತ್ತು ಮೌಲ್ಯಗಳು ಅವನ ಗಮನದಲ್ಲಿ ಇದೆ. ಒಂದು ವಸ್ತು ಮತ್ತು ಅದರ ಶಕ್ತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಅವನು ವಿವರಿಸುತ್ತಾನೆ. ವಾಸ್ತವವವಾಗಿ ಬಂಡವಾಳವಾದವು ವ್ಯಕ್ತಿ ಮತ್ತು ಅವನ ಶ್ರಮಕ್ಕೆ ಸರಿಯಾದ ಒಂದು ಬೆಲೆಯನ್ನು ಕೊಡುವುದೂ ಇಲ್ಲ. ಇದರಲ್ಲಿ ಸಮಸ್ಯೆಯು ಇರುತ್ತದೆ. ಬೂರ್ಜ್ವ ಮಾರುಕಟ್ಟೆಯು ಕೆಲವನ್ನು ನಿಯಂತ್ರಿಸುವುದೂ ಅಷ್ಟೇ ನಿಜ. ಇಲ್ಲಿ ಮತ್ತೊಂದು ವ್ಯಂಗ್ಯವನ್ನು ನಾವು ಗಮನಿಸಬೇಕು: ಅವರ ಮಾರುಕಟ್ಟೆಯು ಇರುವುದು ಒಂದು ಥರ. ಅದನ್ನು ಭ್ರಮಾ ಜಗತ್ತಿನ ಹಾರುವಿಕೆ ಎಂದು ಹೇಳುತ್ತಾರೆ. ಅದು ಜಾಗತಿಕ ಸತ್ಯವನ್ನು ಕಲ್ಪಿತವಾದ ಸತ್ಯವೆಂಬಂತೆ ಬಿಂಬಿಸುತ್ತದೆ. ಆಧುನಿಕ ಮಾರುಕಟ್ಟೆಯು ಹೇಗಿದೆ ಎಂದರೆ ಅದರಲ್ಲಿ ಭ್ರಮೆಗಳು ಹೆಚ್ಚು ಕಾಣಿಸುತ್ತವೆ. ಅದರ ಮೂಲಕ ಕೆಲವರು ಮಾತ್ರವೇ ಜಗತ್ತನ್ನು ನಿಯಂತ್ರಿಸುತ್ತಾರೆ. ಮುಕ್ತ ಮಾರುಕಟ್ಟೆಯು ತಾನು ಸ್ವಯಂ ಸಂಪೂರ್ಣ ಎಂದು ಹೇಳಿಕೊಳ್ಳುತ್ತದೆ. ಮುಕ್ತವಾದ ಸ್ಪರ್ಧೆಯನ್ನು ಅದು ವಿವರಿಸುತ್ತದೆ. ಆದರೆ ಮಾರುಕಟ್ಟೆಯ ವಕಾಲತ್ತು ವಹಿಸಿದವರು ಮಾತ್ರವೇ ಇದನ್ನು ಹೇಳುತ್ತಾರೆ. ಆದರೆ ಇದರಲ್ಲಿ ಎಲ್ಲಾ ಜನರ ಒಳಿತು ಎನ್ನುವುದೇ ಇಲ್ಲವೆಂದು ಹೇಳಲಾಗುತ್ತದೆ. ಆರ್ಥಿಕತೆಯು ಇದರಲ್ಲಿ ತಪ್ಪಾದ ನೆಲೆಯನ್ನು ಪಡೆಯುತ್ತದೆ. ಮಾರುಕಟ್ಟೆ ಮತ್ತು ಅದರ ವಿಫಲತೆಯು ಈವತ್ತು ಎದ್ದು ಕಾಣುತ್ತದೆ. ಆ **(ವಿವರಗಳಿಗೆ ನೋಡಿ : ದಮಶರ ಆಫ್ ಲೇಬರ್.)**

೨೩

ವ್ಯಕ್ತಿ ಮತ್ತು ಸೂಕ್ಷ್ಮವಾದ ರಾಜಕಾರಣ, ಹೆಜೆಮನಿ, ಸಾಮಾಜಿಕ ವ್ಯವಸ್ಥೆ

ಸಾಮಾಜಿಕ ವ್ಯವಸ್ಥೆಯ ತತ್ವಜ್ಞಾನವನ್ನು ಕುರಿತು ಮಾತಾಡುವಾಗ ವೈಜ್ಞಾನಿಕತೆಯನ್ನು ಕುರಿತು ಮಾತಾಡುತ್ತೇವೆ. ಇದರ ಪರಿಣಾಮವಾಗಿ ನಮಗೆ ಮಿಶ್ರವಾದ ಫಲಿತಗಳು ದೊರೆಯುತ್ತವೆ. ಪಾರ್ಸನ್ ತನ್ನ ಚರ್ಚೆಯಲ್ಲಿ ಇನ್ನೊಂದು ವಿಧಾನವನ್ನು ಅಳವಡಿಸಿ ಕೊಳ್ಳುತ್ತಾನೆ. ಇದನ್ನು ನೋಡಿಕೊಂಡು ನಾವು ಗ್ರಾಂಶಿಯ ತತ್ವಜ್ಞಾನವನ್ನು ಗಮನಿಸಬೇಕು. ಗ್ರಾಂಶಿಯಲ್ಲಿ ಇದು ಬೇರೆ ವಿವರಣೆಗೆ ಕಾರಣವಾಗಿದೆ. ಸಮಾಜದ ವ್ಯವಸ್ಥೆಯನ್ನು ಅವನು ವೈಜ್ಞಾನಿಕವಾಗಿ ಪರಿಶೀಲಿಸುತ್ತಾನೆ. ಅವನು ಹೇಳುವ ವಿಚಾರಗಳು ನಮಗೆ ಭಿನ್ನವಾದ ಭೌತಿಕವಾದಿ ಮತ್ತು ತಾತ್ವಿಕವಾದಿ ಚರ್ಚೆಯನ್ನು ಹುಟ್ಟು ಹಾಕಿದಂತೆ ಕಾಣುತ್ತದೆ. ಅವನ ವಾದವನ್ನು ನಿರಚನ ಮತ್ತು ರಚನೋತ್ತರವಾದಗಳು ವಿವರಣೆಗೆ ಕೂಡಾ ಬಳಸಿಕೊಂಡಿಲ್ಲ. ಸಮಾಜದ ವ್ಯವಸ್ಥೆಯಲ್ಲಿ ಅತ್ಯಂತ ಕನಿಷ್ಠ ಘಟಕ ಎಂದರೆ ವ್ಯಕ್ತಿ. ಇದನ್ನು ಇಬ್ಬರೂ ಚರ್ಚೆ ಮಾಡಿದ್ದಾರೆ. ಗ್ರಾಂಶಿಯಲ್ಲಿ ವ್ಯಕ್ತಿಯ ಚರ್ಚೆಯು ಹೀಗೆ ಬರುತ್ತದೆ.

ಅಡರ್ನೊ ಇದನ್ನು ಮತ್ತೆ ಬೇರೆ ಮಾತಿನಲ್ಲಿ ಹೀಗೆ ಹೇಳುತ್ತಾನೆ: ವ್ಯಕ್ತಿಯ ಸ್ವಾಯತ್ತತೆ ಎಂದರೆ ಅದು ಕೇವಲ ನೈತಿಕ ಪ್ರಶ್ನೆಯಲ್ಲ. ಅದರ ಮೂಲಕ ಅದು ರಾಜಕೀಯ ತತ್ವಜ್ಞಾನವೂ ಹೌದು. ಬಂಡವಾಳವಾದದಲ್ಲಿ ವ್ಯಕ್ತಿಯ ತಾತ್ವಿಕತೆಯೆಂದರೆ ಅದೊಂದು ವರ್ಗದ ಪ್ರಶ್ನೆ ಮಾತ್ರವೇ ಆಗಿದೆ. ಬಂಡವಾಳವಾದವು ವ್ಯಕ್ತಿಯನ್ನು ನೋಡುವಾಗಲೇ ಆಯಾ ವ್ಯಕ್ತಿಯ ಅಸ್ತಿತ್ವ ಮತ್ತು ಸಂಸ್ಕೃತಿಯ ಅಸ್ತಿತ್ವವನ್ನು ಗಮನಿಸಲೇ ಬೇಕಾಗುತ್ತದೆ. ಮತ್ತು ಅದಕ್ಕೆ ಒಂದು ಕಾರಣವೂ ಇರುತ್ತದೆ. ಬಂಡವಾಳವಾದವು ವ್ಯಕ್ತಿಯನ್ನು ಅಸ್ಥಿರಗೊಳಿಸುವುದೂ ನಿಜ.

ಗ್ರಾಂಶಿಯು ವ್ಯಕ್ತಿಯನ್ನು ನೋಡುವಾಗ ಅದರಲ್ಲಿ ಸಮೂಹವೂ ಇರುತ್ತದೆ ಎಂದು ಹೇಳುತ್ತಾನೆ. ಸಾಮಾಜಿಕ ರಚನೆಗಳು ಮತ್ತು ವ್ಯಕ್ತಿತ್ವಕ್ಕೆ ಒಂದು ಸಂಬಂಧವು ಇದೆ ಎಂದು

ಅವನು ಭಾವಿಸುತ್ತಾನೆ. ಸಾಮಾಜಿಕ ವ್ಯಕ್ತಿತ್ವ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಅದಕ್ಕೆ ಒಂದು ನಿಯಮವು ಇರುತ್ತದೆ ಎಂದು ಹೇಳುತ್ತಾನೆ. ಚರಿತ್ರೆಯೊಂದಿಗೆ ನಾವು ಮುಖಾಮುಖಿ ಆಗುವುದರ ಮೂಲಕವೇ ವ್ಯಕ್ತಿತ್ವವು ಆಗುತ್ತದೆ. ಬಾಹ್ಯ ಮತ್ತು ಅದರ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವೇ ಅತ್ಯಂತ ಮುಖ್ಯವಾಗುತ್ತದೆ. ಮನುಷ್ಯ ಮತ್ತು ಅವನ ಸ್ವಭಾವದಲ್ಲಿ ಎರಡು ಅಂಶಗಳು ಅತ್ಯಂತ ಮುಖ್ಯ. ಒಂದು ಅವನು ಸಮಾಜದ ಜೊತೆಗೆ ಹೇಗೆ ಬೆರೆಯುತ್ತಾನೆ ಎನ್ನುವುದು ಒಂದು ಪ್ರಮುಖವಾದ ವಿಚಾರವು ಆಗಿದೆ. ಆದರೆ ನಾಗವೇಣಿಯನ್ನು ನಾವು ಅವಳ ಕುಟುಂಬದಿಂದ ಬೇರೆ ಮಾಡಿದರೆ ಆಗ ಅವಳ ವ್ಯಕ್ತಿತ್ವಕ್ಕೆ ಯಾವುದೇ ಅರ್ಥವೂ ಇಲ್ಲ. ಅವಳು ಬೇರೆಯವರ ಜೊತೆಗೆ ಮಾತಾಡುತ್ತಾಳೆ. ಅವಳ ವ್ಯಕ್ತಿತ್ವವು ಭಿನ್ನವಾಗುತ್ತಾ ಹೋಗುತ್ತದೆ. ಮೊದಲು ಇದ್ದ ರೀತಿಯಲ್ಲಿ ಅನಂತರ ಇರುವುದಿಲ್ಲ. ಸಮೂಹ ಮತ್ತು ನಮ್ಮ ವ್ಯಕ್ತಿತ್ವವು ಪರಸ್ಪರ ಬೆರೆಯುವುದರಿಂದ ವ್ಯಕ್ತಿತ್ವವು ವ್ಯತ್ಯಾಸವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ನಮ್ಮ ಸಂವಾದಗಳು ಮತ್ತು ನಾವು ಸಮಾಜದಲ್ಲಿ ಬೆರೆಯುವ ಗುಣಗಳು ನಮಗೆ ಜೀವನದಲ್ಲಿ ವಿಶಿಷ್ಟವಾದ ನಿಲುವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಅವನು ಹೇಳುತ್ತಾನೆ.

ಗ್ರಾಂಶಿಯು ನಮಗೆ ಇನ್ನೊಂದು ವಿಚಾರವನ್ನು ಹೇಳುತ್ತಾನೆ: ಮನುಷ್ಯ, ಮನುಷ್ಯತ್ವ, ವ್ಯಕ್ತಿತ್ವ, ವೈಯಕ್ತಿಕತೆಗಳು ನಮ್ಮ ಮೇಲೆ ಬೇರೆ ಬೇರೆ ಪ್ರಭಾವವನ್ನು ಬೀರುತ್ತದೆ. ಇದನ್ನು ನಾವು ನಮ್ಮ ಸಂಕಥನಗಳಲ್ಲಿ ಕಾಣಬಹುದು. ಆದರೆ ನಾವು ಯಾರ ಜೊತೆಗೆ ಮಾತಾಡುತ್ತೇವೆ ಮತ್ತು ಯಾರ ಜೊತೆಗೆ ಮಾತಾಡುವುದಿಲ್ಲ ಎನ್ನುವುದು ನಮ್ಮ ನಮ್ಮ ಆಯ್ಕೆಗೆ ಸಂಬಂಧಪಟ್ಟಿದೆ. ಯಾವುದೇ ಸಂಕಥನಗಳು ನಮಗೆ ಈವತ್ತು ವ್ಯಕ್ತಿಯನ್ನು ಅವನ ಚಹರೆಗಳನ್ನು ಹೆಚ್ಚು ಖಚಿತ ಮಾಡುವುದು ನಿಜ. ಬಾಹ್ಯದಲ್ಲಿ ಒಂದು ಕ್ರಿಯಾತ್ಮಕವಾದ ಸಂಬಂಧವು ಉಂಟಾಗುವುದು ನಮಗೆ ನಮ್ಮ ಮಾತು ಮತ್ತು ಅದರ ಚಟುವಟಿಕೆಯಿಂದ. ಆಧುನಿಕ ಮನುಷ್ಯ ಮತ್ತು ಅವನ ಚಹರೆಗಳು ಹೇಗೆ ಬೇರೆಯಾಗುತ್ತವೆ ಎಂದು ಅವನು ವಿವರಿಸುತ್ತಾನೆ. ಆದರೆ ಒಂದು ವ್ಯವಸ್ಥೆಯು ಹೇಗೆ ಮನುಷ್ಯರ ಸಂಬಂಧವನ್ನು ರೂಪಿಸುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗಿದೆ. ಕೈಗಾರಿಕೆಗಳು ಒಂದು ಬಗೆಯ ಸಂಬಂಧವನ್ನು ಹೇಳುತ್ತದೆ. ಗ್ರಾಮ ಸಮಾಜವು ಮತ್ತೊಂದು ಬಗೆಯ ಸಂಬಂಧವನ್ನು ರೂಪಿಸುತ್ತದೆ. ಅದರಲ್ಲಿ ವಸ್ತುನಿಷ್ಠ ಸಂಬಂಧ ಮತ್ತು ಭಾವನಿಷ್ಠವಾದ ಸಂಬಂಧವೆನ್ನುವುದು ಇರುತ್ತದೆ. ನಾವು ಯಾವ ಸಂಬಂಧವನ್ನು ರೂಪಿಸುತ್ತೇವೆ ಮತ್ತು ಅದರಲ್ಲಿ ಯಾವುದು ಹೆಚ್ಚು ಮುಖ್ಯವಾಗುತ್ತದೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ನಮ್ಮ ಮಾತುಕತೆಗಳ ಕೇಂದ್ರವು ಯಾವುದು ಎನ್ನುವುದು ಅತ್ಯಂತ ಮುಖ್ಯ. ನಮ್ಮ ಸಂವಹನದಲ್ಲಿ ಕೆಲವು ಕೇಂದ್ರಗಳು ಇರುತ್ತವೆ. ಹೊರಗಿನ ಸನ್ನಿವೇಶಕ್ಕೂ ನಮ್ಮ ಸಂವಾದಗಳಿಗೂ ಸಂಬಂಧವು ಇರುತ್ತದೆ. ಸಮಾಜ ಮತ್ತು ಅದರ ಸಂಬಂಧದಲ್ಲಿ ಮಾತುಕತೆಯು ಅತ್ಯಂತ ಮಹತ್ವದ್ದೂ ಆಗಿದೆ. ಅದನ್ನು ನಾವು ಮರೆಯಲು ಆಗುವುದೂ ಇಲ್ಲ. ಅದು ಹೆಚ್ಚು ಕ್ರಿಯಾಶೀಲವಾದ ಸಂಗತಿಯೂ ಆಗಿದೆ. ಮಾತುಕತೆಯು ಪರಸ್ಪರವಾದ ಸಂಬಂಧವನ್ನು ಹೇಳುತ್ತದೆ. ಆದರೆ ಇದನ್ನು ನಾವು ತಾತ್ವಿಕವಾಗಿಯೂ ಗಮನಿಸಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಸಂಕಥನಗಳ ರೂಪಗಳನ್ನು ಅವನಲ್ಲಿ ಮಾತ್ರವೇ ನೋಡಬೇಕೆ ಅಥವಾ ಅದನ್ನು ಒಂದು ಸಮಾಜದ ರೂಪವಾಗಿ ನೋಡಬೇಕೆ ಎನ್ನುವುದು ತತ್ವಜ್ಞಾನದ ಪ್ರಶ್ನೆಯೂ ಆಗಿದೆ. ಮನುಷ್ಯ ಮತ್ತು ಅವನ ಭಾಷೆಯನ್ನು ನಾವು ಪವಿತ್ರವಾಗಿ ನೋಡಬೇಕೆ ಅಥವಾ ಧಾರ್ಮಿಕವಾಗುವಂತೆ

ನೋಡುತ್ತೇವೆಯೇ ಅಥವಾ ಅದನ್ನು ವ್ಯಕ್ತಿಗತವಾಗಿ ನೋಡುವುದೇ ಅಥವಾ ಭಾಷೆಯನ್ನು ಎಲ್ಲರ ನಡುವೆ ಇರುವ ಒಂದು ಸಾಮಾನ್ಯವಾದ ಪ್ರಕ್ರಿಯೆಯಂತೆ ನೋಡುವುದೇ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆಯೂ ಆಗುತ್ತದೆ. ಅದನ್ನು ಗ್ರಾಂಶಿಯು ಮಾತ್ರ ಸಾಮಾನ್ಯವಾದ ಒಂದು ಸಂಕಥನವೆನ್ನುವಂತೆ ನೋಡುತ್ತಾನೆ. ಮಾತು ಮತ್ತು ಅದರ ಭವ್ಯತೆಯನ್ನು ಕ್ರೋಚೆಯು ಹೇಳಿದ್ದ. ವ್ಯಕ್ತಿಯ ಮಾತುಗಳನ್ನು ನಾವು ಮನುಷ್ಯನ ಒಂದು ಭಾಗವಾಗಿಯೇ ನಾವು ನೋಡಬೇಕು ಎಂದು ಗ್ರಾಂಶಿಯು ಹೇಳುತ್ತಾನೆ. ಮನುಷ್ಯತ್ವ ಎನ್ನುವುದು ಅವನ ವ್ಯಕ್ತಿತ್ವದ ಭಾಗವಾಗಿಯೇ ನೋಡಬೇಕಾಗುತ್ತದೆ ಎಂದು ಅವನು ಭಾವಿಸುತ್ತಾನೆ. ವ್ಯಕ್ತಿಗಳು ಮತ್ತು ಅವರ ಸಂಬಂಧವನ್ನು ಗ್ರಾಂಶಿಯು ಕ್ರಿಯಾಶೀಲವಾದದ್ದು ಮತ್ತು ಪ್ರಜ್ಞಾಪೂರ್ವಕವಾದದ್ದು ಎಂದು ಎಂದು ಹೇಳುತ್ತಾನೆ. ಅದರಲ್ಲಿ ಸಾಮೂಹಿಕವಾದ ಅರ್ಥವೂ ಇದೆ. ಅದರಲ್ಲಿ ನಮಗೆ ಕೆಲವು ಮಾದರಿಯ ಎಚ್ಚರವೂ ಇರುತ್ತದೆ. ಯಾರನ್ನು ನಾವು ವ್ಯಕ್ತಿಗಳು ಎಂದು ಹೇಳುತ್ತೇವೆಯೋ ಅವರು ವಾಸ್ತವವಾಗಿ ಸಾಮಾಜೀಕರಣದ ಒಂದು ಭಾಗವೂ ಆಗಿರುತ್ತಾನೆ. ಆದ್ದರಿಂದ ವ್ಯಕ್ತಿತ್ವ ಎನ್ನುವುದು ಆಗುತ್ತದೆ. ಅದರಲ್ಲಿ ವಿಶಿಷ್ಟತೆಯು ಇರುವುದು ಆಯಾ ಸಮಾಜ ಮತ್ತು ಅದರ ಅರ್ಥದಲ್ಲಿ ಎನ್ನುವುದು ಗ್ರಾಂಶಿಯ ವಾದ.

"ಗ್ರಾಮ್ಷಿಯ ಪ್ರಕಾರ ಯಜಮಾನ್ಯವು ಕೆಲವೇಳೆ ತುಂಬಾ ಸೂಕ್ಷ್ಮವಾದ ಪ್ರಭಾವಗಳ ಬಳಕೆಯಿಂದ ಮತ್ತು ಕೆಲವೇಳೆ ಅಪ್ರಜ್ಞಾಪೂರ್ವಕ ನೆಲೆಯ ಪ್ರೇರಣೆಯಿಂದ ಜನಾಭಿಪ್ರಾಯವನ್ನೇ ರೂಪಿಸುತ್ತಿರುತ್ತದೆ. ಇದನ್ನು ಸಾಧಿಸಲು ಕೆಲವೇಳೆ ಭಾಷೆಯನ್ನು ಇದು ಹತಾರವನ್ನಾಗಿ ಬಳಸಿಕೊಳ್ಳುತ್ತದೆ. ಈ ಭಾಷಿಕ ಹತಾರದ ಮೂಲಕವೇ ಬರೆಯಲ್ಪಡುವ ಸಾಹಿತ್ಯ ಮತ್ತು ಇತಿಹಾಸಗಳು ಸಾಮಾಜಿಕ ವ್ಯವಸ್ಥೆಗಳ ಮತ್ತು ಸಂಸ್ಥೆಗಳ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ವ್ಯವಸ್ಥೆ ಮತ್ತು ಸಂಸ್ಥೆಗಳೇ ಬಲಾಢ್ಯವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಐಡಿಯಾಲಜಿಯನ್ನು ಪೋಷಿಸುವ ಮತ್ತು ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ಬ್ರಿಟೀಷ್ ಇತಿಹಾಸ ಮತ್ತು ಸಾಹಿತ್ಯಗಳನ್ನು ನೋಡಬಹುದು. ಇಂಗ್ಲಿಷ್‌ತನದ ವಾಹಕವಾದ ಇಂಗ್ಲಿಷ್ ಭಾಷೆ ಕೂಡ ಇದಕ್ಕೆ ಒಂದು ಉದಾಹರಣೆ." ಎನ್ನುವ ಶೆಲ್ಲಿವಾಲಿಯಾರ ಅಭಿಪ್ರಾಯವು ಸಾಂಸ್ಕೃತಿಕ ಯಜಮಾನಿಕೆಯ ಹಿಂದಿನ ತಾತ್ವಿಕತೆಯನ್ನು ವಿಷದಪಡಿಸುತ್ತದೆ.

ಗ್ರಾಮ್ಷಿಯ ಪ್ರಕಾರ ಆಳುವ ವರ್ಗದ ಶಕ್ತಿಯಿರುವುದು ಅವರ ವರ್ಗಪ್ರಾಬಲ್ಯದಲ್ಲಿ. ಈ ವರ್ಗ ಪ್ರಾಬಲ್ಯಕ್ಕೆ ಪ್ರಭುತ್ವವೇ ಶ್ರೀರಕ್ಷೆ. ಪ್ರಭುತ್ವದ ಮೇಲೆ ಆಳುವ ವರ್ಗ ಹಿಡಿತ ಸಾಧಿಸುವುದು ಕೇವಲ ಬಲಪ್ರಯೋಗದಿಂದಷ್ಟೇ ಅಲ್ಲ. ಉತ್ಪಾದನೆಯ ಮೇಲಿನ ಒಡೆತನ ಮತ್ತು ಪ್ರಭುತ್ವದ ಹತೋಟಿಯನ್ನು ರಕ್ಷಿಸಿಕೊಳ್ಳಲು ಮತ್ತು ಬಲಪ್ರಯೋಗವಿಲ್ಲದೆ ಜನರನ್ನು ನಿಯಂತ್ರಿಸಲು ನಾಗರಿಕ ಸಮಾಜದಲ್ಲಿ ಜನಜನಿತವಾದ ಕೆಲ ನಂಬಿಕೆ, ಮೌಲ್ಯಗಳು ಭೂಮಿಕೆಯನ್ನು ಒದಗಿಸುತ್ತವೆ. ಇವುಗಳನ್ನು ಆಳುವ ವರ್ಗ ಜತನವಾಗಿ ಪೋಷಿಸುತ್ತದೆ. **(ಮೂಲ: ಶೆಲ್ಲಿವಾಲಿಯ, ಎಡ್ವರ್ಡ್‌ಸೈದ್, ಅನು: ರಾಮಲಿಂಗಪ್ಪ, ಟಿ. ಬೇಗೂರು, ಪುಟ–22, 2003)** ಆಳರಸರು ಜಮೀನುದಾರರು ಧಾರ್ಮಿಕ ಸಂಸ್ಥೆಗಳಿಗೆ ಯಥೇಚ್ಛವಾದ ಪೋಷಣೆ ನೀಡಿದರು. ಆ ಮೂಲಕ ಸಾಮಾನ್ಯರ ಮತ್ತು ಧಾರ್ಮಿಕ ಸಂಸ್ಥೆಗಳ ವಿಶ್ವಾಸಗಳಿಸಿಕೊಂಡರು. ಸಾಮಾಜಿಕ ಶ್ರೇಣೀಕರಣ ನಿಯಾಮಕವಾದದ್ದು,

ಹೆಂಗಸರು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರು, ಅವರು ದುಡಿಯಲು ಸಮರ್ಥರಲ್ಲ, ಅವರು ಕೇವಲ ಗಂಡಸಿನ ಸಾಧನೆಯ ಕಾರ್ಯಕ್ಕೆ ಸಾಥಿಯಾಗಬೇಕು ಅಷ್ಟೇ ಜನರೆಲ್ಲಾ ರೀತಿಯ ನಂಬಿಕೆಗಳು ಜಾರಿಯಲ್ಲಿರುವುದನ್ನು ಆಳುವ ವರ್ಗ ಅಳಿಸಲು ಯತ್ನಿಸುವುದಿಲ್ಲ. ಅಧಿಕಾರ ಚಲಾವಣೆಗೆ ಅನುಕೂಲವಾಗಿರುವ ಲಿಂಗಭೇದ, ಅಸಮಾನತೆ, ತಾರತಮ್ಯದ ಸಂಗತಿಗಳನ್ನು ಯಾವತ್ತೂ ಆಳುವ ವರ್ಗ ವಿರೋಧಿಸುವುದಿಲ್ಲ. ಇವುಗಳನ್ನು ಮಾಡಿಕೊಳ್ಳುವುದರ ಮೂಲಕ ಹೊಸ ಬಗೆಯ ತಾರತಮ್ಯಗಳಿಗೆ ಸಮರ್ಥನೆ ನೀಡಲು ಮುಂದಾಗುತ್ತದೆ. ಇದು ಆಳುವ ವರ್ಗದ ಅಧಿಕಾರವನ್ನು ಭದ್ರಗೊಳಿಸುತ್ತಲೇ ಹೋಗುತ್ತದೆ.

ಒಂದೆಡೆ ತೋಳ್ಬಲದ ಮೂಲಕ ಆಳುವ ವರ್ಗ ಪ್ರಾಬಲ್ಯ ಪಡೆದರೆ ಇನ್ನೊಂದೆಡೆ ಸಮ್ಮತಿಯನ್ನು ರೂಪಿಸುವುದರ ಮೂಲಕ ಯಜಮಾನಿಕೆಯನ್ನು ಸ್ಥಾಪಿಸುತ್ತದೆ. ಮೌನಸಮ್ಮತಿಯನ್ನು ಪ್ರಸಂಗ ಬಂದಾಗ ತೋಳ್ಬಲದ ಪ್ರದರ್ಶನಕ್ಕೆ ಸಮರ್ಥನೆಯಾಗಿ ಬಳಸಿಕೊಳ್ಳಬಹುದು; ತೋಳ್ಬಲವೇ ಆಳುವ ವರ್ಗದ ನಾಯಕತ್ವಕ್ಕೆ ಜನಸಮ್ಮತಿಯನ್ನು ದೊರಕಿಸಿಕೊಡುವ ಸಾಧನವೂ ಆಗಬಹುದು. ಯಾವುದೇ ವರ್ಗದ ಶಕ್ತಿ ಸಮಾಜದಲ್ಲಿ ಅದು ಕಾಣಿಸಿಕೊಂಡಿರುವ ಯಜಮಾನಿಕೆಯನ್ನು ಅವಲಂಬಿಸಿರುತ್ತದೆ. ಪ್ರಭುತ್ವವನ್ನು ವಶಪಡಿಸಿಕೊಂಡು, ಉತ್ಪಾದನಾ ವ್ಯವಸ್ಥೆಯನ್ನು ಬದಲಿಸುವ ಮೂಲಕ ಆಳುವ ವರ್ಗದ ತೋಳ್ಬಲವನನು ಏನೋ ಸ್ಪಂದಿಸಬಹುದು; ಅಷ್ಟು ಮಾತ್ರಕ್ಕೆ ಆ ವರ್ಗದ ಯಜಮಾನಿಕೆ ಸಂಪೂರ್ಣವಾಗಿ ನಾಶವಾಗುವುದಿಲ್ಲ. ಆಳುವ ವರ್ಗಕ್ಕೆ ದಕ್ಕುವ ಜನಸಮ್ಮತಿಯ ಹಿಂದೆ ಹಲವು ನಮೂನೆಯ ಮೌಲ್ಯಗಳು, ಬಲಾಬಾಧಿತವಾಗಿರುವಂತೆ ತೋರುವ ಸಂಸ್ಥೆಗಳು ಕೆಲಸ ಮಾಡುತ್ತಿರುತ್ತವೆ." ಇವುಗಳೇ ಯಜಮಾನಿಕೆಯನ್ನು ಒಪ್ಪುವಂತೆ ಮಾಡುತ್ತಿರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಗ್ರಾಮ್ಷಿ ಹೇಳುತ್ತಾನೆ. (ಅದೇ)

ಸಮಾಜವೆಂದರೆ ಹಾಗೆಯೇ: ಅದು ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಶ್ರೇಣೀಕರಣ ಎಂದು ಹೇಳುತ್ತೇವೆ. ಅದರ ಸ್ವರೂಪ ವ್ಯಕ್ತಿಯ ಘನತೆಗೂ ಒಂದು ಸಂಬಂಧವು ಇದೆ. ಹಾಗೆ ನೋಡಿದರೆ ವ್ಯಕ್ತಿ ಮತ್ತು ಅವನ ಸಮೂಹದ ಸಂಬಂಧಗಳು ವಿಭಿನ್ನವಾಗುತ್ತವೆ. ಸಮೂಹವನ್ನು ನೋಡುವಾಗ ವ್ಯಕ್ತಿ ಅವನ ಸ್ವರೂಪವು ಏನು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಹ್ಯಾಮ್ಲೆಟ್ ನಾಟಕದಲ್ಲಿ ಬರುವ ತಂದೆಯ ಪ್ರೇತ ಬಂದು ಕಾಡುತ್ತದೆ. ಅದು ಭೂತವಾದದ್ದು ಸತ್ತ ನಂತರ ಬರುತ್ತದೆ. ನಮಗೆ ಮಾರ್ಕ್ಸ್‌ವಾದವು ಭೂತವೇ ಅಥವಾ ವರ್ತಮಾನವೇ ಎನ್ನುವ ಅರ್ಥದಲ್ಲಿ ಡೆರಿಡಾ ಪ್ರಶ್ನೆಯನ್ನು ಕೇಳುತ್ತಾನೆ. ಮನುಷ್ಯ ಸಂಬಂಧಗಳು ಭಿನ್ನ ರೀತಿಯಲ್ಲಿ ಇರುತ್ತವೆ. ಕೆಲವು ತಾತ್ಕಾಲೀಕವಾದದ್ದು ಮತ್ತು ಮತ್ತೆ ಕೆಲವು ಶಾಶ್ವತವಾದದ್ದು. ಆದರೆ ಮನುಷ್ಯರಿಗೆ ಪರಸ್ಪರವಾದ ಸಂಬಂಧವೇ ಇಲ್ಲವೆಂದು ಹೇಳಲು ಬರುವುದಿಲ್ಲ. ಆಧುನಿಕ ಮನುಷ್ಯ ಮತ್ತು ಅವನ ಜೀವನದ ಕ್ರಮವು ಈಗ ಬದಲಾಗಿದೆ. ಆದ್ದರಿಂದ ನಮ್ಮ ಸಂಕಥನಗಳು ಕೂಡಾ ಬದಲಾಗಿವೆ. ಮನುಷ್ಯ ಮತ್ತು ಅವನ ಜೀವನವು ಯಾವುದೇ ಸಂಬಂಧವಿಲ್ಲದೆ ಇರಲು ಸಾಧ್ಯವೇ ಇಲ್ಲ. ಆಧುನಿಕತೆಯು ಮನುಷ್ಯರ ಸಂಬಂಧವನ್ನು ಬೇರೆ ಮಾಡಿದೆ ಎಂದು ಯಾರೂ ಗುರುತಿಸಲು ಸಾಧ್ಯವಿದೆ. ಗ್ರಾಂಶಿಯು ಇದನ್ನು ಗುರುತಿಸುತ್ತಾನೆ.

⊙

೧ ಪುಕೋ ಲೆಕ್ಸಿಕಾನ್ – ಲಿಯೊನಾರ್ಡ್ ಲಾವ್ಲೆರ್ ಕೇಂಬ್ರಿಜ್
೨ ಗ್ರಾಂಶಿ ರೀಡರ್ ? ಡೇವಿಡ್ ಪಾರ್‍ಗಸ್ ನ್ಯೂಯಾರ್ಕ್ ಯುನಿರ್ವಸಿಟಿ ಪ್ರೆಸ್
೩ ಪುಕೋ ಅಂಡ್ ಗ್ರಾಂಶಿ ರೀ ಎಸೆಸ್ ಮೆಂಟ್
(ರೀ ಥಿಂಕಿಂಗ್ ದ ಗ್ರಾಂಶಿ – ಘುಕೋ ಇಂಟರ್ ಪೇಶ್ : ಎ ಕಲ್ಚುರಲ್ ಪಾಲಿಟಿಕಲ್ ಎಕಾನಮಿ ಇಂಟರ್‍ಪ್ರಟೇಶನ್ ಓರಿಯಟೆಂಡ್ ಟು ಡಿಸ್ಕೋರ್ಸಸ್ ಆಫ್ ಕಾಂಪಿಟಿವ್ ನೆಸ್– ಎನ್ಸೈ– ಲಿಂಗ್ ಸಂ) (ಲೇಖನ) ರೂತ್ಲೆಜ್ ಪಬ್ಲಿಷರ್ಸ್
೪ ದ ಪ್ಯಾಸಿವ್ ರೆವ್ಯೂಷನ್ ಆಫ್ ಸ್ಪಿರಿಚುವಲ್ ಪೊಲಿಟಿಕ್ಸ್ : ಗ್ರಾಂಶಿ ಅಂಡ್ ಪುಕೋ ಆನ್ ಮೊಡರ್ನಿಟಿ , ಟ್ರಾನಿಶನ್ ಅಂಡ್ ರಿಲಿಜಿನ್ (ಲೇಖನ)
೫ ಯುಸಿಂಗ್ ಗ್ರಾಂಶಿ – ಪಿಟರ್ ಇವೆಸ್
೬ ಅಂಟೋನಿಯಾ ಗ್ರಾಂಶಿ – ಸ್ಟೀವೆ ಜಾನ್ಸ್

ನಮ್ಮ ಪ್ರಕಟಣೆಗಳು

ನಮ್ಮ ಪ್ರಕಟಣೆಗಳು

1.	ಕನಸುಗಳಿಗೆ ಕಿನಾರಗಳಿರುವುದಿಲ್ಲ*	ರವಿಕುಮಾರ್	ರೂ.	70.00
2.	ಕಿಲಾರಿ *	ಡಾ. ಎಸ್.ಎಮ್. ಮುತ್ತಯ್ಯ	ರೂ.	50.00
3.	ಸಂವೇದನೆ (ಬರಗೂರು ರಾಮಚಂದ್ರಪ್ಪ ಜೀವನ ಮತ್ತು ಸಾಹಿತ್ಯ)*	ಡಾ. ಎಸ್. ಮಾರುತಿ	ರೂ.	160.00
4.	ಬೆಳಕಿನ ಪಾದ *	ಬಾಲಕೃಷ್ಣ ನಾಯಕ್ ಡಿ.	ರೂ.	40.00
5.	ಪಾತ್ರಗಳು ಇರಲಿ ಗೆಳೆಯ *	ಸತ್ಯನಾರಾಯಣರಾವ್ ಅಣತಿ	ರೂ.	50.00
6.	ದೂಸ್ರಾ *	ರವಿಕುಮಾರ್	ರೂ.	60.00
7.	ನೆಲದ ಮರೆಯ ನಿಧಾನ *	ಸಿದ್ದು ಯಾಪಲಾಪರವಿ	ರೂ.	40.00
8.	ಅಪರೂಪದ ಮನುಷ್ಯ *	ಆತ್ಮಕೂರ ವಾಮನಾಚಾರ್ಯ	ರೂ.	80.00
9.	ವಸಂತಸ್ಮೃತಿ *	ಡಿ.ಅರ್. ನಾಗರಾಜ್	ರೂ.	70.00
10.	ಮಹಿಳೆ ಮತ್ತು ದುಡಿಮೆ *	ಡಾ. ಬಿ.ಹಚ್. ಅಂಜನಪ್ಪ	ರೂ.	200.00
11.	ಸರ್ವಜ್ಞನ ವಚನಗಳು	ಡಾ. ಕೆ.ಅರ್. ಗಣೇಶ್	ರೂ.	200.00
12.	ಕೃತಿಪ್ರವೇಶ (ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಕೃತಿಗಳ ಸಮಗ್ರ ಅವಲೋಕನ) *	ಡಾ.ಎಸ್.ಎಸ್.ಅಂಗಡಿ.	ರೂ.	100.00
13.	ಮಣ್ಣಿನ ಕವಿತೆ *	ಡಾ. ನಿಂಗಪ್ಪ ಮುದೇನೂರು	ರೂ.	60.00
14.	ಸೊಂಡೂರು ಕುಮಾರಸ್ವಾಮಿ *	ಡಾ. ನಿಂಗಪ್ಪ ಮುದೇನೂರು	ರೂ.	160.00
15.	ಲಿಖಿತ – ಅಲಿಖಿತ *	ಡಾ. ಎಸ್.ಎಮ್. ಮುತ್ತಯ್ಯ	ರೂ.	160.00
16.	ವರ್ತಮಾನ *	ಬಿ.ಪಿ. ಶಿವಾನಂದ ರಾವ್	ರೂ.	85.00
17.	ಗಾದೇಯ ಮಾತು *	ಪ್ರೊ. ಮಲ್ಲೇಪುರಂ ಜಿ. ವೇಂಕಟೇಶ್	ರೂ.	25.00
18.	ಹಡೆ ಏರಿಸಿದ ಸೂರ್ಯನ ಕುದುರೆ *	ಸತ್ಯನಾರಾಯಣ ರಾವ್ ಅಣತಿ	ರೂ.	25.00
19.	ನಿಜದ ಬೆಳಗು *	ಅಕ್ಕಿ ಬಸವೇಶ್	ರೂ.	30.00
20.	ವಚನ ಬೆಳಗು *	ಡಾ. ನಾಗರಾಜ ಎಂ.	ರೂ.	70.00
21.	ವರದಿಗಾರರೇ ಈ ಕಡೆ ಸ್ವಲ್ಪ ನೋಡಿ*	ಪಿ. ರಾಜೇಂದ್ರ	ರೂ.	60.00
22.	ನಮ್ಮ ಕರ್ನಾಟಕ	ಪಿ. ರಾಜೇಂದ್ರ	ರೂ.	70.00
23.	ವೇದ–ತಂತ್ರ–ಸಂಸ್ಕೃತಿ *	ಡಾ. ಜಿ.ಬಿ. ಹರೀಶ್	ರೂ.	90.00
24.	ಸಖಿ–ಸಖಿ (ಗಜಲ್‌ಗಳು) *	ರವಿ ಹಂಪಿ	ರೂ.	40.00
25.	ಆಕಾಶದ ಹಾಡು *	ಅನಸೂಯದೇವಿ	ರೂ.	120.00
26.	ಬಿಂಬದೊಳಗಣ ಪ್ರಾಣ *	ಡಾ. ಹೆಬ್ಬಾಲೆ ನಾಗೇಶ್	ರೂ.	50.00
27.	ವಿಜಯನಗರ ಸಾಮ್ರಾಜ್ಯದ ಕನಸುಗಾರ ಕುಮಾರರಾಮ –	ಓಂಕಾರಪ್ಪ	ರೂ.	250.00

28. ಮಳೆಗಾಲದ ಕಾಡು * ಸ್ವಾಮಿನಾಥ ರೂ. 30.00
29. ವಾಲ್ಮೀಕಿ ಡಾ. ಸರಜೂ ಕಾಟ್ಕರ್ ರೂ. 200.00
30. ಕರ್ನಾಟಕ ಬುಡಕಟ್ಟು ಭಾಷೆ * ಡಾ. ಎಸ್.ಎಸ್. ಅಂಗಡಿ ರೂ. 225.00
31. ಕತ್ತಲ ಬೆಳಗು * ಜ.ನಾ. ತೇಜಶ್ರೀ ರೂ. 40.00
32. ನವವಿಸರ್ಗ * ಡಾ. ಕವಿತಾ ರೈ ರೂ. 130.00
33. ಕಡಲ ತಡಿಯ ತಲ್ಲಣ* ಉಷಾ ಕಟ್ಟೆಮನೆ ರೂ. 150.00
ಡಾ. ಪುರುಷೋತ್ತಮ ಬಿಳಿಮಲೆ
34. ಬಂಟರು ಬದುಕು ಮತ್ತು ಬದಲಾವಣೆ* ಡಾ. ಶೇಖರ ರೂ. 300.00
35. ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ ಕೆ. ನಾರಾಯಣಸ್ವಾಮಿ ರೂ. 150.00
36. ಈ ಕ್ಷಣ * ಜ್ಯೋತಿ ಗುರುಪ್ರಸಾದ್ ರೂ. 65.00
37. ಗಣೇಶನ ಬೆಂಗ್ಳೂರು ಯಾತ್ರೆ* ಪ್ರಕಾಶ್ ಕೆ. ನಾಡಿಗ್ ರೂ. 65.00
38. ಕೃಷ್ಣ ಕಷಾಯ * ಪಿ.ವಿ. ರಾಮಚಂದ್ರ ರೂ. 100.00
39. ರಾವಣನ ಡೈರಿ ಹಾ.ಮ್ಯೆ. ಸೂರಿ ರೂ. 150.00
40. ಮೊಪಾಸಾನ ಕಥೆಗಳು ಪಿ.ವಿ. ರಾಮಚಂದ್ರ ರೂ. 350.00
41. ತಂತಿ ಪಕ್ಷಿ * ಜ್ಯೋತಿ ಗುರುಪ್ರಸಾದ್ ರೂ. 60.00
42. ವಕ್ರರೇಖೆ * ಡಾ. ಜಿ.ಬಿ. ಹರೀಶ್ ರೂ. 300.00
43. ತುಮಕೂರು ಜಿಲ್ಲೆಯಲ್ಲಿ
ಸ್ವಾತಂತ್ರ್ಯ ಚಳುವಳಿ * ಡಾ. ಎಸ್. ನಾಗರತ್ನಮ್ಮ ರೂ. 125.00
44. ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ
– ಕಾನೂನು ಭಂಗ ಚಳುವಳಿ * ಡಾ. ಎಸ್. ನಾಗರತ್ನಮ್ಮ ರೂ. 175.00
45. ಪ್ರಾಚೀನ ಕನ್ನಡ ಸಾಹಿತ್ಯ ಸಂಘರ್ಷ ಡಾ. ರವಿ ಛಲವಾದಿ ರೂ. 225.00
46. ಶಿವರಾಮ ಕಾರಂತರ ಕೃತಿಗಳಲ್ಲಿ
ಸ್ತ್ರೀ ಸಂಕಥನದ ಸ್ವರೂಪ * ಡಾ. ರಾಜೇಂದ್ರ ತಗಡ್ಲಿ ರೂ. 175.00
47. ಮಾಧ್ಯಮ ಮಾರ್ಗದರ್ಶಿ ಪಿ. ರಾಜೇಂದ್ರ ರೂ. 125.00
48. ಊರು ಮನೆ (ಸಣ್ಣ ಕಥೆಗಳ ಸಂಕಲನ) ಲಕ್ಷ್ಮಣ ಕೊಡಸೆ ರೂ. 160.00
49. ಮುಖಾ – ಮುಖಿ * ಬಿ.ಪಿ. ಶಿವಾನಂದ ರಾವ್ ರೂ. 85.00
50. ಜೋಲಿ ಲಾಲಿ * ಜ್ಯೋತಿ ಗುರುಪ್ರಸಾದ್ ರೂ. 160.00
51. ಅನಸೂಯಾ ಕಥೆಗಳು * ಡಾ. ಅನಸೂಯಾ ದೇವಿ ರೂ. 100.00
52. ರಾಜಕೀಯ ಕಥೆಗಳು * ಡಾ. ಜಿ. ವೀರಭದ್ರಗೌಡ ರೂ. 100.00
53. ಜನಪದ ಕತೆಗಳು:ಆಶಯಗಳು ಡಾ. ವಾಮದೇವ ರೂ. 160.00
54. ಅಮೂರ್ತ ಕನ್ನಡಿ * ಡಾ. ಟಿ.ಡಿ. ರಾಜಣ್ಣ ತಗ್ಗಿ ರೂ. 100.00
55. ವ್ಯಾಸಕೂಟ ಮತ್ತು ದಾಸಕೂಟ * ಡಾ. ಅನಸೂಯಾ ದೇವಿ ರೂ. 250.00
56. ಹೃದಯವಂತ ವಿಷ್ಣು * ವಿನೋದ್ ಕುಮಾರ್ ಬಿ. ರೂ. 95.00
57. ಮಿಣ ಮಿಣ ಚೇಣಾ * ತ್ರಿವೇಣಿ ಶಿವಕುಮಾರ್ ರೂ. 175.00
58. ಸನೂತನ ದಾರ್ಶನಿಕರೂ * ಸ್ವಾಮಿನಾಥ ರೂ. 80.00
59. ದಿಗ್ದರ್ಶಕರು* ಅರುಣ್ ಎಲ್. ರೂ. 80.00
60. ವಚನ ವ್ಯಕ್ತಿತ್ವ ವಿಕಾಸ * ಡಾ. ಹಾ.ಮ. ನಾಗಾರ್ಜುನ ರೂ. 80.00
61. ಸರಸ್ವತಿ * ಡಾ. ಬಿ.ಆರ್. ಸತ್ಯನಾರಾಯಣ ರೂ. 300.00

62. ನಿಡುಗಲ್ಲು ದುರ್ಗದ ಕಥನ *	ಡಾ. ಡಿ. ಕೆ. ಚಿತ್ತಯ್ಯ ಪೂಜಾರ್	ರೂ.	250.00
63. ಸ್ತ್ರೀವಾದಿ ಚಿಂತನೆಗಳು *	ಡಾ. ಹಾ.ಮ. ನಾಗಾರ್ಜುನ	ರೂ.	480.00
64. ಕಮಲದೇಸಾಯಿ ಕಥೆಗಳು	ಅನು: ಚಂದ್ರಕಾಂತ ಪೋಕಳೆ	ರೂ.	120.00
65. ಪ್ರೀತಿ ಏನೆನ್ನಲಿ ನಿನ್ನ	ರೂಪಾ ಎಲ್. ರಾವ್	ರೂ.	70.00
66. ಹೆಜ್ಜೆ ಮೂಡದ ಹಾದಿಯಲಿ	ಸುಧೇಶ್ ಶೆಟ್ಟಿ	ರೂ.	160.00
67. ಹಕ್ಕಿ ಹರಿವ ನೀರು	ಡಾ. ಕವಿತಾ ರೈ	ರೂ.	60.00
68. ಸಾಹಿತ್ಯ ಸಂಸ್ಕೃತಿ *	ಡಾ. ತಳವಾರ ವಾಮದೇವ	ರೂ.	110.00
69. ಸಾಧಕರ ಹಾದಿ	ಕೆ.ಎನ್. ಪರಾಂಜಪೆ	ರೂ.	100.00
70. ಸಾಧನಶೀಲ (ಡಾ.ಎ.ವಿ.ಪ್ರಸನ್ನ ಅವರ ಅಭಿನಂಧನ ಗ್ರಂಥ)		ರೂ.	225.00
71. ಗಡಿಪಾರು *	ಚಂದ್ರಕಾಂತ ಪೋಕಳೆ	ರೂ.	150.00
72. ರಾಜ್ಯಾಯಣ	ಪಿ. ರಾಜೇಂದ್ರ	ರೂ.	150.00
73. ಇಂಧನ *	ಚಂದ್ರಕಾಂತ ಪೊಕಳೆ	ರೂ.	100.00
74. Cosmic Joke	Raghav Chinivar	ರೂ.	250.00
75. Urbanization Industrialization In Karnataka	Dr. Chandrappa	ರೂ.	480.00
76. ಅಪ್ಪನ ಪ್ರತಿರೂಪ ಮತ್ತಿತರ ಕತೆಗಳು	ಡಾ. ಟಿ.ಡಿ.ರಾಜಣ್ಣ ತಗ್ಗಿ	ರೂ.	100.00
77. ನೀಲಕುರುಂಜಿ (ವಿಮರ್ಶಾ ಲೇಖನಗಳು) *	ಎಂ.ಶಿವರಾಮಯ್ಯ	ರೂ.	220.00
78. ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು *	ಡಾ. ವೀರೇಶ್ ಬಳ್ಳಾರಿ	ರೂ.	200.00
79. ಶಾಸ್ತ್ರೀಯ ಭಾಷೆ ಕನ್ನಡ & ಶಿಕ್ಷಣದ ಹಕ್ಕುಗಳು *	ಡಾ. ಹಾ.ಮಾ.ನಾಗಾರ್ಜುನ	ರೂ.	170.00
80. ವೀರ ವನ್ತೆ ದುರ್ಗವ್ವ	ಡಾ. ಎಲ್ಲಪ್ಪ ಕೆ.ಕೆ.ಪುರ	ರೂ.	100.00
81. ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳು	ಡಾ. ಶೋಭ	ರೂ.	250.00
82. ಕಾಗದದ ದೋಣಿ ಯಾನ–1	ಎಸ್.ಎಂ. ಪೆಜತ್ತಾಯ	ರೂ.	180.00
83. ಕಾಗದದ ದೋಣಿ ಯಾನ–2	ಎಸ್.ಎಂ. ಪೆಜತ್ತಾಯ	ರೂ.	180.00
84. ಶರ್ವಾಣಿ *	ಸುನಿತಾರಾಜು	ರೂ.	70.00
85. ಕನ್ನಡ ಸಾಹಿತ್ಯದಲ್ಲಿ ಬೆಡಗು *	ಡಾ. ರಾಜು ಕೆ.ಎಸ್.	ರೂ.	80.00
86. ನಮ್ಮ ರಕ್ಷಕ ರಕ್ಷಾ	ಎಸ್.ಎಂ. ಪೆಜತ್ತಾಯ	ರೂ.	40.00
87. ಅಮ್ಮ ಹೇಳಿದ ಕತೆಗಳು *	ತ್ರಿವೇಣಿ ಶಿವಕುಮಾರ್	ರೂ.	60.00
88. ನಮ್ಮ ಕರ್ನಾಟಕ–2011	ಸೃಷ್ಟಿನಾಗೇಶ್	ರೂ.	130.00
89. ಸುದ್ಧಿಯ ಹಿಂದೆ*	ಡಿ.ವಿ. ರಾಜಶೇಖರ್	ರೂ.	70.00
90. ಮೈಲಾರ ಬಸವಲಿಂಗ ಶರಣರ ತ್ರಿವಿಧಿಕರಣ*	ಡಾ. ಹಾ.ಮಾ. ನಾಗಾರ್ಜುನ	ರೂ.	250.00
91. ವೀರವನ್ತೆ ದುರ್ಗವ್ವ (ನಾಟಕ) *	ಡಾ. ಯಲ್ಲಪ್ಪ ಕೆ.ಕೆ.ಪುರ	ರೂ.	70.00
92. ಹಕ್ಕಿ ಹರಿವ ನೀರು *	ಡಾ. ಕವಿತಾ ರೈ	ರೂ.	40.00
93. ವೀರವನ್ತೆ ದುರ್ಗವ್ವ (ಕಾದಂಬರಿ) *	ಡಾ. ಯಲ್ಲಪ್ಪ ಕೆ.ಕೆ.ಪುರ	ರೂ.	120.00
94. ಲೋಕಾಮುದ್ರಾ (ನಾಟಕ) *	ಡಾ. ಕವಿತಾ ರೈ	ರೂ.	50.00
95. ಸಾಹಿತ್ಯ ಸಂಸ್ಕೃತಿ *	ಡಾ. ತಳವಾರ ವಾಮದೇವ	ರೂ.	110.00
96. ಅಲ್ಲುಂಟು ನೆಂಟು *	ಬಿ.ಎಸ್. ಲಕ್ಷ್ಮೀನಾರಾಯಣ	ರೂ.	70.00

97. ವೇಶ್ಯೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು	ಪ್ರೊ. ಶಿವರಾಮಯ್ಯ	ರೂ.	125.00
98. ಪುಟಾಣಿಗಳಿಗಾಗಿ ಪುಟ್ಟ ಕಥೆಗಳು *	ಪ್ರಕಾಶ್ ಕೆ. ನಾಡಿಗ್	ರೂ.	70.00
99. ತುತ್ತಿಗೊಂದು ಕಥೆ (ಮಕ್ಕಳ ಕಥೆಗಳು)*	ಸುನೀತಾ ರಾಜು	ರೂ.	80.00
100. ಬ್ಲಾಗಿಸು ಕನ್ನಡ ಡಿಂಡಿಮವ *	ಚೇತನಾ ತೀರ್ಥಹಳ್ಳಿ	ರೂ.	90.00
101. ಭಾರತ ಮತ್ತು ಪಾಕಿಸ್ತಾನ ಕಾಶ್ಮೀರ *	ಡಾ. ಸಿ.ಚಂದ್ರಪ್ಪ	ರೂ.	225.00
102. ತರಂಗಿಣಿ ತೀರದಲ್ಲಿ *	ಆತ್ಮಕೂರ ವಾಮನಾಚಾರ್ಯ	ರೂ.	225.00
103. ಆಲೋಡನ *	ಆನಂದ ಝುಂಜರವಾಡ	ರೂ.	150.00
104. ನಾದಲೋಕದ ರಸನಿಮಿಷಗಳು *	ಶಿರೀಷ ಜೋಷಿ	ರೂ.	150.00
105. ಕುವೆಂಪು ಕಾವ್ಯಯಾನ *	ಡಾ. ಬಿ.ಆರ್.ಸತ್ಯನಾರಾಯಣ	ರೂ.	200.00
106. ಸಂಘರ್ಷ*	ಮಾಲತೇಶ ಸಿದ್ಧಮ್ಮನವರು	ರೂ.	50.00
107. ಅಜ್ಜಿ ಹೇಳಿದ ಕಥೆಗಳು *	ಡಾ. ಅನಸೂಯಾದೇವಿ	ರೂ.	100.00
108. ಭುವನದ ಬೆರಗು *	ತ್ರಿವೇಣಿ ಶಿವಕುಮಾರ್	ರೂ.	150.00
109. ಅಮ್ಮಿ (Ammi Saeed mirza)	ರಾಹು	ರೂ.	470.00
110. ಪ್ರಕೃತಿ ಮತ್ತು ಪ್ರೀತಿ *	ಡಾ. ಅನಸೂಯದೇವಿ	ರೂ.	300.00
111. ರಾಣಿ ಕಥೆಗಳು*	ಡಾ. ವೀರಭದ್ರಗೌಡ	ರೂ.	150.00
112. ಶತಪದಗಳ ಸುಳಿಯಲ್ಲಿ*	ಮಹೇಶ ದೇಶಪಾಂಡೆ	ರೂ.	70.00
113. ಪ್ರಾಚೀನ ಭಾರತದ ವೈದ್ಯ ವಿಜ್ಞಾನ *	ಡಾ. ಕವಿತಾ ಎಸ್.ಎಚ್.	ರೂ.	80.00
114. ಜೋಲಿ ಲಾಲಿ (ಭಾಗ-2) *	ಜ್ಯೋತಿ ಗುರುಪ್ರಸಾದ್	ರೂ.	250.00
115. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ	ಡಾ. ಲೀಲಾವತಿ ದೇವದಾಸ್	ರೂ.	200.00
116. ಬೇಂದ್ರೆ-ಶರೀಫರ ಕಾವ್ಯಾಯಾನ	ಸುನಾಥ ದೇಶಪಾಂಡೆ	ರೂ.	350.00
117. ಪಡು-ಮೂಡು *	ಕೆ. ಕೇಶವಶರ್ಮ	ರೂ.	500.00
118. ವಸಾಹತುಶಾಹಿ ಪರಿಕಲ್ಪನೆಗಳು	ಕೆ. ಕೇಶವಶರ್ಮ	ರೂ.	350.00
119. ಸಾಂಸ್ಕೃತಿಕ ಪರಿಕಲ್ಪನೆಗಳು	ಕೆ. ಕೇಶವಶರ್ಮ	ರೂ.	350.00
120. ಸ್ತ್ರೀವಾದಿ ಪರಿಕಲ್ಪನೆಗಳು	ಕೆ. ಕೇಶವಶರ್ಮ	ರೂ.	350.00
121. ಸುಗಂಧ ಪುಷ್ಪ *	ಹಾ.ಮ. ನಾಗಾರ್ಜುನ	ರೂ.	175.00
122. ಸೆಕ್ಯೂಲರ್‌ವಾದ:ಬುಡ-ಬೇರು	ರಾಹು	ರೂ.	300.00
123. ಕವಿತೆಯ ಓದು	ಪ್ರಭಾಕರ ಆಚಾರ್ಯ	ರೂ.	150.00
124. ಆರನೆಯ ಹೆಂಡತಿಯ ಆತ್ಮಕಥೆ (My Feudal Lord)	ರಾಹು	ರೂ.	400.00
125. ಮೈ ಫಾದರ್ ಬಾಲಯ್ಯ	ಡಾ. ರಾಜಣ್ಣ ತಗ್ಗಿ	ರೂ.	180.00
126. ಪೀಠಾಧಿಯಪತಿಯ ಪತ್ನಿ (Blasphemy)	ರಾಹು	ರೂ.	350.00
127. ಹಾಡುವ ಹಕ್ಕಿಯ ಶೋಕಗೀತೆ*	ಡಾ.ಅಪ್ಪಗೆರೆ ಸೋಮಶೇಖರ್	ರೂ.	130.00
128. ವಿಮರ್ಶೆಯ ಪರಿಕಲ್ಪನೆಗಳು	ಕೇಶವಶರ್ಮ ಕೆ.	ರೂ.	500.00
129. ಯಾತ್ರಿಕನ ಕನಸು (Alchimest)	ಡಾ. ರಾಜಣ್ಣ ತಗ್ಗಿ	ರೂ.	160.00
130. ದಾಂಪತ್ಯ ನಿಷ್ಠೆ ಪರಿಕಲ್ಪನೆ ಬದಲಾಗುತ್ತಿದೆಯೇ?	ಸುನಂದ ಕಡಮೆ	ರೂ.	160.00
131. ಕುಮಾರವ್ಯಾಸ ಭಾರತ ಭಾಷಾ ವೈಜ್ಞಾನಿಕ ವಿಶ್ಲೇಷಣೆ	ಓಂಕಾರಪ್ಪ	ರೂ.	200.00
132. ನೋಯುವ ಹಲ್ಲಿಗೆ ಹೊರಳುವ ನಾಲಿಗೆ	ಡಾ.ಎಚ್.ಎಸ್.ಅನುಪಮಾ	ರೂ.	200.00
133. ತತ್ವಜ್ಞಾನದ ಪರಿಕಲ್ಪನೆಗಳು	ಕೇಶವಶರ್ಮ ಕೆ.	ರೂ.	500.00

134. ಬಹುರೂಪಿ ಭಾರತ — ತ್ರಿವೇಣಿ ಶಿವಕುಮಾರ್ — ರೂ. 250.00
135. ಮಾರ್ಕ್ಸ್‌ವಾದಿ ಪರಿಕಲ್ಪನೆಗಳು — ಕೇಶವಶರ್ಮ ಕೆ. — ರೂ. 400.00
136. ಹೊಸಪಕ್ಷಿ ರಾಗ — ಜ್ಯೋತಿ ಗುರುಪ್ರಸಾದ್ — ರೂ. 200.00
137. ತೇಲ್ನೋಟ — ಕು.ಗೋ — ರೂ. 150.00
138. ಆಟಗಳು — ಪ್ರಕಾಶ್ ಕೆ. ನಾಡಿಗ್ — ರೂ. 80.00
139. ಕನಸಿನೂರಿನ ಕಿಟ್ಟಣ್ಣ — ಕೆ. ಪ್ರಭಾಕರನ್ — ರೂ. 80.00
140. ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ — ಕು.ಗೋ — ರೂ. 80.00
141. ಒಂದು ನೂರು ವರ್ಷಗಳ ಏಕಾಂತ (One Hundred Years of Solitude) — ಡಾ. ವಿಜಯಾ ಸುಬ್ಬರಾಜ್ — ರೂ. 450.00
142. ಜೀವಸಿರಿ — ವಸುಂಧರಾ ಭೂಪತಿ — ರೂ. 150.00
143. ಅಲೆಮಾರಿ ಒಬ್ಬನ ಆತ್ಮಕತೆ..!(Gulliver Trevels) — ಡಾ. ಟಿ.ಡಿ.ರಾಜಣ್ಣ ತಗ್ಗಿ — ರೂ. 200.00
144. ಶಾಲ್ಮಲಿ (ಹಿಂದಿ ಅನುವಾದ) — ಡಾ. ವಿಜಯಾ ಸುಬ್ಬರಾಜ್ — ರೂ. 160.00
145. ತೆರವು (ಮರಾಠಿ ಅನುವಾದ) — ಚಂದ್ರಕಾಂತ ಪೋಕಳೆ — ರೂ. 80.00
146. ಅನನ್ಯ (ಕನ್ನಡ ತಮಿಳು ಸಾಹಿತ್ಯ ಅವಲೋಕನ) — ಡಾ॥ ತಮಿಳ್ ಸೆಲ್ವಿ — ರೂ. 160.00
147. ಧರೆಹೊತ್ತಿ ಉರಿದಾಗ (ಸಂಪುಟ–1) (ಭಾರತ ವಿಭಜನೆಯ ದುರಂತ ಕಥೆಗಳು) — ರಾಹು — ರೂ. 450.00
148. ಧರೆಹೊತ್ತಿ ಉರಿದಾಗ (ಸಂಪುಟ–2) (ಭಾರತ ವಿಭಜನೆಯ ದುರಂತ ಕಥೆಗಳು) — ರಾಹು — ರೂ. 450.00
149. ಧರೆಹೊತ್ತಿ ಉರಿದಾಗ (ಸಂಪುಟ–3) (ಭಾರತ ವಿಭಜನೆಯ ದುರಂತ ಕಥೆಗಳು) — ರಾಹು — ರೂ. 450.00
150. ದಯವಿಟ್ಟು ಮುಚ್ಚಬೇಡಿ ರಸ್ತೆ ಗುಂಡಿಗಳನ್ನು — ಶಾಂತರಾಜ್ ಐತಾಳ್ — ರೂ. 150.00
151 ಪಾತಾಳಕ್ಕೆ ಪಯಣ (Journey to the Center of the Earth) — ಡಾ. ರಾಜಣ್ಣ ತಗ್ಗಿ — ರೂ. 225.00
152 ಕೊಡಚಾದ್ರಿ (ಸಾಧಕರ ನುಡಿ ಚಿತ್ರಗಳು) — ಲಕ್ಷ್ಮಣ ಕೊಡಸೆ — ರೂ. 180.00
153 ಸುಡಗಾಡ ಕಾಯ — ಡಾ. ಅನುಬೆಳ್ಳೆ — ರೂ. 125.00
154 ಕರುಳ ತೆಪ್ಪದ ಮೇಲೆ (ಖುಷ್ವಂತ್‌ಸಿಂಗ್‌ರ ಟ್ರೈನ್ ಟೂ ಪಾಕಿಸ್ತಾನ ನಾಟಕ) — ಚಿದಾನಂದ ಸಾಲಿ — ರೂ. 70.00
155 ದೇವನೊಬ್ಬ ಬೇಕೆ ? — ಡಾ. ಶೀಪರಮಟ್ಟಿ — ರೂ. 150.00
156 ಮೊಪಾಸನ ಕಥೆಗಳು ಭಾಗ 1 — ಡಾ. ಪಿ.ವಿ. ರಾಮಚಂದ್ರ — ರೂ. 450.00
157 ಮೊಪಾಸನ ಕಥೆಗಳು ಭಾಗ 2 — ಡಾ. ಪಿ.ವಿ. ರಾಮಚಂದ್ರ — ರೂ. 450.00
158. ದಾಹ — ಡಾ. ಟಿ.ಡಿ.ರಾಜಣ್ಣ ತಗ್ಗಿ — ರೂ. 200.00
159. ಕತ್ತಲಲ್ಲಿ ಕೊಲೆ (MURDER IN THE DARK) — ಡಾ. ನವೀನ್ ಹಳೇಮನೆ — ರೂ. 80.00
160. ಆಮೇನ್ – ದಮನಿತ ದೀದಿಯ ಆತ್ಮಕಥನ — ಸಿಸ್ಟರ್ ಜೆಸ್ಮಿ — ರೂ. 240.00
161. ಬೆಸುಗೆಯ ಬಂಧನದಲ್ಲಿ — ಡಾ. ವಿಜಯಾ ಸುಬ್ಬರಾಜ್ — ರೂ. 350.00
162. ಮಲೆಯಾಳದ ಪ್ರಸಿದ್ಧ ಪೆಣ್ ಕಥೆಗಳು — ಪಾರ್ವತಿ ಜಿ. ಐತಾಳ್ — ರೂ. 210.00
163. ಭಯೋತ್ಪಾದಕ — ರಾಹು — ರೂ. 225.00
164. ಬೆಸುಗೆಯ ಬಂಧನದಲ್ಲಿ — ಡಾ. ವಿಜಯಾ ಸುಬ್ಬರಾಜ್ — ರೂ. 350.00

165. ಸಂಗೀತಲೋಕದ ಸವಿನೆನಪುಗಳು ಶೀರೀಷ ಜೋಷಿ ರೂ. 100.00
166. ಜೀವನವೆನ್ನುವ ಅದ್ಭುತ! ಕೆ. ಪ್ರಭಾಕರನ್ ರೂ. 250.00
167. ಮಾರ್ಕ್ಸ್‌ವಾದ ಮತ್ತು ಅನ್ಯವಾದಗಳು ಕೇಶವಶರ್ಮ ಕೆ ರೂ. 300.00
168. ಕರುಣಾಳು, ಬಾ ಬೆಳಕೆ (FEVER) ಅನಸೂಯದೇವಿ ರೂ. 180.00
169. ದಾಂಪತ್ಯ ಯೋಗ ಡಾ. ನಾ ಮೊಗಸಾಲೆ ರೂ. 180.00
170. ಅಜೇಯ (The Count of Monte Cristo) ಡಾ. ರಾಜಣ್ಣ ತಗ್ಗಿ ರೂ. 400.00
171. ಸಂಗೀತಲೋಕದ ಸವಿನೆನಪುಗಳು ಶಿರೀಷ ಜೋಶಿ ರೂ. 100.00
172. ಚಮತ್ಕಾರಿ ದೇಹ ವಿಸ್ಮಯಕಾರಿ ಮನಸು ಡಾ. ಶೀಪರಮಟ್ಟಿ ರೂ. 150.00
173. ಕಸ್ತೂರಬಾ ಡಾ.ಪ್ರಭಾಕರ್ ಎಂ. ನಿಂಬರಗಿ ರೂ. 300.00
174. ಇದು ವಿದಾಯವಲ್ಲ ಪಾರ್ವತಿ ಜಿ. ಐತಾಳ್ ರೂ. 160.00
175. ಎಲ್ಲೇ ಮೀರಿ ಡಾ. ಎಚ್. ಎಸ್. ನಾಗಭೂಷಣ್ ರೂ. 300.00
(N GUGI W THIONG 'O)
176. ಪ್ರಸಿದ್ಧ ಚೀನೀ ಕಥೆಗಳು ಡಾ. ವಿಜಯಾ ಸುಬ್ಬರಾಜ್ ರೂ. 230.00
177. ಹಿಮ (ORAHAN PAMUK) ಡಾ. ಕೆ.ಎಸ್. ವೈಶಾಲಿ ರೂ. 550.00
178. ಡೋರಿಯನ್ ಗ್ರೇನ ಬಾವಚಿತ್ರ ಡಾ. ವಿಜಯಾ ಸುಬ್ಬರಾಜ್ ರೂ. 160.00
(Picture Of Dorean greay)
179. ಕಥನವಕಾಶ (ಅನುವಾದಿತ ಕತೆಗಳು) ಚಿದಾನಂದ ಸಾಲಿ ರೂ. 150.00
180. ಪ್ರೀತಿಯ ನಲವತ್ತು ನಿಯಮಗಳು ಮಮತಾ ಜಿ ಸಾಗರ ರೂ. 400.00
(THE FORTY RULES OF LOVE) ELIF SHAFAK
181. ಶ್ರೀ ರಾಮಾಯಣ ದರ್ಶನಂ–ಶ್ರೀ ದರ್ಶನ ಶ್ರೀನಿವಾಸ ಕೃ. ದೇಸಾಯಿ ರೂ. 150.00
182 ಭಾಮಾ ದಲಿತ ಪ್ರಜ್ಞೆ ಡಾ. ಎಚ್.ಎಸ್. ನಾಗಭೂಷಣ್ ರೂ. 180.00
183 ಅಷ್ಟವಕ್ರನೂ ಅಪೂರ್ವ ಸುಂದರಿಯೂ ಡಾ. ರಾಜಣ್ಣ ತಗ್ಗಿ ರೂ. 225.00
(THE HUNCH BACK OF NOTRE DAME)
184 ರಾತ್ರಿ ಕಪ್ಪು.... ಕೊಡ ಕಪ್ಪು ಚಂದ್ರಕಾಂತ ಪೋಕಳೆ ರೂ. 200.00
185 ಲಾಸ್ಟ್ ಲೋಕಲ್ ಲೋಸ್ಟ ಲವ್ ರಾಜೀವ್ ನಾಯಕ ರೂ. 120.00
186 ವಿವಾಹ ಭೋಜನವಿದು ಶಾಂತರಾಜ್ ಐತಾಳ್ ರೂ. 120.00
187 ನೆನಪಿನಂಗಳದಲ್ಲಿ ವೈಯನ್ಕೆ, ವಡ್ಡರ್ಸೆ,
ಪೂಜಾರಿ ಚಿದಂಬರ ಬೈಕಂಪಾಡಿ ರೂ. 140.00
188 ನನ್ನವರು (MAVALLU) ಸುಲೋಚನ ರೂ. 190.00
189 ವಯನಾಡಿನ ಕನಸು ಪಾರ್ವತಿ ಜಿ. ಐತಾಳ್ ರೂ. 100.00
190 ಪ್ರಾತಿನಿಧಿಕತೆ ಮತ್ತು ಸ್ವಯಂಬಲ ಕೇಶವಶರ್ಮ ಕೆ. ರೂ. 260.00
191 ಮಾರ್ಕ್ಸವಾದ ಮತ್ತು ಅನ್ಯವಾದಗಳು ಕೇಶವಶರ್ಮ ಕೆ. ರೂ. 350.00
192 ದಡವ ಹಡೆದ ನದಿ (ಕವಿತೆಗಳು) ಎಚ್.ಎನ್. ಈಶಕುಮಾರ್ ರೂ. 100.00
193 ಭಾರತದ ಜ್ವಲಂತ ಸಮಸ್ಯೆಗಳು ಮತ್ತು ಮಾಧ್ಯಮ ಅಭಿಲಾಷಾ ಆರ್. ರೂ. 100.00
194 ಕೃಷ್ಣವೇಣಿ (ಕಾದಂಬರಿ) ವೆಂಕಟಗಿರಿ ಕಡೇಕಾರ್ ರೂ. 170.00
195 ಆಕಾಶದ ಕರೆ (ಸಣ್ಣ ಕಥೆಗಳು) ಡಾ. ಅನಸೂಯಾದೇವಿ ರೂ. 350.00
196 ಬುಡಕಟ್ಟು ಜ್ಞಾನಪರಂಪರೆ ಡಾ. ಎಸ್.ಎಂ. ಮುತ್ತಯ್ಯ ರೂ. 170.00
197 ಮರಳ ದಿಬ್ಬಗಳಲ್ಲಿ ಮಹಿಳೆ ಡಾ. ವಿಜಯಾ ಸುಬ್ಬರಾಜ್ ರೂ. 160.00
(The women in the dunes)

198	ಉಪೇಂದ್ರನಾಥ ಅಶ್ಕರ್ ಐದು ನೀಳ್ಗಥೆಗಳು	ಪಾರ್ವತಿ ಜಿ. ಐತಾಳ್	ರೂ. 100.00
199	ಮಾಫಿಯಾ	ಕೆ.ಕೆ. ಗಂಗಾಧರನ್	ರೂ. 540.00
200	ಲುಷನ್‌ರ ಆಯ್ದ ಹತ್ತು ಕಥೆಗಳು	ಡಾ. ವಿಜಯಾ ಸುಬ್ಬರಾಜ್	ರೂ. 150.00
201	ಆಲಂಪನಾ	ಶ್ಯಾಮಲಾ ಮಾಧವ	ರೂ. 250.00
202	ಬ್ಲ್ಯಾಕ್ ಕಾಫಿ	ಅನು ಬೆಳ್ಳೆ	ರೂ. 180.00
203	ಮಲಾಣ್	ಶಾಂತನಾಯ್ಕ ಶೀರಗಾನಹಳ್ಳಿ	ರೂ. 310.00
204	ಮಲೆಯಾಳದ ಮಹಿಳಾ ಕಥನ	ಪಾರ್ವತಿ ಜಿ. ಐತಾಳ್	ರೂ. 270.00
205	ಮಾರಾಟಗಾರನ ಸಾವು	ಎಂ.ಎಸ್. ರಘುನಾಥ	ರೂ. 140.00
206	ಜೆನ್ ಅನುಭವ	ವಿಜಯ್‌ನಾಗ್	ರೂ. 360.00
207	ದೇಸಿ ದಿಬ್ಬಣ	ಡಾ. ಕೆ.ಎಲ್. ದಿವ್ಯ	ರೂ. 220.00
208	ಗೋಡೆ	ಡಾ. ಸಿ.ಎಸ್. ದ್ವಾರಕನಾಥ್	ರೂ. 400.00
209	ಕಥೆಗಳ ಕಟ್ಟು	ಅಮರೇಶ್ ನುಗಡೋಣಿ	ರೂ. 350.00
210	ಒಲವು ತುಂಬಿದ ದಾರಿ (ಪ್ರೇಮ ಕಥನಗಳು)	ಕೇಶವ ಮಳಗಿ	ರೂ. 280.00
211	ಅರೇಬಿಯನ್ ನೈಟ್ಸ್ ಭಾಗ–1	ಶರಣಪ್ಪ ಜಿ	ರೂ. 600.00
212	ಅರೇಬಿಯನ್ ನೈಟ್ಸ್ ಭಾಗ–2	ಶರಣಪ್ಪ ಜಿ	ರೂ. 425.00
213	ಭೂಮಿಗೆ ಬಂದ ಗಂಧರ್ವ	ಡಾ. ಹೆಚ್.ಎಲ್. ನಾಗೇಗೌಡ	ರೂ. 350.00
214	ಒಂಟಿದನಿ (ಬೋರಿಸ್ ಪಾಸ್ತಾರ್‌ನಕ್)	ಕೇಶವಮಳಗಿ	ರೂ. 260.00
215	ಪರ್ಯಾಯ ನೋಟಗಳು (Paralex veiw. Salvoj zizek)	ಕೇಶವಶರ್ಮ	ರೂ. 530.00
216	ಗಾನ್ ವಿತ್ ದ ವಿಂಡ್	ಶ್ಯಾಮಲಾ ಮಾಧವ	ರೂ. 750.00
217	ಕಥಾ ಸಮಾಹಾರಂ	ಪ್ರಭಾಕರನ್ ಕೆ.	ರೂ. 150.00
218	ವದರಿಂಗ್ ಹೈಟ್ಸ್	ಶ್ಯಾಮಲ ಮಾಧವ	ರೂ. 400.00
219	ನನ್ನ ಬದುಕು (My Life) ANTON CHEKHOV	ಕನ್ನಡಕ್ಕೆ:ಮಡಿವಾಳಪ್ಪ ತಟ್ಟಿಮನಿ	ರೂ. 125.00
220	ಆರ್ತ	ಕನ್ನಡಕ್ಕೆ : ಗೀತಾ ಶೆಣೈ	ರೂ. 150.00
221	ಮೂರನೆ ದಡ	ಕನ್ನಡಕ್ಕೆ : ಎ.ಎನ್. ಪ್ರಸನ್ನ	ರೂ. 220.00
222	ದೇವರುಗಳ ರಾಜ್ಯದಲ್ಲಿ	ಬೊಳುವಾರು ಮಹಮದ್ ಕುಂಞಿ	ರೂ. 160.00
223	ಸಫಾ	ಪ್ರಸಾದ್ ನಾಯ್ಕ್	ರೂ. 350.00
224	ಹಲವು ಜೀವನ ಹಲವು ಮಾರ್ಗದರ್ಶಕರು	ಎನ್. ಶ್ರೀಧರ್	ರೂ. 200.00
225	ಜಪಾನೀನ ಕಾಲ್ಪನಿಕ ಕಥೆಗಳು	ಕನ್ನಡಕ್ಕೆ : ವಿಜಯ್ ನಾಗ್	ರೂ. 200.00
226	ನವಿಲು ಪುರಾಣ	ಕನ್ನಡಕ್ಕೆ : ಕೆ.ಈ ರಾಧಾಕೃಷ್ಣ	ರೂ. 450.00
227	ಶಬರಿಗಾದನು ಅತಿಥಿ ದಾಶರಥಿ	ಶ್ರೀನಿವಾಸ ಕೃ ದೇಸಾಯಿ	ರೂ. 125.00
228	ಪಡೆಯದ ಭಾಗ್ಯ	ಶ್ರೀನಿವಾಸ ಕೃ ದೇಸಾಯಿ	ರೂ. 125.00
229	ಗೂಳಿ	ಕನ್ನಡಕ್ಕೆ : ನಲ್ಲತಂಬಿ	ರೂ. 225.00
230	ನೀರದೀವಿಗೆ	ಕೆ.ವೈ. ನಾರಾಯಣಸ್ವಾಮಿ	ರೂ. 260.00
231	ವೈದ್ಯಕೀಯ ವೃತ್ತಿ ಉದ್ಯೋಗ ಉದ್ಯಮ	ಕನ್ನಡಕ್ಕೆ: ರಾಹು	ರೂ. 325.00
232	ಬದುಕಿರುವುದೇ ಕಥೆ ಹೇಳಲಿಕ್ಕೆ	ಟಿ.ಎಸ್. ರಘುನಾಥ್	ರೂ. 725.00
233	ಒಡೆದ ಕನ್ನಡಿ	ಕನ್ನಡಕ್ಕೆ : ವಿಜಯಾ ಸುಬ್ಬರಾಜ್	ರೂ. 220.00

234	ತಣ್ಣನೆಯ ಮಾಂಸ ಮತ್ತು ಇತರ ಕಥೆಗಳು	ಡಾ.ಕೆ.ಎಲ್.ದಿವ್ಯ	ರೂ.	170.00
235	ಹೆರೊಡೊಟಸನ ಸಮರ ಕತೆಗಳು	ಶಿವರಾಮಯ್ಯ ಡಾ.ಎಚ್.ವಿ. ರಂಗಾಚಾರ್	ರೂ.	275.00
236	ಒಂದು+ ಮತ್ತು ನೂರುಕಥೆಗಳು	ಪ್ರೊ. ಕೆ.ಈ. ರಾಧಾಕೃಷ್ಣ	ರೂ.	350.00
237	ಮನಸು ಮಾಗಿದ ಸುಸ್ವರ	ಜ್ಯೋತಿ ಗುರುಪ್ರಸಾದ್	ರೂ.	350.00
238	ಬುದ್ಧ ಬಾಬಾಸಾಹೇಬ ಮತ್ತು ನಾನು	ಅಶೋಕ್	ರೂ.	160.00
239	ಒಂದು ತುಂಡು ಗೋಡೆ	ಬೊಳುವಾರು ಮಹಮದ್ ಕುಂಞ	ರೂ.	150.00
240	ಮಲೆಯಾಳದ ಪೆಣ್ ಕಥನ	ಕಮಲ ಹೆಮ್ಮಿಗೆ	ರೂ.	320.00
241	ಸೂರ್ಯ ಶಿಖರ	ಕನ್ನಡಕ್ಕೆ : ರಾಜಣ್ಣ ತಗ್ಗಿ	ರೂ.	320.00
242	ದಲಿತ ತತ್ವಶಾಸ್ತ್ರ : ಭಾರತೀಯ ಭೌತಿಕವಾದ ಚಾರ್ವಕ ದರ್ಶನ : ಕೆಲವು ತಾತ್ವಿಕ ಚಿಂತನೆಗಳು	ಲಕ್ಕೂರು ಆನಂದ	ರೂ.	210.00
243	ಈಡಿಪಸ್ ಮತ್ತು ಅಂತಿಗೊನೆ	ಡಾ. ವಿಜಯಾ ಸುಬ್ಬರಾಜ್	ರೂ.	125.00
244	ಪ್ರಶಾಂತ ನೀಲಾಕಾಶ TEN THOUSAND MILES WITH CLOUDS	ಉಷಾಶ್ರೀ	ರೂ.	550.00
245	ಸುಂದರವನದಲ್ಲಿ ನೊಣದ ರಾಜ್ಯಭಾರ	ಕನ್ನಡಕ್ಕೆ : ಸುನೀತಾ ಕುಶಾಲನಗರ	ರೂ.	120.00
246	ನಖಾಶಿಖಾಂತ (ಮಲೆಯಾಳಂ ಕಥೆಗಳು)	ಕನ್ನಡಕ್ಕೆ : ಪ್ರಭಾಕರನ್.ಕೆ	ರೂ.	275.00
247	ಭಾಷಾಂತರ ಜಗತ್ತು	ಪಾರ್ವತಿ ಜಿ ಐತಾಳ್	ರೂ.	180.00
248	ಹೆಣೆಯುತ್ತಿದೆ ಜೇಡ ಬಲೆಯ.....*	ಪ್ರೊ. ಶಿವರಾಮಯ್ಯ	ರೂ.	200.00
249	ಸಾಹಿತ್ಯ ಮತ್ತು ತತ್ವಜ್ಞಾನ	ಕೆ. ಕೇಶವಶರ್ಮ	ರೂ.	400.00
250	ಅನುಪಲ್ಲವಿ	ಆತ್ಮಕೂರ ವಾಮನಚಾರ್ಯ	ರೂ.	160.00
251	ಕಥೆ– ಚಿತ್ರಕಥೆ	ಶಶಿಧರ್ ಚಿತ್ರದುರ್ಗ	ರೂ.	200.00
252	ತನ್ನಷ್ಟಕ್ಕೆ	ರೂಪ ಹಾಸನ	ರೂ.	50.00
253	ನಕ್ಷತ್ರ ನೋಡುತಾ....	ತಮ್ಮಣ್ಣ ಬೀಗಾರ	ರೂ.	100.00
254	ತಾರೆಗಳ ದುನಿಯಾ	ಶಶಿಧರ್ ಚಿತ್ರದುರ್ಗ	ರೂ.	100.00
255	ಮೂಡಲ ಮನೆಯ ಮುತ್ತಿನ ಹುಡುಗಿ	ಆತ್ಮಕೂರ ವಾಮನಚಾರ್ಯ	ರೂ.	160.00
256	ರೀ ಮೇಡ್ ಇನ್ ಅಮೆರಿಕ	ವಿಜಯ್ ಭಾರದ್ವಾಜ್	ರೂ.	250.00
257	ಪ್ರಭು ಸಂಹಿತೆಯ ರೂಪಕಗಳು	ಕೆ. ಕೇಶವಶರ್ಮ	ರೂ.	220.00
258	ಆಧುನಿಕೊತ್ತರವಾದ	ಕೆ. ಕೇಶವಶರ್ಮ	ರೂ.	350.00
259	ದ್ರೌಪದಿ	ವೇಣುಗೋಪಾಲ ವಹ್ನಿ	ರೂ.	500.00
260	ಕಳಚಿದ ಕೊಂಡಿ	ಪ್ರಮೋದ್ ಮತಾಲಿಕ	ರೂ.	150.00
261	ಮಲೆಯಾಳದ ಪ್ರಸಿದ್ಧ ಪೆಣ್ ಕತೆಗಳು	ಪರ್ವತಿ ಜಿ ಐತಾಳ್	ರೂ.	320.00
262	ಹಳ್ಳಿ ಹಕ್ಕಿಯ ಹಾಡು (ಎಚ್.ವಿಶ್ವನಾಥ್ ಆತ್ಮಕತನ)	ಎಚ್.ವಿಶ್ವನಾಥ್	ರೂ.	175.00
263	ಎಳೆಯರಿಗಾಗಿ ಸರಳ ರಾಮಾಯಣ	ವೇಣುಗೋಪಾಲ ವಹ್ನಿ	ರೂ.	350.00
264	ಮಾತು ಮಾತು ಮಥಿಸಿ...	ಮೇಟಿ ಮಲ್ಲಿಕಾರ್ಜುನ	ರೂ.	380.00
265	ಕಣಜ	ಪ್ರಮೋದ್ ಮುತಾಲಿಕ	ರೂ.	225.00
266	ಹಿಂದು ಸಾಮ್ರಾಜ್ಯವಾದ ಚರಿತ್ರೆ	ಸ್ವಾಮಿ ಧರ್ಮಾತೀರ್ಥ	ರೂ.	220.00
267	ಹಿರೋಶಿಮಾದ ಹೂವುಗಳು	ಡಾ. ವಿಜಯ್ ನಾಗ್ ಜಿ	ರೂ.	180.00
268	ಕುರುಡು (Blindness)	ಡಾ. ವಿಜಯಾ ಸುಬ್ಬರಾಜ್	ರೂ.	325.00

269	ಲೇಡಿ ಚಾರ್ಟರ್ಲೀಸ್ ಲವರ್	ಟಿ.ಎಸ್. ರಘುನಾಥ್	ರೂ. 500.00
240	ಚಲಂ (ಆತ್ಮಕಥೆ)	ಲಕ್ಕೂರು ಆನಂದ	ರೂ. 400.00
271	ಬೆಳಕೂ ಅದೆ, ಕತ್ತಲೆಯೂ ಅದೇ	ಡಾ.ಅಮರೇಶ ನುಗಡೋಣಿ	ರೂ. 280.00
272	ಮುತ್ತು (Pearl)	ಲಕ್ಕೂರು ಆನಂದ	ರೂ. 150.00
273	ನಡು ಮಧ್ಯಾಹ್ನದ ಚಂದ್ರ ಮತ್ತು ಇತರ ಕತೆಗಳು (ABDULRAZAK GURNAH)	ಜೆ. ಬಾಲಕೃಷ್ಣ	ರೂ. 150.00
274	ಡೈರಿ ಆಫ್ ಎ ಎಂಗ್ ಗರ್ಲ್	ನಾಗರೇಖಾ ಗಾಂವ್ಕರ್	ರೂ. 450.00
275	ನಾಗಚಂದ್ರನ ರಾಮನ ಕಥನ	ಸೃಜನ್ ಗಣೇಶ್ ಹೆಗಡೆ	ರೂ. 360.00
276	ಶಂಭಾಲ	ಕನ್ನಡಕ್ಕೆ : ಡಾ. ಜಯಲಲಿತಾ	ರೂ. 270.00
277	ಸ್ವರ್ಗ (NOBLE PERIZE WINNER)	ಕನ್ನಡಕ್ಕೆ ; ಬಿ. ಶರಣಪ್ಪ	ರೂ. 320.00
278	ಆನಂತ್ಯ	ಸುನೀತರಾಜ್	ರೂ. 400.00
279	ಯಶೋಧರ ಚರಿತ್ರೆ (ಸಂಘರ್ಷದ ನೆಲೆಗಳು)	ಕೇಶವಶರ್ಮ ಕೆ	ರೂ. 290.00
280	ಹೊನ್ನ ಕೊಪ್ಪರಿಗೆ	ವಾಸಂತಿ ಶೆಟ್ಟಿ ಬ್ರಹ್ಮಾವರ	ರೂ. 120.00
281	ಚಾಂಡಾಳನೊಬ್ಬನ ಆತ್ಮವಿಮರ್ಶೆ (INTERROGATTING MY CHANADALA LIFE)	ಡಾ. ಎಚ್.ಎಸ್.ನಾಗಭೂಷಣ	ರೂ. 325.00
282	1984	ಡಾ. ವಿಜಯಾ ಸುಬ್ಬರಾಜ್	ರೂ. 275.00
283	ಭಾಷಾಂತರ ಜಗತ್ತು	ಪಾರ್ವತಿ ಜಿ. ಐತಾಳ್	ರೂ. 125.00
283	ಬಿಜಾಪುರ ಡೈರಿ	ಚಂದ್ರಕಾಂತ ಪೊಕಳೆ	ರೂ. 225.00
284	ರನ್ನಿಂಗ್ ನಾವೆಲಿಸ್ಟ್ (Haruki Murkami)	ರವಿಕುಮಾರ್ ಹಂಪಿ	ರೂ. 160.00
285	ಹಾಜಿ ಮುರಾದ್ ಮತ್ತು ಇತರ ಕಥೆಗಳು	ಟಿ.ಎಸ್. ರಘುನಾಥ್	ರೂ. 700.00
286	ಹೊಕ್ಕುಳು	ಡಾ. ಮೊಗಳ್ಳಿ ಗಣೇಶ್	ರೂ. 400.00
287	ಇಲ್ಲಿ ಯಾರು ಮುಖ್ಯರಲ್ಲ	ಡಾ. ಮೊಗಳ್ಳಿ ಗಣೇಶ್	ರೂ. 350.00
288	ಮನುಷ್ಯನಾಗಿ ಉಳಿದಿಲ್ಲ	ವಿಜಯನಾಗ್	ರೂ. 180.00
289	ನಾನೆಂಬುದು ಕಿಂಚಿತ್ತು (ಆತ್ಮಕಥನ)	ಡಾ. ಮೊಗಳ್ಳಿ ಗಣೇಶ್	ರೂ. 425.00
290	ಎಲ್ಲೆಗಳ ಮೀರಿ (ಪಾಶ್ಚಾತ್ಯ ಲೇಖಕಿಯರ ಆಶಯ ಮತ್ತು ಗ್ರಹಿಕೆಗಳು)	ಶ್ರೀದೇವಿ ಕೆರೆಮನೆ	ರೂ. 225.00
291	ಸಾಹಸ ಬೀಮ ವಿಜಯ	ಕೆ. ಕೇಶವಶರ್ಮ	ರೂ. 475.00
292	ಆದಿಪುರಾಣದ ಪ್ರವೇಶಕ್ಕೆ ವಿವಿಧ ದಾರಿಗಳು	ಕೆ. ಕೇಶವಶರ್ಮ	ರೂ. 600.00
293	ಕನ್ನಡ ಕಾವ್ಯ ಮೀಮಾಂಸೆ	ಕೆ. ಕೇಶವಶರ್ಮ	ರೂ. 750.00
294	ಬರ್ಟೋಲ್ಟ್ ಬ್ರೆಕ್ಟ್	ಕೆ. ಕೇಶವಶರ್ಮ	ರೂ. 400.00
295	ಶರಣರ ನಾಡಿನ ಸೂಫೀ ಮಾರ್ಗ	ಪರ್ವಿನ್ ಸುಲ್ತಾನಾ	ರೂ. 650.00
296	ಹೆಣವಾಗುತಿರುವ ಗಣರಾಜ್ಯ The crooked timber of new india (Parakala Parbhakar)	ಕನ್ನಡಕ್ಕೆ: ರಾಹು	ರೂ. 300.00
297	ನವೋದಯ ಸಾಹಿತ್ಯದ ಹಿನ್ನಲೆ – ಪ್ರೇರಣೆ ಮತ್ತು ಪ್ರಭಾವಗಳು	ಕೆ. ಕೇಶವಶರ್ಮ	ರೂ. 350.00
298	ಅಂಟೋನಿಯೊ ಗ್ರಾಮ್ಷಿ	ಕೆ. ಕೇಶವಶರ್ಮ	ರೂ. 350.00
299	ಭವ್ಯ ಭೂಮಿ	ಕನ್ನಡಕ್ಕೆ : ಕೆ. ಶ್ರೀನಾಥ್	ರೂ. 425.00
300	ಛತ್ರಪತಿ ಶಿವಾಜಿ (RANJIT DESAI)	ಕನ್ನಡಕ್ಕೆ : ರಾಹು	ರೂ. 1200.00

301 ವೃದ್ಧ ಮತ್ತು ಸಮುದ್ರ ಕನ್ನಡಕ್ಕೆ : ರಾಜಣ್ಣ ತಗ್ಗಿ ರೂ. 180.00

302 ದಿ ಕಾಲ್ ಆಫ್ ವೈಲ್ಡ್ ಕನ್ನಡಕ್ಕೆ: ಜೆ.ವಿ. ಕಾರ್ಲೋ ರೂ. 260.00

303 ಹೃದಯ ಕನ್ನಡಕ್ಕೆ : ವಿಜಯ್‌ನಾಗ್ ರೂ. 250.00

304 ಭೂಮಿ (ಕಾದಂಬರಿ) ಕನ್ನಡಕ್ಕೆ : ಬಂಜಗೆರೆ ಜಯಪ್ರಕಾಶ ರೂ. 400.00

305 ಪ್ರಾಚೀನ ಪಾರ್ಲಿಮೆಂಟ್ ಪ್ರದಕ್ಷಿಣೆಗಳ ಎಚ್. ವಿಶ್ವನಾಥ್ ರೂ. 140.00

306 ದೇವಿ ಕುರುಬತಿ–ಐಗುಪ್ತದ ಐತಿಹಾಸಿಕ ಐಸಿರಿ
ದಂತಕತೆಯಾದ ಈಜಿಪ್ಟ್‌ನ ರಾಣಿ ಡಾ. ಶುಭದಾ ಎಚ್.ಎನ್. ರೂ. 260.00

307 ಕ್ಯಾಂಡೀಡ್ – ವೋಲ್ಟೇರ್ ಕನ್ನಡಕ್ಕೆ : ರಾಜಣ್ಣ ತಗ್ಗಿ ರೂ. 230.00

308 ಫಾಲ್ ಮಿಶೆಲ್ ಫುಕೊ ಕೆ. ಕೇಶವಶರ್ಮ ರೂ. 500.00
– ತತ್ವಜ್ಞಾನ ರಾಜಕಾರಣ ಸಾಮಾಜಿಕ ಚಿಂತನೆಗಳು

309 ಫಾಲ್ ಮಿಶೆಲ್ ಫುಕೊ – ತಾತ್ವಿಕ ನಿಲುವುಗಳು ಕೆ. ಕೇಶವಶರ್ಮ ರೂ. 680.00

310 ನವೋದಯ ಕಾಲದ ಕಾದಂಬರಿಗಳು ಕೆ. ಕೇಶವಶರ್ಮ ರೂ. 475.00

311 ಕೆ. ವಿ. ಎನ್. ಅವರ ತೊಂಡು ಮೇವು
ಕಂತೆಗಳಲ್ಲಿ ಕನ್ನಡ ಕಾವ್ಯ ತತ್ವಗಳು ಕೆ. ಕೇಶವಶರ್ಮ ರೂ. 390.00

312 ಕೆ.ವಿ.ಎನ್. ಅವರ ತೊಂಡು ಮೇವಿನ
ಸಾಹಿತ್ಯ ಸಿದ್ಧಾಂತಗಳೊಂದಿಗೆ ಮುಖಾಮುಖಿ ಕೆ. ಕೇಶವಶರ್ಮ ರೂ. 275.00

313 ನಿರೂಪಣಾಶಾಸ್ತ್ರ ವಾಸ್ತವ ಮತ್ತು ಚರಿತ್ರೆ ಕೆ. ಕೇಶವಶರ್ಮ ರೂ. 275.00

314 ಅನಿರೀಕ್ಷಿತ ಕಥೆಗಳು ಕನ್ನಡಕ್ಕೆ : ಜೆ.ವಿ. ಕಾರ್ಲೋ ರೂ. 230.00

315 "ಗಂಟರ್ಸ್ ವಿಂಟರ್" (ಕಾದಂಬರಿ) ಕನ್ನಡಕ್ಕೆ : ಕೆ. ಶ್ರೀನಾಥ್ ರೂ. 275.00

316 ಬರಿಗಾಲಲ್ಲಿ ಬಾಗ್ದಾದ್(ನೆನಪುಗಳು) ಡಾ. ವಿಜಯಾ ಸುಬ್ಬರಾಜ್ ರೂ. 300.00

317 ದಿ ಗರ್ಲ್ ವಿಥ್ ದಿ ಗೋಲ್ಡನ್ ಐಸ್ ಕನ್ನಡಕ್ಕೆ : ರಾಜಣ್ಣ ತಗ್ಗಿ ರೂ. 140.00

318 ಲವ್ ಇನ್ ದ ಟೈಮ್ ಆಫ್ ಕಾಲರಾ ಕನ್ನಡಕ್ಕೆ : ರಾಜಣ್ಣ ತಗ್ಗಿ ರೂ. 380.00

319 ಪಂಪಭಾರತ ಕೆ. ಕೇಶವಶರ್ಮ ರೂ. 300.00

320 ಅಘನಾಶಿನಿ (Anna Karenina)ಭಾಗ–1ಕನ್ನಡಕ್ಕೆ : ಕೆ. ಶ್ರೀನಾಥ್ ರೂ. 850.00

321 ಅಘನಾಶಿನಿ (Anna Karenina)ಭಾಗ–2ಕನ್ನಡಕ್ಕೆ : ಕೆ. ಶ್ರೀನಾಥ್ ರೂ. 750.00

322 ಇಲಿ ಮನುಷ್ಯ (ROALD DAHL) ಕನ್ನಡಕ್ಕೆ: ಜೆ.ವಿ. ಕಾರ್ಲೋ ರೂ. 250.00

323 ಡೆವಿಲ್ ಅನ್ ದ ಕ್ರಾಸ್ ಕನ್ನಡಕ್ಕೆ : ಬಂಜಗೆರೆ ಜಯಪ್ರಕಾಶ ರೂ. 360.00

324 ಬೇಡ ಬುಡಕಟ್ಟಿನ ಭಾಷಿಕ ಸಂಕಥನ ಡಾ. ಅಂಜನೇಯ ಉತ್ತಾರ್‌ಳ್ ರೂ. 280.00

325 ಗಾಂಧಿಮನೆಯ ಅವಲಕ್ಕಿ ಸರ (ಕಾದಂಬರಿ) ಎಂ ಜಿ ಹೆಗಡೆ ರೂ. 380.00

326 ಹಿಂದೂಗಳು ಮತ್ತೊಂದು ಚರಿತ್ರೆ ಕನ್ನಡಕ್ಕೆ : ಬಂಜಗೆರೆ ಜಯಪ್ರಕಾಶ ರೂ. 480.00

* ಪ್ರತಿಗಳು ಮುಗಿದಿವೆ.



ಇವತ್ತು ನಾವು ಗ್ರಾಂಶಿ ಮತ್ತು ಫುಕೋರ ಚಿಂತನೆಗಳನ್ನು ತೌಲನಿಕವಾಗಿ ನೋಡಬೇಕಾದ ಅಗತ್ಯವು ಇದೆ. ಅದರ ಜೊತೆಗೆ ಅವರಿಂದ ಕಲಿಯುವುದು ಕೂಡಾ ಬಹಳಷ್ಟು ಇದೆ. ಇಬ್ಬರೂ ತತ್ವಜ್ಞಾನ, ರಾಜಕಾರಣ , ಸಮಾಜ ವಿಜ್ಞಾನ ಮತ್ತು ಸಂಸ್ಕೃತಿಗಳ ಕುರಿತು ತುಂಬಾ ಮಾತಾಡಿದ್ದಾರೆ. ಅವರ ಬರಹಗಳಲ್ಲಿ ಅನೇಕ ರೀತಿಯ ಸಾಮ್ಯತೆಗಳು ಇವೆ,. ಅದೇ ರೀತಿಯಲ್ಲಿ ಇಬ್ಬರೂ ಕೆಲವು ವಿಚಾರಗಳಲ್ಲಿ ಭಿನ್ನವಾದ ತಾತ್ವಿಕತೆಯನ್ನು ಹೊಂದಿದ್ದಾರೆ. ಒಂದು ವಿಚಾರವನ್ನು ನಾವು ಇಲ್ಲಿ ಹೇಳಬೇಕು. ಇಬ್ಬರ ವಿಚಾರಧಾರೆಗಳನ್ನು ನೋಡಿದರೆ ಕೆಲವು ವಿಚಾರಗಳು ಪುನರಾವರ್ತನೆಯು ಆದ ಹಾಗೆ ಕಾಣಿಸುತ್ತದೆ. ಮಧ್ಯೆ ಕೆಲವು ಸಂಗತಿಗಳು ಹೇಗೆ ಪುನರುಕ್ತವಾಗಿದೆ ಎಂದರೆ ಅದರಲ್ಲಿ ಯಾವುದು ಫುಕೋನ ಚಿಂತನೆಗಳು ಮತ್ತು ಯಾವುದು ಗ್ರಾಂಶಿಯ ವಿಚಾರಧಾರೆ ಎಂದು ಹೇಳುವುದು ಅತ್ಯಂತ ಕಷ್ಟ ಎಂದು ಖ್ಯಾತ ಸ್ತ್ರೀವಾದಿ ತತ್ವಜ್ಞಾನಿ ಜಾನ್ ಕಾಕ್ಸ್ ಇದನ್ನು ಹೇಳುತ್ತಾರೆ. ಇಬ್ಬರಲ್ಲಿ ಅತ್ಯಂತ ವಿಶಿಷ್ಟವಾದ ಆಯ್ಕೆ ಕೂಡಾ ಇದೆ. ಅದರಲ್ಲಿ ಸಮಾನತೆಯು ಇದೆ,. ಕೆಲವು ವಿಚಾರಗಳಲ್ಲಿ ನಾವು ಒಂದು ಸಮತೋಲನವಾದ ದೃಷ್ಟಿಕೋನವನ್ನು ಕಾಣುತ್ತೇವೆ. ಗ್ರಾಂಶಿಯು ಹೇಳುವ ಹೆಜೆಮನಿ ಮತ್ತು ಫುಕೋ ಹೇಳುವ ಅಧಿಕಾರ ಸಿದ್ಧಾಂತಕ್ಕೆ ಕೆಲವು ಹೋಲಿಕೆಗಳು ಇವೆ. ಅದನ್ನು ನಾವು ಸಾಂದರ್ಭಿಕವಾಗಿ ಅರ್ಥ ಮಾಡಿಕೊಳ್ಳಬಹುದು. ಆದರೆ ಗ್ರಾಂಶಿಯು ಹೆಜೆಮನಿಯನ್ನು ಅತ್ಯಂತ ವಿಸ್ತಾರವಾದ ಅರ್ಥದಲ್ಲಿ ಬಳಸುತ್ತಾನೆ. ಅವನಿಗೆ ಸಮೂಹವೂ ಅಷ್ಟೇ ಮುಖ್ಯವಾಗುತ್ತದೆ. ಆದರೆ ಫುಕೋ ಅಧಿಕಾರವನ್ನು ಕುರಿತು ಹೇಳುವಾಗ ಅವನು ಅದನ್ನು ವ್ಯಕ್ತಿ ಮಟ್ಟದಲ್ಲಿಯೂ ನೋಡುತ್ತಾನೆ. ಫುಕೋನ ಹೇಗೆ ಇದನ್ನು ಬಳಸುತ್ತಾನೆ ಮತ್ತು ಗ್ರಾಂಶಿಯು ಇದನ್ನು ಹೇಗೆ ಬಳಸಿಕೊಂಡಿದ್ದಾನೆ ಎನ್ನುವುದಕ್ಕೆ ಹೇರಳವಾದ ಉದಾಹರಣೆಗಳು ಇವೆ. ಅದು ನಮ್ಮ ಅಧ್ಯಯನದ ಸಾಧ್ಯತೆಯನ್ನು ತೆರೆದು ತೋ-ರಿಸುತ್ತದೆ. ಫುಕೋ ತಾನು ಯಾವುದೇ ಸಿದ್ಧಾಂತಕ್ಕೆ ಕಟ್ಟು ಬಿದ್ದವನು ಅಲ್ಲವೆಂದು ಹೇಳುತ್ತಾನೆ. ಅದರ ಜೊತೆಗೆ ಅವನು ಅದನ್ನು ಹೇಳುವಾಗ ಅವನಲ್ಲಿ ಸೈದ್ಧಾಂತಿಕವಾದ ಅಸ್ಪಷ್ಟತೆಯು ಇದೆ ಎಂದು ಯಾರೂ ತಿಳಿಕೊಳ್ಳಬಾರದು. ಜಾಗತಿಕ ಮಟ್ಟದಲ್ಲಿ ಅತ್ಯಂತ ಹೆಚ್ಚು ಹೆಸರು ಮಾಡಿರುವ ಇಬ್ಬರ ದೃಷ್ಟಿಕೋನವನ್ನು ನಾವು ಈವತ್ತು ಅರ್ಥ ಮಾಡಿಕೊಳ್ಳಬೇಕಾದ ತುರ್ತಂತೂ ಇದೆ. ಈ ಕೃತಿಯು ಅದನ್ನು ಹೇಳುತ್ತದೆ.

ಪಬ್ಲಿಕೇಷನ್ಸ್
201
POLITICS
₹300/-